ಗಳಗನಾಥ ಸುರಸ ಗ್ರಂಥಮಾಲೆ

ದಿ. ಗಳಗನಾಥರ

ಮರಾಟರ ಐತಿಹಾಸಿಕ ಸುರಸ ಕಾದಂಬರಿ

ಮರಾಟರ ಅಭ್ಯುದಯ

೧೯೫೧

[ಬೆಲೆ ೩-೦-೦

ಗಳಗನಾಥ ಸುರಸ ಗ್ರಂಥಮಾಲೆ

ಧಾರವಾಡ

ಪ್ರಕಾಶಕರು

ಎಸ್. ಎಮ್. ಜೋಯಿಸ್.

ಗಳಗನಾಥ ಸುರಸ ಗ್ರಂಥಮಾಲೆ, ಧಾರವಾಡ

ಮೊದಲನೆಯ ಮುದ್ರಣ ೧೯೧೮

ಎರಡನೆಯ ಮುದ್ರಣ ೧೯೪೭

ಮೂರನೆಯ ಮುದ್ರಣ ೧೯೫೧

ಮುದ್ರಕರು

ಎಸ್. ಎಂ. ಜೋಶಿ

ಗಳಗನಾಥ ಮುದ್ರಣ, ಧಾರವಾಡ

ಗಳಗನಾಥ ಸುರಸ ಗ್ರಂಥಮಾಲೆ

(೧) ಶ್ರೀ ಸದ್ಗುರುಕೃಪೆಯಿಂದ ನಮಗೊದಗಿದ ವಿಲಕ್ಷಣಕಾಲದಲ್ಲಿ ಎರಡು ಕಾದಂಬರಿಗಳು ಮುಗಿದಂತಾದವು. ಅವುಗಳಲ್ಲಿ ಒಂದನೆಯದು "ಶಿವಪ್ರಭುವಿನ ಪುಣ್ಯ"ವು; ಎರಡನೆಯದು "ಮರಾಟರ ಅಭ್ಯುದಯ" ವೆಂಬುದು. ಇವೆರಡು ಕಾದಂಬರಿಗಳು ಪಾಠಶಾಲೆಯ ಸ್ಥಿತಿಗೆ ಸಂಬಂಧಿಸಿದವಾಗಿ ಪರಿಣಮಿಸಿರುವದರಿಂದ, ಅವನ್ನು ನಿರರ್ಥಕವಾದವುಗಳೆಂದು ಭಾವಿಸುವದಿಲ್ಲ. ನಮ್ಮ "ಶ್ರೀ ಶೇಷಾಚಲ ವೇದ ಮತ್ತು ಸಂಸ್ಕೃತ ಪಾಠಶಾಲೆ"ಯ ಸ್ಥಳಾಂತರದ ಭವಿಷ್ಯವನ್ನು ವರ್ಣಿಸುವುದಕ್ಕಾಗಿಯೇ ಅನ್ನುವಂತೆ ಶ್ರೀಗುರುವು "ಶಿವಪ್ರಭುವಿನ ಪುಣ್ಯ"ವೆಂಬ ಎರಡನೆಯ ಕಾದಂಬರಿಯನ್ನು ನಮ್ಮ ಕೈಯಿಂದ ಬರೆಸಿದನು; ಮತ್ತು ಅಫಜುಲಖಾನನ ಮರಣದ ತರುವಾಯದಲ್ಲಿ ಮಹಾರಾಷ್ಟ್ರ ರಾಜ್ಯದ ಅಭ್ಯುದಯಕ್ಕೆ ಆರಂಭವಾದಂತೆ, ಪಾಠಶಾಲೆಯು ಅಗಡಿಯನ್ನು ಬಿಟ್ಟಬಳಿಕೇ ಅದರ ನಿಜವಾದ ಅಭ್ಯುದಯಕ್ಕೆ ಆರಂಭವಾಗುವದೆಂಬದನ್ನು ತೋರಿಸುವದಕ್ಕಾಗಿ "ಮರಾಟರ ಅಭ್ಯುದಯ"ವೆಂಬ ಈ ಎರಡನೆಯ ಕಾದಂಬರಿಯನ್ನು ಅದೇ ಶ್ರೀಗುರುವು ನಮ್ಮ ಕೈಯಿಂದ ಬರೆಸಿರುವನು. ವೃಕ್ಷಗಳ ಸಸಿಗಳನ್ನು ಕಿತ್ತಿ ಹಚ್ಚುವದರಿಂದ ಅವು ಕಸುವಿನಿಂದ ಬೆಳೆಯುವವು; ಅದರಿಂದಲೇ ಪಾಠಶಾಲಾವೃಕ್ಷದ ಹನ್ನೊಂದು ವರ್ಷದ ಸಸಿಯನ್ನು ಕಿತ್ತು ಹಾವೇರಿಯ ಶ್ರೀ ರಾಮಮಂದಿರದಲ್ಲಿ ಊರುವ ಪ್ರಸಂಗವು ಬಂದಿರಬಹುದು. ವಿಪತ್ಕಾಲದಲ್ಲಿ ಚಂದ್ರಹಾರವನ್ನು ಗೂಟವು ನುಂಗಿ, ವಿಕ್ರಮರಾಜನಂಥವನಿಗೆ ಕಳವಿನ ಆರೋಪವು ಬಂದದ್ದನ್ನು ವಾಚಕರು ಬಲ್ಲರಷ್ಟೆ? ಅದರಂತೆ ನಮಗೊದಗಿದ ಈ ವಿಲಕ್ಷಣಕಾಲದಲ್ಲಿ ನಮ್ಮ ಮೇಲೆ ಇಲ್ಲದ ಆರೋಪಗಳು ಬಂದವು; ಆದರೆ ಆ ಆರೋಪರೂಪವಾದ ಕಳಿತ ಗೊಬ್ಬರವು, ನಮ್ಮ ಶ್ರೀಗುರುವಿನ ಪಾಠಶಾಲಾವೃಕ್ಷದ ಬೆಳವಣಿಗೆಗೆ ಸತ್ವವನ್ನು ಒದಗಿಸಿಕೊಟ್ಟು, ಆ ವೃಕ್ಷವನ್ನು ಪ್ರಸವ–ಪುಷ್ಪ–ಫಲಭಾರಗಳಿಂದ ಸುಶೋಭಿತವಾಗಿ ಮಾಡುವದೆಂದು ನಾವು ತಿಳಿದಿರುತ್ತೇವೆ.

(೨) ಈ ಪಾಠಶಾಲಾವೃಕ್ಷದ ಸಂಗೋಪನಕ್ಕಾಗಿಯೇ ನಮ್ಮ ಭಾಷಾಸೇವಾಸುಂದರಿಯು, ಈಗ ಹನ್ನೊಂದು ವರ್ಷಗಳ ಹಿಂದೆ ಶ್ರೀ ಗುರು

ಪ್ರಭಾವದಿಂದ ಆನಂದವನದಲ್ಲಿ ಪ್ರಕಟವಾದಳಷ್ಟೇ? ಆಕೆಯು ತನ್ನ ವಾಗ್ವಿಲಾಸವೆಂಬ ಸುವರ್ಣಕುಂಭದೊಳಗಿನ ನವರಸಗಳನ್ನು ಆ ವಿದ್ಯಾವೃಕ್ಷದ ಮಡಿಯಲ್ಲಿ ತುಂಬುತ್ತ ಬಂದಳು; ಆದರೆ ಮಹಾಯುದ್ಧದ ತೊಂದರೆಯ ಮೂಲಕ ಮಾಸಮಾಸಕ್ಕೆ ಮಡಿಯನ್ನು ಜಲದಿಂದ ತುಂಬಲಿಕ್ಕೆ ಅನುಕೂಲವಾಗದಾಯಿತು; ಆದ್ದರಿಂದ ಆ ಸುಂದರಿಯು ತನ್ನ "ಸದ್ಬೋಧ ಚಂದ್ರಿಕೆ" ಯೆಂಬ ಹೆಸರನ್ನು ಬಿಟ್ಟುಕೊಟ್ಟು ಆ ಹೆಸರಿಗೆ ಒಪ್ಪುವ ರೂಪವನ್ನು ಕಳಚಿಬಿಟ್ಟು "ಸುರಸ ಗ್ರಂಥಮಾಲೆ" ಯೆಂಬ ಹೆಸರನ್ನೂ, ಆ ಹೆಸರಿಗೆ ಒಪ್ಪುವ ಮನೋಹರ ರೂಪವನ್ನೂ ಧರಿಸಿ ವಾಚಕರನ್ನು ತೃಪ್ತಿಪಡಿಸಲು ಸಿದ್ಧವಾಗುತ್ತಿರುವಳು; ಆದರೆ ನಮ್ಮ ಪ್ರಿಯಚಂದ್ರಿಕೆಯ ಅಭಿಮಾನಿಗಳಾದ ಎಷ್ಟೋಜನ ಸಹೃದಯ ವಾಚಕರು—"ಚಂದ್ರಿಕೆಯು ನಿಮ್ಮ ಕೈಬಿಟ್ಟು ಪರದೇಶಿಯಾದಳು, ಆಕೆಯು ಕಲಾಹೀನಳಾದಳು, ಆಕೆಯ ಗೌರವವು ನಷ್ಟವಾಯಿತು, ನಿಮ್ಮ ಚಂದ್ರಿಕೆಯೆಂದು ತಿಳಿದು ನಾವು ಚಂದಾದಾರರಾಗಿ ಮೋಸಹೋದೆವು" ಇತ್ಯಾದಿ ವಾತ್ಸಲ್ಯ ಪೂರ್ಣವಾದ ಉದ್ಗಾರಗಳನ್ನು ಹೊರಗೆಡವಿ ವ್ಯಸನಬಡುವದನ್ನು ನೋಡಿ ನಮಗೂ ಬಹಳ ವ್ಯಸನವಾಗುತ್ತದೆ. ಈ ಪ್ರಸಂಗದಲ್ಲಿ ನಾವು ಎಲ್ಲ ಕನ್ನಡಿಗರಿಗೆ ವಿಜ್ಞಾಪಿಸುವುದೇನಂದರೆ —ನಮ್ಮ ಪ್ರಿಯಚಂದ್ರಿಕೆಯು, ನಮ್ಮ ಪೂಜ್ಯಗುರುಪುತ್ರಿಯಾದ ಚಂದ್ರಿಕೆಯು, ನಮ್ಮನ್ನು ಬಿಟ್ಟು ಸರ್ವಥಾ ಹೋಗಲಾರಳು. ಮೇಲೆ ಹೇಳಿದಂತೆ ಆಕೆಯೇ "ಸುರಸ ಗ್ರಂಥಮಾಲೆ"ಯ ರೂಪದಿಂದ ಪ್ರಕಟವಾಗಿರುವಳು. ಶ್ರೀಗುರು ಪ್ರೇರಣೆಯಿಂದ ಗಳಗನಾಥ ಇವರ ಲೇಖನಿಯ ದ್ವಾರವಾಗಿ ಹೊರಬೀಳುವ ಅವರ ವಿಚಾರ ಪರಂಪರೆಗಳನ್ನು ''ಸದ್ಬೋಧ ಚಂದ್ರಿಕೆ'' ಯೆಂದು ಕರೆಯಬಹುದು. ಅಥವಾ ''ಸುರಸ ಗ್ರಂಥಮಾಲೆ'' ಯೆಂದು ಕರೆಯಬಹುದು! ಇಲ್ಲವೆ ಅದಕ್ಕೆ ಬೇರೆ ಹೆಸರುಗಳನ್ನು ಇಡಬಹುದು. ಹೀಗೆ ಹೆಸರು ಬೇರೆಯಾದ ಮಾತ್ರದಿಂದ ಕನ್ನಡಿಗರಿಗಿರುವ ಗಳಗನಾಥರ ಸೇವಾಸಂಬಂಧವು ಸರ್ವಥಾ ಕಡಿಯಲಾರದು. ಗಳಗನಾಥ ಇವರ ಲೇಖನಿಯೊಳಗಿಂದ ಹನ್ನೊಂದು ವರ್ಷ ಎಡೆಬಿಡದೆ ಹೊರಟು ಕರ್ನಾಟಕದ ದೃಷ್ಟಿಗಳನ್ನು ತನ್ನ ಕಡೆಗೆ ಎಳೆದುಕೊಂಡಿದ್ದ ಲೇಖ ಪರಂಪರೆಗಳನ್ನು ಗರ್ಭೀಕರಿಸಿಕೊಂಡಿದ್ದ ಚಂದ್ರಿಕೆಯನ್ನು ತನ್ನ

ದೆಂದು ಹೇಳುವವನು ಅದಾವನವನು? ಗಳಗನಾಥರ ಲೇಖಗಳಿಲ್ಲದ ಚಂದ್ರಿಕೆಯು ಗಳಗನಾಥರದೆ? ಈಗ ಹೊರಟಿದ್ದ ಚಂದ್ರಿಕೆಯು ಗಳಗನಾಥರದೇ ಆಗಿದ್ದರೆ, ಅದು ತನ್ನ ಜನ್ಮದಾತೃವನ್ನೂ, ಪರಿಪೋಷಕನನ್ನೂ, ಉದ್ಧಾರ ಕರ್ತೃವನ್ನೂ ಮನಸೋಕ್ತವಾಗಿ ನಿಂದಿಸುವ ಲೇಖವನ್ನೇ ಮಂಗಲಾಚರಣದ ಪ್ರಥಮ ಲೇಖವಾಗಿ ಇಟ್ಟುಕೊಂಡು ತೇಜೋಹೀನವಾಗಿಯೂ, ಬೀಭತ್ಸವಾಗಿಯೂ ಹೊರಡಬಹುದೆ? ದಿಗಂತ ಕೀರ್ತಿಯನ್ನು ಪಡೆದಿದ್ದ ಗಳಗನಾಥ ಇವರ ಚಂದ್ರಿಕೆಯ ವೈಭವದ ಆಶೆಯಿಂದ ಚಂದ್ರಿಕಾವೇಷಧಾರಿಯಾದ ಕಾಮುಕ ರಕ್ಕಸಿಯು ಉತ್ಪನ್ನವಾದರೆ, ಆಕೆಗೂ ಗಳಗನಾಥ ಇವರ ಚಂದ್ರಿಕೆಗೂ ಸಂಬಂಧವೇನು? ಗಳಗನಾಥ ಇವರ ಚಂದ್ರಿಕೆಯು "ಗಳಗನಾಥ ಸುರಸ ಗ್ರಂಥಮಾಲೆ"ಯೆಂಬ ನಾಮವನ್ನು ಧರಿಸಿ, ತನ್ನ ನೂಪುರಗಳ ಮಂಜುಳಧ್ವನಿಯು ದಿಕ್ಕು ದಿಕ್ಕುಗಳಲ್ಲಿ ಇಂಪಾಗಿ ಕೇಳುತ್ತಿರಲು, ಶ್ರೀಗುರು ಕೃಪಾಛತ್ರಚ್ಛಾಯೆಯಲ್ಲಿ ತನ್ನ ಮನೋಹರ ರೂಪದಿಂದ ಕರ್ನಾಟಕದೊಳಗೆ ಇನ್ನು ಹ್ಯಾಗೆ ನರ್ತನಮಾಡುವಳೆಂಬದನ್ನು ತಾವೆಲ್ಲರು ಅನುಭವದಿಂದ ಮನಗಾಣಬಹುದು!

(೩) "ಕಾಮುಕರಕ್ಕಸಿಯು" ಎಂದು ಮೇಲೆ ಹೇಳುವಾಗ ಒಂದು ಪೌರಾಣಿಕ ಪ್ರಸಂಗದ ನೆನಪಾಯಿತು. ಅದನ್ನು ತಮ್ಮ ಸಲುವಾಗಿ ಇಲ್ಲಿ ಹೇಳುವೆವು. ರಾವಣ-ಶೂರ್ಪನಖಿಯರೆಂಬ ಅಣ್ಣತಂಗಿಯರಿಬ್ಬರು ಅನುಕ್ರಮದಿಂದ ಸೀತಾ-ರಾಮರ ವಿಷಯವಾಗಿ ಮೋಹಿತರಾಗಿದ್ದದ್ದನ್ನು ತಾವು ಅರಿತಿರುವಿರಷ್ಟೇ? ಒಮ್ಮೆ ರಾವಣನು ಸೀತೆಯನ್ನು ಅಪಹರಿಸುವದಕ್ಕಾಗಿ ಮಾಯೆಯಿಂದ ರಾಮನ ರೂಪವನ್ನು ಧರಿಸಿ ಪಂಚವಟಿಯಲ್ಲಿ ಸುಳಿದಾಡಹತ್ತಿದನು. ಅದೇಕಾಲದಲ್ಲಿ ಶೂರ್ಪನಖಿಯು ರಾಮನನ್ನು ಅಪಹರಿಸುವದಕ್ಕಾಗಿ ಮಾಯೆಯಿಂದ ಸೀತೆಯರೂಪವನ್ನು ಧರಿಸಿ ಅಲ್ಲಿಗೆ ಬಂದಳು; ಆದರೆ ಆ ಕಾಮುಕರಿಬ್ಬರು ಪರಸ್ಪರರನ್ನು ಅಣ್ಣತಂಗಿಯರೆಂದು ತಿಳಿಯಲಾರದೆ ಒಬ್ಬರಮೇಲೊಬ್ಬರು ಮೋಹಿಸಿ, ಒಬ್ಬರನ್ನೊಬ್ಬರು ಅಪಹರಿಸುವದಕ್ಕಾಗಿ ಯತ್ನಿಸತೊಡಗಿದರು. ಆಗ ಸೀತಾರೂಪದ ರಕ್ಕಸಿಯು ಎತ್ತರವಾದ ಬಳ್ಳಿಯದೊಂದು ಹೂವನ್ನು ಕೊಯ್ಯುವದಕ್ಕಾಗಿ ತೋಳು ನೆಗಹಿ, ತನ್ನ ಬಳಿಯಲ್ಲಿ ನಿಂತಿದ್ದ ರಾಮವೇಷಧಾರಿ ರಕ್ಕಸನನ್ನು ಮೋಹಿಸುವದ

ಕ್ಕಾಗಿ ಕಾಮುಕದೃಷ್ಟಿಯಿಂದ ಬಾರಿಬಾರಿಗೆ ಆತನನ್ನು ನೋಡುತ್ತ ತೊಂದರೆಪಡಹತ್ತಿದಳು; ಆದರೆ ಆ ಹೂವು ಆಕೆಯು ಕೈಗೆ ನಿಲುಕಲೊಲ್ಲದು. ಅದನ್ನು ನೋಡಿ ರಾಮರೂಪಧಾರಿಯಾದ ರಾವಣನು ಕಾಮಾಂಧನಾಗಿ ಆಕೆಯನ್ನು ಕುರಿತು—"ಪ್ರಿಯೇ, ಇಷ್ಟು ಕಷ್ಟಪಡುವದೇಕೆ? ನಿಲ್ಲು; ನನ್ನ ಹೆಗಲಮೇಲೆ ಕುಳಿತು ಹೂವು ಕೊಯ್ಯುವೆಯಂತೆ" ಎಂದು ಆ ವೇಷಧಾರಿಯಾದ ಸೀತೆಯ ಮುಂದೆ ಬಗ್ಗಿದನು. ಶೂರ್ಪನಖಿಗೂ ಅಷ್ಟೇ ಬೇಕಾಗಿತ್ತು. ಮನುಷ್ಯನಾದ ರಾಮನು ತನ್ನ ಹೆಗಲಮೇಲೆ ಕುಳಿತ ಕೂಡಲೆ ಆತನನ್ನು ತನ್ನ ತೊಡೆಗಳಲ್ಲಿ ಔಕಿಕೊಂಡು ಆಕಾಶದಲ್ಲಿ ಉಡ್ಡಾಣಮಾಡಬೇಕೆಂದು ಯೋಚಿಸಿ, ಆಕೆಯು ರಾವಣನ ಹೆಗಲಮೇಲೆ ಕುಳಿತುಕೊಂಡಳು. ಇತ್ತ ರಾವಣನೂ ಹೀಗೆಯೇ ದುರಾಲೋಚನೆಮಾಡಿ ಶೂರ್ಪನಖಿಯನ್ನು ಹೆಗಲಮೇಲೆ ಕುಳ್ಳಿರಿಸಿಕೊಂಡಿದ್ದನು. ಆತನು ಇನ್ನು ತನ್ನ ಹೆಗಲಮೇಲಿದ್ದ ಸೀತೆಯೊಡನೆ ಆಕಾಶದಲ್ಲಿ ಉಡ್ಡಾಣ ಮಾಡಬೇಕೆನ್ನುತ್ತಿರಲು, ಸೀತೆಯು ತನ್ನ ತೊಡೆಗಳಿಂದ ತನ್ನನ್ನು ಬಲವಾಗಿ ಔಕುತ್ತಿರುವದು ಆತನಿಗೆ ದುಸ್ಸಹವಾಗಿ, ಆಕೆಯು ನಿಜವಾದ ಸೀತೆಯಿರಲಿಕ್ಕಿಲ್ಲವೆಂದು ಆತನು ಭಾವಿಸಹತ್ತಿದನು. ಅತ್ತ ಶೂರ್ಪನಖಿಯು-ತನ್ನಂಥ ರಾಕ್ಷಸಿಯು ಬಲವಾದ ತೊಡೆಗಳಿಂದ ಔಕಿ ಮೇಲಕ್ಕೆತ್ತಿದರೂ ರಾಮನು ಮೇಲಕ್ಕೇಳದಿರುವದನ್ನು ನೋಡಿ, ಈತನು ನಿಜವಾದ ರಾಮನಿರಲಿಕ್ಕಿಲ್ಲವೆಂದು ಭಾವಿಸಹತ್ತಿದಳು. ಮುಂದೆ ಅವರಿಬ್ಬರು ತಮ್ಮ ತಮ್ಮ ನಿಜವಾದ ವೃತ್ತಾಂತವನ್ನು ಪರಸ್ಪರರ ಮುಂದೆ ಹೇಳಿ ನಾಚುತ್ತಿರುವಾಗ, ನಿಜವಾದ ಸೀತಾರಾಮರು ಈ ಕಾಮುಕ ರಾಕ್ಷಸರ ಲೀಲೆಯನ್ನು ನೋಡಿ ನಗುತ್ತಿದ್ದರಂತೆ! ಅದರಂತೆಯೇ ನೀಚಸ್ವಾರ್ಥಪರಾಯಣತಾರೂಪ ರಾಕ್ಷಸಿಯು, ಕನ್ನಡ ಸಮಾಜರೂಪ ವೈಭವಶಾಲಿಯಾದ ಸುಂದರ ಪುರುಷನನ್ನು ವಂಚಿಸುವದಕ್ಕಾಗಿ ಚಂದ್ರಿಕಾರೂಪವ ಧರಿಸಿರುವದನ್ನು ನೋಡಿ ಯಾರಿಗಾದರೂ ನಗೆ ಬರುವಹಾಗಿದೆ.

(೪) ಒಟ್ಟಿಗೆ ನಾವು ಸ್ಪಷ್ಟವಾಗಿ ಕನ್ನಡಿಗರಿಗೆ ತಿಳಿಸುವೆವೇನೆಂದರೆ—ಅಗಡಿಯ ಚಂದ್ರಿಕೆಯು ನಮ್ಮ ಚಂದ್ರಿಕೆಯಲ್ಲ; ನಮ್ಮ ಚಂದ್ರಿಕೆಯು 'ಸುರಸಗ್ರಂಥಮಾಲೆ'ಯ ರೂಪದಿಂದ ಪ್ರಕಟವಾಗಿರುವಳೆಂಬದನ್ನು ಚನ್ನಾಗಿ

ನೆನಪಿನಲ್ಲಿಡಬೇಕು. ವೃದ್ಧಾಪ್ಯದ ಪಾವಟಿಗೆಗಳನ್ನು ಹತ್ತತೊಡಗಿರುವ ನಮಗೆ, ಲೇಖನ ವ್ಯವಸಾಯವು ಊರಗೋಲಿನಂತೆ ಆಧಾರವಾಗಿರುವದು· ಆ ಊರುಗೋಲಿಲ್ಲದೆ ನಮ್ಮ ಆಯುರ್ಮರ್ಯಾದಾಕ್ರಮಣವು ನಿರಾತಂಕ ವಾಗಿಯೂ, ಆನಂದಕರವಾಗಿಯೂ ಸಾಗದು. ಈ ಪರಿಕ್ರಮಣದಲ್ಲಿ ಕನ್ನ ಡಿಗರಿಂದ ಪ್ರಾಪ್ತವಾಗುವ ಪ್ರತಿಫಲರೂಪಧನವನ್ನು ನಮ್ಮ ಶ್ರೀಗುರು ವಿನ ಪಾಠಶಾಲೆಗೆ ವಿನಿಯೋಗಿಸಿ ಯಥಾಶಕ್ತಿ ಗುರುಸೇವೆಯನ್ನು ಮಾಡು ವದು ನಮ್ಮ ಕೃತಸಂಕಲ್ಪವಾಗಿರುತ್ತದೆ. ಪ್ರಿಯ ಕನ್ನಡಿಗರೇ, ನಾವು ನಮ್ಮ ಕೆಲಸಬೊಗಸೆಗಳನ್ನೆಲ್ಲ ಬಿಟ್ಟು ನಿಮ್ಮ ಸೇವೆಗಾಗಿಯೇ, ನಿಂತಿರುತ್ತೇವೆ. ಮತ್ತು ಹನ್ನೊಂದು ವರ್ಷ ನಿಮ್ಮನ್ನು ಸೇವಿಸಿ, ನಿಮ್ಮ ಅಭಿರುಚಿಯ ಪರಿ ಜ್ಞಾನವನ್ನೂ, ನಿಮ್ಮ ಕೊಡಗೈಯ ಪ್ರಭಾವವನ್ನು ಅರಿತುಕೊಂಡಿರುತ್ತೇವೆ. ನೀವಾದರೂ ನಮ್ಮ ಲೇಖಗಳ ಪಡಿಕಟ್ಟನ್ನು ಅರಿತಿರುತ್ತೀರಿ. ಇನ್ನು ಮೇಲೆ ನಮ್ಮಿಬ್ಬರ ಪ್ರೇಮವಿಶ್ವಾಸಗಳಿಂದ ಕನ್ನಡದ ವಿವಿಧ ಗ್ರಂಥಗಳು ಹೊರಬೀಳು ವುದು ಹಿತಕರವಲ್ಲವೆ? ಕನ್ನಡಿಗರ ಅಭಿಮಾನವನ್ನು ಹೆಚ್ಚಿಸುವಂಥ ಕನ್ನಡ ವೀರರ ಕಾದಂಬರಿಗಳು, ಕನ್ನಡ ಸತ್ಪುರುಷರ ಚರಿತ್ರಗಳು, ಕನ್ನಡ ತತ್ವ ಜ್ಞಾನಿಗಳ ವೃತ್ತಾಂತಗಳು, ಕನ್ನಡ ಶಾಸ್ತ್ರಜ್ಞರ ಸುದ್ದಿಗಳು ಮೊದಲಾದ ವಿಷಯಗಳನ್ನು ಕುರಿತು ಬರೆದ ಗ್ರಂಥಗಳ ಕೊರತೆಯು ವಿಶೇಷವಾಗಿರುವ ದೆಂಬದನ್ನು ನಾವು ಬಲ್ಲೆವು. ಚಾಲುಕ್ಯರು, ಕದಂಬರು, ಹೊಯಸಾಲರು, ವಿಜಯನಗರದವರು ಮೊದಲಾದವರ ದಿವ್ಯಚಾರಿತ್ರ್ಯಗಳಾದರೂ ನಮ್ಮ ಕಣ್ಣಿಗೆ ಕಟ್ಟಿರುತ್ತವೆ; ಆದರೆ ಬಹು ದಿವಸದ ಹಿಂದಿನ ಆ ನಮ್ಮ ಪೂರ್ವ ಜರ ದಿವ್ಯಚಾರಿತ್ರ್ಯಗಳ ಮೇಲೆ, ರಜಪೂತರ, ಮುಸಲ್ಮಾನರ, ಮರಾಟರ ಉಜ್ವಲ ಚಾರಿತ್ರ್ಯಗಳ ರಾಶಿಗೆ ರಾಶಿಯು ಬಿದ್ದು, ನಮ್ಮವರ ಆ ದಿವ್ಯ ಚಾರತ್ರ್ಯಗಳು ಮರೆಯಾಗಿವೆ; ಈ ಪರಕೀಯರ ಚರಿತ್ರಗಳ ಅಬ್ಬರದಲ್ಲಿ ಕನ್ನಡಿಗರೆನಿಸಿಕೊಳ್ಳುವ ನಮ್ಮ ಸ್ವಾಭಿಮಾನವು ನಷ್ಟವಾಗಿ, ಕನ್ನಡಗ್ರಂಥ ಗಳನ್ನು, ಕನ್ನಡ ಗ್ರಂಥಕಾರರನ್ನು, ಕನ್ನಡ ನುಡಿಯನ್ನು, ಕನ್ನಡ ಬರೆಯುವ ದನ್ನು ಕೂಡ ನಾವು ಬಿಟ್ಟುಕೊಟ್ಟು, ಭ್ರಾಂತಿಯಿಂದ ಅನ್ಯಭಾಷೆಗಳ ಬೆನ್ನುಹತ್ತಿ, ಅದನ್ನೇ ಪ್ರತಿಷ್ಠೆಯ ಲಕ್ಷಣವೆಂದು ಭಾವಿಸುತ್ತಲಿದ್ದೆವು! ಇಂಥ ಪ್ರಸಂಗದಲ್ಲಿ ಕೇವಲ ಕನ್ನಡಿಗರಿಗೆ ಸಂಬಂಧಿಸಿದ ಗ್ರಂಥವ್ಯವಹಾರವು,

ಗಿರಾಕಿಗಳಿಲ್ಲದ ಮಾರಾಟದಂತೆ ಮಂದವಾಗಿ ಪರಿಣಮಿಸಿದ್ದರಲ್ಲಿ ಆಶ್ಚರ್ಯ ವೇನು? ಈ ಕಾಲದಲ್ಲಿ ಕನ್ನಡಿಗರ ವಾಚನಾಭಿರುಚಿಯು, ವಿಶೇಷವಾಗಿ ಕನ್ನಡಗ್ರಂಥಗಳನ್ನು ಓದುವ ಅಭಿರುಚಿಯು ನಷ್ಟವಾಗಿ ಹೋಯಿತು. ಈ ಹೀನಸ್ಥಿತಿಯನ್ನು ಕೆಲಮಟ್ಟಿಗಾದರೂ ಹೋಗಲಾಡಿಸುವ ಉದ್ದೇಶ ದಿಂದ ನಾವು "ಸದ್ಬೋಧ ಚಂದ್ರಿಕೆ" ಯೆಂಬ ಮಾಸಪತ್ರಿಕೆಯ ಮುಖಾಂತರ ಹತ್ತುವರ್ಷಗಳಲ್ಲಿ ಹನ್ನೆರಡು ಕಾದಂಬರಿಗಳನ್ನೂ, ಬೇರೆ ಪ್ರಬಂಧಗಳನ್ನೂ, ಲೇಖಗಳನ್ನೂ ಬರೆದು ಏಳು ಸಾವಿರದವರೆಗೆ ಚಂದಾ ದಾರರನ್ನು ಸಂಪಾದಿಸಿ, ಕನ್ನಡಿಗರು ಕೆಲಸಕ್ಕೆ ಬಾರದವರಲ್ಲವೆಂಬುದನ್ನು ಮನಗಂಡೆವು. ಹನ್ನೊಂದು ವರ್ಷ ನಾವು ಏಕನಿಷ್ಠೆಯಿಂದ ಮಾಡಿದ ಆ ಸೇವೆಯಿಂದ ನಮ್ಮ ಉದಾರರಾದ ಕನ್ನಡಿಗರು ಸುಪ್ರಸನ್ನರಾಗಿದ್ದರೆ, ಅವರನ್ನು ನಂಬಿ ನಾವು ಲೇಖನ ವ್ಯವಸಾಯವನ್ನು ನಿರ್ಬಾಧವಾಗಿ ನಡಿಸು ವೆವು. ಈಗ ಸುದೈವದಿಂದ ಕನ್ನಡಿಗರಲ್ಲಿ ಉತ್ಪನ್ನವಾಗಿದ್ದ ಅಭಿಮಾನಕ್ಕೆ ತೃಪ್ತಿಕರವಾಗುವಂತೆಯೂ, ಉತ್ತೇಜಕವಾಗುವಂತೆಯೂ, ಕೇವಲ ಕನ್ನಡಿ ಗರ ದಿವ್ಯಚಾರಿತ್ರ್ಯಗಳಿಗೆ ಸಂಬಂಧಿಸಿದ ಸುರಸಕಾದಂಬರಿಗಳನ್ನು ಪ್ರಯತ್ನ ಪೂರ್ವಕವಾಗಿ ಬರೆಯಬೇಕೆಂದು ನಾವು ನಿಶ್ಚಯಿಸಿರುವೆವು. ಇನ್ನು ಮೇಲೆ ಮೊದಲು ವಿಜಯನಗರದ ಪ್ರತಿಷ್ಠಾಪನೆಯ ಕಾದಂಬರಿಯನ್ನು ಬರೆದು, ಆ ರಾಜ್ಯಕ್ಕೆ ಸಂಬಂಧಿಸಿದ ಕೆಲವು ಸುರಸಕಾದಂಬರಿಗಳನ್ನು ಬರೆಯುವದಾದ ಮೇಲೆ ಚಾಲುಕ್ಯರೇ ಮೊದಲಾದ ಪ್ರಸಿದ್ಧ ಕನ್ನಡರಾಜರ ವಂಶಗಳಲ್ಲಿಯ ಉಜ್ವಲ ಪ್ರಸಂಗಗಳನ್ನು ಕುರಿತು ಕಾದಂಬರಿಗಳನ್ನು ಬರೆಯಬೇಕೆಂದು ಸಂಕಲ್ಪಮಾಡಿರುವೆವು. ಈ ಕೆಲಸಕ್ಕೆ ಸಾಧನ ಸಾಮುಗ್ರಿಗಳು ಕಡಿಮೆ ಯಾಗಿರುವದರಿಂದ ಕನ್ನಡಿಗರು ಅವಸರ ಮಾಡಿದರೆ ಕೆಲಸವಾಗದು. ಸಂಬಾಳಿಸಿ ನಮ್ಮಿಂದ ಕೆಲಸಮಾಡಿಸಿಕೊಳ್ಳಬೇಕು.

(೫) ಬರಿಯ ಕಾದಂಬರೀರೂಪ ಮಲ್ಲಿಕಾಕುಸುಮಗಳಿಂದಲೇ ನಮ್ಮ ಸುರಸಗ್ರಂಥಮಾಲೆಯು ರಚಿಸಲ್ಪಡುವದೆಂದು ಮಾತ್ರ ವಾಚಕರು ತಿಳಿಯ ಬಾರದು; ಪ್ರಬಂಧಗಳು, ಪುರಾಣಗ್ರಂಥಗಳು, ವ್ಯವಹಾರೋಪಯುಕ್ತ ಲೇಖಗಳು, ವೇದಾಂತವಿಷಯಗಳು, ನೈತಿಕವಿಷಯಗಳು ಮೊದಲಾದ ವಿವಿಧ ವಿಷಯರೂಪ ಸುಂದರ ಪುಷ್ಪಗಳಿಂದ ಮಾಲೆಯ ಸೌರಭವೂ,

ಮನೋಹರತ್ವವೂ, ಗೌರವವೂ, ವೈಚಿತ್ರ್ಯವೂ ಹೆಚ್ಚುವಂತೆ ನಾವು ಅವಶ್ಯವಾಗಿ ಯತ್ನಿಸುವೆವು. ನಮ್ಮ ಈ ಮಹತ್ಕಾರ್ಯಕ್ಕೆ ಕನ್ನಡ ಲೇಖಕರೂ, ಗ್ರಾಹಕರೂ ಸಹಾಯಮಾಡುವದು ಅವಶ್ಯವೆಂದು ನಾವು ಬರೆಯುವ ಕಾರಣವಿಲ್ಲ. ಗ್ರಂಥಮಾಲೆಯು ಉತ್ಪನ್ನವು ಪಾಠಶಾಲೆಯಂಥ ಮಹಾ ಕಾರ್ಯದ, ಜೀವನ ಸಾಧನವಾಗಿರುವದರಿಂದ ಎಷ್ಟಾದರೂ ಚಂದಾದಾರರಾಗರೊಲ್ಲದೇಕೆ? ಎಷ್ಟಾದರೂ ಫಲವು ದೊರೆಯಲೊಲ್ಲದೇಕೆ, ಎಂದು ಉದಾಸೀನಮಾಡಿದರೆ ನಡೆಯುವಹಾಗಿಲ್ಲ; ಅದರಂತೆ, ಕನ್ನಡಿಗರ ಔಸ್ಯತ್ಯದ ದೃಷ್ಟಿಯಿಂದಲೂ ನಮ್ಮ ಗ್ರಂಥಮಾಲೆಯ ಪ್ರಸಾರವನ್ನು ಹೆಚ್ಚಿಸುವದು ಅವಶ್ಯವಾಗಿದೆ. ಪಾಠಶಾಲೆಯ ಪ್ರತಿತಿಂಗಳ ಸದ್ಯದ ಮುನ್ನೂರಾ ಐವತ್ತು ರೂಪಾಯಿಗಳ ವೆಚ್ಚವು ಕುಳಿತಲ್ಲಿ ನಡೆಯಬೇಕಾದರೆ, ಕನಿಷ್ಠ ಐದುಸಾವಿರ ಜನ ಚಂದಾದಾರರಾದರೂ ನಮ್ಮ ಮಾಲೆಗೆ ಸ್ಥಿರವಾಗಿ ಉಳಿಯಬೇಕಾಗಿರುವದು. ಹತ್ತುಸಾವಿರ ಜನ ಚಂದಾದಾರರು ನಮ್ಮ ಮಾಲೆಗೆ ಕೂಡಿದರೆ ಕನ್ನಡಿಗರಿಗೆ ಭೂಷಣವಲ್ಲವೇನು? ಈಗಿದ್ದ ನಾಲ್ಕುಸಾವಿರ ಜನ ಚಂದಾದಾರರು ತಾವು ಚಂದಾದಾರರಾಗಿ ಉಳಿದು, ಪ್ರತಿ ಒಬ್ಬರು ಒಬ್ಬೊಬ್ಬರಂತೆ ಚಂದಾದಾರರನ್ನು ಕೂಡಿಸಿದರೂ ಹತ್ತುಸಾವಿರ ಜನರು ಸಹಜವಾಗಿ ಕೂಡಬಹುದು? ಚಂದಾದಾರರ ಸಂಖ್ಯೆಯು ಹೆಚ್ಚಿದ ಮಾನದಿಂದ ನಮ್ಮ ಲೇಖನಿಯ ವೇಗವು ನಿಶ್ಚಯವಾಗಿ ಹೆಚ್ಚುವುದು, ಬುದ್ಧಿಯು ತಪ್ಪದೆ ಪ್ರಚುರವಾಗುವದು!! ಧರ್ಮಕಾರ್ಯವು ಸುಸೂತ್ರವಾಗಿ ಸಾಗುವದು!!

(೬) ನಾವು ಕೈಕೊಂಡಿರುವ ವೈದಿಕ ಪಾಠಶಾಲೆಯ ಮಹಾಕಾರ್ಯವು ಎಷ್ಟು ಪುಣ್ಯಕರವಾಗಿರುವದೆಂಬದನ್ನು ತಿಳಿಸುವದಕ್ಕಾಗಿ ಅದರ ಸ್ವರೂಪವನ್ನು ನಾವು ಸಂಕ್ಷೇಪವಾಗಿ ಹೇಳುವೆವು. ಸದ್ಯಕ್ಕೆ ಪಾಠಶಾಲೆಯಲ್ಲಿ ನಾಲ್ಕು ಜನ ಅಧ್ಯಾಪಕರಿದ್ದು, ಅವರಿಗೆ ಪ್ರತಿ ತಿಂಗಳಿಗೆ ತೊಂಭತ್ತು ರೂಪಾಯಿ ಸಂಬಳವು ಮುಟ್ಟುತ್ತಿರುವದು. ಇದಲ್ಲದೆ ಒಬ್ಬ ಕಾರಕೂನನ ತಿಂಗಳ ಇಪ್ಪತ್ತು ರೂಪಾಯಿ ಪಗಾರ, ತಿಂಗಳಿಗೆ ಉಂಡು ನಾಲ್ಕು ನಾಲ್ಕು ರೂಪಾಯಿಗಳಂತೆ ಇಬ್ಬರ ಪ್ರತಿ ತಿಂಗಳ ಎಂಟು ರೂಪಾಯಿ ಪಗಾರ, ಮತ್ತು ಗೋಶಾಲೆಯ ಎರಡು ಆಳುಗಳ ಇಪ್ಪತ್ತು ರೂಪಾಯಿ ಪಗಾರ, ಹೀಗೆ ಒಟ್ಟಿಗೆ ಪ್ರತಿ ತಿಂಗಳಿಗೆ ನೂರಾಮೂವತ್ತೆಂಟು ರೂಪಾಯಿ ಪಗಾರವು ಮುಟ್ಟು

ತ್ತಿರುವದು. ಇದಲ್ಲದೆ ಪ್ರತಿನಿತ್ಯ ಸರಾಸರಿ ಒಪ್ಪತ್ತಿಗೆ ಮೂವತ್ತು ಜನ ರಂತೆ ವಿದ್ಯಾರ್ಥಿಗಳ, ಹಾಗು ಉಳಿದ ಜನರ ಎರಡು ಹೊತ್ತಿನ ಊಟ ವಾಗುವದು. ಇದಲ್ಲದೆ ಹತ್ತು ದನಗಳ ಪ್ರತಿತಿಂಗಳ ಹೊಟ್ಟೆಯ ವೆಚ್ಚವು ನಾಲ್ವತ್ತು ರೂಪಾಯಿಯಿರುವದು. ಹೀಗೆ ಪಾಠಶಾಲೆಯ ಪ್ರತಿತಿಂಗಳ ವೆಚ್ಚವು ಮುನ್ನೂರಾ ಐವತ್ತು ರೂಪಾಯಿಗಳನ್ನು ಮೀರಿರು ವದು. ಪಾಠಶಾಲೆಯಲ್ಲಿ ಋಗ್ವೇದ, ಕೃಷ್ಣಯಜುರ್ವೇದ, ಶುಕ್ಲಯಜು ರ್ವೇದ ಇವುಗಳ ಅಧ್ಯಯನಕ್ಕೂ, ಆಯಾ ಶಾಖೆಗಳ ಯಾಜ್ಞಿಕದ ಅಧ್ಯಯನಕ್ಕೂ, ಸಾಹಿತ್ಯ, ನ್ಯಾಯ ವ್ಯಾಕರಣ ಅದ್ವೈತ ವೇದಾಂತ ಇವುಗಳ ಅಧ್ಯಯನಕ್ಕೂ ಅನುಕೂಲವಿರುವದು. ನಾಳಿನ ಮಾಘಕ್ಕೆ ದ್ವೈತ--ವೇದಾಂತ, ನ್ಯಾಯಶಾಸ್ತ್ರಗಳ ಅಧ್ಯಯನಕ್ಕೂ, ಜೋತಿಷ್ಯದ ಅಧ್ಯಯನಕ್ಕೂ ಅನುಕೂಲ ಮಾಡಿಕೊಡುವ ವಿಚಾರವದೆ. ವಿದ್ಯಾರ್ಥಿ ಗಳು ಕಾಲಕಾಲಕ್ಕೆ ಸಂಧ್ಯಾವಂದನ ಮಾಡುವದು. ಬ್ರಹ್ಮಚಾರಿಗಳು ಸಾಯಂಪ್ರಾತರಗ್ನಿಕಾರ್ಯಗಳನ್ನು ಮಾಡುವದು. ಸದಾಚರಣದ, ಹಾಗು ಸಮಯಾನುವರ್ತನದ, ಅದರಂತೆ ಸತತೋದ್ಯೋಗದ ಚಟವು ವಿದ್ಯಾರ್ಥಿಗಳಿಗೆ ಹತ್ತುವಂತೆ ದಕ್ಷತೆಯಿಂದ ಯತ್ನಿಸಲಾಗುವದು.

(೭) ಹೀಗೆ ನಾವು ಪ್ರಸ್ತಾವನೆಯ ನೆವದಿಂದ ನಮ್ಮ ಭಾಷಾಸೇವಾ ಪ್ರವೃತ್ತಿಯ ಕಾರಣವನ್ನೂ, ನಮ್ಮ "ಸದ್ಬೋಧ ಚಂದ್ರಿಕೆಯು" "ಸುರಸ ಗ್ರಂಥಮಾಲೆ" ಯಾವ ಬಗೆಯನ್ನೂ, ಗ್ರಂಥಮಾಲೆಯ ಸ್ವರೂಪವನ್ನೂ, ಅದರ ಉತ್ಪನ್ನದ ವಿನಿಯೋಗದ ಸೌಷ್ಠವವನ್ನೂ ಕುರಿತು ತಿಳಿಸತಕ್ಕ ದ್ದನ್ನು ತಿಳಿಸಿದೆವು. ಇನ್ನು ನಮ್ಮ ಸಂಕಟಸಮಯದಲ್ಲಿ ನಮಗೆ ಸಹಾಯ ಮಾಡಿದ ಮಹನೀಯರ ಉಪಕಾರವನ್ನು ಸ್ಮರಿಸಿ ಪ್ರಸ್ತಾವನೆಯನ್ನು ಮುಗಿಸುವೆವು. ನಮ್ಮ ಉಪಕಾರಸ್ಮರಣದ ಪ್ರಥಮಸ್ಥಾನವೆಂದರೆ, ನಮ್ಮ ವಂದನೀಯರಾದ ಕನ್ನಡಿಗರು! ಇವರು ತಮ್ಮ ಔದಾರ್ಯದಿಂದ ನಮ್ಮನ್ನು ಲೇಖನ ಕಾರ್ಯದಲ್ಲಿ ಸ್ಥಿರವಾಗಿ ತೊಡಗಿಸಿ, ಆ ಕಾರ್ಯದಿಂದ ಪಾಠಶಾಲೆಯನ್ನು ಕೂತಲ್ಲಿ ನಡಿಸಬಹುದೆಂಬ ನಂಬಿಗೆಯನ್ನು ನಮ್ಮಲ್ಲಿ ಉಂಟುಮಾಡಿದರು. ಇದಕ್ಕಾಗಿ ನಾವು ಕನ್ನಡಿಗರ ಉಪಕಾರವನ್ನು ಎಷ್ಟು ಸ್ಮರಿಸಿದರೂ ಸ್ವಲ್ಪವೆ! ಇನ್ನು ಉಪಕಾರ ಸ್ಮರಣದ ಎರಡನೆಯ ಸ್ಥಾನ

ವೆಂದರೆ, ಅಗಡಿ–ಆನಂದವನದಿಂದ ನಮ್ಮನ್ನು ಹೊರಗೆ ಹೊರಡಿಸಿದವರು! ಈ ಮಹನೀಯರು ನಮ್ಮ ಕಲ್ಯಾಣಕ್ಕಾಗಿ, ಸ್ಥಾನಾಸ್ಥಾನ, ಕಾರ್ಯಾಕಾರ್ಯ, ಧರ್ಮಾಧರ್ಮ, ಪಾಪಪುಣ್ಯ ಮುಂತಾದವುಗಳ ವಿಚಾರವನ್ನು ಮಾಡದೆ, ಮಾಡಬಾರದ ಕೆಲಸಗಳನ್ನು ಅತ್ಯಾಸಕ್ತಿಯಿಂದ ಮಾಡಿ, ನಮಗೆ ಉಚ್ಚಾಟನೆ ಕೊಟ್ಟರು. ಅವರು ಹಾಗೆ ಮಾಡದಿದ್ದರೆ, ಪ್ಲೇಗದೂಷಿತ ಹವೆಯಲ್ಲಿಯೂ ಮನೆ ಬಿಡಲಾರದೆ ನಾಶಹೊಂದುವ ಮಹಾಮೂರ್ಖರಂತೆ ನಾವು ನಿಶ್ಚಯವಾಗಿ ನಾಶಹೊಂದುತ್ತಿದ್ದೆವು! ಅಂದಬಳಿಕ ಈ ಪರೋಪಕಾರಿಗಳ ಉಪಕಾರವನ್ನು ಎಷ್ಟು ಸ್ಮರಿಸಿದರೆ ತೀರೀತು? ಇವರ ತರುವಾಯದಲ್ಲಿ ಉಪಕಾರ ಸ್ಮರಿಸಲು ತಕ್ಕವರೆಂದರೆ; ಹಾವೇರಿಯ ಸದ್ಗೃಹಸ್ಥರು! ಹಾವೇರಿಯ ಸುಖವಸ್ತುಗಳು, ಕೋರ್ಟಿನವರು, ತಾಲೂಕ ಕಚೇರಿಯವರು, ವಕೀಲರು, ಅವರ ಕಾರಕೂನರು ನಮಗೆ ಪರಿಪರಿಯಾಗಿ ಸಹಾಯಮಾಡಿದರು. ಅವರ ಔತನಬಾಗಿಣ, ದಕ್ಷಿಣೆದಾನ ಮೊದಲಾದುವುಗಳಿಂದ ನಮಗೆ ಬಹು ದೊಡ್ಡ ಸಹಾಯವಾಯಿತು. ಇವರಲ್ಲಿಯೂ ಕೈ. ವಾ. ಹಣಮಂತನಾಯಕ ಬಾದಾಮಿ ಇವರ ವ್ಯವಹಾರವನ್ನು ಉತ್ತಮ **ರೀತಿಯಿಂದ** ನಡೆಸುತ್ತಿರುವ ಅವರ ಅಳಿಯಂದಿರಾದ ಮ. ರಾ. ರಾ. ಜೀವಣರಾವ ಕುಲಕರಣಿ, ಹಾಗು ಮ. ರಾ. ರಾ. ಮೋರೋಪಂತ ಅಭ್ಯಂಕರ ವಕೀಲ ಇವರ ಉಪಕಾರವನ್ನು ನಾವು ಎಂದಿಗೂ ಮರೆಯಲಾರೆವು. ಇವರಲ್ಲಿ ಮೊದಲನೆಯವರು ನಮಗೆ ಇರಲಿಕ್ಕೆ ನೆರಳುಕೊಟ್ಟು ಬೇಡಿದಾಗ ಬೇಡಿದಷ್ಟು ದುಡ್ಡು ಕೊಡುತ್ತಿರುವರು. ಎರಡನೆಯವರು ವರ್ಷಕ್ಕೆ ಸರಾಸರಿ ಇನ್ನೂರಾ ಇಪ್ಪತ್ತು ರೂಪಾಯಿಗಳನ್ನು ಪಾಠಶಾಲೆಗೆ ಕೊಡುತ್ತಿರುವರು. ಇವರಂತೆಯೇ ಮ. ರಾ. ರಾ. ಅಶ್ವತ್ಥನಾಯಕ ಡಂಬಳ **ಇವರೂ** ನಮಗೆ ಪ್ರಸಂಗದಲ್ಲಿ ಸಹಾಯಮಾಡುತ್ತಲಿರುವರು. ಒಟ್ಟಿಗೆ **ಹಾವೇರಿಯವರ** ಉಪಕಾರವನ್ನು ವಿಶದವಾಗಿ ಸ್ಮರಿಸಲಿಕ್ಕೆ ಸ್ಥಳಾನುಕೂಲವಿಲ್ಲದ್ದರಿಂದ ಸುಮ್ಮನಿರಬೇಕಾಗಿದೆ! ಹಾವೇರಿಯ ಪುಣ್ಯಾತ್ಮರು ಪಾಠಶಾಲೆಯು ತಮ್ಮಲ್ಲಿ ಬಂದದ್ದಕ್ಕಾಗಿ ಆನಂದೋದ್ಗಾರಗಳ ಹೊರಡಿಸಿದ್ದನ್ನು ಕೇಳಿ ನಮ್ಮ ಕರ್ಣಗಳು ಸಫಲವಾಗಿವೆ! ಇನ್ನು ಕಟ್ಟಕಡೆಯಲ್ಲಿ ಉಪಕಾರ ಸ್ಮರಿಸುವದೆಂದರೆ ಧಾರವಾಡ ಕರ್ನಾಟಕ ಪ್ರಿಂಟಿಂಗ ವರ್ಕ್ಸ ಪ್ರೇಸಿನ

ಮಾಲಕರಾದ ಶ್ರೀಮಂತ ಯಶವಂತರಾವ ಭಾಸ್ಕರರಾವ ಜಠಾರ, ಬಿ. ಎ. ಎಲ್. ಎಲ್. ಬಿ. ಇವರದು. ಇವರು ನಮಗೆ ಶಕ್ಯವಿದ್ದಮಟ್ಟಿಗೆ ಸುಲಭ ದರದಿಂದ ಪುಸ್ತಕ ಮುದ್ರಿಸಿ ಕೊಟ್ಟಿದ್ದಲ್ಲದೆ, ಹಣದ ವಿಷಯವಾಗಿ ಬಹಳ ವಾಗಿ ಸಂಬಾಳಿಸಿರುವರು. ಮತ್ತು ಕೆಲಸವನ್ನೂ ಬೇಗನೆ ಮಾಡಿಕೊಟ್ಟಿರು ವರು. ಹೀಗೆ ಶ್ರೀ ಶೇಷಾಚಲ ಸದ್ಗುರುವಿನ ಪ್ರೇರಣೆಯಿಂದ ಈ ಮಹ ನೀಯರೆಲ್ಲರೂ ನಮಗೆ ಸಹಾಯ ಮಾಡಿ, ನಮ್ಮನ್ನು ಹೊಟ್ಟೆಯಲ್ಲಿ ಹಾಕಿ ಕೊಂಡು "ಗಳಗನಾಥ ಮಾಸ್ತರನು ದೃಢನಿಶ್ಚಯದವನು" ಇತ್ಯಾದಿ ಔಪ ಚಾರಿಕಶ್ಲಾಘನೆಗೆ ನನ್ನನ್ನು ಪಾತ್ರನನ್ನಾಗಿ ಮಾಡಿದರು. ಅಹಹ! ಶ್ರೀಸದ್ಗುರುನಾಥನೇ, ನಿನ್ನ ಮಹಿಮೆಯೆಂತಹದು! ನಿನ್ನನ್ನು ನಮಸ್ಕರಿ ಸುವ ಯೋಗ್ಯತೆಯೂ ನನಗಿಲ್ಲದಿರುವಾಗ, ನಿನ್ನ ಉಪಕಾರವನ್ನು ನಾನು ಯಾವ ಬಗೆಯಿಂದ ಸ್ಮರಿಸಲಿ? ಆದ್ದರಿಂದ ಸದ್ಗದಿತಾಂತಃಕರಣದಿಂದ ನಿನ್ನ ಮಹಾಮಹಿಮೆಯ ಚಿಂತನಮಾಡುತ್ತ ಮೌನವನ್ನು ತಾಳುವದೇ ನನ್ನ ಕೆಲಸವಾಗಿರುವದು. ಹೀಗೆಯೇ ಕೃಪಾದೃಷ್ಟಿಯಿಂದ ನನಗೆ ಸಹಾಯ ಸಂಪತ್ತನ್ನು ಒದಗಿಸಿಕೊಟ್ಟು, ಸಹಾಯಕರ್ತೃಗಳ ಕಲ್ಯಾಣ ವನ್ನು ಉತ್ತರೋತ್ತರವಾಗಿ ಅಭಿವೃದ್ಧಿಗೊಳಿಸು! ಇದೇ ನನ್ನ ಕಟ್ಟ ಕಡೆಯ ಪ್ರಾರ್ಥನೆಯು.

ಕನ್ನಡಿಗರ ಸೇವಕ,

ವೇ. ತಿ. ಕುಲಕರಣಿ ಗಳಗನಾಥ,

ಶ್ರೀ ಶೇಷಾಚಲ ಸಂಸ್ಕೃತ ಪಾಠಶಾಲಾ ಚಾಲಕ.

ಸುರಸ ಗ್ರಂಥಮಾಲಾ
ಆಫೀಸ, ಹಾವೇರಿ
ತಾ|| ೧೬-೯-೧೮

ಮರಾಟರ ಅಭ್ಯುದಯ

೧ನೆಯ ಪ್ರಕರಣ

ಖಾನನ ಉಬ್ಬಾಳುತನ!

ಶಿವಾಜಿಯು ಸುಲ್ತಾನಗಡವನ್ನು ತಕ್ಕೊಂಡ ವೃತ್ತವು, ನಮ್ಮ "ಈಶರೀ ಸೂತ್ರ"ವೆಂಬ ಕಾದಂಬರಿಯನ್ನು ಓದಿದ ವಾಚಕರಿಗೆ ಗೊತ್ತಾಗಿರಬಹದು. ಓದದೇ ಇದ್ದವರು ಅವಶ್ಯವಾಗಿ ಆ ಸುರಸ ಕಾದಂಬರಿಯನ್ನು ಓದಬೇಕೆಂದು ನಾವು ಸೂಚಿಸುವೆವು; ಯಾಕಂದರೆ, ಅದರಿಂದ ಮರಾಟರ ಇತಿಹಾಸವು ಸುಸಂಗತವಾಗಿಯೂ, ಸುರಸವಾಗಿಯೂ ತಿಳಿಯಲಿಕ್ಕೆ ಅನುಕೂಲವಾಗುವದು. ತಂದೆಗೆ ಸೇರದೆ ಇದ್ದ ಒಬ್ಬ ಉಡಾಳ ಹುಡುಗನು, ಛತ್ರಪತಿಯೆಂಬ ಬಿರುದನ್ನು, ಔರಂಗಜೇಬ ಬಾದಶಹನಿಂದ ಸಂಪಾದಿಸಿ, ರಾಯಗಡದಲ್ಲಿ ಪಟ್ಟಾಭಿಷಿಕ್ತನಾಗಿ, ಮರಾಟರ ರಾಜ್ಯವನ್ನು ಸ್ಥಾಪಿಸಿದ್ದು ಕೌತುಕದ ಸಂಗತಿಯಷ್ಟೇ ಅಲ್ಲ, ಆಶ್ಚರ್ಯಪಡತಕ್ಕ ಸಂಗತಿಯೂ ಆಗಿರುವದು. ಶಿವಾಜಿಯ ಅಭ್ಯುದಯವನ್ನು ಕುಗ್ಗಿಸಲಿಕ್ಕೆ ವಿಜಾಪುರದ ಬಾದಶಹನೂ, ದಿಲ್ಲಿಯ ಬಾದಶಹನೂ ಕೂಡಿಯೇ ಪ್ರಯತ್ನ ಮಾಡಿದರು; ಆದರೆ ಅವರಿಬ್ಬರ ಪ್ರಯತ್ನವನ್ನು ಬಗ್ಗುಬಡಿದು, ಶಿವಾಜಿಯು ತನ್ನ ಸ್ವರಾಜ್ಯ ಸ್ಥಾಪನೆಯ ಕಾರ್ಯವನ್ನು ನೆರವೇರಿಸಿದನು. ಶಿವಾಜಿಗೆ ವಿಜಾಪುರದ ಬಾದಶಹನು ನೆರೆಯ ಪ್ರಬಲ ಶತ್ರುವಾಗಿದ್ದನು. ಮೊದಮೊದಲು ಆ ಬಾದಶಹನು ಶಿವಾಜಿಯನ್ನು ಕ್ಷುದ್ರನೆಂದು ತಿಳಿದು ಲೆಕ್ಕಿಸಲಿಲ್ಲ. ಶಿವಾಜಿಯ ತಂದೆಯಾದ ಶಹಾಜಿರಾಜನು ಬಾದಶಹನ ನೌಕರನಾಗಿದ್ದನು. ಶಹಾಜಿಗೆ ಹೇಳಿ, ಆತನ ತುಂಟ ಹುಡುಗನ ಸದ್ದು ಅಡಗಿಸಬಹುದೆಂದು ಬಾದಶಹನು ತಿಳಿದಿದ್ದನು; ಆದರೆ ಮಗನ ಮುಂದೆ ತಂದೆಯ ಆಟವೂ ನಡೆಯ

ದಾಯಿತು. ಮೊದಮೊದಲು ಬಾದಶಹನು ಶಿವಾಜಿಯ ವಿಷಯವಾಗಿ ವಿಪರೀತ ಭಾವವನ್ನು ತಾಳಿದನು; ತಂದೆಯು ಅಂತರಂಗದಲ್ಲಿ ಮಗನಿಗೆ ಅನುಕೂಲನಾಗಿರುವನೆಂಬ ಸಂಶಯವೂ ಬಾದಶಹನನ್ನು ಬಾಧಿಸುತ್ತ ಲಿತ್ತು. ಮುಂದೆ ಬಾದಶಹನ ಈ ಸಂಶಯದ ನಿವಾರಣವಾಗಿ, ಶಿವಾಜಿಯು ತನ್ನ ತಂದೆಯನ್ನು ಮೀರಿರುವನೆಂಬ ನಂಬಿಗೆಯು ಬಾದಶಹನಿಗಾಯಿತು.

ಬರಬರುತ್ತ ಶಿವಾಜಿಯು ಬಾದಶಹನನ್ನು ಪ್ರಸಿದ್ಧವಾಗಿ ಮೀರಿ ನಿಂತು, ಪಾರುಪತ್ಯ ಮಾಡಲಿಕ್ಕೆಂದು ಬಂದ ವಿಜಾಪುರದ ಒಬ್ಬೊಬ್ಬ ಸರ ದಾರರನ್ನು ಹಣಿಯಹತ್ತಿದನು. ಇದನ್ನು ನೋಡಿ ಬಾದಶಹನ ಕಣ್ಣುಗಳು ಚೆನ್ನಾಗಿ ತೆರೆದವು. ಸುಲ್ತಾನಗಡವು ಮೊದಲಾಗಿ ಬಾದಶಹನ ವಶದಲ್ಲಿದ್ದ ಒಂದೊಂದೇ ಕೋಟೆಗಳು ಕೈವಶವಾಗಹತ್ತಿದವು. ದರ್ಬಾರದಲ್ಲಿ ಶಿವಾಜಿಯ ವಿಜಯದ ಸುದ್ದಿಗಳು ಬಾದಶಹನ ಕಿವಿಗೆ ದಿನಾಲು ಬೀಳಹತ್ತಿದವು. ಇದನ್ನು ನೋಡಿ ಬಾದಶಹನು ಸೈರಿಸಲಾರದೆ ಒಂದು ದಿನ ದರ್ಬಾರದಲ್ಲಿ ತನ್ನ ಸರದಾರರನ್ನು ಕುರಿತು—"ಈ ಪುಂಡ ಶಿವಾಜಿಯನ್ನು ದಂಡಿಸು ವವರು ನಮ್ಮ ದರ್ಬಾರದಲ್ಲಿ ಯಾರೂ ಇಲ್ಲವೇ ಇಲ್ಲವೆ? ಒಬ್ಬ ಸರದಾರನ ಮಗನೆಂದರೇನು? ಅವನ ಪುಂಡಾಟಿಗೆಯೆಷ್ಟು? ಏನೋ ಒಬ್ಬ ಯಃಕಶ್ಚಿತ ಪೋರನೆಂದು ನಾವು ದುರ್ಲಕ್ಷಿಸುತ್ತ ಬಂದದ್ದು ಈ ಮನೆಗೆ ಬಂದಿತು." ಎಂದು ನುಡಿಯಲು, ಅಫಜುಲಖಾನನೆಂಬ ಬಲಿಷ್ಠ ಸರದಾರನು ಎದ್ದು ನಿಂತು ಬಾದಶಹನನ್ನು ಕುರಿತು—"ಹಜರತ್, ನಾನು ಶಿವಾಜಿಯನ್ನು ಹಿಡಕೊಂಡು ದರ್ಬಾರಕ್ಕೆ ಎಳತರುವೆನು, ಇಲ್ಲವೆ ಅವನನ್ನು ಹೊಡ ಕೊಂಡಾದರೂ ಬರುವೆನು. ಗುಡ್ಡಗಾಡಿನ ಇಲಿಯನ್ನು ಹಿಡಿಯಲಿಕ್ಕೆ, ಅಥವಾ ಹೊಡೆಯಲಿಕ್ಕೆ ಅಷ್ಟೊಂದು ವಿಚಾರವೇಕೆ? ನನ್ನ ಮುಂದೆ ಶಿವಾಜಿಯು ಎಷ್ಟರವನು? ಅವನ ಪುಂಡಾಟಿಕೆಗಳು ಯಾವ ಗಿಡದ ತೊಪ್ಪಲ?" ಎಂದು ಗರ್ವದಿಂದ ನುಡಿದು, ಶಿವಾಜಿಯ ಮೇಲೆ ದಂಡೆತ್ತಿ ಹೋಗಲು ಬಾದಶಹನ ಅಪ್ಪಣೆಯನ್ನು ಪಡೆದನು.

ಅಫಜುಲಖಾನನು ಸಾಮಾನ್ಯನಲ್ಲ; ಆಗಿನ ವಿಜಾಪುರದ ದರ್ಬಾರ ದೊಳಗಿನ ಸರದಾರರಲ್ಲಿ ಆತನು ಅತ್ಯಂತ ಬಲಿಷ್ಠನಾಗಿದ್ದನು. ಆತನ ಆಕೃತಿಯು ಭವ್ಯವಾದದ್ದು, ಶರೀರ ಸಾಮರ್ಥ್ಯವು ಅತುಲವಾದದ್ದು.

ನಾವು ಬಹು ಸಮರ್ಥರೆಂದು ಹೆಮ್ಮೆ ಪಡುವವರು ಕೂಡ ಅಫಜುಲಖಾನನ ಗೊಡವಿಗೆ ಹೋಗುತ್ತಿದ್ದಿಲ್ಲ. ಶರೀರ ಬಲದಂತೆ ಸೈನ್ಯದ ಬಲದಿಂದಲೂ ಅಫಜುಲಖಾನನು ಎಲ್ಲರನ್ನು ಮೀರಿದವನಾಗಿದ್ದನು. ಮಧ್ಯಪ್ರಾಯ, ಆ ಮಧ್ಯಪ್ರಾಯಕ್ಕೆ ಒಪ್ಪುವ ಭವ್ಯಶರೀರ, ಆ ಭವ್ಯಶರೀರವನ್ನು ಶೃಂಗರಿಸುವ ಅತುಲಬಲ, ಆ ಅತುಲಬಲವನ್ನು ಹೆಚ್ಚಿಸುವ ಅಪಾರ ಸೈನ್ಯ; ಇವೆಲ್ಲವುಗಳ ಅನುಕೂಲವಿದ್ದ ಬಳಿಕ ಅಫಜುಲಖಾನನು ಗರ್ವಿಷ್ಠನಾಗಿದ್ದರಲ್ಲಿ ಆಶ್ಚರ್ಯವೇನು? ಅತಿಗರ್ವವು ರಾವಣನ ನಾಶಕ್ಕೆ ಕಾರಣವಾದಂತೆ ಅಫಜುಲಖಾನನ ಅತಿಗರ್ವವು ಅವನ ನಾಶಕ್ಕೆ ಕಾರಣವಾಯಿತೆಂದು ಹೇಳಬಹುದು. ಆ ಗರ್ವಿಷ್ಠಖಾನನು ಶಿವಾಜಿಯನ್ನು ಕ್ಷುದ್ರ ಜಂತುವೆಂದು ಭಾವಿಸುತ್ತಿದ್ದನು; ಕ್ಷುದ್ರಜಂತುವನ್ನು ಹಿಚಿಕಿ ಕೊಲ್ಲುವಂತೆ, ಶಿವಾಜಿಯನ್ನು ಹಿಚಿಕಿ ಕೊಲ್ಲಬಹುದೆಂದು ಆತನು ನಂಬಿದ್ದನು. ಶಿವಾಜಿಯ ಪ್ರಕರಣವು ಆತನಿಗೆ ತೀರ ಕ್ಷುದ್ರವಾಗಿ ತೋರುತ್ತಿತ್ತು. ಹಾಹಾ ಅನ್ನುವದರೊಳಗೆ ನಾನು ಶಿವಾಜಿಯನ್ನು ಹಿಡತರುವೆನೆಂದು ಹೆಮ್ಮೆಯಿಂದ ಆತನು ವಿಜಾಪುರದಿಂದ ಹೊರಟನು. ಹಾದಿಯಲ್ಲಿ ಕಂಡ ದೇವಾಲಯಗಳೊಳಗಿನ ಮೂರ್ತಿಯನ್ನು ಒಡೆದು, ದೇವಸ್ಥಾನಗಳನ್ನು ಮಸೀದಿಗಳಾಗ ಮಾಡ ಹತ್ತಿದನು. ಇಷ್ಟರಿಂದ ಖಾನನ ಸಮಾಧಾನವಾಗಲಿಲ್ಲ. ತುಳಜಾಪುರದ ಭವಾನಿಯ ಮೂರ್ತಿಯನ್ನೂ, ಪಂಢರಪುರದ ವಿಠೋಬ ಮೂರ್ತಿಯನ್ನೂ ಒಡೆದು ಪುಡಿಮಾಡಿ, ಅವುಗಳ ಸ್ಥಳದಲ್ಲಿ ಮಸೀದೆಗಳನ್ನು ಕಟ್ಟಿಸಬೇಕೆಂದು ಆತನು ಇಚ್ಛಿಸುತ್ತಿದ್ದನು; ಆದರೆ ಆತನ ಈ ಇಚ್ಛೆಯು ಎಂದೂ ಪೂರ್ಣವಾಗಲಿಲ್ಲ. ಆತನು ತುಳಜಾಪುರಕ್ಕೆ ಬರುವದರೊಳಗಾಗಿ ಪೂಜಾರರು ಮೂರ್ತಿಯ ಸ್ಥಳಾಂತರ ಮಾಡಿದ್ದರು. ಅದರಂತೆ, ಪಂಢರಪುರದ ಬಡವೆಯರೂ ಮೂರ್ತಿಯನ್ನು ಎರಡನೆಯ ಕಡೆಗೆ ಕಾಣಿಸಿದ್ದರು.

ಹೀಗೆ ಅಫಜುಲಖಾನನು ಮದೋನ್ಮತ್ತನಾಗಿ ಮನಬಂದಂತೆ ದೇವಸ್ಥಾನಗಳನ್ನು ಭ್ರಷ್ಟಗೊಳಿಸುತ್ತ, ಹಿಂದೂ ಜನರನ್ನು ಗೋಳಾಡಿಸುತ್ತ ಪುಣೆಯ ಕಡೆಗೆ ಸಾಗಿದನು. ಪುಣೆಯ ಬಳಿಯಲ್ಲಿರುವ ರಾಯಗಡದಲ್ಲಿ ಶಿವಾಜಿಯು ಇರುವನೆಂತಲೂ, ತನ್ನ ಪ್ರಚಂಡ ಸೈನ್ಯದೊಡನೆ ಬೈಲಲ್ಲಿ ಆತನನ್ನು ಗಂಟುಬಿದ್ದು ಧೂಳಹಾರಿಸಿ ಕ್ಷಣದಲ್ಲಿ ಆತನನ್ನು ಸೆರೆಹಿಡಿಯ

ಬಹುದಿಂತಲೂ ಆ ಉನ್ಮತ್ತಖಾನನು ಉಬ್ಬಿದ್ದನು; ಆದರೆ ಶಿವಾಜಿಯು ಇಂಥ ಖಾನಗೀನರಿಗೆ ಸಹಜವಾಗಿ ಹಣಿಯುವಂಥ ಅರಿವುಗೇಡಿಯಿದ್ದಿಲ್ಲ. ತನ್ನ ಪುಂಡಾಟಿಕೆಯು ಮಿತಿಮೀರಿದ್ದರಿಂದ, ವಿಜಾಪುರದ ಬಲಿಷ್ಠ ಬಾದಶಹನು ತನ್ನ ಶಾಸನಮಾಡದೆ ಬಿಡನೆಂಬ ಎಚ್ಚರದಿಂದ ಆತನು ಯಾವಾಗಲೂ ರಾಯಗಡದಲ್ಲಿ ಇರದೆ, ದುರ್ಗದಿಂದ ದುರ್ಗಕ್ಕೆ ಅಲೆದಾಡುತ್ತಲಿದ್ದನು. ಶಿವಾಜಿಯು ಇಂಥ ದುರ್ಗದಲ್ಲಿಯೇ ಇರುವನೆಂಬುದನ್ನೂ, ಆತನು ಇಂಥ ತಂತ್ರವನ್ನೇ ಒಡ್ಡುವನೆಂಬುದನ್ನೂ ನಿರ್ಧರಿಸುವದು ಯಾವ ಮುಸಲ್ಮಾನ ಸರದಾರರಿಗೂ ಶಕ್ಯವಾಗಿದ್ದಿಲ್ಲ. ಶಿವಾಜಿಯು ಶಕ್ತಿವಂತನಿದ್ದಂತೆ ಯುಕ್ತಿವಂತನೂ ಆಗಿದ್ದನು. ಆದ್ದರಿಂದಲೇ ಇಬ್ಬರು ಬಲಿಷ್ಠ ಬಾದಶಹರ ಉಬ್ಬಾಳುತನಕ್ಕೆ ಈಡಾಗಿ ನುಗ್ಗಾಗದೆ, ಕ್ರಮದಿಂದ ಬೆಳವಣಿಗೆಯನ್ನು ಹೊಂದಿ ಬಲಿಷ್ಠನಾಗುತ್ತ ನಡೆದಿದ್ದನು. ಆತನ ಮಸ್ತಕದ ಮೇಲೆ ಭವಾನಿಯ ವರದಹಸ್ತವು ಅಬಾಧಿತವಾಗಿ ಇತ್ತು. ಶ್ರೀಸಮರ್ಥ ರಾಮದಾಸರಂಥ ಮಹಾತ್ಮರ ಪರಮಾನುಗ್ರಹಕ್ಕೆ ಆತನು ಪಾತ್ರನಾಗಿದ್ದನು. ಹೀಗೆ ದೈವಬಲ–ಗುರುಬಲಗಳಿಂದ ಪರಿಪುಷ್ಟನಾಗಿದ್ದ ಶಿವಬಾನು ತನ್ನ ವೈರಿಗಳನ್ನು ದಂಗುಬಡಿದು, ಅವರ ಕೆಚ್ಚೆದೆಗಳನ್ನು ಒಡೆದು ನೀರು ಮಾಡಿ, ತನ್ನ ಅಳವಿನೊಳಗೆ ಸಿಕ್ಕವರನ್ನು ನೆಲಕ್ಕೊರಿಸಿ ನುಗ್ಗುಮಾಡಿದನು. ಆದ್ದರಿಂದ ಮೊಗಲ ಸರದಾರರು ಶಿವಾಜಿಯ ವಿರುದ್ಧವಾಗಿ ಹೊರಗೆ ಎಷ್ಟು ಉಬ್ಬಾಳುತನವನ್ನು ತೋರಿಸಿದರೂ, ಶಿವಾಜಿಯ ಯುಕ್ತಿಪ್ರಯುಕ್ತಿಗಳ ಇರುಕಿನೊಳಗೆ ಸಿಕ್ಕು ಎಲ್ಲಿ ಜಿಬ್ಬಿಯಾಗುವೆವೋ ಎಂದು ಅಂತರಂಗದಲ್ಲಿ ಬಹಳವಾಗಿ ಅಂಜುತ್ತಲಿದ್ದರು.

ಇಂಥ ಯಾವ ಅಂಜಿಕೆಗೂ ಸೊಪ್ಪುಹಾಕದವನಂತೆ ಅಫಜುಲಖಾನನು ಪುಣೆಯ ಕಡೆಗೆ ಸಾಗಿರಲು, ಒಬ್ಬ ತರುಣ ಮಹಾರಾಷ್ಟ್ರ ಸರದಾರನು ಅಶ್ವಾರೂಢನಾಗಿ ಒತ್ತರದಿಂದ ರಾಯಗಡದ ಕಡೆಗೆ ಸಾಗಿದ್ದನು. ಆತನು ಇಪ್ಪತ್ತೈದು ವರ್ಷದ ತರುಣನಿದ್ದು, ಸಾದಗಪ್ಪಿನ ಮೇಲಿದ್ದನು. ಅದರಲ್ಲಿ ಮಧ್ಯಾಹ್ನದ ಬಿಸಿಲಿನಿಂದ ಅವನ ಕೃಷ್ಣವರ್ಣಕ್ಕೆ ಕಳೆಯೇರಿದಂತಾಗಿತ್ತು. ಹಸಿವೆ ನೀರಡಿಕೆಗಳ ಪರಿವೆಯಿಲ್ಲದೆ ಆತನು ಒಂದೇಸವನೆ ಮಾರ್ಗಕ್ರಮಣ ಮಾಡಿದ್ದರಿಂದ ಮೋರೆಯು ಬಾಡಿದಂತೆ ತೋರುತ್ತಿತ್ತು. ಸರ್ವಾಂಗದಲ್ಲಿ

ಧೂಳಿಯು ಮುಸುಕಿತ್ತು; ಆದರೂ ಆತನ ತೇಜಃಪುಂಜವಾದ ಚಂಚಲ ನೇತ್ರಗಳ ಕಾಂತಿಯಿಂದ ಆತನಲ್ಲಿಯ ಮಾಲಿನ್ಯವೆಲ್ಲ ಅಳಿದುಹೋಗಿ, ಮೂರು ಲೋಕಗಳನ್ನು ಜಯಿಸುವ ಉಬ್ಬಾಳುತನವು ಆತನಲ್ಲಿ ಒಡೆದು ಕಾಣುತ್ತಿತ್ತು. ಆತನು ಬರ್ಚಿ, ಖಡ್ಗ, ಧನಸ್ಸುಗಳೆಂಬ ಮೂರು ಶಸ್ತ್ರ ಗಳಿಂದ ಸಜ್ಜಾಗಿದ್ದನು. ಆತನ ಕುದುರೆಯು ತನಗಾಗಿದ್ದ ಶ್ರಮವನ್ನು ಎಣಿಸದೆ, ಗಾಂಭೀರ್ಯದಿಂದ ಸಾಗಿತ್ತು. ಅದರ ಮೇಲೆ ನಮ್ಮ ತರುಣ ಸರದಾರನು ಚಿತ್ರದಲ್ಲಿ ಬರೆಯುವಂತೆ ಐಟನಿಂದ ಕುಳಿತುಕೊಂಡಿದ್ದನು. ಆತನ ಮನಸ್ಸಿನಲ್ಲಿ ನಾನಾ ಪ್ರಕಾರದ ವಿಚಾರಗಳು ಉತ್ಪನ್ನವಾಗಿದ್ದುವು. ಆತನು ತನ್ನೊಳಗೆ—"ಅಫಜುಲಖಾನನು ಅಕಸ್ಮಾತ್ತಾಗಿ ಮಹಾರಾಜ ರನ್ನು ಮುತ್ತಿದರೆ, ಅವರು ವೈಮರೆತಿರಬಾರದೆಂದು ನಾನು ಇಷ್ಟು ಒತ್ತರ ದಿಂದ ಸುದ್ದಿಯನ್ನು ಹೇಳಲಿಕ್ಕೆ ಬಂದೆನು. ಖಾನನು ಸ್ವಲ್ಪವಾದರೂ ವಿಲಂಬಮಾಡದೆ ಸಾಗಿಬರುತ್ತಿರುವನು. ಆತನು ಅತ್ಯಂತ ಬಲಿಷ್ಠನೆಂಬ ದೇನೋ ನಿಜ; ಆದರೆ ಪ್ರತ್ಯಕ್ಷ ಶಿವಾವತಾರವಾಗಿದ್ದ ನಮ್ಮ ಮಹಾರಾಜ ರಿಗೆ ಆತನು ಈಡಾಗಲಾರನೆಂಬುದು ನಿಶ್ಚಯವು. ಇಂಥ ಕಠಿಣ ಪ್ರಸಂಗ ದಲ್ಲಿಯೇ ನಮ್ಮ ಸ್ವಾಮಿಭಕ್ತಿಯು ಪ್ರಕಟವಾಗಲಿಕ್ಕೆ ಆಸ್ಪದವು ದೊರೆಯು ತ್ತದೆ! ನನ್ನನ್ನು ಮಹಾರಾಜರು ಖಾನನ ಮೇಲೆ ಬಿಟ್ಟು ನೋಡಲಿ, ಮುಗ್ಗಲು ಮುರಿಯುವೆನು. ಮಹಾರಾಜರು ಚಿಕ್ಕಂದಿನಿಂದ ನನ್ನ ಸಂರಕ್ಷಣ ಮಾಡಿರುವರು. ಅವರಿಗೊದಗಿದ ಇಂಥ ಕಠಿಣ ಪ್ರಸಂಗಗಳಲ್ಲಿ ನಮ್ಮಂಥವರ ಉಪಯೋಗವಾದರೆ, ನಮ್ಮನ್ನು ಸಾಕಿ ಸಲಹಿದ್ದು ಸಾರ್ಥಕವಾಗುವದು! ಮಹಾರಾಜರೇನು ತಮ್ಮ ಹೆಂಡಿರು ಮಕ್ಕಳ ಸಲುವಾಗಿ ಪೇಚಾಡುವರೆ? ಸ್ವಧರ್ಮ–ಸ್ವರಾಜ್ಯಗಳ ರಕ್ಷಣಕ್ಕಾಗಿ ಅವರು ಒಂದೇ ಸವನೆ ಸವಿಯು ತ್ತಿರುವರು. ಇಂಥ ದಿವ್ಯವಾದ ವಿಭೂತಿಯ ಸನ್ನಿಧಿಯಲ್ಲಿದ್ದವರಿಗೇ ಪರೋಪಕಾರವು ಅಲ್ಪ ಸ್ವಲ್ಪ ಘಟಿಸಿದರೆ ಘಟಿಸಬೇಕು."

ಈ ಮೇರೆಗೆ ನಮ್ಮ ತರುಣ ಸರದಾರನು ಆಲೋಚಿಸುತ್ತ ರಾಯ ಗಡವನ್ನೇರಿ ಹೋದನು. ಆಗ ಮಹಾರಾಜರ ಸವಾರಿಯು ಅಲ್ಲಿಯೇ ಇತ್ತು. ರೀತಿಯಂತೆ ಸರದಾರನು ತಾನು ಬಂದ ವರ್ತಮಾನವನ್ನು ಮಹಾ ರಾಜರಿಗೆ ತಿಳಿಸಲು, ದರ್ಶನಕ್ಕೆ ಬರುವದಕ್ಕಾಗಿ ಮಹಾರಾಜರಿಂದ

ಅಪ್ಪಣೆಯು ದೊರೆಯಿತು. ಸರದಾರನು ಒಳಗೆ ಹೋಗಿ ಬಹು ವಿನಯದಿಂದ ಬಾಗಿ ಮಹಾರಾಜರಿಗೆ ರಾಮರಾಮ ಮಾಡಿ ಕೈಜೋಡಿಸಿ ನಿಂತುಕೊಂಡನು. ಆಗ ಮಹಾರಾಜರ ಬಳಿಯಲ್ಲಿ ಅವರ ನಿತ್ಯದ ಪರಿವಾರದ ಜನರಲ್ಲಿ ಕೆಲವರು ತಮ್ಮ ತಮ್ಮ ಸ್ಥಳದಲ್ಲಿ ಕುಳಿತುಕೊಂಡಿದ್ದರು, ಕೆಲವರು ನಿಂತುಕೊಂಡಿದ್ದರು. ಜೀಜಾಬಾಯಿ ಸಾಹೇಬರು ಮಹಾರಾಜರ ಬಳಿಯಲ್ಲಿಯೇ ಕುಳಿತುಕೊಂಡಿದ್ದರು. ಅವರು ಆ ಸರದಾರನನ್ನು ದಿಟ್ಟಿಸಿ ನೋಡಿ ಮುಗುಳುನಗೆ ನಕ್ಕು—"ಯಾರು? ಸಾವಳ್ಯಾನೇನು" ಎಂದು ಕೇಳಲು, ಸರದಾರನು—"ಹೌದು, ಅವ್ವನವರೇ, ನಾನು ತಮ್ಮ ಸಾವಳ್ಯಾನು" ಎಂದು ಉತ್ತರ ಕೊಟ್ಟನು. ಅಷ್ಟರಲ್ಲಿ ಮಹಾರಾಜರು ಆಯಿಸಾಹೇಬರವರ ಕಡೆಗೆ ನೋಡಿ ನಗುತ್ತ—"ಆಯಿಸಾಹೇಬ, ಇದೇನು? 'ಸಾವಳ್ಯಾ, ಸಾವಳ್ಯಾ' ಎಂದು ಒಂಟಿ ಹೆಸರಿನಿಂದ ಕರೆಯಬೇಡಿರಿ, 'ಸರ್ಜೇರಾವ' ಎಂದು ಕರೆಯಿರಿ, ಎಂದು ನೀವು ನಮ್ಮೆಲ್ಲರನ್ನು ಆಜ್ಞಾಪಿಸಿದ್ದಿಲ್ಲವೆ? " ಎಂದು ಕೇಳಲು, ಜೀಜಾಬಾಯಿ ಸಾಹೇಬರು—"ಹೌದು, ಒಂಟಿ ಹೆಸರಿನಿಂದ ಕರೆಯುವುದು ಸರಿಯಲ್ಲ. ನಾನು ಮರೆತೆನು, ಚಿಕ್ಕಂದಿನಿಂದ ಒಂಟಿ ಹೆಸರಿನಿಂದ ಕರೆಕರೆದು ಅಭ್ಯಾಸವಿದ್ದದ್ದರಿಂದ ನನ್ನ ಬಾಯಿಗೆ 'ಸಾವಳ್ಯಾ' ಎಂದೇ ಬರುತ್ತದೆ. ನೀನು ಸುಲ್ತಾನಗಡವನ್ನು ತಕ್ಕೊಂಡು ಬರುವಾಗ ಈತನನ್ನು ಕರಕೊಂಡು ಬಂದೆಯಲ್ಲ; ಆಗ ಈತನು ತೀರ ಸಣ್ಣವನಿದ್ದನು. ಈಗ ಎಷ್ಟು ದೊಡ್ಡವನಾಗಿದ್ದಾನೆ. ಆಗಿನ ಸಾವಳ್ಯಾನ ಮೂರ್ತಿಯು ಈಗಲೂ ನನ್ನ ಕಣ್ಣಿಗೆ ಕಟ್ಟಿರುತ್ತದೆ. ಈಗ ಮೂರು ವರ್ಷಗಳಿಂದ ಈತನು ವಿಜಾಪುರದಲ್ಲಿರುವದರಿಂದ ಈತನನ್ನು ನಾನು ನೋಡಿಯೇ ಇಲ್ಲ. ಯಾಕೆ ಸರ್ಜೇರಾವ, ನಿಮ್ಮ ಮೈಗೆ ರಕ್ತದ ಹನಿಗಳು ಸಿಡಿದಿರುವವಲ್ಲ! ಹಾದಿಯಲ್ಲಿ ಯಾವದಾದರೂ ಬೇಟೆಯನ್ನು ಹೊಡೆದಂತೆ ಕಾಣುತ್ತದೆ. ನೀವು ಸುಮ್ಮನೆಯೆಲ್ಲಿ ಬರುವಿರಿ? ಏನಾದರೂ ಕಿಡಿಗೇಡಿತನ ಮಾಡುವವರೇ ಸರಿ."

ಜೀಜಾಬಾಯಿ ಸಾಹೇಬರು ಈ ಪರಿಯಾಗಿ ತನ್ನನ್ನು ಆದರಿಸಿದ್ದನ್ನು ನೋಡಿ ಸರ್ಜೇರಾಯನ ಮೈಯುಬ್ಬಿತು. ಆತನು ಅತಿವಿನಯದಿಂದ ಜೀಜಾಬಾಯಿಯವರನ್ನು ಕುರಿತು—"ಬಾಯೀಸಾಹೇಬ, ಅಂಥ ಬೇಟೆಯೇನು ಸಿಕ್ಕಿಲ್ಲ. ಹಾದಿಯಲ್ಲಿ ಎರಡು ಹುಲಿಗಳು ಒಂದಕ್ಕೊಂದು ಕಡಿದಾಡುತ್ತಿದ್ದವು.

ಅವನ್ನು ನೋಡಿ ನನ್ನ ಕುದುರೆಯು ಮುಂದಕ್ಕೆ ಸಾಗದಾಯಿತು. ಮಹಾರಾಜರಿಗೆ ಅತಿಮಹತ್ವದ ಸುದ್ದಿಯನ್ನು ಹೇಳಲಿಕ್ಕೆಂದು ಅವಸರದಿಂದ ಹೊರಟು ಬರುತ್ತಿರುವ ನನಗೆ ವಿಘ್ನ ಮಾಡುವುದನ್ನು ನೋಡಿ, ನಾನು ಆ ಹುಲಿಗಳನ್ನು ಕೊಂದೆನು. ಮಹಾರಾಜರ, ಹಾಗು ಬಾಯೀಸಾಹೇಬರ ಚರಣದೆಡೆಯಲ್ಲಿ ಹೇಳತಕ್ಕ ಒಂದು ಮಹತ್ವದ ಸುದ್ದಿಯಿರುವದು, ಅನ್ನಲು, "ಅದೇನು ಮಹತ್ವದ ಸುದ್ದಿಯು" ಎಂದು ಮಹಾರಾಜರೂ, ಜೀಜಾ ಬಾಯೀಸಾಹೇಬರೂ ಒಮ್ಮೆಲೆ ಕೇಳಿದರು. ಅದಕ್ಕೆ ಸರ್ಜೇರಾಯನು—

ಸರ್ಜೇರಾವ—ಈವರೆಗೆ ಮಾಡಿದ ಯತ್ನವೆಲ್ಲ ವ್ಯರ್ಥವಾದದ್ದರಿಂದ ಬಾದಶಹನು ಅಫಜುಲಖಾನನನ್ನು ಕಳಿಸಿಕೊಟ್ಟಿರುವನು.

ಮಹಾರಾಜರು—(ಆಶ್ಚರ್ಯದಿಂದ) ಯಾರನ್ನು? ಅಫಜುಲಖಾನ ನನ್ನು ಕಳಿಸಿಕೊಟ್ಟಿರುವನೆ?

ಸರ್ಜೇರಾವ—ಹೌದು ಸರಕಾರ. ಖಾನನು ದರ್ಬಾರದಲ್ಲಿ ಪ್ರತಿಜ್ಞೆ ಮಾಡಿರುವನು. ಆತನು ಮಹಾರಾಜರನ್ನು ಹಿಡಕೊಂಡು ಹೋಗಿ ಬಾದಶಹನ ಎದುರಿಗೆ ನಿಲ್ಲಿಸುವನಂತೆ, ಇಲ್ಲವೆ ಮಹಾರಾಜರನ್ನು ಕೊ........

ಮಹಾರಾಜರು—ಕೊಲ್ಲುವೆನೆಂದು ಪ್ರತಿಜ್ಞೆ ಮಾಡಿರುವನೇನು? ಏನೂ ಚಿಂತೆಯಿಲ್ಲ; ಈವರೆಗೆ ಇಂಥವರು ಎಷ್ಟೋ ಜನರು ಬಂದರು, ಎಷ್ಟೋ ಜನರು ಹೋದರು. ಆತನೂ ಬರಲಿ. ಅಂತು, ಈಗ ಅಫಜುಲ ಖಾನನು ಬರುವನು? ಎಂದು ಹೊರಡುವನು?

ಸರ್ಜೇರಾವ—ಎಂದು ಹೊರಡುವದೇನು ಸರಕಾರ, ಇಷ್ಟು ಹೊತ್ತಿಗೆ ಖಾನನು ಪಂಢರಪುರವನ್ನು ದಾಟಿ ಸಹ ಬಂದಿರಬಹುದು.

ಮಹಾರಾಜರು—ಒಳ್ಳೇದು ಬರಲಿ! ಮತ್ತೇನು ವಿಶೇಷ ಸುದ್ದಿಯು? ಆದರೆ ನಿನ್ನ ಊಟವಾಗಿರುವದೆಯು? ಮಾತಿನಲ್ಲೇ ಹೊತ್ತು ಹೋಯಿತಲ್ಲ!

ಮಹಾರಾಜರ ಈ ಪ್ರಶ್ನಕ್ಕೆ ಸರ್ಜೇರಾಯನು ಉತ್ತರವನ್ನು ಕೊಡ ಲಿಲ್ಲ. ಮಹಾರಾಜರು ಆತನ ಊಟದ ವ್ಯವಸ್ಥೆಯನ್ನು ಮಾಡಹೇಳಿ, ತಾವು ಮುತ್ಸದ್ದಿಗಳೊಡನೆ ಆಲೋಚನೆ ಮಾಡತೊಡಗಿದರು. ಮಹಾ ರಾಜರು ತಮ್ಮ ಗುಪ್ತಚಾರರ ಮುಖದಿಂದ ಸಾಧಾರಣವಾಗಿ ಅಫಜುಲ ಖಾನನು ಬರುವ ಸುದ್ದಿಯನ್ನು ಕೇಳಿದ್ದರು; ಆದರೆ ಆತನು ಇಷ್ಟು ಬೇಗನೆ

ಹೊರಟುಬರುವನೆಂದು ಅವರು ಭಾವಿಸಿದ್ದಿಲ್ಲ. ಸರ್ಜೇರಾಯನ ಹೇಳಿಕೆಯಿಂದ ಅವರು ನಿಶ್ಚಿತವಾದ ವ್ಯವಸ್ಥೆಯನ್ನು ಬೇಗನೆ ಮಾಡಬೇಕಾಯಿತು. ಅಫಜುಲಖಾನನ ಕೀರ್ತಿಯನ್ನು ಮಹಾರಾಜರು ಕೇಳಿದ್ದರು. ಈವರೆಗೆ ಬಂದ ಪ್ರಸಂಗಗಳಿಗಿಂತ ಈಗೊದಗಿದ ಪ್ರಸಂಗವು ಕಠಿಣವಾದದ್ದೆಂದು ಅವರ ಮನಸ್ಸಿಗೆ ಹೊಳೆಯಿತು. ಅವರು ಮಹಾದೂರದರ್ಶಿಗಳು. ಮೇಲಾಗಿ ಜೀಜಾಬಾಯಿಯವರಂಥ ಧೀರ–ಗಂಭೀರ ಸ್ವಭಾವದ ಸಾಧ್ವಿಯ ಆಲೋಚನೆಯ ಸಹಾಯವು ಅವರಿಗಿತ್ತು. ಅಂತೇ ಈವರೆಗೆ ಹಲವು ಕುತ್ತುಗಳಿಂದ ಅವರು ಪಾರಾಗಿದ್ದರು.

ಸರ್ಜೇರಾಯನ ಊಟ–ಉಡಿಗೆಗಳಾದವು. ಮಹಾರಾಜರು ಆತನಿಂದ ಕೇಳತಕ್ಕ ಸುದ್ದಿಗಳನ್ನು ಕೇಳಿಕೊಂಡು, ನೀನು ಈಗಲೇ ನೆಟ್ಟಗೆ ವಿಜಾಪುರಕ್ಕೆ ಹೋಗಿ ಅಲ್ಲಿಯೇ ಇದ್ದು, ಅಲ್ಲಿಯ ಸುದ್ದಿಗಳನ್ನು ತಿಳಿಸುತ್ತಿರಬೇಕೆಂದು ಆಜ್ಞಾಪಿಸಿದರು; ಆದರೆ ಮಹಾರಾಜರ ವಿಪತ್ಕಾಲದಲ್ಲಿ ತಾನು ಜೀವದ ಹಂಗುದೊರೆದು ಸಹಾಯ ಮಾಡಬೇಕೆಂತಲೂ, ಸ್ವಾಮಿಕಾರ್ಯದಲ್ಲಿ ದೇಹಪಾತವಾದರೆ ಜನ್ಮದ ಸಾರ್ಥಕತೆಯಾಗುವದೆಂತಲೂ ಎಣಿಕೆ ಹಾಕುತ್ತಿದ್ದ ಸರ್ಜೇರಾಯನಿಗೆ, ಇದರಿಂದ ಸಮಾಧಾನವಾಗಲಿಲ್ಲ. ಮಹಾರಾಜರ ಆಜ್ಞೆಗೆ ವಿರುದ್ಧವಾಗಿ ಚಕಾರಶಬ್ದವನ್ನು ನುಡಿಯುವ ಧೈರ್ಯವು ಆತನಿಗಿದ್ದಿಲ್ಲ. ಒಬ್ಬ ಸರ್ಜೇರಾಯನಿಗೇ ಏಕೆ, ಎಂಥ ಎದೆಗಾರನಿಗಾದರೂ ಮಹಾರಾಜರ ವಿರುದ್ಧ ಮಾತಾಡಲಿಕ್ಕೆ ಧೈರ್ಯವಾಗುತ್ತಿದ್ದಿಲ್ಲ. ಅಪ್ಪಣೆಯಂತೆ ಸರ್ಜೇರಾಯನು ವಿಜಾಪುರದ ಹಾದಿಯನ್ನು ಹಿಡಿದನು. ಬರುವಾಗಿದ್ದಷ್ಟು ಆತುರವು ಆತನಿಗೆ ಹೋಗುವಾಗ ಇದ್ದಿಲ್ಲ. ಔದಾಸೀನ್ಯದಿಂದ ಆತನು ಮೆಲ್ಲಗೆ ಕುದುರೆಯನ್ನು ಬಿಟ್ಟಿದ್ದನು. ಹೀಗೆ ಕೆಲಕಾಲ ಮಾರ್ಗವನ್ನು ಕ್ರಮಿಸಿ ಹೋಗುತ್ತಿರಲು, ಎದುರಿನಲ್ಲಿ ಒಂದು ಕುದುರೆಯು ಬೆದರಿ, ತನ್ನ ಮೇಲೆ ಕುಳಿತುಕೊಂಡಿದ್ದ ತರುಣ ಸ್ತ್ರೀಯನ್ನು ಲೆಕ್ಕಿಸದೆ ವಾಯುವೇಗದಿಂದ ಸಾಗಿಬರುತ್ತಿತ್ತು. ಸರ್ಜೇರಾಯನ ದೃಷ್ಟಿಯು ಭಯಭೀತಳಾದ ಆ ಸ್ತ್ರೀಯಳ ಕಡೆಗೆ ಹೋಯಿತು. ಕುದುರೆಯು ಅಸುಗೊಳ್ಳದೆ ಬಂದಿರುವುದರಿಂದ ಈ ಸ್ತ್ರೀಯು ಬೆದರಿದ್ದಾಳೆ, ಈಗ ನಾನು ಕುದುರೆಯನ್ನು ತರುಬದಿದ್ದರೆ ಈಕೆಯ ಗತಿಯು ನೆಟ್ಟ

ಗಾಗುವದಿಲ್ಲ ಎಂದು ಯೋಚಿಸಿ, ಒಂದು ಕ್ಷಣವಾದರೂ ವಿಲಂಬವಾಡದೆ ಸರ್ಜೇರಾಯನು ಆ ಸ್ತ್ರೀಯ ಕುದುರೆಯನ್ನು ತರುಬಿದನು. ಕುದುರೆಯು ತಡೆದು ನಿಂತುಕೊಂಡರೂ ಅದು ಲಗಾಮುದಲ್ಲಿ ಸರ್ಜೇರಾಯನ ಕೈಹಾಕ ಗೊಡಲೊಲ್ಲದು. ಅಷ್ಟರಲ್ಲಿ ಆ ಸ್ತ್ರೀಯು ಚಟ್ಟನೆ ಕುದುರೆಯಿಂದ ಇಳಿದು ಅದರ ಲಗಾಮನ್ನು ಹಿಡಿದು, ಕೂಡಲೆ ಅದನ್ನು ಕುರಿತು—"ಖೋಡಿ, ಒಳ್ಳೇ ಹೊತ್ತಿನಲ್ಲಿ ನನ್ನೊಬ್ಬಳನ್ನೇ ಕಟ್ಟಿಕೊಂಡು ಇತ್ತ ಬಂದೆಯಲ್ಲ, ಅವರ ಗತಿಯೇನಾಗಿರುವದೆಂಬುದರ ಎಚ್ಚರವು ನಿನಗೆ ಉಳಿಯಲೇ ಇಲ್ಲವೆ?" ಎಂದು ನುಡಿದು, ಆಕೆಯು ಸುಮ್ಮನೆ ನಿಂತುಕೊಂಡಳು. ಪರಪುರುಷರ ಮುಂದೆ ಹೀಗೆ ಒಬ್ಬಳೇ ನಿಂತುಕೊಳ್ಳುವ ಪ್ರಸಂಗವು ಆಕೆಗೆ ಇದೇ ಮೊದಲ ನೆಯದು. ಆಕೆಯು ಒಮ್ಮೆ ನೆಲವನ್ನು, ಒಮ್ಮೆ ಕುದುರೆಯ ಖುರಗಳನು ನೋಡುತ್ತ ತಲೆಬಾಗಿ ನಿಂತುಕೊಂಡಿದ್ದಳು. ಪರಪುರುಷನಿಂದ ತನಗಾಗಿದ್ದ ಮಹದುಪಕಾರಕ್ಕಾಗಿ ಕೃತಜ್ಞತೆಯನ್ನು ತೋರಿಸಲು ಆಕೆಯು ಆತುರಪಡು ತ್ತಿದ್ದರೂ, ಆಕೆಯ ಮುಖದಿಂದ ಅಕ್ಷರಗಳೇ ಹೊರಡಲೊಲ್ಲವು; ಅಂದ ಬಳಿಕ ಮಾತಾಡುವ ಧೈರ್ಯವಾಗುವ ಬಗೆ ಹ್ಯಾಗೆ? ಸರ್ಜೇರಾಯ ನಿಗಾದರೂ ಹೀಗೆ ಏಕಾಂತದಲ್ಲಿ ಪರಸ್ತ್ರೀಯ ಸಮ್ಮುಖದಲ್ಲಿ ನಿಂತುಕೊಳ್ಳುವ ಪ್ರಸಂಗವು ಈವರೆಗೆ ಬಂದಿದ್ದಿಲ್ಲ. ಆತನೂ ಆ ಸ್ತ್ರೀಯೊಡನೆ ಮಾತಾಡಲು ಸಂಕೋಚಪಡಹತ್ತಿದನು. ಹೀಗೆ ಅವರಿಬ್ಬರು ಮೌನವ್ರತವನ್ನು ಧರಿಸಿ ದವರಂತೆ ಕೆಲಹೊತ್ತು ಸುಮ್ಮನೆ ನಿಂತುಕೊಂಡರು.

ಕೆಲಹೊತ್ತಿನ ಮೇಲೆ ಸರ್ಜೇರಾಯನು ವಿವೇಕವನ್ನು ತಾಳಿ ಧೈರ್ಯದಿಂದ ಆ ಸ್ತ್ರೀಯನ್ನು ಕುರಿತು—"ಅಮ್ಮಾ, ಅಕಸ್ಮಾತ್ತಾಗಿ ನಿಮ್ಮ ಕುದುರೆಯು ಬೆದರಿ ಅದು ನಿಮ್ಮನ್ನು ಸಿಕ್ಕ ಕಡೆಗೆ ಸಾಗಿಸಿಕೊಂಡು ಬಂದಂತೆ ಕಾಣುತ್ತದೆ. ನಿಮ್ಮವರು ಇರುವ ಸ್ಥಳದ ಗುರುತು ಹೇಳಿದರೆ, ನಾನು ಅವರ ಬಳಿಗೆ ನಿಮ್ಮನ್ನು ಕಳಿಸುವೆನು" ಎಂದು ಹೇಳಿದನು. ಆಗ ಆ ಸ್ತ್ರೀಯು ತನ್ನ ಮನಸ್ಸಿನಲ್ಲಿ—"ನಾನು ಏನೂ ಮಾತಾಡದೆ ಹೀಗೆ ಸುಮ್ಮನೆ ನಿಂತುಕೊಂಡರೆ ಆಗುವ ಪ್ರಯೋಜನವೇನು? ನನ್ನ ಪತಿಯು ಇರುವ ಸ್ಥಳದ ಗುರುತಾದರೂ ಈತನಿಗೆ ಹ್ಯಾಗಾಗಬೇಕು? ಎಂದು ಯೋಚಿಸಿ, ತನ್ನಲ್ಲಿದ್ದ ಬಿದ್ದ ಧೈರ್ಯವನ್ನು ಒಟ್ಟುಗೂಡಿಸಿ ಸರ್ಜೇರಾಯ

ನನ್ನು ಕುರಿತು—"ನಾವು ವಿಜಾಪುರದಿಂದ ಹೊರಟೆವು. ತುಳಜಾಪುರದಿಂದ ಕೆಲವು ಅಂತರದ ಮೇಲಿದ್ದ ಮಾವಿನ ತೋಪಿನಲ್ಲಿ ಇಳಿದುಕೊಂಡಿದ್ದೆವು. ಅಷ್ಟರಲ್ಲಿ ಸುಲಿಗೆಗಾರರಾದ ಪಠಾಣರು ನಮ್ಮ ಮೇಲೆ ಅಕಸ್ಮಾತ್ತಾಗಿ ಬೀಳಲು, ಗದ್ದಲವಾಯಿತು. ನಮ್ಮ ಗಂಡಸರು ಪಠಾಣರೊಡನೆ ಕಾದ ಹತ್ತಿದರು. ಆಗ ಹೆಂಗಸರು ನಾವು ಹೌಹಾರಿ ಕುಳಿತುಕೊಂಡೆವು. ಅಷ್ಟರಲ್ಲಿ ನಮ್ಮ ಈ ಕುದುರೆಯು ಜೀನು ಹಾಕಿ ಸಿದ್ಧವಾಗಿ ನಾವಿದ್ದಲ್ಲಿಗೆ ಬಂದಿತು. ನಾನು ಚಿಕ್ಕಂದಿನಲ್ಲಿಯೇ ಕುದುರೆಯನ್ನು ಹತ್ತಲಿಕ್ಕೆ ಕಲಿತವಳು; ಯುದ್ಧಕಲೆಯನ್ನು ಅಭ್ಯಾಸಿಸಿದವಳು; ಆದ್ದರಿಂದ ಪತಿಗೆ ಸಮರದಲ್ಲಿ ಸಹಾಯಮಾಡುವ ಉತ್ಸುಕತೆಯಿಂದ ನಾನು ಕುದುರೆಯನ್ನು ಹತ್ತಿದೆನು; ಆದರೆ ಈ ಖೋಡಿ ಕುದುರೆಗೆ ಏನಾಯಿತೋ ತಿಳಿಯದು ಅದು ಒಮ್ಮೆಲೆ ಬೆದರಿ ಅಸುಗೊಳ್ಳದೆ ಮನಬಂದಂತೆ ಓಡುತ್ತ ನನ್ನನ್ನು ಇಲ್ಲಿಗೆ ತಂದು ಬಿಟ್ಟಿತು. ನಾನು ನಮ್ಮ ಇಳಿದ ಸ್ಥಳದಿಂದ ಎಷ್ಟು ದೂರ ಬಂದೆನೆಂಬದನ್ನೂ, ಯಾವ ದಿಕ್ಕಿಗೆ ಬಂದೆನೆಂಬದನ್ನೂ, ಹೇಳಲಾರೆನು.

ಈ ಮೇರೆಗೆ ಆ ಸ್ತ್ರೀಯು ಹೇಳುತ್ತಿರಲು, ಪಠಾಣೀ ಭಾಷೆಯಿಂದ ಗಟ್ಟಿಯಾಗಿ ಉಚ್ಚರಿಸುವ ಶಬ್ದಗಳು ಆ ಸ್ತ್ರೀಯ ಕಿವಿಗೂ, ಸರ್ಜೆರಾಯನ ಕಿವಿಗೂ ಬಿದ್ದವು. ಧ್ವನಿಯು ಕೇಳಬರುವ ದಿಕ್ಕಿಗೆ ಅವರಿಬ್ಬರು ತಿರುಗಿ ನೋಡಲು, ಒಬ್ಬ ಪಠಾಣನು ಕುದುರೆಯನ್ನು ಓಡಿಸುತ್ತ ತಮ್ಮ ಬಳಿಗೆ ಬರುವದು ಅವರ ಕಣ್ಣಿಗೆ ಕಾಣಿಸಿತು. ಪಠಾಣನು ಕೂಡಲೆ ಕುದುರೆಯನ್ನು ಇಳಿದು ಆ ಸ್ತ್ರೀಯನ್ನು ತರಬುವ ಉದ್ದೇಶದಿಂದ ಆಕೆಯ ಬಳಿಗೆ ಹೋಗಿ ಉರ್ದು ಭಾಷೆಯಿಂದ—"ಆಯ ಬಿಜಲಿ, ನೀನು ಹಾಹಾ ಅನ್ನುವುದರೊಳಗಾಗಿ ಎಷ್ಟು ದೂರ ಬಂದೆಯಲ್ಲ! ನೀನು ಇತ್ತ ಕಡೆಗೆ ಬಂದದ್ದನ್ನು ನೋಡಿದಕೂಡಲೆ ನಮ್ಮ ಹಿಂಡನ್ನು ಬಿಟ್ಟು ನಾನೊಬ್ಬನೇ ನಿನ್ನನ್ನು ಬೆನ್ನಟ್ಟಿ ಬಂದೆನು. ನನ್ನನ್ನು ಬಿಟ್ಟು ನೀನೊಬ್ಬಳೇ ಇಷ್ಟು ಒತ್ತರದಿಂದ ಯಾಕೆ ಬಂದೆ? ಇವನು ನಿನಗೆಲ್ಲಿ ಭೆಟ್ಟಿಯಾದನು?" ಎಂದು ಕೇಳುತ್ತ ಮುಂದಮುಂದಕ್ಕೆ ಬರಹತ್ತಿದನು. ಕೇವಲ ಮೊದಲಿನಿಂದ ಗುರುತು ಇದ್ದವನಂತೆ ಪಠಾಣನು ಠಕ್ಕತನದಿಂದ ಆಡುವ ಮಾತುಗಳನ್ನು ಕೇಳಿ, ಆ ಮರ್ಯಾದಶೀಲಳಾದ ಸ್ತ್ರೀಯು ಪಠಾಣನ ಸೊಂಕಿಗೆ ಹೆದರಿ ಹಿಂದ

ಹಿಂದಕ್ಕೆ ಸರಿಯುವುದನ್ನು ನೋಡಿ ಸರ್ಜೇರಾಯನು ಸಂತಾಪದಿಂದ ಪಠಾಣನನ್ನು ಹಿಂದಕ್ಕೆ ದೂಡಿ--''ಏ ಪಾಗಲ, ಸರಿ ಹಿಂದಕ್ಕೆ. ನಮ್ಮ ಹೆಂಗಸರ ಮಾನಭಂಗ ಮಾಡುವ ಪಠಾಣರನ್ನು ಹಣಿಯುದಷ್ಟು ಹೇಡಿಗಳು ಎಲ್ಲ ಮರಾಟರು ಇರುತ್ತಾರೆಂದು ನೀನು ತಿಳಿದಿರುತ್ತೀಯೇನು? ನೀವು ಮುಸಲ್ಮಾನರು ಹೀಗೆಯೇ ಎಷ್ಟು ದಿವಸ ಲಂಡತನದಿಂದ ನಡೆಯುವಿರಿ? ಮುಂದಕ್ಕೆ ಒಂದು ಹೆಜ್ಜೆಯನ್ನಿಟ್ಟರೆ ನಿನ್ನ ಪರಿಣಾಮವಾಗಲಿಕ್ಕಿಲ್ಲ. ಜೀವವು ಬೇಕಾಗಿದ್ದರೆ ಬಂದ ಹಾದಿಯಿಂದ ತಿರುಗಿ ಹೋಗು" ಎಂದು ಗರ್ಜರಿಸಿ, ತನ್ನ ಖಡ್ಗವನ್ನು ಹಿರಿದನು. ಆಗ ಪಠಾಣನು ಸಿಟ್ಟಿನಿಂದ ತನ್ನ ಖಡ್ಗವನ್ನು ಹಿರಿದು ಉಪಹಾಸದಿಂದ ನಗುತ್ತ—''ನಿಮ್ಮ ಬಾಯಿಬಡಕ ತನವನ್ನು ನಾವು ಎಷ್ಟೋ ದಿವಸಗಳಿಂದ ಕೇಳುತ್ತ ಬಂದಿದ್ದೇವೆ. ನಿಮ್ಮ ಕೈಯಿಂದ ಯಾವ ಕೆಲಸವೂ ಆಗುವದಿಲ್ಲ. ನಮ್ಮ ಟೋಳಿಯವರು ಈಕೆಯ ಗಂಡನನ್ನೂ, ಅವನ ಪರಿವಾರದ ಬೇರೆ ಮರಾಟರನ್ನೂ ತುಂಡರಿಸಿ, ಅವರ ಸೊತ್ತನ್ನೆಲ್ಲ ಅಪಹರಿಸಿ ಇಷ್ಟು ಹೊತ್ತಿಗೆ ತಮ್ಮ ಸ್ಥಳಕ್ಕೆ ಹೋಗಿರ ಬಹುದು. ಇದೊಂದು ಉತ್ತಮ ಪದಾರ್ಥವು ಇತ್ತ ಕಡೆಗೆ ಬಂದದ್ದರಿಂದ ನಾನು ಇದರ ಬೆನ್ನುಹತ್ತಿ ಬಂದೆನು," ಎಂದು ನುಡಿದು, ಸರ್ಜೇರಾಯ ನೊಡನೆ ಕಾದಹತ್ತಿದನು. ಮರಾಟರ ಹಂಗೇನೆಂದು ಸೊಕ್ಕಿನಿಂದ ಕಾದುವ ಪಠಾಣನನ್ನು ಸರ್ಜೇರಾಯನು ಚನ್ನಾಗಿ ಹಣ್ಣುಮಾಡಿದನು. ಆಗ ಪಠಾಣನ ಮೈಸೊಕ್ಕು ಇಳಿದು, ಅವನು ಎಚ್ಚರದಿಂದ ಕಾದಹತ್ತಿದನು.

ಇಬ್ಬರೂ ಸಮಾನ ಬಲದ ವೀರರಾಗಿದ್ದರು. ಬಹಳ ಹೊತ್ತು ಕಾದಿ ದರೂ ಒಬ್ಬನೂ ಹಿಂಜರಿಯಲಿಲ್ಲ. ಇಬ್ಬರಿಗೂ ಹಲವು ಗಾಯಗಳಾದವು. ಅವರಿಬ್ಬರ ಕಾಳಗವನ್ನು ಆ ಸ್ತ್ರೀಯು ನೋಡುತ್ತ ನಿಂತುಕೊಂಡಿದ್ದಳು; ಆದರೆ ಆಕೆಯ ಚಿತ್ತವು ಸ್ವಸ್ಥವಾಗಿದ್ದಿಲ್ಲ. ಪಠಾಣರು ತನ್ನ ಗಂಡನನ್ನೂ, ಉಳಿದ ಪರಿವಾರವನ್ನೂ ತುಂಡರಿಸಿದರೆಂಬ ಸುದ್ದಿಯನ್ನು ಕೇಳಿದಾಗಿ ನಿಂದಂತು ಆಕೆಯು ಶೋಕದಿಂದ ಪೀಡಿತಳಾಗಿದ್ದಳು. ಈ ಸುದ್ದಿಯು ನಿಜವಾಗಿದ್ದ ಪಕ್ಷದಲ್ಲಿ ತಾನು ಏನು ಮಾಡಬೇಕೆಂದು ಆಕೆಯು ಯೋಚಿಸ ಹತ್ತಿದಳು. ಅಷ್ಟರಲ್ಲಿ ಸರ್ಜೇರಾಯನು ಜೋಲಿಹೋಗಿ ನೆಲಕ್ಕೆ ಬೀಳು ತ್ತಿದ್ದನು. ಆತನು ಜೋಲಿಯನ್ನು ಸಂಬಾಳಿಸಿಕೊಂಡು ನಿಲ್ಲುವಷ್ಟರಲ್ಲಿ

ಪಠಾಣನು ಅವನನ್ನು ನೂಕಿ ನೆಲಕ್ಕೆ ಕೆಡವಿ ಎದೆಯ ಮೇಲೆ ಕುಳಿತನು. ಇನ್ನು ಆತನು ಖಡ್ಗವೆತ್ತಿ ಸರ್ಜೇರಾಯನನ್ನು ಹೊಯ್ಯತಕ್ಕವನು. ಅಷ್ಟರಲ್ಲಿ ಆ ಶೂರ ಸ್ತ್ರೀಯು ತನ್ನಲ್ಲಿದ್ದ ಕಠಾರಿಯಿಂದ ಪಠಾಣನ ಬೆನ್ನಿಗೆ ಕಸುವಿನಿಂದ ಇರಿದಳು. ಆಕೆಯ ಇರಿತದಿಂದ ಪಠಾಣನ ಬೆನ್ನುಹುರಿಯ ಮಣಿಗಳು ತುಂಡರಿಸಿದಂತೆ ತೋರಿತು; ಯಾಕಂದರೆ, ಪಠಾಣನು ವ್ಯಥೆಪಟ್ಟು ಹಿಂದಕ್ಕೆ ಉರುಳಿದನು. ಆತನಿಗೆ ಮೇಲಕ್ಕೆ ಏಳಲಿಕ್ಕೆ ಬರಲೊಲ್ಲದು. ಬಿದ್ದಲ್ಲಿಯೇ ಬಿದ್ದು ಬಾಯಿಗೆ ಬಂದಂತೆ ಬಯ್ಯಹತ್ತಿದನು. ನಮ್ಮ ಜನರು ಇಲ್ಲಿಯೇ ಸಮೀಪದಲ್ಲಿ ಇದ್ದು ನನ್ನನ್ನು ಹುಡುಕುತ್ತ ಇಲ್ಲಿಗೆ ಬಂದು ನಿಮ್ಮ ಸಮಾಚಾರವನ್ನು ತಕ್ಕೊಳ್ಳುವರೆಂದು ಬೆದರಿಕೆ ಹಾಕಹತ್ತಿದನು. ಸರ್ಜೇರಾಯನು ಆ ಶೂರ ಸ್ತ್ರೀಯ ಉಪಕಾರವನ್ನು ಸ್ಮರಿಸಿ, ಪಠಾಣನ ಬೊಗಳುವಿಕೆಯ ಕಡೆಗೆ ಲಕ್ಷಗೊಡದೆ, ಪಠಾಣರ ಹಿಂಡು ಬಂದರೆ ತಮ್ಮ ಪರಿಣಾಮವಾಗದೆಂದು ತಿಳಿದು ನೆರೆಯ ಹಳ್ಳಿಗೆ ಆ ಸ್ತ್ರೀಯನ್ನು ಕರಕೊಂಡು ಹೋದನು.

ಮಹಾರಾಜರ ಅಪ್ಪಣೆಗೆ ವಿರುದ್ಧವಾಗಿ ಸರ್ಜೇರಾಯನು ವಿಜಾಪುರಕ್ಕೆ ಹೋಗದೆ ಬೇರೆಕಡೆಯಲ್ಲಿ ನಿಲ್ಲುಹ ಹಾಗಿದ್ದಿಲ್ಲ; ಆದ್ದರಿಂದ ಆತನು ಆ ಸ್ತ್ರೀಯನ್ನು ಆ ಊರ ದೇಶಮುಖರ ಮನೆಯಲ್ಲಿ ಬಿಟ್ಟು ತಾನು ವಿಜಾಪುರದ ಹಾದಿಯನ್ನು ಹಿಡಿದನು. ದೇಶಮುಖನು ಬಹು ದೊಡ್ಡ ಮನುಷ್ಯನಿದ್ದನು. ಆ ಸ್ತ್ರೀಯನ್ನು ಯಥೋಚಿತವಾಗಿ ಉಪಚರಿಸಿ, ಆಕೆಯ ಗಂಡನ ಶೋಧಕ್ಕಾಗಿ ತುಳಜಾಪುರದ ಕಡೆಗೆ ಆಳುಗಳನ್ನು ಕಳಿಸಿದನು. ಆ ಸ್ತ್ರೀಯು ತಾನು ಸ್ವತಃ ತನ್ನ ಪತಿಯ ಶೋಧಕ್ಕಾಗಿ ಹೋಗುವೆನೆಂದು ಹೇಳಿದಳು. ಆದರೆ ದೊಡ್ಡ ಮನುಷ್ಯಳಾದ ದೇಶಮುಖನ ಹೆಂಡತಿಯು ಆಕೆಯನ್ನು ಹೋಗಗೊಡದೆ, ನಿನ್ನ ಗಂಡನ ಶೋಧವಾಗುವವರೆಗೆ ನಮ್ಮಲ್ಲಿಯೇ ಇರಬೇಕೆಂದು ಆಗ್ರಹದಿಂದ ಇಟ್ಟುಕೊಂಡಳು. ಆ ಸ್ತ್ರೀಗೆ ಪರಗೃಹವಾಸವು ಅಸಹ್ಯವಾಯಿತು; ಆದರೂ ಆಕೆಯು ತನ್ನ ಪರಾಧೀನಸ್ಥಿತಿಯನ್ನು ಮನಸ್ಸಿನಲ್ಲಿ ತಂದು, ನಿರ್ವಾಹವಿಲ್ಲದೆ, ದೇಶಮುಖನ ಹೆಂಡತಿಯ ಮಾತಿ[illegible]ಕೊಂಡು ಆಕೆಯ ಮನೆಯಲ್ಲಿ ಇರಹತ್ತಿದಳು.

೩ನೆಯ ಪ್ರಕರಣ

ಕಳ್ಳನ ಜೀವವು ಹುಳ್ಳಹುಳ್ಳಗೆ.

ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ಅಫಜುಲಖಾನನು ಮಹಾ ಉನ್ಮತ್ತನಾಗಿ ದೇವಸ್ಥಾನಗಳನ್ನು ನಾಶಗೊಳಿಸುತ್ತ, ಮೂರ್ತಿಗಳನ್ನು ಒಡೆಯುತ್ತ, ಹಾಹಾ ಅನ್ನುವದರೊಳಗಾಗಿ ಶಿವಾಜಿಯನ್ನು ಹಿಡಿಯುವೆನೆಂಬ ಉಬ್ಬಿನಿಂದ ಪುಣೆಗೆ ಬಂದನು! ಆದರೆ ಶಿವಾಜಿಯು ಪುಣೆಯಲ್ಲಿಯೂ ಇದ್ದಿಲ್ಲ; ಪುಣೆಯ ಬಳಿಯಲ್ಲಿದ್ದ ರಾಯಗಡದಲ್ಲಿಯೂ ಇದ್ದಿಲ್ಲ; ಆದ್ದರಿಂದ ಖಾನನ ಮನಸ್ಸಿಗೆ ಬಹಳ ಅಸಮಾಧಾನವಾಯಿತು. ತಾನು ಖಾನನ ಪ್ರಚಂಡ ಸೈನ್ಯದೊಡನೆ ಬೈಲಲ್ಲಿ ನಿಂತು ಯುದ್ಧಮಾಡಿದರೆ ಯಶಸ್ಸು ದೊರೆಯದೆಂದು ತಿಳಿದು, ಶಿವಾಜಿಯು ಪ್ರತಾಪಗಡಕ್ಕೆ ಹೋಗಿದ್ದನು. ಪ್ರತಾಪಗಡವು ಮಹಾಬಳೇಶ್ವರದ ಬಳಿಯಲ್ಲಿರುವುದು. ಹೀಗಾದದ್ದನ್ನು ನೋಡಿ ಅಫಜುಲಖಾನನು ಪರಮಾವಧಿ ಅಸಮಾಧಾನಪಟ್ಟು ಪ್ರತಾಪಗಡದ ಕಡೆಗೆ ಸಾಗಿದನು. ತನ್ನ ಸೈನ್ಯದ ಮುಂದೆ ಶಿವಾಜಿಯ ಆಟವೇನೂ ನಡೆಯದು, ನಾನು ಪ್ರತಾಪಗಡವನ್ನು ಮುತ್ತಿ, ಅಲ್ಲಿಂದಲೇ ಶಿವಾಜಿಯನ್ನು ಸೆರೆ ಹಿಡಕೊಂಡು ಹೋಗುವೆನು, ಎಂಬ ದಮ್ಮಿನಿಂದ ಆತನು ಹೊರಟಿದ್ದನು; ಆದರೆ ಆ ದುರ್ಗಮವಾದ ದುರ್ಗವನ್ನು ಹತ್ತುವರ್ಷ ಮುತ್ತಿದರೂ ಕೈವಶವಾಗದೆಂಬದನ್ನು ಕೇಳಿ ಆತನು ಉದಾಸೀನನಾದನು. ವಾಯಿಯ ಭಯಂಕರವಾದ ಕಂದರವನ್ನು ನೋಡಿ ಆತನು, ವಿಚಾರಮಗ್ನನಾದನು. ಆ ಕಂದರದಲ್ಲಿಯೇ ಕೆಲವು ದಿನ ತಳಊರಿ, ಶಿವಾಜಿಯನ್ನು ಹಿಡಿಯುವ ಯುಕ್ತಿಯನ್ನು ಕಂಡು ಹಿಡಿಯಬೇಕೆಂತಲೂ, ಇಲ್ಲಿಂದಲೇ ಶಿವಾಜಿಯ ಚಲನವಲನಗಳನ್ನರಿತುಕೊಳ್ಳಬೇಕೆಂತಲೂ ಯೋಚಿಸಿ, ಅಲ್ಲಿ ಸೈನ್ಯದ ತಳ ಊರಿದನು. ಆತನ ಗುಪ್ತ ಹೇರರು ಸುದ್ದಿಯನ್ನು ತಿಳಕೊಳ್ಳುವದಕ್ಕಾಗಿ ಅಲ್ಲಲ್ಲಿ ಹರಿಬಿದ್ದರು. ಹೇರರು ತಂದ ಸುದ್ದಿಗಳಿಂದ ಖಾನನ ಉತ್ಸಾಹ ಭಂಗವಾಗತೊಡಗಿತು. ಪ್ರತಾಪಗಡವು ಬಹು ಭದ್ರವಾದದ್ದೆಂತಲೂ, ಅದನ್ನು ಮುತ್ತಿ ವಶಮಾಡಿಕೊಳ್ಳಲಿಕ್ಕೆ ಹತ್ತು ವರ್ಷಗಳಾದರೂ ಸಾಲ

ವೆಂತಲೂ, ಅದಕ್ಕೆ ಹಲವು ಗುಪ್ತದ್ವಾರಗಳು ಇದ್ದು, ಪ್ರಸಂಗದಲ್ಲಿ ಒಳಗಿನವರು ಸದ್ದಿಲ್ಲದೆ ಹೊರಟುಹೋಗಬಹುದಾದ್ದರಿಂದ ಬರಿಯ ಕೋಟೆಯನ್ನು ವಶಮಾಡಿಕೊಳ್ಳುವದು ಸೈನ್ಯದ ವ್ಯರ್ಥವಾದ ಆಯಾಸಕ್ಕೆ ಮಾತ್ರ ಕಾರಣವೆಂತಲೂ ಸುದ್ದಿಗಾರರು ಹೇಳಹತ್ತಿದರು; ಆದ್ದರಿಂದ, ಖಾನನು ಚಿಂತಾಕ್ರಾಂತನಾಗಿ, ಶಿವಾಜಿಯನ್ನು ಶಕ್ತಿಯಿಂದ ಹಿಡಿಯುವದು ಅಸಾಧ್ಯವಾದದ್ದರಿಂದ, ಆತನನ್ನು ಯುಕ್ತಿಯಿಂದ ಹಿಡಿಯುವ ಯತ್ನಮಾಡಬೇಕೆಂದು ಎಣಿಕೆಹಾಕಹತ್ತಿದನು. ಹ್ಯಾಗಾದರೂ ಮಾಡಿ ತನ್ನ ಪ್ರತಿಜ್ಞೆಯನ್ನು ನೆರವೇರಿಸುವದು ಆತನಿಗೆ ಅವಶ್ಯವಾಗಿತ್ತು. ಆತನು ಮನಸ್ಸಿನಲ್ಲಿ— "ನಾನು ಗುಡ್ಡದೊಳಗಿನ ಇಲಿಯನ್ನು ಖಡ್ಗದಿಂದ ತುಂಡರಿಸುವ ಯೋಚನೆ ಮಾಡಿದ್ದು ತಪ್ಪು. ಯಾಕಂದರೆ, ಇಲಿಯನ್ನು ಹೊಡೆಯಲಿಕ್ಕೆ ಖಡ್ಗವೇತಕ್ಕೆ? ಅದನ್ನು ಯುಕ್ತಿಯಿಂದ ಬಲೆಯಲ್ಲಿ ಹಿಡಿಯುವುದು ಯೋಗ್ಯವು."

ಹೀಗೆ ಖಾನನು ತನ್ನ ಸಮಾಧಾನ ಮಾಡಿಕೊಂಡರೂ ನಿಜವಾದ ಸಮಾಧಾನವು ಆತನಿಗಿರಲಿಲ್ಲ. ವಿಜಾಪುರದ ದರ್ಬಾರಿನಲ್ಲಿ ಪ್ರತಿಜ್ಞೆ ಮಾಡಲಿಕ್ಕೆ ಸುಲಭವಾದಷ್ಟು ಆ ಪ್ರತಿಜ್ಞೆಯನ್ನು ಸಾಧಿಸುವದು ಸುಲಭವಲ್ಲವೆಂಬದು ಆತನ ಮನಸ್ಸಿಗೆ ಹತ್ತಿತು. ತಾನು ಸಿಕ್ಕಹಾಗೆ ಹರಿದಾಡಿದರೆ ಶಿವಾಜಿಯು ಏನಾದರೂ ಮೋಸಮಾಡಿ ತನ್ನನ್ನು ನಾಶಗೊಳಿಸಬಹುದೆಂಬ ಭಯವೂ ಆತನನ್ನು ಬಾಧಿಸಹತ್ತಿತು. ಎಷ್ಟೋ ಮಂದಿ ಸರದಾರರು ಶಿವಾಜಿಯ ಬಲಿಗೆ ಸಿಕ್ಕು ಒದ್ದ್ಯಾಡಿ ಹೋದದ್ದನ್ನು ಖಾನನು ಅರಿತಿದ್ದನು; ಆದ್ದರಿಂದ ಶಿವಾಜಿಗೆ ತಕ್ಕಂತೆ ತಾನೂ ವಿಶ್ವಾಸಘಾತ ಮಾಡಿಯೆ ಕಾರ್ಯವನ್ನು ಸಾಧಿಸಿಕೊಳ್ಳಬೇಕೆಂದು ನಿಶ್ಚಯಿಸಿದನು. ಹೀಗೆ ಖಾನನು ಹಲವು ವಿಚಾರಗಳ ಗಲಿಬಿಲಿಯಿಂದ ಗಾಸಿಯಾಗುತ್ತಿರಲು, ಆತನ ಹುಜರೆಯು ಬಂದು—"ಪ್ರತಾಪಗಡದಿಂದ ಯಾವನೋ ಒಬ್ಬ ಬ್ರಾಹ್ಮಣನು ಶಿವಾಜಿಯ ಪತ್ರವನ್ನು ತಕ್ಕೊಂಡು ಬಂದಿದ್ದಾನೆ; ಆತನು ಖಾವಿಂದರ ಸಂಗಡ ಏನೋ ಮಾತಾಡಬೇಕಾಗಿದೆಯಂತೆ" ಎಂದು ಹೇಳಿದನು. ಶಿವಾಜಿಯ ಕಡೆಯಿಂದ ಬ್ರಾಹ್ಮಣನು ಬಂದದ್ದನ್ನು ಕೇಳಿ ಖಾನನಿಗೆ ಬಹಳ ಆಶ್ಚರ್ಯವಾಯಿತು. ಶಿವಾಜಿಯನ್ನು ಹಿಡಕೊಂಡು ಹೋಗಲಿಕ್ಕೆ ನಾನು ಬಂದಿರಲು, ಆತನು ನನಗೆ ಪತ್ರ ಬರೆಯುವದೇನು? ಆದರೂ ಪತ್ರದಲ್ಲಿ ಏನು ಬರೆದಿರು

ವನೆಂಬುದನ್ನು ನೋಡುವದು ಯೋಗ್ಯವು; ಎಂದು ಯೋಚಿಸಿ, ಆ ಬ್ರಾಹ್ಮಣನನ್ನು ಒಳಗೆ ಬಿಡಲು ಆಜ್ಞಾಪಿಸಿದನು. ಬ್ರಾಹ್ಮಣನು ನಮ್ರತೆಯಿಂದ ಒಳಗೆ ಬಂದನು. ಆತನು ಆಗಿನ ಪದ್ಧತಿಯಂತೆ ಕುರ್ನಿಸಾತು ಮಾಡಲು, ಖಾನನು ಬೆರಳು ತೋರಿಸಿ ಕೂಡಲು ಬ್ರಾಹ್ಮಣನಿಗೆ ಸೂಚಿಸಿದನು. ಬ್ರಾಹ್ಮಣನು ಖಾನನ ಹುಜುರೆಯ ಕೈಯಲ್ಲಿ ಪತ್ರವನ್ನು ಕೊಟ್ಟು ತನ್ನ ಸ್ಥಳದಲ್ಲಿ ಕುಳಿತುಕೊಂಡನು. ಖಾನನು ಥೈಲಿಯನ್ನು ತೆಕ್ಕೊಂಡು ಚೀಟನೀಸನಿಗೆ ಅದನ್ನು ಓದಹೇಳಲು, ಚೀಟನೀಸನು ಪತ್ರವನ್ನು ಓದಹತ್ತಿದನು.

ಆಗಿನ ಪದ್ಧತಿಯಂತೆ ಪತ್ರವು ಪಾರಶೀಭಾಷೆಯಲ್ಲಿ ಬರೆದಿತ್ತು. ಆ ಪತ್ರದ ಸಾರಾಂಶವೇನೆಂದರೆ—ಹಜರತ್ತರವರು (**ಬಾದಷಹರು**) ನನ್ನನ್ನು ಹಿಡತರುವದಕ್ಕಾಗಿ ಖಾವಂದರವರನ್ನು ಕಳಿಸಿರುವರೆಂದು ಕೇಳುತ್ತೇನೆ; ಅದರಂತೆ ಪ್ರತಿಜ್ಞೆ ಮಾಡಿ ಖಾವಂದರವರು ಬಂದಿರುವಿರೆಂತಲೂ ಸುದ್ದಿಯದೆ. ಇದನ್ನೆಲ್ಲ ಕೇಳಿ ನನಗೆ ಬಹಳ ಆಶ್ಚರ್ಯವಾಗಿದೆ. ಹಜರತಿಯ ಸೇವಕನಾದ ನಾನು ಹಜರತಿಯ ರಾಜ್ಯದೊಳಗಿನ ಪುಂಡುಬಂಡಾಯಗಳೆಲ್ಲ ಅಳಿದು ಹೋಗಿ, ರಾಜ್ಯದಲ್ಲಿ ಸುವ್ಯವಸ್ಥೆಯೂ ಶಾಂತತೆಯೂ ನೆಲೆಗೊಳ್ಳಬೇಕೆಂದು ಪ್ರಯತ್ನಮಾಡುತ್ತಲಿರುವೆನು. ಇದರಿಂದ ಹಜರತಿಯ ಹಿತವೇ ಅಲ್ಲದೆ ಅಹಿತವೇನಾಗುವದು? ಹೀಗಿದ್ದು ಹಜರತಿಯ ಮನಸ್ಸಿನಲ್ಲಿ ನನ್ನ ವಿಷಯದ ದ್ವೇಷವು ಉತ್ಪನ್ನವಾಗಿರುವದು ಪರಮಾಶ್ಚರ್ಯದ ಸಂಗತಿಯಾಗಿರುವದು; ಆದರೆ ಎರಡನೆಯವರಾರೂ ಬಾರದೆ ಖಾವಂದರವರು ಬಂದಿರುವದರಿಂದ ನನಗೆ ಸ್ವಲ್ಪ ಆಶೆಯು ಉತ್ಪನ್ನವಾಗಿದೆ. ಯಾಕಂದರೆ, ನನ್ನ ನಿಜವಾದ ಸಂಗತಿಯು ಖಾವಂದರವರಿಗೆ ತಿಳಿದರೆ ನನ್ನ ಸಂರಕ್ಷಣವಾಗುವದೆಂಬದರಲ್ಲಿ ಸಂಶಯವಿಲ್ಲ. ಅದರಂತೆ ಹಜರತ್ತರ ಮನಸ್ಸಿನಲ್ಲಿ ಉತ್ಪನ್ನವಾಗಿದ್ದ ನನ್ನ ಸಂಬಂಧದ ದ್ವೇಷವೂ ಇಲ್ಲದಂತಾಗುವದು. ಇದನ್ನೆಲ್ಲ ಮನಸ್ಸಿನಲ್ಲಿ ತಂದೇ ಪತ್ರವನ್ನು ಬರೆದಿದ್ದೇನೆ. ನಮ್ಮ ಮನಸ್ಸಿನಲ್ಲಿದ್ದದ್ದನ್ನು ತಿಳಿಸುವದಕ್ಕಾಗಿ ತಿಳಿವಳಿಕೆಯ ಹಾಗು ವಿಶ್ವಾಸದ ಪುರುಷರಾದ ಕೃಷ್ಣಾಜಿಭಾಸ್ಕರ ಯೆಂಬುವರನ್ನು ಸನ್ನಿಧಿಗೆ ಕಳಿಸಿದ್ದೇನೆ. ಅವರಿಂದ ಎಲ್ಲ ಸಂಗತಿಯನ್ನು ತಿಳಿದುಕೊಂಡು, ಹೀಗೆಮಾಡೆಂದು ನನ್ನನ್ನು ಖಾವಂದರು ಆಜ್ಞಾಪಿಸಿದರೆ

ಅದರಂತೆ ಮಾಡುವೆನು; ರಾಜ್ಯವನ್ನು ಬಿಟ್ಟು ಹೋಗೆಂದರೂ ಹೋಗಲಿಕ್ಕೆ ಸಿದ್ಧನಿದ್ದೇನೆ; ಆದರೆ ದೇಶದಲ್ಲಿಯ ಪುಂಡಾಟಿಕೆಯನ್ನು ಮುರಿದು ಸ್ವಾಸ್ಥ್ಯ ವನ್ನುಂಟುಮಾಡಿ ಹಜರತಿಯು ಚಾಕರಿಮಾಡಿದ್ದನ್ನು ಮಾತ್ರ ಮನಸ್ಸಿನಲ್ಲಿ ತರಬೇಕು. ಇಷ್ಟೇ ನನ್ನ ಪ್ರಾರ್ಥನೆಯು.

ಈ ಸಂಗತಿಯ ಪತ್ರವು ಬಹು ಉದ್ದವಾಗಿ ಬರೆಯಲ್ಪಟ್ಟಿತ್ತು. ಅದನ್ನು ಓದುವದೆಲ್ಲ ಆದಮೇಲೆ ಖಾನನು ಗಟ್ಟಿಯಾಗಿ ನಕ್ಕು—"ಇನ್ನು ಇಂಥ ಪತ್ರಗಳಿಗೆ ಯಾರೂ ಮರುಳಾಗುವ ಹಾಗಿಲ್ಲ. 'ನಾನು ಹಜರತಿಯು ಬಂದಾಗುಲಾಮನೆ'ಂದು ಪತ್ರ ಬರೆದು ವಕೀಲನ ಮುಖಾಂತರ ಕಳಿಸ ಬೇಕು, ಹಜರತಿಯು ಸಾವಿರಾರು ಸಾರೆ ಹೇಳಿಕಳಿಸಿದರೂ, ನೂರಾರು ಸಾರೆ ಹುಕುಮುಗಳನ್ನು ಬರೆದರೂ, ಹಲವು ಸಾರೆ ಬೆದರಿಕೆ ಹಾಕಿ ದರೂ ಈತನು ಅದನ್ನು ಲಕ್ಷಕ್ಕೆ ತರಬಾರದು! ಶಾಹಿಸ್ತೆಖಾನನಂಥ ಸರದಾರನನ್ನು ಕಳಿಸಿದರೂ ಆತನನ್ನು ಗಣನೆಗೆ ತರಲಿಲ್ಲ!! ನಾವು ಇತ್ತ ಬಂದಕೂಡಲೆ ಹೀಗೆ ಮೊಸದ ಬಲೆಯೊಡ್ಡುವನೆಂಬುದನ್ನು ನಾವು ತಿಳಿದೇ ಇದ್ದೆವು; ಆದರೂ ರುಮಾಲದಿಂದ ಕೈಕಟ್ಟಿಕೊಂಡು ನಮ್ಮ ಮುಂದೆ ಬಂದು ನಿಂತಹೊರತು ನಾವು ಆತನ ಯಾವ ಮಾತನ್ನೂ ನಿಜವೆಂದು ನಂಬುವ ಹಾಗಿಲ್ಲ. ಶಿವಾಜಿಯು ತಗಲಸಿದ್ದರೆ, ನಾನು ಮಹಾ ತಗಲನಿರುತ್ತೇನೆ. ಸೇರಿಗೆ ಸವ್ವಾಸೇರು ಗಂಟುಬಿದ್ದರೇ ಏನಾದರೂ ಆಗುವದು. ಇಂಥ ಸಾವಿರಾರು ಪತ್ರಗಳಿಗೆ ನಾನು ಮರುಳಾಗುವ ಹಾಗಿಲ್ಲ. "ಚಿಟಣೀಸ, ಈ ಪತ್ರಕ್ಕೆ ಉತ್ತರ ಹಾಕುವ ಕಾರಣ ವಿಲ್ಲ. ಈ ಪತ್ರದಲ್ಲಿಯ ಸಂಗತಿಯು ನಿಜವೋ ಸುಳ್ಳೋ ಎಂಬ ದನ್ನು ಅರಿತುಕೊಳ್ಳಲಿಕ್ಕೆ ನಾವು ಬೇರೆ ಉಪಾಯ ಮಾಡುವವರಿದ್ದೇವೆ. ಅಲ್ಲಿಯವರೆಗೆ ಈ ವಕೀಲರು ನಮ್ಮಲ್ಲಿಯೇ ಇರಲಿ. ಇವರ ವ್ಯವಸ್ಥೆ ಯನ್ನು ಸರಿಯಾಗಿ ಇಡಿಸಿರಿ." ಎಂದು ಹೇಳಿ ಖಾನನು ವಕೀಲನನ್ನು ಹೊರಗೆ ಕಳಿಸಿಕೊಟ್ಟು, ತಾನೊಬ್ಬನೇ ವಿಚಾರಮಾಡಹತ್ತಿದನು. ಶಿವಾಜಿಯ ಪತ್ರದಲ್ಲಿ ಕುಟಿಲತನವಿರುತ್ತದೆಂದು ಆತನು ಭಾವಿಸಿದ್ದನು; ಆದರೂ ತನ್ನ ಸಾಮರ್ಥ್ಯಕ್ಕೆ ಶಿವಾಜಿಯು ಅಂಜಿರುವನೆಂತಲೂ, ಏನಾ ದರೂ ಹಂಚಿಕೆಮಾಡಿ ಪಾರಾಗಲು ಆತನು ಹವಣಿಸುತ್ತಿರುವನೆಂತಲೂ

ಖಾನನು ತಿಳಿದುಕೊಂಡಿದ್ದನು. ಶಿವಾಜಿಯು ವಕೀಲನಿಂದ ನಿಜವಾದ ಸಂಗತಿಯನ್ನು ಹೊರಗೆಡವಿ ತಿಳಕೊಳ್ಳುವ ಇಚ್ಛೆಯಿಂದ ಖಾನನು ತನ್ನ ನಂಬಿಗೆಯ ವಕೀಲನಾದ ಪಂತಾಜಿ ಗೋಪಿನಾಥನನ್ನು ಕರೆಯ ಕಳುಹಿದನು.

ಪಂತಾಜಿ ಗೋಪಿನಾಥನ ಮೇಲೆ ಖಾನನ ವಿಶ್ವಾಸ ಬಹಳ. ಯಾವದೊಂದು ಕಾರ್ಯದಲ್ಲಿ ಆತನ ವಿಚಾರವನ್ನು ಕೇಳಿಕೊಳ್ಳುವದು ಖಾನನ ಸಾಂಪ್ರದಾಯವಾಗಿತ್ತು. ಗೋಪಿನಾಥ ಪಂತನಾದರೂ ವಿಶ್ವಾಸಕ್ಕೆ ಪಾತ್ರನಾದ ಮನುಷ್ಯನೇ ಆಗಿದ್ದನು. ಖಾನನ ಬಳಿಗೆ ಶಿವಾಜಿಯು ಬಂದ ಸಂಗತಿಯು ಗೋಪಿನಾಥಪಂತನಿಗೆ ಗೊತ್ತಾಗಿತ್ತು; ಆದ್ದರಿಂಧ ಖಾನನು ತನ್ನನ್ನು ಯಾಕೆ ಕರೆಕಳುಹಿರಬಹುದೆಂಬ ಬಗ್ಗೆ ಆತನಿಗೆ ಸಂಶಯ ಬರಲಿಲ್ಲ. ಶಿವಾಜಿಯ ತಂದೆಯಾದ ಶಹಾಜಿರಾಜನು ವಿಜಾಪುರದ ಬಾದಶಹನ ಸರದಾರನಾಗಿದ್ದು, ಗೋಪಿನಾಥ ಪಂತನ ಸ್ನೇಹಿತನಾಗಿದ್ದನು; ಆದ್ದರಿಂದ ಶಿವಾಜಿಯ ಹಿತವನ್ನು ಗೋಪಿನಾಥ ಪಂತನು ಮನಮುಟ್ಟಿ ಬಯಸುತ್ತಿದ್ದನು; ಆದರೆ ಬಾದಶಹನಿಗೆ ಅನುಕೂಲವಾಗಿ ನಡೆಯುವದರಿಂದ ಹಿತವಾಗಬಹುದಲ್ಲದೆ, ಬಾವಶಹನ ವಿರುದ್ಧವಾಗಿ ನಡೆಯುವದರಿಂದ ಪ್ರಯೋಜನವಾಗದೆಂಬ ಮಾತನ್ನು ಶಿವಾಜಿಗೆ ಹೇಳಬೇಕೆಂದು ಆತನು ಬಹು ದಿವಸಗಳಿಂದ ಯೋಚಿಸಿದ್ದನು; ಆದರೆ ಅಂಥ ಪ್ರಸಂಗವೇನೂ ಬಾರದೆ, ಅಥವಾ ತನ್ನನ್ನು ಕೇಳದೆ ತಾನಾಗಿ ಹೇಳುವದು ಮುತ್ಸದ್ದಿತನವಲ್ಲೆಂದು ತಿಳಿದು, ಗೋಪಿನಾಥಪಂತನು ಈವರೆಗೆ ಸುಮ್ಮನಿದ್ದನು. ಈಗ ಅಂಥ ಸಂಧಿಯು ಸಾಧಿಸಿದ್ದರಿಂದ ಗೋಪಿನಾಥ ಪಂತನಿಗೆ ಬಹಳ ಸಂತೋಷವಾಯಿತು. ಆತನು ಆ ಖಾನನ ಬಳಿಗೆಹೋಗಿ ವಿನಯದಿಂದ ಮುಜುರೆಮಾಡಿ ಏನಪ್ಪಣೆಯೆಂದು ಕೇಳಲು, ಖಾನನು ನಗುತ್ತ--ಯಂಪ್ ಪಂತ, ನಮ್ಮ ಮನಸ್ಸಿನಲ್ಲಿದ್ದಂತೆಯೇ ಪ್ರಸಂಗವು ಒದಗಿ ಬಂದಿರುತ್ತದೆ. ನಮ್ಮ ಶತ್ರುವು ನಮಗೆ ಶರಣು ಬರುತ್ತಾನೆ. ಆತನ ವಕೀಲನು ಆತನ ಪತ್ರವನ್ನು ತಕ್ಕೊಂಡು ಬಂದಿರುವನು. ಆ ಪತ್ರವನ್ನು ನೀವು ಓದಿನೋಡಬೇಕು; ಆದರೆ ಇಷ್ಟರ ಮೇಲಿಂದ ಆತನ ವಿಶ್ವಾಸವನ್ನು ಮಾತ್ರ ಹಿಡಿಯಬಾರದು. ಶಿವಾಜಿಯ ನಡತೆಯಲ್ಲಿ ಹೊರಗೊಂದು ಒಳಗೊಂದು ಇರುವ ಸಂಭವವು ವಿಶೇಷ

ವಾಗಿರುತ್ತದೆ. ನಾನು ಆತನ ವಕೀಲನನ್ನು ಇಟ್ಟುಕೊಂಡಿರುವೆನು. ಏನಾದರೂ ನೆವಮಾಡಿ ಆ ವಕೀಲನನ್ನು ಬಹಳ ದಿವಸ ಇಟ್ಟುಕೊಳ್ಳುವೆನು. ನೀವು ಆತನ ಸ್ನೇಹವನ್ನು ಬೆಳಸಿ ಅವನ ಹೊಟ್ಟೆಯೊಳಗಿನ ಮಾತನ್ನು ಹೊರಗೆಡವಿರಿ. ನೀವೇ ಆತನ ಯೋಗಕ್ಷೇಮವನ್ನು ವಿಚಾರಿಸಿದರೆ, ಸಖ್ಯಕೂಡುವ ಸಂಭವವಿರುತ್ತದೆ; ಆದ್ದರಿಂದ ಹಾಗೆ ಮಾಡಿರಿ. ಯಾರಿಗೆ ಗೊತ್ತು? ಶಿವಾಜಿಯು ಅಂಜಿ ನಿಜವಾಗಿಯೇ ನಮ್ರನಾಗಿ ಪತ್ರಕಳಿಸಿರ ಬಹುದು. ಅವನು ಅಂಜಿರಲೇಬೇಕು, ನಮ್ಮ ದರ್ಪವೇ ಹಾಗಿರುತ್ತದೆ; ಎಲ್ಲರಂತೆ ನಾವಲ್ಲವೆಂಬದನ್ನು ಶಿವಾಜಿಯು ಅರಿತಿರಲೇಬೇಕು.

ಗೋಪಿನಾಥ ಪಂತನು ಖಾನನ ಎಲ್ಲ ಮಾತುಗಳನ್ನು ಕೇಳಿಕೊಂಡು ಆತನನ್ನು ಕುರಿತು—"ತಾವು ಹೇಳುವಂತೆ ಶಿವಾಜಿಯು ತನುಗೆ ಅಂಜಿ ನಿಜವಾಗಿಯೇ ಪತ್ರವನ್ನು ಬರೆದಿರಬಹುದು; ಯಾಕಂದರೆ ಶಿವಾಜಿಯು ಮಹಾಧೂರ್ತನು; ತನ್ನಿಂದಾಗದ ಕೆಲಸಕ್ಕೆ ಹುಂಬತನದಿಂದ ಕೈಹಾಕು ವವನಲ್ಲ. ಆತನು ನಿಜವಾಗಿಯೇ ವಿನಯವನ್ನು ತೋರಿಸಿದ್ದರೆ, ಆತನನ್ನು ದುರ್ಲಕ್ಷಿಸುವದು ಹಿತಕರವಲ್ಲ; ಆತನು ಮೋಸದಿಂದ ಪತ್ರಬರೆದಿದ್ದ ಪಕ್ಷದಲ್ಲಿ, ನಾವು ಹ್ಯಾಗೂ ಆತನ ಪಾರುಪತ್ಯ ಮಾಡಲಿಕ್ಕೆ ಬಂದೇ ಇರುವೆವು, ಮಾಡಿದರಾಯಿತು. ನಿಜವಾದ ಸಂಗತಿಯನ್ನು ತಿಳಿದುಕೊಳ್ಳು ವದು ನನಗೆ ಕೂಡಿತು, ಎಂದು ಹೇಳಿ ಖಾನನ ಅಪ್ಪಣೆಯನ್ನು ಪಡೆದು ಅಲ್ಲಿಂದ ಕೃಷ್ಣಾಜಿ ಭಾಸ್ಕರನಬಳಿಗೆ ಹೋದನು. ನಡೆದ ಪ್ರಸಂಗದಿಂದ ಆತನ ಮನಸ್ಸಿಗೆ ನಿಜವಾಗಿ ಸಮಾಧಾನವಾಗಿತ್ತು. ಆತನು ವಕೀಲನ ಯೋಗಕ್ಷೇಮವನ್ನು ವಿಚಾರಿಸಿ, ಈಗ ನಿಮ್ಮ ಊಟವಾಗುವದರೊಳಗೆ ನಾನು ಬರುವೆನು, ಎಂದು ಹೇಳಿ ಮನೆಗೆ ಹೋದನು. ಮುಂದೆ ಸ್ವಲ್ಪ ವೇಳೆಯಲ್ಲಿಯೇ ಆತನು ಪುನಃ ಕೃಷ್ಣಾಜಿ ಭಾಸ್ಕರನ ಬಳಿಗೆ ಬಂದನು. ಅವರಿಬ್ಬರ ಸಂಭಾಷಣವು ಬಹಳ ಹೊತ್ತಿನವರೆಗೆ ನಡೆಯಿತು. ಮಾತು ನಡೆದು ಏನಿಲ್ಲೆಂದರೂ ಒಂದು ಪ್ರಹರವಾದರೂ ಆಗಿರಬಹುದು. ಅವರ ಸಂಭಾಷಣವನ್ನೆಲ್ಲ ಈಗ ಹೇಳುವ ಪ್ರಯೋಜನವಿಲ್ಲ. ಹೀಗೆಯೇ ಕೆಲವು ದಿನ ಅವರ ಸಂಭಾಷಣಗಳು ನಡೆದವು. ಕೃಷ್ಣಾಜಿ ಭಾಸ್ಕರನು ತನ್ನ ಒಡೆಯನನ್ನು ವಿಶಿಷ್ಟ ರೀತಿಯಿಂದ ನಡೆಯುವಂತೆ ಮಾಡಿದರೆ, ಗೋಪೀ

ನಾಥಪಂತನು ತನ್ನ ಒಡೆಯನನ್ನು ವಿಶಿಷ್ಟರೀತಿಯಿಂದ ನಡೆಸುವಂತೆ ಮಾಡಬೇಕೆಂದು ಅವರಿಬ್ಬರು ಗೊತ್ತುಮಾಡಿಕೊಂಡರು. ಹೀಗೆ ಪರಸ್ಪರರ ಸಂಭಾಷಣಗಳೂ, ವಾಗ್ವಾದಗಳೂ ಆಗಿ, ಪರಸ್ಪರರು ತಮ್ಮ ಹೊಟ್ಟೆಯೊಳಗಿನ ನಿಜವಾದ ಮಾತುಗಳನ್ನು ಹೇಳಿದಂತೆ ಒಬ್ಬರ ಮುಂದೊಬ್ಬರು ಹೇಳಿ, ತಾವು ಹೀಗೆಹೀಗೆ ನಡೆಯಬೇಕೆಂದು ನಿರ್ಧರಿಸಿಕೊಂಡರು.

ಅಫಜುಲಖಾನನು ದಿನಾಲು ಗೋಪೀನಾಥಪಂತನನ್ನು ಕರೆಸಿ ನಡೆದ ಸಂಗತಿಯನ್ನು ವಿಚಾರಿಸುತ್ತಲಿದ್ದನು. ಒಂದುದಿನ ಗೋಪೀನಾಥಪಂತನು ವಕೀಲನ ಹೊಟ್ಟೆಯೊಳಗಿನ ನಿಜವಾದ ಮಾತೆಂದು ಖಾನನ ಮುಂದೆ ಹೇಳಿದ ಸಂಗತಿಯು ಮೋಜಿನದಿರುವದು. ಆತನು ಹೇಳಿದ್ದೇನಂದರೆ— ಖಾನಸಾಹೇಬ, ತಮಗೆ ಈ ಪ್ರಸಂಗದಲ್ಲಿ ವಿಲಕ್ಷಣವಾದ ಯಶಸ್ಸು ಪ್ರಾಪ್ತವಾಗುವ ಸಂಭವವಿರುತ್ತದೆ. ಶಿವಾಜಿಯು ವಿಜಾಪುರದವರೊಡನೆ ವಿರೋಧವನ್ನು ಬಳಿಸಲು ಎಷ್ಟು ಮಾತ್ರವೂ ಇಚ್ಛಿಸುವದಿಲ್ಲ. ಆತನು ಖಾನ ಸಾಹೇಬರನ್ನು ಕಂಡು, ಅವರೊಡನೆ ನಾಲ್ಕು ಮಾತುಗಳನ್ನಾಡಿ, ಅವರು ಹೇಳಿದಂತೆ ಕೇಳುತ್ತೇನೆಂದು ಅನ್ನುತ್ತಾನಂತೆ. ವಿಜಾಪುರದ ಸಾಮರ್ಥ್ಯವೆಷ್ಟೆಂಬದು ಆತನಿಗೆ ಒಡೆದು ಕಾಣುತ್ತದೆ; ಅಂದಬಳಿಕ ಆತನು ವಿರೋಧವನ್ನು ಯಾಕೆ ಬಳಿಸುವನು? ತಮ್ಮ ಸಾಮರ್ಥ್ಯವನ್ನೂ, ತಮ್ಮ ಪ್ರಚಂಡವಾದ ಸೈನ್ಯವನ್ನೂ ನೋಡಿ ಆತನು ಅಂಜಿ ನಿಜವಾಗಿಯೇ ಶರಣು ಬಂದಿರುವನು. ಇಂಥ ಪ್ರಸಂಗದಲ್ಲಿ ತಾವು ದೊಡ್ಡಿಸ್ತನದಿಂದ ಆತನನ್ನು ವಶಮಾಡಿಕೊಂಡರೆ ಬಹಳ ಹಿತವಾಗುವದು. ಇದರಿಂದ ಪ್ರಬಲನಾಗುತ್ತ ನಡೆದಿದ್ದ ಒಬ್ಬ ಶತ್ರುವನ್ನು ತಾವು ಇಲ್ಲದಂತೆ ಮಾಡಿದಹಾಗಾಗುವದು. ದಿಲ್ಲಿಯ ಔರಂಗಜೇಬ ಬಾದಶಹನು ವಿಜಾಪುರದ ಬಾದಶಾಹಿಯನ್ನು ಮುಣುಗಿಸಬೇಕೆಂದು ಎಣಿಕೆ ಹಾಕುತ್ತಿರುವನು. ಇಂಥ ಪ್ರಸಂಗದಲ್ಲಿ ಶಿವಾಜಿಯೊಬ್ಬನನ್ನು ನಮ್ಮ ಶತ್ರುವಾಗಿ ಮಾಡಿಕೊಂಡರೆ, ಬಹಳ ತ್ರಾಸವಾದೀತು. ಇಂಥ ಪ್ರಸಂಗದಲ್ಲಿ ಬಹುದೂರ ಲಕ್ಷ್ಯಕೊಟ್ಟು ಯೋಗ್ಯ ವಿಚಾರ ಮಾಡಲಿಕ್ಕೆ ತಮ್ಮಂಥ ಮುತ್ಸದ್ದಿಗಳು ಸದ್ಯಕ್ಕೆ ವಿಜಾಪುರದ ದರ್ಬಾರಿನಲ್ಲಿ ಬೇರೊಬ್ಬರಿಲ್ಲ. ಆದ್ದರಿಂದ ನೀವು ಬಾದಶಹರಿಗೇನೂ ತಿಳಿಸದೆ, ಶಿವಾಜಿಯೊಡನೆ ಸಖ್ಯಬೆಳಿಸಿ ಬಾದಶಾಹಿಯ ನಿಜವಾದ ಹಿತವನ್ನು

ಸಾಧಿಸಿರಿ; ಬಾದಶಹರಿಗೆ ಹಿಂದಿನಿಂದ ತಮ್ಮ ದೂರದರ್ಶಿತ್ವದ ಕಾರ್ಯವು ಮನಸ್ಸಿಗೆ ಬಂದು, ಅವರೂ ನಿಮ್ಮನ್ನು ಶ್ಲಾಘಿಸಬಹುದು.

ಗೋಪೀನಾಥಪಂತನ ಈ ಮಾತುಗಳನ್ನು ಕೇಳಿ ಅಫಜುಲಖಾನನು ಆನಂದಭರಿತನಾದನು. ತನ್ನ ಕೀರ್ತಿಯನ್ನು ದೂರದಿಂದಲೇ ಕೇಳಿ ಶಿವಾಜಿಯು ಹೆದರಿ ಹೋಗಿರುವದರಿಂದ, ಆತನು ನನ್ನೊಡನೆ ಪ್ರತ್ಯಕ್ಷ ಯುದ್ಧಮಾಡಲಾರನೆಂದು ಭಾವಿಸಿದನು. ಆದರೂ ತಾನು ಒಮ್ಮೆಲೆ ಶಿವಾಜಿಯೊಡನೆ ಸಖ್ಯಬೆಳೆಸುವ ಗೊಡವಿಗೆ ಹೋಗದೆ, ಸ್ವಲ್ಪ ಬಿಗಿಹಿಡಿದು ಅವನು ಹಣ್ಣಿಗೆ ಬರುವಂತೆ ಮಾಡಬೇಕು ಎಂದು ಯೋಚಿಸಿ ಗೋಪೀನಾಥಪಂತನನ್ನು ಕುರಿತು—ಪಂತ, ನಾನು ನಿಮ್ಮನ್ನು ದೊಡ್ಡ ಮುತ್ಸದ್ದಿಗಳೆಂದು ತಿಳಿಯುವೆನು. ಆದರೆ ಒಮ್ಮೊಮ್ಮೆ ನಿಮ್ಮ ಮುತ್ಸದ್ದಿಗಿರಿಯು ತಪ್ಪುವುದು, ಶಿವಾಜಿಯು ಸಂಭಾವಿತನಲ್ಲ. ಆತನು ತನ್ನ ವಕೀಲನ ಮುಖಾಂತರ ನಿಮ್ಮನ್ನು ಮರಳುಮಾಡಿದ ಹಾಗೆ ತೋರುತ್ತದೆ. ಈಗ ನಮ್ಮನ್ನು ಮಬ್ಬಿಗೆ ಹಾಕಿ, ನಮ್ಮ ಮೋರೆಯು ವಿಜಾಪುರದ ಕಡೆಗೆ ತಿರುಗಿದ ಕೂಡಲೆ ಆ ಪುಂಡನು ತನ್ನ ಕಾಯಕವನ್ನು ನಡಿಸದೆ ಬಿಡನು. ಆತನು ಬಾದಶಾಹಿಯ ಒಂದೊಂದೇ ಕೋಟೆಯನ್ನು ಕೈವಶಮಾಡಿಕೊಳ್ಳದೆ ಇರನು. ಆತನು ತನ್ನ ವಕೀಲನಿಗೆ ಕಲಿಸತಕ್ಕದ್ದನ್ನು ಚನ್ನಾಗಿ ಕಲಿಸಿದ ಹಾಗೆ ತೋರುತ್ತದೆ. ನಿಮ್ಮಂಥವರು ಇಷ್ಟು ಮರುಳಾಗಬೇಕಾದರೆ, ವಕೀಲನಾದರೂ ಮಾತಿನಲ್ಲಿ ಪಟಾಯಿತನಿದ್ದಂತೆ ತೋರುತ್ತದೆ. ಪಂತ, ನೀವು ಹೇಳುವಂತೆ ಔರಂಗಜೇಬ ಬಾದಶಹನು ಸದ್ಯಕ್ಕೆ ನಮ್ಮ ಮೇಲೆ ಸಾಗಿ ಬರುವ ಸಂಭವವಿಲ್ಲ; ಯಾಕಂದರೆ, ಅವನ ಸಿಂಹಾಸನವೇ ಅವನಿಗೆ ಇನ್ನೂ ಸ್ಥಿರವಾಗಿರುವದಿಲ್ಲ. ಗೃಹಕಲಹದಿಂದ ಅವನು ಹೊಯ್ದಾಡುತ್ತಿರುವನು. ಆತನು ತನ್ನ ಮನೆಯಲ್ಲಿ ತಾನು ನಿಶ್ಚಿಂತನಾಗಿರಲಿಕ್ಕೆ ಸ್ವಲ್ಪವಾದರೂ ಅವಕಾಶವಿರುವದು. ಇಂಥ ಸ್ಥಿತಿಯಲ್ಲಿ ವಿಜಾಪುರದ ಕಡೆಗೆ ಆತನು ಸಾಗಿ ಬರಲಾರನು. ಅದರಲ್ಲಿ ಶಿವಾಜಿಯೊಡನೆ ಸಖ್ಯಬೆಳಿಸಿ, ಆತನ ತಂತ್ರದಂತೆ ವಿಜಾಪುರದ ರಾಜಕಾರಣವನ್ನು ಅಲಮಗೀರನು ನಡಿಸುವದಂತು ತೀರ ಅಸಂಭವವು.

ಖಾನನ ಈ ಮಾತುಗಳನ್ನು ಕೇಳಿ ಗೋಪೀನಾಥಪಂತನು—ಖಾನ

ಸಾಹೇಬ, ಶಿವಾಜಿಗೆ ಆಲಮಗೀರನು ಬರೆದ ಸಖ್ಯದ ಪತ್ರಗಳಿರುವವು. ಒಂದು ಪತ್ರದಲ್ಲಂತು ಶಿವಾಜಿಗೆ ಆ ಧೂರ್ತ ಬಾದಶಹನು ಸ್ಪಷ್ಟವಾಗಿ ಬರೆದಿರುವುದೇನೆಂದರೆ—"ನೀನು ನಮ್ಮ ಮಾಂಡಲಿಕನೆನಿಸಿ ಅತ್ತಕಡೆಯ ಕಾರಭಾರವನ್ನು ನಡೆಸಿದರೆ, ನಾವು ನಿನಗೆ ಎಷ್ಟು ಮಾತ್ರವೂ ಪ್ರತಿಬಂಧ ಮಾಡಲಾರೆವು; ಆದರೆ ನೀನು ಸ್ವತಂತ್ರ ರಾಜ್ಯವನ್ನು ಸ್ಥಾಪಿಸುವ ಉಸಾಬರಿಗೆ ಹೋದರೆ ಮಾತ್ರ ಅದನ್ನು ನಾವು ನಡೆಯಗೊಡಲಿಕ್ಕಿಲ್ಲ." ಖಾನಸಾಹೇಬ, ತಾವು ಔರಂಗಜೇಬನ ತಂತ್ರಗಾರಿಕೆಯನ್ನು ಚನ್ನಾಗಿ ಅರಿತಂತೆ ತೋರುವದಿಲ್ಲ. ಸದ್ಯಕ್ಕೆ ಶಿವಾಜಿಯು ಸುಳ್ಳೇ ಹೆದರಿದ ಹಾಗೆ ತೋರಿಸುತ್ತಿದ್ದರೂ, ಅದನ್ನು ನಿಜವೆಂದು ತಿಳಿದು ನೀವು ನಡೆಯುವದು ನನಗೆ ಯೋಗ್ಯವಾಗಿ ತೋರುತ್ತದೆ. ಶಿವಾಜಿಯ ಮನಸ್ಸಿನಲ್ಲಿ ವಿಜಾಪುರ ದವರ ಸಂಗಡ ಸ್ನೇಹದಿಂದಿರಬೇಕೆಂದು ಇರುತ್ತದೆಂದು ನಾನು ಹೇಳುವದಿಲ್ಲ; ಅದರಂತೆ ಆತನು ದಿಲ್ಲಿಯ ಬಾದಶಹನ ಸಂಗಡಲಾದರೂ ಸ್ನೇಹದಿಂದ ನಡೆಯಬೇಕೆಂದಿರುತ್ತಾನೆಂತಲೂ ನಾನು ಹೇಳುವದಿಲ್ಲ; ಆದರೆ ಸದ್ಯಕ್ಕೆ ತಾನು ದುರ್ಬಲನಿರುವದರಿಂದ ಯಾರಾದರೊಬ್ಬರ ಸ್ನೇಹವನ್ನು ಬೆಳೆಸಿ ತನ್ನ ಸಂರಕ್ಷಣ ಮಾಡಿಕೊಳ್ಳಬೇಕೆಂದು ಆತನು ಹೆಣಗುವನು. ಇಂಥ ಪ್ರಸಂಗದಲ್ಲಿ ನಾವು ಅವನ ಸ್ನೇಹವನ್ನು ಸಂಪಾದಿಸಿ, ಯುಕ್ತಿಯಿಂದ ನಮ್ಮ ಕಾರ್ಯವನ್ನು ಸಾಧಿಸುವದು ಯೋಗ್ಯವಾಗಿ ತೋರುತ್ತದೆ. ಈಗ ಆತನ ಇಚ್ಛೆಯಂತೆ ಆತನ ಸಂಗಡ ಸ್ನೇಹವನ್ನು ಬಳಸಿ ಆತನನ್ನು ಕೈಯಲ್ಲಿ ತಕ್ಕೊಳ್ಳಿರಿ; ಹಿಂದಿನಿಂದ ಬೇಕಾದರೆ ಅವನನ್ನು ಸುಬೇದಾರನನ್ನಾಗಿ ಯಾದರೂ ನಿಯಮಿಸಿರಿ; ಇಲ್ಲವೆ ವಿಜಾಪುರಕ್ಕೆ ಬಾದಶಹನನ್ನು ಕಾಣಲಿ ಕ್ಕೆಂದು ಆತನನ್ನು ಕರಕೊಂಡು ಹೋಗಿ ಅಲ್ಲಿಯೇ ಯಾವದೊಂದು ಕೆಲಸ ವನ್ನು ಕೊಟ್ಟಾದರೂ ಇಟ್ಟುಕೊಳ್ಳಿರಿ; ಆದರೆ ಇಗಲೇ ಆತನಿಗೆ—"ನಾವು ನಿನ್ನನ್ನು ಸೆರೆಹಿಡಿಯತಕ್ಕವರು, ವಿಜಾಪುರಕ್ಕೆ ಹಿಡಕೊಂಡು ಹೋಗ ತಕ್ಕವರು" ಎಂದು ಹೇಳಿಕಳಿಸಿ ಮನಸ್ಸು ನೋಯಿಸಬೇಡಿರಿ. ಇದಕ್ಕಿಂತ ಹೆಚ್ಚಿಗೆ ನಾನೇನು ಹೇಳುವದಿಲ್ಲ. ಶಿವಾಜಿಯು ತನ್ನ ವಕೀಲನನ್ನು ಇಷ್ಟು ಮಾತು ಹೇಳುವದಕ್ಕಾಗಿಯೇ ಕಳಿಸಿರುತ್ತಾನೆ; ಎರಡನೆಯದೇನೂ ಇಲ್ಲ. ಆತನ ಇಚ್ಛೆಗೆ ವಿರುದ್ಧವಾಗಿ ನಡೆದರೆ ಕೆಲಸ ಕೆಡುವ ಹಾಗಿದೆ. ಇದರ

ಮೇಲೆ ತಮ್ಮ ಇಚ್ಛೆಗೆ ಬಂದಂತೆ ಮಾಡಬಹುದು. ತಮ್ಮ ದರ್ಪಕ್ಕೆ ಶಿವಾಜಿಯು ಹೆದರಿರುವದೇನೋ ನಿಜವು.

ಅಫಜುಲಖಾನ—ನಾನು ತಮ್ಮ ಮಾತಿಗೆ ಹೊರತಾಗಿರುವದಿಲ್ಲ. ತಮ್ಮ ವಿಚಾರಗಳು ಯಾವಾಗಲೂ ಉದಾತ್ತವಾಗಿರುತ್ತವೆಂಬದನ್ನು ನಾನು ಬಲ್ಲೆನು. ತಮ್ಮ ಆಲೋಚನೆಯ ವಿಷಯವಾಗಿ ನನಗೆ ಎಂದೂ ಸಂಶಯ ಬರುವ ಹಾಗಿಲ್ಲ. ತಮ್ಮ ಮೇಲೆ ನನ್ನ ವಿಶ್ವಾಸವೆಷ್ಟಿರುತ್ತ ವೆಂಬುದನ್ನು ನಾನು ಬಾಯಿಬಿಚ್ಚಿ ಹೇಳುವ ಕಾರಣವಿಲ್ಲ; ಆದರೆ, ನಾವು ಒಮ್ಮೆಲೆ ಶಿವಾಜಿಗೆ ಅನುಕೂಲವಾಗಿ ನಡೆಯುವದು ಸರಿಯಲ್ಲ; ಹಾಗೆ ನಡೆದರೆ, ನಮ್ಮ ಸಾಮರ್ಥ್ಯದ, ಹಾಗು ಸಿದ್ಧತೆಯ ವಿಷಯವಾಗಿ ಆತನಲ್ಲಿ ಸಂಶಯವು ಉತ್ಪನ್ನವಾಗಬಹುದು. ನಾವು ಅಪೂರ್ಣ ಸಿದ್ಧತೆಯಿಂದ ಬಂದಿರುವೆವೆಂದು ಆತನು ಭಾವಿಸಬಹುದು. ನಿಜವಾಗಿ ಆತನು ನಮ್ರ ನಾಗಿದ್ದರೆ ನಾವೂ ಆತನನ್ನು ಕ್ಷಮಿಸಬಹುದು. ಆದರೆ ಇಲ್ಲಿಯೇ ಯಾವ ಮಾತಿನ ನಿರ್ಣಯವನ್ನೂ ಮಾಡುವ ಹಾಗಿಲ್ಲ. ಆತನು ಹಜರತ್ತರವರಿಗೆ ಮುಜುರೆ ಮಾಡುವದಕ್ಕಾಗಿ ನಮ್ಮ ಸಂಗಡ ವಿಜಾಪುರಕ್ಕೆ ಬರಲೇಬೇಕು. ಈ ಮಾತನ್ನು ಆತನ ವಕೀಲನಿಗೆ ತಿಳಿಸಿರಿ. ಅದಕ್ಕೆ ಒಪ್ಪಿಕೊಂಡರೆ ಮುಂದಿನ ಮಾತು. ಇದು ಮುಖ್ಯವಾದ ನಮ್ಮ ಹೊಟ್ಟೆಯೊಳಗಿನ ಗುಟ್ಟು ಇರುತ್ತದೆ. ಪಂತ, ನಿಮಗೆ ಹ್ಯಾಗೆ ಕಾಣುತ್ತದೆ? ಹೀಗೆ ಯುಕ್ತಿಯಿಂದ ಆತನನ್ನು ಇಲ್ಲಿಂದ ಹೊರಡಿಸಿಕೊಂಡು ಹೋಗದಿದ್ದರೆ ನಮ್ಮ ಪ್ರತಿಜ್ಞೆಯು ಹ್ಯಾಗೆ ನೆರವೇರಬೇಕು? ನನ್ನ ಮನಸ್ಸಿನ ಮುಖ್ಯ ವಿಚಾರವೆಂದರೆ, ಶಿವಾಜಿಯನ್ನು ಇಲ್ಲದಂತೆ ಮಾಡುವದು. ಆತನು ನಮ್ಮ ಬಾದಶಾಹಿಯ ಶತ್ರುವಾಗಿರುವನು. ಇಂದಲ್ಲ ನಾಳೆಯಾದರೂ ಪ್ರಬಲನಾಗಿ ನಮ್ಮ ಗಂಟಲಿಗೆ ಗಾಣವಾಗತಕ್ಕವನೇ! ಠಕ್ಕರಿಗೆ ಮಹಾ ಠಕ್ಕರಾಗಿ ನಾವೂ ಶಿವಾಜಿಯೊಡನೆ ಹೊರಗೆ ವಿಶ್ವಾಸದಿಂದ ನಡೆದು, ವಿಶ್ವಾಸಘಾತದಿಂದ ಅವನನ್ನು ನಾಶಗೊಳಿಸಲೇಬೇಕು. ಇಲ್ಲಿ ಆ ಕಾರ್ಯವು ಸಾಧಿಸದಿದ್ದರೆ, ವಿಜಾಪುರಕ್ಕೆ ಅವನನ್ನು ಕರಕೊಂಡು ಹೋಗಿ ಕಾರ್ಯವನ್ನು ಸಾಧಿಸ ಬೇಕು. ನಾಶಮಾಡದಿದ್ದರೂ ವಿಜಾಪುರದಲ್ಲಿ ಅವನನ್ನು ಸೆರೆಯಲ್ಲಾದರೂ ಇರಿಸಬೇಕು.

ಖಾನನ ಈ ಮಾತುಗಳನ್ನು ಕೇಳಿ, ವಿಶೇಷವಾಗಿ ಖಾನನ ವಿಶ್ವಾಸಘಾತದ ವಿಚಾರವನ್ನು ಕೇಳಿ, ಗೋಪಿನಾಥಪಂತನು ಚಕಿತನಾದನು. ಆತನು ಏನೂ ಮಾತನಾಡದೆ ಸುಮ್ಮನೆ ಕುಳಿತುಕೊಂಡನು. ತನ್ನ ಮಾತು ಪಂತರಿಗೆ ಸೇರಲಿಲ್ಲೆಂಬವನ್ನು ಖಾನನು ಸ್ಪಷ್ಟವಾಗಿ ಅರಿತುಕೊಂಡನು. ಆತನು ಪಂತರನ್ನು ಕುರಿತು—ಪಂತ, ಯಾಕೆ? ನನ್ನ ಮಾತು ತಮ್ಮ ಮನಸ್ಸಿಗೆ ಬರಲಿಲ್ಲೆಂಬಂತೆ ಕಾಣುತ್ತದೆ; ಹಾಗಿದ್ದರೆ ಸ್ಪಷ್ಟವಾಗಿ ಹೇಳಬೇಕು. ನಿಮ್ಮ ಮುಂದೆ ಯಾವ ಮಾತನ್ನೂ ಮುಚ್ಚಿಯಿಡುವ ಸಾಂಪ್ರದಾಯವಿಲ್ಲದ್ದರಿಂದ ನಾನು ಎಲ್ಲವನ್ನು ಆಡಿಬಿಟ್ಟಿದ್ದೇನೆ. ಹೇಳುವದನ್ನು ಸ್ಪಷ್ಟವಾಗಿ ನೀವೂ ಹೇಳಿಬಿಡಬೇಕು, ಅನ್ನಲು, ಗೋಪಿನಾಥಪಂತನು ಸ್ವಲ್ಪ ಹೊತ್ತು ಸುಮ್ಮನಿದ್ದು ಆ ಮೇಲೆ ಒಮ್ಮೆಲೆ ಖಾನನನ್ನು ಕುರಿತು—ಖಾನಸಾಹೇಬ, ನಾನು ನಿಮ್ಮ, ಹಾಗೂ ಹಜರತ್ತರ ಅನ್ನದಿಂದ ದೊಡ್ಡವನಾಗಿರುವೆನು. ಈವೊತ್ತಿಗೂ ಉಣ್ಣುವದು ನಿಮ್ಮ ಅನ್ನ. ಹಚ್ಚುವದು ನಿಮ್ಮ ದೀಪ. ನಾನು ನಿಮ್ಮ ಸೇವಕನು. ನನ್ನನ್ನು ಸನ್ಮಾನಪೂರ್ವಕವಾಗಿ ನೀವು ನಡಿಸಿಕೊಳ್ಳುವಿರಿ; ಬೇಕಾದಾಗ ನಿಸ್ಪೃಹದಿಂದ ಸ್ಪಷ್ಟವಾಗಿ ಮಾತಾಡುತ್ತೇನೆ. ಅದರಂತೆ ಈಗಲೂ ಮಾತಾಡುವೆನು. ಒಳಗೊಂದು ಹೊರಗೊಂದು ನನಗೆ ಗೊತ್ತಿಲ್ಲ. ಈ ಮಾತು ತಮಗೂ ಗೊತ್ತಿರುವದರಿಂದ, ನಾನು ಈಗ ಸ್ಪಷ್ಟ ಮಾತಾಡುವದಕ್ಕಾಗಿ ಕ್ಷಮಿಸಬೇಕು. ಶಿವಾಜಿಯೊಡನೆ ಮರೆಮೋಸ ಮಾಡುವದು ನನ್ನ ಮನಸ್ಸಿಗೆ ಬರುವದಿಲ್ಲ. ಎದುರಿಗೆ ನಿಂತು ಶಿವಾಜಿಯ ಶಾಸನಮಾಡುವ ಯೋಗ್ಯತೆಯು ನಮ್ಮಲ್ಲಿಲ್ಲವೆಂತಲ್ಲ. ಅಂದಬಳಿಕ ಮೋಸಮಾಡುವದೇಕೆ? "ನೀನು ನಮಗೆ ಶರಣುಬರಲೇಬೇಕೆಂದು" ಹೇಳಿದರಾಯಿತು. "ನಿನ್ನ ವಿಶ್ವಾಸವು ನಮಗಿಲ್ಲ. ನೀನು ಶರಣು ಬಾ. ನಮ್ಮ ಮನಸ್ಸಿಗೆ ಬಂದಂತೆ ವ್ಯವಸ್ಥೆ ಮಾಡುವೆವು." ಎಂದು ಸ್ಪಷ್ಟವಾಗಿ ಈಗ ಹೇಳಿ ಕಳಿಸಿಬಿಡಿರಿ. ಆತನನ್ನು ಮೋಸಗೊಳಿಸಬೇಡಿರಿ. ಈ ಮೋಸಗೊಳಿಸುವ ಪ್ರಸಂಗದಲ್ಲಿ ನನ್ನನ್ನಾದರೂ ಸೇರಿಸಿಕೊಳ್ಳಬೇಡಿರಿ. ಮುತ್ಸದ್ದಿಗಿರಿಯ ಕೆಲಸವನ್ನು ನಾನು ಮಾಡುವೆನು; ಆದರೆ ಸರಳತನದಿಂದಾಗುವದನ್ನು ಮಾತ್ರ ಮಾಡುವೆನು. ಶಿವಾಜಿಗೆ ಇಲ್ಲಿ ಅಭಯವನ್ನು ಕೊಟ್ಟು, ವಿಜಾಪುರದಲ್ಲಿ ಆತನ ಕುತ್ತಿಗೆಯ ಮೇಲೆ ಖಡ್ಗವಿಡುವದು ನನ್ನ ಮನಸ್ಸಿಗೆ

ಬರುವದಿಲ್ಲ! ಈಗಲೇ ಆತನ ಪಾರಿಪತ್ಯ ಮಾಡಲಿಕ್ಕೆ ನಿಮ್ಮಲ್ಲೇನು ಶಕ್ತಿಯಿಲ್ಲವೆ? ಅಂದಬಳಿಕ ಮೋಸವೇಕೆ? ಶಹಾಜಿರಾಜರು ಹಜರತಿಯ ಏಕನಿಷ್ಠ ನೌಕರರು; ಶಿವಾಜಿಯು ಅವರ ಮಗನು. ಆದ ತಪ್ಪನ್ನು ಕ್ಷಮಿಸಿ ಆತನನ್ನು ನಮ್ಮವನನ್ನಾಗಿ ಮಾಡಿಕೊಳ್ಳಲಿಕ್ಕೆ ಉತ್ತಮ ಸಂಧಿಯು ಈಗ ಪ್ರಾಪ್ತವಾಗಿರುವದು; ಒಟ್ಟಿಗೆ ವಿಶ್ವಾಸಘಾತಕ್ಕೆ ನನ್ನ ಒಪ್ಪಿಗೆಯಿಲ್ಲವು.

ಗೋಪಿನಾಥಪಂತನ ಈ ನಿರ್ಧಾರದ ಮಾತುಗಳನ್ನು ಕೇಳಿ ಖಾನನಿಗೂ ಕೂಡ ಕ್ಷಣಹೊತ್ತು ಆಶ್ಚರ್ಯವಾಯಿತು. ಗೋಪಿನಾಥಪಂತನು ಕೇವಲ ನಿಸ್ಪೃಹಿಯೂ, ತನ್ನ ನಿಜವಾದ ಹಿತಕರ್ತೃವೂ ಎಂದು ಬಹು ದಿವಸದಿಂದ ಖಾನನು ನಂಬಿದ್ದರಿಂದ, ಆತನ ವಿರುದ್ಧ ಮಾತಾಡಲಿಕ್ಕೆ ಖಾನನಿಗೆ ಧೈರ್ಯವಾಗಲಿಲ್ಲ. ಆತನು ಗೋಪಿನಾಥಪಂತನನ್ನು ಕುರಿತು—ಪಂತ, ಈಗ ಮೋಸಮಾಡಲಿಕ್ಕೆ ಪ್ರತ್ಯಕ್ಷ ಇನ್ನೂ ನಾನು ನಿಂತಿರುವದಿಲ್ಲವಷ್ಟೆ? ಸುಮ್ಮನೆ ನನ್ನದೊಂದು ಕಡೆಯ ವಿಚಾರವೆಂದು ನಾನು ನಿಮ್ಮ ಮುಂದೆ ಹೇಳಿದೆನಷ್ಟೆ. ಆತನನ್ನು ಸೆರೆಯಲ್ಲಿರಿಸಬೇಕೆಂದು ನನ್ನ ಮನಸ್ಸಿನಲ್ಲಿರುವುದಿಲ್ಲ; ಆದರೆ "ಆತನನ್ನು ಹಿಡಿತರುವೆನು, ಇಲ್ಲವೆ ಹೊಡೆದು ತರುವೆನು" ಎಂದು ಮಾಡಿದ ನನ್ನ ಪ್ರತಿಜ್ಞೆಯನ್ನು ಪೂರ್ಣಮಾಡಿಕೊಳ್ಳಬಾರದೇನು? ಇಲ್ಲಿಯೇ ನಾವು ಏನಾದರೂ ವ್ಯವಸ್ಥೆ ಮಾಡಿದರೆ, ಹಜರತ್ತರು ಏನು ತಿಳಿದುಕೊಂಡಾರು? ಜನರು ಏನು ಅಂದಾರು? "ಇವನಿಗೂ ಶಿವಾಜಿಯು ಮಂಕುಬೂದಿ ಹಚ್ಚಿ ಕಳಿಸಿದನು" ಎಂದು ಜನರು ಅನ್ನಲಿಕ್ಕಿಲ್ಲವೆ? ಹೀಗೆ ಎಷ್ಟು ಜನರು ಹೋಗಿ ಹಿಂದಿರುಗಿ ಬಂದಿರುವದಿಲ್ಲ? ನಾನೂ ಅವರೊಳಗಿನವನೊಬ್ಬನು ಆಗಲಿಯಾ? ನಾನು ಶಿವಾಜಿಯನ್ನು ಕರಕೊಂಡು ಹೋದೆನು ಅನ್ನುವಹಾಗೆ ಆದರಾಯಿತು. ಬೇರೆ ನನ್ನಿಂದ ಮುರಿಯಹಾಗುವ ಹಾಗಿಲ್ಲ, ಮೋಸವಾಗುವ ಹಾಗಿಲ್ಲ.

ತಾನು ಇಷ್ಟು ನಿಷ್ಠುರವಾಗಿ ಮಾತಾಡಿದರೂ ಖಾನನು ಸಮಾಧಾನದಿಂದ ಮಾತಾಡುವದನ್ನು ನೋಡಿ ಗೋಪಿನಾಥಪಂತನಿಗೆ ಆಶ್ಚರ್ಯವಾದದ್ದಲ್ಲದೆ, ಆನಂದವೂ ಆಯಿತು. ತಾನು ಬ್ರಾಹ್ಮಣನು, ಶಿವಾಜಿಯು ಬ್ರಾಹ್ಮಣ ಪಕ್ಷಪಾತಿಯು. ಹೀಗಿದ್ದು ತಾನು ಶಿವಾಜಿಯ ಪಕ್ಷವನ್ನು

ವಹಿಸಿ ಮಾತಾಡಿದ್ದಕ್ಕಾಗಿ ಖಾನನು ಸಿಟ್ಟಾಗಬಹುದೆಂದು ತಿಳಿದುಕೊಂಡಿದ್ದನು. ಆದರೆ ಗೋಪಿನಾಥಪಂತನು ಹೀಗೆ ತಿಳಿದುಕೊಳ್ಳುವ ಕಾರಣವಿದ್ದಿಲ್ಲ; ಯಾಕಂದರೆ ಎಷ್ಟೋ ಸಾರೆ ಹೀಗೆ ಖಾನನಿಗೆ ಆತನು ನಿಷ್ಠುರವಾಗಿ ಹೇಳಿ, ತನ್ನ ಮಾತಿನಂತೆ ಆತನನ್ನು ನಡಿಸಿಕೊಂಡಿದ್ದನು. ಹೀಗಿದ್ದು ಈ ದಿನ ಖಾನನು ಏನನ್ನುವನೋ ಎಂಬ ವಿಕಲ್ಪವು ಗೋಪಿನಾಥ ಪಂತನ ಮನಸ್ಸಿನಲ್ಲಿ ಉತ್ಪನ್ನವಾಗಲಿಕ್ಕೆ ಕಾರಣವೇನಿರಬಹುದು? ಬೇರೆ ಕಾರಣವೇನೂ ಇದ್ದಿಲ್ಲ. ಖಾನನನ್ನು ಈ ದಿನ ನಾನು ಸ್ವಲ್ಪವಾದರೂ ವಂಚಿಸುವೆನೆಂದು ಆ ಬ್ರಾಹ್ಮಣನ ಮನಸ್ಸೇ ಅವನಿಗೆ ಹೇಳುತ್ತಿತ್ತು. ಕಳ್ಳನ ಜೀವವು ಹುಳ್ಳಹುಳ್ಳಗೆಯೆನ್ನುವದು ಸುಳ್ಳಲ್ಲ.

೩ನೆಯ ಪ್ರಕರಣ

ಮಹಾರಾಜರ ನಿಶ್ಚಯವು.

ಗೋಪಿನಾಥ ಪಂತನು ಬಹು ಪ್ರಾಮಾಣಿಕನು; ಸ್ವಾಮಿನಿಷ್ಠನು; ಉಂಡಮನೆಗಳ ಎಣಿಸಲಿಕ್ಕೆ ಆತನು ಸರ್ವಥಾ ಮನಸ್ಸು ಮಾಡತಕ್ಕವನಲ್ಲ, ಅಫಜುಲಖಾನನು ವೈದಿಕ ಧರ್ಮದ ದ್ವೇಷಿಯಾಗಿದ್ದು ಆತನು ಮೂರ್ತಿಗಳನ್ನು ಒಡೆದು ಹಿಂದೂ ಜನರನ್ನು ಪರಿಪರಿಯಾಗಿ ಪೀಡಿಸುವದನ್ನು ನೋಡಿ ಆ ಸ್ವಧರ್ಮನಿಷ್ಠ ಬ್ರಾಹ್ಮಣನಿಗೆ ಬಹಳ ದುಃಖವಾಗುತ್ತಿತ್ತು. ಇಂಥ ದುಷ್ಟನ ಸೇವಕನಾಗುವದು ಲಾಂಛನಾಸ್ಪದವೆಂಬ ಸಂಗತಿಯೂ ಮೇಲೆ ಮೇಲೆ ಆತನ ಮನಸ್ಸಿನಲ್ಲಿ ಬರುತ್ತಿತ್ತು; ಆದರೆ ಒಬ್ಬರ ಸೇವಕರಾಗಿರುವವರೆಗೆ ಅವರ ದ್ರೋಹಚಿಂತನ ಮಾಡುವದು ಪಾಪವೆಂದು ಆತನು ತಿಳಿಯುತ್ತಿದ್ದನು. ಆಗಿನ ಮುಸಲ್ಮಾನರಲ್ಲಿ ಬಹುಜನರು ಧನಮದ–ಅಧಿಕಾರಮದಗಳಿಂದ ಅಂಧರಾಗಿ ಅವಿವೇಕತನದಿಂದ ವರ್ತಿಸಹತ್ತಿ ನಾಶದ ಪಂಥವನ್ನು ಹಿಡಿದಿದ್ದರು. ಇದನ್ನು ನೋಡಿ ಗೋಪಿನಾಥಪಂತನಿಗೆ ಬಹಳ ಅಸಮಾಧಾನವಾಗುತ್ತಿತ್ತು; ಆದರೂ ಬಹು ದಿವಸಗಳಿಂದ ಆತನು

ಖಾನನ ಹಾಗೂ ಬಾದಶಹನ ಅನ್ನವನ್ನು ಉಣ್ಣುತ್ತ ಬಂದದ್ದರಿಂದಲೂ, ತನ್ನೊಡನೆ ಖಾನನು ಗೌರವದಿಂದ ನಡಕೊಳ್ಳುತ್ತಿದ್ದದ್ದರಿಂದಲೂ, ಒಮ್ಮೆಲೆ ಮುಸಲ್ಮಾನರ ನೌಕರಿಯನ್ನು ಬಿಡಲಿಕ್ಕೆ ಆತನ ಮನಸ್ಸು ಒಪ್ಪುತ್ತಿದ್ದಿಲ್ಲ. ಹೀಗಿರುವಾಗ ಒಮ್ಮೆ ಆತನಿಗೆ ಶಿವಾಜಿಯ ಭೆಟ್ಟಿಯಾಯಿತು. ಶಿವಾಜಿಯು ಸ್ವಧರ್ಮರಕ್ಷಣಕ್ಕಾಗಿ ಪರಿಪರಿಯಾಗಿ ಕಷ್ಟಪಡುತ್ತಿರುವನೆಂಬ ಸಂಗತಿಯು ಗೋಪೀನಾಥಪಂತನಿಗೆ ಕೇಳಿ ಗೊತ್ತಿತ್ತು; ಮತ್ತು ಶಿವಾಜಿಯ ಶೌರ್ಯ-ಸಾಹಸಗಳ ಹಲವು ಸುದ್ದಿಗಳು ಆತನ ಕಿವಿಗೆ ಮುಟ್ಟಿದ್ದವು. ಆದ್ದರಿಂದ ಶಿವಾಜಿಯ ವಿಷಯವಾಗಿ ಆ ಬ್ರಾಹ್ಮಣನಲ್ಲಿ ಪೂಜ್ಯಬುದ್ಧಿಯು ಮೊದಲಿನಿಂದ ವಾಸಿಸುತ್ತಿತ್ತು. ಅದರಲ್ಲಿ ಶಿವಾಜಿಯಂಥ ತೇಜಸ್ವಿಯ ಪ್ರತ್ಯಕ್ಷ ದರ್ಶನವಾದದ್ದರಿಂದ ಆತನ ಪೂಜ್ಯಬುದ್ಧಿಯು ಮತ್ತಿಷ್ಟು ಹೆಚ್ಚಿತು. ಹೀಗೆ ಶಿವಾಜಿಯ ವಿಷಯವಾಗಿ ಪರಮ ಆದರವನ್ನು ಹೊಂದಿದ ಆ ಬ್ರಾಹ್ಮಣನು, ಶಿವಾಜಿಗೆ ತಾನಾಗಿ ಕೇಡುಬಗೆಯದೆ, ತನ್ನ ಸ್ವಾಮಿನಿಷ್ಠೆಗೆ ಬಾಧೆಬಾರದಂತೆ ಆತನಿಗೆ ಸಹಾಯ ಮಾಡಲಿಕ್ಕೆ ಬರುವ ಹಾಗಿದ್ದರೆ ಅದಷ್ಟು ಸಹಾಯವನ್ನೇ ಮಾಡಬೇಕೆಂದು ನಿಶ್ಚಯಿಸಿದನು. ಹಿಂದೂ ಜನರಿಗೆ ಧರ್ಮವು ಅತ್ಯಂತ ಪ್ರಿಯವಾದದ್ದು. ಅವರ ಧರ್ಮಕ್ಕೆ ಬಾಧೆಬರುವ ಕಾರ್ಯಗಳನ್ನು ಮುಸಲ್ಮಾನರು ಮಾಡಹತ್ತಿದ್ದರಿಂದ, ಒಮ್ಮೊಮ್ಮೆ ಎಂಥ ಸ್ವಾಮಿನಿಷ್ಠನ ಮನಸ್ಸಾದರೂ ತಿರುಗುತ್ತಿತ್ತು. ಅದರಂತೆಯೇ ಈಗ ಗೋಪೀನಾಥಪಂತನಂಥ ಪಾಪಭೀರುವಿನ ಮನಸ್ಸಾದರೂ ಅಂಜುತ್ತಂಜುತ್ತ ಶಿವಾಜಿಯ ಕಡೆಗೆ ತಿರುಗಹತ್ತಿತ್ತು; ಆದಗೆ ತನ್ನ ಸ್ವಾಮಿಯಾದ ಖಾನನ ಅಹಿತಚಿಂತನವನ್ನು ಆತನು ಎಂದಿಗೂ ಮಾಡುವಹಾಗಿದ್ದಿಲ್ಲ. ಹೀಗಾಗಿ ಇತ್ತ ಸ್ವಾಮಿದ್ರೋಹವಾಗಬಾರದು, ಅತ್ತ ಶಿವಾಜಿಯ ಧರ್ಮಕಾರ್ಯಕ್ಕೆ ವಿಘ್ನವನ್ನುಂಟು ಮಾಡಿದ ಪಾತಕಕ್ಕೆ ತಾನು ಗುರಿಯಾಗಬಾರದು, ಎಂಬ ಇತ್ತಡಕಿನಲ್ಲಿ ಸಿಕ್ಕು ಆ ಬ್ರಾಹ್ಮಣನು ಗಾಸಿಯಾಗಹತ್ತಿದನು.

ಗೋಪೀನಾಥಪಂತನ ಮನಸ್ಸು ಖಾನನ ನಡತೆಯ ವಿಷಯವಾಗಿ ಸಂಶಯಗ್ರಸ್ತವಾಗಿತ್ತು; ಯಾಕಂದರೆ ಖಾನನು ಒಮ್ಮೆ ಶಿವಾಜಿಯೊಡನೆ ಅವಿಶ್ವಾಸದಿಂದ ನಡೆಯಬೇಕೆಂದು ಹೇಳಿ, ಮತ್ತೊಮ್ಮೆ ಹಾಗೇನು ನನ್ನ ಮನಸ್ಸಿನಲ್ಲಿಲ್ಲ, ಸುಮ್ಮನೆ ಕಡೆಯ ಮಾತೆಂದು ನಿಮ್ಮ ಮುಂದೆ ಆಡಿದೆನು.

ಎಂದು ಹೇಳಿದ್ದನು; ಆದ್ದರಿಂದ ಶಿವಾಜಿಗೆ ಖಾನನ ಸಂಗಡ ವಿಶ್ವಾಸದಿಂದ ನಡೆಯುವ ಬಗ್ಗೆ ತಾನು ಜವಾಬುದಾರಿಯಿಂದ ಮೈಮೇಲೆ ತಕ್ಕೊಂಡು ಹೇಳಲಿಕ್ಕೆ ಗೋಪೀನಾಥಪಂತನು ಹಿಂದೆಮುಂದೆ ನೋಡಹತ್ತಿದನು. ಈಗ ಖಾನನು ವಿಶ್ವಾಸದ ಮಾತುಗಳನ್ನು ಹೇಳುತ್ತಿದ್ದರೂ, ವಿಜಾಪುರಕ್ಕೆ ಹೊದ ಬಳಿಕ ತಿರುಗಿ ಬೀಳಲಿಕ್ಕಿಲ್ಲೆಂದು ಯಾರು ಹೇಳಬೇಕು? ಆದ್ದರಿಂದ ಶಿವಾಜಿಯನ್ನು ಬೋಧಿಸುವ ಪಂಚಾಯತಿಗೆ ಹೋಗಬಾರದು. ನೀನು ಹೀಗೆ ಮಾಡೆಂದೂ ಹೇಳಬಾರದು, ಹಾಗೆ ಮಾಡೆಂದೂ ಹೇಳಬಾರದು. ಶಿವಾಜಿಯು ಖಾನನ ವಿಷಯವಾಗಿ ವಿಶ್ವಾಸವನ್ನು ನನ್ನ ಮಾತಿನ ಮೇಲಿಂದಲೇ ಹಿಡಿದರೆ ಹಿಡಿಯುವನು. ಅಷ್ಟು ಮೈಮೇಲೆ ತಕ್ಕೊಳ್ಳುವದು ಹಿತಕರವಾಗಿ ತೋರುವದಿಲ್ಲ. ನನ್ನ ಕೈಯಲ್ಲಿದ್ದಷ್ಟನ್ನು ನಾನು ಮಾಡಬೇಕು, ಇಬ್ಬರ ಭೆಟ್ಟಿಯ ಯೋಗವನ್ನು ಒದಗಿಸಿಕೊಡುವುದು ನನ್ನ ಕೆಲಸವು. ಅವರಿಬ್ಬರ ಭೆಟ್ಟಿಯಾದಾಗ ಪರಸ್ಪರರ ಸಮಕ್ಷಮದಲ್ಲಿ ಆಗುವದು ಆದೀತು. ಎಂದು ಯೋಚಿಸಿ, ಕೃಷ್ಣಾಜಿ ಭಾಸ್ಕರನಿಗೆ ನಡೆದ ಸಂಭಾಷಣದ ಸಂಗತಿಯನ್ನು ತಿಳಿಸಿದನು. ಅದನ್ನೆಲ್ಲ ಕೇಳಿಕೊಂಡು ಕೃಷ್ಣಾಜಿ ಭಾಸ್ಕರನು ಗೋಪೀನಾಥಪಂತನಿಗೆ—ತಾವು ಹೇಳುವದೆಲ್ಲ ಸರಿಯಾದದ್ದು; ಆದರೆ ಖಾನನ ಮನಸ್ಸಿನಲ್ಲಿದ್ದದ್ದು ಮೇಲೆಯೇ ಕಾಣುತ್ತದೆ. ಹೊತ್ತು ಸಿಕ್ಕರೆ ಆತನು ಮಹಾರಾಜರನ್ನು ಘಾತಿಸಲಿಕ್ಕೆ ಹಿಂದೆಮುಂದೆ ನೋಡುವಹಾಗಿಲ್ಲ. ಆದ್ದರಿಂದ ನಾವೂ ನಮ್ಮ ಎಚ್ಚರದಿಂದ ಇರಬೇಕಾಗುವದು, ಎಂದು ಹೇಳಿದನು. ಅದಕ್ಕೆ ಪ್ರತಿಯಾಗಿ ಗೋಪೀನಾಥಪಂತನು ಹೆಚ್ಚಿಗೆ ಮಾತಾಡಲಿಲ್ಲ. ಆತನಿಗೆ ಕೃಷ್ಣಾಜಿಪಂತನ ವಿಚಾರವು ಸಮರ್ಪಕವಾಗಿ ತೋರಿದ್ದೇ ಇದಕ್ಕೆ ಕಾರಣವು. ಕೃಷ್ಣಾಜಿಪಂತನು ಸ್ವಲ್ಪ ಉತಾವಳಿಯ ಸ್ವಭಾವದವನಾಗಿದ್ದನು. ಗೋಪಿನಾಥಪಂತನು ತನ್ನ ಒಡೆಯನಿಗೆ ವಿಸ್ವಾಸಘಾತಮಾಡಿ ತಮಗೆ ಸಹಾಯ ಮಾಡಬೇಕೆಂದು ಇಚ್ಛಿಸುತ್ತಿದ್ದನು. ಮೊಗಲರ ಚಾಕರಿಯನ್ನು ಮಾಡುವಾಗ, ವಿಶ್ವಾಸಘಾತ ಮಾಡುವದರಿಂದ ಹಿಂದೂ ಧರ್ಮದ ಸಂರಕ್ಷಣವಾಗುವಂತೆ ಇದ್ದರೆ ವಿಶ್ವಾಸಘಾತ ಮಾಡಲಿಕ್ಕೆ ಚಿಂತೆಯಿಲ್ಲೆಂದು ಕೃಷ್ಣಾಜಿಪಂತನು ತಿಳಿದುಕೊಂಡನು; ಆದರೆ ಗೋಪೀನಾಥಪಂತನು ಹಾಗೆ ತಿಳಿದುಕೊಂಡಿದ್ದಿಲ್ಲ. ತನ್ನ ಒಡೆಯನು ಏನಾದರೂ ವಿಶ್ವಾಸಘಾತ

ಮಾಡುವ ಸಂಭವ ತೋರಿದರೇ, ಮಹಾರಾಜರಿಗೆ ಆ ಸುದ್ದಿಯನ್ನು ತಿಳಿಸಿ ಜಾಗ್ರತಗೊಳಿಸುವಲ್ಲಿ ದ್ರೋಹವಾಗದೆಂದು ತಿಳಿದುಕೊಂಡಿದ್ದನು.

ಹೀಗೆ ಅಫಜುಲಖಾನನು ಗೋಪೀನಾಥಪಂತನೊಡನೆ ಆಲೋಚನೆ ಮಾಡಿ ತಾನೊಬ್ಬನೇ ಏಕಾಂತದಲ್ಲಿ ಆಲೋಚಿಸಿ ಕೃಷ್ಣಾಜಿ ಭಾಸ್ಕರನನ್ನು ತನ್ನಬಳಿಗೆ ಕರಿಸಿಕೊಂಡು ಶಿವಾಜಿಯ ಮನೋದಯವನ್ನು ಸ್ಪಷ್ಟವಾಗಿ ತಿಳಿಸಬೇಕೆಂದು ಹೇಳಿದನು. ಅದಕ್ಕೆ ಕೃಷ್ಣಾಜಿಪಂತನು—ಮಹಾರಾಜರು ತಮ್ಮನ್ನು ಕಾಣಲು ಸಿದ್ಧರಿದ್ದಾರೆ, ಆದರೆ ವಾಯಿಯ ಕಂದರವನ್ನಿಳಿದು ಅಲ್ಲಿರುವ ತಮ್ಮ ಛಾವಣಿಯಲ್ಲಿ ಬಂದು ತಮ್ಮನ್ನು ಕಾಣಲಿಕ್ಕೆ ಅವರು ಭಯಪಡುವರು; ಅಷ್ಟು ಧೈರ್ಯವು ಅವರಿಗೆ ಸಾಲದು. ಈವರೆಗೆ ಅವರು ಬಾದಶಹ ರಾಜ್ಯದಲ್ಲಿಯ ಪುಂಡಾಟಿಕೆಯನ್ನು ಮುರಿದು ಶಾಂತತೆಯನ್ನುಂಟು ಮಾಡುವದಕ್ಕಾಗಿಯೇ ಯತ್ನಿಸಿರುವರು, ತಾವು ಸ್ವತಂತ್ರವಾಗಿ ರಾಜ್ಯವನ್ನು ಸ್ಥಾಪಿಸಬೇಕೆಂದು ಯಾವ ಉದ್ಯೋಗವನ್ನೂ ಮಾಡಿರುವದಿಲ್ಲ. ಹೀಗಿದ್ದು, ಹಜರತ್ತರವರು ವಿಕಲ್ಪವನ್ನು ಭಾವಿಸಿ ನಮ್ಮನ್ನು ಹಿಡಿಯಲಿಕ್ಕೆ ಅಥವಾ ಹೊಡೆಯಲಿಕ್ಕೆ ಮೇಲೆ ಮೇಲೆ ಸರದಾರರನ್ನು ಸೈನ್ಯದೊಡನೆ ಕಳಿಸುತ್ತಿರುವದರಿಂದ ಮಹಾರಾಜರು ಅಂಜಿರುವರು. ಈ ಅಂಜಿಕೆಯು ಒಂದೆರೆಡು ಸಾರೆ ಒಬ್ಬರನ್ನೊಬ್ಬರು ಕಾಣುವದರಿಂದಲೇ ದೂರವಾಗುವಹಾಗಿದೆ; ಆದ್ದರಿಂದ ಖಾವಂದರವರು ದರ್ಶನದ ಯೋಗವನ್ನು ಒದಗಿಸಿ ಕೊಡಬೇಕು. ತಾವು ಪ್ರತಾಪಗಡದ ಬುಡದವರೆಗೆ ಬರಬೇಕು. ಮಾರ್ಗದಲ್ಲಿ ತಮ್ಮ ಸರಬರಾಯಿಯ ವ್ಯವಸ್ಥೆಯನ್ನು ಉತ್ತಮ ರೀತಿಯಿಂದ ಇಡಲಾಗುವದು; ತಮಗೆ ಬರುವದಕ್ಕಾಗಿ ಹಾದಿಯನ್ನು ಪ್ರಶಸ್ತವಾಗಿ ಮಾಡಲಾಗುವದು; ಆದ್ದರಿಂದ ತಾವು ಅತ್ತಕಡೆಗೆ ಬರುವಂತೆ ಮಾಡಬೇಕು. ಇಲ್ಲದಿದ್ದರೆ ಯೋಗವಿದ್ದಂತೆ ಆಗೇ ಆಗುತ್ತದೆ. ಇದು ಮಹಾರಾಜರ ಮನಸ್ಸಿನೊಳಗಿನ ಹೇತುವಾಗಿರುತ್ತದೆ. ತಾವು ದರ್ಶನದ ಯೋಗವನ್ನು ಒದಗಿಸಿಕೊಟ್ಟರೆ, ಎಲ್ಲವೂ ಸುಸೂತ್ರವಾಗಿ ನಡೆದು, ಮಹಾರಾಜರ ನಿಜವಾದ ಹೃದ್ಗತವು ತಮಗೂ ತಿಳಿಯುವದು.

ಅಫಜುಲಖಾನನು ವಕೀಲನ ಈ ಮಾತುಗಳನ್ನೆಲ್ಲ ಕೇಳಿಕೊಂಡು ಮನಸ್ಸಿನಲ್ಲಿ—"ಶಿವಾಜಿಯು ನನಗೆ ಹೆದರಿದ್ದೇ ನಿಜವಾಗಿ ತೋರುತ್ತದೆ.

ಇಲ್ಲದಿದ್ದರೆ ಹೀಗೆ ನನ್ನ ಸಲುವಾಗಿ ಬುದ್ಧಿಪೂರ್ವಕವಾಗಿ ಹಾದಿಯನ್ನು ಮಾಡಿಸಿ, ಸರಬರಾಯಿಯ ವ್ಯವಸ್ಥೆಯಿಡಿಸುವ ಕಾರಣವೇನು? ಒಂದು ಪಕ್ಷದಲ್ಲಿ ಅವನು ಹೆದರದಿದ್ದರೂ ಇರಲಿ, ಭೆಟ್ಟಿಯ ಕಾಲದಲ್ಲಿ ನಾನು ಕಾರ್ಯವನ್ನು ಸಾಧಿಸಿಕೊಂಡರೆ ತೀರಿತು. ಎಂದು ಯೋಚಿಸಿ, ವಕೀಲನ ಮಾತಿಗೆ ಒಪ್ಪಿಗೆಯನ್ನಿತ್ತನು. ಆಗ ವಕೀಲನು ಖಾನನನ್ನು ಕುರಿತು— ಖಾವಿಂದ, ತಾವು ಒಪ್ಪಿಕೊಂಡ ಸಂಗತಿಯನ್ನು ನಾನು ಮಹಾರಾಜರಿಗೆ ಹೇಳುವೆನು. ತಮಗೆ ಬರುವದಕ್ಕಾಗಿ ಪ್ರಶಸ್ತಮಾರ್ಗವನ್ನು ಮಾಡಿಸಿ, ಸರಬರಾಯಿಯ ವ್ಯವಸ್ಥೆಯನ್ನು ಉತ್ತಮ ರೀತಿಯಿಂದ ಇಡಿಸಿ ತಮಗೆ ಸುದ್ದಿಯನ್ನು ಮುಟ್ಟಿಸುವೆನು; ಅಂದರೆ, ತಮ್ಮ ಸೈನ್ಯದ ತಳಕಿತ್ತಲಿಕ್ಕೆ ನೆಟ್ಟಗಾಗುವದು; ಮತ್ತು ತಮಗೆ ಮಾರ್ಗಾಯಾಸವೂ ಆಗಲಿಕ್ಕಿಲ್ಲ, ಎಂದು ಹೇಳಲು, ವಕೀಲನು ಶಿವಾಜಿಯನ್ನು "ಮಹಾರಾಜರು" ಎಂದು ಬಹುಮಾನದಿಂದ ಮೇಲೆ ಮೇಲೆ ಕರೆಯುವದನ್ನು ಕೇಳಿ ಖಾನನು ಸಂತಾಪ ಗೊಂಡನು. ಆತನು ವಕೀಲನನ್ನು ಕುರಿತು—"ಮಹಾರಾಜರಿಗೆ?" ಯಾವ ಮಹಾರಾಜರಿಗೆ? ಮಹಾರಾಜರು ಯಾರು? ಶಿವಾಜಿಗೆ ಮಹಾ ರಾಜನೆಂದು ಯಾರು ಕರೆದಿರುವರು? ಮಹಾರಾಜನೆಂಬ ಬಿರುದು ಸುಮ್ಮನೆ ಸಿಗುವದಿಲ್ಲ. ಇನ್ನುಮೇಲೆ ಶಿವಾಜಿಯೆಂದು ಕರೆಯುತ್ತ ಹೋಗು. ನನ್ನ ಸಂಗಡ ಮಾತಾಡುವಾಗಾದರೂ ಇಂಥ ಹುಡುಗಾಟಿಗೆ ಮಾಡಬೇಡ ಹೋಗು, ನಿಮ್ಮ ಶಿವಾಜಿಗೆ ಸ್ಪಷ್ಟವಾಗಿ ಹೀಗೆ ಹೇಳು—ನಾವು ನಿನ್ನ ಪ್ರತಾಪಗಡದ ಬುಡದವರಿಗೇ ಏಕೆ, ಪ್ರತಾಪಗಡದ ಮೇಲೆ, ನಿನ್ನ ಅಂತ ರ್ಗೃಹದಲ್ಲಿ ಸಹ ನಿನ್ನನ್ನು ಕಾಣಲಿಕ್ಕೆ ಬರುವೆವು. ನಿನ್ನ ಭಯವು ನಮಗೆ ಎಷ್ಟು ಮಾತ್ರವೂ ಇರುವದಿಲ್ಲ. ನಿನ್ನದಂತೂ ಇರಲಿ, ಪ್ರತ್ಯಕ್ಷ ಮೃತ್ಯುವಿನ ಭಯವು ಸಹ ನಮಗೆ ಇರುವದಿಲ್ಲ. ನಾವು ನಿನ್ನನ್ನು ನಿಶ್ಚಯವಾಗಿ ಸೆರೆ ಹಿಡಿಯುವೆವು ಅಥವಾ ಕೊಲ್ಲುವೆವು ಎಂಬ ಭಯದಿಂದಲೇ ನೀನು ನಮಗೆ ಶರಣು ಬರುತ್ತೀಯೆಂಬುದನ್ನು ನಾವು ಅರಿತಿರುವೆವು. ನೀನು ನಮಗೆ ಬರೇ ಶರಣು ಬರುವದರಿಂದ ಕಾರ್ಯವಾಗದು, ಹಜರತ್ತರಿಗೆ ಸಾಷ್ಟಾಂಗವಾಗಿ ಎರಗಲಿಕ್ಕೆ ವಿಜಾಪುರಕ್ಕೆ ಬರಲೇಬೇಕು. ಅಂದರೆ ನಿನ್ನ ಬಿಡುಗಡೆಯಾ ಗುವದು.

ಕೃಷ್ಣಾಜಿ ಭಾಸ್ಕರ—ನಾವೇನು, ತಾವು ಹೇಳಿದ್ದನ್ನು ನಮ್ಮ ಒಡೆಯನ ಮುಂವೆ ಹೇಳತಕ್ಕವರು. ಇಬ್ಬರ ಭೆಟ್ಟಿಯಾದನಂತರ ಎಲ್ಲ ವ್ಯವಸ್ಥೆಯು ಸರಿಯಾಗಿ ಆಗುವದೆಂಬ ವಿಷಯದಲ್ಲಿ ನನಗೆ ಸಂಶಯವಿಲ್ಲ.

ಈ ಮೇರೆಗೆ ನುಡಿದು, ಕೃಷ್ಣಾಜಿ ಭಾಸ್ಕರನು ಅಫಜುಲಖಾನನ ಅಪ್ಪಣೆಯನ್ನು ಪಡೆದು ಪುನಃ ಪಂತಾಜಿ ಗೋಪಿನಾಥನನ್ನು ಕಂಡು ಮಹಾರಾಜರ ಬಳಿಗೆ ಬಂದನು. ಮಹಾರಾಜರು ಯಾವತ್ತು ವೃತ್ತಾಂತ ವನ್ನು ಕೇಳಿ, ಊಹಿಸತಕ್ಕದ್ದನ್ನು ಊಹಿಸಿದರು. ಇನ್ನು ಮುಂದೆ ಏನು ಮಾಡಬೇಕೆಂಬದನ್ನು ನಿಶ್ಚಯಿಸುವ ಪ್ರಸಂಗವು ಬಂದಿತು. ಇಂಥ ಮಹತ್ವದ ಪ್ರಸಂಗವನ್ನು ಕುರಿತು ನಿಶ್ಚಯಿಸುವಾಗ ಮನಸ್ಸು ಹೊಯ್ದಾಡ ಹತ್ತಿದರೆ, ಭವಾನೀಮಾತೆಯನ್ನು ಕೇಳುವ ಸಾಂಪ್ರದಾಯವಿತ್ತು. ಅದರಂತೆ ಈ ಪ್ರಸಂಗದಲ್ಲಿಯೂ ಮಹಾರಾಜರು ಭವಾನಿಮಾತೆ ಯನ್ನು ಕೇಳಲು ನಿಶ್ಚಯಿಸಿದರು. ನಿತ್ಯಕ್ರಮದಂತೆ ಭವಾನಿಯ ಪೂಜೆ ಪುನಸ್ಕಾರಗಳನ್ನು ತೀರಿಸಿ, ಧೂಪ-ದೀಪಾದಿಗಳನ್ನು ಸಮರ್ಪಿಸಿ, ಒಂದು ಬದಿಯಲ್ಲಿ ಜೀಜಾಬಾಯಿಯವರನ್ನೂ, ಮತ್ತೊಂದು ಬದಿಯಲ್ಲಿ ಚಿಟನೀಸ ನಾದ ಬಾಳಾಜಿ ಆವಜಿಯನ್ನೂ ಕುಳ್ಳಿರಿಸಿಕೊಂಡು, ತಮ್ಮ ಮೈಯಲ್ಲಿ ಜಗದಂಬೆಯ ಸಂಚಾರವಾಗುವದಕ್ಕಾಗಿ ಏಕಾಗ್ರಚಿತ್ತದಿಂದ ಕುಳಿತು ಕೊಂಡರು. ಸ್ವಲ್ಪ ವೇಳೆಯಲ್ಲಿಯೇ ಮಹಾರಾಜರು ತನ್ಮಯರಾಗಲು, ಅವರ ಮುಖದಿಂದ ಮುಂದಿನ ಶಬ್ದಗಳು ಹೊರಟವು—"ವತ್ಸಾ, ಹೆದರ ಬೇಡ. ಈ ಸಂಕಟವು ನಿನ್ನ ಚಾತುರ್ಯದಿಂದಲೂ, ಪ್ರಸಂಗಾವಧಾನ ದಿಂದಲೂ ದೂರವಾಗುವದು!!" ಈ ಶಬ್ದಗಳನ್ನು ಚಿಟನೀಸನು ಬರೆದು ಕೊಂಡನು. ಮಹಾರಾಜರು ಎಚ್ಚತ್ತಮೇಲೆ ಆತನು ದೇವಿಯ ವಾಣಿ ಯನ್ನು ಅವರಿಗೆ ನಿವೇದಿಸಲು, ಅದನ್ನು ಕೇಳಿ ಮಹಾರಾಜರೂ ಬೇರೆಯ ವರೂ ಆನಂದಪಟ್ಟು, ಅವರೆಲ್ಲರು ಉತ್ಸಾಹಗೊಂಡರು. ಆ ಮೇಲೆ ಮಹಾರಾಜರು "ಮುಸೆ" ಎಂಬ ಕಂದರದಿಂದ ಪ್ರತಾಪಗಡದ ವರೆಗೆ ಮಾರ್ಗವನ್ನು ಮಾಡಿಸಲು ನಿಶ್ಚಯಿಸಿದರು. ಈ ಕೆಲಸಕ್ಕಾಗಿ ಜಾವಳಿಯ ಅರಣ್ಯವನ್ನು ನೋಡಿ ಎತ್ತಕಡೆಯಿಂದ ಮಾರ್ಗಮಾಡಿಸಬೇಕೆಂಬದನ್ನು

ನಿಶ್ಚಯಿಸುವದಕ್ಕಾಗಿ, ತಮ್ಮ ಬಾಲಮಿತ್ರನಾದ ಏಸಾಜಿ ಕಂಕನನ್ನೂ, ಖಂಡೇರಾವನೆಂಬವನನ್ನೂ ಕಳಿಸಿದರು.

ಜಾವಳಿಯ ಅರಣ್ಯವು ಬಹು ಗಹನವಾದದ್ದು. ಜಾವಳಿಯ ಸುಬೇದಾರನಾದ ಚಂದ್ರರಾವಮೋರೆಯನ್ನು ಮಹಾರಾಜರು ತಮ್ಮ ಕಡೆಗೆ ಒಲಿಸು ಕೊಳ್ಳುವದಕ್ಕಾಗಿ ಬಹಳವಾಗಿ ಯತ್ನಿಸಿದರು. ಮೋರೆಯು ಬಹು ಬಲಾಢ್ಯ ನಿದ್ದನು. ಮಹಾರಾಜರು ಎಷ್ಟು ಯತ್ನಿಸಿದರೂ ಆತನು ಬಾದಶಹನ ಪಕ್ಷ ವನ್ನು ಬಿಡಲಿಲ್ಲ. ಈ ಕೆಲಸದಲ್ಲಿ ಮಹಾರಾಜರಿಂದ ದೊಡ್ಡ ಪ್ರಮಾದವಾಗಿ ಅವರು ಲೋಕಾಪವಾದಕ್ಕೆ ಗುರಿಯಾಗಬೇಕಾಯಿತು. ತಮ್ಮ ಸ್ವರಾಜ್ಯ ಸ್ಥಾಪನೆಗೆ ಚಂದ್ರರಾವ ಮೋರೆಯು ವಿಘ್ನಕಾರಿಯಾದ್ದರಿಂದ ಆತನನ್ನು ಒಲಿಸಿಕೊಳ್ಳುವದಕ್ಕಾಗಿ ತನ್ನ ನಂಬಿಗೆಯ ಜನರನ್ನು ಅವರ ಬಳಿಗೆ ಕಳಸಿದರು. ಸ್ವಧರ್ಮದ ಜನರನ್ನು ಒಲಿಸಿಕೊಳ್ಳುವಾಗ ಮಹಾರಾಜರು ಸಾಮೋಪಚಾರ ದಿಂದ ಕಾರ್ಯವನ್ನು ಸಾಧಿಸುತ್ತಿದ್ದರಲ್ಲದೆ, ಸ್ವಜನಘಾತಕ್ಕೆ ಮನಸ್ಸು ಮಾಡುತ್ತಿದ್ದಿಲ್ಲ. ಸಾಮೋಪಚಾರವು ಸಾಧಿಸದಿದ್ದರೆ ಯುಕ್ತಿಪ್ರಯುಕ್ತಿ ಯಿಂದಾಗಲಿ, ಪ್ರತ್ಯಕ್ಷ ಯುದ್ಧಮಾಡಿಯಾಗಲಿ ಅವರನ್ನು ಹಣ್ಣಿಗೆ ತಂದು ತಮ್ಮ ಕಡೆಗೆ ಮಾಡಿಕೊಳ್ಳುತ್ತಿದ್ದರು. ಒಟ್ಟಿಗೆ ಯಾವ ಉಪಾಯದಿಂದಲೇ ಆಗಲಿ, ತಮ್ಮ ಸ್ವಧರ್ಮೋದ್ಧಾರದ ಕಾರ್ಯಕ್ಕೆ ಅನುಕೂಲಸ್ಥಿತಿಯನ್ನು ಒದಗಿಸಿಕೊಳ್ಳುವದು ಅವರ ಮುಖ್ಯೋದ್ದೇಶವಾಗಿತ್ತು. ಈ ಕ್ರಮದಂತೆ ಚಂದ್ರರಾವ ಮೋರೆಯೆಂಬ ಜಾವಳಿಯ ಬಲಾಢ್ಯ ಸುಬೇದಾರನನ್ನು ಸಾಮೋಪಚಾರದಿಂದ ಶಿವಾಜಿಯ ಜನರು ಒಲಿಸಿಕೊಳ್ಳುವಾಗ ಆ ಸರದಾರನು ಅದಕ್ಕೆ ಒಪ್ಪಿಕೊಳ್ಳದಿರಲು, ಅವರು ಮಹಾರಾಜರು ಹೇಳದಿದ್ದರೂ ಮೋಸದಿಂದ ಚಂದ್ರರಾಯನ ಖೂನುಮಾಡಿದರು. ವಾಲಿಯ ಸಂಹಾರ ದಿಂದ ಶ್ರೀರಾಮಚಂದ್ರನ ಚರಿತ್ರಕ್ಕೆ ಒಂದು ಪ್ರಕಾರದ ಕಲಂಕ ಒದಗಿ ದಂತೆ ಈ ವಿಶ್ವಾಸಘಾತದ ಕೃತಿಯಿಂದ ಮಹಾರಾಜರ ಚರಿತ್ರಕ್ಕೆ ಕಲಂಕ ವುಂಟಾಯಿತೆಂದು, ನಿಜವಾದ ಸಂಗತಿಯನ್ನು ಅರಿಯದವರು ಎಣಿಸಹತ್ತಿ ದರು. ಈ ಪ್ರಸಂಗದಲ್ಲಿ ಚಂದ್ರರಾಯನ ಇಬ್ಬರು ಗಂಡುಮಕ್ಕಳು, ಒಬ್ಬ ಚಿಕ್ಕ ಹೆಣ್ಣುಮಗಳು, ಒಬ್ಬ ತಮ್ಮನು, ಒಬ್ಬ ಸೋದರಳಿಯನು ಮಾತ್ರ ಜೀವದಿಂದ ಉಳಿದು, ಉಳಿದವರೆಲ್ಲ ನಾಶಹೊಂದಿದರು. ಇಬ್ಬರು ಗಂಡು

ಮಕ್ಕಳನ್ನು ಮಹಾರಾಜರು ಪುಣೆಯಲ್ಲಿ ಸೆರೆಯಲ್ಲಿಟ್ಟರು. ತಮ್ಮನೂ ಹೆಣ್ಣು ಹುಡುಗಿಯೂ ಎತ್ತೋ ಹೋದರು. ಸೋದರಳಿಯನ ಗೊತ್ತು ಹತ್ತಲಿಲ್ಲ. ಈ ಉಳಿದ ಜನರು ಮಹಾರಾಜರ ಮೇಲಿನ ಸಿಟ್ಟಿನಿಂದ ಅವರ ಸೇಡು ತೀರಿಸಿ ಕೊಳ್ಳಲು ಮನಸ್ಸಿನಲ್ಲಿ ಕುದಿಯುತ್ತಿದ್ದರು. ಈ ಅಲ್ಪ ಪರಿವಾರವು ಮಹಾ ರಾಜರ ಧರ್ಮೋದ್ಧಾರದ ಕಾರ್ಯಕ್ಕೆ ದೊಡ್ಡ ಕಂಟಕಪ್ರಾಯವಾಯಿ ತೆಂಬದನ್ನು ಮುಂದೆ ವಾಚಕರು ಪ್ರಸಂಗವಶಾತ್ ಅರಿತುಕೊಳ್ಳಬಹುದು.

ಏಸಾಜಿಯೂ, ಖಂಡೇರಾಯನೂ ಮಹಾರಾಜರ ಅಪ್ಪಣೆಯಂತೆ ಜಾವಳಿಂಬ ಅರಣ್ಯವನ್ನು ಪ್ರವೇಶಿಸಿದರು. ಜಾವಳಿಯ ಅರಣ್ಯವು ಬಹು ಗಹನವಾದದ್ದೆಂದು ಮೇಲೆ ಹೇಳಿರುತ್ತದಷ್ಟೆ? ಅಲ್ಲಿ ಹಿಂಸ್ರ ಪಶುಗಳು ಬಹಳ. ಹುಲಿಗಳು ಅಲ್ಲಿ ವಿಪುಲವಾಗಿದ್ದವು. ಅದು ಹಾವುಗಳ ಆಗರ ವೆಂದರೂ ಸಲ್ಲುವುದು. ಗಿಡಗಳ ದಟ್ಟಣೆಯಿಷ್ಟೆಂದು ಹೇಳುವ ಹಾಗಿದ್ದಿಲ್ಲ. ಎಂಥ ಗೊತ್ತಿನವರಾದರೂ ಅಲ್ಲಿ ಹಾದಿಯ ತಪ್ಪಿ ಪೇಚಾಡುವ ಪ್ರಸಂಗವು ವಿಶೇಷವಾಗಿತ್ತು. ಮಹಾರಾಜರು ಪ್ರತಾಪಗಡವನ್ನು ಕಟ್ಟಿಸಿದ ಬಳಿಕ ಈ ಅರಣ್ಯದೊಳಗಿಂದ ಆ ದುರ್ಗದವರೆಗೆ ಸಾಧಾರಣ ಮಾರ್ಗವನ್ನು ಮಾಡಿಸಿದ್ದರು. ವೈರಿಗಳಿಗೆ ದುರ್ಗಮವಾಗಬೇಕೆಂತಲೇ ಅವರು ಪ್ರಶಸ್ತ ವಾದ ಮಾರ್ಗವನ್ನು ಮಾಡಿಸಿದ್ದಿಲ್ಲ; ಆದರೆ ಅಫಜುಲಖಾನನ ಸಲುವಾಗಿ ಆತನಿಗೆ ಸಮಾಧಾನವಾಗಬೇಕೆಂದು ಈಗ ಪ್ರಶಸ್ತ ಮಾರ್ಗವನ್ನು ಮಾಡಿಸ ಬೇಕಾಗಿತ್ತು. ಮೇಲೆ ಹೇಳಿದ ಮಹಾರಾಜರ ಇಬ್ಬರು ಸರದಾರರು ಅರಣ್ಯದಲ್ಲಿ ಮಾರ್ಗವನ್ನು ಹುಡುಕುತ್ತಿರಲು, ಅವರಿಬ್ಬರ ತಪ್ಪುಗಂಟಾ ಯಿತು. ಖಂಡೇರಾಯನು ಅಲ್ಲಲ್ಲಿ ಅಲೆದಾಡುತ್ತ ಹೋಗುತ್ತಿರಲು, ಆ ಗಹನಾರಣ್ಯದಲ್ಲಿ ಕಟ್ಟಿಗೆ ಕಡೆಯುತ್ತಿದ್ದ ಲಮ್ಮಾಣಿಯ ಜನರ ತಾಂಡೆಯು ಆತನ ಕಣ್ಣಿಗೆ ಬಿದ್ದಿತು. ಖಂಡೇರಾಯನು ಲಮ್ಮಾಣಿ ಜನರ ಮುಖ್ಯಸ್ಥನನ್ನು ಕುರಿತು—ಎಲಾ, ನಾನು ಶಿವಾಜಿ ಮಹಾರಾಜರ ಕಡೆ ಯಿಂದ ಬಂದಿದ್ದೇನೆ. ಮಹಾರಾಜರು ಈ ಅರಣ್ಯದೊಳಗಿಂದ ಹಾದಿಯನ್ನು ಮಾಡಿಸಬೇಕಾಗಿದೆ. ನೀವು ಹ್ಯಾಗೂ ಇಲ್ಲಿ ಕೆಲಸವನ್ನು ಮಾಡುತ್ತಿರು ವಿರಿ, ಆದ್ದರಿಂದ ನಿಮ್ಮನ್ನು ಬಿಟ್ಟಿಯ ಹಿಡಿದು ಕೆಲಸ ಮಾಡಿಸಬೇಕೆಂದು ಮಹಾರಾಜರ ಅಪ್ಪಣೆಯಾಗಿದೆ. ಹೇಳಿರಿ, ನೀವು ಕೆಲಸ ಮಾಡುವಿರೋ

ಇಲ್ಲವೊ? ನಿಮ್ಮ ಹಿಂಡಿರೊಟ್ಟಿಯ ವ್ಯವಸ್ಥೆ ಮಾಡುವ ಕೆಲಸವು ನಮ್ಮನ್ನು ಕೂಡಿತು, ಆದರೆ ನೀವು ಹಗಲುರಾತ್ರಿ ಶ್ರಮಪಟ್ಟು ಹಾದಿಯನ್ನು ಮಾಡ ಬೇಕಾಗುವದು. ವಿಜಾಪುರದ ದೊಡ್ಡ ಸೈನ್ಯವು ಈ ಮಾರ್ಗದಿಂದ ಹೋಗ ಬೇಕಾಗಿದೆ. ನೋಡಿರಿ, ನೆಟ್ಟಗೆ ಕೆಲಸ ಮಾಡಿದರೆ ಮಹಾರಾಜರ ಬಳಿ ಯಲ್ಲಿ ನಿಮ್ಮ ಶಿಫಾರಸು ಮಾಡುವೆವು, ಅನ್ನುತ್ತ, ಆ ಸರದಾರನು ತೀರ ಹತ್ತರ ಬರಹತ್ತಿದನು. ಲಮಾಣಿಯ ಮುಖ್ಯನಿಗೆ ಆ ಸರದಾರನ ಗುರುತು ಹತ್ತಿದಹಾಗಾಗುತ್ತಿತ್ತು. ಗುರುತಿನ ಮನುಷ್ಯನ ಸಂಗಡ ಮಾತಾಡಲಿಕ್ಕೆ ಆ ಮುಖ್ಯನು ಯಾಕೋ ಸಂಕೋಚಪಡಹತ್ತಿದನು. ಆತನ ಮೋರೆಯು ಹುಚ್ಚಿಟ್ಟಿತು. ಇತ್ತ ಆ ಸರದಾರನಿಗೂ ಆ ಮುಖ್ಯನ ಮೋರೆಯ ಗುರುತು ಹತ್ತಿದಹಾಗಾಗುತ್ತಿತ್ತು. ಮುಖ್ಯನು ತನ್ನ ಮನೋವಿಕಾರವನ್ನು ಮುಚ್ಚಿಕೊಳ್ಳುತ್ತ ಸರದಾರನನ್ನು ಕುರಿತು "ಸರಕಾರ, ಮಹಾರಾಜರ ಚಾಕರಿಯನ್ನು ಮಾಡಲಿಕ್ಕೆ ನಾವೆಲ್ಲಿ ಒಲ್ಲೆನೆನ್ನುವೆವು? ಇಂಥ ಸುಪ್ರಸಂಗ ವನ್ನು ನಾವು ವ್ಯರ್ಥ ಹೋಗಗೊಡಬಹುದೆ? ನಮ್ಮ ತಾಂಡೆಯ ಜನರೆ ಲ್ಲರು ಸಿದ್ಧರಿರುವರು. ನಾಲ್ಕು ದಿವಸಗಳಲ್ಲೆಂದರೆ, ನಾಲ್ಕೇ ದಿವಸಗಳಲ್ಲಿ ಹಾದಿಯನ್ನು ಸಿದ್ಧಮಾಡಿ ಕೊಡುವೆವು. ನಮ್ಮ ತಾಂಡೆಯ ಜನರು ಸಮೀಪದಲ್ಲಿಯೇ ಇರುವರು, ಅವರನ್ನು ಕರಿಸಿಕೊಳ್ಳುವೆನು.

ಆ ನಾಯಕನ ದನಿಯನ್ನು ಕೇಳಿದ ಕೂಡಲೆ ಸರದಾರನಿಗೆ ಅವನ ಗುರುತು ಮತ್ತಿಷ್ಟು ಹತ್ತಿದಂತಾಯಿತು. ಆತನು ನಾಯಕನನ್ನು ಕುರಿತು—ಏನಲೇ, ನಾನು ನಿನ್ನನ್ನು ಈ ಮೊದಲು ಎಲ್ಲಿಯೋ ನೋಡಿದ ಹಾಗೆ ಕಾಣುತ್ತದೆ. ಎಲ್ಲಿ ನೋಡಿರುವೆನು ಹೇಳು ನೋಡೋಣ?

ನಾಯಕ—ಸರಕಾರ, ನಾವು ಲಮಾಣಿ ಜನರು, ನಾವು ಒಂದು ಸ್ಥಳದಲ್ಲಿರುವವರೆ? ಎಲ್ಲಿಯಾದರೂ ತಾವು ನನ್ನನ್ನು ನೋಡಿರಬಹುದು. ಇಂಥ ಸ್ಥಳದಲ್ಲಿಯೇ ನೊಡಿದಿರೆಂದು ನಾನು ಹ್ಯಾಗೆ ಹೇಳಲಿ? ಆದರೆ ನಾನು ಮಾತ್ರ ತಮ್ಮನ್ನು ಎಲ್ಲಿಯೂ ನೋಡಿದಂತೆ ಕಾಣುವದಿಲ್ಲ. ನಮಗೆಲ್ಲಿ ನೆನಪು ಉಳಿಯಬೇಕು ಸರಕಾರ! ತಾವು ನೆನಪು ಮಾಡಿಕೊಟ್ಟರೆ ಹೌದೆಂದು ಹೇಳೇನು.

ಖಂಡೇರಾವ—ಇರಲಿ ಬಿಡು; ಏನೋ ನಾಯಕಾ, ಈ ಅರಣ್ಯ

ದೊಳಗಿಂದ ಪ್ರತಾಪಗಡದವರೆಗೆ ಹಾದಿಯನ್ನು ಮಾಡಲಿಕ್ಕೆ ಬರಬಹುದೆ? ಅಫಜುಲಖಾನನ ಸೈನ್ಯವು ಇಲ್ಲಿಂದ ಹೋಗಬೇಕಾಗಿದೆ; ಏನು ಗಹನ ಅರಣ್ಯವಿದು! ನನಗಂತೂ ಒಬ್ಬನಿಗೆ ಹೋಗಲಿಕ್ಕೆ ಧೈರ್ಯವಾಗಲೊಲ್ಲದು. ಆ ಜಾವಳಿಯ ಚಂದ್ರರಾವ ಮೋರೆಯು ಇಂಥ ಘೋರಾರಣ್ಯವನ್ನು ಯಾಕೆ ಕಾದಿಟ್ಟನೋ ತಿಳಿಯದು. ಇಂಥ ಅರಣ್ಯದಲ್ಲಿ ಆತನು ಹ್ಯಾಗ ಓಡಾಡುತ್ತಿರಬಹುದು?

ನಾಯಕ—ಸರಕಾರ, ನಿಮ್ಮ ಮಾತು ನಿಜವು. ಆ ಚಂದ್ರರಾಯನಿಗೆ ಈ ಅರಣ್ಯದೊಳಗಿಂದ ಓಡಾಡಲಿಕ್ಕೆ ಅಂಜಿಕೆಯು ಬರುತ್ತಿದ್ದಿಲ್ಲೆಂಬಂತೆ ಕಾಣುತ್ತದೆ. ಇಲ್ಲಿ ಹುಲಿಗಳೆಷ್ಟು, ಹಾವುಗಳೆಷ್ಟು! ಈಗ ತಿಂಗಳಲ್ಲಿ ನಮ್ಮ ನಾಲ್ಕು ಜನರು ಹಾವು ಕಡಿದು ಸತ್ತರು. ಏನು ಮಾಡಬೇಕು? ಕೆಟ್ಟ ಹೊಟ್ಟೆಯನ್ನಂತು ಹ್ಯಾಗಾದರೂ ತುಂಬಬೇಕಷ್ಟೆ?

ಖಂಡೇರಾವ—ಅಲ್ಲೋ? ಆ ಚಂದ್ರರಾಯನ ವೃತ್ತಾಂತವು ನಿನಗೇನಾದರೂ ಗೊತ್ತಿರುವದೆ?

ನಾಯಕ—ಅವರ ವೃತ್ತಾಂತವೇನು ಗೊತ್ತಿರಬೇಕು ಸರಕಾರ. ಅವರ ನಿರ್ವಂಶವಾಗಿ ಹೋಯಿತು!

ಖಂಡೇರಾವ—ಅವರ ಆಪ್ತರು ಯಾರೋ ಇರುತ್ತಾರೆಂದು ಜನರು ಹೇಳುತ್ತಾರಲ್ಲ?

ನಾಯಕ—ಅದು ಶುದ್ಧ ಸುಳ್ಳು.

ಖಂಡೇರಾವ—ಇಲ್ಲಿ ಯಾರೋ ಒಬ್ಬರು ಸಾಧುಗಳು ಇರುತ್ತಾರೆಂದು ಕೇಳುತ್ತೇವೆ. ನಿಜವೆ?

ನಾಯಕ—ಹೌದು, ಅಲ್ಲಿ ಹಳ್ಳದ ದಂಡೆಯ ಮೇಲೆ ಒಬ್ಬರು ಸಾಧುಗಳು ಇರುತ್ತಾರೆ. ನಾನು ಒಮ್ಮೆ ಅವರ ಬಳಿಗೆ ಹೋಗಿದ್ದೆನು, ಅವರು ಮಾತಾಡುವದಿಲ್ಲ, ಕಥೆಯಾಡುವದಿಲ್ಲ. ಅವರ ಬಳಿಗೆ ಹೋಗುವದರಲ್ಲೇನೂ ಅರ್ಥವಿಲ್ಲ.

ಖಂಡೇರಾವ—ನಾಯಕಾ, ನನ್ನ ಮುಂದೆ ಸುಳ್ಳಾಡಬೇಡ. ನೀನು ನಿಜವಾಗಿ ಖಪ್ರಾಣಿಯೇ ಇರುವೆಯಾ?

ನಾಯಕ—ಲವಾಣಿಯಲ್ಲದೆ ನಾನೇನು ಅರಸನಿರುವೆನೆ? ನನ್ನನ್ನೇಕೆ ಇಷ್ಟು ಕೆದರಿ ಕೆದರಿ ಕೇಳುವುದು ಸರಕಾರ!

ಖಂಡೇರಾವ—ನಿನ್ನ ನಿಜವಾದ ಸಂಗತಿಯನ್ನು ಹೊರಗೆಡವುವದಕ್ಕಾಗಿಯೇ ನಾನು ಇಲ್ಲಿಗೆ ಬಂದಿರುವೆನು. ನೀನು ಚಂದ್ರರಾವ ಮೋರೆಯ ಆಶ್ರಿತನಾದ ತುಳಾಜಿರಾಯನಲ್ಲವೆ? ಹೇಳು ಕಳ್ಳತನವೇಕೆ?

ಇದನ್ನು ಕೇಳಿ ಆ ನಾಯಕನು ಬೆದರಿದನು. ಆದರೂ ಅದನ್ನು ತೋರಗೊಡದೆ ಖಂಡೇರಾಯನನ್ನು ದಿಟ್ಟಿಸಿ ನೋಡುತ್ತ—ನೀನು ಇನ್ನು ಇಲ್ಲಿಂದ ಪಾರಾಗಿ ಹೋಗಲಾರೆ! ನಿನ್ನನ್ನು ಹೊಡೆದು ಇಲ್ಲಿಯೇ ಹುಗಿದು ಮುಚ್ಚುವೆನು.

ಖಂಡೇರಾವ—ಅದಾವನು ನನ್ನಕೂದಲನ್ನು ಕೊಂಕಿಸುವನು ನೋಡುತ್ತೇನೆ. ತುಳಾಜಿರಾವ, ನನ್ನ ಸಂಗಡಲೂ ಹುಡುಗಾಟಿಕೆಯೇ?

ಖಂಡೇರಾಯನ ಈ ಮಾತುಗಳನ್ನು ಕೇಳಿ ತುಳಾಜಿರಾಯನು ಒಂದು ಸಿಳ್ಳು ಹಾಕಿದನು. ಅದನ್ನು ನೋಡಿ ಖಂಡೇರಾಯನು ನಕ್ಕು—"ತುಳಾಜಿರಾವ, ನನ್ನ ಗುರುತು ನಿಮಗೆ ಸಿಗಲಿಲ್ಲವೆ? ನಾನು ಚಂದ್ರರಾವ ಮೋರೆಯ ಸೋದರಳಿಯನು. ನಿಮ್ಮ ವೈರಿಯಾದ ಶಿವಾಜಿಯೇ ನನ್ನ ವೈರಿಯು. ನಮ್ಮ ಮಾವನನ್ನು ಶಿವಾಜಿಯು ಮೋಸದಿಂದ ಕೊಂದಿರುವನಷ್ಟೆ? ಅದರ ಸೇಡನ್ನು ತೀರಿಸಿಕೊಳ್ಳುವದಕ್ಕಾಗಿ ನಾನು ಈಗ ಶಿವಾಜಿಯ ಆಶ್ರಯವನ್ನು ಮಾಡಿರುವೆನು. ಶಿವಾಜಿಯು ನನ್ನನ್ನೂ, ತನ್ನ ಬಾಲಮಿತ್ರನಾದ ಏಸಾಜಿ ಕಂಕನನ್ನೂ ಈ ಅರಣ್ಯಕ್ಕೆ ಮಾರ್ಗವನ್ನು ನೋಡಲಿಕ್ಕೆ ಕಳಿಸಿರುತ್ತಾನೆ. ನೀವೆಲ್ಲರೂ ನಡಿಸಿರುವ ಗುಪ್ತತಂತ್ರವೆಲ್ಲ ನನಗೆ ಗೊತ್ತಿದೆ. ನಿಮ್ಮ ಕೆಲಸವು ಸನಿಯಕ್ಕೆ ಬಂದಿರಬಹುದು. ವೈರಿಯನ್ನು ನಾಶಗೊಳಿಸುವದಕ್ಕೆ ವಿಲಂಬ ಮಾಡಬಾರದು. ಈಗ ಅಫಜುಲಖಾನನ ಗದ್ದಲವೆದ್ದಿರುವದರಿಂದ, ಈ ಗದ್ದಲದಲ್ಲಿಯೇ ನಾವು ನಮ್ಮ ಸೇಡನ್ನು ತೀರಿಸಿಕೊಳ್ಳಬೇಕು. ಹಿಂದಿನಿಂದ ಆ ವಿಶ್ವಾಸಘಾತಕಿಯಾದ ಶಿವಾಜಿಯನ್ನು ಕೊಲ್ಲುವದು ನಮ್ಮಿಂದಾಗದು. ಹೋಗು, ನಾನು ಇನ್ನೊಮ್ಮೆ ಸಾವಕಾಶವಾಗಿ ಬಂದು ನಿಮ್ಮೆಲ್ಲರನ್ನು ಕಾಣುವೆನು. ಆ ಏಸಾಜಿಯೂ ಎಲ್ಲಿಯಾದರೂ ಇತ್ತ ಕಡೆಗೆ ಬಂದಗಿಂದಾನು. ನಮ್ಮ ಗೂಢವು ಹೊರಬಿದ್ದರೆ, ಇಷ್ಟು ದಿನ ಕಷ್ಟಪಟ್ಟಿದ್ದೆಲ್ಲ

ವ್ಯರ್ಥವಾದೀತು. ನಾನು ಅಫಜುಲಖಾನನನ್ನು ನನ್ನ ಕಡೆಗೆ ಮಾಡಿಕೊಂಡಿದ್ದೇನೆ. ನಮ್ಮಿಬ್ಬರ ಕಾರ್ಯವು ಒಂದೇ ಆಗಿರುವದರಿಂದ ನಮ್ಮಿಬ್ಬರ ಸ್ನೇಹವು ಸಹಜವಾಗಿ ಕೂಡಿದೆ. ಒಟ್ಟಿಗೆ ಒಂದಿಲ್ಲೊಂದು ಬಗೆಯಿಂದ ಶಿವಾಜಿಯನ್ನು ನಾಶಗೊಳಿಸತಕ್ಕದ್ದು. ನಾನು ಈಗ ಹೋಗುವೆನು. ನೀವೆಲ್ಲರೂ ಬಹು ಜಾಗರೂಕರಾಗಿರತಕ್ಕದ್ದು. ಇನ್ನು ಆದಷ್ಟು ಬೇಗನೆ ಕಾರ್ಯವನ್ನು ಸಾಧಿಸಿಬಿಡಿರಿ.

ಈ ಮೇರೆಗೆ ನುಡಿದು ಖಂಡೇರಾಯನು ತನ್ನ ಕುದುರೆಯನ್ನು ಒತ್ತರದಿಂದ ಓಡಿಸುತ್ತ ನಡೆದನು. ತುಳಾಜಿರಾಯನು ಬೆರಗಾಗಿ ಚಿತ್ರದಗೊಂಬೆಯಂತೆ ನಿಂತುಕೊಂಡನು. ಖಂಡೇರಾಯನು ಏಸಾಜಿಯನ್ನು ಕಂಡು, ಆತನನ್ನು ಇತ್ತಕಡೆಯಿಂದ ಬೇರೆ ಕಡೆಗೆ ಕರೆದುಕೊಂಡು ಹೋಗಬೇಕಾಗಿತ್ತು. ಆತನು ಕುದುರೆಯನ್ನು ಓಡಿಸುತ್ತ ಹೊಗುತ್ತಿರಲು, ಏಸಾಜಿಯ ಭೆಟ್ಟಿಯು ಆತನಿಗಾಯಿತು. ಆಗ ಏಸಾಜಿಯು ಖಂಡೇರಾಯನನ್ನು ಕುರಿತು—ಇಷ್ಟು ಹೊತ್ತು ನೀವು ಎತ್ತಕಡೆಗೆ ಹೋಗಿದ್ದಿರಿ? ನೀವು ನೋಡಿದ ಸ್ಥಳವು ಮಾರ್ಗಮಾಡಲಿಕ್ಕೆ ಅನುಕೂಲವಾಗಿರುವದೆ? ಎಂದು ಕೇಳಲು, ಖಂಡೇರಾಯನು—ಇತ್ತಕಡೆಯ ಈ ಅರಣ್ಯವು ಬಹು ಗಹನವಾದದ್ದದೆ. ಗಿಡಗಳ ದಟ್ಟಣೆ ಬಹಳ. ಅಲ್ಲಿಂದ ಮಾರ್ಗಮಾಡುವದು ಬಹು ದುಸ್ತರವು. ಮಾರ್ಗದ ಎಡಬಲದಲ್ಲಿ ಅಲ್ಲಲ್ಲಿಗೆ ಪಾಂತಸ್ಥರಿಗೆ ಅನುಕೂಲವಾದ ವ್ಯವಸ್ಥೆಯನ್ನು ಮಹಾರಾಜರು ಮಾಡಬೇಕಾಗಿರುವದರಿಂದ, ಈ ಭಾಗವು ಮಾರ್ಗಮಾಡಲಿಕ್ಕೆ ಸರ್ವಥಾ ಯೋಗ್ಯವಲ್ಲ; ಆದ್ದರಿಂದ ನಾವು ಎರಡನೆಯ ಕಡೆಗೆ ನೋಡೋಣ. ಮಾರ್ಗವನ್ನು ಎಲ್ಲಿಂದ ಒಯ್ಯಬೇಕೆಂಬದು ನಿಶ್ಚಯವಾದ ಬಳಕ, ಈ ಅರಣ್ಯದಲ್ಲಿರುವ ಆ ಲಮಾಣಿಜನರ ಉಪಯೋಗವನ್ನು ನಮ್ಮ ಕೆಲಸಕ್ಕೆ ಮಾಡಿಕೊಳ್ಳಬಹುದು. ಅವರ ನಾಯಕನನ್ನು ನಾನು ಇದೇ ಈಗ ಕಂಡೆನು. ಮಹಾರಾಜರ ಕೆಲಸವನ್ನು ಮಾಡಲಿಕ್ಕೆ ಆತನ ಉತ್ಸುಕತೆಯೆಷ್ಟು! ಮಹಾರಾಜರು ಈ ಕಾರ್ಯವನ್ನು ಮಾಡಲಿಕ್ಕೆ ನನ್ನನ್ನು ಆಜ್ಞಾಪಿಸಿದರೆ ನಾನು ಸಿದ್ಧನಾಗಿರುವೆನು, ಎಂದು ಆ ನಾಯಕನು ಹೇಳಿದನು. ಏನು ಏಸಾಜೀ, ಸಣ್ಣ ಜನರಿಂದ ದೊಡ್ಡವರವರೆಗೆ ಮಹಾರಾಜರ ಮೇಲೆ ಜನರ ಭಕ್ತಿಯೆಷ್ಟು? ಅದನ್ನು ನೋಡಿದರೆ

ನನಗೆ ಪರಮಾಶ್ಚರ್ಯವಾಗುತ್ತದೆ. ಮಹಾರಾಜರ ಕೆಲಸವೆಂದರೆ ತಮ್ಮ ಪ್ರಾಣಕೊಡಲಿಕ್ಕೆ ಕೂಡ ಜನರು ಸಿದ್ಧರಿರುವರೆಂದ ಬಳಿಕ, ಇದಕ್ಕೆ ಆಶ್ಚರ್ಯದ ಸಂಗತಿಯೇನು? ಆ ಲಮಾಣಿಯ ನಾಯಕನ ಸಂಗಡ ನಾನು ಮಾತಾಡುವಾಗ ನೀವು ಇದ್ದರೆ ನಿಮಗೂ ಆಶ್ಚರ್ಯವಾಗುತ್ತಿತ್ತು. ಆತನು ನನಗೆ—"ಸರಕಾರ, ಇಷ್ಟೇ ಅಡವಿಯನ್ನೇಕೆ, ಮಹಾರಾಜರ ಸಲುವಾಗಿ ನಾವು ಬೇಕಾದ ಅಡವಿಯನ್ನು ಕಡಿದು ಹದಿನೈದು ದಿವಸಗಳಲ್ಲಿ ಹಾದಿಯನ್ನು ಮಾಡಿಕೊಡುವೆವು. ನಡೆಯಿರಿ ಯಾವ ಅಡವಿಯನ್ನು ಕಡಿಯ ಬೇಕು ಹೇಳಿರಿ. ಬರಿಯ ಅಡವಿಯನ್ನೇ ಏಕೆ ಮಹಾರಾಜರು ನಮ್ಮ ಅವಯವಗಳನ್ನು ಕಡಿದುಕೊಡಹೇಳಿದರೆ ಕಡಿದುಕೊಡುವೆವು" ಎಂದು ಹೇಳಿದನು. ಲಮಾಣಿಯ ಯೋಗ್ಯತೆಯೇನು, ಆವನ ಭಕ್ತಿಯೆಷ್ಟು! ಮಹಾರಾಜರು ಅವತಾರಿಕರೆನ್ನಲಿಕ್ಕೆ ಬೇರೆ ಸಾಕ್ಷಿಯೇನು ಬೇಕಾಗಿದೆ? ನನ್ನ ಸುದೈವದಿಂದಲೆ ಮಹಾರಾಜರು ನನಗೆ ಆಶ್ರಯ ಕೊಟ್ಟಿರುವರು. ಅವರ ಸೇವೆಯಲ್ಲಿ ನಾನು ನನ್ನ ದೇಹವನ್ನು ಸವಿಸಲು ನಿಶ್ಚಯಿಸಿದ್ದೇನೆ. ನಡೆಯಿರಿ. ಇತ್ತಕಡೆಯ ಅರಣ್ಯಭಾಗವು ಮಾರ್ಗವನ್ನು ಮಾಡಲಿಕ್ಕೆ ಅನುಕೂಲವಾದದ್ದಲ್ಲ. ಬೇರೊಂದು ಕಡೆಗೆ ಯೋಗ್ಯಸ್ಥಳ ನೋಡಿ ಲಮಾಣಿಗಳ ಕಡೆಯಿಂದ ಬೇಗನೆ ಮಾರ್ಗವನ್ನು ಮಾಡಿಸಿಕೊಳ್ಳೋಣ, ಎಂದು ಹೇಳಿ ಆತನು ತನ್ನ ಕುದುರೆಯನ್ನು ಬೇರೆ ಕಡೆಗೆ ಹೊರಳಿಸಿ ಮುಂದಕ್ಕೆ ಸಾಗಿದನು; ಆದರೆ ಏಸಾಜಿಯು ಆತನನ್ನು ಹಿಂಬಾಲಿಸದೆ ಆತನನ್ನು ಕುರಿತು—ಖಂಡೇರಾವ, ನಾನೂ ಒಮ್ಮೆ ಕಣ್ಣುಮುಟ್ಟಿ ಈ ಅಡವಿಯನ್ನು ನೋಡಿ ಬರುತ್ತೇನೆ. ನಾಲ್ಕುವರ್ಷಗಳ ಹಿಂದೆ ನಾನು ಈ ಅಡವಿಯನ್ನು ನೋಡಿರುವೆನು. ಇಷ್ಟರಲ್ಲಿ ಗಿಡಗಳು ಅಷ್ಟು ದಟ್ಟವಾಗಿ ಹ್ಯಾಗೆ ಬೆಳೆದವು? ಇತ್ತಕಡೆಯಿಂದಲೇ ಮಾರ್ಗವನ್ನು ಮಾಡಿಸಿದರೆ, ಒಳಕೈ ಆಗಿ ಮಾರ್ಗವು ಬೇಗನೆ ಸಿದ್ಧವಾಗುವದು. ನೀವು ಆ ಲಮಾಣಿಯ ಜನರ ಮಾತಿನ ಮೇಲೆ ಹೋಗಬಾರದು. ಅರಣ್ಯವನ್ನು ನೋಡುವ ಅವರ ದೃಷ್ಟಿಯು ಬೇರೆ, ನಮ್ಮ ದೃಷ್ಟಿಯು ಬೇರೆ, ಎಂದು ನುಡಿಯುತ್ತ, ಖಂಡೇರಾಯನು ಬೇಡೆನ್ನುವ ದಿಕ್ಕಿಗೇ, ಆತನು ಕುದುರೆಯನ್ನು ಹೊರಳಿಸಿದನು. ಆಗ ಖಂಡೇರಾಯನು ಅಸಹ್ಯಪಟ್ಟುಕೊಳ್ಳುತ್ತ—ಏಸಾಜೀ, ನಿಮ್ಮಂತೆ ನಾನೂ

ಈ ಅರಣ್ಯವನ್ನು ನೋಡಿದ್ದೇನೆ. ನನ್ನ ಆಯುಷ್ಯವು ಬಹುದಿವಸ ಇದೇ ಪ್ರಾಂತದಲ್ಲಿ ಹೋಗಿರುತ್ತದೆ. ಆದ್ದರಿಂದ ನನ್ನ ಅಭಿಪ್ರಾಯಕ್ಕೂ ಬೆಲೆಯಿರುವದು. ಇತ್ತ ಕಡೆಯಿಂದ ಮಾರ್ಗವನ್ನು ಮಾಡಲಿಕ್ಕೆ ಅನುಕೂಲವಿಲ್ಲದಿರಲು, ಇತ್ತಕಡೆಯಿಂದಲೇ ಮಾರ್ಗಮಾಡಬೇಕೆಂದು ನಿಮ್ಮ ಹಟವೇಕೆ? ಒನ್ಮೆ ನನ್ನ ಮಾತನ್ನು ಕೇಳಿನೋಡಿರಿ. ನಾನೂ ಪೂರ್ಣ ವಿಚಾರ ಮಾಡಿ ಹೇಳುತ್ತೇನೆ. ಇತ್ತಕಡೆಯಿಂದ ಮಾರ್ಗಮಾಡುವದು ಸರಿಯಲ್ಲ, ಎಂದು ಹೇಳಿದನು; ಆದರೆ ಏಸಾಜಿಯು ಆವನ ಮಾತನ್ನು ಲಕ್ಷಿಸಲಿಲ್ಲ. ನಾನೂ ಒಂದುಸಾರೆ ಕಣ್ಣುಮುಟ್ಟಿ ನೋಡಿಬರುತ್ತೇನೆ, ಎಂದು ಹೇಳಿ, ತನ್ನ ಕುದುರೆಯನ್ನು ಒತ್ತರದಿಂದ ನೂಕಿದನು. ಆಗ ಖಂಡೇರಾಯನೂ ನಿರ್ವಾಹವಿಲ್ಲದೆ, ಏನೋ ಯೋಚಿಸಿ, ಆ ಲಮಾಣಿಯ ಮುಖ್ಯನನ್ನು ಎಚ್ಚರಗೊಳಿಸುವ ಉದ್ದೇಶದಿಂದ ಏಸಾಜಿಯ ಬೆನ್ನಹತ್ತಿ ತಾನೂ ನಡೆದನು.

೮ನೆಯ ಪ್ರಕರಣ

ಏಸಾಜಿಯ ಸಾಹಸವು.

ಹೀಗೆ ಖಂಡೇರಾಯನಮಾತನ್ನು ಕೇಳದೆ ಕುದುರೆಯನ್ನು ಓಡಿಸುತ್ತ ಸಾಗಿದ ಏಸಾಜಿಯು ಒಂದೇ ಸಮನೆ ಮುಂದಕ್ಕೆ ಭರದಿಂದ ಸಾಗಿಬಿಟ್ಟನು. ನೋಡ ನೋಡುತ್ತ ಆತನ ಕುದುರೆಯು ಖಂಡೇರಾಯನಿಗೆ ಕಾಣದಾಯಿತು. ಏಸಾಜಿಯು ತನ್ನ ಕುದುರೆಯನ್ನು ಓಡಿಸುತ್ತ ಕೆಲವು ದೂರದವರೆಗೆ ಹೋದಬಳಿಕ, ಕುದುರೆಯನ್ನು ಸಾವಕಾಶವಾಗಿ ಬಿಟ್ಟನು. ಆತನು ಮಾರ್ಗವನ್ನು ಕ್ರಮಿಸುತ್ತಿರುವಾಗ ಯಾರೋ ಮೆಲ್ಲಗೆ ಮಾತಾಡಿದಂತೆ ಕೇಳಿಸಿತು. ಆತನು ಕುದುರೆಯನ್ನು ನಿಲ್ಲಿಸಿ ಕಿವಿಗೊಟ್ಟು ಕೇಳಹತ್ತಿದನು; ಆದರೆ ಮಾತಿನ ಸುಳವು ಕೇಳದಾಯಿತು. ಇಂಥ ಕಟ್ಟಡವಿಯಲ್ಲಿ ಜನರು ಯಾರು ಮಾತಾಡುತ್ತಿರಬಹುದೆಂಬದನ್ನು ತಿಳಕೊಳ್ಳುವ ಇಚ್ಛೆಯು ಏಸಾಜಿಗೆ

ಉತ್ಪನ್ನವಾಯಿತು. ಆತನು ಕುದುರೆಯನ್ನು ಒಂದು ಗಿಡಕ್ಕೆ ಕಟ್ಟಿ, ಮಾತಿನ ಸುಳವನ್ನು ಕಿವಿಗೊಟ್ಟು ಕೇಳಹತ್ತಿದನು. ಸ್ವಲ್ಪ ಹೊತ್ತಿನ ಮೇಲೆ ಎಲ್ಲಿಯೋ ನೆಲದಲ್ಲಿ ಮಾತಾಡಿದಂತೆ ಆತನಿಗೆ ಕೇಳಿಸಿತು. ಎಲ್ಲ ಶಬ್ದಗಳು ಸ್ಪಷ್ಟವಾಗಿ ಕೇಳಿಸಲಿಲ್ಲ. "ಇನ್ನೂ ಎಷ್ಟು ದಿವಸ" ಎಂಬ ಶಬ್ದಗಳು ಮಾತ್ರ ಸ್ಪಷ್ಟವಾಗಿ ಕೇಳಿಸಿದವು. ಇವನ್ನು ಕೇಳಿದಬಳಿಕಂತು ಏಸಾಜಿಯ ಕುತೂಹಲವು ಹೆಚ್ಚಾಯಿತು. ನೆಲದೊಳಗಿನ ಗುಹೆಯಲ್ಲಿ ಮಾತಾಡಿದಂತೆ, ಆತನಿಗೆ ಭಾಸವಾಗಹತ್ತಿತು. ಇಂಥ ಅರಣ್ಯದಲ್ಲಿ ಗುಹೆಯು ಎಲ್ಲಿ ಇರಬಹುದು? ಆ ಗುಹೆಯಲ್ಲಿ ಯಾರು ವಾಸಿಸುತ್ತಿರಬಹುದು? ಅವರು ಕಳ್ಳರಿರಬಹುದೆ? ಕಳ್ಳರ ತಂಡಗಳು ತಮ್ಮ ಸುಲಿಗೆಯನ್ನು ಇಂಥ ಗುಹೆಗಳಲ್ಲಿ ಇಡುತ್ತಿರಬಹುದೇನು? ಮಹಾರಾಜರು ದಕ್ಷಿಣದೊಳಗಿನ ಕಳ್ಳರ ತಂಡಗಳನ್ನೆಲ್ಲ ಉಪದೇಶದಿಂದ ತಮ್ಮ ದಂಡಿನಲ್ಲಿ ಸೇರಿಸಿಕೊಂಡು, ಸ್ವಧರ್ಮೋದ್ಧಾರದ ಕಾರ್ಯಕ್ಕೆ ಸಹಾಯಕರನ್ನಾಗಿ ಮಾಡಿಕೊಂಡಿರುವರು. ಹೀಗಿರಲು, ಈ ಕಳ್ಳರ ತಂಡವು ಎಲ್ಲಿ ತಪ್ಪಿ ಉಳಿದಿರಬಹುದು? ಈ ಗುಹೆಯಲ್ಲಿ ಸಂಚಿತಧನವು ಸಿಕ್ಕರೆ, ಮಹಾರಾಜರ ಸ್ವದೇಶೋದ್ಧಾರದ, ಹಾಗು ಸ್ವಧರ್ಮೋದ್ಧಾರದ ಕಾರ್ಯಕ್ಕೆ ಸಹಾಯವಾಗಲಿಕ್ಕಿಲ್ಲವೆ? ಹ್ಯಾಗಿದ್ದರೂ ನಾನು ಈ ಗುಹೆಯ ಗೊತ್ತು ಹಚ್ಚಲೇಬೇಕು, ಎಂದು ನಿಶ್ಚಯಿಸಿ, ಆತನು ಗುಹೆಯ ಮುಖವನ್ನು ಹುಡುಕಹತ್ತಿದನು.

ಏಸಾಜಿಯು ಗುಹೆಯ ಮುಖವನ್ನು ಲಕ್ಷ್ಯಪೂರ್ವಕವಾಗಿ ಶೋಧಿಸುತ್ತಿರುವಾಗ ಒಂದು ಹೊದರು ಆತನ ಕಣ್ಣಿಗೆ ಬಿದ್ದಿತು. ಅದರಲ್ಲಿ ಒಬ್ಬ ಮನುಷ್ಯನು ಬಹು ಪ್ರಯಾಸದಿಂದ ಹೋಗಬಹುದಾಗಿತ್ತು. ಏಸಾಜಿಯು ತನ್ನ ಉಡಿಗೆ-ತೊಡಿಗೆಗಳನ್ನು ಸಾವರಿಸಿಕೊಂಡು, ಬಿಲವನ್ನು ಪ್ರವೇಶಿಸಿದನು. ಆತನು ಮೊದಲು ಹೊಟ್ಟೆಹೊಸೆಯುತ್ತ, ಆ ಮೇಲೆ ಕುಳಿತುಕೊಂಡು ಸರಿಯುತ್ತ ೮-೧೦ ಮೊಳ ಮುಂದಕ್ಕೆ ಸಾಗಿದನು; ಆದರೆ ಮುಂದೆ ಆತನಿಗೆ ಹಾದಿಯು ಸಿಗಲಿಲ್ಲ. ಹೀಗೆ ಅಪೂರ್ಣವಾದ ಗುಹೆಯನ್ನು ಯಾಕೆ ಮಾಡಿರಬಹುದೆಂಬದರ ಕಾರಣವು ಆತನಿಗೆ ತಿಳಿಯದಾಯಿತು. ಏಸಾಜಿಯು ನಿರುಪಾಯನಾಗಿ ಹಿಂದಕ್ಕೆ ತಿರುಗಿಬಂದು, ಮತ್ತೆ ಗುಹೆಯ ಮುಖವನ್ನು ಹುಡುಕಹತ್ತಿದನು. ಆತನು ಒಂದರ ಹಿಂದೆ ಒಂದರಂತೆ

ಬೇಸರಿಯದೆ ಐದು ಮುಖಗಳನ್ನು ಹೊಕ್ಕು ನೋಡಿದನು; ಆದರೆ ಅವೆಲ್ಲವು ಮೊದಲನೆಯ ಮುಖದಂತೆ ಅಪೂರ್ಣವಾಗಿಯೇ ಇದ್ದವು. ಹೀಗೆ ಐದು ಗುಹೆಗಳನ್ನು ಅಪೂರ್ಣವಾಗಿ ತೋಡುವದರ ಉದ್ದೇಶವೇನಿರಬಹುದು? ತಮ್ಮ ಗುಹೆಯ ನಿಜವಾದ ಮುಖವು ಬೇಗನೆ ಸಿಗಬಾರದೆಂತಲೂ ಶೋಧಕರು ಬೇಸತ್ತು ಗುಹೆಯನ್ನು ಶೋಧಿಸುವ ಗೊಡವಿಗೆ ಹೋಗಬಾರದೆಂತಲೂ ಈ ಯುಕ್ತಿಯನ್ನು ಮಾಡಿರಬಹುದೇನು? ನಾನು ಗುಹೆಯ ಶೋಧದ ಹಂಬಲವನ್ನು ಬಿಟ್ಟುಬಿಡಲಾ? ಇಷ್ಟು ಹೊತ್ತು ಪಟ್ಟ ಶ್ರಮವು ವ್ಯರ್ಥವಾಯಿತಲ್ಲ! ನಾನು ಬಂದ ಕೆಲಸವೇನು, ಮಾಡುವ ಕೆಲಸವೇನು? ಈ ಗುಹೆಯ ಶೋಧದಿಂದ ಮಹಾರಾಜರ ಕಾರ್ಯಕ್ಕೆ ಪ್ರಯೋಜನವಾಗಬಹುದೇ? ಯಾರಿಗೆ ಗೊತ್ತು. ಇದರಿಂದಲೇ ದೊಡ್ಡ ಪ್ರಯೋಜನವಾಗುತ್ತಿರಬಹುದು. ಈಗ ನಿರರ್ಥಕ ಶ್ರಮದಿಂದ ನನಗೆ ಬೇಸರವಾಗಿದ್ದರೂ, ನಾನು ಇಷ್ಟಕ್ಕೆ ಬಿಡದೆ ಹಿಡಿದ ಕೆಲಸವನ್ನು ಕೊನೆಗಾಣಿಸಲೇಬೇಕು. ನನ್ನ ಕುದುರೆ ಕಟ್ಟಿದ ಗಿಡವು ಯಾವ ಕಡೆಗೆ ಉಳಿದಿರಬಹುದು? ನನ್ನ ಬೆನ್ನ ಮೇಲೆಯೇ ಬಂದ ಖಂಡೇರಾಯನು ಎತ್ತ ಕಡೆಗೆ ಹೋಗಿರಬಹುದು? ಆಗಲಿ, ಗುಹೆಯ ಶೋಧವನ್ನಂತು ಮಾಡಿಯೇ ತಿರುವೆನು. ಗುಹೆಯಲ್ಲಿ ಏನೋ ಗೂಢವಿದ್ದಂತೆ ತೋರುತ್ತದೆ. ಅದರ ದ್ವಾರವು ಇಲ್ಲಿಯೇ ಎಲ್ಲಿಯಾದರೂ ಇರಬಹುದು.

ಈ ಮೇರೆಗೆ ನಿಶ್ಚಯಿಸಿ ಏಸಾಜಿಯು ಗುಹೆಯ ದ್ವಾರವನ್ನು ಹುಡುಕುತ್ತ ಸಾಗಿದನು. ಕೆಲವು ಅಂತರವನ್ನು ಕ್ರಮಿಸಿ ಹೋದಬಳಿಕ ಗಿಡದ ಬುಡದಲ್ಲಿ ಒಂದು ಗುಡಿಸಿಲವು ಅವನ ಕಣ್ಣಿಗೆ ಬಿದ್ದಿತು. ಆ ಗುಡಿಸಿಲಿನ ಬಾಗಿಲಲ್ಲಿ ಒಬ್ಬ ಭಯಂಕರ ಪುರುಷನು ಕುಳಿತುಕೊಂಡು ಹಾಡುತ್ತಲಿದ್ದನು. ಇವನು ಯಾರು? ಇಲ್ಲಿ ಯಾಕೆ ಕುಳಿತುಕೊಂಡಿರುವನು? ಎಂಬುವನ್ನು ಕೇಳುವದಕ್ಕಾಗಿ ಆತನು ಮುಂದಕ್ಕೆ ಹೋಗಲು, ಆ ಮನುಷ್ಯನ ಉಗ್ರರೂಪವು ಚನ್ನಾಗಿ ವ್ಯಕ್ತವಾಯಿತು. ಅವನ ಮೈಬಣ್ಣ ಇದ್ದಲಿಗಿಂತ ಕಪ್ಪು. ಕಣ್ಣು, ಒಂದು ಕಾಶಿಯ ಕಡೆಗಿದ್ದರೆ ಒಂದು ರಾಮೇಶ್ವರದ ಕಡೆಗೆ. ಕೂದಲುಗಳು ಬಹುಬಿರಸು. ಮೇಲೆ ಹೇಳಿದಂತೆ ವಿಲಕ್ಷಣವಾಗಿದ್ದ ಆವನ ಮೆಳ್ಳಗಣ್ಣುಗಳು ಕೆಂಪಗೆ ಗುಲಗಂಜಿಯ ಹಾಗೆ ಇದ್ದವು. ಅವುಗಳೊಳ

ಗಿಂದ ಒಂದೇ ಸವನೆ ನೀರುಗಳು ಸೋರುತ್ತಿದ್ದವು. ಮೇಲಿನ ತುಟಿಯು ಕತ್ತರಿಸಿದಹಾಗೆ ಇದ್ದು, ಅದರೊಳಗಿಂದ ಮುಂದಿನ ಹಲ್ಲುಗಳು ಹೊರಗೆ ಹಾದುಬಂದಿದ್ದವು. ಅವನನ್ನು ನೋಡಿದ ಕೂಡಲೆ ಏಸಾಜಿಗೆ ಪ್ರಾಚೀನ ಕಾಲದ ರಾಕ್ಷಸರ ಸ್ಮರಣವಾಯಿತು. ಆ ಕ್ರೂರ ಮನುಷ್ಯನ ಧ್ವನಿಯು ಬಹು ಭಯಪ್ರದ. ಅರಣ್ಯದ ಕ್ರೂರಪ್ರಾಣಿಗಳ ಧ್ವನಿಗಳ ಮಿಶ್ರಣದಿಂದ ಅದು ಉಂಟಾಗಿತ್ತೆಂದು ಹೇಳಬಹುದು. ಏಸಾಜಿಯು ಅವನ ಬಳಿಗೆ ಹೋಗಿ "ಯಾಕೋ ಏ ನೀನು ಯಾವನು? ಒಬ್ಬನೆ ಈ ಅರಣ್ಯದಲ್ಲಿ ಕುಳಿತು ಏನು ಮಾಡುತ್ತಿ?" ಎಂದು ಕೇಳಿದನು; ಆದರೆ ಅದು ಆ ಮನುಷ್ಯನ ಲಕ್ಷ್ಯದಲ್ಲಿಯೇ ಬಂದಂತೆ ತೋರಲಿಲ್ಲ. ಆತನ ಭಯಂಕರ ಗಾಯನವು ಒಂದೇ ಸವನೆ ನಡೆದಿತ್ತು. ಏನು ಮಾಡಿದರೂ ಅದು ಕಡಿಮೆಯಾಗಲೊಲ್ಲದು. ಆಗ ಏಸಾಜಿಯು ಅವನನ್ನು ಅಲ್ಲಾಡಿಸಿ ಎಚ್ಚರಗೊಳಿಸಬೇಕೆಂದು ಆತನ ಹೆಗಲಮೇಲೆ ಕೈಯಿಟ್ಟು ಅಲ್ಲಾಡಿಸಿ ಗಟ್ಟಿಯಾಗಿ ಮಾತಾಡಿಸಿದನು. ಆಗ ಆ ಭಯಂಕರ ಮನುಷ್ಯನು ನೊಣಜಾಡಿಸಿಕೊಂಡಂತೆ ಏಸಾಜಿಯ ಕೈಯ್ಯನ್ನು ಕೊಸರಿ ಒಗೆದನು. ಬರಬರುತ್ತ ಗಾಯನದೊಡನೆ ಅಭಿನಯಕ್ಕೆ ಆರಂಭವಾಯಿತು. ಆ ಭಯಂಕರ ಮನುಷ್ಯನು ಗಹಗಹಿಸಿ ನಗುತ್ತ, ಗುಡಿಸಿಲದ ಹತ್ತರದಲ್ಲಿದ್ದ ಒಂದು ಹೊದರಿನೊಳಗಿಂದ ಒಂದು ಭಯಂಕರವಾದ ನಾಗರಹಾವನ್ನು ತಕ್ಕೊಂಡು, ಅದನ್ನು ಒಮ್ಮೆ ಕೊರಳಿಗೆ ಸುತ್ತಿಕೊಳ್ಳುತ್ತ, ಒಮ್ಮೆ ಹೆಗಲಮೇಲೆ ಹಾಕಿಕೊಳ್ಳುತ್ತ ಅದರೊಡನೆ ಆಟವಾಡುತ್ತ ಕುಣಿಯಹತ್ತಿದನು. ಇದನ್ನು ನೋಡಿ ಆ ಕೆಚ್ಚೆದೆಯ ಏಸಾಜಿಯು ಸ್ವಲ್ಪ ಅಂಜಿದನು. ಏನುಮಾಡಿದರೂ ಆ ಮನುಷ್ಯನು ಮಾತಾಡಲೊಲ್ಲನು. ಅವನ ಮಾತುಗಳಾದರೂ ಏಸಾಜಿಗೆ ತಿಳಿಯುತ್ತಿದ್ದವೋ ಇಲ್ಲವೋ ಎಂಬದನ್ನು ಹೇಳಲಿಕ್ಕಾಗುವಂತೆಯಿದ್ದಿಲ್ಲ; ಯಾಕಂದರೆ ಅವನ ಹಾಡಿನೊಳಗಿನ ಒಂದು ಶಬ್ದವು ಕೂಡ ಏಸಾಜಿಗೆ ತಿಳಿಯಲಿಲ್ಲ.

ಈ ಕ್ರೂರಮನುಷ್ಯನು ಹುಚ್ಚನಿರಬಹುದೊ? ಅಥವಾ ಬುದ್ಧಿಪೂರ್ವಕವಾಗಿ ಇವನು ಹೀಗೆ ಮಾಡುತ್ತಿರಬಹುದೋ ಎಂಬದನ್ನು ಏಸಾಜಿಯು ನಿಶ್ಚಯಿಸಲು ಅಸಮರ್ಥನಾದನು. ಕಡೆಗೆ ಏಸಾಜಿಯು ಈ ಮನುಷ್ಯನ

ಗೊಡವೆಯೇನು? ಗುಡಿಸಿಲೊಳಗೆ ಹೊಕ್ಕು ಒಳಗೆ ಏನಿರುತ್ತದೆಂಬದನ್ನಾದರೂ ನೋಡೋಣ, ಎಂದು ಗುಡಿಸಿಲೊಳಗೆ ಹಣಿಕಿ ನೋಡಿದನು. ಅತನು ಒಳಗೆ ಹೋಗಿಯೇ ತೀರಬೇಕೆಂದು ನಿಶ್ಚಯಿಸಿದನು. ಏಸಾಜಿಯು ವಿಲಕ್ಷಣ ಧೈರ್ಯಶಾಲಿಯು. ಮತ್ತೊಬ್ಬನಾಗಿದ್ದರೆ ಆ ಕ್ರೂರ ಮನುಷ್ಯನ ರೂಪವನ್ನು ನೋಡಿದ ಕೂಡಲೆ ಅಂಜಿ ಹಿಂದಿರುಗಿ ಹೋಗಬಹುದಾಗಿತ್ತು. ಏಸಾಜಿಗಿಂತ ಆ ಕ್ರೂರಮನುಷ್ಯನು ಬಹು ಬಲಾಢ್ಯನಿದ್ದನು. ಎದ್ದು ನಿಂತರೆ ಏಸಾಜಿಯು ಆತನ ಎದೆಗಾದರೂ ಬರುತ್ತಿದ್ದನೋ ಇಲ್ಲವೋ ಸಂಶಯವು. ಆ ಕ್ರೂರನ ಪುಷ್ಟವಾದ ರಟ್ಟೆಗಳು ಮುಂಡೆದಿರುಗಿ ಕಲ್ಲಿನ ಹಾಗೆ ಬಿರುಸಾಗಿದ್ದವು. ಇದನ್ನಾವದನ್ನೂ ಲಕ್ಷ್ಯಕ್ಕೆ ತಾರದೆ ಏಸಾಜಿಯು ಗುಡಿಸಿಲೊಳಗೆ ಹೊಕ್ಕನು. ಕೂಡಲೆ ಆ ಕ್ರೂರಮನುಷ್ಯನು ಭಯಂಕರವಾಗಿ ಗರ್ಜಿಸಿ, ಏಸಾಜಿಯ ಮೇಲೆ ದುಮುಕಿ ಅವನನ್ನು ನೂಕಿದನು. ಏಸಾಜಿಯು ಆ ಕ್ರೂರಮನುಷ್ಯನ ಸಮಾಚಾರ ತಕ್ಕೊಳ್ಳಬೇಕೆನ್ನುವಷ್ಟರಲ್ಲಿ ಜೋಲಿಹೋಗಿ ನೆಲಕ್ಕೆ ಬಿದ್ದನು. ಆಗ ಆ ಕ್ರೂರ ಮನುಷ್ಯನು ತನ್ನ ಬಳಿಯಲ್ಲಿದ್ದ ನೂಲಿನ ಹಗ್ಗದಿಂದ ಏಸಾಜಿಯ ಎರಡೂ ಕೈಗಳನ್ನು ಬೆನ್ನ ಹಿಂದೆ ತಿರುವಿ ಕಟ್ಟಿ ಅವನನ್ನು ಒಂದು ಹೊದರಿನೊಳಗೆ ಸೇರಿಸಿ ಹಿಂದಿನಿಂದ ನೂಕುತ್ತ ಗುದ್ದುತ್ತ "ಸಾಗು, ಈ ಮೊದಲೆ ಗವಿಗಳಲ್ಲಿ ಹೊಟ್ಟೆಹೊಸೆಯುತ್ತ ಸಾಗಿದಂತೆ ಈಗಲೂ ಸಾಗು'' ಎಂದು ನುಡಿಯುತ್ತ, ಏಸಾಜಿಯನ್ನು ಹಿಂದಿನಿಂದ ಕೊಸೆಯಹತ್ತಿದನು. ಆಗ ಏಸಾಜಿಯು ಉಪಾಯವಿಲ್ಲದೆ ಒದಗಿದ ಕಷ್ಟವನ್ನು ಸಹಿಸಬೇಕಾಯಿತು. ಆ ಕ್ರೂರಮನುಷ್ಯನ ಗುದುಮುರಿಗೆಯಿಂದ ಏಸಾಜಿಯು ವ್ಯಥೆಪಡಹತ್ತಿದನು. ಅಷ್ಟರಲ್ಲಿ ಏನಾಯಿತೋ ದೇವರಿಗೆ ಗೊತ್ತು. ಆ ಕ್ರೂರಮನುಷ್ಯನು ಕೆಟ್ಟ ಧ್ವನಿಯಿಂದ ಒದರುತ್ತ ಹಿಂದಕ್ಕೆ ಬಿದ್ದನು. ಅದರಿಂದ ಏಸಾಜಿಯ ಕಷ್ಟವು ಕಡಿಮೆಯಾಯಿತು. ಬರಬರುತ್ತ ಆ ಕ್ರೂರಮನುಷ್ಯನು ಉರಲುಬಿದ್ದವರಂತೆ ಗೊರಗುಟ್ಟಹತ್ತಲು, ಏಸಾಜಿಯು ಹಿಂದಿರುಗಿ ಹೊರಗೆ ಬರಲು ಯತ್ನಿಸಹತ್ತಿದನು; ಆದರೆ ಆ ಕ್ರೂರಮನುಷ್ಯನು ಗವಿಯ ಬಾಗಿಲಿಗೇ ಬಿದ್ದದ್ದರಿಂದ ಹೊರಗೆ ಬರಲಿಕ್ಕೆ ಬರಲೊಲ್ಲದು. ಆಗ ಆ ಮಹಾರಾಷ್ಟ್ರವೀರನು ಕಸುವಿನಿಂದ ಒದೆದನು. ಆಗ ಆ ಕ್ರೂರ ಮನುಷ್ಯನ ದೇಹವು ಬದಿಗಾಗಿ

ಏಸಾಜಿಯು ಹೊರಗೆ ಬಂದನು. ಆಗ ಭಯಂಕರ ಸ್ಥಿತಿಯು ಅವನ ಕಣ್ಣಿಗೆ ಬಿದ್ದಿತು. ಆ ಭಯಂಕರ ಸರ್ಪವು ಆ ಕ್ರೂರಮನುಷ್ಯನ ಕೊರಳಿಗೆ ಸುತ್ತುಹಾಕಿ ಅವನ ಪ್ರಾಣವನ್ನು ಹೀರತೊಡಗಿತ್ತು. ಏಸಾಜಿಯ ಕೈಗಳನ್ನು ಕಟ್ಟಿಬಿಟ್ಟದ್ದರಿಂದ ಅವನ ಆಟವೇನು ನಡೆಯುವ ಹಾಗಿದ್ದಿಲ್ಲ. ಆ ಕ್ರೂರ ಮನುಷ್ಯನು ಕೈಗಳನ್ನು ಒಳಿತಾಗಿ ಬಿಗಿದುಬಿಟ್ಟಿದ್ದನು. ಏಸಾಜಿಯು ಅಲ್ಲಿಯೇ ಬಿದ್ದಿರುವ ತನ್ನ ಖಡ್ಗವನ್ನು ಕಾಲಿನಿಂದ ತಕ್ಕೊಂಡು, ಉಪಾಯದಿಂದ ಹಗ್ಗವನ್ನು ಕೊಯ್ದುಕೊಂಡು ಕೈಗಳನ್ನು ಬಿಚ್ಚಿಕೊಂಡನು. ಕೂಡಲೆ ಆತನು ಕ್ರೂರ ಮನುಷ್ಯನ ಕೊರಳಿಗೆ ಸುತ್ತು ಹಾಕಿದ್ದ ಹಾವನ್ನು ತನ್ನ ಖಡ್ಗದಿಂದ ತುಂಡು ತುಂಡಾಗಿ ಮಾಡಿದನು; ಆದರೆ ಅಷ್ಟರಲ್ಲಿ ಕ್ರೂರಮನುಷ್ಯನ ಪ್ರಾಣವು ಹಾರಿಹೋಗಿತ್ತು. ತಾನು ದೇವರ ದಯದಿಂದಲೇ ಪಾರಾಗಿ ಮಹಾರಾಜರ ಸೇವೆಮಾಡಲಿಕ್ಕೆ ಉಳಿದದ್ದಕ್ಕಾಗಿ ಏಸಾಜಿಗೆ ಬಹಳ ಸಂತೋಷವಾಯಿತು. ಆ ಕ್ರೂರ ಮನುಷ್ಯನು ಸಾಕಿದ ಹಾವೇ ಈ ಪ್ರಸಂಗದಲ್ಲಿ ಅವನ ಪ್ರಾಣಹರಣಮಾಡಿತು.

ಹೀಗೆ ಗಂಡಾಂತರದೊಳಗಿಂದ ಪಾರಾದ ಬಳಿಕ, ಇನ್ನು ಮುಂದೆ ಏನು ಮಾಡಬೇಕೆಂದು ಏಸಾಜಿಯು ಯೋಚಿಸತೊಡಗಿದನು. ಈ ಗವಿಯು ಕಳ್ಳರದಾಗಿದ್ದು, ಒಳಗೆ ದ್ರವ್ಯಸಂಚಯುವಿರಬಹುದಾದ್ದರಿಂದ ಅದನ್ನು ಕಾಯುವದಕ್ಕಾಗಿಯೇ ಇಂಥ ಕ್ರೂರ ಮನುಷ್ಯನನ್ನು ಕಳ್ಳರು ಗವಿಯ ಬಾಗಿಲಲ್ಲಿ ಕಾವಲಿಟ್ಟಿರುವರೆಂದು ಆತನು ತರ್ಕಿಸಿದನು. ದ್ರವ್ಯನಿಧಿಯು ಸಿಕ್ಕರೆ ಮಹಾರಾಜರ ಕಾರ್ಯಕ್ಕೆ ಅನುಕೂಲವಾಗಬಹುದೆಂದು ತಿಳಿದು, ಆತನು ಧೈರ್ಯದಿಂದ ಗವಿಯನ್ನು ಹೊಕ್ಕನು. ಮೊದಮೊದಲು ಗವಿಯಲ್ಲಿ ಪ್ರಯಾಸದಿಂದ ಹೋಗಬೇಕಾಯಿತು; ಆದರೆ ಮುಂದೆ ಬರಬರುತ್ತ ಗವಿಯು ವಿಶಾಲವಾಗುತ್ತ ಹೋದದ್ದರಿಂದಲೂ, ಗಾಳಿ ಬರುವದಕ್ಕಾಗಿ ಬೆಳಕಿಂಡಿಗಳನ್ನು ಬಿಟ್ಟದ್ದರಿಂದಲೂ ಏಸಾಜಿಗೆ ಒಳಗೆ ಹೋಗುವಾಗ ಉಬ್ಬುಗುಬ್ಬಲಿಲ್ಲ. ಆತನು ಮುಂದಕ್ಕೆ ಸಾಗುತ್ತಿರಲು, ಹೊಸದಾಗಿ ಗವಿಯನ್ನು ತೋಡಿರುವಂತೆ ಒಗರ ಹಸಿಯು ಮಣ್ಣು ಅವನ ಕಾಲಿಗೆ ಹತ್ತುಹತ್ತಿತು. ಹೀಗೆ ಹೊಸಗವಿಯನ್ನು ಯಾರು ತೋಡುತ್ತಿರಬಹುದು? ತೋಡುವವರ ಉದ್ದೇಶವಾದರೂ ಏನಿರಬಹುದು? ಗವಿಯನ್ನು ತೋಡುವ 'ಕೆಲಸವು

ಇನ್ನೂ ನಡೆದಿರಬಹುದೋ? ಹೀಗೆಯೇ ನಾನು ಮುಂದಕ್ಕೆ ಹೋದರೆ, ತೋಡುವವರ ಭೆಟ್ಟಿಯಾಗಬಹುದೇನು? ನನ್ನನ್ನು ಅವರು ನೋಡಿದರೆ ಏನು ಮಾಡಬಹುದು? ಮಹಾರಾಜರಿಗೆ ಆಗದವರು ಕೆಲವರಿರಬಹುದು, ಅವರೇನಾದರೂ ದುರಾಲೋಚನೆಯಿಂದ ಈ ಗವಿಯನ್ನು ತೋಡಿಸುತ್ತಿರ ಬಹುದೇ? ಅಫಜುಲಖಾನನ ಅಂಗವು ಇದರಲ್ಲಿ ಇರಬಹುದೇ? ಎಂದು ಆಲೋಚಿಸುತ್ತ ಏಸಾಜಿಯು ಹಾಗೆಯೇ ಮುಂದಕ್ಕೆ ಸಾಗಿದನು. ಅಷ್ಟರಲ್ಲಿ ಆತನ ಕಿವಿಗೆ, ಗವಿಯನ್ನು ತೋಡುವ ಸಪ್ಪಳವು ಕೇಳಿಸಹತ್ತಿತು. ಆಗ ಏಸಾಜಿಯು ಅಲ್ಲಿಯೇ ನಿಂತುಕೊಂಡನು. ಇದು ಕಳ್ಳರು ಮುದ್ದು ಇಡುವ ಗವಿಯಲ್ಲ. ತಪಸ್ವಿಗಳು ವಾಸಿಸುವ ಗವಿಯೂ ಅಲ್ಲ; ಯಾವದೋ ಒಂದು ವಿಶೇಷ ಕಾರಣದಿಂದ ಇದನ್ನು ಪ್ರಯತ್ನಪೂರ್ವಕವಾಗಿ ತೋಡು ತ್ತಿರುವರು. ಈಗಲೇ ನಾನು ತೋಡುವವರ ಬಳಿಗೆ ಹೋಗುವದಕ್ಕಿಂತ, ಗುಪ್ತರೀತಿಯಿಂದ ಕಾರಣವನ್ನು ಶೋಧಿಸುವುದು ತಕ್ಕದ್ದು; ಯಾರಿಗೆ ಗೊತ್ತು, ಈ ಗವಿಯು ಮಹಾರಾಜರ ಕಾರ್ಯಕ್ಕೆ ವಿಘಾತಕವಾಗಿದ್ದರೂ ಇರಬಹುದು. ಇತ್ತಕಡೆಗೆ ಮಾರ್ಗಮಾಡಲಿಕ್ಕೆ ಅನುಕೂಲವಿಲ್ಲೆಂದು ಖಂಡೇರಾಯನು ಇದಕ್ಕಾಗಿಯೇ ನನ್ನ ಮುಂದೆ ಹೇಳಿರಬಹುದೇನು? ಅವನೂ ಈ ಗುಪ್ತಕಾರಸ್ಥಾನದಲ್ಲಿ ಸೇರಿರಬಹುದೋ? ಏನಿರಬಹುದು? ಆ ಕ್ರೂರ ಮನುಷ್ಯನನ್ನು ನಾನು ಮೊದಲು ಹುಚ್ಚನೆಂದು ತಿಳಿದಿದ್ದೆನು: ಆದರೆ ಅವನು ಹುಚ್ಚನಲ್ಲೆಂಬದು ನನ್ನನ್ನು ಗವಿಯಲ್ಲಿ ತುರುಕಿ ಗುದ್ದಿದಾಗಲೇ ಗೊತ್ತಾಯಿತು. ನಾನು ಬಂದಹಾದಿಯಿಂದ ತಿರುಗಿ ಹೋಗುವದರೊಳಗೆ ಸಂಚುಗಾರರಾರಾದರೂ ಗವಿಯ ಮೋರೆಗೆ ಬಂದಿದ್ದರೆ ಹ್ಯಾಗೆ? ತಮ್ಮ ಕಾರಸ್ಥಾನವನ್ನು ನಾನು ಹೊರಗೆಡವುವೆನೆಂದು ತಿಳಿದು, ಅವರು ನಿಶ್ಚಯ ವಾಗಿ ನನ್ನನ್ನು ಗೊತ್ತಿಗೆ ಹಚ್ಚುವರು. ಆದ್ದರಿಂದ ಇತ್ತ ಮುಂದಕ್ಕೂ ಹೋಗುವ ಹಾಗಿಲ್ಲ, ಅತ್ತ ಹಿಂದಕ್ಕೂ ಹೋಗುವ ಹಾಗಿಲ್ಲ. ಅಂದಬಳಿಕ ನಾನು ಗವಿಯಿಂದ ಹೊರಗೆ ಹೋಗುವ ಬಗೆ ಹ್ಯಾಗೆ? ಈ ಗುಹೆಯ ಸಂಗತಿಯನ್ನಂತು ನಾನು ಮಹಾರಾಜರಿಗೆ ತಿಳಿಸಲೇ ಬೇಕು. ಇಲ್ಲದಿದ್ದರೆ ಅನರ್ಥವಾದೀತು.

ಈ ಮೋರೆಗೆ ಆಲೋಚಿಸುತ್ತ ಏಸಾಜಿಯು ಸ್ವಲ್ಪ ಹೊತ್ತು ನಿಂತ

ಬಳಿಕ ಆತನಿಗೊಂದು ಯುಕ್ತಿಯು ತೋಚಿತು. ಗಾಳಿ ಬರುವದಕ್ಕಾಗಿ ಬಿಟ್ಟಿದ್ದ ಬೆಳಕಿಂಡಿಯಲ್ಲಿ ಹೋಗಲಿಕ್ಕೆ ಬಂದರೆ ನೋಡಬೇಕೆಂದು ಆತನು ಯೋಚಿಸಿ, ದೊಡ್ಡಬೆಳಕಿಂಡಿಯನ್ನು ಹುಡುಕಹತ್ತಿದನು. ಕರ್ಮಧರ್ಮ ಸಂಯೋಗದಿಂದ ಆತನಿಗೆ ಅಂಥದೊಂದು ಬೆಳಕಿಂಡಿಯೂ ಸಿಕ್ಕಿತು. ಏಸಾಜಿಯು ಗಂಡುಗಚ್ಚೆಹಾಕಿ, ಗವಿಯಲ್ಲಿ ಬಿದ್ದಿದ್ದ ಕಲ್ಲುಗಳನ್ನು ಆರಿಸಿ ಒಟ್ಟಿ, ಅದರಮೇಲೆ ನಿಂತುಕೊಂಡು ಬೆಳಕಿಂಡಿಯೊಳಗೆ ತಲೆಹಾಕಿ ಹೊರಗೆ ಹಣಿಕಿ ನೋಡಿದನು. ಆಗ ರಾತ್ರಿಯ ಸಮಯವಾಗಿತ್ತು. ಬೆಳದಿಂಗಳದಿವಸವಲ್ಲದಿದ್ದರೂ, ನಿರಭ್ರವಾದ ಆಕಾಶದಲ್ಲಿ ಸ್ವಚ್ಛವಾಗಿ ಮಿನುಗುತ್ತಿರುವ ನಕ್ಷತ್ರಗಳ ಮಂದಕಾಂತಿಯು ಬಿದ್ದಿತ್ತು. ಆಗ ಏಸಾಜಿಯು ಅತಿ ಸಾಹಸಪಟ್ಟು, ತನಗೆ ಹೊರಗೆ ಹೋಗಲಿಕ್ಕೆ ಬರುವಷ್ಟು ಬೆಳಕಿಂಡಿಯನ್ನು ದೊಡ್ಡದು ಮಾಡಿಕೊಂಡು ಮೆಲ್ಲಗೆ ಹೊರಗೆ ಬಂದನು. ತಾನು ಯಾವ ಕಡೆಗೆ ಬಂದೆನು, ತನ್ನ ಕುದುರೆಯು ಯಾವ ಕಡೆಗೆ ಉಳಿಯಿತು, ಗವಿಯ ಮೋರೆಯು ಯಾವ ಮಗ್ಗಲಿಗಿರುವದು ಎಂಬವೇನು ಆತನಿಗೆ ತಿಳಿಯದಾಯಿತು. ಆತನು ಸುತ್ತುಮುತ್ತ ನೋಡಲು, ಜುಳುಜುಳು ಹರಿಯುವ ಹಳ್ಳದ ಸಪ್ಪಳವು ಆತನಿಗೆ ಕೇಳಿಸಿತು. ಜಾವಳಿಯ ಅರಣ್ಯದಲ್ಲಿ ಇಂಥ ಹಳ್ಳ-ಹೊಳೆಗಳಿಗೆ ಕೊರತೆಯಿದ್ದಿಲ್ಲ. ಏಸಾಜಿಯು ಮತ್ತೆ ನಾಲ್ಕೂ ಕಡೆಗೆ ನೋಡುತ್ತಿರಲು, ಸ್ವಲ್ಪ ಅಂತರದಲ್ಲಿ ಉರಿಯ ಬೆಳಕು ಆತನಕಣ್ಣಿಗೆ ಬಿದ್ದಿತು. ಇಂಥ ಕಟ್ಟಡವಿಯಲ್ಲಿ ರಾತ್ರಿ ಉರಿಹಾಕಿಕೊಂಡು ಯಾರು ಕುಳಿತಿರಬಹುದು? ಅವರು ರಳ್ಳರಿರಬಹುದೋ, ಬೈರಾಗಿಗಳಿರಬಹುದೋ? ಅಥವಾ ಈ ಗುಪ್ತಕಾರಸ್ಥಾನಕ್ಕೆ ಸಂಬಂಧಿಸಿದ ಜನರಿರಬಹುದೋ? ಯಾರಿದ್ದರೂ ಅದನ್ನು ಪರೀಕ್ಷಿಸಲೇಬೇಕು ಎಂದು ನಿಶ್ಚಯಿಸಿ, ಆ ಬೆಳಕಿನ ಕಡೆಗೆ ನಡೆದನು. ಸ್ವಲ್ಪದೂರ ಹೋಗುವದರೊಳಗಾಗಿ ಮನುಷ್ಯರ ದನಿಯು ಆತನಿಗೆ ಕೇಳಿಸಹತ್ತಿತು. ಏಸಾಜಿಯು ಒಮ್ಮೆಲೆ ಅಲ್ಲಿಯ ಜನರ ಮುಂದೆ ನಿಂತುಕೊಳ್ಳಲು ಇಚ್ಛಿಸಲಿಲ್ಲ. ಹಾಗೆ ಮಾಡಿದರೆ ಪ್ರಸಂಗವಿಶೇಷದಲ್ಲಿ ತನ್ನ ಪ್ರಾಣವುಳಿಯಲಿಕ್ಕಿಲ್ಲವೆಂದು ಆತನು ತಿಳಿದುಕೊಂಡಿದ್ದನು. ಆತನು ಮೆಲ್ಲನೆ ಗಿಡಗಳ ಮರೆಯಿಂದ ಹೋಗಿ ಉರಿಯಿದ್ದ ಸ್ಥಳವನ್ನು ಮುಟ್ಟಿದನು. ಅಲ್ಲಿಯೊಂದು ಗುಡಿಸಿಲು ಇತ್ತು. ಗುಡಿಸಿಲಿನ ಹೊರಗೆ ಒಬ್ಬ ಜಟಾಧಾರಿ

ಯಾದ ಪುರುಷನೂ, ಒಬ್ಬ ಹದಿನೈದು ಹದಿನಾರು ವರ್ಷದ ತರುಣ ಶಿಷ್ಯನೂ ಉರಿಯ ಬಳಿಯಲ್ಲಿ ಕುಳಿತುಕೊಂಡಿದ್ದರು. ಅವರನ್ನು ನೋಡಿ ಏಸಾಜಿಗೆ ಪರಮಾಶ್ಚರ್ಯವಾಯಿತು. ಹದಿನಾರು ವರ್ಷದ ಸುಂದರ ತರುಣನು ವೈರಾಗ್ಯಶಾಲಿಯಾದದ್ದಂತು ಆತನಿಗೆ ವಿಲಕ್ಷಣವಾಗಿ ತೋರಿತು. ಆತನು ಬಹಳಹೊತ್ತು ಪರೀಕ್ಷಿಸುತ್ತ ನಿಂತುಕೊಂಡನು. ಆ ಗುರುಶಿಷ್ಯರು ಏನೋ ವಿಚಾರಮಾಡುತ್ತ ಸುಮ್ಮನೆ ಕುಳಿತುಕೊಂಡಿದ್ದರು. ತಂಗಾಳಿ ಬಡಿದು ಏಸಾಜಿಗೆ ಚಳಿಯಾಗಹತ್ತಿದ್ದರಿಂದ ಆತನಿಗೆ ಉರಿಕಾಸಿಕೊಳ್ಳುವ ಇಚ್ಛೆಯಾಯಿತು. ಇಂಥ ಬೈರಾಗಿಗಳು ಒಳಸಂಚಿನಲ್ಲಿ ಸೇರುವ ಸಂಭವ ವಿಲ್ಲವಾದ್ದರಿಂದ, ಇವರ ಬಳಿಗೆ ಹೋಗುವ ವಿಷಯವಾಗಿ ಸಂಶಯ ತಕ್ಕೊಳ್ಳುವ ಕಾರಣವಿಲ್ಲೆಂದು ಯೋಚಿಸಿ ಆತನು ಆ ಗುರುಶಿಷ್ಯರ ಬಳಿಗೆ ಹೋದನು. ಹೀಗೆ ಆಕಾಶದಿಂದ ಇಳಿದುಬಂದಂತೆ, ಅಥವಾ ಭೂಮಿ ಯಿಂದ ಮೇಲಕ್ಕೆದ್ದಂತೆ ಏಸಾಜಿಯು ಅಕಸ್ಮಾತ್ತಾಗಿ ಅವರ ಬಳಿಗೆ ಹೋಗಲು, ಆ ಗುರುಶಿಷ್ಯರು ಸ್ವಲ್ಪ ಬೆದರಿದರು. ಎಷ್ಟೋ ಜನ ಹಾದಿ ಕಾರರು ಬರುತ್ತಿದ್ದರು, ಹೋಗುತ್ತಿದ್ದರು; ಆದರೆ ಇಂಥ ಮಧ್ಯರಾತ್ರಿ ಯಲ್ಲಿ ಈವರೆಗೆ ಒಬ್ಬನೂ ಬಂದಿದ್ದಿಲ್ಲ. ಆಶ್ಚರ್ಯದ ಭರವು ಕುಗ್ಗಿದಬಳಿಕ ಆ ಗೊಸಾವಿಯು ಸಿಟ್ಟಿನಿಂದ ಏಸಾಜಿಯನ್ನು ಕುರಿತು—"ಯಾವನೋ ನೀನು? ಮಧ್ಯರಾತ್ರಿಯಲ್ಲಿ ನಮಗೆ ತ್ರಾಸ ಕೊಡುವದಕ್ಕೆ ಯಾಕೆ ಬಂದೆ? ನಾವು ಸರ್ವಸಂಗ ಪರಿತ್ಯಾಗಮಾಡಿ ಈ ಘೋರಾರಣ್ಯದಲ್ಲಿ ಬಂದು ನಿಂತಿ ದ್ದರೂ, ಸಾಂಸಾರಿಕರಾದ ನಿಮ್ಮ ತ್ರಾಸವು ತಪ್ಪಲೊಲ್ಲದಲ್ಲ? ನಡೆ ಯಿಲ್ಲಿಂದ, ಕ್ಷಣವಾದರೂ ಇಲ್ಲಿ ನಿಂತುಕೊಳ್ಳ ಬೇಡ!" ಎಂದು ಗದ್ದರಿಸಿದನು.

ಗೋಸಾವಿಯ ಈ ರೀತಿಯನ್ನು ನೋಡಿ ಏಸಾಜಿಗೆ ಬಹಳ ಆಶ್ಚರ್ಯ ವಾಯಿತು. ಗೋಸಾವಿಗಳು ಸಿಟ್ಟಿನವರಿರುತ್ತಾರೆಂಬುದು ಆತನಿಗೆ ಗೊತ್ತಿತ್ತು; ಆದರೆ ಮಧ್ಯರಾತ್ರಿಯಲ್ಲಿ ಬಂದವರಿಗೆ ಒಳ್ಳೆಯವೆರಡು ಮಾತುಗಳನ್ನಾಡಿ ಕಳಿಸದಂಥ ವಿಲಕ್ಷಣ ಸಿಟ್ಟಿನವರಾದರೂ ಅಪರೂಪ ವೆಂದು ಏಸಾಜಿಯು ಭಾವಿಸಿದನು; ಆತನು ಬೈರಾಗಿಯನ್ನು ಕುರಿತು— "ನಾನು ಬೇಕೆಂತ ನಿಮ್ಮ ಬಳಿಗೆ ಬಂದವನಲ್ಲ. ಸಹಜವಾಗಿ ಈ ಅರಣ್ಯ

ದಲ್ಲಿ ಸಂಚರಿಸುತ್ತಿರಲು, ಹಾದಿಯ ತಪ್ಪಿ ಬಂದೆನು" ಎಂದು ಹೇಳಿದನು; ಆದರೆ ಅವನ ಮಾತನ್ನು ಯಾರು ಕೇಳಬೇಕು? ಬೈರಾಗಿಯು ಕ್ಷಣವಾದರೂ ಸುಮ್ಮನಿರದೆ—'ನಡೆಯಿಲ್ಲಿಂದ, ಕ್ಷಣವಾದರೂ ನಿಲ್ಲಬೇಡ' ಎಂದು ಒಂದೇಸವನೆ ಬೆನ್ನಹತ್ತಿದ್ದನು. ಪ್ರತ್ಯಕ್ಷ ವೈರಿಯು ಬಂದರೂ ಆದು ಹೊರಗೆ ಹಾಕುವ ಸಮಯುವಲ್ಲ. ಹೀಗಿದ್ದು, ಬೈರಾಗಿಯು ಈ ಪರಿಯಾಗಿ ತನ್ನನ್ನು ಹೊರಗೆ ಹಾಕಲು ಯತ್ನಿಸುವದನ್ನು ನೋಡಿ ಏಸ್ತಾಜಿಯು ದಂಗುಬಡಿದು ನಿಂತುಕೊಂಡನು. ಆತನು ಮಧ್ಯರಾತ್ರಿಯಲ್ಲಿ ಎಲ್ಲಿಗೂ ಹೋಗುವಹಾಗಿದ್ದಿಲ್ಲ; ಆದ್ದರಿಂದ ಮುಂಡತನಮಾಡಿ ಆತನು ಬೆಂಕಿಯ ಹತ್ತರ ಹೋಗಿ ಕುಳಿತುಕೊಂಡನು. ಆಗಂತೂ ಬೈರಾಗಿಯ ಪಿತ್ತವು ತಲೆಗೇರಿತು. ಅವನು ಕವಕ್ಕನೆ ಏಸಾಜಿಯ ಮೈಮೇಲೆ ಹೋಗಿ 'ಎಂಥ ಮುಂಡನೋ, ನೀನು? ಹೋಗೆಂದರೆ ಹೋಗಲೊಲ್ಲೆ, ಏಳು, ನಮ್ಮ ಬಳಿಯಲ್ಲಿ ನೀನು ಕುಳಿತುಕೊಳ್ಳಬೇಡ, ಎತ್ತಾದರೂ ಹೋಗು' ಎಂದು ಗರ್ಜಿಸಿ ಮಾತಾಡಹತ್ತಿದನು. ಆತನು ಎದ್ದು ಏಸಾಜಿಯನ್ನು ಹೊಡೆಯುವದೊಂದು ಉಳಿದಿತ್ತು. ಗೋಸಾವಿಯ ಈ ರೀತಿಯನ್ನು ನೋಡಿ ಏಸಾಜಿಗೂ ಸ್ವಲ್ಪ ಸಿಟ್ಟು ಬಂದಿತು. ಆತನು ಗೋಸಾವಿಗೆ— 'ಮಹಾರಾಜ, ಸ್ವಲ್ಪ ತಾಳಿರಿ, ಹೀಗೆ ಯಾಕೆ ಸಿಟ್ಟಿಗೇಳುವಿರಿ? ನಾನು ಈಗ ರಾತ್ರಿ ಎರಡನೆಯ ಕಡೆಗೆ ಹೋಗುವದಾದರೂ ಎತ್ತ? ಬೆಳಗಾದ ಬಳಿಕ ಕ್ಷಣವಾದರೂ ನಿಮ್ಮ ಬಳಿಯಲ್ಲಿ ನಿಂತುಕೊಳ್ಳುವದಿಲ್ಲ. ಸರ್ವಸಂಗ ಪರಿತ್ಯಾಗ ಮಾಡಿದ ನಿಮಗೆ ಇಷ್ಟು ಸಿಟ್ಟು ಏಕೆ? ಎಂಥವರಾದರೂ, ಮನೆಗೆ ಬಂದವರನ್ನು ಉಪಚರಿಸುವದುಂಟು. ಸಾಧು ಸತ್ಪುರುಷರೆನಿಸಿ ಕೊಳ್ಳುವ ನಿಮ್ಮ ಈ ರೀತಿಯು ಯಾವ ಕಡೆಯದು? ಬೇಕಾದದ್ದು ಮಾಡಿರಿ, ಬೆಳಗಾಗುವತನಕ ನಾನು ಇಲ್ಲಿಂದ ಉಲುಕುವದಿಲ್ಲ. ಎಂದು ಸ್ಪಷ್ಟವಾಗಿ ಹೇಳಿದನು. ಅದನ್ನು ಕೇಳಿ ಆ ಗೋಸಾವಿಯ, ಹಾಗೂ ಆತನ ಶಿಷ್ಯನ ಕಣ್ಣುಗಳು ಕೆಂಪಾದವು. ಅವರಿಬ್ಬರೂ ಕೂಡಿ ಇನ್ನು ಏಸಾಜಿಯ ಮೈಮೇಲೆ ಹೋಗತಕ್ಕವರು, ಅಷ್ಟರಲ್ಲಿ ಗುಡಿಸಿಲಿನಿಂದ ಸ್ವಲ್ಪ ದೂರದಲ್ಲಿ ಭೂಮಿಯನ್ನು ಬಗೆವ ನಾಲ್ವಾರು ಜನರು ಕೈಯಲ್ಲಿ ಹಿಲಾಲುಗಳನ್ನು ಹಿಡಕೊಂಡು ಬಂದರು. ಏಸಾಜಿಯು ಅತ್ತಕಡೆಗೆ ಆಶ್ಚರ್ಯದಿಂದ

ನೋಡಲು, ಭೂಮಿಯೊಳಗಿಂದ ಮಾರ್ಗಮಾಡಿಕೊಂಡು ಈ ಜನರು ಬಂದಿದ್ದರು! ಬಂದವರು ಆನಂದದಿಂದ ಗರ್ಜಿಸುತ್ತ ಗೋಸಾವಿಯ ಎದುರಿಗೆ ನಿಂತುಕೊಂಡರು. ಅವರನ್ನು ನೋಡಿ ಗೋಸಾವಿಗೂ ಅವನ ಶಿಷ್ಯನಿಗೂ ಪರಮಾನಂದವಾದಂತೆ ತೋರಿತು. ಅವರು ಗೊಸಾವಿಯನ್ನು ಕುರಿತು,—"ನೋಡಿರಿ, ನಾವು ಹೇಳಿದ್ದಕ್ಕಿಂತ ನಾಲ್ಕುದಿನ ಮುಂದಾಗಿಯೇ ನಿಮ್ಮ ಮುಂದೆ ಬಂದು ನಿಂತೆವೋ ಇಲ್ಲವೋ? ಇನ್ನು ಮದ್ದು ತುಂಬಿ ಇಡುವ ಕೆಲಸವಷ್ಟು ಉಳಿಯಿತು" ಎಂದು ನುಡಿದರು. ಇನ್ನೂ ಅವರು ಏನೇನೋ ಹೇಳತಕ್ಕವರಿದ್ದರು. ಅಷ್ಟರಲ್ಲಿ ಗೋಸಾವಿಯು ಸುಮ್ಮನಿರಲು ಸನ್ನೆಮಾಡಿದ್ದರಿಂದ ಅವರು 'ಯಾಕರಿ? ಯಾಕರಿ?' ಎಂದು ಪ್ರಶ್ನೆ ಮಾಡಹತ್ತಿದರು. ಅದಕ್ಕೆ ಗೋಸಾವಿಯು—"ಮೊದಲು ಇಲ್ಲಿಗೆ ಬಂದಿರುವ ಈ ಠಕ್ಕನನ್ನು ಹೊರಗೆ ಹಾಕಿರಿ; ಆಮೇಲೆ ಮುಂದೆ ಏನು ಮಾಡಬೇಕೆಂಬುದನ್ನು ಕುರಿತು ವಿಚಾರಮಾಡೋಣ; ಮತ್ತು ಮಾತಾಡುವದನ್ನು ಮಾತಾಡೋಣ"

ಈ ಮೇರೆಗೆ ಗೊಸಾವಿಯು ನುಡಿಯಲು, ಎಲ್ಲರು ಏಸಾಜಿಯನ್ನು ನೋಡಹತ್ತಿದರು. ಏಸಾಜಿಯೂ ಅವರನ್ನು ಕೆಕ್ಕರಿಸಿ ನೋಡಹತ್ತಿದನು. "ಈ ಜನರು ಭೂಮಿಯೊಳಗಿಂದ ಬರುತ್ತಾರೇನು, ಮದ್ದು ತುಂಬ ಬೇಕೆಂದು ಹೇಳುತ್ತಾರೇನು, ಇದರ ಗೂಢವು ಏನಿರಬಹುದು," ಎಂದು ಏಸಾಜಿಯು ಯೋಚಿಸಹತ್ತಿದನು. ಅಷ್ಟರಲ್ಲಿ ಒಬ್ಬನು ಏಸಾಜಿಯನ್ನು ಕುರಿತು—"ನೀನು ಯಾರು? ಇಲ್ಲಿಗೆ ಯಾಕೆ ಬಂದೆ? ಕಳ್ಳನಿರುವಿಯೋ ಚಾಡಿಕೋರನಿರುವಿಯೋ ಹೇಳು. ನಿಜವಾದ ಸಂಗತಿಯನ್ನು ಹೇಳದಿದ್ದರೆ ನಿನ್ನ ನೂರು ವರ್ಷಗಳು ತುಂಬಿದವೆಂದು ತಿಳಿ; ಯಾಕೆ? ಬಾಯಿಂದ ಮಾತುಗಳು ಹೊರಡಲೊಲ್ಲವು? ನೀನು ಮೊದಲು ಇಲ್ಲಿಗೆ ಹ್ಯಾಗೆ ಬಂದೆ ಹೇಳು. ನಮ್ಮ ಗುಪ್ತಸಂಗತಿಗಳನ್ನು ನೋಡುವದಕ್ಕಾಗಿ ಯಾರಾದರೂ ನಿನ್ನನ್ನು ಇಲ್ಲಿಗೆ ಕಳಿಸಿರಬಹುದು; ಹಾಗಿದ್ದರೆ ಮೊದಲು ನಿನ್ನ ಕಣ್ಣುಗಳನ್ನು ಈ ಹಿಲಾಲಿನಿಂದ ಸುಟ್ಟು ಕಳೆದುಬಿಡುತ್ತೇನೆ. ನಿಲ್ಲು. ಹೇಳು, ಸುದ್ದಿಯನ್ನು ತಿಳಕೊಂಡು ಬರುವದಕ್ಕೆ ನಿನ್ನನ್ನು ಯಾರು ಕಳಿಸಿರುವರು ಬೇಗನೆ ಹೇಳು. ಏನು, ಅಫಜುಲಖಾನನು ಕಳಿಸಿ

ರುವನೋ? ಅಥವಾ ಗುಡ್ಡಗಾಡಿನೊಳಗಿನ ಮೋಸಗಾರನಾದ ಆ ದುಷ್ಟ ಶಿವಾಜಿಯು ನಿನ್ನನ್ನು ಕಳಿಸಿರುವನೋ?" ಎಂದು ಕೇಳಿದನು. ಶಿವಾಜಿಯ ಹೆಸರನ್ನು ಉಚ್ಚರಿಸಿದ ಕೂಡಲೆ, ಅದರಲ್ಲಿಯೂ "ಮೋಸಗಾರನು" "ದುಷ್ಟನು" ಎಂಬ ವಿಶೇಷಣಗಳನ್ನು ಶಿವಾಜಿಗೆ ಹಚ್ಚಿದ ಕೂಡಲೆ ಏಸಾಜಿಯು ಸಂತಾಪಗೊಂಡನು. ಆ ಕಾಲದಲ್ಲಿ ಅವನ ಬಳಿಯಲ್ಲಿ ಶಸ್ತ್ರಗಳಿದ್ದರೆ, ಅವನು ಆ ಜನರ ಮೇಲೆ ದುಮುಕಿಬಿಡುತ್ತಿದ್ದನು. ಬರಿಯ ದುಮುಕುವದೇ ಏಕೆ? ಐದಾರು ಜನರಲ್ಲಿ ಒಬ್ಬಿಬ್ಬರನ್ನಾದರೂ ನೆಲಕ್ಕೆ ಉರುಳಿಸುತ್ತಿದ್ದನು; ಆದರೆ ಮಾಡಬೇಕೇನು? ಆತನ ಬಳಿಯಲ್ಲಿ ಶಸ್ತ್ರಗಳಿದ್ದಿಲ್ಲ. ಆ ಜನರಂತು ಒಂದೇಸವನೆ—"ನೀನು ಯಾರು? ಇಲ್ಲಿಗೆ ಯಾಕೆ ಬಂದೆ" ಎಂದು ಕೆಣಕಿ ಕೆಣಕಿ ಕೇಳುತ್ತಲಿದ್ದರು. ಅವರಿಗೆ ಏಸಾಜಿಯು—"ಹೀಗೆಯೇ ನಾನೊಬ್ಬ ಹಾದಿಕಾರನು. ದಾರಿಯನ್ನು ತಪ್ಪಿ ಇತ್ತ ಕಡೆಗೆ ಬಂದಿರುವೆನಲ್ಲದೆ ಎರಡನೆಯದೇನೂ ಇಲ್ಲ." ಎಂದು ಹೇಳಿದನು; ಆದರೆ ಅವನ ಮಾತು ಒಬ್ಬರಿಗೂ ನಂಬಿಗೆಯಾಗಲಿಲ್ಲ. ಇವನು ಬುದ್ಧಿಪೂರ್ವಕವಾಗಿ ನಮ್ಮ ಗುಪ್ತಸಂಗತಿಯನ್ನು ಅರಿತುಕೊಳ್ಳುವದಕ್ಕಾಗಿಯೇ ಬಂದಿರುತ್ತಾನೆಂದು ತಿಳಿದುಕೊಂಡು, ಏಸಾಜಿಯನ್ನು ಪರಿಪರಿಯಾಗಿ ಪೀಡಿಸಹತ್ತಿದರು.

೫ನೆಯ ಪ್ರಕರಣ.

ಗುಪ್ತ ಕಾರಸ್ಥಾನ.

ಏಸಾಜಿಯು ತನಗೊದಗಿದ ಪ್ರಸಂಗವನ್ನು ಕುರಿತು ಆಲೋಚಿಸುತ್ತಿರುವಾಗ, ತಾನು ಜೀವದಿಂದ ಪಾರಾಗುವದು ಕಠಿಣವೆಂಬ ಸಂಗತಿಯು ಅವನಿಗೆ ಸ್ಪಷ್ಟವಾಗಿ ತೋರಹತ್ತಿತು. ಮರಣಕ್ಕಾಗಿ ಆತನು ಹೆದರುತ್ತಿದ್ದಿಲ್ಲ; ತನ್ನ ಸ್ವಾಮಿಯ ವಿರುದ್ಧವಾಗಿ ಇವರು ಒಳಸಂಚು ನಡೆಸಿದ್ದು, ಈ ವರ್ತಮಾನವು ತನ್ನ ಸ್ವಾಮಿಗೆ ತಿಳಿಯದಿದ್ದರೆ, ಎಲ್ಲಿ ಅನರ್ಥ ಒದಗುವದೋ ಎಂದು ಆ ಸ್ವಾಮಿಭಕ್ತನು ವ್ಯಸನಪಡುತ್ತಿದ್ದನು. ಅಷ್ಟರಲ್ಲಿ

ಒಬ್ಬನು ಏಸಾಜಿಯನ್ನು ಕುರಿತು—"ಎಲಾ, ನೀನು ಹಾದಿಕಾರನೆಂದು ಹೇಳುವೆಯಲ್ಲ, ಆದರೆ ನೀನು ಯಾವಊರವನು? ಎಲ್ಲಿಗೆ ಹೋಗುವೆ ಹೇಳು ನೋಡೋಣ? ನಿನ್ನ ತಗಲತನದಿಂದ ನಾವು ಮೋಸಹೋಗುವವರಲ್ಲ. ಹೇಳು, ನೀನು ಎಲ್ಲಿಯವನು, ಎಲ್ಲಿಗೆ ಹೋಗುತ್ತೀ."

ಏಸಾಜಿ—ನಾನು ಎಲ್ಲಿಯವನೇ ಇರಲಿ, ಎಲ್ಲಿಗೇ ಹೋಗಲಿ, ಅದನ್ನು ಕೇಳುವದರಿಂದ ನಿಮಗೆ ಪ್ರಯೋಜನವೇನು? ಸ್ವಲ್ಪ ಮೂಡಲು ಕೆಂಪಾದ ಕೂಡಲೆ ನಾನು ಹೊರಟು ಹೋಗುವೆನು.

ಮತ್ತೊಬ್ಬನು—ಇಲ್ಲಿಂದ ಹೋಗುವದು ನಿನ್ನ ಕೈಯೊಳಗಿರುವದಿಲ್ಲ. ನೀನು ನಮ್ಮ ಕೈಯಲ್ಲಿ ಸಿಕ್ಕಿರುತ್ತೀ, ನೀನು ನಿಜವಾಗಿ ಹಾದಿಕಾರನಿರುವೆಯೆಂದು ನಮ್ಮ ನಂಬಿಗೆ ಮಾಡಿಕೊಟ್ಟ ಹೊರತು ನಿನ್ನ ಬಿಡಗಡೆಯಾಗಲಾರದು.

ಏಸಾಜಿ (ಉದ್ಧಾಮತನದಿಂದ)—ಅದೇಕೆ? ನಾನೇನು ಅಂಥ ಅಪರಾಧ ಮಾಡಿರುತ್ತೇನೆ?

ತರುಣಶಿಷ್ಯ (ಸಿಟ್ಟಿನಿಂದ)—ಏಕೆಂದರೆ, ನಮ್ಮ ವೈರಿಯ ಕಡೆಯಿಂದ ನೀನು ನಮ್ಮ ಗುಪ್ತ ಒಳಸಂಚನ್ನು ತಿಳಕೊಂಡು ಹೋಗಲಿಕ್ಕೆ ಬಂದಿರುತ್ತೀಯೆಂದು? ನೀನು ಇಲ್ಲಿಗೆ ಬಂದಾಗಿನಿಂದ ಇಲ್ಲಿಂದ ಹೊರಟುಹೋಗೆಂದು ನಾವು ಹೇಳುತ್ತಿದ್ದರೂ ನೀನು ಹೋಗದೆಯಿರುವದು ಅಪರಾಧವಲ್ಲವೆ? ಈಗ ನಮ್ಮ ಗುಪ್ತ ಸಂಚನ್ನು ನೀನು ಕಣ್ಣುಮುಟ್ಟ ನೋಡಿರುವದರಿಂದ ನಿನ್ನನ್ನು ನಾವು ಇಲ್ಲಿಂದ ಹೋಗಗೊಡಲಾರೆವು.

ಶಿಷ್ಯನ ಕೋಮಲ ಧ್ವನಿಯನ್ನು ಕೇಳಿದ ಕೂಡಲೆ ಏಸಾಜಿಗೆ ಅವನ ವಿಷಯವಾಗಿ ಸಂಶಯವು ಉತ್ಪನ್ನವಾಯಿತು. ಇವನು ಪುರುಷನಲ್ಲ, ಸ್ತ್ರೀಯು ಎಂದು ಆತನು ತರ್ಕಿಸಿದನು. ಈ ಎಲ್ಲ ವಿಲಕ್ಷಣ ಪ್ರಕಾರದ ಗೂಢವು ಅವನಿಗೆ ತಿಳಿಯದಾಯಿತು. ಇಂಥ ತರುಣ ಸ್ತ್ರೀಯು ಪುರುಷ ವೇಷವನ್ನು ಧರಿಸಿ ಈ ಗೋಸಾವಿಯ ಶಿಷ್ಯವೃತ್ತಿಯನ್ನು ಯಾಕೆ ಕೈಕೊಂಡಿರಬಹುದು? ಈ ಗುಹೆಯ ಸಂಬಂಧವು ಇವರಿಗೇನಿರಬಹುದು? ಇವರ ವೈರಿಯು ಯಾರಾಗಿರಬಹುದು? ಮಹಾರಾಜರನ್ನು ಇವರು ತಿರಸ್ಕರಿಸುವ ಕಾರಣವೇನಿರಬಹುದು? ಇವೇ ಮೊದಲಾದ ಪ್ರಶ್ನಗಳು ಅವನ

ಮನಸ್ಸಿನಲ್ಲಿ ಉತ್ಪನ್ನವಾಗಿ ಅವನು ತರುಣ ಶಿಷ್ಯನನ್ನು ಕುರಿತು—"ನಿಮ್ಮ ವೈರಿಯು ಯಾರೆಂಬುದನ್ನು ಹೇಳಿದರೆ, ನಾನು ಅವನ ಕಡೆಯವನೋ ಬೇರೆಯವರ ಕಡೆಯವನೋ ಎಂಬದನ್ನಾದರೂ ಹೇಳೇನು.

ಶಿಷ್ಯ—ನಮ್ಮ ವೈರಿ ಯಾರೆಂದು ಕೇಳುವಿಯಾ? ನಮ್ಮ ವೈರಿಯು ಆ ಶಿವಾಜಿಯು! ಯಾವನು ನಮ್ಮ ತಂದೆಯ........

ಏಸಾಜಿ—ಏನಂದಿರಿ? ನಿಮ್ಮ ವೈರಿಯು ಶಿವಾಜಿ ಮಹಾರಾಜರೆ? ನಿಮ್ಮ ಈ ಮಾತನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಗುತ್ತದೆ. ಒಬ್ಬ ಮುಸಲ್ಮಾನರು ಮಾತ್ರ ಶಿವಾಜಿ ಮಹಾರಾಜರನ್ನು ವೈರಿಗಳೆಂದು ತಿಳಿಯುತ್ತಾರೆ. ಅವರ ಹೊರತು ಹಿಂದುಪದ ಬಾದಶಾಹಿಯನ್ನು ಸ್ಥಾಪಿಸಬೇಕೆಂದು ಯತ್ನಿಸುವ ಮಹಾರಾಜರಿಗೆ, ಬೇರೆ ವೈರಿಗಳಿರುವದಿಲ್ಲ. ಅದರಂತೆ ಮಹಾರಾಜರು ಬೇರೆಯವರಿಗೆ ವೈರಿಗಳಾಗಿರುವದಿಲ್ಲ.

ಗೋಸಾವಿ—ಸಾಕು, ಸಾಕು. ಇಷ್ಟರಿಂದಲೇ ನೀನು ಶಿವಾಜಿಯ ಪಕ್ಷಪಾತಿಯೆಂಬುದೂ, ಆತನ ನೌಕರನೆಂಬದೂ ನಮಗೆ ಸ್ಪಷ್ಟವಾಗಿ ಗೊತ್ತಾಯಿತು. ನಮ್ಮ ಗೊತ್ತು ಹಚ್ಚುವದಕ್ಕಾಗಿಯೇ ಆತನು ನಿನ್ನನ್ನು ಕಳಿಸಿರುತ್ತಾನೆ; ಆದರೆ ನಿನ್ನ ಶ್ರಮವು ವ್ಯರ್ಥವಾಯಿತೆಂದು ತಿಳಿದುಕೊ. ನೀನು ಇಲ್ಲಿಂದ ಪಾರಾಗಿ ಹೋಗಲಾರೆ.

ಹೀಗೆ ಗೋಸಾವಿಯು ನುಡಿಯುತ್ತಿರಲು, ಒಬ್ಬನು ಆತನನ್ನು ಕುರಿತು—"ನಮ್ಮ ಕೆಲಸವು ಇಂದಿಗೆ ಪೂರ್ಣವಾದದ್ದರಿಂದ ಭೂಮಾತೆಯ ಶಾಂತ್ಯರ್ಥವಾಗಿ ಬಲಿಕೊಡುವದು ಅವಶ್ಯವಾಗಿದೆ. ಈಗ ಈ ನರಬಲಿಯು ತಾನಾಗಿ ನಡೆದು ಬಂದಿರುತ್ತದೆ. ಇದನ್ನೇ ಬಲಿ ಕೊಟ್ಟುಬಿಟ್ಟರಾಯಿತು," ಎಂದು ಹೇಳಲು, ಬಲಿಯನ್ನು ಹ್ಯಾಗೆ ಕೊಡಬೇಕೆಂಬ ಬಗ್ಗೆ ಅವರಲ್ಲಿ ಶಾಸ್ತ್ರಾರ್ಥ ವಿಚಾರವು ನಡೆಯಿತು, ಒಬ್ಬ ಪಂಚಾಕ್ಷರಿಯನ್ನು ಕರೆಸಿ ಯಥಾವಿಧಿ ಪೂಜೆ ಪುನಸ್ಕಾರಾದಿಗಳನ್ನು ಮಾಡಿಸಿ ಶಾಸ್ತ್ರದಂತೆ ಬಲಿ ಕೊಡಬೇಕು, ಇಲ್ಲದಿದ್ದರೆ ಧರ್ಮ ಮಾಡುವದರೊಳಗೆ ಕರ್ಮವು ಮುಂದೆ ಬಂದು ನಿಂತೀತು," ಎಂದು ಒಬ್ಬನು ಹೇಳಿದನು. ಅದಕ್ಕೆ ಮತ್ತೊಬ್ಬನು, "ಈಗ ಇದೆಲ್ಲ ಹ್ಯಾಗೆ ಆದೀತು? ಬಲಿಯ ಉಸಾಬರಿಯು ಈಗ ಬೇಡ. ಇವನನ್ನು ಭೂಮಿಯಲ್ಲಿ ಜೀವದಿಂದ ಹುಗಿದುಬಿಟ್ಟರಾಯಿತು," ಎಂದು

ಹೇಳಿದನು. ಇನ್ನೊಬ್ಬನು—"ಕುರಿ ಕಡಿದಹಾಗೆ ಕಡಿದು ರಕ್ತವನ್ನು ಭೂಮಿಯಲ್ಲಿ ಸಿಂಪಡಿಸಿ ಇವನ ಶವವನ್ನು ಹುಗಿದುಬಿಡಬೇಕು," ಎಂದು ಹೇಳಿದನು. ಹೀಗೆ ತಮ್ಮ ತಮ್ಮೊಳಗೆ ವಾದಿಸುವದನ್ನು ನೋಡಿ ಬಾಲ ಶಿಷ್ಯನು ಸಂತಾಪದಿಂದ—"ಏ, ಕತ್ತೆಗಳಿರಾ, ನಿಮ್ಮ ವಾದಗಳು ಇಲ್ಲಿಗೆ ಮುಗಿಯಲಿ. ನೀವು ಯಾರ ಮುಂದೆ ವಾದಿಸಿಯಾಡುವಿರೆಂಬದರ ಎಚ್ಚರವು ನಿಮಗಿರುವದೆಯೆ? ನಾವು ಬೇಗನೆ ಗವಿಯ ಕೆಲಸವನ್ನು ಮುಗಿಸಿದೆವೆಂಬ ಉಬ್ಬಿನಿಂದ ನೀವು ಹೀಗೆ ನನ್ನ ಮುಂದೆ ವಾದ ವಿವಾದವನ್ನು ನಡೆಸಿರುವಿರೋ ಏನು? ನಾನು ಹೇಳಿದಂತೆ ನೀವು ಮಾಡಿರಿ. ಈಗ ಅವನನ್ನು ಹಿಡಿದು ಹೆಡಮುರಿಗೆ ಕಟ್ಟಿರಿ. ಈ ಗುಹೆಯ ಮುಂದೆ ಒಂದು ತಗ್ಗು ತೋಡಿ ಅದರಲ್ಲಿ ಇವನನ್ನು ಹಾಕಿ ಮೇಲೆ ಮಣ್ಣು ಮುಚ್ಚಿಬಿಡಿರಿ. ಇವನನ್ನು ಹುಗಿದ ಸ್ಥಳದಲ್ಲಿಯೇ ಇವನ ಒಡೆಯನಾದ ಶಿವಾಜಿಯನ್ನು ಕುಳ್ಳಿರಿಸಿ, ಗುಹೆಯೊಳಗಿನ ಮದ್ದಿಗೆ ಬೆಂಕಿ ಹಚ್ಚಿ ಹಾರಿಸಿಬಿಡೋಣ. ಹು, ಏಳಿರಿ, ಇನ್ನು ತಡಮಾಡಬೇಡಿರಿ, ತಗ್ಗು ತೋಡಿರಿ.

ಬಾಲ ಶಿಷ್ಯನ ಈ ದರ್ಪೋಕ್ತಿಗಳನ್ನು ಕೇಳಿ ಏಸಾಜಿಗೆ ಪರಮಾಶ್ಚರ್ಯವಾಯಿತು. ಗುರುವಾದ ಗೋಸಾವಿಯೂ ಈ ಬಾಲ ಶಿಷ್ಯನ ಆಜ್ಞಾಧಾರಕನಾಗಿರುವಂತೆ ಆತನಿಗೆ ತೋರಿತು. ಇದೇನು ಸೋಜಿಗವೆಂದು ಏಸಾಜಿಯು ಯೋಚಿಸತೊಡಗಿದನು. ಅತ್ತ ಕೆಲವರು ಕೂಡಲೆ ತಗ್ಗು ತೋಡಹತ್ತಿದರು. ಅದನ್ನು ನೋಡಿ, ಇನ್ನು ತನಗೆ ಯಾವ ಬಗೆಯ ಮರಣವು ಒದಗುವದೆಂಬದರ ಚಿತ್ರವು ಏಸಾಜಿಯ ಎದುರಿಗೆ ಸ್ಪಷ್ಟವಾಗಿ ಕಾಣಿಸಹತ್ತಿತು. ಮಹಾರಾಜರ ಪ್ರಾಣಹರಣ ಮಾಡಲಿಕ್ಕೆ ಈ ದುಷ್ಟರು ಇಷ್ಟೆಲ್ಲ ಮಾಡಿರುವರೆಂಬದು ಏಸಾಜಿಗೆ ಸ್ಪಷ್ಟವಾಗಿ ಗೊತ್ತಾಯಿತು. ಈ ಸಂಗತಿಯು ಮಹಾರಾಜರಿಗೆ ಹ್ಯಾಗೆ ತಿಳಿದೀತು? ನಾನಂತು ಇನ್ನು ಜೀವದಿಂದ ಉಳಿಯುವಹಾಗಿಲ್ಲ; ಆದರೆ ನನ್ನ ಜೀವದ ಚಿಂತೆ ನನಗಿಲ್ಲ. ಮಹಾರಾಜರಿಗೆ ಕ್ಷೇಮವು ಹ್ಯಾಗಾದೀತು? ಎಂದು ಯೋಚಿಸುತ್ತ, ಮತ್ತೆ ಧೈರ್ಯ ಮಾಡಿಕೊಂಡು—"ನಾನೇಕೆ ಚಿಂತೆ ಮಾಡಬೇಕು? ಮಹಾರಾಜರ ಚಿಂತೆಯು ಅಂಬಾಭವಾನಿಗೆ ಇರುವದು, ಮತ್ತು ಸಮರ್ಥ ರಾಮದಾಸ ಸ್ವಾಮಿಗಳಿಗಿರುವದು! ಹಾಗಿಲ್ಲದಿದ್ದರೆ ಮಹಾರಾಜರು ಈವರೆಗೆ ಇಷ್ಟು

ಸಂಕಟಗಳೊಳಗಿಂದ ಪಾರಾಗುತ್ತಿದ್ದರೆ? ಇಷ್ಟು ದಿನ ಕಾದ ಭವಾನಿಯು ಈಗಾದರೂ ಮಹಾರಾಜರನ್ನು ಕಾಯುವಳು. ಮಹಾರಾಜರ ಪುಣ್ಯವು ಬಲವತ್ತರವಾಗಿರುವದು. ಅವರ ಪುಣ್ಯಧಿಂದಲೇ ನಾನು ಈ ಸಂಕಟದೊಳಗಿಂದಲೂ ಪಾರಾಗಿ ಮಹಾರಾಜರಿಗೆ ಸಹಾಯಮಾಡುವ ಯೋಗವು ಯಾಕೆ ಒದಗಬಾರದು? ಅದಕ್ಕಾಗಿಯೇ ಭವಾನೀ ಮಾತೆಯು ನನ್ನನ್ನು ಇಲ್ಲಿಗೆ ಬರಮಾಡಿರಬಹುದು.

ಈ ಮೇರೆಗೆ ಏಸಾಜಿಯು ವಿಚಾರಮಾಡುತ್ತಿರಲು, ಆ ಬಾಲಶಿಷ್ಯನು ಸಂತಾಪದಿಂದ ತನ್ನ ಜನರ ಮೈಮೇಲೆ ಹೋಗಿ—"ಎಷ್ಟುಹೊತ್ತು! ಇನ್ನೂ ನಿಮ್ಮ ಕೆಲಸವಾಗಲಿಲ್ಲವೆ? ಮೊದಲು ಇವನ ಹೆಡಮುರಿಗೆ ಕಟ್ಟಿರಿ, ಎಂದು ಗದ್ದರಿಸಲು, ನಾಲ್ಕಾರು ಜನರು ಏಸಾಜಿಯ ಬಳಿಗೆ ಹೋದರು. ಆಗ ಏಸಾಜಿಯು ತನ್ನಿಂದಾದಷ್ಟು ಅವರೊಡನೆ ಗುದುಮುರಿಗೆ ಹಾಕಿದನು; ಆದರೆ ನಾಲ್ಕಾರು ಜನ ಲಠ್ಠರ ಮುಂದೆ ಒಬ್ಬನ ಆಟವೇನು ನಡೆಯಬೇಕು? ಆ ಜನರು ಏಸಾಜಿಯ ಹೆಡಮುರಿಗೆ ಕಟ್ಟಿದರು. ಅಷ್ಟರಲ್ಲಿ ತಗ್ಗೂ ಮುಗಿಯುತ್ತ ಬಂದಿತ್ತು. ತಗ್ಗು ತೋಡುವವರು ಹಿಲಾಲು ಹಿಡಿದು, ತಗ್ಗು ಇಷ್ಟು ಸಾಕೋ ಹೇಗೆಂಬುದನ್ನು ಗೋಸಾವಿಗೆ ತೋರಿಸಿದರು. ಗೋಸಾವಿಯು ಸಾಕೆಂದು ಹೇಳಲು, ಎಲ್ಲರೂ ಮೇಲಕ್ಕೆ ಬಂದು ಏಸಾಜಿಯನ್ನು ತಗ್ಗಿನಲ್ಲಿ ಒಗೆಯುವದಕ್ಕಾಗಿ ಅವನನ್ನು ಎತ್ತಿಕೊಂಡು ಹೋಗಲಿಕ್ಕೆ ಅವನ ಬಳಿಗೆ ಬಂದರು. ಹೆಡಮುರಿಗೆ ಕಟ್ಟಿದ್ದರಿಂದ ಏಸಾಜಿಯು ಉಲುಕಾಡುವಂತೆಯಿದ್ದಿಲ್ಲ. ಆ ಬಲಿಷ್ಠರು ಏಸಾಜಿಯನ್ನು ಎತ್ತಿಕೊಂಡು ಹೋಗಿ ತಗ್ಗಿನ ದಂಡೆಗೆ ಒಯ್ದು ಇಟ್ಟರು. ಆಗ ಬಾಲಶಿಷ್ಯನು ಅವರಿಗೆ—"ಎಲೇ, ನಿಲ್ಲಿರಿ ನಿಲ್ಲಿರಿ; ಹೀಗೆ ಒಮ್ಮೆಲೆ ಇವನನ್ನು ಒಗೆಯಬೇಡಿರಿ. ಇವನನ್ನು ತಗ್ಗಿನೊಳಗೆ ಇಳಿಸಿ, ಇವನ ಹೆಡಮುರಿಗೆಯನ್ನು ಉಚ್ಚಿ, ಮೇಲಿಂದ ಮಣ್ಣು ದೂಕಿರಿ. ಆಗ ಇವನು ಒದ್ದಾಡುವದನ್ನು ನೋಡಿದರೆ ನನಗೆ ಬಹಳ ಸಂತೋಷವಾಗುವದು," ಎಂದು ಹೇಳಿದನು. ಈ ಕ್ರೂರತನವನ್ನು ನೋಡಿ ಗೋಸಾವಿಯೂ ಅಸಹ್ಯಪಟ್ಟನು; ಅವನ ಅನುಯಾಯಿಗಳೂ ಅಸಹ್ಯಪಟ್ಟರು. ಆದರೂ ಆ ಶಿಷ್ಯನ ಆಜ್ಞೆಯಂತೆ ಅವರು ಏಸಾಜಿಯನ್ನು ತಗ್ಗಿನಲ್ಲಿ ಇಳಿಸಿ, ಅವನ ಹೆಡಮುರಿಗೆ ಬಿಚ್ಚಿ ತಾವು ಮೇಲಕ್ಕೆ ಬಂದ

ಕೂಡಲೆ ಮಣ್ಣು ದೂಕಹತ್ತಿದರು. ಏಸಾಜಿಯು ಒದ್ದಾಡುವದನ್ನು ನೋಡಿ ಬಾಲಶಿಷ್ಯನು ಗಹಗಹಿಸಿ ನಗಹತ್ತಿದನು. ಅಷ್ಟರಲ್ಲಿ ಗವಿಯ ಮುಂಭಾಗವು ಆಕಸ್ಮಾತ್ತಾಗಿ ಕಡಕೊಂಡು ಬಿದ್ದು, ಅರ್ಧತಗ್ಗು ಮುಚ್ಚಿಹೋಯಿತು. ಈ ಮನುಷ್ಯನು ಮಣ್ಣಲ್ಲಿ ಹುಗಿದುಹೊದನೆಂತಲೂ, ಮಣ್ಣು ಎಳೆಯುವ ತಮ್ಮ ದಾವತಿಯು ತಾನಾಗಿ ಉಳಿಯಿತೆಂತಲೂ, ಆಳುಗಳು ಸಮಾಧಾನ ಪಟ್ಟರು. "ಪಾಪ! ಮಣ್ಣಲ್ಲಿ ಹುಗಿದುಹೋದನು" ಎಂದು ಗೋಸಾವಿಯು ಮರುಗಿದನು. "ಗವಿಯ ಮುಂಭಾಗವು ಬೀಳದಿದ್ದರೆ ಇನ್ನೂ ಮೋಜು ಆಗುತ್ತಿತ್ತು." ಎಂದು ಬಾಲಶಿಷ್ಯನು ಚಡಪಡಿಸಿದನು. ಹೀಗೆ ಎಲ್ಲರೂ ಪ್ರವಾಸಿಯ ಕಥೆ ಮುಗಿಯಿತೆಂತಲೂ, ಬೆಳಗಾದ ಬಳಿಕ ತಗ್ಗನ್ನು ಪೂರ್ಣವಾಗಿ ಮುಚ್ಚೋಣವೆಂತಲೂ ಮಾತಾಡಿಕೊಂಡು ಬೆಂಕಿಯ ಬಳಿಯಲ್ಲಿ ಬಂದು ಗುಂಪಾಗಿ ಕುಳಿತುಕೊಂಡರು. ಆಳುಗಳು ಕೆಲಸಮಾಡಿ ಬಹಳ ದಣಿದಿದ್ದರಿಂದ, ಈಗಲೇ ತಗ್ಗು ಮುಚ್ಚಿಬಿಡಿರೆಂದು ಗೋಸಾವಿಯಾಗಲಿ ಬಾಲಶಿಷ್ಯನಾಗಲಿ ಆಗ್ರಹ ಮಾಡಲಿಲ್ಲ. ಮುಂಜಾನೆ ಮುಚ್ಚಲೊಲ್ಲೇಕೆ, ಎಂದು ಅಂದುಕೊಂಡು ಅವರೊಡನೆ ಮಾತಾಡುತ್ತ ಕುಳಿತುಕೊಂಡರು.

ಎಲ್ಲರೂ ಬೆಂಕಿಯನ್ನು ಕಾಸುತ್ತ ಕುಳಿತುಕೊಂಡಿರುವಾಗ ಗೋಸಾವಿಯು ತನ್ನ ಜನರನ್ನು ಕುರಿತು—"ಆ ಮನುಷ್ಯನು ಮಣ್ಣಲ್ಲಿ ಮುಚ್ಚಿಹೋದನು. ಈಗ ಅವನಿಗೆ ಕೈಕಾಲು ಅಲ್ಲಾಡಿಸಲಿಕ್ಕೆ ಸಹ ಶಕ್ತಿಯಿರಲಿಕ್ಕಿಲ್ಲ. ಈಗ ಅವನು ಹಾಗೆಯೇ ಇರಲಿ, ತನ್ನ ಕುಲದೇವತೆಯ ಸ್ಮರಣ ಮಾಡಲಿ. ಬೆಳಗಾದ ಬಳಿಕ ತಗ್ಗನ್ನು ಪೂರ್ಣವಾಗಿ ಮುಚ್ಚಿರಿ. ಆಮೇಲೆ ಆ ಗವಿಯಲ್ಲಿ ಹೋಗಿ ಒಮ್ಮೆ ಎಲ್ಲ ನೋಡಿಕೊಂಡು ಬಂದು ಮಾಡುವ ವ್ಯವಸ್ಥೆಯನ್ನು ಮಾಡೋಣ. ನೀವು ಬಹಳವಾಗಿ ದಣಿದಿರುವಿರಿ. ನಿಮ್ಮೆಲ್ಲರ ಶ್ರಮದಿಂದಲೇ ಕೆಲಸವು ಇಷ್ಟು ಬೇಗನೆ ಪೂರ್ಣವಾಯಿತು. ನಿಮ್ಮ ಮುಖ್ಯನಾದ ತುಳಾಜಿಯನ್ನು ಕಂಡು ನಿಮಗೆ ತಕ್ಕ ಉಚಿತವನ್ನು ಕೊಡುತ್ತೇನೆ. ಸದ್ಯಕ್ಕೆ ಇಷ್ಟು ಹಿಡಿಯಿರಿ," ಎಂದು, ಒಂದು ಬಂಗಾರದ ಗಟ್ಟಿಯನ್ನು ಬೆಂಕಿಯೊಳಗಿಂದ ತೆಗೆದು ಅವರ ಮುಂದೆ ಚಲ್ಲಿದನು. ಅದನ್ನು ನೋಡಿ ಅವರಿಗೆ ಆಶ್ಚರ್ಯವಾಯಿತು. ಗೋಸಾವಿಯು ಕಬ್ಬಿಣವನ್ನು ಬಂಗಾರ ಮಾಡಿ ಕೊಟ್ಟನೆಂದು ಅವರು ತಿಳಕೊಂಡರು. ಬೈರಾಗಿಯು

ಮೊದಲೆ ಬಂಗಾರದ ಗಟ್ಟಿಯನ್ನು ಬೆಂಕಿಯಲ್ಲಿ ಚಲ್ಲಿ ಕೊಟ್ಟಿರಬಹುದೆಂದು ತರ್ಕಿಸುವಷ್ಟು ಅವರು ವಿಚಾರವಂತರಿದ್ದಿಲ್ಲ. ಕಿಮಿಯಾ ಸಿದ್ಧಿಯಿಂದ ನಮ್ಮ ಬೈರಾಗಿಗಳು ಬೇಕಾದಷ್ಟು ಬಂಗಾರವನ್ನು ಮಾಡಬಲ್ಲರೆಂದು ಆ ಭಾವಿಕ ಜನರು ತಿಳಕೊಂಡಿದ್ದರು. ಅವರು ಒಬ್ಬರನ್ನೊಬ್ಬರು ಆಶ್ಚರ್ಯ ದಿಂದ ನೋಡುತ್ತ, ಗೋಸಾವಿಯ ವಿಷಯವಾಗಿ ಪೂಜ್ಯ ಬುದ್ಧಿಯುಳ್ಳವ ರಾದರು. ಗೋಸಾವಿಯ ನಿಜವಾದ ವೃತ್ತಾಂತವು ಅವರಿಗೆ ಗೊತ್ತಿದ್ದಿಲ್ಲ. ಅದು ಗೊತ್ತಾಗಬಾರದೆಂದು ಗೋಸಾವಿಯು ಬಹಳ ಎಚ್ಚರಪಡುತ್ತಿದ್ದನು. ಆ ಜನರು ಬಂಗಾರದ ಗಟ್ಟಿಯನ್ನು ತಕ್ಕೊಂಡು ಪರಮಾನಂದಪಟ್ಟಿರುವ ದನ್ನು ನೋಡಿ ಮತ್ತೆ ಗೋಸಾವಿಯು ಅವರಿಗೆ—"ಇಷ್ಟರಿಂದಲೇ ಆಯಿ ತೆಂದು ತಿಳಿಯಬೇಡಿರಿ. ನಮ್ಮ ಕೆಲಸವು ನಮ್ಮ ಮನಸ್ಸಿನಂತೆ ಆಯಿತೆಂ ದರೆ ನಿಮಗೆ ದೊಡ್ಡ ಇನಾಮು ಕೊಡುವೆವು. ನಿಮ್ಮ ಲಾಭವೆಲ್ಲ ಮುಂದಿನ ಕೆಲಸವನ್ನು ಅವಲಂಬಿಸಿರುವದು," ಎಂದು ಹೇಳುತ್ತಿರಲು, ಶಿಷ್ಯನು ಆ ಜನರನ್ನು ಕುರಿತು—"ಇನ್ನು ಮುಂದಿನ ಸಿದ್ಧತೆಯನ್ನು ಬೇಗನೆ ಮಾಡ ಬೇಕು. ಮೊದಲು ತಗ್ಗನ್ನು ಮುಚ್ಚಿರಿ. ಭೂಮಾತೆಗೆ ಉತ್ತಮ ಬಲಿಯು ಸಿಕ್ಕಿತು. ಆ ದುಷ್ಟನು—ನನ್ನ ತಂದೆಯ ಖೂನು..........." ಎಂದು ಏನೋ ನುಡಿಯುತ್ತಿರಲು, ಅವನ ಮುಖದೊಳಗಿನ ಶಬ್ದಗಳು ಮುಖದ ಲ್ಲಿಯೇ ಉಳಿದವು. ಸಂತಾಪದ ಭರದಿಂದ, ಅಥವಾ ಎದುರಿಗೆ ಏನೋ ಭಯಂಕರವಾದ ಚಿತ್ರವು ತೋರಿದ್ದರಿಂದ ಆ ಬಾಲಶಿಷ್ಯನು ದಪ್ಪನೆ ನೆಲಕ್ಕೆ ಬೀಳತಕ್ಕವನು, ಅಷ್ಟರಲ್ಲಿ ಬೈರಾಗಿಯು ಅವನನ್ನು ಎತ್ತಿಹಿಡಿದನು. ಹಾಗೆ ಹಿಡಿಯದಿದ್ದರೆ ಅಂದು ಶಿಷ್ಯನ ಪ್ರಾಣವು ಉಳಿಯುತ್ತಿದ್ದಿಲ್ಲ. ಅವನ ತಲೆಯು ಬೆಂಕಿಯಲ್ಲಿ ಬೀಳುತ್ತಿತ್ತು. ಬೈರಾಗಿಯು ಅವನನ್ನು ಸಾವರಿಸಿ ಹಿಡಿಯುವಾಗ ಅವನ ಕಫನಿಯು ಅಸ್ತವ್ಯಸ್ತವಾಗಿ ಶಿಷ್ಯನ ಅವಯವಗಳು ಹೊರಬಿದ್ದವು. ಶಿಷ್ಯನ ನಿಜವಾದ ಸ್ಥಿತಿಯು ಹೊರಬೀಳಬಾರದೆಂದು ಎಚ್ಚರಪಡುತ್ತಿದ್ದ ಬೈರಾಗಿಯು, ಶಿಷ್ಯನನ್ನು ಎತ್ತಿಕೊಂಡು ಹೋಗಿ ಗುಡಿಸಿ ಲೊಳಗಿನ ಹೊರಸಿನ ಮೇಲೆ ಮಲಗಿಸಿ ಅವನ ಕಣ್ಣಿಗೆ ನೀರು ಹಚ್ಚಿ, ನೆತ್ತಿಗೆ ನೀರು ತಟ್ಟಿದನು. ಬಹಳ ಹೊತ್ತಾದರೂ ಶಿಷ್ಯನಿಗೆ ಎಚ್ಚರವಾಗಲಿಲ್ಲ. ಹೊರಗಿನವರು ಹೊರಗೇ ಬೆಂಕಿಯ ಕಾಸುತ್ತ ಕುಳಿತು ಕುಳಿತು ಬೇಸತ್ತರು.

ಕಡೆಗೆ ಅವರು ಎದ್ದುಹೋಗಿ ತಗ್ಗನ್ನು ಪೂರ್ಣವಾಗಿ ಮುಚ್ಚಿ, ಗವಿಯ ಮುಖವನ್ನು ಸರಿಯಾಗಿ ಮಾಡಿದರು.

ಇತ್ತ ಶಿಷ್ಯನಿಗೆ ಎಚ್ಚರವಾಗಬೇಕೆಂದು ಗೋಸಾವಿಯು ಯತ್ನಿಸುತ್ತಿರಲು, ಶಿಷ್ಯನು ಎಚ್ಚತ್ತು ಕಣ್ತೆರೆದು ಕುಳಿತುಕೊಂಡು ಅತ್ತಿತ್ತ ನೋಡಹತ್ತಿದನು. ಆಗ ಗುರುವು ಶಿಷ್ಯನಿಗೆ—"ಬೇಟಾ, ಒಂದುದಿನ ನೀನು ಸಂತಾಪದ ಭರದಲ್ಲಿ ಗುಪ್ತ ಸಂಗತಿಯನ್ನೆಲ್ಲ ಹೊರಗೆಡವಿ ಕೆಲಸವನ್ನು ಕೆಡಿಸುವೆಯೆಂಬ ಅಂಜಿಕೆಯು ನನಗೆ ಬಹಳ ಇರುತ್ತದೆ. ಒತ್ತಟ್ಟಿಗೆ ಸುಮ್ಮನೆ ಕುಳಿತುಕೊಳ್ಳೆಂದು ನಾನು ನಿನಗೆ ಸಾವಿರ ಸಾರೆ ಹೇಳಿದ್ದೇನೆ, ಆದರೆ ನೀನು ಕೇಳುವದಿಲ್ಲ. ನಿನಗೆ ನನ್ನ ಮಾತಿನಲ್ಲಿ ವಿಶ್ವಾಸವಿಲ್ಲ. ಮತ್ತು ಮನಸ್ಸು ಬಿಗಿ ಹಿಡಿಯುವ ಧೈರ್ಯವಿಲ್ಲ. ನಿನ್ನ ಮನಸ್ಸಿನಲ್ಲಿದ್ದದ್ದನ್ನೆಲ್ಲ ನಾನು ಸಾಧಿಸುತ್ತೇನೆ, ಚಿಂತೆಮಾಡಬೇಡ. ನಿನಗೊದಗಿದ ದುಃಖವನ್ನು ನೋಡಿ ನಾನು ಹೆಚ್ಚಿಗೆ ಮಾತಾಡದೆ ನಿನ್ನ ಮನಸ್ಸಿನಂತೆ ಹೋಗುತ್ತೇನೆ; ಆದರೆ ನೀನು ಎಷ್ಟು ತಿಳಿಗೇಡಿಯು! ನಿನ್ನ ಮಾತಿನಂತೆ ನಡೆದರೆ ರಾಜಕಾರಣವು ಸಾಧಿಸಬಹುದೋ, ನೀನೇ ಹೇಳು. ನೀನು ಇನ್ನು ನನ್ನ ಮಾತನ್ನು ಕೇಳು, ಮೀರಬೇಡ. ನೀನು ಸ್ವಸ್ಥವಾಗಿ ಕುಳಿತ ಸ್ಥಳದಲ್ಲಿ ಕುಳಿತು ಬಿಡು. ಯಾವ ಕೆಲಸದಲ್ಲಿಯೂ ಬಾಯಿ ಹಾಕಬೇಡ; ಯಾರಿಗೂ ಏನೂ ಹೇಳಬೇಡ. ನಾನು ಆ ಜನರ ಸಂಗಡ ಹೋಗಿ ಒಮ್ಮೆ ಎಲ್ಲ ಗವಿಯನ್ನು ನೋಡಿ ಬರುತ್ತೇನೆ. ಅವರು ಐದಾರು ಅಪೂರ್ಣ ಗವಿಗಳನ್ನು ಅಲ್ಲಲ್ಲಿ ತೊಡಿರುವರಂತೆ. ಗವಿಯ ಮೋರೆಯಲ್ಲಿ ಭೋಲಾನನ್ನು ಕಾವಲಿಟ್ಟಿರುವರಂತೆ. ಇದನ್ನೆಲ್ಲ ತುಳಾಜಿಯು ನನಗೆ ಹೇಳಿರುತ್ತಾನೆ. ಅದರಿಂದ ಇದೆಲ್ಲವನ್ನು ಕಣ್ಣುಮುಟ್ಟಿ ನೋಡಿ, ನಮ್ಮ ಆ ವೈರಿಗೆ ಎಲ್ಲಿಯೂ ಸಂಶಯವು ಬಾರದಂತೆ ವ್ಯವಸ್ಥೆ ಮಾಡಬೇಕಾಗಿರುವದು. ಒಮ್ಮೆ ಆತನಿಗೆ ಎಲ್ಲಿಯಾದರೂ ನಮ್ಮ ವಿಷಯವಾಗಿ ಸಂಶಯವು ಉತ್ಪನ್ನವಾದರೆ, ಕೆಲಸವೇ ಮುಗಿಯಿತು. ನಮ್ಮೆಲ್ಲರ ನಾಶವಾಯಿತೆಂದು ತಿಳಿದುಕೋ. ನಾವು ಎಚ್ಚರದಿಂದ ಇದ್ದಷ್ಟು ಹಿತವು. ಇನ್ನು ನಾನು ಹೇಳಿದಂತೆ ಕೇಳು. ಸುಮ್ಮನೆ ಹಟಮಾರಿತನ ಮಾಡಬೇಡ, ಎಂದು ಹೇಳಿ, ಗೋಸಾವಿಯು ತಟ್ಟನೆ ಗುಡಿಸಿಲಿನಿಂದ ಹೊರಗೆ ಹೊರಟು

ಹೋದನು. ಶಿಷ್ಯನೂ ಆತನ ಬೆನ್ನ ಹಿಂದೆ ಎದ್ದು ಹೋಗಬೇಕೆಂದು ಮಾಡಿದನು; ಆದರೆ ಆತನಿಗೆ ಏಳಲಿಕ್ಕೇ ಬರಲೊಲ್ಲದು! ಅವನ ಶಕ್ತಿಯೆಲ್ಲ ಕ್ಷೀಣವಾದಂತಾಗಿತ್ತು; ಆದ್ದರಿಂದ ಅವನು ಹುಚ್ಚುಹಿಡಿದವನಂತೆ ಅತ್ತಿತ್ತ ನೋಡಹತ್ತಿ ತನ್ನೊಳಗೇ ಏನೋ ಒಟಗುಟ್ಟಿದನು.

ಇತ್ತ ಗೋ ಸಾ ವಿ ಯು ಹೊರಗೆ ಬಂದನು. ಬೆಳ್ಳಗೆ ಬೆಳಗಾಗಿ ಸೂರ್ಯಪ್ರಕಾಶವು ಸ್ವಚ್ಛವಾಗಿ ಬಿದ್ದಿತ್ತು. ಆತನು ತನ್ನ ಜನರನ್ನು ಕರಕೊಂಡು ಗವಿಯನ್ನು ಹೊಕ್ಕನು. ಇಬ್ಬರು ಗೋಸಾವಿಯ ಮುಂದೆ ಸಾಗಿದ್ದರು. ಉಳಿದವರು ಹಿಂದಿನಿಂದ ನಡೆದಿದ್ದರು. ಗೋಸಾವಿಯು ಗುಹೆಯನ್ನು ಪರೀಕ್ಷಿಸುತ್ತ, ಮನಸ್ಸಿನಲ್ಲಿ ಸಮಾಧಾನಪಡುತ್ತ ಗವಿಯ ಮುಖಕ್ಕೆ ಬಂದನು. ಅಲ್ಲಿ ಭಯಂಕರ ಸ್ಥಿತಿಯು ಅವನ ಕಣ್ಣಿಗೆ ಬಿದ್ದಿತು. ಭೋಲ್ಯಾನು ಮರಣ ಹೊಂದಿ ಅಸ್ತವ್ಯಸ್ತವಾಗಿ ಬಿದ್ದಿದ್ದನು. ತುಳಾಜಿಯು ವಿಚಾರಮಾಡುತ್ತಾ ನಿಂತುಕೊಂಡಿದ್ದನು. ಇದನ್ನೆಲ್ಲ ನೋಡಿ ಗೋಸಾವಿಯು ಆಶ್ಚರ್ಯಪಟ್ಟು ತುಳಾಜಿಯನ್ನು ಕುರಿತು—"ತುಳಾಜೀ, ಇದೇನು ಅನರ್ಥವು? ಭೋಲ್ಯಾನ ಗತಿಯು ಹೀಗಾದದ್ದು ಆಶ್ಚರ್ಯವಷ್ಟೇ ಅಲ್ಲ, ನಮಗೆ ಅಶುಭಕರವೂ ಆಗಿರುವದು. ಈ ಪ್ರಸಂಗವು ಹ್ಯಾಗೆ ಒದಗಿರಬಹುದು? ಭೋಲ್ಯಾನು ದೈತ್ಯನಂಥವನು, ಅಷ್ಟಕ್ಕಷ್ಟಕ್ಕೆ ಒಬ್ಬರಿಬ್ಬರಿಗೆ ಮಣಿಯತಕ್ಕವನಲ್ಲ; ಅಂದ ಬಳಿಕ ನಮ್ಮ ಈ ಗವಿಯ ಸುದ್ದಿಯು ಷಟ್ಕರ್ಣವಾಗಿರಬಹುದೇನು? ಹಾಗಾದರೆ, ನಮ್ಮ ಶ್ರಮವೆಲ್ಲ ವ್ಯರ್ಥವಾಗಬಹುದಲ್ಲ ಏನೊ! ಹೀಗೆ ಯಾಕಾಗಿರಬಹುದು?" ಎಂದು ಕೇಳಲು, ತುಳಾಜಿಯು—ನಾನೂ, ಅದನ್ನೇ ಕುರಿತು ವಿಚಾರ ಮಾಡುತ್ತಲಿದ್ದೇನೆ. ಭೋಲ್ಯಾನಿಗೆ ಗಾಯುಗಳೆಲ್ಲಿಯೂ ಆಗಿಲ್ಲ. ಅವನನ್ನು ಕುತ್ತಿಗೆ ಹಿಸುಕಿ ಕೊಂದಿರುವರೆಂತಲೂ ಹೇಳಲಿಕ್ಕೆ ಬರುವ ಹಾಗಿಲ್ಲ; ಅಂದ ಬಳಿಕ ಇವನು ಏನಾಗಿ ಸತ್ತಿರಬಹುದು? ಆದರೆ ಇಲ್ಲಿ ಶಸ್ತ್ರಗಳು ಬಿದ್ದಿರುವದರಿಂದಲೂ, ಮನುಷ್ಯರು ಗುದುಮುರಿಗೆ ಹಾಕಿದ ಚಿಹ್ನಗಳು ತೋರುತ್ತಿರುವದರಿಂದಲೂ, ಯಾರೋ ಇಲ್ಲಿಗೆ ಬಂದಿರುವುದೇನೋನಿಜ. ಇವರನ್ನು ಗವಿಯಲ್ಲಿ ಕೆಲಸಮಾಡಲಿಕ್ಕೆ ಕಳಿಸಿದಾಗ ಭೋಲ್ಯಾನು ಹೊರಗೆ ಕುಳಿತಿದ್ದನು; ಆದ್ದರಿಂದ ಭೋಲ್ಯಾನು ಸತ್ತು ಬಹಳ ಹೊತ್ತು ಆಗಿಲ್ಲ, ನಿನ್ನೆ

ರಾತ್ರಿಯಲ್ಲಿಯೇ ಇವನು ಮರಣ ಹೊಂದಿರುವನು. ಇಲ್ಲಿ ಈ ಶಸ್ತ್ರಕ್ಕೆ ಮಾತ್ರ ರಕ್ತ ಹತ್ತಿದೆ. ಭೋಲ್ಯಾನ ಮೈಗೆಲ್ಲಿಯೂ ರಕ್ತ ಹತ್ತಿರುವದಿಲ್ಲ; ಅಂದ ಬಳಿಕ ರಕ್ತ ವೆಲ್ಲಿಯದು? ಇತ್ತ ನೋಡಿರಿ, ಹಾವಿನ ತುಂಡು! ಭೋಲ್ಯಾನು ಸಾಕಿದ ಹಾವೇ ಅವನನ್ನು ಕಚ್ಚಿ ಕೊಂದಿರಬಹುದೇನು? ಭೋಲ್ಯಾನು ಆ ಹಾವಿನ ಸಂಗಡ ಆಡುತ್ತಿರುವಾಗ ಅದು ಸಿಟ್ಟಿಗೆದ್ದು ಕಚ್ಚಲು, ಅವನೇ ಅದನ್ನು ತುಂಡರಿಸಿರಬಹುದೇನು? ಹಾಗಿದ್ದರೆ ಈ ಹಗ್ಗದ ತುಂಡುಗಳು ಇಲ್ಲಿ ಯಾಕೆ ಬಿದ್ದಿವೆ? ಇವನ್ನೆಲ್ಲ ನೋಡಿ ನನ್ನ ಮನಸ್ಸಿಗೆ ಏನೂ ಗೊತ್ತಾಗದಾಗಿದೆ! ಈ ಶಸ್ತ್ರಗಳು ಭೋಲ್ಯಾನವಲ್ಲವಾದ್ದರಿಂದ ಯಾರೋ ಇಲ್ಲಿಗೆ ಬಂದಿರಬಹುದಾಗಿ ತೋರುತ್ತದೆ. ನಿಜವಾದ ಸಂಗತಿಯನ್ನು ದೇವರೇ ಬಲ್ಲನು! ಶಿವಾಜಿಯ ಸರದಾರರು ಅರಣ್ಯವನ್ನು ಶೋಧಿಸುತ್ತಿರುವರೆಂದು ಕೇಳಿದ್ದೇನೆ. ಅವರಲ್ಲಿ ಯಾರಾದರೂ ಇಲ್ಲಿಗೆ ಬಂದಿರಬಹುದೇನು?

ತುಳಾಜಿಯ ಈ ಮಾತುಗಳನ್ನು ಕೇಳಿ ಗೋಸಾವಿಯು ಸ್ವಲ್ಪ ಹೊತ್ತು ಆಲೋಚಿಸಿ ತುಳಾಜಿಯನ್ನು ಕುರಿತು—"ತುಳಾಜೀ, ನಿನ್ನೆ ರಾತ್ರಿ ನಮ್ಮ ಗುಡಿಸಿಲಿಗೆ ಒಬ್ಬನು ಬಂದಿದ್ದನು. ಅವನನ್ನು ನಾವು ಗೊತ್ತಿಗೆ ಹಚ್ಚಿದ್ದೆನೆ. ಅವನೇ ಈ ಭೋಲ್ಯಾನ ಸಂಗಡ ಬಡಿದಾಡಿದವನಾಗಿದ್ದರೆ ನಮ್ಮ ಗುಹೆಯ ವರ್ತಮಾನವು ಹೊರಗೆ ಗೊತ್ತಾಗುವ ಸಂಭವವಿಲ್ಲ. ಅವನಲ್ಲದ ಬೇರೊಬ್ಬನಾಗಿದ್ದರೆ ಮಾತ್ರ ಕೆಲಸವು ಕೆಡುವದು. ಶಿವಾಜಿಗೆ ಸುದ್ದಿ ಹತ್ತುವದೊಂದೇ ತಡವು; ಆತನು ಎಳೆ ಸಿಕ್ಕರೆ ಹಚ್ಚಡ ನುಂಗುವವನು. ಸ್ವಲ್ಪ ಸುದ್ದಿ ಹತ್ತಿದರೆ ಸಾಕು, ಅಷ್ಟರಿಂದ ಆಕಾಶಪಾತಾಳ ಒಂದು ಮಾಡಿ ನಮ್ಮ ಗುಪ್ತಕಾರಸ್ಥಾನದ ಮೂಲವನ್ನು ಗೊತ್ತು ಹಚ್ಚುವನು. ಜನರನ್ನು ವಶಮಾಡಿಕೊಳ್ಳುವ ಅವನ ಶಕ್ತಿಯು ಅಗಾಧವಾದದ್ದು. ನೂರರಲ್ಲಿ ತೊಂಬತ್ತರೊಂಬತ್ತು ಜನರೇ ಅಲ್ಲ, ಸಾವಿರದಲ್ಲಿ ಒಂಬೈನೂರಾ ತೊಂಬತ್ತರೊಂಬತ್ತು ಅವನ ಮಾತಿಗೆ ಮರುಳಾಗಿ ಅವನವರಾಗುವರು! ಅಂದ ಬಳಿಕ ನಮ್ಮ ಗುಪ್ತಸಂಗತಿಯು ಹೊರಬೀಳದೆ ಹ್ಯಾಗೆ ಉಳಿಯುವದು? ಈ ಮಾತಿನ ಶೋಧವನ್ನು ನಾವು ವಿಲಂಬ ಮಾಡದೆ ಮಾಡಲೇ ಬೇಕು. ಶಿವಾಜಿಗೆ ನಮ್ಮ ಕಾರಸ್ಥಾನದ ಸುಳವು ಹತ್ತಿದ್ದೇ ನಿಜವಿದ್ದರೆ,

ನಾವು ಈ ಸ್ಥಳವನ್ನು ಬಿಟ್ಟು ಬೇರೆ ಕಡೆಗೆ ಹೋಗಿಬಿಡಬೇಕು, ಅಂದರೆ ಈ ಉಪಾಯದಿಂದ ಸಾಧಿಸದೆ ಇದ್ದ ನಮ್ಮ ಕೆಲಸವನ್ನು, ಸಮಯನೋಡಿ ಬೇರೊಂದು ಉಪಾಯದಿಂದ ಸಾಧಿಸಿಕೊಳ್ಳಲಿಕ್ಕೆ ಮಾರ್ಗವಾದರೂ ಉಳಿಯುವದು. ನಾನು ಈ ಮಾತಿನ ಶೋಧವನ್ನು ಮಾಡಿ ತೀರುವೆನು. ನನ್ನ ವೇಷವು ಈ ಕೆಲಸಕ್ಕೆ ಅನುಕೂಲವಾಗಿದೆ. ನಾನು ಈ ಗೋಸಾವಿಯ ಸೋಗಿನಿಂದ ಹೋದರೆ ನನ್ನ ಗುರುತನ್ನು ಯಾರೂ ಹಿಡಿಯಲಿಕ್ಕಿಲ್ಲ. ಸದ್ಯದ ಪ್ರಸಂಗವೂ ನನಗೆ ಅನುಕೂಲವಾಗಿರುತ್ತದೆ. ಈಗ ಶಿವಾಜಿಯು ಅಫಜುಲಖಾನನಿಗೆ ಮಂಕುಬೂದಿ ಹಚ್ಚಿ ಕಳಿಸಲು ಯತ್ನ ನಡಿಸಿರುತ್ತಾನಂತೆ. ಆತನ ಈ ಪ್ರಯತ್ನಕ್ಕೆ ಬಹು ಜನರಿಂದ ಸಹಾಯವಾಗುವ ಸಂಭವವಿರುತ್ತದೆ. ಕೆಂಜಳದ ಆನಂದಭಾರತಿಯವರೇನೋ ಆತನಿಗೆ ಸಹಾಯ ಮಾಡುವವರಿದ್ದಾರಂತೆ. ಅವರಿಬ್ಬರ ಭೆಟ್ಟಿಯ ಯೋಗವು ಮೂಲತಃ ಇನ್ನೂ ಒದಗಿರುವುದಿಲ್ಲ; ಆದ್ದರಿಂದ ನಾನೆ ಅವರಾಗಿ, ಇಲ್ಲವೆ ಅವರ ಕಡೆಯಿಂದ ಹೋದ ಒಬ್ಬ ಶಿಷ್ಯನಾಗಿ ಶಿವಾಜಿಯ ದರ್ಬಾರಕ್ಕೆ ಹೋಗುತ್ತೇನೆ; ಇದರಿಂದ ನನ್ನ ಆದರೋಪಚಾರಗಳು ಸರಿಯಾಗಿ ಆಗಿ, ಅವನ ಮನಸ್ಸಿನೊಳಗಿನ ಸಂಗತಿಯನ್ನು ತಿಳಕೊಳ್ಳಲಿಕ್ಕೂ ಆಸ್ಪದವು ದೊರೆಯುವದು. ನೀವು ಗುಡಿಸಿಲಿನ ಕಡೆಗೆ ಲಕ್ಷವಿಡಿರಿ. ಇನ್ನು ನಾನು ತಿರುಗಿ ಗುಡಿಸಿಲಿಗೆ ಹೋಗುವದಿಲ್ಲ. ನಾನು ಇಂಥ ಕೆಲಸಕ್ಕೆ ಹೋಗಿರುವೆನೆಂದು ಹೇಳಿದರೆ, ಶಿಷ್ಯನು ಸಮಾಧಾನಪಡುವನು, ಎಂದು ಹೇಳಿ ಗೋಸಾವಿಯು ಹೊರಟುಬಿಟ್ಟನು. ಇಷ್ಟು ಅವಸರದಿಂದ ಹೋಗುವದು ತುಳಾಜಿಯ ಮನಸ್ಸಿಗೆ ಬರಲಿಲ್ಲ; ಆದರೆ ಗೋಸಾವಿಯ ಆತುರವನ್ನು ನೋಡಿ, ಈಗ ತನ್ನ ಮಾತು ನಡೆಯಲಿಕ್ಕಿಲ್ಲೆಂದು ತಿಳಿದು ತುಳಾಜಿಯು ಸುಮ್ಮನಿದ್ದನು. ಅಷ್ಟು ಸ್ಪಷ್ಟವಾಗಿ ಹೇಳುವಷ್ಟು ಅಧಿಕಾರವೂ ಆತನಿಗಿದ್ದಿಲ್ಲ, ಮುಂದೆ ಏನು ಮಾಡಬೇಕೆಂಬದೂ ತುಳಾಜಿಗೆ ತಿಳಿಯದಾಯಿತು. ಮೊದಲು ಗೊತ್ತಾದಂತೆ ನಾನು ಗವಿಯಲ್ಲಿ ಎಲ್ಲ ವ್ಯವಸ್ಥೆಯನ್ನು ಮಾಡಿ ಇಡಬಹುದೆ? ಅದನ್ನಾದರೂ ಕೇಳಿಕೊಳ್ಳಲಿಲ್ಲವಲ್ಲ. ಇನ್ನು ನಾನು ಏನು ಮಾಡಬೇಕು? ನೆಲದಲ್ಲಿ ಹುಗಿದ ಆ ಮನುಷ್ಯನು ಯಾರೆಂಬದು ಗೊತ್ತು ಹತ್ತಿದರೆ ನೋಡೋಣ, ಎಂದು ಯೋಚಿಸಿ ತನ್ನಜನರನ್ನು ಕರೆದು ನಿಮ್ಮಲ್ಲಿ

ಇಬ್ಬರು ಈ ಭೋಲ್ಯಾನ ಶವವನ್ನು ಹಳ್ಳದ ದಂಡೆಗೆ ಒಯ್ದು ಎಲ್ಲಿಯಾದರೂ ಸುಟ್ಟುಬಿಡಿರಿ. ಅವನ ಋಣಾನುಬಂಧವು ಇಲ್ಲಿಗೆ ತೀರಿತು, ಉಳಿದವರು ಕಟ್ಟಿಗೆ ಕಡಿಯುವ ಕೆಲಸಕ್ಕೆ ಹೋಗಿರಿ, ಎಂದು ಹೇಳಿ, ತಾನು ಗವಿಯ ಕಡೆಗೆ ನಡೆದನು. ಆತನು ಗುಹೆಯನ್ನು ಪ್ರವೇಶಿಸಿ, ಎಲ್ಲ ಕಡೆಗೂ ಸೂಕ್ಷ್ಮರೀತಿಯಿಂದ ಪರೀಕ್ಷಿಸಹತ್ತಿದನು; ಆದರೆ ಏನೂ ಗೊತ್ತಾಗಲಿಲ್ಲ. ಅಷ್ಟರಲ್ಲಿ ಅವನ ಮನಸ್ಸಿನಲ್ಲಿ ಒಂದು ವಿಚಾರವು ಉತ್ಪನ್ನವಾಯಿತು. ಆ ನೆಲದಲ್ಲಿ ಹುಗಿದ ಮನುಷ್ಯನು ಶಿವಾಜಿಯ ಕಡೆಯ ಸರದಾರನೇ ಆಗಿದ್ದರೆ, ಅವನ ಕುದುರೆಯು ಈ ಅಡವಿಯಲ್ಲಿ ಎಲ್ಲಿಯಾದರೂ ಇರಬಹುದು, ಶೋಧ ಮಾಡಿಸಬೇಕು, ಎಂದು ಯೋಚಿಸಿ ಪುನಃ ತನ್ನ ಜನರ ಬಳಿಗೆ ಹೋಗಿ ನಾಲ್ಕಾರು ಜನರನ್ನು ಕುದುರೆಯ ಶೋಧಕ್ಕಾಗಿ ಕಳಿಸಿ, ತಾನು ಪುನಃ ಗವಿಯನ್ನು ಪ್ರವೇಶಿಸಿದನು. ಆತನು ಅತ್ತಿತ್ತ ಶೋಧಮಾಡುತ್ತಿರಲು, ತಾವು ಗಾಳಿ ಬರುವದಕ್ಕಾಗಿ ಬಿಟ್ಟಿದ್ದ ಬೆಳಕಿಂಡಿಯೊಂದು ದೊಡ್ಡದಾಗಿ ಹೆಚ್ಚು ಪ್ರಕಾಶ ಬಿದ್ದದ್ದನ್ನು ನೋಡಿ ಅಲ್ಲಿ ನಿಂತುಕೊಂಡು ಪರೀಕ್ಷಿಸಹತ್ತಿದನು. ಇದೇ ದ್ವಾರದಿಂದಲೇ ಆ ಮನುಷ್ಯನು ಹೊರಗೆ ಹೋಗಿರುವನೆಂಬ ನಿಶ್ಚಯವು ಆತನಿಗಾಯಿತು. ಆತನು ಸ್ವತಃ ಆ ಬಿಲದೊಳಗಿಂದ ಹೊರಗೆ ಬಂದು ನೋಡಿದನು. ಆ ಮನುಷ್ಯನು ಗುಹೆಯ ದ್ವಾರದಲ್ಲಿದ್ದ ಭೋಲ್ಯಾನನ್ನು ಗೊತ್ತಿಗೆ ಹಚ್ಚಿ, ಅಲ್ಲಿಂದಲೇ ಈ ಗವಿಯನ್ನು ಪ್ರವೇಶಿಸಿರುವನೆಂತಲೂ, ಗವಿಯನ್ನು ತೋಡುವ ಜನರು ಒಳಗೆ ಕೆಲಸಮಾಡುತ್ತಿದ್ದದ್ದನ್ನು ಅರಿತು ಇದೇ ಮಾರ್ಗದಿಂದ ಆತನು ಹೊರಗೆ ಹೋಗಿರುವನೆಂತಲೂ ತಿಳಿದುಕೊಂಡನು. ಆ ಮನುಷ್ಯನನ್ನು ಗೊತ್ತಿಗೆ ಹಚ್ಚಿಬಿಟ್ಟದ್ದರಿಂದ ಗೋಸಾವಿಯವರು ಸುಮ್ಮನೆ ಅವಸರ ಮಾಡಿದರೆಂದು ಆತನಿಗೆ ಅಸಮಾಧಾನವಾಯಿತು. ಅವರು ಇನ್ನೂ ದೂರ ಹೋಗಿರಲಿಕ್ಕಿಲ್ಲ, ಯಾರನ್ನಾದರೂ ಓಡಿಸಿ ಅವರನ್ನು ಕರಿಸಿಕೊಳ್ಳಬೇಕೆಂದು ಗವಿಯಿಂದ ಹೊರಗೆ ಬಂದು ತನ್ನ ಜನರ ಬಳಿಗೆ ಹೋಗುತ್ತಿದ್ದನು. ಅಷ್ಟರಲ್ಲಿ ಕುದುಗೆಯನ್ನು ನೋಡಲಿಕ್ಕೆ ಹೋಗಿದ್ದ ಜನರು, ಒಂದು ಗಿಡಕ್ಕೆ ಕುದುರೆಯು ಕಟ್ಟಿರುವದೆಂದು ಬಂದು ಹೇಳಲು, ಅವನ ಸಂಶಯದ ನಿವಾರಣವಾಯಿತು. ಆತನು ಗೊಸಾವಿಯವರ ಕಡೆಗೆ ಆಳನ್ನು ಕಳಿಸಲು,

ಅಥವಾ ಮೊದಲು ಗೊತ್ತಾಗಿದ್ದಂತೆ ಗುಹೆಯಲ್ಲಿ ಎಲ್ಲ ವ್ಯವಸ್ಥೆಯನ್ನು ಮಾಡಿ ಬಿಡಲಾ, ಎಂದು ಆಲೋಚಿಸುತ್ತ, ಈ ಪ್ರಸಂಗದಲ್ಲಿ ನಮ್ಮ ಆ ತರುಣ ಶಿಷ್ಯನ ಅಭಿಪ್ರಾಯವನ್ನು ಕೇಳಿಕೊಳ್ಳಬೇಕೆಂದು ಗುಡಿಸಿಲಿನ ಕಡೆಗೆ ಹೊರಟನು.

೧೧ನೆಯ ಪ್ರಕರಣ

ಬೈರಾಗಿಣಿಯ ದೀಕ್ಷೆಯು.

ತುಳಾಜಿಯು ಹೋದಾಗ ಬಾಲಗೋಸಾವಿಯು ಗುಡಿಸಿಲಿನ ಹೊರಗೆ ವಿಚಾರಮಾಡುತ್ತ ಕುಳಿತುಕೊಂಡಿದ್ದನು. ಆತನು ತುಳಾಜಿಯನ್ನು ನೋಡಿ ಆತುರದಿಂದ—"ಎಲ್ಲಿ? ಗುರುಗಳು ಬರಲಿಲ್ಲ? ನೀನೊಬ್ಬನೇ ಬಂದೆಯಲ್ಲ," ಎಂದು ಕೇಳಿದನು. ಆಗ ತುಳಾಜಿಯು ಆತನ ಬಳಿಯಲ್ಲಿ ಕುಳಿತುಕೊಂಡು ನಡೆದ ವರ್ತಮಾನವನ್ನೆಲ್ಲ ಹೇಳಿದನು. ಅದನ್ನು ಕೇಳಿ ಬಾಲಗೋಸಾವಿಯು ಚಿಂತೆಯಲ್ಲಿ ಮುಣುಗಿದನು. ಇಷ್ಟು ದಿವಸ ಪರಮ ಸಾಹಸಪಟ್ಟು, ಇಷ್ಟು ಜನರನ್ನು ಒಂದೇಸವನೆ ದುಡಿಸಿ ಮಾಡಿದ ಕಾರ್ಯದ ಹಾನಿಯು ಎಲ್ಲಿ ಆಗುವದೋ ಎಂದು ಆತನು ವ್ಯಸನಪಡಹತ್ತಿದನು. ಆಮೇಲೆ ಬಹಳ ಹೊತ್ತಿನವರೆಗೆ ಅವರಿಬ್ಬರು ಮಾತಾಡಿದರು. ಅವರು ತಮ್ಮ ಮನಸ್ಸಿನಲ್ಲಿ ಏನು ನಿರ್ಧರಿಸಿಕೊಂಡರೆಂಬುವದನ್ನು ಅವರೇ ಬಲ್ಲರು. ಕೆಲವುಹೊತ್ತಿನ ಮೇಲೆ ತುಳಾಜಿಯು ಬಾಲಗೊಸಾವಿಯ ಸಮ್ಮತಿಯಿಂದ ಹೊರಟುಹೋದನು. ಬಾಲಗೋಸಾವಿಯು ಮನಸ್ಸಿನಲ್ಲಿ ಸಮಾಧಾನವಿಲ್ಲದೆ ಗುಡಿಸಿಲಿನ ಮುಂದೆ ಇತ್ತಿಂದತ್ತ, ಅತ್ತಿಂದಿತ್ತ ಎಡತಾಕಹತ್ತಿದನು. ಎಷ್ಟು ಹೊತ್ತಾದರೂ ಅವನ ಎಡತಾಕೋಣವು ಮುಗಿಯಲೊಲ್ಲದು. ಹೀಗೆ ಅತನು ಯಾವ ಉದ್ದೇಶವೂ ಇಲ್ಲದೆ ವಿಚಾರಮಗ್ನನಾಗಿ ಎಡತಾಕುತ್ತಿರಲು, ಒಬ್ಬ ತರುಣನಾದ ಮರಾಟನು ಒಬ್ಬ ತರುಣಿಯನ್ನು ಕರಕೊಂಡು ಅಲ್ಲಿಗೆ ಬಂದನು. ಅವರನ್ನು ನೋಡಿದ ಕೂಡಲೆ ಬಾಲಗೋಸಾವಿಯು ಮೆಟ್ಟಿ ಬಿದ್ದನು. ಸ್ವಲ್ಪಹೊತ್ತಿನಲ್ಲಿ ತನ್ನ ವೃತ್ತಿಯನ್ನು ಸಮಾಧಾನಪಡಿಸಿ

ಕೊಂಡು ಆವನು ಆ ಬಂದ ತರುಣ-ತರುಣಿಯರನ್ನು ಕುರಿತು—"ಯಾರು ನೀವು? ಇಲ್ಲಿಗೆ ಹ್ಯಾಗೆ ಬಂದಿರಿ? ಛೀ ಛೀ, ಏನು ತ್ರಾಸವಪ್ಪಾ ಇದು! ಸರ್ವಸಂಗ ಪರಿತ್ಯಾಗಮಾಡಿ ಈ ಘೋರಾರಣ್ಯದಲ್ಲಿ ಬಂದು ಕುಳಿತರೂ ಈ ಜನರು ನಮ್ಮನ್ನು ಸಮಾಧಾನದಿಂದ ಕೂಡಗೊಡಲೊಲ್ಲರು! ಇದಕ್ಕೇನು ಮಾಡಬೇಕಾದೀತು! ಹೋಗಿರಿ! ಹೋಗಿರಿ! ನಿಮ್ಮ ಹಾದಿಯು ಹಿಡಿದು ನೀವು ಹೋಗಿರಿ! ಅಪ್ಪಗಳಿರಾ, ನಮ್ಮಂಥ ತಪಸ್ವಿಗಳ ತಪಶ್ಚರ್ಯದ ಭಂಗಮಾಡಬೇಡಿರಿ. ಅದರಿಂದ ನಿಮಗೆ ಯಾವ ಲಾಭವೂ ಇಲ್ಲ. ನಮಗೆ ಮಾತ್ರ ಹಾನಿಯಾಗುತ್ತದೆ." ಎಂದು ಹೇಳಿದನು; ಆದರೆ ಏನು ಚಮತ್ಕಾರವೋ ಏನೋ! ಆ ಬಾಲಗೊಸಾವಿಯನ್ನು ನೋಡಿದಾಗಿನಿಂದ, ವಿಶೇಷವಾಗಿ ಆತನ ಮಂಜುಲ ಧ್ವನಿಯನ್ನು ಕೇಳಿದಾಗಿನಿಂದ ಆ ಹಾದಿಕಾರಳಾದ ತರುಣಿಯು ಮೋಹಿತಳಾದಳು! ಒಮ್ಮೆಲೆ ಆಕೆಯು ತನ್ನ ಸಂಗಡಿಗನಾದ ತರುಣನಿಗೆ—"ಇನ್ನು ನಾನು ಇವರ ಚರಣವನ್ನು ಬಿಟ್ಟು ಎಲ್ಲಿಯೂ ಹೋಗಬಾರದೆಂದು ನಿರ್ಧರಿಸಿದ್ದೇನೆ. ಜನ್ಮವಿರುವವರೆಗೆ ಇವರ ಸೇವೆಯನ್ನು ಮಾಡುವೆನು. ಇಂಥ ವೈರಾಗ್ಯ ಮೂರ್ತಿಯು ಸಿಕ್ಕಬಳಿಕ ನನಗೇನು ಬೇಕಾಗಿದೆ? ಹ್ಯಾಗೂ ನಾನು ಸಾಂಸಾರಿಕ ಪರಿತಾಪದಿಂದ ತಪ್ತಳಾಗಿದ್ದೇನೆ. ನನಗೆ ಯಾತರ ಆಶೆಯೂ ಇಲ್ಲ. ನೀವು ನನ್ನನ್ನು ಸಂಕಟದಿಂದ ಮುಕ್ತಮಾಡದಿದ್ದರೆ, ಇಷ್ಟುಹೊತ್ತಿಗೆ ನಾನು ಇಹಲೋಕದ ಯಾತನೆಯಿಂದ ಮುಕ್ತಳಾಗುತ್ತಿದ್ದೆನು; ಆದರೂ ನನ್ನ ಸಂರಕ್ಷಣ ಮಾಡಿ, ಈ ಸ್ಥಾನದವರೆಗೆ ನನ್ನನ್ನು ಕರಕೊಂಡು ಬಂದು ಬಿಟ್ಟದ್ದಕ್ಕಾಗಿ ನಾನು ಜನ್ಮಜನ್ಮಾಂತರದಲ್ಲಿಯೂ ನಿಮ್ಮ ಉಪಕಾರವನ್ನು ಮರೆಯಲಾರೆನು. ಇನ್ನು ನನ್ನನ್ನು ಇಲ್ಲಿಯೇ ಬಿಟ್ಟುಬಿಡಿರಿ. ಮಹಾರಾಜರ ಬಳಿಗೆ ನಾನು ಬರುವದಿಲ್ಲ. ಜೀಜಾಬಾಯಿ ಸಾಹೇಬರಿಗಿಂತ ಇವರ ಚರಣಸೇವೆ ಮಾಡಿಕೊಂಡಿರುವದು ನನಗೆ ಇಷ್ಟವಾಗಿರುತ್ತದೆ.

ಈ ಮೇರೆಗೆ ಆ ಸ್ತ್ರೀಯು ಗಟ್ಟಿಗಟ್ಟಿಸಿ ಮಾತಾಡುವದನ್ನು ಕೇಳಿ ಬಾಲಗೋಸಾವಿಯು ಚಕಿತನಾಗಿ ಎವೆಯಿಕ್ಕದೆ ಆಕೆಯನ್ನು ನೋಡಹತ್ತಿದನು. ಬಹಳಹೊತ್ತಿನವರೆಗೆ ಹೀಗೆ ದಿಟ್ಟಿಸಿ ನೋಡಿ, ಕಡೆಗೆ ಕವಕ್ಕನೆ ಆ ಸ್ತ್ರೀಯ ಮೈಮೇಲೆ ಹೋಗಿ—"ನೀನು ನನ್ನ ಸೇವೆಯನ್ನು ಮಾಡು

ವೆಯಾ? ನನ್ನ ಬಳಿಯಲ್ಲಿರುವೆಯಾ? ನನ್ನ ಸೇವೆಯನ್ನು ಮಾಡಲಿಕ್ಕೆ ಯಾರೂ ಬೇಡ. ನನಗೆ ಯಾರೂ ಬೇಡವೆಂತಲೇ ಈ ಘೋರಾರಣ್ಯವನ್ನು ಸೇರಿಕೊಂಡಿರುವಾಗ, ನಿನ್ನ ಉಪಾಧಿಯನ್ನು ನಾನು ಹಚ್ಚಿಕೊಳ್ಳುವೆನೆ? ಹೋಗು ಹೋಗು, ಪುನಃ ನೀನು ನನಗೆ ಮೋರೆಯನ್ನು ಕೂಡ ತೋರಿಸ ಬೇಡ. ಇಂಥ ಕಟ್ಟಡವಿಯನ್ನು ಸೇರಿದ್ದು, ನಿಮ್ಮಂಥವರ ಸೇವೆಯನ್ನು ಕೈಕೊಳ್ಳಬೇಕೆಂದು, ಅಥವಾ ನಿಮ್ಮ ಮೋಹದಲ್ಲಿ ಸಿಗಬೇಕೆಂದು ಅಲ್ಲವೆಂಬದನ್ನು ಚನ್ನಾಗಿ ನೆನಪಿನಲ್ಲಿಡು. ನಾವು ಬಾಲವೈರಾಗಿಗಳು, ಸ್ವಚ್ಛಂದಿಗಳು. ನಮಗೆ ಯಾರ ಹಂಗೂ ಇಲ್ಲ. ನಡೆ, ನಡೆ, ನಡೆ! ಇಲ್ಲಿ ನಿಲ್ಲಬೇಡ" ಎಂದು ತಿರಸ್ಕರಿಸಿ ನುಡಿದನು; ಆದರೆ ಅದಕ್ಕೆ ಆ ಸ್ತ್ರೀಯು ಮಣಿಯಲಿಲ್ಲ. ಬಾಲಗೋಸಾವಿಯು ತಿರಸ್ಕರಿಸಿದಂತೆ, ಆತನ ಸೇವೆ ಮಾಡಿಕೊಂಡಿರುವ ವಿಷಯವಾಗಿ ಆ ಸ್ತ್ರೀಯ ಮನಸ್ಸು ಗಟ್ಟಿಯಾಗುತ್ತ ಹೋಯಿತು. ಈತನು ಎಷ್ಟು ತಿರಸ್ಕರಿಸಿದರೂ, ಎಷ್ಟು ತ್ರಾಸ ಕೊಟ್ಟರೂ ಈ ಸ್ಥಾನವನ್ನು ಬಿಟ್ಟು ಹೋಗಲಿಕ್ಕಿಲ್ಲೆಂದು ಆಕೆಯು ನಿಶ್ಚಯಿಸಿದಳು. ಬಾಲಗೋಸಾವಿಯ ತಿರಸ್ಕಾರದ ಮಾತನ್ನು ಆಕೆಯು ಸ್ವಲ್ಪವಾದರೂ ಲೆಕ್ಕಿಸದೆ, ತನ್ನ ಆ ಸಂಗಡಿಗನನ್ನು ಕುರಿತು—"ನೀವು ಇನ್ನು ಇಲ್ಲಿ ನಿಲ್ಲಬೇಡಿರಿ; ಹೊರಟು ಹೋಗಿಬಿಡಿರಿ. ನಿಮ್ಮ ಸಂಗಡ ನಾನು ಬರುವದಿಲ್ಲ;. ಇಲ್ಲಿಯೇ ಇರುವೆನು. ನನಗೆ ವೈರಾಗ್ಯವು ಉತ್ಪನ್ನವಾಗಿರುವದು. ನನಗೆ ಸಂಸಾರವಿಲ್ಲ. ಮನೆಯಿಲ್ಲ. ಇವರು ನನ್ನನ್ನು ಇಲ್ಲಿ ಇಟ್ಟುಕೊಳ್ಳದಿದ್ದರೆ, ಅಷ್ಟರವುಟ್ಟಿಗೆ ಇವರ ಮಾತನ್ನು ಮೀರಿ ಹಟದಿಂದ ನಾನು ಇಲ್ಲಿ ಇರುವೆನು, ಇವರು ಹೊಡೆಯಲಿ, ಬಡೆಯಲಿ ಬೇಕಾದದ್ದು ಮಾಡಲಿ, ಇಲ್ಲಿಂದ ಉಲುಕುವದಿಲ್ಲ. ನಾನು ಇವರ ಸೇವೆಯನ್ನು ಮಾಡಿ ಗುರುಪದೇಶವನ್ನು ಹೊಂದುವೆನು; ದೀಕ್ಷೆಯನ್ನು ಪಡೆಯುವೆನು. ಇವರು ಈಗ ನನ್ನನ್ನು ತಿರಸ್ಕರಿಸುತ್ತಿದ್ದರೂ ಬೇಗನೆ ನನ್ನನ್ನು ಶಿಷ್ಯಳನ್ನಾಗಿ ಮಾಡಿಕೊಳ್ಳುವರು" ಎಂದು ಹೇಳಿದಳು. ಆಕೆಯ ಈ ನಿರ್ಧಾರದ ಮಾತುಗಳನ್ನು ಕೇಳಿ ಬಾಲಗೋಸಾವಿಯು ಚಕಿತನಾಗಿ ಏನೂ ಮಾತಾಡದೆ ಸುಮ್ಮನೆ ಆಕೆಯನ್ನು ದಿಟ್ಟಿಸಿ ನೋಡುತ್ತ ಕುಳಿತುಕೊಂಡನು. ಒಂದು ಶಬ್ದವಾದರೂ ಆತನ ಮುಖದಿಂದ ಹೊರಡಲೊಲ್ಲದು. ಆಗ ಆ ಸ್ತ್ರೀಯು ತನ್ನ ಕಾರ್ಯವಾಯಿತೆಂದು ತಿಳಿದು—

ಗೋಸಾವಿಯವರೇ, ತಮ್ಮ ಸುಕುಮಾರ ದೇಹವನ್ನು ನೋಡಿದರೆ ತಮ್ಮ ಈ ಘೋರ ತಪೋವೃತ್ತಿಯಲ್ಲಿ ತಮ್ಮ ಸೇವೆಯನ್ನು ಮಾಡಲಿಕ್ಕೆ ಯಾರಾದರೂ ನನ್ನಂಥವರು ಇರುವದು ಅವಶ್ಯವಾಗಿರುತ್ತದೆ. ನನ್ನ ಸಂಸಾರವು ಗೊತ್ತಿಗೆ ಹತ್ತಿಹೋಗಿರುವದು. ನಾನೊಬ್ಬಳೇ ಅಕಸ್ಮಾತ್ತಾಗಿ ಈ ತರುಣ ಬಂಧುವಿಗೆ ಅರಣ್ಯದಲ್ಲಿ ಭೆಟ್ಟಿಯಾದೆನು. ಈ ಪುಣ್ಯವಂತನು ನನ್ನನ್ನು ಪ್ರಾಣಸಂಕಟದಿಂದ ಮುಕ್ತಮಾಡಿದಾಗಲೇ ನನಗೆ ವೈರಾಗ್ಯವು ಉತ್ಪನ್ನವಾಯಿತು. ಆಗೇ ನಾನು ಬೈರಾಗಿಯಾಗತಕ್ಕವಳು; ಆದರೆ ಸದ್ಗುರುವಿನ ಸಮಾಗಮವಾದ ಹೊರತು ವೈರಾಗ್ಯವು ವ್ಯರ್ಥವಲ್ಲವೆ? ಆದ್ದರಿಂದಲೇ ಶ್ರೀ ಶಂಕರನು ತಮ್ಮ ದರ್ಶನವನ್ನು ಮಾಡಿಸಿರುತ್ತಾನೆ. ಅಹಹ! ಉಮಾಪತೇ, ತಪೋಮಯನೇ ನೀನು ಧನ್ಯನು. ನಿನಗೆ ನನ್ನ ಅನಂತ ಪ್ರಣಾಮಗಳಿರಲಿ!

ತನ್ನ ಸಂಗಡಿಗನು ಚಕಿತಮುದ್ರೆಯಿಂದ ನೋಡುತ್ತ ಸುಮ್ಮನೆ ನಿಂತುಕೊಂಡಿರುವದನ್ನು ನೋಡಿ ಆ ಸ್ತ್ರೀಯು—"ಅಣ್ಣಾ, ಯಾಕೆ ನಿಂತುಕೊಳ್ಳುತ್ತೀರಿ? ಹೋಗಿರಿ, ನನ್ನ ಸಲುವಾಗಿ ನೀವು ಚಿಂತೆಯನ್ನು ಮಾಡಬೇಡಿರಿ. ಇವರು ನನ್ನನ್ನು ಹೊರಗೆ ಹಾಕುವದಿಲ್ಲ; ನನ್ನ ಸೇವೆಯನ್ನು ಕೈಕೊಳ್ಳುವರು; ಕೈಕೊಳ್ಳದಿದ್ದರೆ ಕೈಕೊಳ್ಳುವಹಾಗೆ ನಾನು ಮಾಡುವೆನು. ನನ್ನಂಥ ಅನಾಥಳ ಮೇಲೆ ಅನುಗ್ರಹ ಮಾಡದೆ, ಮತ್ತೆ ಯಾರಮೇಲೆ ಅನುಗ್ರಹ ಮಾಡುವರು? ನಾನು ಇವರ ಗುರುಪದೇಶಕ್ಕೆ ಪಾತ್ರಳಿಲ್ಲದಿದ್ದರೆ ಬೇರೆ ಯಾರು ಪಾತ್ರರಿರುವರು? ಹೋಗಿರಿ, ನೀವು ಇಲ್ಲಿ ಇರುವತನಕ ಇವರು ನನ್ನನ್ನು ಕೃಪಾದೃಷ್ಟಿಯಿಂದ ನೋಡರು" ಎಂದು ಹೇಳಲು, ಆ ತರುಣನು ನಿರುಪಾಯನಾಗಿ ಅಲ್ಲಿಂದ ಹೊರಟು ಹೋದನು. ಆತನು ಹೋದಬಳಿಕ ಆ ಸ್ತ್ರೀಯು ಬಾಲಗೋಸಾವಿಯ ಬಳಿಗೆ ಹೋಗಿ ಆತನ ಕಿವಿಯಲ್ಲಿ ಏನೋ ಹೇಳಿದಳು; ಅದನ್ನು ಕೇಳಿದ ಕೂಡಲೆ ಬಾಲಗೋಸಾವಿಯ ಮುಖಲಕ್ಷಣವು ವಿಲಕ್ಷಣವಾಯಿತು. ಕ್ಷಣಹೊತ್ತು ಆತನು ಭೂಮಿಯನ್ನು ನೋಡುತ್ತ ಸುಮ್ಮನೆ ಕುಳಿತುಕೊಂಡನು. ಆ ಸ್ತ್ರೀಯ ಮುಖವನ್ನು ಕೂಡ ಆತನು ನೋಡದಾದನು. ಯಾವದೋ ಗಹನ ವಿಚಾರದಲ್ಲಿ ಆತನು ಮಗ್ನವಾದಂತೆ ತೋರಿತು. ಸ್ವಲ್ಪ ಹೊತ್ತಿನ ಮೇಲೆ ಆತನು ಆ ಸ್ತ್ರೀಯನ್ನು ಕುರಿತು— .

ಬಾಲಗೋಸಾವಿ—ಅದಕ್ಕಾಗಿಯೇ ನಾವು ಜನವಸತಿಯಿಂದ ಇಷ್ಟು ದೂರದಲ್ಲಿ ವಾಸಿಸುತ್ತೇವೆ; ಆದರೂ ನಿಮ್ಮಂಥವರ ತ್ರಾಸವು ನಮಗೆ ತಪ್ಪಲೊಲ್ಲದು.

ಸ್ತ್ರೀಯು—ಮಹಾರಾಜ, ನನ್ನನ್ನು ತ್ರಾಸಕೊಡುವವರಲ್ಲಿ ಯಾಕೆ ಎಣಿಸುತ್ತೀರಿ? ಸೇವಕರಲ್ಲಿ ಎಣಿಸಿರಿ. ಸಂಸಾರದಲ್ಲಿ ನನಗೆ ಒದಗಿರುವ ವಿಪತ್ತುಗಳನ್ನು ತಾವು ಕೇಳಿದರೆ, ನಾನು ತಮ್ಮ ಅನುಗ್ರಹವನ್ನು ಬಯಸುವದು ಅಯೋಗ್ಯವಲ್ಲೆಂದು ತಮಗೇ ತೋರಬಹುದು. ತಾವು ನನಗೆ ಈಶ್ವರ ಸ್ವರೂಪವಾಗಿ ತೋರುವಿರಿ. ನನ್ನನ್ನು ಹೊರಗೈಯಿಂದ ಹೊಡೆಯಬೇಡಿರಿ; ಅನುಗ್ರಹಿಸಿರಿ.

ಆ ಸ್ತ್ರೀಯು ಹೀಗೆ ಮಾತಾಡುವಾಗ ಬಾಲಗೋಸಾವಿಯು ಸುಮ್ಮನೆ ಕುಳಿತುಕೊಂಡಿದ್ದನು. ಆಕೆಯ ಮಾತಿನ ಕಡೆಗೆ ಅವನ ಲಕ್ಷವಿದ್ದಂತೆ ತೋರಲಿಲ್ಲ. ಈ ಸ್ತ್ರೀಯಂತೂ ಇಲ್ಲಿಂದ ಹೋಗುವಹಾಗೆ ತೋರುವದಿಲ್ಲ. ಈಕೆಯನ್ನು ಇಟ್ಟುಕೊಳ್ಳುವದು ನಮಗೆ ಇಷ್ಟವಾಗಿಲ್ಲ. ನಮ್ಮ ಕಾರ್ಯಕ್ಕೆ ಈಕೆಯಿಂದ ವಿಘ್ನವೇ ಆದೀತು. ಇನ್ನು ಈಕೆಯನ್ನು ಹೊರಗೆ ಹಾಕಲಿಕ್ಕೆ ಏನು ಉಪಾಯವನ್ನು ಮಾಡಬೇಕಾದೀತು? ಎಂದು ಗೋಸಾವಿಯು ಆಲೋಚಿಸುತ್ತಿರಲು, ಆ ಸ್ತ್ರೀಯು ಮತ್ತೆ ಆತನನ್ನು ಕುರಿತು—"ಮಹಾರಾಜ, ಬೇಕಾದರೆ ನನ್ನ ಮನಸ್ಸನ್ನು ಬೇಕಾದಹಾಗೆ ಪರೀಕ್ಷಿಸಬೇಕು. ನಾನು ತಮ್ಮನ್ನು ಬಿಟ್ಟು ಹೋಗುವಹಾಗಿಲ್ಲ. ನನ್ನನ್ನು ಕೊಂದರೂ ಚಿಂತೆಯಿಲ್ಲ, ನಿಮ್ಮನ್ನು ಬಿಟ್ಟುಹೋಗುವದಿಲ್ಲ. ಸಂಸಾರ ತಾಪದಿಂದ ನಾನು ಜರ್ಜರಳಾಗಿದ್ದೇನೆ. ನನಗೆ ಶಾಂತಿಯನ್ನು ಕೊಡಿರಿ. ಹರಿಸ್ಮರಣ ಮಾಡುತ್ತ ತಮ್ಮ ಸೇವೆಯಲ್ಲಿ ಸಮಾಧಾನದಿಂದ ಶೇಷಾಯುಷ್ಯವನ್ನು ಕಳೆಯುವೆನು; ಎಂದು ಇನ್ನೂ ಏನೇನೊ ಮಾತಾಡುತ್ತಿದ್ದಳು. ಅಷ್ಟರಲ್ಲಿ ಬಾಲಗೋಸಾವಿಯು—

ಬಾಲಗೋಸಾವಿ—ನಾನು ನಿನ್ನನ್ನು ಇಟ್ಟುಕೊಳ್ಳದಿದ್ದರೆ, ನನ್ನ ಕಿವಿಯಲ್ಲಿ ನೀನು ಹೇಳಿದ ಮಾತನ್ನು ನೀನು ಮುಂದಿಯ ಮುಂದೆ ಹೇಳಬಹುದು. ಆದರೆ ಹೇಳುವದರಿಂದ ಆಗುವದೇನು? ನಾವು ಮನುಷ್ಯರಿರುವಲ್ಲಿ ಇರುವಹಾಗೆಯೇ ಇಲ್ಲ. ಸುತ್ತು ಹತ್ತೆಂಟು ಹರದಾರಿ ಮನುಷ್ಯರ

ಸಳುವು ಸಹ ಇರದ ಅರಣ್ಯದಲ್ಲಿ ನಾವು ವಾಸಿಸುವವರು; ಅಂದ ಬಳಿಕ ನಿನ್ನ ಬೆದರಿಕೆಯಿಂದ ನನಗಾಗುವದೇನು?

ಸ್ತ್ರೀಯು—ಮಹಾರಾಜ, ತಮಗೆ ಬೆದರಿಕೆ ತೋರಿಸಬೇಕೆಂದು ನಾನು ತಮ್ಮ ಮುಂದೆ ಆ ಮಾತನ್ನು ಆಡಿರುವದಿಲ್ಲ. ನನ್ನ ಸೇವೆಯನ್ನು ಸ್ವೀಕರಿಸಲಿಕ್ಕೆ ತಾವು ಯೋಗ್ಯರಿರುತ್ತೀರೆಂಬದನ್ನೂ, ತಮ್ಮನ್ನು ಸೇವಿಸಲಿಕ್ಕೆ ನಾನು ಯೋಗ್ಯಳಿರುತ್ತೇನೆಂಬುದನ್ನೂ ತೋರಿಸುವದಕ್ಕಾಗಿ ನಾನು ಆ ಮಾತನ್ನು ತಮ್ಮ ಕಿವಿಯಲ್ಲಿ ಹೇಳಿದ್ದೇನೆ; ಬೇರೆ ಉದ್ದೇಶವೇನೂ ಇರುವದಿಲ್ಲ. ಇನ್ನು ಮೇಲೆ ತಮ್ಮ ಕಿವಿಯಲ್ಲಿ ಹೇಳಿದ ಮಾತನ್ನು ತಿರುಗಿ ತಮ್ಮ ಮುಂದೆ ಸಹ ಎಂದೂ ಉಚ್ಚರಿಸಲಿಕ್ಕಿಲ್ಲೆಂದು ತಮ್ಮ ಪಾದಸಾಕ್ಷಿಯಿಂದ ಹೇಳುತ್ತೇನೆ. ನನಗೆ ಯೋಗ್ಯ ಗುರುವು ದೊರೆತನೆಂಬ ಆನಂದದ ಭರದಲ್ಲಿ ಆ ಮಾತನ್ನು ತಮ್ಮ ಕಿವಿಯಲ್ಲಿ ಹೇಳಿದೆನು. ನನ್ನನ್ನು ಕ್ಷಮಿಸಿ ಉಡಿಯಲ್ಲಿ ಹಾಕಿಕೊಳ್ಳಬೇಕು. ತಮ್ಮ ಅನುಗ್ರಹವೊಂದನ್ನಲ್ಲದೆ ನಾನು ಬೇರೆ ಯಾವದನ್ನೂ ಇಚ್ಛಿಸುವದಿಲ್ಲ. ನಿಮ್ಮ ಕಾಲು ಬೀಳುವೆನು. ಏನು ಮಾಡಿದರೆ ನನ್ನ ಶುದ್ಧ ಹೃದಯವು ತಮಗೆ ತೋರಿತೆಂಬದನ್ನು ಹೇಳಿದರೆ ನಾನು ಹಾಗೆ ಮಾಡುವೆನು.

ಬಾಲಗೋಸಾವಿ—ಇಷ್ಟು ನಿನ್ನ ದೃಢನಿಶ್ಚಯವಿದ್ದರೆ, ಅಥವಾ ಇಂಥ ದೃಢ ಶ್ರದ್ಧೆಯು ನಮ್ಮ ಮೇಲೆ ಇದ್ದರೆ, ನಾವಾದರೂ ನಿನ್ನನ್ನು ಹ್ಯಾಗೆ ಹೊರಗೆ ಹಾಕಬೇಕು? ನಮ್ಮ ನಿನ್ನ ಪೂರ್ವದ ಋಣಾನುಬಂಧವಿದ್ದದ್ದರಿಂದಲೇ ನೀನು ಇಲ್ಲಿಯವರೆಗೆ—ಮನುಷ್ಯ ಸಂಚಾರವಿಲ್ಲದ ನಮ್ಮ ಬಳಿಗೆ ಬಂದಿರುತ್ತೀ. ಒಳಿತಾಯಿತು. ಇಷ್ಟು ನಿನ್ನ ನಿಶ್ಚಯವಿದ್ದರೆ ಬಿಚ್ಚು ನಿನ್ನ ಹೆರಳನ್ನು. ತೆಗೆದುಕೋ ಅಗ್ನಿಕುಂಡದ ಬಳಿಯಲ್ಲಿಯ ಬೂದಿಯನ್ನು. ಆಮೇಲೆ ಅಗೋ, ಅಲ್ಲಿ ಹರಿಯುತ್ತಿರುವ ಕೃಷ್ಣಾ ನದಿಯಲ್ಲಿ ಸ್ನಾನಮಾಡಿ ಕೂದಲುಗಳಿಗೆ ಬೂದಿಯನ್ನು ತೊಡೆದು, ಉಳಿದ ಬೂದಿಯನ್ನು ಮೈತುಂಬ ಹಚ್ಚಿಕೊಂಡು ನನ್ನ ಬಳಿಗೆ ಬಾ. ನಿನ್ನ ಈ ಉಟ್ಟುಕೊಂಡ ಸೀರೆಯನ್ನು ಕೃಷ್ಣಾಬಾಯಿಗೆ ಅರ್ಪಿಸು. ನನ್ನ ತಲೆಗಿಂಬಿಗಿರುವ ಇನ್ನೊಂದು ಕಫನಿಯನ್ನು ತೊಟ್ಟುಕೊಂಡು ಲಂಗೋಟಿಯನ್ನು ಹಾಕಿಕೊ. ಆಮೇಲೆ ನಿನಗೆ ಗುರೂಪದೇಶ ಮಾಡುವೆನು. ಆಗುವದನ್ನು ಯಾರೂ ತಪ್ಪಿಸಲಾರರು.

ನೀನು ನಮ್ಮ ಹಿತವನ್ನೇ ಬಯಸುವವಳಾದ ಬಳಿಕ ನಾವಾದರೂ ಏಕೆ ಚಿಂತಿಸಬೇಕು? ಜಯ ಶಂಕರ! ಜಯ ಶಂಕರ! ಜಯ ಗಿರಿಜಾರಮಣ! ಜಯ ಗಿರಿಜಾರಮಣ!!

ಬಾಲಗೋಸಾವಿಯ ಮುಖದಿಂದ ಇಷ್ಟು ಮಾತುಗಳು ಹೊರಡುವದೊಂದೇ ತಡ, ಆ ಸ್ತ್ರೀಯು ಹೆರಳು ಬಿಚ್ಚಿ ತಟ್ಟನೆ ಎದ್ದುಹೋಗಿ ಕುಂಡದ ಬಳಿಯಲ್ಲಿದ್ದ ಬೂದಿಯ ರಾಶಿಯೊಳಗಿಂದ ಮುತ್ತಿಷ್ಟು ಬೂದಿಯನ್ನು ಉಡಿಯಲ್ಲಿ ಕಟ್ಟಿಕೊಂಡಳು. ಗೋಸಾವಿಯನ್ನು ತಿರುಗಿ ಏನೂ ಕೇಳದೆ, ಗುಡಿಸಿಲೊಳಗಿನ ಬಿಳಿಯ ಕಪನಿಯನ್ನೂ, ಲಂಗೋಟಿಯನ್ನೂ ತಕ್ಕೊಂಡು ನದಿಯ ಹಾದಿಯನ್ನು ಹಿಡಿದಳು. ಆಕೆಯು ಕೃಷ್ಣೆಯಲ್ಲಿ ಮೂರುಸಾರೆ ಮುಣುಗುಹಾಕಿ, ಬಹಳ ಬೂದಿಯನ್ನು ತನ್ನ ತಲೆಗೂದಲುಗಳಿಗೆ ಚನ್ನಾಗಿ ಬಳಿದು, ಉಳಿದದ್ದನ್ನು ಮೈಗೆ ಹಚ್ಚಿಕೊಂಡು, ಕೌಪೀನ ಹಾಕಿಕೊಂಡು ನಿಜವಾಗಿಯೇ ತನ್ನ ಸೀರೆಯನ್ನು ಕೃಷ್ಣಾಬಾಯಿಗೆ ಅರ್ಪಿಸಿದಳು. ಬಳಿಕ ಬಿಳಿಯ ಕಪನಿಯನ್ನು ತೊಟ್ಟುಕೊಂಡು, "ಜಯ ಶಂಕರ, ಜಯ ಶಂಕರ! ಜಯ ಗಿರಿಜಾರಮಣ, ಜಯ ಗಿರಿಜಾರಮಣ!" ಎಂದು ಆಕೆಯು ನಾಮಘೋಷ ಮಾಡುತ್ತ, ತನ್ನ ಗುರುವಾದ ಬಾಲಗೋಸಾವಿಯ ಬಳಿಗೆ ಬಂದಳು. ಆಕೆಯ ಚಾಪಲ್ಯವನ್ನೂ, ಆಜ್ಞಾಪಾಲನದ ನಿಷ್ಕಲಂಕವಾದ ರೀತಿಯನ್ನು ನೋಡಿ, ಬಾಲಗೋಸಾವಿಯು ಬೆರಗಾದನು. ಆತನು ಆ ಸ್ತ್ರೀಯನ್ನು ಕುರಿತು—ಒಳಿತಾಯಿತು. ಇನ್ನು ನಾಳೆ ನಾನು ನಿನಗೆ ಮಂತ್ರವನ್ನು ಉಪದೇಶಿಸುವೆನು; ಆದರೆ ಅದಕ್ಕೂ ಮೊದಲು ನೀನು ಒಂದೆರಡು ಕೆಲಸಗಳನ್ನು ದೂಡಬೇಕಾಗಿದೆ, ಮಾಡುವೆಯಾ?

ಸ್ತ್ರೀಯು—ಅವಶ್ಯವಾಗಿ ಮಾಡುವೆನು. ತಮ್ಮ ಅಪ್ಪಣೆಗೆ ನಾನು ಹೊರಗಾದವಳಲ್ಲ. ತಾವು ನನ್ನ ಮನಸ್ಸನ್ನು ಪರೀಕ್ಷಿಸುವದಿದ್ದರೆ ಪರೀಕ್ಷಿಸಿರಿ. ತಮ್ಮ ಆಜ್ಞೆಯೇ ನನಗೆ ವೇದವಾಕ್ಯವು.

ಬಾಲಗೋಸಾವಿ—ನಾವು ಆಜ್ಞಾಪಿಸುವೆವು; ಆದರೆ ನಮ್ಮ ಆಜ್ಞೆಯನ್ನು ಅಕ್ಷರಶಃ ಪಾಲಿಸುವ ಬಗ್ಗೆ ನೀನು ಪ್ರತಿಜ್ಞೆ ಮಾಡಬೇಕು.

ಸ್ತ್ರೀಯು—ಅಕ್ಷರಶಃ ಪಾಲಿಸುವೆನು; ಒಂದು ಅಕ್ಷರ ಬಿಡದೆ ಪಾಲಿಸುವೆನು.

ಬಾಲಗೋಸಾವಿ—ನೀನು ನನ್ನನ್ನು ನೋಡಿ ಇನ್ನೂ ಎರಡು ತಾಸು ಸಹ ಪೂರಾ ಆಗಿಲ್ಲ; ಇಷ್ಟರಲ್ಲಿ ನನ್ನ ಮೇಲೆ ಈಪರಿ ವಿಶ್ವಾಸ ಮಾಡುವದು ವಿಚಿತ್ರ ಸಂಗತಿಯೇ ಸರಿ!

ಸ್ತ್ರೀಯು—ತಮಗೆ ವಿಚಿತ್ರವಾಗಿ ತೋರಿರಬಹುದು; ಆದರೆ ನಾನು ಸಂಸಾರದ ವಿಷಯವಾಗಿ ತಿರಸ್ಕಾರ ಬುದ್ಧಿಯನ್ನು ತಾಳಿ, ಸ್ವತಃ ಸಿದ್ಧ ವೈರಾಗಿಯಾಗಿ ತೀರ್ಥಯಾತ್ರೆಗಳನ್ನು ಮಾಡುತ್ತ ಸಂಚರಿಸಬೇಕೆಂದು ಇಚ್ಛಿಸುತ್ತಿದ್ದೆನು. ಅಷ್ಟರಲ್ಲಿ ತಮ್ಮ ವೈರಾಗ್ಯ ಪೂರ್ಣವಾದ ಈ ಸುಂದರ ಮೂರ್ತಿಯ ದರ್ಶನವಾದದ್ದರಿಂದ, ತಮ್ಮ ಮೇಲೆ ಈ ಪರಿಯ ನನ್ನ ವಿಶ್ವಾಸವು ಕುಳಿತಿರಬಹುದು; ಅಥವಾ, ತಮ್ಮ ಮೇಲೆ ಶ್ರೀ ಶಂಕರನ ಕೃಪೆಯು ಪೂರ್ಣವಾಗಿದ್ದಷ್ಟು ನನ್ನ ಅನುಭವಕ್ಕೆ ಬಂದಿರಬಹುದು. ಏನೇ ಕಾರಣ ವಿರಲಿ, ತಮ್ಮ ಮೇಲೆ ನನ್ನ ದೃಢಶ್ರದ್ಧೆಯು ಕುಳಿತಿರುವದೇನೋ ನಿಜ. ನೀವು ಈ ಗುಡ್ಡದಿಂದ ಕೆಳಗೆ ಹಾರಿಕೊಳ್ಳೆಂದರೆ ನಾನು ಹಾರಿಕೊಳ್ಳಲಿಕ್ಕೆ ಸಿದ್ಧಳಿದ್ದೇನೆ.

ಬಾಲಗೋಸಾವಿ—ಛೀ, ಛೀ, ಛೀ! ಹೀಗೆ ವ್ಯರ್ಥವಾದ ಮಾತುಗಳನ್ನು ಆಡಬೇಡ. ಬಾಯಿಂದ ಅಂದಂತೆ ಕೈಯಿಂದ ಮಾಡುವದು ಕಠಿಣವು! ಸಾಧಾರಣವಾದ ನಮ್ಮ ಆಜ್ಞೆಗಳನ್ನು ಪಾಲಿಸುವದೇ ಕಠಿಣವಾಗಿರಲು, ಪ್ರಾಣವನ್ನರ್ಪಿಸುವ ಮಾತೇಕೆ?

ಸ್ತ್ರೀಯು—ಮಹಾರಾಜ, ಅಪ್ಪಣೆಯನ್ನಾದರೂ ಮಾಡಿ ನೋಡಿರಿ. ನಾನು ಪಾಲಿಸುವೆನೋ ಇಲ್ಲವೋ ಎಂಬದರ ಪರೀಕ್ಷೆಯು ತಾನೇ ಆಗುವದು.

ಬಾಲಗೋಸಾವಿ—ಆಗಲಿ, ನಾವು ನಿನ್ನನ್ನು ಆಜ್ಞಾಪಿಸುವೆವು. ಮೊದಲು ನೀನು ನಮ್ಮ ಚರಣಗಳ ಮೇಲೆ ಹಸ್ತವನ್ನಿಡು.

ಕೂಡಲೆ ಆ ಸ್ತ್ರೀಯು ತನ್ನವೆರಡೂ ಹಸ್ತಗಳನ್ನು ಗೋಸಾವಿಯ ಪಾದಗಳ ಮೇಲೆ ಇಟ್ಟಳು; ಮತ್ತು ಸದ್ಗುರುವು ತನ್ನನ್ನು ಏನೆಂದು ಆಜ್ಞಾಪಿಸುವನೆಂಬದನ್ನು ತತ್ಪರತೆಯಿಂದ ನಿರೀಕ್ಷಿಸುವಂತೆ, ತನ್ನ ಗುರುವಿನ ಮುಖವನ್ನು ಎವೆಯಿಕ್ಕದೆ ನೋಡುತ್ತ ಕುಳಿತುಕೊಂಡಳು. ಬಾಲಗೋಸಾವಿಯು ಕೆಲಹೊತ್ತು ಸುಮ್ಮನೆ ಕುಳಿತುಕೊಂಡನು. ಆಮೇಲೆ

ಆ ಸ್ತ್ರೀಯನ್ನು ಕುರಿತು—ಮೊದಲನೆಯ ನನ್ನ ಆಜ್ಞೆಯನ್ನು ಕೇಳು; ಅದರಂತೆ ನಡೆಯುವೆನೆಂದು ಆಣೆಮಾಡಿ ಹೇಳು—"ಈ ಸ್ಥಳದಲ್ಲಿ ನನ್ನ ಕಣ್ಣಿಗೆ ಬೀಳುವ ಸಂಗತಿಗಳು ಎಷ್ಟೇ ಅಘೋರವಾಗಿರಲಿ, ಎಷ್ಟೇ ಕ್ರೂರ ವಾಗಿರಲಿ, ಅವನ್ನು ಎಲ್ಲಿಯೂ ಬಾಯಿಂದ ಉಚ್ಚರಿಸುವದಿಲ್ಲ; ಮತ್ತು ಹೀಗೇಕೆ? ಹಾಗೇಕೆಯೆಂದು ಪ್ರಶ್ನವನ್ನು ಮಾಡುವದಿಲ್ಲ."

ಈ ಆಜ್ಞೆಯನ್ನು ಕೇಳಿ ಆ ಸ್ತ್ರೀಯು ಸ್ವಲ್ಪ ಬೆದರಿದಳು; ಆದರೆ ಒಂದು ಕ್ಷಣವಾದರೂ ವಿಲಂಬ ಮಾಡದೆ ಅದರಂತೆ ನಡೆಯುವ ಬಗ್ಗೆ ಆಕೆಯು ಪ್ರತಿಜ್ಞೆ ಮಾಡಿದಳು. ಆಮೇಲೆ ಗೋಸಾವಿಯು ಮತ್ತೆ ಆ ಸ್ತ್ರೀಯನ್ನು ಕುರಿತು—ಇಷ್ಟಕ್ಕೆ ತೀರಲಿಲ್ಲ. ಇನ್ನೊಂದು ಪ್ರತಿಜ್ಞೆಯನ್ನು ನೀನು ಮಾಡಬೇಕು; ಅದೇನಂದರೆ—"ಈ ಸ್ಥಳದಲ್ಲಿ ನನ್ನ ಕಿವಿಗೆ ಏನೇ ಬೀಳಲಿ, ಅದು ಎಷ್ಟೇ ಅಘೋರವಾದದ್ದೂ-ಕ್ರೂರವಾದದ್ದೂ ಇರಲಿ, ಅದನ್ನು ಎಲ್ಲಿಯೂ ಉಚ್ಚರಿಸಲಿಕ್ಕಿಲ್ಲ; ಮತ್ತು ಹೀಗೆಯೇಕೆ? ಹಾಗೆ ಯೇಕೆ? ಎಂದು ಪ್ರಶ್ನ ಮಾಡಲಿಕ್ಕಿಲ್ಲ" ಅದರಂತೆಯೂ ಆ ಸ್ತ್ರೀಯು ಉಚ್ಚರಿಸಿ ಪ್ರತಿಜ್ಞೆ ಮಾಡಿದಳು. ಆಮೇಲೆ ಆ ಬಾಲಗೋಸಾವಿಯು ಆ ಸ್ತ್ರೀಯನ್ನು ಕುರಿತು—ನೀನು ಎರಡುಪ್ರತಿಜ್ಞೆಗಳನ್ನು ಮಾಡಿದೆ. ಇನ್ನೊಂದು ಕಡೆಯ ಪ್ರತಿಜ್ಞೆಯನ್ನು ಮಾಡತಕ್ಕದ್ದು. ಅದನ್ನು ಹೇಳುವೆನು ಕೇಳು—"ಈ ಸ್ಥಳದಲ್ಲಿ ಯಾವ ಕೆಲಸವನ್ನು ಮಾಡೆಂದು ನೀವು ಆಜ್ಞಾಪಿಸುವಿರಿ, ಆ ಕೆಲಸವು ಎಷ್ಟೇ ಅಘೋರವಾಗಿರಲಿ, ಎಷ್ಟೇ ಕ್ರೂರವಾಗಿರಲಿ ಅದನ್ನು ನಾನು ಮಾಡುವೆನು; ಹೀಗೆ ಯಾಕೆ? ಹಾಗೆ ಯಾಕೆ? ಎಂದು ಪ್ರಶ್ನೆ ಮಾಡಲಿಕ್ಕಿಲ್ಲ."

ಈ ಪ್ರತಿಜ್ಞೆಯನ್ನು ಮಾಡುವ ಪೂರ್ವದಲ್ಲಿ ಮಾತ್ರ ಆ ಸ್ತ್ರೀಯು ಬಹಳ ಹೊತ್ತು ವಿಚಾರ ಮಾಡುತ್ತ ಸುಮ್ಮನೆ ಕುಳಿತುಕೊಂಡಳು. ಆ ವಾಕ್ಯಗಳ ಅರ್ಥವೇ ಆಕೆಗೆ ತಿಳಿಯದಂತೆ ತೋರಲಿಲ್ಲ. ಆಕೆಯು ಹೀಗೆ ಸುಮ್ಮನೆ ಇರುವದನ್ನು ನೋಡಿ ಬಾಲಗೋಸಾವಿಯು ಆ ಸ್ತ್ರೀಯನ್ನು ಕುರಿತು—"ಇಷ್ಟರಲ್ಲಿಯೇ ನನ್ನ ಮೇಲಿನ ನಿನ್ನ ಶ್ರದ್ಧೆಯು ಕಡಿಮೆಯಾಯಿ ತೇನು? ಯಾಕೆ ಸುಮ್ಮನಾದೆ? ನಾನು ನಿನಗೆ ಅನ್ಯರ ಪ್ರಾಣಹರಣ ಮಾಡಲಿಕ್ಕೆ ಆಜ್ಞಾಪಿಸುವೆನೆಂದು ತಿಳಿದೆಯೋ?" ಎಂದು ಕೇಳಿದನು;

ಆದರೆ ಆತನ ಮಾತಿನ ಕಡೆಗೆ ಲಕ್ಷ್ಯಗೊಡದೆ ಆ ಸ್ತ್ರೀಯು ಮೇಲೆ ಹೇಳಿದಂತೆ ಗಟ್ಟಿಯಾಗಿ ನುಡಿದು ಪ್ರತಿಜ್ಞೆ ಮಾಡಿದಳು. ಅದನ್ನು ಕೇಳಿ ಬಾಲ ಗೋಸಾವಿಗೆ ಬಹಳ ಸಮಾಧಾನವಾಯಿತು. ಆಗ ಆತನು ಆ ಸ್ತ್ರೀಯನ್ನು ನೋಡಿ ಆಕೆಯನ್ನು ಕುರಿತು—ನೀನು ಪ್ರತಿಜ್ಞೆಯನ್ನೇನೋ ಮಾಡಿದೆ; ಆದರೆ ಅವನ್ನು ಪಾಲಿಸಲು ಶಕ್ಯವಿರುವದೋ ಇಲ್ಲವೋ ಎಂಬದನ್ನು ಕುರಿತು ಇನ್ನೊಮ್ಮೆ ಶಾಂತಚಿತ್ತದಿಂದ ವಿಚಾರ ಮಾಡು. ಅಶಕ್ಯ ವೆಂದು ತೋರಿದರೆ ನಿನ್ನ ಪ್ರತಿಜ್ಞೆಗಳನ್ನು ನೀನು ತಿರುಗಿ ತಕ್ಕೊಳ್ಳಬಹುದು. ನಿನಗೆ ನಾನು ಇಲ್ಲಿಂದ ಹೊರಟು ಹೋಗಲಿಕ್ಕೆ, ಬೇಕಾದ ಕಡೆಗೆ ಹೋಗಲಿಕ್ಕೆ ಒಪ್ಪಿಗೆಯನ್ನು ಕೊಡುವೆನು, ಎಂದು ಹೇಳಿದನು; ಆದರೆ ಅದಕ್ಕೆ ಆ ಸ್ತ್ರೀಯು ಸ್ವಲ್ಪ ಸಿಟ್ಟಿನಿಂದ—"ಇನ್ನು ಮೇಲೆ ನನ್ನ ವಿಷಯವಾಗಿ ನೀವು ಸ್ವಲ್ಪವಾದರೂ ಸಂಶಯಪಡಬೇಡಿರಿ. ಇನ್ನು ಸಂಶಯವೇಕೆ? ಏನಾಗುವ ಫಲಭೋಗವನ್ನು ಭೋಗಿಸಲಿಕ್ಕೆ ನಾನು ಸಿದ್ಧಳೇ ಇರುತ್ತೇನೆ. ಇನ್ನು ಎರಡನೆಯ ಮಾತೇಕೆ?

ಸ್ತ್ರೀಯ ಈಮಾತುಗಳನ್ನು ಕೇಳಿ ಬಾಲಗೋಸಾವಿಯು ನಿಶ್ಚಿಂತನಾದನು. ಈ ಸುಂದರಿಯು ಸಾಮಾನ್ಯ ಕುಲದಲ್ಲಿ ಉತ್ಪನ್ನಳಾದವಳಿರಲಿಕ್ಕಿಲ್ಲ. ಇಂಥವಳಿಗೆ ಇಂಥ ತಾರುಣ್ಯದಲ್ಲಿ ವೈರಾಗ್ಯವು ಯಾಕೆ ಉತ್ಪನ್ನವಾಗಿರಬಹುದು? ನನ್ನ ಮೇಲೆ ಈಕೆಯ ಶ್ರದ್ಧೆಯು ಈ ಪರಿ ಕೂಡಲಿಕ್ಕೆ ಅಂಥ ಕಾರಣವೇನಿರುತ್ತದೆಂಬದು, ಈಕೆಯ ಚರಿತ್ರ ಶ್ರವಣದಿಂದ ಗೊತ್ತಾಗಬಹುದು; ಆದ್ದರಿಂದ ಈಕೆಯ ವೃತ್ತಾಂತವನ್ನು ಮೊದಲು ತಿಳಿದುಕೊಳ್ಳೋಣ, ಎಂದು ಯೋಚಿಸಿ, ಆ ಸ್ತ್ರೀಯನ್ನು ಕುರಿತು—''ಭದ್ರೇ, ಇನ್ನು ನೀನು ನನ್ನ ಶಿಷ್ಯಪ್ರಕೋಟಿಯಲ್ಲಿ ಸೇರಿದೆ. ನಿನ್ನ ಗುರುವಿನ ಮುಂದೆ, ಆತನು ಮಂತ್ರೋಪದೇಶ ಮಾಡುವ ಮೊದಲು ನಿನ್ನ ನಿಜವಾದ ವೃತ್ತಾಂತವನ್ನು ಹೇಳು, ಎಂದು ನುಡಿಯಲು, ಆ ಭಾವಿಕಳಾದ ಸ್ತ್ರೀಯು ನಿಶ್ಶಂಕೆಯಿಂದ ತನ್ನ ಗುರುವನ್ನು ಕುರಿತು—''ಮಹಾತ್ಮರೇ, ತಮ್ಮ ಆಜ್ಞೆಯಂತೆ ನನ್ನ ವೃತ್ತಾಂತವನ್ನು ಹೇಳುವೆನು ಕೇಳಿರಿ," ಎಂದು ನುಡಿದು, ತನ್ನ ವೃತ್ತಾಂತವನ್ನು ಹೇಳತೊಡಗಿದಳು. ಆ ಸ್ತ್ರೀಯು ಬಾಲಗೋಸಾವಿಗೆ ಅಪರಿಚಿತಳಾಗಿದ್ದರೂ, ವಾಚಕರಿಗೆ ಅಪರಿಚಿತಳಲ್ಲ. ಹಿಂದಕ್ಕೆ ಪಠಾಣರ

ಕೈಯಲ್ಲಿ ಸಿಕ್ಕು, ಸರ್ಜೆರಾಯನಿಂದ ಬಿಡುಗಡೆ ಹೊಂದಿ, ಒಬ್ಬ ದೇಶಮುಖನ ಆಶ್ರಯವನ್ನು ಹೊಂದಿದ ಸ್ತ್ರೀಯು ಈಕೆಯೇ, ಈ ಸ್ತ್ರೀಯು ದೇಶಮುಖನ ಮನೆಯಲ್ಲಿದ್ದಾಗ ಪಠಾಣರು ಸಿಟ್ಟಿನಿಂದ ಅವನ ಊರ ಮೇಲೆ ದಾಳಿ ಮಾಡಿದರು. ಆಗ ಊರವರು ಪಠಾಣರೊಡನೆ ಒಕ್ಕಟ್ಟಿನಿಂದ ಕಾದಿದರೂ ಕಡೆಗೆ ಸೋಲಬೇಕಾಯಿತು. ಪಠಾಣರು ಆ ಸ್ತ್ರೀಯನ್ನು ನಮಗೆ ಒಪ್ಪಿಸಿರೆಂದು ಹಟ ಹಿಡಿದರು. ಊರವರು ತಮ್ಮ ಆಶ್ರಿತಳನ್ನು ಒಪ್ಪಿಸಲು ಒಡಂಬಡಲೊಲ್ಲರು. ಹೀಗೆ ಅರೆದಾಟವು ನಡೆದಿರುವಾಗ ಆ ಸ್ತ್ರೀಯು—"ನನ್ನಿಂದ ಮುಂದಿಗೆ ಸುಮ್ಮನೆ ತ್ರಾಸವೇಕೆ? ನಾನಿದ್ದಲ್ಲಿ ಕಷ್ಟಗಳು ಒದಗುವ ಯೋಗವಿದ್ದಂತೆ ತೋರುತ್ತದೆ. ನಾನೇ ಎಲ್ಲಿಗಾದರೂ ಹೋಗಿಬಿಡಬೇಕು," ಎಂದು ಯೋಚಿಸಿ ಯಾರಿಗೂ ಹೇಳದೆ ಕೇಳದೆ ದೇಶಮುಖನ ಮನೆಯೊಳಗಿಂದ ರಾತ್ರಿ ಹೊರಬಿದ್ದು ನಡೆದಳು. ಹಾದಿಯಲ್ಲಿ ಆಕೆಯು ಪರಿಪರಿಯ ಕಷ್ಟಗಳನ್ನು ಅನುಭವಿಸಬೇಕಾಯಿತು; ಹೊಟ್ಟೆಗಿಲ್ಲದೆ ಬಳಲಬೇಕಾಯಿತು. ಆಕೆಯು ಮಾರ್ಗಾಯಾಸದಿಂದಲೂ, ಉಪೋಷಣದ ಕಷ್ಟದಿಂದಲೂ ಹಾದಿಯಲ್ಲಿ ಮೂರ್ಛಿತಳಾಗಿ ಬಿದ್ದಿದ್ದಳು. ಅಷ್ಟರಲ್ಲಿ ಶಿವಾಜಿಯ ಅನುಯಾಯಿಯಾದ ಒಬ್ಬ ತರುಣ ಸರದಾರನು ಅಕಸ್ಮಾತ್ತಾಗಿ ಅಲ್ಲಿಗೆ ಬಂದು ಆಕೆಯನ್ನು ಉಪಚರಿಸಿ ಎಚ್ಚರಗೊಳಿಸಿದನು. ಪೌಷ್ಟಿಕವೂ, ಸ್ವಾದಿಷ್ಟವೂ ಆದ ಗಡ್ಡೆಗಳನ್ನು ಆಕೆಗೆ ತಿನ್ನಲಿಕ್ಕೆ ಕೊಟ್ಟನು. ಇಂಥ ಕಂದ ಮೂಲಗಳು ಶಿವಾಜಿಯ ಜನರಿಗೆ ಹಲವು ಗೊತ್ತಿದ್ದವು. ಆ ಸ್ತ್ರೀಯು ವಿಶ್ರಮಿಸಿಕೊಂಡ ಬಳಿಕ ವಿರಕ್ತಿಯನ್ನು ತಾಳಿದಳು! ಈ ಉದಾರಾಂತಃಕರಣದ ತರುಣನು ತನ್ನನ್ನು ಬದುಕಿಸದಿದ್ದರೆ ಅನಾಯಾಸವಾಗಿಯೇ ತಾನು ಸಾಂಸಾರಿಕ ಯಾತನೆಯಿಂದ ಮುಕ್ತಳಾಗುತ್ತಿದ್ದೆನೆಂದು ಪಶ್ಚಾತ್ತಾಪ ಪಟ್ಟಳು. ಆಕೆಗೆ ತನ್ನ ಜೀವವು ಬೇಡಾಗಿತ್ತು. ತನ್ನ ಪತಿಯು ಮರಣ ಹೊಂದಿದನೆಂಬ ಸುದ್ದಿಯನ್ನು ಪಠಾಣನ ಮುಖದಿಂದ ಕೇಳಿದಾಗಿನಿಂದಲೇ ಆಕೆಯು ಉದಾಸೀನಳಾಗಿದ್ದಳು. ಈಗ ಒಂದರ ಹಿಂದೊಂದು ಕಷ್ಟಗಳು ಒದಗಿ, ತನ್ನಿಂದ ಜನರಿಗೆ ತೊಂದರೆಯಾಗಹತ್ತಿದ ಬಳಿಕಂತೂ, ಆಕೆಗೆ ವೈರಾಗ್ಯವು ಮತ್ತಿಷ್ಟು ಉತ್ಪನ್ನವಾಯಿತು. ಆಕೆಯು ಆ ತರುಣನ ಉಪಕಾರವನ್ನು ಸ್ಮರಿಸಿ, ಇನ್ನು ತಾನು ಬೈರಾಗಿಯಾಗಿ ತೀರ್ಥಯಾತ್ರೆ

ಗಳನ್ನು ಮಾಡುತ್ತ ಸಂಚರಿಸುವೆನೆಂದು ಹೇಳಿದಳು. ಅದಕ್ಕೆ ಆ ತರುಣನು ಒಪ್ಪದೆ, ನೀವು ಮಹಾರಾಜರ ಬಳಿಗೆ ಬರಬೇಕೆಂತಲೂ, ಜೀಜಾಬಾಯಿ ಸಾಹೇಬರವರು ನಿಮ್ಮ ಪರಾಮರ್ಷವನ್ನು ಮಾಡಿ ನಿಮ್ಮ ಪತಿಯ ಶೋಧ ವನ್ನು ಮಾಡಿಸುವರೆಂತಲೂ ಪರಿ ಪರಿಯಾಗಿ ಹೇಳಿ, ನನ್ನ ಸಂಗಡಲೇ ಬರಬೇಕೆಂದು ಆಗ್ರಹ ಹಿಡಿದನು. ಆಗ ಆ ಸ್ತ್ರೀಯು ಆ ತರುಣನ ಸಂಗಡ ಜಾವಳಿಯ ಅರಣ್ಯವನ್ನು ಸೇರಿ, ಮೇಲೆ ಹೇಳಿದಂತೆ ಬಾಲಗೋಸಾ ವಿಯ ಆಶ್ರಮುಕ್ಕೆ ಬಂದಿದ್ದಳು. ಈ ಎಲ್ಲ ವೃತ್ತಾಂತವನ್ನು ಆ ಸ್ತ್ರೀಯು ತನ್ನ ಗುರುವಾದ ಬಾಲಗೋಸಾವಿಗೆ ಹೇಳಲು, ಗೋಸಾವಿಯು ಶಂಕೆಗೆ ಒಳಗಾದನು. ಶಿವಾಜಿಯ ಪ್ರಾಣ ಹರಣ ಮಾಡಬೇಕೆಂದು ಯತ್ನಿಸು ತ್ತಿದ್ದ ನಮಗೆ, ಶಿವಾಜಿಯ ಪಕ್ಷಪಾತಿಯಾದ ಈ ಸ್ತ್ರೀಯಿಂದ ತೊಂದರೆ ಯೆಲ್ಲಿ ಆಗುವದೋ, ಎಂದು ಆತನು ಚಿಂತಿಸಿದನು. ಆದರೆ ಪ್ರತಿಜ್ಞೆ ಮಾಡಿರುವಳಲ್ಲ, ಎಂಬ ಸಮಾಧಾನದಿಂದ ಯಾವ ಮಾತನ್ನೂ ಆಡದೆ ಆ ಬಾಲಗೋಸಾವಿಯು ಸುಮ್ಮನಿದ್ದನು.

೭ನೆಯ ಪ್ರಕರಣ.

ಅಪಘಾತದ ಸುಳವು

ಜಾವಳಿಯ ಅರಣ್ಯದಲ್ಲಿ ಮಾರ್ಗವನ್ನು ನೋಡಿ ಬರುವದಕ್ಕಾಗಿ ಏಸಾಜಿಯನ್ನೂ, ಖಂಡೇರಾಯನನ್ನೂ ಮಹಾರಾಜರು ಕಳಿಸಿ ಕೊಟ್ಟಿದ್ದ ರಷ್ಟೇ? ಆದರೆ ನಾಲ್ಕು ದಿವಸಗಳಾದರೂ ಅವರ ವರ್ತಮಾನವೇ ಇಲ್ಲದ್ದ ರಿಂದ ಮಹಾರಾಜರಿಗೆ ಅಸಮಾಧಾನವಾಯಿತು. ಖಂಡೇರಾಯನು ಜಾವಳಿಯ ಸುಭೆಯಲ್ಲಿಯೇ ದೊಡ್ಡವನಾಗಿದ್ದನು. ಮೇಲಾಗಿ ಚಿಕ್ಕಂದಿ ನಿಂದಲೇ ಅವನು ಜಾವಳಿಯ ಅರಣ್ಯದಲ್ಲಿ ಓಡಾಡಿದವನಾಗಿದ್ದನು. ಆದ್ದ ರಿಂದ ಅರಣ್ಯದ ಸಂದಿಗೊಂದಿಗಳು ಕೂಡ ಆತನಿಗೆ ಗೊತ್ತಿದ್ದವು. ಇದನ್ನ ರಿತೇ ಮಹಾರಾಜರು ಏಸಾಜಿಯ ಸಂಗಡ ಆತನನ್ನು ಕಳಿಸಿದ್ದರು. ತಮಗೆ ಅನುಕೂಲವಾದ ಮಾರ್ಗ ಯಾವ ಬಗೆಯದಿರಬೇಕೆಂಬದನ್ನು ಏಸಾಜಿಯು

ಮುಂದೆ ಅವರು ಗುಪ್ತವಾಗಿ ಹೇಳಿದ್ದರು. ಅದರಂತೆ ತಕ್ಕ ಮಾರ್ಗವನ್ನು ಗೊತ್ತು ಪಡಿಸುವದು ಏಸಾಜಿಯ ಕೆಲಸವಾಗಿತ್ತು; ಹಾಗೆಯೇ ಅರಣ್ಯದ ಬೇರೆ ಬೇರೆ ಭಾಗಗಳನ್ನು ಏಸಾಜಿಯ ಕಣ್ಣಿಗೆ ಹಾಕಿ, ಅವನಿಗೆ ಯೋಗ್ಯ ಸಹಾಯ ಮಾಡುವದು ಖಂಡೇರಾಯನ ಕೆಲಸವಾಗಿತ್ತು. ಮಹಾರಾಜರ ಸ್ವರಾಜ್ಯ ಸ್ಥಾಪನೆಯ ಕಾರ್ಯದಲ್ಲಿ ಅವರ ಅನುಯಾಯಿಗಳು ಅವರ ಅವಯವಗಳಂತೆ ಸಹಾಯಕರಾಗಿದ್ದರು. ಅವರಲ್ಲಿ ತಾನಾಜಿ, ಏಸಾಜಿ, ಬಾಜಿ ಇವರು ಒಂದನೆಯ ತರಗತಿಯವರಾಗಿದ್ದರು. ಇವರನ್ನು ಪ್ರತಿ ಶಿವಾಜಿಯೆಂತಲೇ ಕರೆಯಬಹುದಾಗಿತ್ತು. ಮಹಾರಾಜರ ಬಾಲ ಮಿತ್ರ ರಾದ ಇವರು ಮಹಾರಾಜರ ಆಜ್ಞೆಯಂತೆ ಕಾರ್ಯವನ್ನು ಸಾಧಿಸಿಕೊಂಡೇ ಬರತಕ್ಕವರು. ದುರ್ದೈವದಿಂದ ಕಾರ್ಯವು ಸಾಧಿಸದಿದ್ದರೆ ಪ್ರಾಣವನ್ನಾ ದರೂ ಕೊಟ್ಟಾರಲ್ಲದೆ, ಜೋಲುಮಾರಿ ಹಾಕಿಕೊಂಡು ಕೈ ಅಲ್ಲಾಡಿಸುತ್ತ ಬರುವವರಲ್ಲ! ಇದರಂತೆ ಎರಡನೆಯ ತರಗತಿಯ ಜನರೂ ಮಹಾರಾಜರ ಪ್ರಾಣಕ್ಕೆ ಪ್ರಾಣವನ್ನು ಕೊಡತಕ್ಕವರಿದ್ದರು. ಒಟ್ಟಿಗೆ, ಮಹಾರಾಜರ ಆಶ್ರಯವನ್ನು ಪಡೆದವರು ಸ್ವಾಮಿನಿಷ್ಠರೂ, ಆಜ್ಞಾಧಾರಕರೂ, ಕಾರ್ಯ ತತ್ಪರರೂ ಆಗಿದ್ದರು. ಮಹಾರಾಜರಾದರೂ ತಮ್ಮವರನ್ನು ತಮ್ಮಂತೆ ನೋಡುತ್ತಿದ್ದರು. ಕಾರ್ಯವನ್ನು ಸಾಧಿಸುವದಕ್ಕಾಗಿ ಹೋದವರು ಹೊತ್ತಿಗೆ ಸರಿಯಾಗಿ ಬಾರದಿದ್ದರೆ, ಅವರ ಯೋಗಕ್ಷೇಮವನ್ನು ವಿಚಾರಿ ಸುವದಕ್ಕಾಗಿ ಮಹಾರಾಜರು ಸ್ವತಃ ಹೊರಟರೆಂತಲೇ ತಿಳಿಯಬೇಕು. ಅವರು ಅತ್ಯಂತ ಭೃತ್ಯವತ್ಸಲರು. ತಮ್ಮ ಸೇವಕರನ್ನು ಸಂಕಟದಿಂದ ಮುಕ್ತಮಾಡುವದಕ್ಕಾಗಿ ಅವರು ತಮ್ಮ ಜೀವದ ಪರಿವೆಯಿಡುತ್ತಿದ್ದಿಲ್ಲ. ಅವರ ಈ ಗುಣಕ್ಕಾಗಿಯೇ ಸೇವಕರು ಅವರ ಸಲುವಾಗಿ ಪ್ರಾಣವನ್ನು ಅರ್ಪಿಸಲಿಕ್ಕೆ ಸಿದ್ಧರಿರುತ್ತಿದ್ದರು. ಈ ಬಗೆಯ ಸೇವ್ಯಸೇವಕ ಭಾವವಿದ್ದದ್ದ ರಿಂದಲೇ ಸ್ವಧರ್ಮೋದ್ಧಾರದ ಕಾರ್ಯವು ಮಹಾರಾಜರಿಂದ ಸಾಧಿಸಿತು; ಮತ್ತು ಅವರೊಡನೆ ಸ್ವರಾಜ್ಯದ ಸ್ಥಾಪನೆಯೂ ಆಯಿತು.

ಖಂಡೇರಾಯನು ಹೊಸದಾಗಿಯೇ ಮಹಾರಾಜರ ಆಶ್ರಯವನ್ನು ಪಡೆದದ್ದರಿಂದ, ಅವನು ನಂಬಿಗೆಗೆ ಅಷ್ಟು ಪಾತ್ರನಾಗಿದ್ದಿಲ್ಲ. ಆತನನ್ನು ಇಟ್ಟುಕೊಳ್ಳುವಾಗಲೇ ಎಷ್ಟೋ ಜನರು ವಿಚಾರದಿಂದ ಇಟ್ಟುಕೊಳ್ಳ

ಬೇಕೆಂದು ಮಹಾರಾಜರಿಗೆ ಸೂಚಿಸಿದ್ದರು. ಮಹಾರಾಜರು ಮನುಷ್ಯರ ಅಂತರಂಗವನ್ನು ಪರೀಕ್ಷಿಸುವಲ್ಲಿ ಒಳ್ಳೇ ನಿಷ್ಣಾತರು. ತಮ್ಮ ಆಶ್ರಯಕ್ಕಾಗಿ ಬಂದವರ ಪೂರ್ವಾಪರ ಸಂಗತಿಗಳನ್ನು ವಿಚಾರಿಸಿ, ವಿಲಕ್ಷಣ ತರ್ಕಶಕ್ತಿ ಯಿಂದ ಅವರ ಅಂತರಂಗವನ್ನು ಪರೀಕ್ಷಿಸಿ ಆಶ್ರಯ ಕೊಡುತ್ತಿದ್ದರು. ಒಂದು ಪಕ್ಷದಲ್ಲಿ ವಿಶ್ವಾಸಕ್ಕೆ ಪಾತ್ರರಲ್ಲದ ಜನರು ಆಶ್ರಯಕ್ಕಾಗಿ ಬಂದರೆ, ತಮ್ಮ ಉದಾತ್ತ ಉದ್ದೇಶವನ್ನೂ, ತಮ್ಮನ್ನೂ ನೋಡಿ ಅವರು ವಿಶ್ವಾಸ ವುಳ್ಳವರಾಗುವರೆಂದು ಮಹಾರಾಜರು ದೃಢವಾಗಿನಂಬಿದ್ದರು. ಅಂತೇ ಕಳ್ಳರು ಕಾಕರನ್ನು ಕೂಡ ಅವರು ಸನ್ಮಾರ್ಗಕ್ಕೆ ಹಚ್ಚಿ, ತಮ್ಮ ಸ್ವಧರ್ಮೋ ದ್ಧಾರದ ಕಾರ್ಯಕ್ಕೆ ಅವರನ್ನು ಸಹಾಯಕರಾಗ ಮಾಡಿಕೊಂಡಿದ್ದರು; ಆದರೂ ಬುದ್ಧಿಪೂರ್ವಕ ಮಹಾರಾಜರ ಕೇಡು ಬಗೆಯುವದಕ್ಕಾಗಿ ಬಂದವರಿಂದ ಒಮ್ಮೊಮ್ಮೆ ಮಹಾರಾಜರಿಗೆ ಅಪಾಯವಾಗುವ ಸಂಭವ ವಿರುತ್ತಿತ್ತು. ಅದರಂತೆ ಈಗ ಖಂಡೇರಾಯನ ಸ್ಥಿತಿಯಾಗಿತ್ತು. ಖಂಡೇ ರಾಯನು ಹೊತ್ತು ಸಾಧಿಸಿ ಮಹಾರಾಜರ ಸೇಡು ತೀರಿಸಿಕೊಳ್ಳುವ ಉದ್ದೇಶದಿಂದಲೇ ಅವರನ್ನು ಆಶ್ರಯಿಸಿದ್ದನು. ಇದನ್ನು ಮಹಾರಾಜರು ತಮ್ಮ ತರ್ಕ ಶಕ್ತಿಯಿಂದ ಸಾಧಾರಣವಾಗಿ ಈ ಮೊದಲೇ ಊಹಿಸಿದ್ದ ರಿಂದ, ಏಸಾಜಿಯು ಬಾರದೆಯಿದ್ದದ್ದಕ್ಕಾಗಿ ಅವರು ಅಸಮಾಧಾನಪಡು ತ್ತಿದ್ದರು. ಅವರು ಸುಮ್ಮನೆ ಆಲೋಚಿಸುತ್ತ ಕುಳಿತುಕೊಳ್ಳಲಾರದೆ, ಸಂಗಡ ಮೂವರನ್ನು ಕರಕೊಂಡು ಅಶ್ವಾರೂಢರಾಗಿ ಜಾವಳಿಯ ಅರಣ್ಯಕ್ಕೆ ನಡೆದರು. ಅವರು ಪ್ರತಾಪಗಡವನ್ನು ಇಳಿದು ಬರುತ್ತಿರಲು, ಖಂಡೇ ರಾಯನು ಒಬ್ಬನೇ ಎದುರಿಗೆ ಬರುತ್ತಿದ್ದನು. ಅವನೊಬ್ಬನನ್ನೇ ನೋಡಿ ಮಹಾರಾಜರಿಗೆ ಬಹಳ ಅಸಮಾಧಾನವಾಯಿತು. ತಾವು ಯೋಚಿಸಿದಂತೆ ಏಸಾಜಿಯು ಹುಲಿಯಬಾಯಿಗೆ ತುತ್ತಾಗಿರಬಹುದೇ, ಎಂದು ಅವರು ಚಿಂತಿಸುತ್ತ, ತಮ್ಮ ಕುದುರೆಯನ್ನು ನಿಲ್ಲಿಸಿದರು.

ಮಹಾರಾಜರು ಎದುರಿಗೆ ಬರುವದನ್ನು ನೋಡಿ, ಖಂಡೇರಾಯನ ಎದೆಯು ದಸಕ್ಕೆಂದಿತು. ಆತನು ಹೊಯ್ದಾಡುವ ತನ್ನ ಮನಸ್ಸನ್ನು ಸ್ಥಿರಗೊಳಿಸಿಕೊಳ್ಳುತ್ತ, ತನ್ನ ಕುದುರೆಯನ್ನು ಒತ್ತರದಿಂದ ಬಿಟ್ಟನು. ಆತನು ಮಹಾರಾಜರ ಬಳಿಗೆ ಹೋಗಿ ಪದ್ಧತಿಯಂತೆ ವಂದನ ಮಾಡಿ

ಕೈ ಜೋಡಿಸಿ ನಿಂತುಕೊಂಡನು. ಕೈ ಮೀರಿ ಬಹು ದೊಡ್ಡ ಅನರ್ಥವು ಒದಗಿತೆಂಬ ಭಾವವು ಅವನ ಮುಖ ಲಕ್ಷಣದಿಂದ ವ್ಯಕ್ತವಾಗುತ್ತಿತ್ತು. ಮಹಾರಾಜರು ಒಮ್ಮೆ ಖಂಡೇರಾಯನ ಕಡೆಗೆ ನೋಡಿ ಕೂಡಲೆ ಆತ ನನ್ನು ಕುರಿತು—"ಖಂಡೇರಾವ, ನಿನ್ನ ಸಂಗಡ ನಮ್ಮ ಏಸಾಜಿಯು ಕಾಣುವದಿಲ್ಲ? ನೀವಿಬ್ಬರೂ ಮಾರ್ಗವನ್ನು ನೋಡಲಿಕ್ಕೆ ಹೋಗಿದ್ದಿರಲ್ಲ. ಅದರದೇನಾಯಿತು? ಏಸಾಜಿಯನ್ನು ಬಿಟ್ಟು ನೀನು ಒಬ್ಬನೇ ಹ್ಯಾಗೆ ಹೊರಟು ಬಂದೆ?" ಎಂದು ಕೇಳಲು ಖಂಡೇರಾಯನು ಮುಖದಲ್ಲಿ ಮತ್ತಿಷ್ಟು ಶೋಕಮುದ್ರೆಯನ್ನು ತಾಳಿ---"ಏಸಾಜಿಯು ಹುಲಿಯಬಾಯಿಗೆ ತುತ್ತಾದನು; ನಾನು ಎಷ್ಟು ಎತ್ನಿಸಿದರೂ ಆತನನ್ನು ಉಳಿಸಿಕೊಳ್ಳುವದು ಆಗಲಿಲ್ಲ. ಇದು ಆತನ ಸೆಲ್ಲೆಯು" ಎಂದು ನುಡಿದು ಏಸಾಜಿಯ ಸೆಲ್ಲೆ ಯನ್ನು ತೋರಿಸಿದನು. ಹೀಗೆ ನುಡಿಯುತ್ತಿರುವಾಗ ಮಹಾರಾಜರು ತಮ್ಮ ತೀಕ್ಷ್ಣವಾದ ದೃಷ್ಟಿಗಳಿಂದ ಖಂಡೇರಾಯನನ್ನು ಎವೆಯಿಕ್ಕದೆ ನೋಡುತ್ತಲಿದ್ದರು. ನಾನು ಸುಳ್ಳು ಹೇಳುವೆನೆಂಬ ಭಾವವು ಆತನ ಮನಸ್ಸಿಗೆ ಹೊಳೆಯಲೆಂದು ಮಹಾರಾಜರು ಹೀಗೆ ನೋಡುತ್ತಿದ್ದರು. ಖಂಡೇರಾಯನ ಮುಖಲಕ್ಷಣದ ಮೇಲಿಂದಲೇ ಆತನು ಸುಳ್ಳು ಹೇಳುವ ನೆಂಬದನ್ನು ಮಹಾರಾಜರು ಕಂಡು ಹಿಡಿದಿದ್ದರು. ಅವರು ಖಂಡೆರಾಯ ನನ್ನು ಕುರಿತು---ನೀವು ಜಾವಳಿಯ ಅಡವಿಯೊಳಗಿನದೊಂದು ಹುಲಿಯಿದ್ದ ಹಾಗೆ; ಹೀಗಿದ್ದು, ಹುಲಿಯ ಸಂಬಂಧದಿಂದ ಮೊದಲೇಯಾಕೆ ಎಚ್ಚರ ಪಡಲಿಲ್ಲ? ಹುಲಿಯು ಎಲ್ಲಿ ಇರುವದು, ಎಲ್ಲಿ ಇರುವದಿಲ್ಲ, ಎಂಬದನ್ನು ಮೊದಲೇ ತಿಳುಕೊಳ್ಳಬಾರದೇನು? ನಿಮ್ಮಂಥ ಗೊತ್ತಿನ ಮನುಷ್ಯರನ್ನು ನಾನೇಕೆ ಕಳಿಸಿದ್ದೇನು? ಆತನನ್ನು ಬಿಟ್ಟು ನಿವೊಬ್ಬರೇ ನನಗೆ ಮೋರೆ ಯನ್ನು ತೋರಿಸಲಿಕ್ಕೆ ಬಂದದ್ದು ಬಹಳ ಆಶ್ಚರ್ಯದ ಮಾತು! ನೀವು ಆ ಹುಲಿಯನ್ನು ಹೊಡೆದುಕೊಂಡಾದರೂ ಬರಬೇಕಾಗಿತ್ತು; ಇಲ್ಲವೆ ಏಸಾ ಜಿಯ ಸಂಗಡ ನೀವೂ ಹುಲಿಗೆ ಬಲಿಯಾದರೂ ಆಗಬೇಕಾಗಿತ್ತು. ನಿಯಮಿ ಸಿದ ಕೆಲಸವನ್ನು ಮಾಡದೆ ಹೀಗೆ ಕರೀ ಮೋರೆಯಿಂದ ನನ್ನ ಬಳಿಗೆ ಬಂದ ವರಲ್ಲಿ ನೀನೇ ಮೊದಲನೆಯವನು. ಹೇಳು, ಯಾವ ಸ್ಥಳದಲ್ಲಿ ಏಸಾಜಿ ಯನ್ನು ಕೊಂದು ಬಂದೆ?

ಮೊದ ಮೊದಲು ಮಾತಾಡುವಾಗ ಮಹಾರಾಜರು ಸೌಮ್ಯವಾಗಿದ್ದರು; ಆದಗೆ ಮಾತಾಡುತ್ತಾ ಹೋದಂತೆ ಅವರ ಸಿಟ್ಟು ಸ್ಪಷ್ಟ ವಾಗಿ ತೋರಹತ್ತಿತು. ಅದನ್ನು ನೋಡಿ ಖಂಡೇರಾಯನು ಬೆದರಿದನು; ಆದರೆ ಆ ಮೋಸಗಾರನು ತನ್ನ ಬೆದರಿಕೆಯ ಲಕ್ಷಣವನ್ನೇನು ತೋರಗೊಡದೆ, ತಾನು ನಿರಪರಾಧಿಯೆಂದು ತೋರಿಸಲು ಹೆಣಗಹತ್ತಿದನು. ಅದರಿಂದಂತು ಮಹಾರಾಜರ ಸಂಶಯವು ಮತ್ತಿಷ್ಟು ಹೆಚ್ಚಿ, ಅವರು ಇನ್ನಿಷ್ಟು ನಿಷ್ಠುರ ವಾಗಿ ಮಾತಾಡತಕ್ಕವರಿದ್ದರು; ಆದರೆ ಅಷ್ಟರಲ್ಲಿ ಮನಸ್ಸಿನೊಳಗೆ ಏನೋ ಯೋಚಿಸಿ, ಅವರು ಸೌಮ್ಯ ಮುದ್ರೆಯನ್ನು ತಾಳಿ ಖಂಡೇರಾಯನನ್ನು ಕುರಿತು—"ಎಲಾ, ನೀನು ಏಸಾಜಿಯನ್ನು ಉಳಿಸುವದಕ್ಕಾಗಿ ಏನೂ ಪ್ರಯತ್ನ ಮಾಡಿರುವದಿಲ್ಲೆಂದು, ಅಥವಾ ನೀನಾಗಿಯೇ ಏಸಾಜಿಯನ್ನು ಹುಲಿಯ ಬಾಯಿಗೆ ಕೊಟ್ಟೆಯೆಂದು ನಾನು ಅನ್ನುವದಿಲ್ಲ. ನೀನು ಅರಣ್ಯದ ಮಟ್ಟು ಬಲ್ಲವನಿದ್ದು, ಇಂಥ ಅನರ್ಥವು ಯಾಕಾಯಿತೆಂದು ಕೇಳಿದೆನು. ಜಾವಳಿಯ ಅರಣ್ಯದಲ್ಲಿ ಹುಲಿಗಳು ಯಥೆಚ್ಛವೆಂಬದನ್ನು ಎಲ್ಲರೂ ಬಲ್ಲರು; ಆದರೆ ಹುಲಿಯು ನಿಮ್ಮೊಳಗಿನವನೊಬ್ಬನನ್ನು ಮುರಿದು ತಿನ್ನುವಾಗ ನೀನು ಸುಮ್ಮನೆ ಹ್ಯಾಗೆಯಿದ್ದೆಯೆಂದು ನಾನು ಕೇಳಿದೆನು. ಇರಲಿ, ಆದದ್ದಾಗಿ ಹೋಯಿತು. ಏಸಾಜಿಯಂಥ ನರರತ್ನದ ಅವಶ್ಯಕತೆಯು ನಮಗೆ ವಿಶೇಷ ವಾಗಿಯಿತ್ತು. ಆದರೆ ಅದನ್ನು ಉಳಿಸಿಕೊಡುವದು ಅಂಬಾಬಾಯಿಯ ಮನಸ್ಸಿನಲ್ಲಿ ಇದ್ದಂತೆ ತೋರುವದಿಲ್ಲ, ಉಪಾಯವಿಲ್ಲ. ಇನ್ನು ಮಿಂಚಿ ಹೋದ ಮಾತಿಗೆ ಚಿಂತಿಸಿ ಫಲವೇನು? ಏಸಾಜಿಯನ್ನು ಹುಲಿಯು ಮುರಿದಿರುವ ಸ್ಥಳಕ್ಕೆ ನನ್ನನ್ನು ಕರಕೊಂಡು ನಡೆ. ಹುಲಿಗಳು ಇಷ್ಟು ವಿಪುಲವಾಗಿರುವ ಅರಣ್ಯವನ್ನು ಒಮ್ಮೆ ಕಣ್ಣುಮುಟ್ಟಿ ನಾವು ನೋಡೋಣ. ನಡೆ, ಹೀಗೆಯೇ ಹಿಂದಿರುಗು. ನಾವು ಸಾವಕಾಶವಾಗಿ ಹೋಗುತ್ತಿದ್ದೇವು, ಈಗ ಒತ್ತರದಿಂದ ಹೋಗೋಣ. ಹುಲಿಯು ಏಸಾಜಿಯನ್ನು ಮುರಿದ ಸ್ಥಳಕ್ಕೆ ತಪ್ಪದೆ ನಮ್ಮನ್ನು ಕರೆದುಕೊಂಡು ಹೋಗು." ಎಂದು ಹೇಳಿದರು. ಇನ್ನು ವಿಶೇಷ ಮಾತಾಡುವದರಿಂದ ಪ್ರಯೋಜನವಿಲ್ಲೆಂದು ತಿಳಿದು ಖಂಡೇರಾಯನು ಹಿಂದಿರುಗಿ ಒಂದೊಂದೇ ಹೆಜ್ಜೆಯನ್ನು ಇಡ ಹತ್ತಿದನು. ಆಗ ಮಹಾರಾಜರು ಕಣ್ಣು ಸನ್ನೆ ಮಾಡಲು, ಅವರ

ಸಂಗಡಿಗರಲ್ಲಿ ಇಬ್ಬರು ಖಂಡೇರಾಯನನ್ನನುಸರಿಸಿ, ಅವನ ಮೇಲೆ ಕಣ್ಣಿಟ್ಟು ನಡೆಯಹತ್ತಿದರು. ಈ ಸಂಗತಿಯು ಖಂಡೇರಾಯನ ಮನಸ್ಸಿಗೆ ಹೊಳೆದರೂ ಆತನು ಹೊಳೆದಂತೆ ಹೊರಗೆ ತೋರಗೊಡ ಲಿಲ್ಲ. ಆತನು ತನ್ನನ್ನು ಅನುಸರಿಸಿ ಬರುವ ಒಬ್ಬ ತರುಣ ಸರದಾರನನ್ನು ಕುರಿತು—"ನಾನು ಮಹಾರಾಜರ ಕೆಲಸವನ್ನು ಉತ್ತಮ ರೀತಿಯಿಂದ ಮಾಡಬೇಕೆಂದು ಎಷ್ಟು ಉತ್ಸಾಹದಿಂದ ಹೋಗಿದ್ದೆನು; ಆದರೆ ನನ್ನ ದುರ್ದೈವವು ಅನರ್ಥವನ್ನುಂಟುಮಾಡಿತು. ಏಸಾಜಿಗೆ ನಾನು—"ಆ ಪೆಳೆಯ ಕಡೆಗೆ ಹೋಗಬೇಡ, ಅಲ್ಲಿ ಹುಲಿಯು ಇರುವದು" ಎಂದು ಎಷ್ಟು ಹೇಳಿದೆನು; ಆದರೆ ಆತನು ಕೇಳಲಿಲ್ಲ; ಹಟದಿಂದ ಹೋದನು. ಆಗ ಆ ಹುಲಿಯು ಟಣ್ಣನೆ ಹಾರಿ ಏಸಾಜಿಯ ಗಂಟಲನ್ನು ಹಿಡಿಯಿತು. ನಾನು ಎಷ್ಟು ಎತ್ನಿಸಿದರೂ ರಕ್ತದ ಸವಿಗಂಡ ಆ ಹುಲಿಯು ಏಸಾಜಿಯನ್ನು ಬಿಡದೆ ಅವನನ್ನು ಹೆಗಲಮೇಲೆ ಒಗೆದುಕೊಂಡು ತನ್ನ ಪೆಳೆಯನ್ನು ಸೇರಿತು; ಅಂದಬಳಿಕ ನಾನಾದರೂ ಏನು ಮಾಡಬೇಕು? ಈ ಸಂಗತಿಯು ಮೊನ್ನೆಯೇ ಒದಗಿತು. ಆದರೆ ಮಹಾರಾಜರ ಮುಂದೆ ಏನು ಹೇಳಲೆಂದು ನಾನು ಅಡವಿಯಲ್ಲಿ ಸುಮ್ಮನೆ ಕುಳಿತುಕೊಂಡೆನು; ಆದರೆ ಎಷ್ಟು ದಿವಸ ಕುಳಿತುಕೊಂಡರೇನು? ಹೇಳುವದು ಬಿಡುವದೆ? ಈಗೊದಗಿದ ದುಃಖದ ಪ್ರಸಂಗದಿಂದ ಮಹಾರಾಜರ ಮನಸ್ಸು ನೋಯುವದು ಆಶ್ಚರ್ಯವಲ್ಲ. ಅವರು ನನ್ನ ಮೇಲಿನ ಮನಸ್ಸು ತೆಗೆಯುವ ಪ್ರಸಂಗದಲ್ಲಿ ನೀವು ಅವರಿಗೆ ಹೇಳಿ ನನಗೆ ಸಹಾಯ ಮಾಡಬೇಕು." ಎಂದು ಹೇಳಿಕೊಂಡನು.

ಈ ಮೇರೆಗೆ ಖಂಡೇರಾಯನು ಆ ತರುಣ ಮರಾಟನಿಗೆ ವಿಶ್ವಾಸವನ್ನು ಹುಟ್ಟಿಸುವ ಧ್ವನಿಯಿಂದ ಹೇಳಿಕೊಳ್ಳುತ್ತ ನಡೆದಿದ್ದನು; ಆ ತರುಣ ಸರದಾ ರನು ಅದನ್ನೆಲ್ಲ ಸುಮ್ಮನೆ ಕೇಳುತ್ತ ಸಾಗಿದ್ದನು. ಅತ್ತ ಮಹಾರಾಜರು ತಮ್ಮೊಳಗೆ ಏನೋ ವಿಚಾರಮಾಡುತ್ತ ನಡೆದಿದ್ದರು. "ಏಸಾಜಿಯು ಹುಲಿಯುಬಾಯಿಗೆ ಬಿದ್ದು ಸತ್ತಿರುವದಿಲ್ಲೆಂಬದು ನಿಶ್ಚಯವು. ಇನ್ನು ಬೇರೆ ವಿಧದಿಂದ ಅವನ ಅಪಘಾತವಾಗಿದ್ದರೆ ಆಗಿರಬಹುದು. ಈಗ ಖಂಡೇರಾಯ ನನ್ನು ಯುಕ್ತಿಯಿಂದ ಇರಕಿನಲ್ಲಿ ಹಿಡಿದು, ಆತನನ್ನು ಮರುಳುಗೊಳಿಸಿದರೆ ನಿಜವಾದ ಸಂಗತಿಯು ಹೊರಬಿದ್ದರೆ ಹೊರಬೀಳಬಹುದು; ಅದರಂತೆ, ಈ

ಮನುಷ್ಯನು ನನ್ನ ಆಶ್ರಯಕ್ಕೆ ಬಂದಿದ್ದರ ಮೂಲ ಕಾರಣವು ಗೊತ್ತಾದರೆ ಗೊತ್ತಾಗಬಹುದು" ಹೀಗೆ ಅವರು ವಿಚಾರಮಾಡುತ್ತ ತಮ್ಮ ಪರಿವಾರದೊಡನೆ ಬೈಲು ಪ್ರದೇಶಕ್ಕೆ ಬಂದರು. ಇನ್ನು ಅವರು ಏಸಾಜಿಯು ಹುಲಿಯು ಬಾಯಿಗೆ ಸಿಕ್ಕ ಸ್ಥಳದ ಕಡೆಗೆ ತಿರುಗತಕ್ಕವರು, ಅಷ್ಟರಲ್ಲಿ ಒಬ್ಬ ಗೋಸಾವಿಯು ಅವರ ಮುಂದೆ ಬಂದು ಘಟ್ಟಿಯಾಗಿ ಆಶೀರ್ವದಿಸಿದನು. ಆ ಆಶೀರ್ವಾದದ ಧ್ವನಿಯನ್ನು ಕೇಳಿದ ಕೂಡಲೆ ಮಹಾರಾಜರು ಗೋಸಾವಿಯನ್ನು ಬಹು ವಿನಯದಿಂದ ವಂದಿಸಿದರು. ಸಾಧುಗಳು, ಬೈರಾಗಿಗಳು ಮೊದಲಾದವರನ್ನು ನೋಡಿದ ಕೂಡಲೆ ಮಹಾರಾಜರಿಗೆ ಬಹಳ ಸಂತೋಷವಾಗುತ್ತಿತ್ತು. ಈ ವೈರಾಗ್ಯಶಾಲಿಗಳಾದ ಪುರುಷರ ಪುಣ್ಯದಿಂದಲೇ ಯಾವತ್ತೂ ಸೃಷ್ಟಿಯು ಸುಸೂತ್ರವಾಗಿ ನಡೆದಿರುತ್ತದೆ; ಅವರ ನಿರಪೇಕ್ಷವಾದ ಪರಮೇಶ್ವರ ಭಕ್ತಿಯಿಂದಲೇ ಜಗತ್ತಿನಲ್ಲಿ ಪಾಪದ ವರ್ಚಸ್ಸು ಕಡಿಮೆಯಾಗುವದು, ಎಂದು ಮಹಾರಾಜರ ತಿಳುವಳಿಕೆಯಿತ್ತು. ಅನುಭವದಂತೆ ಶ್ರದ್ಧೆಯು ಉತ್ಪನ್ನವಾಗುತ್ತದೆಂಬ ಮಾತು ಸುಳ್ಳಲ್ಲ. ಆಗಿನ ಕಾಲದಲ್ಲಿ ಮಹಾರಾಷ್ಟ್ರದೊಳಗೆ ಇಬ್ಬರು ದೊಡ್ಡ ಸತ್ಪುರುಷರು ಆಗಿಹೊದರು. ಅವರ ವೈರಾಗ್ಯವನ್ನು ಎಷ್ಟು ವರ್ಣಿಸಿದರೂ ಸ್ವಲ್ಪವೇ ಇರುವದು. ಶ್ರೀ ರಾಮದಾಸ ಸ್ವಾಮಿಗಳ ಚರಣಕ್ಕೆ ಮಹಾರಾಜರು ತಮ್ಮ ರಾಜ್ಯವನ್ನೆಲ್ಲ ಒಪ್ಪಿಸಿದರೂ, ಅದರೊಳಗಿನದೊಂದು ರಿಂಬಿಯನ್ನು ಕೂಡ ಸ್ವಾಮಿಗಳು ಇಚ್ಛಿಸಲಿಲ್ಲ; ಅದರಂತೆ, ಶ್ರೀ ತುಕಾರಾಮ ಮಹಾರಾಜರ ಮುಂದೆ ಮುತ್ತು ರತ್ನಗಳಿಂದ ತುಂಬಿದ ತಾಟನ್ನು ಇಟ್ಟರೆ, ಅವರು—"ಇದು ಮಣ್ಣಿಗೆ ಸಮಾನ" ಎಂದು ಹೇಳಿದರು! ಮಹಾರಾಜರಿಗೆ ಸತ್ಪುರುಷರ ಸಂಬಂಧದ ಈ ಬಗೆಯ ಅನುಭವವಿದ್ದದ್ದರಿಂದ, ಬೇರೆ ಯಾವ ಸತ್ಪುರುಷರನ್ನು ನೋಡಿದರೂ ಮಹಾರಾಜರು ಅವರನ್ನು ಬಹಳವಾಗಿ ಮನ್ನಿಸುತ್ತಿದ್ದರು. ಅವರು ಸತ್ಪುರುಷರ ಅವಮಾನವನ್ನು ಎಂದೂ ಮಾಡಲಿಲ್ಲ. ಅದರಂತೆ ಈಗಾದರೂ ಮಹಾರಾಜರು ಬೈರಾಗಿಯನ್ನು ಕಂಡಕೂಡಲೆ ಕುದುರೆಯಿಂದ ಇಳಿದು, ಬೈರಾಗಿಯ ಚರಣಕ್ಕೆರಗಿದರು. ಬೈರಾಗಿಯು ಮತ್ತೆ ಆಶೀರ್ವಾದ ಮಾಡಿದನು. ಆಮೇಲೆ ಮಹಾರಾಜರು ಬೈರಾಗಿಯನ್ನು ಕುರಿತು—"ಬೋಳೆ ಸಾಹೇಬ, ತಮ್ಮ ಇಚ್ಛೆಯೇನಿರುವದು?

ನಾನು ಒಂದು ಕಾರ್ಯದ ಸಲುವಾಗಿ ಹೊರಟಿರುತ್ತೇನೆ. ನನ್ನ ಸಂಗಡಿಗರಲ್ಲಿ ಒಬ್ಬರನ್ನು ತಮ್ಮೊಡನೆ ಕಳಿಸುವೆನು. ತಾವು ಪ್ರತಾಪಗಡಕ್ಕೆ ಹೋಗಬೇಕು. ಅಲ್ಲಿ ಆಯೀಸಾಹೇಬರು ಇರುವರು. ಅವರು ತಮ್ಮ ಯೋಗಕ್ಷೇಮವನ್ನು ಉತ್ತಮ ರೀತಿಯಿಂದ ನೋಡುವರು" ಎಂದು ಬೈರಾಗಿಯನ್ನು ಪ್ರಾರ್ಥಿಸಿದರು. ಬೈರಾಗಿಯು ಅದನ್ನೆಲ್ಲ ಕೇಳಿ ಪುನಃ ಮಹಾರಾಜರನ್ನು ಆಶೀರ್ವದಿಸಿದಂತೆ ಕೈಗಳನ್ನು ಮೇಲಕ್ಕೆತ್ತಿದನು. ಆಮೇಲೆ ಸ್ವಲ್ಪಹೊತ್ತು ಸುಮ್ಮನೆ ಇದ್ದು, ಆತನು ಪುನಃ ಕೈಗಳನ್ನು ಮೇಲಕ್ಕೆತ್ತಿ ಮಹಾರಾಜರನ್ನು ಕುರಿತು—"ರಾಜನೆ, ನಿನ್ನ ದುರ್ಗದ ಮೇಲೆ ಹೋಗಿ ಆದರೋಪಚಾರಗಳನ್ನು ಸ್ವೀಕರಿಸಲು ನಾವು ಇಚ್ಛಿಸುವದಿಲ್ಲ. ಈ ನಿನ್ನ ಜಾವಳಿಯ ಅರಣ್ಯದಲ್ಲಿ ಪರಮಾನಂದಗಿರಿಯೆಂಬ ಮಹಾ ಸತ್ಪುರುಷರೊಬ್ಬರು ಬಂದಿದ್ದಾರೆ. ಅವರು ಇಲ್ಲಿಗೆ ಬಂದು ಸುಮಾರು ಒಂದು ತಿಂಗಳು ಆಯಿತು. ಈ ಸುದ್ದಿಯನ್ನು ನಿನಗೆ ಯಾರೂ ಹೇಳಿಲ್ಲೆಂಬಂತೆ ತೋರುತ್ತದೆ. ಹೇಳಿದ್ದರೂ ಅವರ ದರ್ಶನದ ವಿಷಯವಾಗಿ ನೀನು ದುರ್ಲಕ್ಷ ಮಾಡಿದಹಾಗೆ ಕಾಣುತ್ತದೆ. ಆ ಮಹಾ ಸಾಧುಗಳು ನಿನ್ನನ್ನು ಕಾಣಲು ಇಚ್ಛಿಸುವರು. ಈಗ ನೀನು ನನ್ನ ಸಂಗಡ ಬಂದರೆ ಅವರ ದರ್ಶನವಾಗುವದು, ಇಲ್ಲದಿದ್ದರೆ ಅವರು ನಾಳೆ ಇಲ್ಲಿಂದ ಹೊರಟುಹೋಗುವರು."

ಈ ಮೇರೆಗೆ ನುಡಿಯುವಾಗ ಗೋಸಾವಿಯು ಮಹಾರಾಜರನ್ನಂತು ನೋಡೇ ನೋಡುತ್ತಿದ್ದನು; ಆತನು ಮಹಾರಾಜರಿಗಿಂತ ಖಂಡೇರಾಯನನ್ನು ವಿಶೇಷ ಉತ್ಸುಕತೆಯಿಂದ ನೋಡುತ್ತಿದ್ದನು. ಮುಂದೆ ಅವರಿಬ್ಬರು ಪರಸ್ಪರರನ್ನು ನೋಡಲಿಕ್ಕೆ ಸಂಕೋಚಪಡಹತ್ತಿದರು. ಈ ಮಾತು ಭಕ್ತಿಪರವಶರಾದ ಮಹಾರಾಜರ ಲಕ್ಷದಲ್ಲಿ ಬಂದಂತೆ ತೋರಲಿಲ್ಲ. ಅವರು ಗೋಸಾವಿಯನ್ನು ಕುರಿತು—"ನಾನು ಜಾವಳಿಯ ಅರಣ್ಯದಲ್ಲಿ ಹೋಗುವದಕ್ಕಾಗಿಯೇ ಹೊರಟಿರುತ್ತೇನೆ; ಆ ಸ್ವಾಮಿಗಳವರು ಅಲ್ಲಿ ಇದ್ದ ಸುದ್ದಿಯನ್ನು ನನಗೆ ಯಾರೂ ಹೇಳಿರುವದಿಲ್ಲ. ನಮ್ಮವನೊಬ್ಬನು ಮೊನ್ನೆ ಈ ಅರಣ್ಯದಲ್ಲಿ ಹುಲಿಯ ಬಾಯಿಗೆ ಬಿದ್ದನೆಂದು ಅವನ ಸಂಗಡ ಹೋದವನು ಹೇಳಿದನು; ಆದ್ದರಿಂದ ಆ ಮನುಷ್ಯನ ಶೋಧಕ್ಕಾಗಿ ನಾನು ಹೊರಟಿರುತ್ತೇನೆ. ಈಗ ನಮ್ಮೊಳಗಿನವನೊಬ್ಬನನ್ನು ಕುದುರೆಯ ಮೇಲಿಂದ ಇಳಿಸಿ,

ಆತನಿಗೆ ನಡೆದು ಬರುವಂತೆ ಹೇಳುವೆನು. ತಾವು ಆ ಕುದುರೆಯನ್ನು ಹತ್ತಿಕೊಂಡು ನನ್ನ ಸಂಗಡ ಬರಬೇಕು. ಮಹಾಪುರುಷರು ನನ್ನನ್ನು ಅನುಗ್ರಹಿಸಲು ಇಚ್ಛಿಸುತ್ತಿರುವಾಗ, ನಾನು ಅದನ್ನು ಹ್ಯಾಗೆ ನಿರಾಕರಿಸಲಿ? ದೊಡ್ಡವರ ಅನುಗ್ರಹದಿಂದಲೇ ನಮ್ಮ ಮನುಷ್ಯನ ಗೊತ್ತು ಹತ್ತಬಹುದು. ನಾವು ಬೇಗನೆ ಹೋಗಬೇಕಾಗಿದೆ, ಮಹಾರಾಜರು ಕುದುರೆಯನ್ನು ಹತ್ತಬೇಕು," ಎಂದು ಹೇಳಿದರು; ಆದರೆ ಇಷ್ಟು ಬೇಗನೆ ಹೊರಡುವದು ಗೋಸಾವಿಯ ಮನಸ್ಸಿನಲ್ಲಿ ಇದ್ದಂತೆ ತೋರಲಿಲ್ಲ. ಆತನು ಮಹಾರಾಜರನ್ನು ಕುರಿತು—"ಶಾಬಾಸ್, ರಾಜಾ, ನಾವು ಈವರೆಗೆ ನಿನ್ನ ಕೀರ್ತಿಯನ್ನು ಕೇಳುತ್ತಿರುವಂತೆ ನೀನು ನಿಜವಾಗಿ ಸಾಧು ಸತ್ಪುರುಷರ ಯೋಗಕ್ಷೇಮವನ್ನು ವಿಚಾರಿಸುವವನಿರುತ್ತೀ; ಆದರೆ ನಮ್ಮಂಥ ಅತಿಥಿಗಳು ಬಂದರೆ, ಮೊದಲು ಅವರ ಯೋಗಕ್ಷೇಮವ ವಿಚಾರಿಸುವದನ್ನು ಬಿಟ್ಟು "ಮೊದಲು ನನ್ನ ಸಂಗಡ ನಡೆಯಿರಿ" ಎಂದು ಹೇಳುವೆಯಲ್ಲ! ನಾನು ಬಹಳ ದಣಿದು ಬಂದಿರುತ್ತೇನೆ. ನಾನು ಪ್ರತಾಪಗಡದ ಮೇಲೆ ನಿನ್ನನ್ನು ಕಂಡು, ಅಲ್ಲಿ ಒಂದೆರಡು ದಿನ ವಿಶ್ರಾಂತಿಯನ್ನು ಹೊಂದಿ ಆಮೇಲೆ ನಿನ್ನನ್ನು ಕರಕೊಂಡು ಹೋಗಬೇಕೆಂದಿದ್ದೆನು; ಆದರೆ ನೀನು ಹಾದಿಯಲ್ಲಿಯೇ ಭೆಟ್ಟಿಯಾದೆ. ಏನೂ ಚಿಂತೆಯಿಲ್ಲ. ಸೆಟ್ಟಿ ಇಳಿದಲ್ಲಿ ಪಟ್ಟಣವೆಂಬಂತೆ, ನೀನು ಇದ್ದಲ್ಲಿ ಯಾವ ಕೊರತೆಯೂ ಆಗದು. ನಾನು ಬಹಳ ಹಸಿದಿರುವೆನು. ಇಲ್ಲಿ ಒಂದು ದಿವಸವಾದರೂ ವಿಶ್ರಾಂತಿಯನ್ನು ಹೊಂದಿ ಮುಂದಕ್ಕೆ ಹೋಗೋಣ, ನನ್ನ ಅಂತರಾತ್ಮನನ್ನು ಸಮಾಧಾನಗೊಳಿಸು. ನಿನ್ನ ಮನುಷ್ಯನ ಚಿಂತೆಯನ್ನು ಬಿಡು. ಆತನನ್ನು ನಮ್ಮ ಗುರುಗಳು ಹುಲಿಯ ಬಾಯೊಳಗಿಂದಲೇ ಯೇಕೆ, ಯಮನ ದವಡೆಯೊಳಗಿಂದಾದರೂ ಬಿಡಿಸಿಕೊಂಡು ತಂದುಕೊಡುವರು" ಎಂದು ಹೇಳಿದನು. ಗೋಸಾವಿಯ ಈ ಮಾತುಗಳು ಮಹಾರಾಜರಿಗೆ ಬಹು ಚಮತ್ಕಾರದವಾಗಿ ತೋರಿದವು; ಆದರೂ ಭಾವಿಕ ಸ್ವಭಾವದ ಅವರು ಅಸಮ್ಮತಿಯನ್ನು ತೋರಿಸದೆ ಗೋಸಾವಿಗೆ—ಬೋಆ, ನಾನು ಮುಂದಕ್ಕೆ ಹೋಗುತ್ತೇನೆ. ನಿಮ್ಮ ಸಲುವಾಗಿ ಒಂದು ಕುದುರೆಯನ್ನೂ, ಒಬ್ಬ ಮನುಷ್ಯನನ್ನೂ ಇಡುವೆನು. ತಮಗೆ ಬೇಕಾದ ಪದಾರ್ಥಗಳನ್ನು ಆ ಮನುಷ್ಯನು ತಂದು ಕೊಡುವನು; ಮತ್ತು

ತಮಗೆ ಬೇಕಾದ ಅನುಕೂಲತೆಗಳನ್ನೂ ಆತನು ಮಾಡಿಕೊಡುವನು. ನಾನು ನಮ್ಮ ಮನುಷ್ಯನನ್ನು ನೋಡಿ ಬರುವೆನು. ಅಲ್ಲಿಯವರೆಗೆ ನನಗೆ ಸಮಾಧಾನವಾಗಲರಿಯದು. ತಾವು ಇಲ್ಲಿ ಇರುವದರೊಳಗಾಗಿಯೇ ನಾನು ತಮ್ಮ ಬಳಿಗೆ ಬರುವೆನು. ಆಮೇಲೆ ಇಬ್ಬರೂ ಕೂಡಿಯೇ ಮಹಾ ಪುರುಷರ ಬಳಿಗೆ ಹೋಗೋಣ, ಇಲ್ಲವೆ ತಾವು ಎಲ್ಲಿಯಾದರೂ ನನಗೆ ಕೂಡ್ರಹೇಳಿದರೆ, ತಮ್ಮ ಹಾದಿಯ ನೋಡುತ್ತ ಅಲ್ಲಿ ಕುಳಿತುಕೊಳ್ಳುವೆನು; ಆದರೆ ಈಗ ನಿಮ್ಮ ಸಲುವಾಗಿ ನಿಂತುಕೊಳ್ಳಲಿಕ್ಕೆ, ಅಥವಾ ನಿಮ್ಮ ಸಂಗಡ ಎಲ್ಲಿಗಾದರೂ ಬಂದು ನಿಮ್ಮ ಊಟ ಉಡಿಗೆಗಳಾಗುವವರೆಗೆ ಹಾದಿಯ ನೋಡಲಿಕ್ಕೆ ನನಗೆ ಬರುವಹಾಗಿಲ್ಲ," ಎಂದು ಹೇಳಲು, ಗೋಸಾವಿಯು—"ರಾಜಾ, ನೀನು ನಮ್ಮ ವಿಷಯವಾಗಿ ಹೀಗೆ ಉದಾಸೀನ ಭಾವವನ್ನು ತಾಳಬೇಡ. ದೇವರು ಯಾವಕಾಲಕ್ಕೆ ಯಾವ ರೂಪದಿಂದ ಬರುತ್ತಾನೆಂಬದರ ನಿಯಮವನ್ನು ಹೇಳಲಿಕ್ಕೆ ಬರುವದಿಲ್ಲ. ಸಿರಿಯಾಳ ರಾಜನ ಮನೆಗೆ ಶ್ರೀ ಶಂಕರನು ಯಾವರೂಪದಿಂದ ಹೋಗಿದ್ದನೆಂಬದನ್ನು ವಿಚಾರದಿಂದ ತಿಳಿದುಕೋ. ನಿಮ್ಮವನ ಚಿಂತೆಯನ್ನು ಮಾಡಬೇಡವೆಂದು ಆಗಲೆ ನಾನು ನಿನಗೆ ಹೇಳಲಿಲ್ಲವೆ? ನನ್ನ ಅಂತರಾತ್ಮನು ಸಂತುಷ್ಟನಾಗುವವರೆಗೆ ನೀನು ಇಲ್ಲಿಂದ ಹೋದರೆ ನಿನಗೆ ಹಿತವಾಗದು. ನಿನ್ನ ಹಿತವನ್ನು ಮನಮುಟ್ಟಿ ಬಯಸುತ್ತಿದ್ದ ನಾನು, ನಿನ್ನನ್ನು ಹೋಗಗೊಡುವದಿಲ್ಲ," ಎಂದು ನುಡಿದು, ಆತನು ಮಹಾರಾಜರ ಕುದುರೆಯ ಮುಂದೆ ಬಂದು ನಿಂತುಕೊಂಡನು. ಬೈರಾಗಿಯನ್ನು ಹಿಂದಕ್ಕೆ ಸರಿಸಿ ಮುಂದಕ್ಕೆ ಹೋಗಲಿಕ್ಕೆ ಮಹಾರಾಜರ ಮನಸ್ಸು ಮೆಚ್ಚದಾಯಿತು. ಅವರು ಅತ್ಯಂತ ಶ್ರದ್ಧಾಲು ಸ್ವಭಾವದವರು. ಅವರು ತಿರುಗಿ ಮಾತಾಡದೆ ಕುದುರೆಯನ್ನು ಇಳಿದರು. ಅಷ್ಟರಲ್ಲಿ ಗೋಸಾವಿಯು ಒಂದು ಗಿಡದಬುಡದಲ್ಲಿ ತನ್ನ ಕೃಷ್ಣಾಂಜಿನವನ್ನು ಹಾಸಿದ್ದನು; ಆಗ ಮಹಾರಾಜರು ಖಂಡೇರಾಯನನ್ನು ಕುರಿತು—"ನೀನು ಏಸಾಜಿಯನ್ನು ಬಿಟ್ಟುಬಂದದ್ದು ಬಹಳ ಹೇಡಿತನವು; ಆದರೆ ಈಗ ನೀನು ಹೋಗಿ ಆ ಸ್ಥಳವನ್ನು ನೊಡಿಬಾ. ಸಂಗಡ ಯಾರನ್ನಾದರೂ ಕರೆದುಕೊಂಡು ಹೋಗು." ಎಂದು ಹೇಳಿದರು. ಖಂಡೇರಾಯನಿಗೂ ಅಷ್ಟೇ ಬೇಕಾಗಿತ್ತು. ಆತನು ತಟ್ಟನೆ ಮಹಾರಾಜರನ್ನು ಕುರಿತು—"ಯಾತಕ್ಕೆ. ಮತ್ತೊಬ್ಬರು

ಯಾತಕ್ಕೆ? ನಾನೊಬ್ಬನೇ ಈಗ ನೋಡಿಕೊಂಡು ಬರುವೆನು.” ಎಂದು ಹೇಳಿ, ಮಹಾರಾಜರು ಏನೋ ಹೇಳುತ್ತಿರುವದನ್ನು ಕೇಳಿಕೊಳ್ಳದೆ, ಹೊರಟು ನಡೆದನು. ಆಗ ಗೋಸಾವಿಯು ಖಂಡೇರಾಯನಿಗೆ ಏನೋ ಸನ್ನೆ ಮಾಡಿದ ಹಾಗೆ ತೋರಿತು. ಅದನ್ನು ಮಹಾರಾಜರು ನೋಡಿದರೋ ಇಲ್ಲವೋ ತಿಳಿಯದು. ಖಂಡೇರಾಯನು ಹೊರಟುಹೋದ ಕೂಡಲೆ ಗೋಸಾವಿಯು ಮಹಾರಾಜರನ್ನು ಕುರಿತು--“ನೀನು ಇತ್ತ ಕುಳಿತುಕೊಳ್ಳ ಬೇಕು. ಆ ಮನುಷ್ಯನು ಎಲ್ಲ ನೋಡಿಕೊಂಡು ಬರುವನು. ನಿಮ್ಮ ಸತ್ತ ಮನುಷ್ಯನ ವಿಷಯವಾಗಿ ನೀನು ನಿಶ್ಚಿಂತನಾಗಿರಬೇಕು. ನಿಮ್ಮವನು ಸುದ್ದಿಯನ್ನು ತರುವವರೆಗೆ ನಮ್ಮೊಡನೆ ನೀನು ವಿಶ್ರಮಿಸು. ನಿಮ್ಮವನ ಜೀವಕ್ಕೆ ಭಯವಿಲ್ಲೆಂದು ನಾನು ನಂಬಿಕೆ ಕೊಡುವೆನು. ರಾಜಾ, “ಹರ ಮುನಿದರೆ ಗುರು ಕಾಯುವನೆಂ”ದು ದೊಡ್ಡವರು ಹೇಳುತ್ತಿರಲು, ಸಜ್ಜನರ ಸೇವೆಯಲ್ಲಿ, ಹಾಗು ಅವರ ಮನಸ್ಸನ್ನು ಸಂತೋಷ ಪಡಿಸುವುದರಲ್ಲಿ ತತ್ಪರ ನಾಗಿರುವ ನಿನಗೆ ನಿನ್ನ ಮನುಷ್ಯನ ಚಿಂತೆಯೇಕೆ?

ಗೊಸಾವಿಯ ಮುಂಗಾಲ ಪುಟಿಕೆಯ ಈ ಮಾತುಗಳನ್ನು ಕೇಳಿ ಮಹಾರಾಜರಂಥ ಶ್ರದ್ಧಾಲುಗಳಿಗೂ ಸಂಶಯವು ಉತ್ಪನ್ನವಾಯಿತು. ಖಂಡೇರಾಯನ ಮೇಲಂತೂ ಅವರ ವಿಶ್ವಾಸವು ಇದ್ದೇ ಇಲ್ಲ. ಗೋಸಾವಿಯ ಈ ವಿಲಕ್ಷಣ ಸ್ಥಿತಿಯನ್ನು ನೋಡಿ ಅವರಿಗೆ ಒಂದು ಪ್ರಕಾರದ ಅಪನಂಬಿ ಗೆಯು ಹುಟ್ಟಿತು. ಅದನ್ನು ಅವರು ಹೊರಗೆ ತೋರಗೊಡಲಿಲ್ಲ. ಇಲ್ಲಿ ಏನೋ ಕಾರಸ್ಥಾನವಿದ್ದಂತೆ ತೋರುತ್ತದೆ. ಏಸಾಜಿಯು ಹುಲಿಯ ಬಾಯಿಗೆ ಬಿದ್ದಿರುವದಿಲ್ಲ. ಆತನು ಈ ಕಾರಸ್ಥಾನಕ್ಕೆ ಬಲಿಯಾಗಿರ ಬಹುದು. ಖಂಡೇರಾಯನ ಅಂಗವು ಈ ಕಾರಸ್ಥಾನದಲ್ಲಿರುವುದು ನಿಶ್ಚಯವು. ಇವನು ನಿಜವಾದ ಗೋಸಾವಿಯೋ ಆಗಿರಬಹುದೇನು? ಈಗ ಯಾವ ಮಾತನ್ನೂ ಆಡದೆ, ಇವರ ತಂತ್ರವಾದರೂ ಏನಿರುತ್ತದೆಂಬು ದನ್ನು ನೋಡೋಣ. ಏಸಾಜಿಯ ಶೋಧಕ್ಕಾಗಿ ನಾನು ಮನೆಯಿಂದ ಹೊರಟಿರುತ್ತೇನೆ; ಆತನ ಶೋಧವಾದ ಹೊರತು ನಾನು ತಿರುಗಿ ಹೋಗುವ ಹಾಗಿಲ್ಲ. ಅಂಬಾಬಾಯಿಯ ಇಚ್ಛೆಯಿದ್ದಂತೆ ಆಗಲಿ, ಎಂದು ಮನಸ್ಸಿನಲ್ಲಿ ಆಲೋಚಿಸಿ, ಹೊರಗೆ ಆ ವಿಚಾರದ ಸುಳವು ಸಹ ಹತ್ತದಂತೆ ಗಾಂಭೀರ್ಯ

ದಿಂದ ಗೋಸಾವಿಯು ಯೋಗಕ್ಷೇಮದಲ್ಲಿರುವಂತೆ ನಟಿಸಹತ್ತಿದರು. ಮೊದಲಿನಂತೆ ಮನಬಿಚ್ಚಿ ಮಾತಾಡುವ ಧೈರ್ಯವು ಗೋಸಾವಿಗೆ ಆಗ ಲೊಲ್ಲದು. ತಮ್ಮ ಗಂಭೀರವೃತ್ತಿಯು ಪರಿಣಾಮವು ಗೊಸಾವಿಯು ಮನಸ್ಸಿನ ಮೇಲೆ ಆದದ್ದನ್ನು ಚಾಣಾಕ್ಷರಾದ ಮಹಾರಾಜರು ತಿಳಿದು ಕೊಂಡು, ಗೋಸಾವಿಯು ಮನಸ್ಸಿನಲ್ಲಿ ಯಾವ ಬಗೆಯ ಸಂಶಯವೂ ಉತ್ಪನ್ನವಾಗಬಾರದೆಂದು ಅವರು ಗೋಸಾವಿಯನ್ನು ಕುರಿತು—"ಮಹಾ ರಾಜ, ತಮ್ಮ ಚರಣದರ್ಶನದಿಂದ ನನ್ನ ಮನಸ್ಸಿಗೆ ಬಹಳ ಸಂತೋಷ ವಾಗಿದೆ. ಸತ್ಸಮಾಗಮದಿಂದ ಸಾಂಸಾರಿಕ ತಾಪಗಳು ಅಳಿದುಹೋಗುತ್ತ ವೆಂಬದು ಸುಳ್ಳಲ್ಲ. ನನಗೆ ಈಗ ಸಂಪೂರ್ಣ ಶಾಂತಿಯು ಪ್ರಾಪ್ತವಾಗಿ ರುವದು. ಪರಮಾನಂದಗಿರಿ ಮಹಾರಾಜರ ದರ್ಶನವು ಯಾವಾಗಾದೀ ತೆಂದು ಮನಸ್ಸು ಚಡಪಡಿಸುತ್ತಲಿದೆ," ಎಂದು ನುಡಿದರು. ಅದನ್ನು ಕೇಳಿ ಗೋಸಾವಿಗೆ ಸ್ವಲ್ಪ ಸಮಾಧಾನವಾಯಿತು. ತಾನು ಮೊದಲಿನಂತೆ ಅಧಿಕಾರ ಧ್ವನಿಯಿಂದ ಮಾತಾಡದಿದ್ದರೆ, ಮಹಾರಾಜರಿಗೆ ಸಂಶಯ ಬಂದೀತೆಂದು ತಿಳಿದು ಆತನು—"ರಾಜಾ, ವಿಸ್ವಾಸಃ ಫಲದಾಯಕಃ" ನಿನ್ನ ವಿಶ್ವಾಸದಂತೆ ನಿನಗೆ ಫಲವಾಗುವದು. ಅಫಜುಲಖಾನನ ವಿಷಯದ ದೊಡ್ಡ ಚಿಂತೆಯು ನಿನ್ನ ಮನಸ್ಸಿನಲ್ಲಿರುತ್ತದೆ; ಆದರೆ ಅದು ದೂರವಾಯಿ ತೆಂದು ತಿಳಿದುಕೋ. ನಿನಗೆ ಅಂಬಾಬಾಯಿಯು ಸಹಾಯವಿರುವದಲ್ಲದೆ, ಸತ್ಪುರುಷರ ಸಹಾಯವೂ ಇರುವದು. ಸ್ವಧರ್ಮದ, ಹಾಗು ಸ್ವದೇಶದ ಉದ್ಧಾರಕ್ಕಾಗಿ ಹಗಲಿರುಳು ಸವೆಯುತ್ತಿರುವ ನಿನ್ನಂಥವನಿಗೆ ಸಹಾಯ ಮಾಡದೆ, ಸತ್ಪುರುಷರು ಬೇರೆ ಯಾರಿಗೆ ಸಹಾಯಮಾಡಬೇಕು? ಅಫಜುಲ ಖಾನನೆಂಬ ವಿಷವೃಕ್ಷವನ್ನು ಸಮೂಲವಾಗಿ ಕಿತ್ತಿ ಒಗೆಯ ಬೇಕೆಂದು ನಿನ್ನ ಮನಸ್ಸಿನಲ್ಲಿರುವದಷ್ಟೇ? ಆದರೆ ಖಾನನು ನಿನ್ನನ್ನು ಘಾತಿಸಲು ಉದ್ಯುಕ್ತ ನಾದಾಗಲೇ ನೀನು ಅವನನ್ನು ಘಾತಿಸುತ್ತೀ. ಈ ಕಾರ್ಯವನ್ನು ನೀನು ಸ್ವತಃ ಕೈಮುಟ್ಟಿ ಸಾಧಿಸಬೇಕಾಗಿರುವದು. ಇದರಲ್ಲಿ ನಿನಗೆ ಸಂಪೂರ್ಣ ವಾದ ಯಶಸ್ಸು ಪ್ರಾಪ್ತವಾಗುತ್ತದೆ; ಎಂದು ಹೇಳಿದನು. ಅದನ್ನು ಕೇಳಿ ಮಹಾರಾಜರಿಗೆ ಸಮಾಧಾನವಾಯಿತೋ ಅಸಮಾಧಾನವಾಯಿತೋ ತಿಳಿಯದು. ಅವರು "ಭವಾನಿಯ ಇಚ್ಛೆಯಿದ್ದಂತೆ ಆಗಲಿ" ಎಂದು

ನುಡಿದು ಸುಮ್ಮನಾದರು. ಅವರ ಮನಸ್ಸು ವಿಚಾರ ಮಗ್ನವಾಯಿತು. ಇವರು ನನಗೆ ಅಹಿತವನ್ನು ಚಿಂತಿಸುತ್ತಿರಬಹುದೋ, ಹಿತವನ್ನು ಚಿಂತಿಸುತ್ತಿರಬಹುದೋ? ನನ್ನನ್ನು ಬುದ್ಧಿಪೂರ್ವಕವಾಗಿ ದರ್ಶನಕ್ಕೆ ಕರೆದೊಯ್ಯುವ ಉದ್ದೇಶವೇನಿರಬಹುದು? ಜಗತ್ತಿನಲ್ಲಿ ನಿಜವಾದ ಸತ್ಪುರುಷರು ಅಪರೂಪವೆಂದು ಸಮರ್ಥರು ಮೇಲೆ ಮೇಲೆ ಹೇಳುವರು. ಕಾರ್ಯಸಾಧಕರು ಸಾಧುಗಳ ವೇಷದಿಂದ ಬೇಕಾದಂಥ ನೀಚತನವನ್ನು ಮಾಡಲಿಕ್ಕೆ ಹೇಸುವದಿಲ್ಲ. ಡಾಂಭಿಕತನವು ಜಗತ್ತನ್ನು ಮುಸುಕಿರುವದು. ಡಾಂಭಿಕತನಕ್ಕೆ ಲೋಕವು ಮರುಳಾಗುವದು. ಈ ಗೋಸಾವಿಯು ತನ್ನ ಗುರುಗಳ ಮಹಾಮಹಿಮೆಯನ್ನು ವರ್ಣಿಸುವಲ್ಲಿ ಡಾಂಭೀಕತನವು ಎಷ್ಟಿರುವದು! ಅಲೌಕಿಕ ಕಾರ್ಯಗಳನ್ನು ಮಾಡಿ ತೋರಿಸುವೆವೆಂದು ಹೇಳುವವರು ಡಾಂಭಿಕರಿರುತ್ತಾರೆಂದು ಸಮರ್ಥರ ಮುಖದಿಂದಲೇ ಕೇಳಿದ್ದೇನೆ. ನೋಡೋಣ, ಈ ಗೋಸಾವಿಯು ಯಾವ ತಂತ್ರವ ಒಡ್ಡಿರುತ್ತಾನೆಂಬುದನ್ನು! ಆದರೆ ಈ ಗೋಸಾವಿಯಾದರೂ ನನ್ನ ಅಹಿತವನ್ನು ಯಾಕೆ ಚಿಂತಿಸಬೇಕು? ಗೋಸಾವಿಯು ದಾಂಭಿಕನಿರಬಹುದು; ಆದರೆ ನನ್ನ ಘಾತವನ್ನು ಮಾಡಲಿಕ್ಕೆ ನಿಂತಿರುವನೆಂದು ಹ್ಯಾಗೆ ಹೇಳಬೇಕು? ನನ್ನಿಂದ ಈತನ ಅಹಿತವೇನು ಆಗಿರಬಹುದು? ಈಗಲೇ ಯಾವದನ್ನೂ ನಿರ್ಧರಿಸದೆ, ನಾವು ಜಾಗರೂಕರಾಗಿದ್ದರಾಯಿತು.

೮ನೆಯ ಪ್ರಕರಣ

ಹೈಮವತಿಯ ಸಾಹಸ

ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ಖಂಡೇರಾಯನು ಮಹಾರಾಜರ ಮಾತನ್ನು ಕಿವಿಯ ಮೇಲೆ ಹಾಕಿಕೊಳ್ಳದೆ, ಅಥವಾ ಅವರ ಕಟ್ಟಕಡೆಯ ಅಪ್ಪಣೆಯ ಹಾದಿಯನ್ನು ನೋಡದೆ, ಕುದುರೆಯನ್ನು ಓಡಿಸುತ್ತ ಹೊರಟವನು, ನೆಟ್ಟಗೆ ಬಾಲಗೋಸಾವಿಯ ಆಶ್ರಮಕ್ಕೆ ಬಂದನು. ಆಗ ಮೂರು ಸಂಜೆಯ ಸಮಯವಾಗಿತ್ತು. ಬಾಲಗೋಸಾವಿಯು ಆ ಸ್ತ್ರೀಯ ಕಡೆ

ಯಿಂದ, ತನ್ನ ಮೂರು ಮಾತುಗಳನ್ನು ನಡೆಸುವ ಬಗ್ಗೆ ಅದೇ ಪ್ರತಿಜ್ಞೆ ಮಾಡಿಸಿಕೊಂಡು, ಸ್ವಲ್ಪ ಸಮಾಧಾನದಿಂದ ಕುಳಿತುಕೊಂಡಿದ್ದನು. ಆ ಸ್ತ್ರೀಯೂ ಬಾಲಗೋಸಾವಿಯ ಬಳಿಯಲ್ಲಿಯೇ ಕುಳಿತುಕೊಂಡಿದ್ದಳು. ಅಷ್ಟರಲ್ಲಿ ಖಂಡೇರಾಯನು—"ಕೆಲಸವಾಯಿತು, ಕೆಲಸವಾಯಿತು ತಂ...." ಎಂದು ಒದರುತ್ತ ಬಾಲಗೋಸಾವಿಯ ಬಳಿಗೆ ಬಂದನು; ಆದರೆ ಬಾಲ ಗೋಸಾವಿಯ ಬಳಿಯಲ್ಲಿ ಯಾವಳೋ ಒಬ್ಬ ಹೊಸ ಬೈರಾಗಿಣಿಯು ಕುಳಿತುಕೊಂಡದ್ದನ್ನು ನೋಡಿ, ಆತನು ಬೆದರಿ ಬಿದ್ದು ಅಷ್ಟಕ್ಕೇ ಸುಮ್ಮ ನಾದನು. ಈ ಹೊಸಬಳಾದ ಸ್ತ್ರೀಯ ಸಮಕ್ಷ ತಾನು ಮಾತಾಡಬಹುದೇ? ಎಂದು ಆತನು ಶಂಕಿಸುತ್ತಿರಲು, ಬಾಲಗೋಸಾವಿಯು—"ಖಂಡೇರಾವ, ಹೇಳು–ಹೇಳು. ಶಂಕಿಸಬೇಡ; ಇಲ್ಲಿ ಯಾರೂ ಹೊರಗಿನವರಿಲ್ಲ. ಈ ಸ್ತ್ರೀಯು ನನ್ನ ಶಿಷ್ಯಳಿರುವಳು, ಪರಕೀಯಳಲ್ಲ. "ಕೆಲಸವಾಯಿತು, ಕೆಲಸವಾಯಿತು" ಎಂದು ಹೇಳಿದೆಯಲ್ಲ, ಯಾವ ಕೆಲಸವಾಯಿತು? ನಮ್ಮ ಕೆಲಸವಾಯಿತೆಂದು ನೀನು ಹೇಳುತ್ತಿದ್ದರೆ, ನಿನ್ನ ಬಾಯಲ್ಲಿ ಸಕ್ಕರೆ ಯನ್ನು ಹಾಕತಕ್ಕದ್ದು. ಹೇಳು, ನನ್ನ ಮುಂದೆ ಏನು ಹೇಳಲಿಕ್ಕೆ ಬಂದಿ ರುತ್ತೀ ತಟ್ಟನೆ ಹೇಳು. ಕಕ್ಕಂದಿರು ಎಲ್ಲಿರುವರು? ಅವರು ಏನು ಮಾಡಿದರು? ಹೇಳು ಹೇಳು, ಸುಮ್ಮನಿರಬೇಡ" ಎಂದು ಆತುರದಿಂದ ಕೇಳಲು, ಖಂಡೇರಾಯನು ನಿಶ್ಶಂಕೆಯಿಂದ—"ಕಕ್ಕಂದಿರು ಪ್ರತಾಪ ಗಡಕ್ಕೆ ಬರುತ್ತಿರಲು, ಹಾದಿಯಲ್ಲಿ ಅವರಿಗೂ ಶಿವಾಜಿಗೂ ಭೆಟ್ಟಿಯಾಯಿತು. ಕಕ್ಕಂದಿರು ಯುಕ್ತಿಪ್ರಯುಕ್ತಿಯಿಂದ ಶಿವಾಜಿಯನ್ನು ಒಂದೆರಡುದಿನ ತರುಬ ಹಾಕಿ ಇಲ್ಲಿಗೆ ಕರಕೊಂಡು ಬರುವರು. ಅಷ್ಟರಲ್ಲಿ ನೀನು ಇಲ್ಲಿಯ ಎಲ್ಲ ಸಿದ್ಧತೆಯನ್ನು ಮಾಡಿಡತಕ್ಕದ್ದು. ಶಿವಾಜಿಯ ಅತ್ಯಂತ ವಿಶ್ವಾಸದ ಒಬ್ಬ ಮನುಷ್ಯನು ಇಲ್ಲದ ಹಾಗಾದ್ದರಿಂದ, ಆತನನ್ನು ಹುಡುಕಲಿಕ್ಕೆ ಶಿವಾಜಿಯು ಬಂದಿರುವನು; ಆ ಮನುಷ್ಯನು ಹುಲಿಯ ಬಾಯಿಗೆ ಬಿದ್ದ ನೆಂದು ನಾನು ಸುಳ್ಳೇ ಹೇಳಿದ್ದು ಶಿವಾಜಿಗೆ ನಂಬಿಗೆಯಾಗಿರುವದಿಲ್ಲ. ಆದಷ್ಟು ತ್ವರೆಯಿಂದ ಆತನು ನಿನ್ನ ದರ್ಶನಕ್ಕಾಗಿ ಇಲ್ಲಿಗೆ ಬರುವನು. ಕಕ್ಕಂದಿರು ನಿನ್ನ ಮಹಿಮೆಯನ್ನು ಬಹಳವಾಗಿ ವರ್ಣಿಸಿ, ಶಿವಾಜಿಯ ಮನಸ್ಸಿನಲ್ಲಿ ಒಳಿತಾಗಿ ಭಕ್ತಿಯನ್ನು ಹುಟ್ಟಿಸಿರುತ್ತಾರೆ. ನೀನು ಕ್ಷಣ

ವಾದರೂ ವಿಲಂಬಮಾಡದೆ, ಮಾಡತಕ್ಕ ಸಿದ್ಧತೆಯನ್ನು ಮಾಡಿಡತಕ್ಕದ್ದು. ಆ ದುಷ್ಟ ಶಿವಾಜಿಯು ಬಂದ ಕೂಡಲೆ ಅವನ ಕಥೆ ಮುಗಿದು ಹೋಗಬೇಕು ನೋಡು!

ಈ ಮೇರೆಗೆ ನುಡಿಯಲು, ಬಾಲಗೋಸಾವಿಯ ಮನಸ್ಸಿಗೆ ಏನು ಹೊಳೆಯಿತೋ ಏನೋ, ಆತನು ಖಂಡೇರಾಯನನ್ನು ಒತ್ತಟ್ಟಿಗೆ ಕರಕೊಂಡು ಹೋದನು. ಅವರಿಬ್ಬರು ಬಹಳಹೊತ್ತಿನವರೆಗೆ ಕಿವಿಮಾತು ಆಡಿದರು. ಇತ್ತ ಆ ಸ್ತ್ರೀಯು ಸುಮ್ಮನೆ ಕುಳಿತುಕೊಂಡಿದ್ದಳು. ಮಹಾರಾಜರ ಮೇಲೆ ಆಕೆಯ ಭಕ್ತಿಯು ಬಹಳ. ಅವರು ಇಲ್ಲಿಗೆ ಬರುವರೆಂಬ ಸುದ್ದಿಯನ್ನು ಕೇಳಿ, ಆಕೆಗೆ ಬಹಳ ಸಂತೋಷವಾಯಿತು; ಆದರೆ ಮಹಾರಾಜರನ್ನು ಒಂಟಿ ಹೆಸರಿನಿಂದ ಕರೆದು, ಅವರ ವಿಷಯದ ತಿರಸ್ಕಾರವ ಪ್ರಕಟಿಸುವದನ್ನೂ, "ಅವರ ಕಥೆ ಮುಗಿದು ಹೋಗಬೇಕೆಂ"ದು ಖಂಡೇರಾಯನು ನುಡಿದದ್ದನ್ನೂ ಕೇಳಿ ಆಕೆಗೆ ಬಹಳ ಆಶ್ಚರ್ಯವಾಯಿತು. ಮಹಾರಾಜರನ್ನು ತಿರಸ್ಕರಿಸುವ ಇವರು ಯಾರು ಇರಬಹುದೆಂದು ಆಕೆಯು ಆಲೋಚಿಸತೊಡಗಿದಳು. ಮಹಾರಾಜರ ಉತ್ಕರ್ಷವನ್ನು ಸಹಿಸದ ಈ ದುಷ್ಟರ ಬಳಿಯಲ್ಲಿ ನಾನು ನಿಂತುಕೊಂಡದ್ದು ನೆಟ್ಟಗಾಗಲಿಲ್ಲೆಂದು ಆಕೆಗೆ ಪಶ್ಚಾತ್ತಾಪವಾಯಿತು; ಆದರೆ ಸುಮ್ಮನಿದ್ದು ಆಗುವದನ್ನೆಲ್ಲ ನೋಡುವದೇ ಶ್ರೇಯಸ್ಕರವೆಂದು ತಿಳಿದು ಆಕೆಯು ಒಂದು ತುಟಿ ಎರಡು ಮಾಡದೆ, ಮೂಢಳಂತೆ ಎಲ್ಲವನ್ನು ನೋಡುತ್ತ ಕುಳಿತುಕೊಂಡಳು. ಬಾಲಗೋಸಾವಿಯೂ ಖಂಡೇರಾಯನೂ ಬಹಳ ಹೊತ್ತು ಏಕಾಂತವಾಡಿದ ಬಳಿಕ ಅವರಿಬ್ಬರು ಗುಹೆಯೊಳಗೆ ಹೋದರು. ಕೆಲವು ಹೊತ್ತಿನ ಮೇಲೆ ಹೊರಗೆ ಬಂದರು, ಮತ್ತೆ ಗುಹೆಯೊಳಗೆ ಹೋದರು. ಈವರೆಗೂ ಆ ಸ್ತ್ರೀಯ ಲಕ್ಷವು ಗುಹೆಯ ಕಡೆಗೆ ಹೋಗಿದ್ದಿಲ್ಲ. ಈ ಎಲ್ಲ ವಿಲಕ್ಷಣ ಪ್ರಕಾರವನ್ನು ನೋಡಿ ಆ ಹೊಸ ಬೈರಾಗಿಣಿಗೆ ದಿಗಿಲು ಬಿದ್ದಿತು. ಇವರು ಮಹಾರಾಜರ ಜೀವಕ್ಕೆ ಅಪಾಯವನ್ನುಂಟು ಮಾಡಲು ಹೆಣಗುತ್ತಿರುವಂತೆ ಆಕೆಗೆ ತೋರಿತು. ಈ ಪ್ರಸಂಗದಲ್ಲಿ ಮಹಾರಾಜರಿಗೆ ತನ್ನಿಂದೇನಾದರೂ ಸಹಾಯವಾದರೆ ತನ್ನ ಜನ್ಮದ ಸಾರ್ಥಕತೆಯಾಗುವದೆಂದು ಆಕೆಯು ಭಾವಿಸಿದಳು. "ಮಹಾರಾಜರ ಸಂಗಡ ಇವರ ವಿರೋಧವೆ? ಇವರು

ಎಂಥ ದುಷ್ಟರು ಎಂಥ ಧರ್ಮದ್ರೋಹಿಗಳು! ಇಂಥ ಧರ್ಮದ್ರೋಹಿಗಳೊಡನೆ ಮಾಡಿದ ನನ್ನ ಪ್ರತಿಜ್ಞೆಗಳು ಪಾಲಿಸತಕ್ಕವೆ? ಲೋಕಕಲ್ಯಾಣೇಚ್ಛೆಯಿಂದ ಹಗಲಿರುಳು ದೇಹವನ್ನು ಸವಿಸುತ್ತಿರುವ, ಮತ್ತು ಶಿವಾವತಾರವೆನಿಸುವ ಮಹಾರಾಜರ ಸೇವೆಗಿಂತ ಹೆಚ್ಚಿನ ಕೆಲಸವಾವದಿರುವದು? ನನ್ನ ಪತಿಯು ಮಹಾರಾಜರ ಸೇವೆಗಾಗಿ ಮನೆಮಾರುಗಳನ್ನು ಬಿಟ್ಟು, ಹಿರಿಯರ ಮಾತನ್ನು ಮೀರಿ, ಬಾದಶಹನ ಕ್ಷೋಭವನ್ನು ಧಿಕ್ಕರಿಸಿ ವಿಜಾಪುರದಿಂದ ಪ್ರತಾಪಗಡಕ್ಕೆ ಹೊರಟಿದ್ದನು; ಅವರನ್ನನುಸರಿಸಿ ನಾನೂ ಹೊರಟಿದ್ದೆನು; ಆದರೆ ದುರ್ದೈವದಿಂದ ನನ್ನ ಪತಿಯು ಅವಸ್ಥೆಯನ್ನು ಪಠಾಣರು ಏನು ಮಾಡಿದರೆಂಬುದು ನನಗೆ ತಿಳಿಯದಾಗಿದೆ; ನಾನು ಇಂಥ ದುಷ್ಟರ ಬಲೆಯಲ್ಲಿ ಸಿಕ್ಕು ಬಿದ್ದುಕೊಂಡೆನು; ಆದರೂ ಚಿಂತೆಯಿಲ್ಲ. ಈ ಸ್ಥಿತಿಯಲ್ಲಿಯೇ ನಾನು ಮಹಾರಾಜರ ಹಿತವನ್ನು ಸಾಧಿಸಲು ಹೆಣಗುವೆನು. ಇನ್ನು ನನ್ನದೇ ಸಾಗಬೇಕಾಗಿದೆ? ಮಹಾರಾಜರ ಸೇವೆಯಲ್ಲಿ ನನ್ನ ದೇಹಪಾತವಾದರೆ ಧನ್ಯಳಾದೇನಲ್ಲ! ಇನ್ನು ಈ ಕೆಟ್ಟ ದೇಹವನ್ನು ಇಟ್ಟು ಮಾಡುವದಾದರೂ ಏನು? ಈ ದುಷ್ಟರೊಡನೆ ನಾನು ಅನುಕೂಲಳಾಗಿ ನಡೆದು, ಇವರಿಗೆ ಅತ್ಯಂತವಿಶ್ವಾಸವನ್ನು ತೋರಿಸಿ, ಇವರ ಹೊಟ್ಟೆಯಲ್ಲಿ ಹೊಳ್ಕು ಬೆನ್ನಲ್ಲಿ ಬಿರಿದು ನಿಜವಾದ ಸಂಗತಿಯನ್ನು ತಿಳಿದುಕೊಳ್ಳುವೆನು. ಅಂಥ ಪ್ರಸಂಗವೊದಗಿದರೆ, ಮಹಾರಾಜರ ಮೇಲೆ ನನ್ನ ದೇಹವನ್ನು ಈಡಾಡಿ ಅವರ ಸಂಕಟವನ್ನು ನಿವಾರಿಸುವೆನು. ಅದು ಆಗದಿದ್ದರೆ ಮಹಾರಾಜರ ಕಾರ್ಯಸಾಧನದಲ್ಲಿ ನನ್ನ ದೇಹವನ್ನಾದರೂ ಅರ್ಪಿಸುವೆನು. ಬಹಳ ಹೇಳುವದರಿಂದೇನು? ಈ ವಿಶ್ವಾಸಘಾತಕಿಗಳೊಡನೆ, ಸೇರಿಗೆ ಸವ್ವಾಸೇರಾಗಿ ವರ್ತಿಸಿ, ಮಹಾರಾಜರ ಕಾರ್ಯವನ್ನು ಸಾಧಿಸಿದರೇ ನಾನು ಜಾಧವರಾಯನ ಹೆಂಡತಿಯು!"

ಈ ಮೇರೆಗೆ ಆ ಸ್ತ್ರೀಯು ವಿಚಾರಮಾಡುತ್ತ, ತನ್ನ ಮನಸ್ಸಿನಲ್ಲಿ ನಿರ್ಧರಿಸಿಕೊಳ್ಳುತ್ತಿರಲು, ಬಾಲಗೋಸಾವಿಯು ಖಂಡೇರಾಯನನ್ನು ಕಳಿಸಿ ಗುಡಿಸಿಲಿಗೆ ಬಂದನು. ಆಗ ಆ ಸ್ತ್ರೀಯು ಗೋಸಾವಿಯನ್ನು ಕುರಿತು—"ಮಹಾರಾಜ, ನಾನು ತಮ್ಮಿಂದ ಉಪದೇಶವನ್ನು ಪಡೆಯಬೇಕೆಂದು ಮಾಡಿದ್ದೇನೆ; ಆದ್ದರಿಂದ ತಮ್ಮ ಸೇವೆಯನ್ನು ಮಾಡಿಕೊಂಡು

ತಾವು ಹೇಳಿದಹಾಗೆ ಕೇಳಿಕೊಂಡು ಇರುವೆನು. ನನ್ನ ವಿಷಯವಾಗಿ ತಾವು ಅವಿಶ್ವಾಸಪಡಬಾರದು. ಶಿವಾಜಿಯ ವಿಷಯವಾಗಿ ತಾವು ತಿರಸ್ಕಾರಪಡುವದನ್ನು ನೋಡಿ ನನಗೆ ಬಹಳ ಸಮಾಧಾನವಾಗಿರುತ್ತದೆ. ನನ್ನ ಸಂಸಾರ ಗೇಡು ಆಗಲಿಕ್ಕೆ ಶಿವಾಜಿಯೇ ಕಾರಣನು. ಆತನ ಯೋಗದಿಂದ ಎಷ್ಟೋ ಜನ ತರುಣಿಯರು ಹೀಗೆಯೇ ಸಂಸಾರಕ್ಕೆ ಎರವಾಗಿದ್ದಾರೆ. ವಿಜಾಪುರದ ದರ್ಬಾರದಲ್ಲಿ ಜಾಧವ ಮನೆತನದ ಸರದಾರರು ಸುಪ್ರಸಿದ್ಧರು. ಅವರು ಬಾದಶಹನ ಏಕನಿಷ್ಠಸೇವಕರು; ಆದರೆ ನನ್ನಪತಿಯು ಮನೆಯಲ್ಲಿ ಹಿರಿಯರ ಮಾತನ್ನು ಕೇಳದೇ, ಬಾದಶಹನನ್ನು ಲೆಕ್ಕಿಸದೆ ಶಿವಾಜಿಯನ್ನು ಕೂಡಿಕೊಳ್ಳ ಲಿಕ್ಕೆ ಬಂದು, ನನ್ನನ್ನು ಈ ಗತಿಗೆ ತಂದರು. ಈಗ ನನ್ನ ಹೊಟ್ಟೆಯೊಳಗಿನ ಮಾತನ್ನು ಹೇಳುತ್ತೇನೆ. ಒಟ್ಟಿಗೆ, ಶಿವಾಜಿಯು ಬಂದು ಮುರಿಯದಿದ್ದರೆ ನಮ್ಮಂಥ ತರುಣಿಯರ ಪರಿಣಾಮವು ಆಗದು; ಮತ್ತು ದೇಶಕ್ಕೆ ಕ್ಷೇಮ ವಾಗದು. ಈ ಮಾತನ್ನು ಆಡುವಾಗ ಸ್ವಲ್ಪ ಹಿಂದೆಮುಂದೆ ನೋಡಬೇಕಾ ಗುತ್ತದೆ; ಯಾಕಂದರೆ, ಶಿವಾಜಿಯ ಮೇಲೆ ಮರಾಟರ ಭಕ್ತಿಯು ದಿನ ದಿನಕ್ಕೆ ಹೆಚ್ಚುತ್ತ ನಡೆದದೆ. ಶಿವಾಜಿಯ ವಿಷಯವಾಗಿ ನಿಮ್ಮ ಮಾತಿನಲ್ಲಿ ತಿರಸ್ಕಾರವು ತೋರಿದ್ದರಿಂದ, ನಿಮ್ಮ ಮುಂದೆ ಈ ಮಾತನ್ನು ಆಡಿದ್ದೇನೆ. ಶಿವಾಜಿಯು ಎಂಥ ಮೋಸಗಾರನೆಂಬುದು ಚಂದ್ರರಾವ ಮೋರೆಯ ಪ್ರಕರಣದಲ್ಲಿ ಜಗತ್ತಿಗೆ ಗೊತ್ತಾಗಿದೆ. ಚಂದ್ರರಾಯನಂಥ ಸ್ವಾಮಿನಿಷ್ಠನೂ, ಶೂರನೂ, ತೇಜಸ್ವಿಯೂ ಆದ ಮರಾಠಾ ಸರದಾರನು ಮತ್ತೊಬ್ಬನಿಲ್ಲ. ಅಂಥವನ ಖೂನನ್ನು ಶಿವಾಜಿಯು ಅನ್ಯಾಯದಿಂದ ಮಾಡಿಸಿದನೆಂದ ಬಳಿಕ, ಶಿವಾಜಿಯ ನೀಚತನವನ್ನೇನು ವರ್ಣಿಸಬೇಕು! ಚಂದ್ರರಾಯು ನನ್ನು ಹಣ್ಣಿಗೆ ತರಬೇಕಾಗಿದ್ದರೆ, ಶಿವಾಜಿಯು ಅವನ ಎದುರಿಗೆ ನಿಂತು ಯುದ್ಧಮಾಡಬೇಕಾಗಿತ್ತು. ಮಹಾರಾಜ, ಶಿವಾಜಿಯ ಇಂಥ ಹಲವು ದೋಷಗಳನ್ನು ನಾನು ಬಲ್ಲೆನು; ಆದರೆ ಅವನ್ನು ತಮ್ಮ ಮುಂದೆ ಹೇಳು ವದಾದರೂ ಉಚಿತವೋ ಉಚಿತವಲ್ಲವೋ ಎಂದು ಸುಮ್ಮನಿರಬೇಕಾಗಿದೆ.

ಹೀಗೆ ತನ್ನ ಶಿಷ್ಯಳು ಶಿವಾಜಿಗೆ ದೋಷವಿಡುವದನ್ನು ನೋಡಿ ಬಾಲ ಗೋಸಾವಿಗೆ ಆಶ್ಚರ್ಯವಾಯಿತು. ಈಕೆಯ ಮಾತಿನಲ್ಲಿ ಮೋಸವಿರ ಲಿಕ್ಕಿಲ್ಲವಷ್ಟೆ, ಎಂದು ಆತನು ಒಮ್ಮೆ ಶಂಕಿಸಿದನು; ಆದರೆ ಆ ಶಂಕೆಯು

ಬಹಳಹೊತ್ತು ಅವನ ಮನಸ್ಸಿನಲ್ಲಿ ಉಳಿಯಲಿಲ್ಲ; ಯಾಕಂದರೆ, ಶಿವಾಜಿಯ ಸೇಡನ್ನು ತೀರಿಸಿಕೊಳ್ಳಲಿಕ್ಕೆ ತುಂಬಾ ಆತುರಪಡುತ್ತಿದ್ದ ಅವನಿಗೆ, ಶಿವಾಜಿಯ ನಿಂದೆಯು ಇವಿಷ್ಟೇ ಮಾತುಗಳಿಂದ ಸಮಾಧಾನವಾಯಿತು; ಮತ್ತು ತನ್ನ ಶಿಷ್ಯಳ ಮೇಲಿನ ಸಿಟ್ಟು ಕಡಿಮೆಯಾಗಿ ಅವನ ವಿಶ್ವಾಸವು ಹೆಚ್ಚಿತು. ಅವನು ಆ ಸ್ತ್ರೀಯನ್ನು ಕುರಿತು—

ಬಾಲಗೋಸಾವಿ—ಶಿಷ್ಯೋತ್ತಮಳೇ, ನಿನ್ನ ಮಾತನ್ನು ಕೇಳಿ ನನಗೆ ಬಹಳ ಸಮಾಧಾನವಾಯಿತು. ನೀನು ಶಿವಾಜಿಯ ನಿಜವಾದ ಗುಣಗಳನ್ನು ವರ್ಣಿಸಿದೆ. ನಮ್ಮ ಮರುಳು ಜನರು ಶಿವಾಜಿಯೆಂದರೆ ಹುಚ್ಚೆದ್ದು ಹರಿಯುವರು; ಅವನು ಅವತಾರಿಕನಂತೆ, ಧರ್ಮೋದ್ಧಾರಕನಂತೆ, ಸ್ವರಾಜ್ಯಸ್ಥಾಪಕನಂತೆ! ನೀನು ಹೇಳಿದಂತೆ ಚಂದ್ರರಾವ ಮೋರೆಯ ಮನೆತನವನ್ನು ಆತನು ಮಣ್ಣುಗೂಡಿಸಿ ಬಿಟ್ಟನು. ಚಂದ್ರರಾಯನ ಮನೆತನದವರಾರಾದರೂ ಇದ್ದರೆ ಅವರು ಶೋಕಸಂತಪ್ತರಾಗಿರಲಿಕ್ಕಿಲ್ಲವೆ?

ಸ್ತ್ರೀಯು—ಬರಿಯ ಶೋಕಸಂತಪ್ತರಾಗುವದೇ ಏಕೆ? ಜೀವದ ಹಂಗುದೊರೆದು ಅವರು ಶಿವಾಜಿಯ ಸೇಡು ತೀರಿಸಿಕೊಳ್ಳಲಿಕ್ಕೆ ಯತ್ನಿಸತಕ್ಕದ್ದು. ನನ್ನಂಥ ಪರಕೀಯಳಿಗೇ ಚಂದ್ರರಾಯನ ವೃತ್ತಾಂತದಿಂದ ಸಂತಾಪವಾಗುತ್ತದೆಂದಬಳಿಕ, ಅವರಿಗೆ ಎಷ್ಟು ಸಂತಾಪವಾಗುತ್ತಿರಬಹುದು? "ಮರುಳು ಕಂಡು ಮರುಳು ಕೆತೇ" ಅನ್ನುವಂತೆ ಒಬ್ಬರನ್ನು ಕಂಡು ಒಬ್ಬರು ಅಂಧಶ್ರದ್ಧೆಯಿಂದ ಶಿವಾಜಿಯ ಪ್ರಸ್ಥವನ್ನು ಬೆಳಿಸಸೆ, ವಿಚಾರವಂತರು ಅವನನ್ನು ಬಗ್ಗುಬಡಿಯುವದು ಅವಶ್ಯವೆಂದು ನಾನಂತು ತಿಳಿಯುತ್ತೇನೆ.

ಬಾಲಗೋಸಾವಿ—ಸರಿ ಸರಿ! ನಿನ್ನ ತಿಳುವಳಿಕೆಯು ನನ್ನ ಮತದಿಂದ ನ್ಯಾಯವಾದದ್ದೇ ಸರಿ; ಆದರೆ ಶಿವಾಜಿಯ ಕೇಡು ಬಗೆಯುವವರಿಗೆ ನಿನ್ನಿಂದೇನು ಸಹಾಯವಾದೀತು?

ಸ್ತ್ರೀಯು—ಬೇಕಾದ ಸಹಾಯವಾದೀತು. ಈ ಕಾರ್ಯದಲ್ಲಿ ಮುಂದಾಳುಗಳಾದವರಂತು ಮುಂದಕ್ಕೆ ಬರಲಿ! ಅವರು ಹೇಳಿದ ಸಹಾಯವನ್ನು ನಾನು ಮಾಡುವೆನು.

ಹೀಗೆ ಆ ಸ್ತ್ರೀಯು ಮಾತಾಡಿದ್ದನ್ನು ಕೇಳಿ ಬಾಲಗೋಸಾವಿಯು

ಆಶ್ಚರ್ಯಪಟ್ಟನು. ಇವಳನ್ನು ತನ್ನ ಕಾರ್ಯದಲ್ಲಿ ಸಹಾಯಕಳನ್ನಾಗಿ ಮಾಡಿಕೊಳ್ಳಬಹುದೆ? ಈಕೆಯಲ್ಲಿ ಮೋಸವಿರಲಿಕ್ಕಿಲ್ಲವೆ? ಯಾರಿಗೆ ಗೊತ್ತು, ನನ್ನ ಹೊಟ್ಟೆಯೊಳಗಿನ ಮಾತನ್ನು ಹೊರಗೆಡವುದಕ್ಕಾಗಿ ಈಕೆಯು ಹೀಗೆ ಮಾತಾಡುತ್ತಿದ್ದರೂ ಆಡುತ್ತಿರಬಹುದು; ಒಳ್ಳೇದು, ಹಾಗೆಯೇ ಆಡಲೊಲ್ಲಳೇಕೆ, ನನ್ನ ಹೊಟ್ಟೆಯೊಳಗಿನ ಮಾತುಗಳನ್ನು ಕೇಳಿ ಈಕೆ ಮಾಡುವದಾದರೂ ಏನು? ಈಕೆಯು ಸಂಪೂರ್ಣವಾಗಿ ನನ್ನ ಕೈಯಲ್ಲಿ ಸಿಕ್ಕು ಹೋಗಿರುತ್ತಾಳೆ. ಇಂಥವಳನ್ನು ಉಪಾಯದಿಂದ ನಮ್ಮ ಕಾರ್ಯಕ್ಕೆ ಅನುಕೂಲಳನ್ನಾಗಿ ಮಾಡಿಕೊಳ್ಳುವದೇ ಜಾಣತನವು. ನಮ್ಮ ತಂದೆಯಲ್ಲಿ ಈಕೆಯ ವಿಶ್ವಾಸವು ಇಷ್ಟು ಇದ್ದ ಬಳಿಕ, ನಾನು ಈಕೆಗೆ ನನ್ನ ನಿಜವಾದ ವೃತ್ತಾಂತವನ್ನು ಯಾಕೆ ಹೇಳಬಾರದು? ಅದ ರಿಂದಲೇ ನಮ್ಮ ಕಾರ್ಯಕ್ಕೆ ಈಕೆಯಿಂಥ ಸಹಾಯವಾಗುವ ಸಂಭವವಿದೆ, ಎಂದು ಯೋಚಿಸಿ ಆ ಸ್ತ್ರೀಯನ್ನು ಕುರಿತು—

ಬಾಲಗೋಸಾವಿ—ಶಿಷ್ಯಳೇ, ನಿನ್ನಿಂದ ನನ್ನ ಕಾರ್ಯಕ್ಕೆ ಸಹಾಯ ವಾಗಬೇಕೆಂತಲೇ ದೇವರು ನಮ್ಮಿಬ್ಬರ ಸಮ್ಮೇಲನದ ಯೋಗವನ್ನು ಒದ ಗಿಸಿಕೊಟ್ಟಿರುತ್ತಾನೆ; ಹಾಗಲ್ಲದಿದ್ದರೆ ನಮ್ಮಿಬ್ಬರ ಸಂಬಂಧವಾಗಲಿಕ್ಕೆ ಬೇರೆ ಪ್ರಬಲಕಾರಣವೇನಿರಬೇಕು? ನಿನ್ನ ಮುಂದೆ ನಾನು ಯಾವ ಮಾತನ್ನೂ ಮುಚ್ಚಿ ಇಡುವದಿಲ್ಲ. ನಾನು ಚಂದ್ರರಾವಮೋರೆಯ ಮಗಳು. ನನ್ನ ಹೆಸರು ತಾರೆಯು. ನನ್ನ ತಂದೆಯನ್ನು ಶಿವಾಜಿಯು ಮೋಸದಿಂದ ಕೊಲ್ಲಿಸಿದ್ದರಿಂದ, ಅದರ ಸೇಡು ತೀರಿಸಿಕೊಳ್ಳಲಿಕ್ಕೆ ನಾನು ಗೋಸಾವಿಯ ವೇಷವನ್ನು ಧರಿಸಿರು ತ್ತೇನೆ. ನನ್ನ ಕಕ್ಕನೂ, ನಮ್ಮ ತಂದೆಯ ಸೋದರಳಿಯನೂ ನನ್ನ ಕಾರ್ಯಕ್ಕೆ ಸಹಾಯಕರಾಗಿದ್ದಾರೆ. ನನ್ನ ಕಕ್ಕನು ಶಿವಾಜಿಯನ್ನು ಕರತರುವದಕ್ಕಾಗಿ ಹೋಗಿದ್ದಾನೆ. ಆಗಲೇ ಬಂದವನು ನನ್ನ ತಂದೆಯ ಸೋದರಳಿಯನಾದ ಖಂಡೇರಾಯನು. ಇವರಲ್ಲದೆ, ನಮ್ಮ ಇಬ್ಬರು ಅಣ್ಣಂದಿರನ್ನು ಶಿವಾಜಿಯು ಪುಣೆಯಲ್ಲಿ ಪ್ರತಿಬಂಧದಲ್ಲಿರಿಸಿದ್ದಾನೆ. ನನ್ನ ತಂದೆಯ ಮರಣದ ಸೇಡು ತೀರಿ ಸಿಕೊಳ್ಳುವದೊಂದೇ ನನ್ನ ಕೆಲಸವಾಗಿರುತ್ತದೆ. ಅದಕ್ಕಾಗಿಯೇ ನಾನು ಇಲ್ಲಿಯವರೆಗೆ ಜೀವದಿಂದ ಇದ್ದೇನೆ. ಇಲ್ಲದಿದ್ದರೆ ನನ್ನ ಮೋಹದ ತಂದೆಯನ್ನು ಕಳಕೊಂಡು ನಾನು ಒಂದು ಅರಗಳಿಗೆ ಜೀವಿಸುತ್ತಿದ್ದಿಲ್ಲ. ಶಿಷ್ಯಳೇ, ಇನ್ನು

ನೀನು ನನ್ನನ್ನು ಗುರುವೆಂದು ತಿಳಿಯದೆ, ಸಖಿಯೆಂದು ತಿಳಿ. ಸಖೀ ನಿನ್ನ ಹೆಸರೇನು ಹೇಳು. ನಿನ್ನ ವೃತ್ತಾಂವನ್ನರಿಯದೇ ನಾನು ಮನಸ್ಸಿಗೆ ಬಂದಂತೆ ನಿನಗೆ ಮಾತಾಡಿವೆನು. ನಿನ್ನ ಕಡೆಯಿಂದ ಸಿಕ್ಕಹಾಗೆ ಪ್ರತಿಜ್ಞೆ ಮಾಡಿಸಿಕೊಂಡೆನು. ಅದಕ್ಕಾಗಿ ನನ್ನನ್ನು ಕ್ಷಮಿಸು. ನಡೆ, ನಾವು ಶಿವಾಜಿಯ ಪ್ರಾಣಹರಣಕ್ಕಾಗಿ ಮಾಡಿದ ಸಾಹಸದ ಕಾರ್ಯವನ್ನು ನಿನಗೆ ತೋರಿಸುವೆನು.

ತಾರಾಬಾಯಿಯು ಈ ಮಾತುಗಳನ್ನು ಕೇಳಿ ಆ ಸ್ತ್ರೀಯು ಬೆದರಿದ್ದಳು. ಮಹಾರಾಜರ ಪ್ರಾಣಹರಣ ಮಾಡುವದಕ್ಕಾಗಿ ಈ ನೀಚರು ಎಂಥ ಸಾಹಸದ ಕಾರ್ಯವನ್ನು ಮಾಡಿರುವರೋ, ಎಂದು ಆಕೆಯು ಮನಸ್ಸಿನಲ್ಲಿ ಬಹಳವಾಗಿ ಚಿಂತಿಸಿದಳು. ಈ ಘಾತಕರ ಗುಪ್ತಾಲೋಚನೆಯು ಹೊರಬಿದ್ದದ್ದು ಒಂದು ಪಕ್ಷದಲ್ಲಿ ನೆಟ್ಟಗಾಯಿತೆಂದು ಆಕೆಯು ತಿಳಿದಳು; ಯಾಕಂದರೆ, ಅದರ ಪ್ರತಿಕಾರೋಪಾಯವನ್ನು ಯೋಚಿಸಲಿಕ್ಕೆ ಆಕೆಗೆ ಅವಕಾಶವು ದೊರೆತಂತಾಯಿತು. ಆಕೆಯು ಅತ್ಯಂತ ಕೃತಜ್ಞತಾಭಾವವನ್ನು ನಟಿಸುತ್ತ—"ತಾರಾಬಾಯಿ, ನಿನ್ನಂಥ ಚಿಕ್ಕಹೆಣ್ಣು ಮಗಳು ತಂದೆಯು ಮರಣದ ಸೇಡುತೀರಿಸಿಕೊಳ್ಳುವದಕ್ಕಾಗಿ ಈಪರಿ ಕಷ್ಟಪಡುವದನ್ನು ನೋಡಿ ನನಗೆ ಬಹಳ ಸಂತೋಷವಾಗುತ್ತದೆ; ನಿನ್ನ ಕುಲೀನತೆಗೂ, ಕ್ಷಾತ್ರತೇಜಕ್ಕೂ, ಇದು ಪರಮ ಭೂಷಣವು. ನನ್ನ ಮೇಲೆ ವಿಶ್ವಾಸವಿಟ್ಟು, ನಿನ್ನ ಕಾರ್ಯದಲ್ಲಿ ನನ್ನನ್ನು ಸಹಾಯಕಳನ್ನಾಗಿ ಮಾಡಿಕೊಳ್ಳುವದನ್ನು ನೋಡಿನಾನು, ಅತ್ಯಂತ ಕೃತಜ್ಞಳಾಗಿರುವೆನು. ನನ್ನ ಹೆಸರು ಹೈಮವತಿಯು. ನನ್ನನ್ನು ನೀನು ಪ್ರಿಯ ಸಖಿಯೆಂದು ಭಾವಿಸುವದಕ್ಕಿಂತ, ಶಿಷ್ಯಳೆಂದೇ ಭಾವಿಸು; ಯಾಕಂದರೆ, ಸಾಹಸಕಾರ್ಯವನ್ನು ಜರುಗಿಸುವಲ್ಲಿ ನೀನು ನನಗೆ ಗುರುವಾಗಿರುತ್ತೀ, ಎಂದು ನುಡಿದಳು. ಅದನ್ನು ಕೇಳಿ ತಾರಾಬಾಯಿಗೆ ಸಂತೋಷವಾಯಿತು. ಖಂಡೇರಾಯನ ಮುಖಾಂತರವಾಗಿ ತುಳಾಜಿಯ ಕೈಯಿಂದ ಗುಹೆಯಲ್ಲಿ ಮಾಡಿಸತಕ್ಕ ಸಿದ್ಧತೆಯನ್ನು ಆಕೆಯು ಮಾಡಿಸಿದ್ದಳು. ಸಿದ್ಧತೆಯು ಪೂರ್ಣವಾಗಿರುವದೋ ಎಂಬುದನ್ನು ನೋಡುವದಕ್ಕಾಗಿ ಆಕೆಯು ಹೈಮವತಿಯೊಡನೆ ಗುಹೆಯನ್ನು ಪ್ರವೇಶಿಸಿದಳು. ಗುಹೆಯಲ್ಲಿ ಕಗ್ಗತ್ತಲೆಯು ಮುಸುಕಿದ್ದರಿಂದ, ತಾರಾಬಾಯಿಯು ಕೈಯಲ್ಲಿ ಕಕ್ಕಡವನ್ನು ತಕ್ಕೊಂಡಿ

ದ್ದಳು. ಆ ಭಯಂಕರವಾದ ಗುಹೆಯಲ್ಲಿ ಮದ್ದಿನ ಚೀಲಗಳನ್ನೂ, ಬೇರೆ ಜ್ವಾಲಾಗ್ರಾಹಿ ಪದಾರ್ಥಗಳ ಚೀಲಗಳನ್ನು ವಿಪುಲವಾಗಿ ತುಂಬಿ ಇಟ್ಟಿದ್ದರು. ಅದನ್ನು ನೋಡಿ ಹೈಮವತಿಯ ಮೈಮೇಲಿನ ಕೂದಲುಗಳು ನೆಟ್ಟಗಾದವು. ಈ ಕುತ್ತಿನೊಳಗಿಂದ ಮಹಾರಾಜರು ಹ್ಯಾಗೆ ಪಾರಾದಾರೆಂದು ಆಕೆಯು ಚಿಂತಿಸತೊಡಗಿದಳು. ಅವರಿಬ್ಬರು ಸಖಿಯರು ಗುಹೆಯನ್ನೆಲ್ಲ ತಿರುಗಿ, ನೋಡತಕ್ಕದ್ದನ್ನೆಲ್ಲ ನೋಡಿದರು. ಅದರಿಂದ ತಾರಾಬಾಯಿಗೆ ಸಂತೋಷವೂ, ಹೈಮವತಿಗೆ ದುಃಖವೂ ಆದವು; ಆದರೆ ಹೈಮವತಿಯು ತನ್ನ ಮನಸ್ಸಿನೊಳಗಿನ ದುಃಖವನ್ನು ಹೊರಗೆಡವದೆ ಸಂತೋಷವನ್ನು ಪ್ರಕಟಿಸಿ ತಾರಾಬಾಯಿಯ ವಿಲಕ್ಷಣ ಸಾಹಸಕ್ಕಾಗಿ ಆಕೆಯನ್ನು ಹೊಗಳಿದಳು. ಗುಹೆಯನ್ನು ನೋಡುವದಾದ ಮೇಲೆ ತಾರಾಬಾಯಿಯು ಹೊರಗೆ ಬರುವದಕ್ಕಾಗಿ ಹೊರಟಳು. ಆಕೆಯನ್ನು ಹಿಂಬಾಲಿಸಿ ಹೈಮವತಿಯೂ ಬರುತ್ತಲಿದ್ದಳು. ತಾರಾಬಾಯಿಯು ಕಕ್ಕಡವನ್ನು ಹಿಡಕೊಂಡು ಮೇಲಕ್ಕೆ ಹತ್ತುವದನ್ನು ನೋಡಿ ಹೈಮವತಿಯು—"ಸಖೀ, ಕಕ್ಕಡವನ್ನು ಹಿಡಕೊಂಡು ಮೇಲಕ್ಕೆ ಹೇಗೆ ಹತ್ತುವೆ? ನನ್ನ ಕೈಯಲ್ಲಿ ಅದನ್ನು ತಾ ನೀನು ಮೇಲಕ್ಕೆ ಹತ್ತಿದ ಬಳಿಕ ಕಕ್ಕಡವನ್ನು ನಿನ್ನ ಕೈಯಲ್ಲಿ ಕೊಟ್ಟು ನಾನು ಮೇಲಕ್ಕೆ ಹತ್ತಿ ಬರುವೆನು" ಎಂದು ಹೇಳಿದಳು.

ಹೈಮವತಿಯ ಮಾತಿಗೆ ತಾರಾಬಾಯಿಯು ಒಪ್ಪಿಕೊಂಡು, ಕಕ್ಕಡವನ್ನು ಆಕೆಯ ಕೈಯಲ್ಲಿ ಕೊಟ್ಟು ತಾನು ಮೇಲಕ್ಕೆ ಹತ್ತಿದಳು; ಆದರೆ ಹೈಮವತಿಯು ಕಕ್ಕಡವನ್ನು ತಾರಾಬಾಯಿಯ ಕೈಯಲ್ಲಿ ಕೊಟ್ಟು, ತಾನು ಮೇಲಕ್ಕೆ ಹತ್ತುವದರ ಬದಲು, ಕಕ್ಕಡವನ್ನು ತಕ್ಕೊಂಡು ಗುಹೆಯೊಳಗೆ ನಡೆದಳು. ಅದನ್ನು ನೋಡಿ ತಾರಾಬಾಯಿಯು—"ಸಖೀ, ಹೈಮವತಿ, ತಾ, ಕಕ್ಕಡವನ್ನು. ಇನ್ನು ಬೇಗನೆ ನೀನು ಮೇಲಕ್ಕೆ ಹತ್ತಿ ಬಾ. ಇನ್ನೂ ಮಾಡತಕ್ಕ ಸಿದ್ಧತೆಗಳು ಬಹಳ ಇರುವವು. ನಾಳೆ ಬೆಳಗಿನಲ್ಲಿ ನನ್ನ ವೈರಿಯಾದ ಶಿವಾಜಿಯು ಇಲ್ಲಿಗೆ ಬರುವನು. ಆಗ ನಾನೂ ನೀನೂ ಕೂಡಿಯೇ ಈ ಮದ್ದಿಗೆ ಕೊಳ್ಳಿಯ ಕೊಟ್ಟು, ಆತನನ್ನು ಅಗ್ನಿಗೆ ಆಹುತಿಯಾಗಿ ಕೊಡೋಣ. ಈ ಕಾರ್ಯದಲ್ಲಿ ನಮ್ಮಿಬ್ಬರ ಪ್ರಾಣಹಾನಿಯಾದರೂ ಆಗಲಿ" ಎಂದು ನುಡಿಯಲು, ಹೈಮವತಿಯು ಸಿಟ್ಟಿನಿಂದ—"ದುಷ್ಟೇ,

ನಿನ್ನ ಆ ವೈರಿಯು ಜಗತ್ತಿನ ಹಿತಕರ್ತೃವಾಗಿರುವನು. ಆತನನ್ನು ಬದುಕಿಸುವುದಕ್ಕಾಗಿ ನನ್ನ ನಿನ್ನ ಇಬ್ಬರ ಪ್ರಾಣಗಳೇ ಏಕೆ, ಇನ್ನು ಐನೂರು ಜನರ ಪ್ರಾಣಗಳು ಹೋದರೂ ಚಿಂತೆಯಿಲ್ಲ. ಮಹಾರಾಜರು ಇನ್ನು ಮೂರು ತಾಸುಗಳ ಮೇಲೆ ಬರುವರು; ಆದರೆ ಈಗಲೇ ಕಕ್ಕಡವನ್ನು ಮದ್ದಿಗೆ ಹಚ್ಚಿ, ಈ ಗುಹೆಯನ್ನು ಹಾರಿಸಿ ಬಿಡುವೆನು," ಎಂದು ನುಡಿದಳು. ಅದನ್ನು ಕೇಳಿದ ಕೂಡಲೆ ತಾರೆಯ ಮೋರೆಯು ಕಪ್ಪಿಟ್ಟಿತು. ಆಕೆಯು ಮನಸ್ಸಿನಲ್ಲಿ—"ಇಷ್ಟು ದಿವಸ ಮಾಡಿದ ಪ್ರಯತ್ನವು ಈ ದುಷ್ಟ ಸ್ತ್ರೀಯಿಂದ ವ್ಯರ್ಥವಾಗುವ ಪ್ರಸಂಗವು ಒದಗಿತಲ್ಲ! ಈಕೆಯು ಮೋಸದಿಂದ ನನ್ನನ್ನು ವಂಚಿಸಿದಳು. ಈಗಲೇ ಈಕೆಯನ್ನು ಇಲ್ಲಿ ಹುಗಿಸಲಾ, ಸುಡಿಸಲಾ? ಏನು ಮಾಡಲಿ? ನಮ್ಮವರು ಯಾರೂ ಇಲ್ಲಿ ಇಲ್ಲವಲ್ಲ! ನಾನು ಮೂರ್ಖತನದಿಂದ ಹೊಟ್ಟೆಯೊಳಗಿನ ಮಾತನ್ನೆಲ್ಲ ಈಕೆಗೆ ಹೇಳಿಬಿಟ್ಟೆನು. ಎಂಥ ಅನರ್ಥವಾಯಿತಿದು! ಈಗ ಹ್ಯಾಗೆ ಮಾಡಲಿ, ಏನು ಮಾಡಲಿ, ಎಂದು ಚಡಪಡಿಸುತ್ತ ಸಂತಾಪದಿಂದ ಹೈಮವತಿಯನ್ನು ಕುರಿತು—"ಹೈಮವತೀ, ಹೀಗೆ ವಿಶ್ವಾಸಘಾತವನ್ನು ಮಾಡಬಹುದೆ? ನನ್ನ ತಂದೆಯ ಖೂನು ಮಾಡುವವನ ಸೇಡು ತೀರಿಸಿಕೊಳ್ಳುವದಕ್ಕಾಗಿ ನಾನು ಯತ್ನಿಸುತ್ತಿರಲು, ನನ್ನ ಯತ್ನವನ್ನೆಲ್ಲ ನಿಷ್ಫಲವಾಗ ಮಾಡಿ, ತಿರುಗಿ ನನ್ನ ಪ್ರಾಣಹರಣ ಮಾಡಲು ನೀನು ಯತ್ನಿಸುವೆಯಾ? ಆದರೆ ನಿನ್ನ ಪ್ರಾಣದ ಗತಿಯೇನಾದೀತೆಂಬದನ್ನು ಮೊದಲು ವಿಚಾರಮಾಡು. ಗವಿಯಲ್ಲಿಯ ಮದ್ದಿಗೆ ಕೊಳ್ಳಿಯ ಕೊಡುವದರಿಂದ ಮೊದಲು ನಿನ್ನ ಪ್ರಾಣಹಾನಿಯಾಗಿ, ಆಮೇಲೆ ಹೊರಗಿನವರ ಪ್ರಾಣಹಾನಿಯಾಗುವದು, ಎಂದು ನುಡಿಯಲು, ಹೈಮವತಿಯು—"ತಾರೇ, ದುಷ್ಟ ಸ್ತ್ರೀಯೇ, ಮಹಾರಾಜರಂಥ ಪವಿತ್ರ ಪುರುಷರ ಪ್ರಾಣವನ್ನುಳಿಸುವಾಗ ನನಗೆ ಮೃತ್ಯುವು ಒದಗಿದರೆ, ನಾನು ಧನ್ಯಳಾಗುವೆನು. ಇಡಿಯ ಮಹಾರಾಷ್ಟ್ರವನ್ನು ಶತ್ರುಗಳ ಕಾಟದಿಂದ ಮುಕ್ತಮಾಡುವ ಮಹಾಪುರುಷನ ಜೀವವುಳಿಯುವಾಗ ನನ್ನಂಥ ಕ್ಷುದ್ರಳ ಜೀವವು ಹೋದರೆ ಅನ್ಯಾಯವಾಗುವದೆ? ನೋಡು, ಈ ಕಕ್ಕಡವು ನನ್ನ ಕೈಗೆ ಹತ್ತುವವರೆಗೆ ನಾನು ಸುಮ್ಮನಿದ್ದು, ಆಮೇಲೆ ಇದರಿಂದ ಎಲ್ಲ ಮದ್ದಿನ ಚೀಲಗಳಿಗೆ ಬೆಂಕಿಯನ್ನು ಹಚ್ಚುವೆನು. ನಿನಗೆ ಜೀವವು ಬೇಕಾಗಿದ್ದರೆ ಬೇಗನೆ ಇಲ್ಲಿಂದ

ಹೊರಟುಹೋಗು. ನಿನ್ನಂಥ ದುಷ್ಟ ಸ್ತ್ರೀಯನ್ನು ಕೊಲ್ಲುವ ಇಚ್ಛೆಯು ನನಗಿಲ್ಲ. ಮಹಾರಾಜರ ಪ್ರಾಣವನ್ನು ಉಳಿಸುವದಕ್ಕಾಗಿ ನನ್ನ ಜೀವದ ಬಲಿ ಕೊಡುವೆನು.

ಇದಕ್ಕೆ ಏನು ಉತ್ತರ ಕೊಡಬೇಕೆಂಬುದು ತಾರೆಗೆ ತಿಳಿಯಲೊಲ್ಲದು. "ಈಗ ನಾನು ರಚಿಸಿದ್ದ ವ್ಯೂಹವೆಲ್ಲ ವ್ಯರ್ಥವಾಯಿತು. ಜೀವದ ಹಂಗು ದೊರೆದಿದ್ದ ಈ ಸ್ತ್ರೀಯು, ನುಡಿದಂತೆ ನಡಿಯದೆ ಬಿಡುವದಿಲ್ಲ; ಅದರಿಂದ ನನ್ನ ತಂದೆಯ ಖೂನು ಮಾಡಿಸಿದ ಶಿವಾಜಿಯು ಹಾಗೇ ಉಳಿದು, ನನ್ನ ಪ್ರಾಣವು ಮಾತ್ರ ಹೋಗುವದು. ಇದಕ್ಕೆ ಯುಕ್ತಿ ಏನು? ಆಹಾ! ಇದಕ್ಕೆ ಏನು ಯುಕ್ತಿ ಮಾಡಬೇಕಾದೀತು? ಎಂದು ಯೋಚಿಸುತ್ತಿರಲು, ಹೈಮವತಿಯು—"ತಾರಾಬಾಯಿ, ಯಾಕೆ? ಬಹಳ ಯೋಚನೆ ಮಾಡಹತ್ತಿರುವೆ? ನೋಡು, ಕಕ್ಕಡವು ತೀರ ಸ್ವಲ್ಪ ಉಳಿಯಿತು. ವ್ಯರ್ಥ ಪ್ರಾಣವನ್ನು ಕಳಕೊಳ್ಳಬೇಡ. ಅನ್ಯರ ಪ್ರಾಣಹರಣ ಮಾಡುವ ಕ್ರೂರತನವು ನನಗೆ ಸರ್ವಥಾ ಸೇರುವದಿಲ್ಲ. ಮಹಾರಾಜರು ಸುಸೂತ್ರವಾಗಿ ಈ ಗಂಡಾಂತರದಿಂದ ಪಾರಾಗಿ, ಅವರಿಗೆ ನಿಮ್ಮ ವ್ಯೂಹವು ತಿಳಿದು, ಅವರು ನಿಮ್ಮಿಂದ ತಿರುಗಿ ಇಂಥ ಗಂಡಾಂತರಕ್ಕೆ ಈಡಾಗದಂತೆ ವ್ಯವಸ್ಥೆ ಮಾಡಿಕೊಂಡರೆ ಸಾಕು. ನಿನ್ನ ಜೀವ ಉಳಿಯಬೇಕೆಂದು ನೀನು ಇಚ್ಛಿಸುತ್ತಿದ್ದರೆ ಇನ್ನೊಂದು ಯುಕ್ತಿಯನ್ನು ಹೇಳುತ್ತೇನೆ ಕೇಳು. ನೀನು ಗುಹೆಯೊಳಗೆ ಇಳಿದು ಬಂದು, ನಾನು ಹೇಳಿದಲ್ಲಿ ಸ್ವಸ್ಥವಾಗಿ ಕುಳಿತುಕೋ. ಮಹಾರಾಜರು ಇಲ್ಲಿಗೆ ಬಂದು ಹೋಗುವವರೆಗೆ ನೀನು ಇಲ್ಲಿಂದ ಉಲುಕಲಾಗದು. ಈ ಮದ್ದಿನ ಚೀಲಗಳ ಸನಿಯಕ್ಕೆ ನೀನು ಸುಳಿಯತಕ್ಕದ್ದಲ್ಲ, ಎಂದು ಹೇಳಲು, ತಾರೆಯ ಮನಸ್ಸಿನಲ್ಲಿ ಒಂದು ವಿಚಾರವು ಹೊಳೆದು—"ಹು, ಹಾಗೇ ಆಗಲಿ, ನೀನು ಹೇಳಿದಲ್ಲಿ ಕುಳಿತುಕೊಳ್ಳುವೆನು, ಹೇಳಿದಹಾಗೆ ಕೇಳುವೆನು; ಆದರೆ ಮದ್ದಿಗೆ ಬೆಂಕಿಯನ್ನು ಮಾತ್ರ ಹಚ್ಚಬೇಡ; ವ್ಯರ್ಥ ನನ್ನ ಪ್ರಾಣವನ್ನು ಕಳೆಯಬೇಡ. ಎಂದು ಹೇಳಿ, ಮತ್ತೆ ಗುಹೆಯಲ್ಲಿ ಹಾರಿಕೊಂಡಳು. ಆಗ ಹೈಮವತಿಯು ಕಕ್ಕಡವನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಳು. ಅಷ್ಟರೊಳಗೆ ಗುಹೆಯಲ್ಲಿ ಇಳಿದ ತಾರೆಯು ಒಮ್ಮೆಲೆ ಹೈಮವತಿಗೆ ತೆಕ್ಕೆಬಿದ್ದು, ಕಕ್ಕಡವನ್ನು ಕಸಿದುಕೊಳ್ಳಬೇಕೆಂದು ಗುದುಮುರಿಗೆ ಹಾಕಹತ್ತಿದಳು, ಆದರೆ

ಶಿವಾಜಿಮಹಾರಾಜರ ಮೇಲಿನ ಅತ್ಯುತ್ಕಟ ಭಕ್ತಿಯಿಂದ ಸತ್ವಸಂಪನ್ನೆಯಾಗಿದ್ದ ಹೈಮವತಿಯು, ತಾರೆಗೆ ಅಸುಗೊಳ್ಳದೆ ತನ್ನ ಟೊಂಕಕ್ಕೆ ಸುತ್ತು ಹಾಕಿದ್ದ ಆಕೆಯನ್ನು ದರದರ ಎಳಕೊಂಡು ಮದ್ದಿನ ಚೀಲಗಳ ಕಡೆಗೆ ಹೋಗಿ—"ನೋಡು, ತಾರೇ, ಈ ಕಕ್ಕಡದ ಕಿಡಿಗಳನ್ನು ಈ ಮದ್ದಿನ ಚೀಲಗಳ ಮೇಲೆ ಸುರಿಸುತ್ತ ಹೋಗುವೆನು," ಎಂದು ಹೇಳಿದಳು. ಆಗ ತಾರೆಯು ನಿರುಪಾಯಳಾಗಿ—"ಹೈಮವತೀ, ನನ್ನ ಅಪರಾಧವನ್ನು ಕ್ಷಮಿಸು; ನನ್ನ ಪ್ರಾಣಹರಣ ಮಾಡಬೇಡ; ನೀನು ಹೇಳಿದಲ್ಲಿ ಕುಳಿತುಕೊಳ್ಳುವೆನು; ಹೇಳಿದಹಾಗೆ ಕೇಳುವೆನು" ಎಂದು ಪ್ರಾರ್ಥಿಸಹತ್ತಿದಳು. ಅದಕ್ಕೆ ಹೈಮವತಿಯು ಸಮ್ಮತಿಸದೆ—"ಸರಿ, ದುಷ್ಟೇ, ಹಿಂದಕ್ಕೆ ಸರಿ. ನೀನು ಹೀಗೆ ಹೇಳಿದರೂ. ಹೇಳಿದಂತೆ ಸುಮ್ಮನೆ ನೀನು ಕುಳಿತರೂ ನಿನ್ನ ಅನುಯಾಯಿಗಳು ನನ್ನ ಹಂಗು ಇಲ್ಲದೆ ಮದ್ದಿನ ಚೀಲಗಳಿಗೆ ಬೆಂಕಿ ಹಚ್ಚಿ ಮಹಾರಾಜರ ಪ್ರಾಣವನ್ನು ಹರಣ ಮಾಡದೆ ಬಿಡರು; ಆದ್ದರಿಂದ, ಮಹಾರಾಜರ ಪ್ರಾಣಹಾರಕವಾದ ಈ ಸಾಧನವನ್ನೇ ನಾನು ಇಲ್ಲದಂತೆ ಮಾಡುವೆನು. ಈ ಪ್ರಸಂಗದಲ್ಲಿ ನಮ್ಮಿಬ್ಬರ ಪ್ರಾಣಹರಣವಾದರೆ ಆಗಲಿ; ಮುಖ್ಯವಾಗಿ ಜಗತ್ಕಲ್ಯಾಣಕರ್ತೃಗಳಾದ ಮಹಾರಾಜರ ಪ್ರಾಣವುಳಿದರೆ ಸಾಕು. ವೈದಿಕಧರ್ಮದ್ವೇಷಿಯೂ, ವೈದಿಕಧರ್ಮದ್ವೇಷಿಯಾದ ಬಾದಶಹನ ನೌಕರನೂ ಆದ ನಿಮ್ಮ ತಂದೆಯನ್ನು, ಧರ್ಮಸಂರಕ್ಷಕರಾದ ಮಹಾರಾಜರು ಕೊಂದದ್ದರಲ್ಲಿ ಅನ್ಯಾಯವೇನು? ಧರ್ಮದ್ವೇಷಿಗಳು ದೈತ್ಯರಾದ್ದರಿಂದ, ನಿನ್ನನ್ನು ದೈತ್ಯ ಕುಲೋತ್ಪನ್ನಳೆಂದು ತಿಳಿಯತಕ್ಕದ್ದು. ನೀನು ತಾಟಕಾ, ಶೂರ್ಪನಖೀ ಮೊದಲಾದ ಕ್ರೂರ ದೈತ್ಯ ಸ್ತ್ರೀಯರ ಪಂಗ್ತಿಯಲ್ಲಿ ಸೇರಲು ತಕ್ಕವಳಾಗಿರುತ್ತೀ."

ಹೀಗೆ ನುಡಿದು, ಹೈಮವತಿಯು ಕಕ್ಕಡವನ್ನು ಇನ್ನು ಮದ್ದಿನಚೀಲದಲ್ಲಿ ಇಡತಕ್ಕವಳು; ಅಷ್ಟರಲ್ಲಿ ಒಂದು ಚಮತ್ಕಾರದ ಸಂಗತಿಯು ಒದಗಿತು. ಯಾರೋ ಹೈಮವತಿಯು ಕಕ್ಕಡದ ಕೈಯನ್ನು ಗಟ್ಟಿಯಾಗಿ ಹಿಡಿದು, ಆಕೆಯನ್ನು ಹಿಂದಕ್ಕೆ ಜಗ್ಗಿದರು. ಆಗ ಹೈಮವತಿಯು ಬಹಳವಾಗಿ ಬೆದರಿದಳು. ಆಕೆಯು ತನ್ನಿಂದಾದಷ್ಟು ಕಸುವಿನಿಂದ ಮುಂದಕ್ಕೆ ಹೋಗಿ ಮದ್ದಿಗೆ ಬೆಂಕಿ ಹಚ್ಚಲು ಯತ್ನಿಸಿದಳು; ಆದರೆ ಕೈಯನ್ನು ಹಿಡಿದವರು

ಒಳ್ಳೇ ಬಲಿಷ್ಠರಾದ್ದರಿಂದ ಹೈಮವತಿಯನ್ನು ದರದರ ದೂರ ಎಳಕೊಂಡು ಹೋಗಿ ಕಕ್ಕಡವನ್ನು ಕಸಿದುಕೊಂಡು ನಂದಿಸಿ ಮಾಯವಾದರು. ಇದನ್ನು ನೋಡಿ ಹೈಮವತಿಯು ಆಶ್ಚರ್ಯಪಟ್ಟಳು. ಗುಹೆಯಲ್ಲಿ ತನ್ನ, ಹಾಗು ತಾರೆಯ ಹೊರತು ಬೇರೆಯಾರೂ ಇರಲಿಕ್ಕಿಲ್ಲೆಂದು ಆಕೆಯು ತಿಳಿದಿದ್ದಳು. ಈಗ ನನ್ನನ್ನು ಹಿಡಿದೆಳೆದವರು ಮಹಾರಾಜರ ವಿರೋಧಿಗಳಲ್ಲಿ ಒಬ್ಬನಾಗಿರ ಬಹುದೆಂದು ಆಕೆಯು ತರ್ಕಿಸಿದಳು; ಆದರೆ ಅವರು ತಾರೆಯನ್ನು ಸಮಾಧಾನಪಡಿಸದೆ ಮಾಯವಾದದ್ದರಿಂದ ಹೈಮವತಿಯ ಮನಸ್ಸಿನಲ್ಲಿ ಮತ್ತೆ ಶಂಕೆಯು ಉತ್ಪನ್ನವಾಯಿತು. ತನ್ನ ಕೈಯನ್ನು ಹಿಡಿದವನು ಗಂಡಸೆಂಬದು ಹಿಡಿತದ ರೀತಿಯ ಮೇಲಿಂದ ಆಕೆಗೆ ಸ್ಪಷ್ಟವಾಗಿ ತಿಳಿಯಿತು. ಆಕೆಯು ಸಂತಾಪದಿಂದ—"ಯಾವ ದುಷ್ಟನು ನನ್ನ ಕೈಯನ್ನು ಹಿಡಿದನೋ, ಅವನ ಕೈಗೆ ಹುಳಬೀಳಲಿ. ಒಂದು ಮಹಾಕಾರ್ಯಕ್ಕಾಗಿ ನನ್ನ ಪ್ರಾಣವನ್ನರ್ಪಿಸ ಲಿಕ್ಕೆ ನಾನು ಸಿದ್ಧಳಾಗಿರಲು, ನಡುವೇ ವಿಘ್ನಮಾಡಿದನು," ಎಂದು ನುಡಿ ದಳು; ಆದರೆ ಅದಕ್ಕೆ ಯಾರೂ ಉತ್ತರವನ್ನು ಕೊಡಲಿಲ್ಲ; ಮನುಷ್ಯರ ಸುಳವೂ ಅಲ್ಲಿ ಕಾಣಿಸಲಿಲ್ಲ.

ಈ ಅಕಸ್ಮಿಕ ಪ್ರಸಂಗವನ್ನು ನೋಡಿ ಅತ್ತ ತಾರೆಗೆ ಬಹಳ ಸಂತೋಷ ವಾಯಿತು. ಕಕ್ಕಡವನ್ನು ಕಸಿದುಕೊಂಡವನು, ನಮ್ಮೊಳಗಿನವನೊಬ್ಬ ನಾಗಿರಬಹುದೆಂದು ಆಕೆಯು ತರ್ಕಿಸಿದಳು. ಆಕೆಯು ಮನಸ್ಸಿನಲ್ಲಿ— "ಇನ್ನು ನಾನು ಗುಹೆಯ ಹೊರಗೆಹೋಗಿ, ಅಲ್ಲಿ ಯಾರು ಯಾರು ಬಂದಿರು ವರೆಂಬದನ್ನು ನೋಡಿ, ಮುಂದಿನ ಕಾರ್ಯವನ್ನು ಕೈಕೊಳ್ಳಬೇಕು. ಈ ದುಷ್ಟ ಹೈಮವತಿಗೆ ಗುಹೆಯಿಂದ ಪಾರಾಗುವ ಬೇರೆ ಮಾರ್ಗವು ಗೊತ್ತಿರ ದ್ದರಿಂದ ಇಲ್ಲಿಯೇ ಆಕೆಯು ಕುಳಿತಿರುವಳು. ಪ್ರಸಂಗವರಿತು ನಾನು ಕೊಳ್ಳಿಯನ್ನು ಕೊಟ್ಟೆನೆಂದರೆ ಶಿವಾಜಿಯೊಡನೆ ಈಕೆಯ ಅಂತವೂ ಆಗು ವದು. ಈಕೆಯ ಗೊಡವಿಗೆ ಈಗ ಹೋಗುವ ಕಾರಣವಿಲ್ಲ." ಎಂದು ಆಲೋಚಿಸಿ, ಆಕೆಯು ತಟ್ಟನೆ ಗುಹೆಯಿಂದ ಹೊರಗೆ ಹೋದಳು. ಇತ್ತ ಹೈಮವತಿಯು ಸುಮ್ಮನೆ ಕುಳಿತುಕೊಂಡು, ಮುಂದೆ ಏನು ಮಾಡ ಬೇಕೆಂದು ಆಲೋಚಿಸತೊಡಗಿದಳು. ಮಹಾರಾಜರು ಹ್ಯಾಗೆ ಪಾರಾದಾ ರೆಂಬ ಚಿಂತೆಯಲ್ಲಿ, ಗುಹೆಯಿಂದ ಹೊರಗೆ ಹೋಗುವ ವಿಚಾರವೇ ಆಕೆಯ

ಮನಸ್ಸಿನಲ್ಲಿ ಬರಲಿಲ್ಲ. ಮನಸ್ಸಿದ್ದಲ್ಲಿ ಮಾರ್ಗವುಂಟೆಂಬ ನಿಯಮದಂತೆ, ಅಂಥ ಸ್ಥಿತಿಯಲ್ಲಿಯೂ ಮಹಾರಾಜರಿಗೆ ಹಿತಕರವಾದಂಥ ಒಂದು ಯುಕ್ತಿಯನ್ನು ಹೈಮವತಿಯು ಹುಡುಕಿದಳು. ಆ ವೀರಪತ್ನಿಯು, ಗುಹೆಯ ನೆಲದ ಮಣ್ಣು ಹಸಿಯಿರುವದನ್ನು ನೋಡಿ ಸಮಾಧಾನಪಟ್ಟು, ಅದನ್ನು ಪ್ರತಿ ಒಂದು ಮದ್ದಿನ ಚೀಲದ ಮೇಲೆ ಒಂದೊಂದು ಗೇಣು ಎತ್ತರವಾಗಿ ಹಾಕಿದರೆ ಮದ್ದು ತೇವು ಏರಿ, ಅದಕ್ಕೆ ಬೆಂಕಿ ಹತ್ತಲಿಕ್ಕಿಲ್ಲವೆಂದು ತಿಳಿದುಕೊಂಡಳು. ಆಗ ಆಕೆಗೆ ಬಹಳ ಸಂತೋಷವಾಯಿತು. ಆಕೆಗೆ ತೋಡಲಿಕ್ಕೆ ಯಾವ ಸಾಧನವೂ ಇದ್ದಿಲ್ಲ; ಮಣ್ಣು ತುಂಬಲಿಕ್ಕೆ ಬುಟ್ಟಿಯೂ ಇದ್ದಿಲ್ಲ; ಆದರೂ ಆಕೆಯು ಉಗುರು ಬೆರಳುಗಳಿಂದ ಮಣ್ಣನ್ನು ತೋಡಿ, ಅದನ್ನು ಉಡಿಯಲ್ಲಿ ತುಂಬಿಕೊಂಡು ಚೀಲದ ಬಾಯಿಗೆ ಹಾಕುವ ಝುಪಾಟಿಯನ್ನು ನಡಿಸಿದಳು. ಆಗರ್ಭಶ್ರೀಮಂತಳಿಗೆ ಮನೆಯ ಕಸ ಬಳಿದುಗೊತ್ತಿದ್ದಿಲ್ಲ; ಅಂಥವಳು ತನ್ನ ಉಗುರು ಬೆರಳುಗಳ ನೋವಿನಕಡೆಗೆ ಲಕ್ಷಗೊಡದೆ, ತನ್ನ ಕಾರ್ಯವನ್ನು ಎಡೆಬಿಡದೆ ನಡಿಸಿದಳು. ಕೆಲಸವು ಪೂರ್ಣವಾಗುವವರೆಗೆ ನಡುವೆ ವಿಶ್ರಾಂತಿಯನ್ನೇ ಹೊಂದಲಿಲ್ಲ. ಆಕೆಯು ತಡಮಾಡಿದರೆ ಕೆಲಸವು ಘಾತವಾಗುವಂತೆಯಿತ್ತು. ಇನ್ನು ಮೂರುನಾಲ್ಕು ತಾಸುಗಳೊಳಗೆ ಮಹಾರಾಜರು ಅಲ್ಲಿಗೆ ಬರತಕ್ಕವರಿದ್ದದ್ದರಿಂದ, ಅಷ್ಟರೊಳಗೆ ಆಕೆಯು ತನ್ನ ಕೆಲಸವನ್ನು ಮುಗಿಸಬೇಕಾಗಿತ್ತು. ಅದರಂತೆ ಆ ಸಾಹಸಿಯಾದ ಸ್ತ್ರೀಯು ಒಂದೆರಡು ತಾಸುಗಳಲ್ಲಿಯೇ ಕೆಲಸವನ್ನು ಮುಗಿಸಿಕೊಂಡು ಸಮಾಧಾನಪಟ್ಟಳು. ಎಂಥ ಪ್ರಸಂಗ ಒದಗಿದರೂ ಮಹಾರಾಜರ ಘಾತವಾಗಗೊಡಲಿಕ್ಕಿಲ್ಲವೆಂದು ಆಕೆಯು ನಿಶ್ಚಯಿಸಿ, ಗಂಡುಗಚ್ಚಿ ಹಾಕಿಕೊಂಡು, ಅಡ್ಡಸೆರಗು ಕಟ್ಟಿಕೊಂಡು ಸಿದ್ಧವಾಗಿ ನಿಂತುಕೊಂಡುಳು. ಭಕ್ತಿಯ ಪಾರವಶ್ಯದಿಂದ ಜೀವದ ಹಂಗುದೊರೆದವರು ಏನುಮಾಡಿಯಾರು, ಏನು ಮಾಡಲಿಕ್ಕಿಲ್ಲ?

೯ನೆಯ ಪ್ರಕರಣ.

ಗಂಡಾಂತರ ನಿವಾರಣ.

ಹೈಮವತಿಯನ್ನು ಗುಹೆಯಲ್ಲಿ ಬಿಟ್ಟು ಹೊರಗೆ ಬಂದ ತಾರೆಯು, ಶಿವಾಜಿಯು ಬರುವದರೊಳಗಾಗಿ ತಾನು ಎಲ್ಲ ವ್ಯವಸ್ಥೆಯನ್ನು ಸರಿಯಾಗಿ ಮಾಡಿಡದಿದ್ದರೆ ಕೆಲಸವು ಕೆಟ್ಟೀತೆಂದು ತಿಳಿದು ಅವಸರದಿಂದ ಕೆಲಸಮಾಡ ಹತ್ತಿದಳು. ಆಕೆಯು ಅಗ್ನಿಕುಂಡದ ಸುತ್ತಮುತ್ತಲಿನ ಕಸ ತೆಗೆದು, ಸಾರಿಸಿ ರಂಗವಲ್ಲಿಯನ್ನು ಹಾಕಿದಳು. ಕೃಷ್ಣಾಂಜಿನವನ್ನು ಸ್ವಚ್ಛಝಾಡಿಸಿ ಹಾಸಿ ಅಗ್ನಿಕುಂಡದಲ್ಲಿ ಎರಡು ಕೊರಡುಗಳನ್ನು ಚಲ್ಲಿದಳು. ಆಮೇಲೆ ತನ್ನ ವೇಷವನ್ನು ಸರಿಯಾಗಿ ಮಾಡಿಕೊಳ್ಳುವದಕ್ಕಾಗಿ ಗುಡಿಸಿಲೊಳಗೆ ಹೋಗಿ ಕಫನಿಯನ್ನು ಝಾಡಿಸಿಕೊಂಡು ಜಡೆಗಳನ್ನು ಸರಿಯಾಗಿ ಕಟ್ಟಿಕೊಂಡಳು. ತರುವಾಯ ಆ ಬಾಲಗೋಸಾವಿಯ ಸುಂದರ ಮೂರ್ತಿಯು ಹೊರಗೆ ಹಾಸಿದ್ದ ಕೃಷ್ಣಾಜಿನದ ಮೇಲೆ ಬಂದು ಕುಳಿತು ಜಪಮಾಡಹತ್ತಿತು. ಸುಳ್ಳಿಗೆ ಆಡಂಬರವು ಬಹಳ ಬೇಕಾಗುವದಲ್ಲವೆ? ನಟನೆಯಿಂದ ಪ್ರತ್ಯಕ್ಷ ಶುಕಾಚಾರ್ಯರನ್ನು ಹೋಲುತ್ತಿದ್ದ ತಾರೆಯ ಹೃದಯವು, ಶುಕಾಚಾರ್ಯ ರಂಥ ವೈರಾಗ್ಯ ಮೂರ್ತಿಯ ನಿರ್ಮಲ ಹೃದಯಕ್ಕಿಂತ ತೀರ ಭಿನ್ನವಾಗಿ ತ್ತೆಂದು ನಾವು ವಾಚಕರಿಗೆ ತಿಳಿಸಲವಶ್ಯವಿಲ್ಲ. ವೇಷಧಾರಿ ಸತ್ಪುರುಷರ ಆಡಂಬರದ ಅಬ್ಬರದಲ್ಲಿ ನಿಜವಾದ ಸತ್ಪುರುಷರು ಎಲ್ಲಿಯೋ ಅಡಗಿ ಹೋಗುವರು! ಮಹಾರಾಜರ ಮುಂದೆ ಆ ವೇಷಧಾರಿ ಗೋಸಾವಿಯು ಕಠೋರ ಹೃದಯದ ಹಟಮಾರಿಯಾದ ತಾರೆಯನ್ನು "ಪರಮಾನಂದ ಗಿರಿ" ಯೆಂದು ಕರೆದು, ಆ ವೈರಾಗ್ಯ ಮೂರ್ತಿಯು ತನ್ನ ಗುರುವೆಂದು ಹೇಳಿ, ಆತನ ವಿಷಯದ ಇಲ್ಲದ ಅಲೌಕಿಕ ಮಹತ್ವವನ್ನು ವರ್ಣಿಸಿದನು. ಶಿವಾಜಿ ಯಂಥ ಚಾಣಾಕ್ಷರು ಕೂಡ ಮಬ್ಬಿಗೆ ಬಿದ್ದರೆಂದ ಬಳಿಕ, ಸಾಮಾನ್ಯರಾದ ಭಾವಿಕ ಜನರು, ಈ ದುಷ್ಟ ವೇಷಧಾರಿಗಳ ಬಲೆಗೆ ಬಿದ್ದು, ಎಂಥ ಎಂಥ ಕಷ್ಟಗಳನ್ನು ಭೋಗಿಸಬೇಕಾಗುವದೆಂಬದನ್ನು ನಾವು ಅನುಭವದಿಂದ ಚನ್ನಾಗಿ ಅರಿತಿರುವೆವು. ಇರಲಿ, ತಾರೆಯು ಜಪಕ್ಕೆ ಕುಳಿತಿದ್ದರೂ ಆಕೆಯ ಲಕ್ಷವು ಶಿವಾಜಿಯು ಬರುವ ಹಾದಿಯ ಕಡೆಗೆ ಇತ್ತು. ತನ್ನ ತಂದೆಯ

ಕೊಲೆ ಮಾಡಿದವನು ಯಾವಾಗ ಬಂದಾನು, ಅವನ ಪ್ರಾಣವನ್ನು ಯಾವಾಗ ತಕ್ಕೊಂಡೇನು! ಎಂದು ಆಕೆಯು ಆತುರಪಡುತ್ತಿದ್ದಳು. ಹೀಗೆಯೇ ವೇಷದಾರಿ ಸತ್ಪುರುಷರು ತಮ್ಮ ತಮ್ಮ ಹೇತುವನ್ನು ಸಾಧಿಸಿ ಕೊಳ್ಳುವದಕ್ಕಾಗಿ ಆಡಂಬರವನ್ನು ಜಗತ್ತಿಗೆ ತೋರಿಸುತ್ತಿರುತ್ತಾರೆ. ತಾರೆಗೆ ಜಪವೆಲ್ಲಿ ಬೇಕಾಗಿತ್ತು, ತಪವೆಲ್ಲಿ ಬೇಕಾಗಿತ್ತು. ಆಕೆಯು ಆಸನದ ಮೇಲೆ ಕುಳಿತು ಕುಳಿತು ಬೇಸತ್ತಳು. ಆಕೆಗೆ ಸಂತಾಪವಾಗಹತ್ತಿತು. ಸಂತಾ ಪದ ಭರದಲ್ಲಿ ಆಕೆಯು ತನ್ನ ಕಕ್ಷನನ್ನು ಬೈದಳು. ಹೀಗೆ ಆಕೆಯು ಚಡ ಪಡಿಸಿ ಚಾಟಿಯ ಹೊಡೆಯುತ್ತಿರಲು, ಒಬ್ಬನು ಓಡುತ್ತ ಬಂದು—"ಕೆಲಸ ವಾಯಿತು, ಮುಂದಿನ ವ್ಯವಸ್ಥೆಯನ್ನು ಬೇಗನೆ ಮಾಡಿರಿ; ನೀವು ಒಳಗೆ ಹೋಗಿ ಕುಳಿತುಕೊಂಡು ಬಾಗಿಲು ಇಕ್ಕಿಕೊಳ್ಳಬೇಕಂತೆ." ಎಂದು ಹೇಳಿ ದನು. ಅದನ್ನು ಕೇಳಿ ತಾರೆಗೆ ಪರಮಾನಂದವಾಯಿತು. ಆಕೆಯು ತಟ್ಟನೆ ಎದ್ದು ತನ್ನ ಗುಡಿಸಿಲೊಳಗೆ ಹೋಗಿ ಬಾಗಿಲು ಇಕ್ಕಿಕೊಂಡು ಕುಳಿತಳು.

ಇತ್ತ ಆ ಗೊಸಾವಿಯು ಮಹಾರಾಜರನ್ನೂ, ಅವರ ಅಂಗರಕ್ಷಕ ರನ್ನೂ ಕರಕೊಂಡು ಬಂದನು. ಆತನು ಗುಡಿಸಿಲ ಬಳಿಗೆ ಬಂದು, ಪರ ಮಾನಂದಗಿರಿಯವರು ಅಗ್ನಿ ಕುಂಡದ ಬಳಿಯಲ್ಲಿ ಇಲ್ಲದಿರುವದನ್ನು ನೋಡಿ ತನ್ನ ಬಳಿಯಲ್ಲಿದ್ದವರಿಗೆ—''ನೋಡಿದಿರಾ, ನಾನು ಹೇಳಿದಂತೆ ಗುರುಗಳು ಹೊರಗೆಯಿರುವದಿಲ್ಲ. ಇದು ಹೊರಗೆ ಇರುವ ಸಮಯವಲ್ಲ; ಅವರು ಯೋಗಾರೂಢರಾಗಿರುವ ಸಮಯವು. ಅವರು ಇನ್ನು ಸಮಾಧಿಯನ್ನು ಇಳಿಸಿದ ಬಳಿಕ ತಮಗೆ ಅವರ ದರ್ಶನವಾಗುವದು. ನಾನು ಸ್ವಲ್ಪ ಒಳಗೆ ಹೋಗಿ ನೋಡಿಬರುತ್ತೇನೆ, ನೀವು ಇಲ್ಲಿಯೇ ಕುಳಿತುಕೊಳ್ಳಿರಿ. ಮಹಾ ರಾಜಾ, ಶಿವಪ್ರಭೂ, ಈ ಕುಂಡದೊಳಗಿನ ಭಸ್ಮವನ್ನು ಹಚ್ಚಿಕೊಳ್ಳುವ ಯೋಗವು ನಿನ್ನಂಥ ಪುಣ್ಯವಂತನಿಗಲ್ಲದೆ ಅನ್ಯರಿಗೆ ಲಭಿಸದು. ಈ ಮಂತ್ರ ಪೂತ ಭಸ್ಮ ಲೇಪನದಿಂದ ನಿನ್ನ ಗಂಡಾಂತರಗಳೆಲ್ಲ ದೂರವಾಗುವವು. ದೇಹವು ಪವಿತ್ರವಾಗುವದು, ಎಂದು ಹೇಳಿ, ಗುಡಿಸಿಲೊಳಗೆ ಹೋದನು. ಕೂಡಲೆ ಆತನು ತಿರುಗಿಬಂದು—"ರಾಜಾ, ನೀನು ಬಹು ಭಾಗ್ಯಶಾಲಿ ಯೆಂಬದರಲ್ಲಿ ಸಂಶಯವಿಲ್ಲ. ಇನ್ನು ಸ್ವಲ್ಪ ಹೊತ್ತಿನಲ್ಲಿಯೇ ಮಹಾರಾಜರು ಹೊರಗೆ ಬರಬಹುದಾಗಿ ತೋರುತ್ತದೆ. ಅವರ ಮುಖಮುದ್ರೆಯು

ಉಲ್ಲಸಿತವಾಗಿರುವದು. ನಾವೆಲ್ಲರೂ ಇಲ್ಲಿ ಸ್ವಲ್ಪಹೊತ್ತು ಸುಖ ದುಃಖದ ಮಾತುಗಳನ್ನಾಡುತ್ತಾ ಕುಳಿತುಕೊಳ್ಳೋಣ. ಸಾಂಸಾರಿಕರಂತೆ ನಮಗಾದರೂ ಸುಖ ದುಃಖಗಳು ಎಲ್ಲಿ ಬಿಟ್ಟವೆ? ಆದರೆ ಸಾಂಸಾರಿಕರು ಸ್ವಾರ್ಥಕ್ಕಾಗಿ ಸುಖದುಃಖಗಳನ್ನು ಭೋಗಿಸುವರು; ನಮ್ಮಂಥವರು ಪರಾರ್ಥಕ್ಕಾಗಿ ಸುಖದುಃಖಗಳನ್ನು ಸಹಿಸುವೆವು, ಇಷ್ಟೇ ಭೇದವು. ಸಾಂಸಾರಿಕ ಚೇಳು ಕಡಿದರೆ ಅವರು ಬಡಬಡಕೊಂಡು ಅಳಬಹುದು; ಆದರೆ ನಮ್ಮಂಥವರು ಸಹನಮಾಡಿಕೊಂಡು ಸುಮ್ಮನಿರಬಹುದು; ಇಷ್ಟೇ ಭೇದವು. ಇನ್ನು ಸ್ವಪರಭಾವವಿಲ್ಲದೆ ಏಕೋ ಭಾವದ ನಮ್ಮ ಗುರುಗಳಂಥ ಮಹಾತ್ಮರು ಮಾತ್ರ ಸುಖದುಃಖಗಳನ್ನು ಮೀರಿರಬಹುದು; ಆದರೆ ಅವರ ಅನುಭವವು ನಮ್ಮಂಥ ಪಾಮರರಿಗಿ ಹ್ಯಾಗೆ ಆಗಬೇಕು? ಖಂಡೇರಾವ, ನಿನ್ನ ಜತೆಗಾರನನ್ನು ಹುಲಿಯು ಕೊಂದಿತೆಂದು ನೀನು ಹೇಳುವೆಯಲ್ಲವೆ? ಇನ್ನು ಸ್ವಲ್ಪ ಹೊತ್ತು ನಿಲ್ಲು, ಆತನು ಶ್ರೀ ಗುರುಪ್ರಭಾವದಿಂದ ಇದೇ ಗುಡಿಸಿಲಿನಿಂದ ಹೊರಬಿದ್ದು, ನಿಮ್ಮ ಮಹಾರಾಜರನ್ನು ಕಾಣುವನು. ಹುಲಿಯ ಬಾಯೊಳಗಿಂದಲೇ ಏಕೆ, ಪ್ರತ್ಯಕ್ಷ ಯಮನ ಬಾಯೊಳಗಿಂದಲೂ ಆತನನ್ನು ನಮ್ಮ ಗುರುಗಳು ಬಿಡಿಸಿಕೊಡಬಹುದೆಂದು ನಾನು ಮತ್ತೆ ಮತ್ತೆ ಯಾಕೆ ಹೇಳಬೇಕು? ನಾನು ಇನ್ನೊಮ್ಮೆ ಗುಡಿಸಿಲೊಳಗೆ ಹೋಗಿಬರುವೆನು. ಗುರುಗಳ ಸಮಾಧಿಯು ಇಳಿಯತೊಡಗಿರುವದೋ ಹ್ಯಾಗೆ ನೋಡಿ ಬರುತ್ತೇನೆ.

ಈ ಮೇರೆಗೆ ನುಡಿದು ಗೋಸಾವಿಯು ಗುಡಿಸಿಲೊಳಗೆ ಹೋಗಿ ಬಾಗಿಲು ಇಕ್ಕಿಕೊಂಡನು. ಆತನು ತಾರೆಯನ್ನು ಕುರಿತು—"ತಂಗೀ, ಹಂಚಿಕೆ ಹಾಕಿದಂತೆ ಬೇಟೆಯನ್ನಂತು ಬಲೆಯಲ್ಲಿ ತಂದು ಹಾಕಿದೆನು. ಇನ್ನು ನೀನು ಹೊರಗೆ ಬಂದು ಸತ್ಪುರುಷ ವೇಷದ ಮೋಹಜಾಲವನ್ನು ಬೀಸಿ, ಬೇಟೆಯನ್ನು ಗಟ್ಟಿಯಾಗಿ ಬಿಗಿ. ಅಂದರೆ ನಮ್ಮ ಬಹುದಿವಸದ ಶ್ರಮದ ಫಲವು ಸಾಧಿಸುವದು," ಎಂದು ಹೇಳಲು ತಾರೆಯು—"ಕಕ್ಕಾ, ನೀನು ಹೋದಬಳಿಕ ಇಲ್ಲಿ ಎಂಥ ಅನರ್ಥದ ಪ್ರಸಂಗಗಳು ಒದಗಿದವು! ಅವನ್ನು ನೆನಿಸಿದರೆ ಈಗಲೂ ನನ್ನ ಮೈಯು ಗದಗುಟ್ಟಿ ನಡಗುತ್ತದೆ; ಆದರೆ ಅವನ್ನೆಲ್ಲ ಹೇಳುತ್ತ ಕುಳಿತುಕೊಳ್ಳಲಿಕ್ಕೆ ಇದು ಸಮಯವಲ್ಲ. ನಮ್ಮ ಇಷ್ಟಾರ್ಥವು ಕೈಗೂಡಿದ ಬಳಿಕ ನಾನು ಅವನ್ನೆಲ್ಲ ನಿಮಗೆ ಹೇಳುವೆನು.

ಇನ್ನು ನಾನು ಗುಹೆಯಲ್ಲಿ ಇಳಿದುಹೋಗಿ ಮದ್ದಿಗೆ ಕೊಳ್ಳಿಕೊಡುತ್ತೇನೆ. ನನಗೆ ಜೀವದಾಶೆಯಿಲ್ಲ, ಅಪ್ಪನ ವೈರಿಯ ಸೇಡು ತೀರಿಸಿಕೊಳ್ಳುವದಕ್ಕಾಗಿಯೇ ನಾನು ಇಲ್ಲಿಯ ವರೆಗೆ ಬದುಕಿ ಉಳಿದಿರುವೆನು; ಇಲ್ಲದಿದ್ದರೆ ನನ್ನ ಮೋಹದ ತಂದೆಯನ್ನು ಕಳಕೊಂಡು ನಾನು ಜೀವಿಸುವ ಸಂಭವವೇ ಇದ್ದಿಲ್ಲ. ನಿಮಗೆ ಜೀವದ ಆಶೆಯಿದ್ದರೆ, ಏನಾದರೂ ನೆವ ತೆಗೆದು ನೀವು ಗುಡಿಸಿಲಿನ ಬಳಿಯಿಂದ ದೂರ ಹೋಗಿಬಿಡಿರಿ; ಇಲ್ಲದಿದ್ದರೆ ಶಿವಾಜಿಯ ಹತ್ತರವೇ ಕುಳಿತು, ಅಪ್ಪನ ಸ್ಮರಣಮಾಡುತ್ತಾ, ಸಾವಿಗೆ ಈಡಾಗಿರಿ. ನಾನು ಇನ್ನು ಒಂದು ಕ್ಷಣವಾದರೂ ತಡೆಯಲಾರೆನು. ನಿಮ್ಮ ಯೋಗ ಕ್ಷೇಮದ ವಿಚಾರವನ್ನೂ ನಾನು ಮಾಡುವದಿಲ್ಲ. ನಿಮ್ಮದನ್ನು ನೀವು ನೋಡಿಕೊಳ್ಳಬೇಕು. ಹೂ, ನಡೆಯಿರಿ ನೀವು ಇಲ್ಲಿಂದ. ಇಷ್ಟು ವಿಲಂಬ ವಾದದ್ದೇ ಸಾಕಾಗಿರುವದು. ಇನ್ನು ಪುನಃ ವಿಲಂಬವು ಬೇಡ. ವಿಲಂಬ ಮಾಡಿದರೆ ಆ ಚಾಣಾಕ್ಷನಾದ ಶಿವಾಜಿಯು ಕೈಮೀರಿ ಹೋದಾನು," ಎಂದು ಹೇಳಿ, ಗುಹೆಯಲ್ಲಿ ಇಳಿಯುವದಕ್ಕಾಗಿ ಎದ್ದು ನಿಂತಳು. ಆ ಗುಡಿಸಿಲೊಳಗಿಂದಲೇ ಗವಿಯಲ್ಲಿ ಹೋಗಲಿಕ್ಕೆ ಮಾರ್ಗವಿತ್ತು. ತಾರೆಯ ಈ ಆತುರವನ್ನೂ, ಆಕೆಯ ಹಟಮಾರಿತನವನ್ನೂ, ನಿಶ್ಚಯವನ್ನೂ ಬಲ್ಲವನಾದ ಆಕೆಯ ಕಕ್ಕನು ಬೆದರಿದನು. ತನ್ನ ಪ್ರಾಣವನ್ನು ಕೊಡಲಿಕ್ಕೆ ಆತನ ಮನಸ್ಸು ಮೆಚ್ಚಲಿಲ್ಲ. ಆತನ ಮೋರೆಯು ಹುಚ್ಚಿಟ್ಟಿತು. ಆತನು ಕೂಡಲೆ ಗುಡಿಸಿಲಿನ ಹೊರಗೆ ಬಂದು ಶಿವಾಜಿಯನ್ನು ಕುರಿತು—"ರಾಜಾ, ಒಂದು ವನಸ್ಪತಿಯನ್ನು ತರಲಿಕ್ಕೆ ಗುರುಗಳು ಹೇಳಿದ್ದಾರೆ, ಈಗ ನಾನು ಓಡಿ ಹೋಗಿ ತರುವೆನು; ನೀನು ಸ್ವಲ್ಪ ಹೊತ್ತು ಕುಳಿತುಕೋ," ಎಂದು ಹೇಳಿ, ಸಮ್ಮತಿಯ ಹಾದಿಯನ್ನು ನೋಡದೆ, ತನ್ನ ಕಾಲಲ್ಲಿ ಕಸುವಿದ್ದಷ್ಟು ಓಡ ಹತ್ತಿದನು. ಅದನ್ನು ನೋಡಿ ಖಂಡೇರಾಯನೂ ಅವನ ಬೆನ್ನಹತ್ತಿ ನಡೆದನು. ಹೀಗಾಗಿ ಗುಡಸಿಲಿನ ಹತ್ತರ ಮಹಾರಾಜರು, ಅವರ ಅನುಯಾಯಿಗಳು ಮೂವರು ಹೀಗೆ ನಾಲ್ಕು ಜನರು ಮಾತ್ರ ಉಳಿದರು.

ಈ ವಿಲಕ್ಷಣ ಪ್ರಕಾರವನ್ನು ನೋಡಿ ಮಹಾರಾಜರು ವಿಚಾರಮಗ್ನರಾದರು. ಗೋಸಾವಿಯ ವಿಷಯವಾಗಿ ಮೊದಲೇ ಅವರ ಮನಸ್ಸಿನಲ್ಲಿ ಸಂಶಯವು ಉತ್ಪನ್ನವಾಗಿತ್ತು. ಅದರಲ್ಲಿ ಈ ಗೋಸಾವಿಯ ಎಡತಾ

ಕೋಣ, ಆತನ ಓಡೋಣ, ಆತನ ಬೆನ್ನಹತ್ತಿ ಖಂಡೇರಾಯನ ಓಡಿಹೋಗೋಣ ಇವನ್ನೆಲ್ಲ ನೋಡಿ ಅವರಿಗೆ ಪೂರ್ಣ ಸಂಶಯವು ಉತ್ಪನ್ನವಾಯಿತು. ನಮ್ಮ ಘಾತಕ್ಕಾಗಿ ಇಲ್ಲಿ ಏನೋ ಯತ್ನವು ನಡೆದಂತೆ ಕಾಣುತ್ತದೆ, ಎಂದು ಅವರು ತರ್ಕಿಸಿದರು; ಆದರೆ ಯಾವ ಬಗೆಯ ಯತ್ನವು ನಡೆದಿರುವದೆಂಬದರ ಗಂಧವು ಕೂಡ ಅವರಿಗೆ ಹತ್ತಿದ್ದಿಲ್ಲ. ಅವರು ಸಂಕಟಕ್ಕೆ ಹೆದರಿ ಒಮ್ಮೆಲೆ ಓಡಿಹೋಗುವಂಥ ಅಳ್ಳೆದೆಯವರಿದ್ದಿಲ್ಲ. ಸಂಕಟಕ್ಕೆ ಎದುರಾಗುವ ವಿಷಯದಲ್ಲಿಯೂ, ಸಂಕಟದಲ್ಲಿ ಚಿತ್ತಕ್ಷೋಭವಾಗದಂತೆ ಮನೋನಿಗ್ರಹ ಮಾಡುವ ವಿಷಯದಲ್ಲಿಯೂ ಅವರು ಸುಪ್ರಸಿದ್ಧರಿದ್ದರು. ಈ ಗುಣಗಳು ಮಹಾಪುರುಷರಲ್ಲಿಯಲ್ಲದೆ ಸಾಮಾನ್ಯ ಜನರಲ್ಲಿ ಇರಲಾರವು. ಮಹಾರಾಜರ ಮುಖಮುದ್ರೆಯು ಗಂಭೀರವಾಯಿತು. ಅವರು ತಮ್ಮ ಅಂಗರಕ್ಷಕರಲ್ಲಿ ಒಬ್ಬನಾದ ನಾನಾಸಾಹೇಬನನ್ನು ಕುರಿತು—''ನಾನಾಸಾಹೇಬ, ಹೊತ್ತು ಬಹಳವಾಯಿತಲ್ಲವೆ? ನಮ್ಮ ಮುಖ್ಯ ಕೆಲಸವನ್ನು ಬಿಟ್ಟು, ಈ ಗೋಸಾವಿಗಳ ಗೊಂದಲದಲ್ಲಿ ಸೇರಿದ್ದು ಅನುಚಿತವೇ ಸರಿ. ಅನುಗ್ರಹದ ಗೊಡವಿಗೆ ನಾವು ಹೋಗತಕ್ಕದ್ದಿದ್ದಿಲ್ಲ. ನಮ್ಮ ಬಾಲಮಿತ್ರ ಏಸಾಜಿಯ ಶೋಧವನ್ನು ಬಿಟ್ಟು ಈ ಉಸಾಬರಿಗೆ ಹೋಗಲಿಕ್ಕೆ ಪ್ರೇರಿಸುವಲ್ಲಿ ಅಂಬಾಬಾಯಿಯ ಉದ್ದೇಶವೇನಿರಬಹುದು? ಆಕೆಯ ಇಚ್ಛೆಯಿದ್ದಂತೆ ಆಗಲಿ! ಬಂದಬಳಿಕ ಎಷ್ಟು ಹೊತ್ತಾದರೂ ಕಾರ್ಯ ಮಾಡಿಕೊಂಡೇ ಹೋಗಬೇಕು; ಆದರೆ ಈ ವನವು ಎಷ್ಟು ಮನೋಹರವದೆ ನೋಡಿದೆಯೇನು? ಈಶ್ವರನ ಚಿಂತನ ಮಾಡಿಕೊಂಡಿರುವವರಿಗೆ ಇದು ಬಹುಯೋಗ್ಯವಾದದ್ದು! ಹಿಂದಕ್ಕೆ ತುಕಾರಾಮ ಮಹಾರಾಜರು "ಲೋಹಗಾವ್" ಎಂಬ ಊರಲ್ಲಿ ಕೀರ್ತನ ಮಾಡಿದಾಗ ನನ್ನಲ್ಲಿ ಉತ್ಪನ್ನವಾಗಿದ್ದ ವೈರಾಗ್ಯವನ್ನು ಸ್ಥಿರಗೊಳಿಸಲಿಕ್ಕೆ ಅಪ್ಪಣೆಯಾಗಿದ್ದರೆ, ನಾನು ಇದೇ ವನದಲ್ಲಿ ತಪಶ್ಚರ್ಯವನ್ನು ಮಾಡುತ್ತಿದ್ದೆನು; ಆದರೆ ಅವರೂ, ಶ್ರೀ ಸಮರ್ಥ ರಾಮದಾಸರವರೂ ನನಗೆ—''ಶಿವಬಾ, ನೀನು ತಪಶ್ಚರ್ಯ ಮಾಡುವದಕ್ಕೋಸ್ಕರ ಜನ್ಮ ತಾಳಿರುವದಿಲ್ಲ; ಆದ್ದರಿಂದ ನಮ್ಮ ಹೇಳಿಕೆಯಂತೆ ರಾಜಕಾರ್ಯದಲ್ಲಿ ನೀನು ತೊಡಗು" ಎಂದು ಆಜ್ಞಾಪಿಸಿದರು. ಅವರ ಆಜ್ಞೆಯನ್ನು ಮೀರಲು ಯಾರು ಸಮರ್ಥರು?

ಮಹಾರಾಜರು ಈ ಮೇರೆಗೆ ತನ್ನೊಡನೆ ಸಲಿಗೆಯಿಂದ ಮಾತಾಡುವದನ್ನು ಕೇಳಿ ನಾನಾಸಾಹೇಬನಿಗೆ ಬಹಳ ಆಶ್ಚರ್ಯವಾಯಿತು. ಯಾವದೊಂದು ಕಾರ್ಯದಲ್ಲಿ ತೊಡಗಿರುವಾಗ, ಕಾರ್ಯಕ್ಕೆ ಸಂಬಂಧವಿಲ್ಲದ ಮಾತನ್ನು ಆಡುವದು, ಅವರ ಸ್ವಭಾವವಾಗಿದ್ದಿಲ್ಲ; ಮತ್ತು, ಏನೂ ಉದ್ಯೋಗವಿಲ್ಲೆಂದು ವ್ಯರ್ಥ ಹರಟೆ ಕೊಚ್ಚುವವರೂ ಅವರು ಇದ್ದಿಲ್ಲ. ಹೀಗಿದ್ದು, ಮಹಾರಾಜರು ಹೀಗೆ ಯಾಕೆ ಮಾತಾಡಿರಬಹುದೆಂದು ಆತನು ಯೋಚಿಸತೊಡಗಿದನು. ಆತನು ಪ್ರತಿಯಾಗಿ ಏನೂ ಮಾತಾಡದೆ ನಯ ಭಯಯುಕ್ತನಾಗಿ ಅತ್ಯಂತ ಭಕ್ತಿಯಿಂದ ಮಹಾರಾಜರನ್ನು ನೋಡಿದನು ಮಾತ್ರ. ಆತನಿಗೂ ಗೋಸಾವಿಯ ವಿಷಯವಾಗಿ ಸಂಶಯವು ಉತ್ಪನ್ನವಾಗಿತ್ತು. ಆ ಸಂಬಂಧದಿಂದ ಆತನು ಮಹಾರಾಜರನ್ನು ಕುರಿತು—"ಸನ್ನಿಧಿಯಲ್ಲಿ ಮಾತಾಡುವ ಯೋಗ್ಯತೆಯು ನನ್ನದಲ್ಲ; ಆದರೂ ಈ ಪ್ರಸಂಗದಲ್ಲಿ ನನ್ನಿಂದ ಸುಮ್ಮನೆಯಿರುವದು ಆಗದು. ಈ ಗೋಸಾವಿಯು ಮೂಲತಃ ಗೋಸಾವಿಯೇ ಅಲ್ಲ; ಅಂದಬಳಿಕ ಇವನ ಗುರುವೂ ಗುರುವಲ್ಲ. ಇವನ ತಪಶ್ಚರ್ಯವೂ ತಪಶ್ಚರ್ಯವಲ್ಲ. ಮಹಾರಾಜರ ಪ್ರಾಣಹರಣ ಮಾಡುವದಕ್ಕಾಗಿ ಯಾರೋ ದುಷ್ಟರು ಈ ತಂತ್ರವನ್ನು ಒಡ್ಡಿರುವಂತೆ ತೋರುತ್ತದೆ. ಸೇವಕನಾದ ನಾನು ಈಗ ಆಗ್ರಹದಿಂದ ಹೇಳಿಕೊಳ್ಳುವುದೇನಂದರೆ, ಮಹಾರಾಜರು ಈಗಲೆ ಇಲ್ಲಿಂದ ಹೊರಟುಹೋಗತಕ್ಕದ್ದು; ಅನ್ನಲು, ಮಹಾರಾಜರು—"ನಾನಾಸಾಹೇಬ, ನಿಮ್ಮ ಮಾತಿನಲ್ಲಿ ಅರ್ಥವಿರುವದು; ಆದರೆ ಇಲ್ಲಿಂದ ತಟ್ಟನೆ ಹೊರಟುಹೋಗುವದರಲ್ಲಿ ಅರ್ಥವೇನು? ಇಂಥ ವ್ಯೂಹವನ್ನು ರಚಿಸಿದವರು, ಓಡಿಹೋಗುವ ನಮ್ಮನ್ನು ಸುಮ್ಮನೆ ಓಡಿಹೋಗಗೊಡಬಹುದೆ? ನಾನು ದುರ್ಭಾವನೆಯಿಂದ ಇಲ್ಲಿಗೆ ಬಂದಿರುವದಿಲ್ಲ. ಗೋಸಾವಿಯೂ ಅವನ ಗುರುವೂ ಸತ್ಪುರುಷರಿರಲಿ—ಅಸತ್ಪುರುಷರಿರಲಿ, ನಾನಂತು ಸತ್ಪುರುಷರೆಂಬ ಭಾವದಿಂದಲೇ ಇಲ್ಲಿಗೆ ಬಂದಿದ್ದೇನೆ. ಭಾವವೇ ಬಲವೆಂದು ಹೇಳಿರುವದರಿಂದ, ನನ್ನ ಸದ್ಭಾವನೆಯ ಬಲವು ನನ್ನನ್ನು ರಕ್ಷಿಸಬಹುದು; ಆದರೆ ಪ್ರಸಂಗದಲ್ಲಿ ಹೀಗೆ ಒಮ್ಮೆಲೆ ಪುಕ್ಕತನ ತೋರಿಸುವದು ಯೋಗ್ಯವಲ್ಲ. ಇಂಥ ಎಷ್ಟು ಗಂಡಾಂತರಗಳೊಳಗಿಂದ ಅಂಬಾಭವಾನಿಯು ನಮ್ಮನ್ನು ರಕ್ಷಿಸಿರುವದಿಲ್ಲ? ಈಗಾದರೂ ಆಕೆಯೇ ನಮ್ಮನ್ನು ರಕ್ಷಿಸುವಳು!

ಈ ಮೇರೆಗೆ ಮಹಾರಾಜರು ನುಡಿಯುತ್ತಿರಲು, ನೆಲದೊಳಗೆ ಏನೋ ಗದ್ದಲವಾದಂತೆ ಮಂದಧ್ವನಿಯು ಕೇಳಿಸಹತ್ತಿತು. ಜನರ ಸುಳವಂತು ಎಲ್ಲಿಯೂ ಕಾಣಿಸಲಿಲ್ಲ. ಅಷ್ಟರಲ್ಲಿ ಸ್ವಲ್ಪ ಅಂತರದ ಮೇಲೆ ನೆಲದೊಳಗಿಂದ ಒಬ್ಬನು ಹೊರಬಿದ್ದನು. ಆತನು ಕೂಡಲೆ ಒಬ್ಬನ ಕೈಹಿಡಿದು ಮೇಲಕ್ಕೆ ಜಗ್ಗಹತ್ತಿದನು; ಆದರೆ ನೆಲದೊಳಗಿನ ಮನುಷ್ಯನು ಮೇಲಕ್ಕೆ ಬರಲೊಲ್ಲನು. ಅದನ್ನು ನೋಡಿ ಮಹಾರಾಜರು—"ಅದೇನು ನೋಡಿ ಬಾ" ರೆಂದು ತಮ್ಮೊಳಗಿನವನೊಬ್ಬನನ್ನು ಕಳಿಸಿದರು. ಅವನು ಅಲ್ಲಿಗೆ ಹೋಗಿನೋಡಲು ಏಸಾಜಿಯು ಒಬ್ಬ ಬಾಲ ಬೈರಾಗಿಯನ್ನು ಜಗ್ಗುತ್ತಲಿದ್ದನು. ಒಳಗಿನಿಂದ ಯಾವಳೋ ಒಬ್ಬ ಸ್ತ್ರೀಯು—"ಹೂ ಜಗ್ಗಿರಿ ಬೇಗನೆ ಜಗ್ಗಿರಿ" ಎನ್ನುತ್ತ, ಆ ಬಾಲಗೋಸಾವಿಯನ್ನು ಮೇಲಕ್ಕೆ ಎತ್ತುತ್ತಿದ್ದಳು. ಆಗ ಇಬ್ಬರೂ ಕೂಡಿ ಜಗ್ಗಲು, ಬಾಲಗೋಸಾವಿಯ ವೇಷಧಾರಿಯಾದ ತಾರೆಯು ಮೇಲಕ್ಕೆ ಬಂದಳು. ಆಗ ಆಕೆಯ ಮೈಯಲ್ಲಿ ಅಷ್ಟು ಬಲವು ಎಲ್ಲಿಂದ ಬಂದಿತ್ತೋ ತಿಳಿಯದು. ಏಸಾಜಿಯು ಎಲ್ಲರೊಡನೆ ಮಹಾರಾಜರ ಬಳಿಗೆ ಬಂದು ನಮಸ್ಕರಿಸಲು, ಮಹಾರಾಜರು ಆನಂದದ ಭರದಲ್ಲಿ "ಏಸಾಜೀ, ಇದೇನು? ನೀನು ಹೋದ ಕೆಲಸವಾವುದು? ಈಗ ನೆಲದೊಳಗಿಂದ ಹೊರ ಬೀಳುವ ಕಾರಣವೇನು? ನೀನು ಹುಲಿಯ ಬಾಯಿಗೆ ಬಿದ್ದೆಯೆಂದು ಖಂಡೇರಾಯನು ಹೇಳಿದನಲ್ಲ!" ಎಂದು ಕೇಳಲು, ಏಸಾಜಿಯು— "ಮಹಾರಾಜ, ತಮ್ಮ ಚರಣಕೃಪೆಯಿಂದಲೇ ನಾನು ಜೀವದಿಂದ ಉಳಿದು ಪುನಃ ತಮ್ಮ ಸೇವೆಗೆ ಸಿದ್ಧನಾಗಿ ಬಂದಿದ್ದೇನೆ. ಖಂಡೇರಾಯನು ಮೋಸ ಗಾರನಾಗಿ ತೋರಿದ್ದರಿಂದಲೇ ನಾನು ಆತನ ಮಾತನ್ನು ನಂಬಲಿಲ್ಲ. ಆತನು ಜಾವಳಿ ಅರಣ್ಯದಲ್ಲಿ ತಿರುಗಾಡಿ ಬಂದು, ಈ ಸಿಟ್ಟಿನಲ್ಲಿ ಮಾರ್ಗ ಮಾಡಲಿಕ್ಕೆ ಅನುಕೂಲವಿಲ್ಲೆಂದು ಹೇಳಿದನು; ಆದರೆ ಆತನ ಮಾತಿನಲ್ಲಿ ವಿಶ್ವಾಸವಿಡದೆ ನಾನು ಅದೇ ನಿಟ್ಟಿನಲ್ಲಿ ನೋಡಲಿಕ್ಕೆ ಹೋಗಲು, ಈ ಗುಪ್ತ ಗುಹೆಯ ಗೊತ್ತು ನನಗಾಯಿತು. ಈ ಗುಹೆಯನ್ನು ಹೊಸದಾಗಿ ಯಾರು ತೋಡಿರಬಹುದೆಂದು ವಿಚಾರಮಾಡುತ್ತ ಈ ಗುಡಿಸಿಲಿಗೆ ಬಂದೆನು. ಆ ಗೋಸಾವಿಯು ದುಷ್ಟನಾನ ಚಂದ್ರರಾವಮೋರೆಯ ತಮ್ಮನು; ಈ ವೇಷ ಧಾರಿಯಾದ ಬಾಲ ಗೋಸಾವಿಯು ಅದೇ ಚಂದ್ರರಾವ ಮೋರೆಯ

ಮಗಳು. ಈ ಕಠಿಣ ಹೃದಯಳ ಹೆಸರು ತಾರಾಬಾಯಿಯು. ಇವರು ನನ್ನನ್ನು ಈ ಗುಹೆಯ ಮುಂದಿನ ತಗ್ಗಿನಲ್ಲಿ ಹಾಕಿ ಹುಗಿದುಬಿಟ್ಟರು; ಆದರೆ ಅಕಸ್ಮಾತ್ತಾಗಿ ಗುಹೆಯ ಮುಂಭಾಗವು ಕಳಚಿಬಿದ್ದು, ನನಗೆ ಗುಹೆಯಲ್ಲಿ ಹೋಗುವ ಒಂದು ಮಾರ್ಗವು ಸಿಕ್ಕಿತು. ಆಗ ರಾತ್ರಿ ಸಮಯವಾಗಿರಲು ಇವರಿಗೆ ಕಾಣದಂತೆ ಗುಹೆಯಲ್ಲಿ ಹೋಗಲಿಕ್ಕೆ ನನಗೆ ಆಸ್ಪದವು ದೊರೆಯಿತು. ಆ ಮಾರ್ಗದಿಂದ ನಾನು ಗುಹೆಯನ್ನು ಪ್ರವೇಶಿಸಿದೆನು. ಅಂದಿನಿಂದ ಈ ಗುಹೆಯೇ ನನ್ನ ವಸತಿಸ್ಥಾನವಾಯಿತು. ಈ ಗುಹೆಯಲ್ಲಿ ಮದ್ದಿನ ಚೀಲಗಳನ್ನೂ, ಬೇರೆ ಜ್ವಾಲಾಗ್ರಾಹಿ ಪದಾರ್ಥಗಳ ಚೀಲಗಳನ್ನೂ ಇಟ್ಟಿದ್ದರು. ತಮ್ಮನ್ನು ಉಪಾಯದಿಂದ ಇಲ್ಲಿಗೆ ಬರಮಾಡಿ, ಅಗ್ನಿಕುಂಡದ ಬಳಿಯಲ್ಲಿ ನೀವು ಕುಳಿತಿರಲು, ಬುಡದಲ್ಲಿಯ ಮದ್ದಿನ ಚೀಲಗಳಿಗೆ ಕೊಳ್ಳಿ ಕೊಟ್ಟು ನಿಮ್ಮ ಪ್ರಾಣಹರಣ ಮಾಡಲು ಈ ಚಂಡಾಲರು ನಿಶ್ಚಯಿಸಿದ್ದರು. ಈ ಪುಣ್ಯಾತ್ಮಳಾದ ಸಾಧ್ವಿಯ ಸಾಹಸದಿಂದಲೇ ಮಹಾರಾಜರು ಪ್ರಾಣಸಂಕಟದಿಂದ ಮುಕ್ತರಾದಿರೆಂದು ನಾನು ಹೇಳುತ್ತೇನೆ. ಈಕೆಯ ಹೆಸರು ಹೈಮವತಿಯು. ಈ ದುಷ್ಟ ತಾರೆಯು ತನ್ನ ಶಿಷ್ಯಳನ್ನಾಗಿ ಮಾಡಿಕೊಂಡಿದ್ದ ಈ ಹೈಮವತಿಯನ್ನು ಕರಕೊಂಡು ಗುಹೆಯನ್ನು ನೋಡಲಿಕ್ಕೆ ಬಂದಾಗ ಈ ಪುಣ್ಯಾತ್ಮಳು ತಮ್ಮ ಮೇಲಿನ ಭಕ್ತಿಯಿಂದ ತಾವು ಬರುವುದರೊಳಗಾಗಿ ಗುಹೆಯು ನಾಶವಾಗಬೇಕೆಂದು, ಮದ್ದಿನ ಚೀಲಗಳಿಗೆ ಕೊಳ್ಳಿಕೊಟ್ಟು ತಾನು ಸಾಯಲಿಕ್ಕೆ ಸಿದ್ಧಳಾದಳು. ಆಗ ಗುಹೆಯಲ್ಲಿದ್ದ ನಾನು ಈಕೆಯ ಕೈಯೊಳಗಿನ ಕಕ್ಕಡವನ್ನು ಗುಪ್ತರೀತಿಯಿಂದ ಕಸಿದುಕೊಂಡೆನು. ಆಗ ಈ ಸಜ್ಜನಳು ದುಃಖಪಟ್ಟು, ಮಹಾರಾಜರ ಪ್ರಾಣ ಉಳಿಸಲಿಕ್ಕೆ ಬೇರೆ ಉಪಾಯವೇನು ಮಾಡಬೇಕೆಂದು ಚಿಂತಿಸುತ್ತ, ಕಡೆಗೆ ಗುಹೆಯೊಳಗಿನ ಹಸಿ ಮಣ್ಣನ್ನು ಉಗುರು ಬೆರಳುಗಳಿಂದ ಕೆದರಿ, ಉಡಿಯಲ್ಲಿ ತುಂಬಿಕೊಂಡು ಪ್ರತಿ ಒಂದು ಮದ್ದಿನ ಚೀಲದ ಬಾಯಿ ಮೇಲೆ ಒಂದೊಂದು ಗೇಣು ಎತ್ತರವಾಗಿ ಅದನ್ನು ಹಾಕಿದಳು. ಈ ತಾರೆಯು ಮಹಾ ದುಷ್ಟಳು. ಈಕೆಯ ಶಾಸನವನ್ನು ಮಹಾರಾಜರು ಈಗಲೇ ಮಾಡ ಬೇಕು. ಇಲ್ಲದಿದ್ದರೆ ನನಗೆ ಅಪ್ಪಣೆ ಕೊಟ್ಟರೆ ನಾನು ಯೋಗ್ಯ ಶಾಸನಮಾಡುವೆನು. ಇಂದಿನ ಮಹಾರಾಜರ ಪ್ರಾಣರಕ್ಷಣದ ಶ್ರೇಯಸ್ಸೆಲ್ಲ, ಈ ಹೈಮವತೀ

ದೇವಿಯ ಪಾಲಿಗೆ ಹೋಗತಕ್ಕದ್ದೇ ಸರಿ. ತಮ್ಮ ಪ್ರಾಣಸಂಕಟದ ಕಾಲದಲ್ಲಿ ಸಹಾಯ ಮಾಡುವ ಉದ್ದೇಶದಿಂದ ಈ ಗುಹೆಯಲ್ಲಿ ನಾನು ಇದ್ದೆನು. ಇಂದು ಈ ತಾರೆಯು ನಿಮ್ಮನ್ನು ಮೇಲೆ ಕುಳ್ಳಿರಿಸಿ ಮದ್ದಿಗೆ ಕೊಳ್ಳಿಕೊಡಲು ಬಂದದ್ದರಿಂದ, ನಾನೂ, ಹೈಮವತೀ ದೇವಿಯವರೂ ಕೂಡಿ ಈಕೆಯನ್ನು ಹೊರಗೆ ಎಳೆತಂದಿರುತ್ತೇವೆ. ಮೊದಲು ಈ ಡಾಕಿನಿಗೆ ಶಾಸನಮಾಡತಕ್ಕದ್ದು.

ಈ ಮೇರೆಗೆ ನುಡಿಯುವ ಏಸಾಜಿಯನ್ನು ಕುರಿತು ತಾರಾಬಾಯಿಯು—"ನೀಚಾ, ಈಗ ನಾನು ನಿನ್ನ ಕೈಯಲ್ಲಿ ಸಿಕ್ಕಿರುವೆನೆಂದು ತಿಳಿದು ನನ್ನ ಮುಂದೆ ನನ್ನ ತಂದೆಯನ್ನು ಆತನ ಪಶ್ಚಾತ್ ದುಷ್ಟನೆಂದು ಹೇಳಿಯುವೆಯಾ? ನಮ್ಮ ತಂದೆಯನ್ನು ಮೋಸದಿಂದ ಕೊಲ್ಲಿಸಿದ ನಿನ್ನ ಮಹಾರಾಜನನ್ನು ನೀನು ಏನೆಂದು ಕರೆಯುವೆ, ನಾನು ಏನೆಂದು ಕರೆಯಲಿ ಹೇಳು! ನಾವು ಒಡ್ಡಿದ ಬಲೆಯು ಹರಿದದ್ದರಿಂದ ಉಪಾಯವಿಲ್ಲದಾಗಿದೆ; ಆದರೆ ನಮ್ಮ ಆ ಉರುಲಿನ ಬಲೆಯಲ್ಲಿ ನಿನ್ನ ಈ ದುಷ್ಟ ಶಿವಾಜಿಯು ಬಿದ್ದು ಸತ್ತಿದ್ದರೆ, ಮುಯ್ಯಕ್ಕೆ ಮುಯ್ಯ ತೀರಿಸಿಕೊಂಡಂತೆ ಆಗುತ್ತಿತ್ತು! ಆದರೆ ಮಾಡುವದೇನು ದೈವಬಲವು ನಿಮಗೆ ಅನುಕೂಲವಾಗಿರುತ್ತದೆ, ನಮಗೆ ಪ್ರತಿಕೂಲವಾಗಿರುತ್ತದೆ. ಈ ವಿಶ್ವಾಸಘಾತಕಿಯಾದ ಹೈಮವತಿಯನ್ನು ಇಟ್ಟುಕೊಳ್ಳುವ ಇಚ್ಛೆಯು ನನಗೆ ಯಾಕೆ ಆಯಿತೋ ತಿಳಿಯದು," ಎಂದು ನುಡಿದು ಮಹಾರಾಜರನ್ನು ಕುರಿತು—"ಶಿವಾಜೀ, ಈಗ ನಾನು ನಿನ್ನ ಕೈಯಲ್ಲಿ ಸಿಕ್ಕಿದ್ದೇನೆ; ಕಡಿದು ಎರಡು ತುಂಡುಮಾಡು, ಬೇಡೆನ್ನುವದಿಲ್ಲ. ಈ ಕರಿಗಾಲ ಹೈಮವತಿಯಿಂದ ನನ್ನ ಕೆಲಸವು ಕೆಟ್ಟು ಹೋಯಿತು. ಈಕೆಯು ನಿನಗೆ ಮರುಳಾಗಿದ್ದಾಳೆ. ಈಕೆಯನ್ನು ಇಟ್ಟುಕೋ. ಈಕೆಯು ನಿನ್ನ ಪ್ರಾಣವನ್ನು ಉಳಿಸಿರುವಳು. ಈಕೆಯ ಗಂಡನು ಈವರೆಗೆ ವಿಜಾಪುರದ ಬಾದಶಹನ ಅನ್ನವನ್ನು ತಿಂದು, ಆತನ ಮೇಲೆ ತಿರುಗಿಬಿದ್ದು, ಈಕೆಯನ್ನು ಕಟ್ಟಿಕೊಂಡು ನಿನಗೆ ಸಹಾಯ ಮಾಡುವದಕ್ಕಾಗಿ ವಿಜಾಪುರದಿಂದ ಬರುತ್ತಿದ್ದನು; ಆದರೆ ಉಂಡಮನೆ ಗಳ ಏಣಿಸುವ ಈ ಕೆಟ್ಟ ಗುಣವು ದೇವರ ಮನಸ್ಸಿಗೆ ಹ್ಯಾಗೆ ಬರಬೇಕು? ಆತನು ಪಠಾಣರ ಕೈಯಿಂದ ಈಕೆಯ ಗಂಡನನ್ನು ಹಾದಿಯಲ್ಲಿಯೇ ಕೊಲ್ಲಿಸಿದನು. ನಿನ್ನ ಹೊರತು ಬೇರೆ ಯಾರೂ ಈಕೆಗೆ ಗತಿಯಿಲ್ಲ. ಈಕೆಯನ್ನು ನೀನು ಸ್ವೀಕ

ರಿಸು. ನನ್ನನ್ನು ಕೊಂದು ನಿಶ್ಚಿಂತನಾಗು. ಅನ್ನಲು, ಮಹಾರಾಜರು ಆಕೆಯ ಕಠೋರ ಮಾತುಗಳನ್ನು ಕೇಳಿ ಕ್ಷಣಮಾತ್ರ ಸುಮ್ಮನಿದ್ದು—"ನನ್ನ ಪ್ರಾಣರಕ್ಷಣ ಮಾಡಿದ ಈ ಸಾಧ್ವಿಯು ನನಗೆ ತಾಯಿ ಸಮಾನಳು, ಈಕೆಯ ಸಂರಕ್ಷಣವನ್ನು ನಾನು ಮಾಡಿಯೇ ಮಾಡುವೆನು; ಆದರೆ ನೀನು ಇನ್ನು ಮೇಲೆ ನನ್ನ ತಂಗಿಯಂತೆ ನನ್ನ ಬಳಿಯಲ್ಲಿರು. ನಿನ್ನ ತಂದೆಯ ಮೇಲೆ ಇಷ್ಟು ಭಕ್ತಿಯನ್ನಿಟ್ಟಿರುವ ನೀನು, ನನ್ನನ್ನು ಅಣ್ಣನೆಂದು ತಿಳಿದರೆ ನನ್ನ ಮೇಲೆಯೂ ಅಷ್ಟೇ ಭಕ್ತಿಯನ್ನು ಇಡುವೆಯೆಂಬದರಲ್ಲಿ ಸಂಶಯವಿಲ್ಲ; ಆದ್ದರಿಂದ ನೀನು ನನ್ನನ್ನು ಅಣ್ಣನೆಂದು ತಿಳಿ; ಎಂದು ಹೇಳಿದನು. ಅದಕ್ಕೆ ತಾರೆಯು—ಏನು? ನಿನ್ನನ್ನು ನಾನು ಅಣ್ಣನೆಂದು ತಿಳಿಯಲಾ? ನನ್ನ ತಂದೆಯ ಪ್ರಾಣಹರಣ ಮಾಡಿದಾತನು ನನ್ನ ಅಣ್ಣನಾಗಬಹುದೆ? ಈ ಮಾತು ಕಾಲತ್ರಯದಲ್ಲಿಯೂ ಆಗುವಹಾಗಿಲ್ಲ. ಶಿವಾಜೀ, ನಿನ್ನ ಶತ್ರುಗಳಲ್ಲಿ ಒಬ್ಬರು ಕಡಿಮೆಯಾಗಬೇಕೆಂದು ನೀನು ಇಚ್ಛಿಸುತ್ತಿದ್ದರೆ, ಈಗಲೇ ನನ್ನನ್ನು ಕೊಂದುಬಿಡು. ನೀನು ಎಷ್ಟು ದೊಡ್ಡ ಮನಸ್ಸುಮಾಡಿ ನನ್ನನ್ನು ಬಿಟ್ಟರೂ, ನನ್ನ ದ್ವೇಷಬುದ್ಧಿಯು ಹೋಗಲಾರದು. ಶ್ರೀ ರಾಮನು ತಾಟಕೆಯನ್ನು ಲಕ್ಷ್ಮಣನಿಂದ ಕೊಲ್ಲಿಸಿದಂತೆ, ನೀನು ನನ್ನನ್ನು ಈ ಏಸಾಜಿಯಿಂದಾದರೂ ಕೊಲ್ಲಿಸು. ನಾನು ಹೆಂಗಸೆಂದು ನನ್ನ ಮೇಲೆ ಅಂತಃಕರಣವನ್ನು ಮಾಡಬೇಡ. ಹೆಂಗಸಾದದ್ದಕ್ಕಾಗಿ ನನಗೆ ಬಹಳ ಪಶ್ಚಾತ್ತಾಪವಾಗುತ್ತದೆ. ದೇವರು ನನ್ನನ್ನು ಗಂಡಸಾಗಿ ಹುಟ್ಟಿಸಿದ್ದರೆ, ಎಷ್ಟು ವಿಧದಿಂದ ನಾನು ನಿನ್ನನ್ನು ಗೋಳಾಡಿಸುತ್ತಿದ್ದೆನೆಂಬದನ್ನು ಈಗೇನು ಹೇಳಲಿ? ತಂದೆಯ ಖೂನಿನ ಸೇಡನ್ನು ತೀರಿಸಿಕೊಳ್ಳದೆಯಂತು ನಾನು ಎಂದೂ ಬಿಡುತ್ತಿದ್ದಿಲ್ಲ!

ತಾರೆಯು ಈ ಮಾತುಗಳನ್ನು ಕೇಳಿ ಮಹಾರಾಜರು ನಕ್ಕರು. ಆ ಮೇಲೆ ಅವರು ಆಕೆಗೆ—"ತಂಗೀ, ಸದ್ಯಕ್ಕೆ ನಾನು ನಿಮ್ಮಿಬ್ಬರನ್ನು ಆಯಿಶಾ ಸಾಹೇಬರ ಬಳಿಗೆ ಕರಕೊಂಡು ಹೋಗುವೆನು. ಆಮೇಲೆ ಅವರ ಅಪ್ಪಣೆ ಏನಾಗುತ್ತದೆಂಬದನ್ನು ನೋಡೋಣ," ಎಂದು ನುಡಿದು, ಅವರು ಪ್ರತಾಪಗಡಕ್ಕೆ ಹೋಗುವದಕ್ಕಾಗಿ ಮೇಲಕ್ಕೆ ಏಳತೊಡಗಿದರು; ಆದರೆ ಅಷ್ಟರಲ್ಲಿ ತಾರಾಬಾಯಿಯ ಲಮಾಣಿ ಜನರು ಅವರನ್ನು ಮುತ್ತಿದರು.

ಅದನ್ನು ನೋಡಿದ ಕೂಡಲೆ ತಾರಾಬಾಯಿಯ ಮೋರೆಯು ಹಿಗ್ಗಿ ಇಷ್ಟಗಲವಾಯಿತು! ಆಕೆಯು ಆ ಲಮಾಣೆಗಳನ್ನು ಕುರಿತು—"ಎಲೇ, ನಾವು ಬಹುದಿವಸ ಪಟ್ಟ ಶ್ರಮವು ದುರ್ದೈವದಿಂದ ವ್ಯರ್ಥವಾಯಿತು; ಅದರೂ ಚಂದ್ರರಾವಮೋರೆಯ ಉಪ್ಪನ್ನು ಉಂಡ ಸರದಾರರು ನೀವು, ಈಗಿನ ಲಮಾಣೆಗಳ ವೇಷದಿಂದಲೇ, ನಿಮ್ಮ ಸ್ವಾಮಿಯ ಕೊಲ್ಲಿಸಿದ ಈ ದುಷ್ಟನನ್ನು ತುಂಡರಿಸಿ ಚಲ್ಲಿರಿ, ಕ್ಷಣವಾದರೂ ವಿಲಂಬ ಮಾಡಬೇಡಿರಿ. ಹು, ಹಿರಿಯಿರಿ ಕತ್ತಿಗಳನ್ನು. ನಿಮ್ಮ ವೈರಿಗಳು ಐದೇ ಜನರಿರುವರು, ಇವರಲ್ಲಿ ಒಬ್ಬಳು ಹೆಂಗಸಿರುವಳು; ಯಾವನು ನನ್ನ ತಂದೆಯ ಕೊಲೆಯ ಸೇಡನ್ನು ಕೈಮುಟ್ಟಿ ತೀರಿಸುವನೋ, ಅವನಿಗೆ ಹತ್ತು ಊರುಗಳ ಇನಾಮು. ಈ ಖಂಡ್ಯಾನು ಬಂದನು. ಖಂಡ್ಯಾ, ಖಂಡೇರಾವ, ನಿನ್ನ ಪ್ರತಿಜ್ಞೆಯು ಎತ್ತಹೋಯಿತು?" ಎಂದು ಕೇಳಲು, ಒಬ್ಬರೂ ಆಕೆಗೆ ಉತ್ತರವನ್ನು ಕೊಡಲಿಲ್ಲ. ಮಹಾರಾಜರ ಪ್ರತ್ಯಕ್ಷ ಮೂರ್ತಿಯನ್ನು ನೋಡಿದ ಕೂಡಲೇ ಅವರ ಕೈಕಾಲುಗಳೇ ಏಳದಾದವು, ಒಬ್ಬರೂ ಮುಂದಕ್ಕೆ ಹೆಜ್ಜೆಗಳನ್ನು ಇಡದೆ ಚಿತ್ರದಲ್ಲಿಯ ಗೊಂಬೆಗಳಂತೆ ನಿಂತಲ್ಲಿ ನಿಂತುಬಿಟ್ಟರು, ಆ ಮಹಾ ಪುರುಷನ ದಿವ್ಯ ತೇಜಸ್ಸನ್ನು ಭೇದಿಸಿ ಹೋಗುವ ತ್ರಾಣವು ಒಬ್ಬನಿಗೂ ಆಗಲಿಲ್ಲ; ಖಂಡೇರಾಯನು ಸ್ವಲ್ಪ ಮುಂದಕ್ಕೆ ಹೋಗಲು ಯತ್ನಿಸಿದಾಗ, ಯಾರೋ ಆತನನ್ನು ಹಿಂದಕ್ಕೆ ಜಗ್ಗಿದಂತೆ ಆಗುತ್ತಿತ್ತು. ಮಹಾರಾಜರು ತಾವು ಕುಳಿತಲ್ಲಿ ಸ್ವಸ್ಥವಾಗಿ ಕುಳಿತುಬಿಟ್ಟಿದ್ದರು. ಕೆಲವು ಸರದಾರರ ಮೋರೆಗಳನ್ನು ನೋಡಿ ಅವರಿಗೆ ನಗೆ ಬಂದಿತು; ಆದರೆ ಅದನ್ನು ಅವರು ಹೊರಗೆಡವಲಿಲ್ಲ. ಅವರು ಆ ಲಮಾಣೆಗಳನ್ನು ಕುರಿತು—"ಏಕೆ? ನಿಮ್ಮ ಒಡೆಯಳು ಹೇಳಿದಂತೆ ನೀವು ಏಕೆ ಮಾಡಲೊಲ್ಲಿರಿ? ನೀವು ಹಾಗೆ ಮಾಡದೆಯಿರುವದು ವಾಸ್ತವವೇ ಸರಿ. ಮೊಗಲರು ನಮ್ಮನ್ನೂ, ನಿಮ್ಮನ್ನೂ ಕೂಡಿಯೇ ಪೀಡಿಸಿರುವರು. ಅವರು ನಮ್ಮೆಲ್ಲರಿಗೂ ಮೂಲವಾಗಿದ್ದಾರೆ. ಅವರ ಉಪದ್ರವವನ್ನು ತಪ್ಪಿಸುವದೇ ನನ್ನ ಪ್ರಯತ್ನದ ಉದ್ದೇಶವಾಗಿರುತ್ತದೆ. ಇದರಮೇಲೆ ನಿಮ್ಮ ಮನಸ್ಸಿಗೆ ಬಂದಂತೆ ಮಾಡ ಬಹ್ರಿ. ಕೆಲವರು ಮನೆಯನ್ನು ಕಟ್ಟುತ್ತಿರುವರು, ಕೆಲವರು ಅದನ್ನು ಕೆಡವುವರು. ಈಗ ಅಫಜುಲಖಾನನು ಬಂದಿರುವನು; ಹೇಳಿರಿ, ಅವನಿಗೆ ಈ ಮಹಾರಾಷ್ಟ್ರ

ವನ್ನೂ—ಈ ನಮ್ಮ ಸ್ವರಾಜ್ಯವನ್ನೂ ಒಪ್ಪಿಸಲಾ? ಹೇಳಿರಿ....ಮಹಾರಾಜರ ಮುಖವನ್ನು ನೋಡಿದ ಕೂಡಲೆ ಜನರ ಚಿತ್ತಹರಣವಾಗುತ್ತಿತ್ತು; ಅವರಲ್ಲಿ ಅವರ ಸರಳವಾಣಿಯನ್ನು ಕೇಳಿದ ಬಳಿಕಂತು ಜನವು ಅವರಿಗೆ ವಶವಾಗಿ ಹೋಗುತ್ತಿತ್ತು. ಅದರಂತೆ ಈಗ ಲಮಾಣಿಗಳ ವೇಷವನ್ನು ಧರಿಸಿದ್ದ ಚಂದ್ರರಾವ ಮೋರೆಯ ಸರದಾರರ ಸ್ಥಿತಿಯಾಯಿತು. ಅವರ ಮುಖ್ಯನಾದ ತುಳಾಜಿಯು ಮಹಾರಾಜರನ್ನು ಕುರಿತು—"ಮಹಾರಾಜ, ಮಿಂಚಿ ಹೋದ ಮಾತಿಗೆ ಚಿಂತಿಸಿ ಫಲವಿಲ್ಲ. ನಾವು ಯೋಚಿಸಿದಂತೆ ತಮ್ಮ ಘಾತವಾಗದೆಯಿದ್ದದ್ದೊಂದು ದೊಡ್ಡ ಲಾಭವೇ ಆಯಿತು. ಇನ್ನುಮೇಲಂತು ನಾವು ತಮ್ಮ ಕೂದಲು ಕೊಂಕಿಸಲಾರೆವು. ದಯಮಾಡಿ ನಮಗೆ ತಮ್ಮ ಪದರಿನಲ್ಲಿ ಆಶ್ರಯ ಕೊಟ್ಟು, ನಾವು ಮಾಡುವ ಸೇವೆಯನ್ನು ಪರೀಕ್ಷಿಸ ತಕ್ಕದ್ದು, ಎನ್ನಲು, ಮಹಾರಾಜರು "ಸರಿಸರಿ! ನನ್ನಿಂದ ಸ್ವರಾಜ್ಯವು ಗಟ್ಟಿ ಮುಟ್ಟಿಯಾಗಿ ಸ್ಥಾಪಿಸಲ್ಪಡಬೇಕೆಂದು ದೇವರ ಮನಸ್ಸಿನಲ್ಲಿದ್ದಂತೆ ತೋರುತ್ತದೆ; ಇಲ್ಲದಿದ್ದರೆ ನಾನು, ಈವರೆಗೆ ಬಂದಿದ್ದ ಹಲವು ಸಂಕಟಗಳೊಳಗಿಂದ ಪಾರಾಗಬಹುದೆ? ಅದರಂತೆ, ಶತ್ರುಗಳು ಕೂಡ ನನಗೆ ಮಿತ್ರರಾಗಬಹುದೆ? ಏನೂ ಚಿಂತೆಯಿಲ್ಲ; ಈವರೆಗೆ ನೀವು ಮಾಡಿದ್ದನ್ನು ನಾನು ಮರೆಯುವೆನು; ಹೀಗೆ ಮಾಡದಿದ್ದರೆ ನೆಟ್ಟಗಾಗುತ್ತಿತ್ತೆಂದು ತೋರುವ ವಿಷಯವನ್ನು ನೀವೂ ಮರೆತುಬಿಡಿರಿ. ಇನ್ನು ನಮಗೆ ಅವಶ್ಯಕವಾಗಿರುವ ಉದ್ಯೋಗವನ್ನು ಈಗ ನಾವು ಕೈಕೊಳ್ಳೋಣ. ನೀವು ಹ್ಯಾಗೂ ಲಮಾಣಿಯ ಜನರ ಸೋಗನ್ನು ಹಾಕಿಕೊಂಡಿರುವಿರಷ್ಟೇ? ನೆಟ್ಟಗಾಯಿತು. ಅದೇ ಸೋಗನ್ನು ಇನ್ನು ಕೆಲವು ದಿವಸ ಹಾಕಿಕೊಳ್ಳಿರಿ. ಅಫಜುಲಖಾನನು ಇತ್ತಕಡೆಗೆ ಬರತಕ್ಕವನಿದ್ದಾನೆ. ಆತನಿಗಾಗಿ ವಾಯಿಯಿಂದ ಪ್ರತಾಪಗಡದವರೆಗೆ ಸುಖಕರವಾದ ಪ್ರಶಸ್ತ ಮಾರ್ಗವನ್ನು ಮಾಡಬೇಕಾಗಿದೆ. ಆ ಕೆಲಸವನ್ನು ನೀವೇ ಮಾಡಿರಿ. ಈ ಅರಣ್ಯದ ಗೊತ್ತು ನಿಮಗೆ ಚನ್ನಾಗಿ ಇರುತ್ತದೆ. ಅದರ ಉಪಯೋಗವನ್ನು ಈಗ ಸ್ವಧರ್ಮೋದ್ಧಾರದ ಕಾರ್ಯದಲ್ಲಿ ಮಾಡಿಕೊಡಿರಿ. ಅಫಜುಲಖಾನನು ಸರಳತನದಿಂದ ನಡೆದುಕೊಂಡರೆ ನಾನೂ ಆತನೊಡನೆ ಸರಳತನದಿಂದ ನಡಕೊಳ್ಳುವೆನು; ಅವನು ಏನಾದರೂ ಮೋಸಮಾಡಲು ಯತ್ನಿಸಿದರೆ, ಅದಕ್ಕೆ ತಕ್ಕ ಆಟವನ್ನು ನಾನೂ ಹೂಡುವೆನು. ಅದಕ್ಕೆ

ಅನುಕೂಲವಾಗುವಂತೆ ನೀವು ಮಾರ್ಗವನ್ನು ಮಾಡಿರಿ. ಈ ಏಸಾಜಿಯನ್ನು ನಿಮ್ಮ ಮೇಲೆ ನಿಯಮಿಸುತ್ತೇನೆ. ನಿಮಗೆ ಬೇಕಾಗಿರುವ ಅನುಕೂಲತೆಗಳನ್ನು ಈತನ ಮುಖಾಂತರ ಒದಗಿಸಿಕೊಂಡು ಕೆಲಸವನ್ನು ಪೂರ್ಣ ಮಾಡಿರಿ, ಎಂದು ಹೇಳಿದರು. ಮಹಾರಾಜರ ಈ ಉದಾರ ಮನಸ್ಸನ್ನು ನೋಡಿ, ತುಳಾಜಿಯು ಬೆರಗಾಗಿ ಮಹಾರಾಜರಿಗೆ ಸಾಷ್ಟಾಂಗವಾಗಿ ವಂದಿಸಿ, ಕೈಜೋಡಿಸಿ ಎದ್ದು ನಿಂತುಕೊಂಡು – ಶಿವಾಜಿರಾಜನೇ, ನಿನ್ನನ್ನು ಶಿವಾವತಾರವೆಂದು ಜನರು ಕರೆಯುವುದು ಯಥಾರ್ಥವೇ ಸರಿ! ಯಾಕಂದರೆ, ನೀನು ಶಿವನಂತೆ ಭೋಲಾನಾಥನಾಗಿರುತ್ತಿ. ಒಳ್ಳೇದು, ಇಂದಿನಿಂದ ನಾವು ನಿನ್ನ ನೌಕರರಾದೆವು. ನಿನ್ನ ಮನಸ್ಸು ಪ್ರಸನ್ನವಾಗುವಂತೆ ಮಾರ್ಗವನ್ನು ಬೇಗನೆ ಮಾಡುವೆವು. ಖಾನನು ಸಂತುಷ್ಟನಾಗುವಂತೆ ಮಾರ್ಗದಲ್ಲಿ ಉತ್ತಮವಾದ ವ್ಯವಸ್ಥೆಯನ್ನು ಇಡುವೆವು. ಖಾನನು ಕುಟಿಲತನದಿಂದ ನಡೆದರೆ ಅದರ ವಿಚಾರವನ್ನೂ ಮಾಡಿಡುವೆವು. ಆದರೆ ಅಫಜುಲಖಾನನು ಮೋಸಗಾರನೆಂದು ತಿಳಿದೇ ನೀವು ನಡೆದುಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಈ ಮೇರೆಗೆ ತನ್ನ ಶತ್ರುಗಳು ಮಿತ್ರರಾಗಿ ತನ್ನ ಹಿತವ ಚಿಂತಿಸುವದನ್ನು ನೋಡಿ ಶಿವರಾಯನು ಬಹು ಸಮಾಧಾನಪಟ್ಟು, ಮನಸ್ಸಿನಲ್ಲಿ ಭವಾನೀ ಮಾತೆಯನ್ನು ಕೊಂಡಾಡಿದನು. ಹೈಮವತಿಯ ವಿಷಯವಾಗಿಯಂತು ಆತನು ಅತ್ಯಂತ ಕೃತಜ್ಞನಾಗಿದ್ದನು. ಆತನು ಏಸಾಜಿಯನ್ನು ಕುರಿತು—"ಏಸಾಜೀ, ಈ ಸಾಧ್ವಿಯ ಯೋಗ್ಯತೆಯು ಬಹು ದೊಡ್ಡದು. ಈಕೆಯನ್ನು ಹಡೆದ ತಾಯಿ–ತಂದೆಗಳು ಬಹು ಪುಣ್ಯವಂತರು. ಈಕೆಯು ಪಾಣಿಗ್ರಹಣ ಮಾಡಿದ ಪುರುಷ ಶ್ರೇಷ್ಠನೂ ಪುಣ್ಯವಂತನೇ ಸರಿ. ನಾನಂತು ಈಕೆಯನ್ನು ಹಡೆದ ತಾಯಿಗೇ ಸಮಾನವೆಂದು ಭಾವಿಸುವೆನು. ಹಡೆದ ತಾಯಿಯಾದರೂ ತನ್ನ ಒಬ್ಬನೇ ಒಬ್ಬ ಮಗನ ಪ್ರಾಣರಕ್ಷಣದ ವಿಷಯದಲ್ಲಿ ಸಹ ಇಷ್ಟು ಸ್ವಾರ್ಥತ್ಯಾಗವನ್ನು ಮಾಡುವಳೋ ಇಲ್ಲವೊ ಎಂಬ ಬಗ್ಗೆ ನಿಶ್ಚಯದಿಂದ ಹೇಳಲಾಗುವದಿಲ್ಲ. ಏಸಾಜೀ, ನನಗೆ ಇಂಥ ಪುಣ್ಯಶಾಲಿಗಳ ಸಹಾಯವಿದ್ದದ್ದರಿಂದಲೇ ನಾನು ಹಲವು ಸಂಕಟಗಳಿಂದ ಮುಕ್ತನಾಗುತ್ತ ಬಂದಿದ್ದೇನೆ. ಮತ್ತು ಹಿಡಿದ ಕೆಲಸಗಳೂ ಕೈಗೂಡುತ್ತ

ಬಂದಿವೆ. ಈ ಲವಮಾಣಿಗಳನ್ನೇ ನೋಡು, ಅವರು ಮೊದಲು ನನ್ನ ಶತ್ರುಗಳಾಗಿದ್ದವರು ಈಗ ಮಿತ್ರರಾಗಿದ್ದಾರೆ. ಅವರ ಮೇಲೆ ವಿಶ್ವಾಸವಿಟ್ಟು ನಾನು ಅವರ ಕಡೆಗೆ ಮಾರ್ಗ ಮಾಡುವ ಕೆಲಸವ ಒಪ್ಪಿಸಿದ್ದನ್ನು ನೋಡಿ ನಿನಗೆ ಸಂಶಯವು ಉತ್ಪನ್ನವಾಗಿರಬಹುದು; ಆದರೆ ಹಾಗೆ ಸಂಶಯಪಡುವ ಕಾರಣವಿಲ್ಲ. ಈ ಬಲಿಷ್ಠರಿಗೆ ಈಗ ನಮ್ಮ ನಾಲ್ಕು ಜನರನ್ನು ಕೊಲ್ಲಲಿಕ್ಕೆ ತಡವಾಗುತ್ತಿತ್ತೆ? ಅವರು ಸೌಮ್ಯರಾಗಿ ಮಿತ್ರಭಾವವನ್ನು ವಹಿಸಿದ ಬಳಿಕ, ನಾವೂ ದೊಡ್ಡ ಮನಸ್ಸು ಮಾಡಬೇಕು. ಇದೆಲ್ಲ ಶ್ರೀ ಸಮರ್ಥರ ಕೃಪಾ ಪ್ರಭಾವವೆಂದು ನೀನು ತಿಳಿದುಕೋ!

೧೦ನೆಯ ಪ್ರಕರಣ.

ಸಂಶಯ ಪಿಶಾಚಿಯು.

ಮಹಾರಾಜರು ಹೈಮವತಿಯನ್ನು ಬಹುಮಾನ ಪೂರ್ವಕವಾದ ಆದರದಿಂದ ಸಂಗಡ ಕರಕೊಂಡು, ಎಲ್ಲ ಪರಿವಾರದೊಡನೆ ಪ್ರತಾಪಗಡಕ್ಕೆ ಬಂದರು. ಅವರು ತಾರಾಬಾಯಿಯನ್ನೂ ಆದರದಿಂದ ಸಂಗಡ ಕರಕೊಂಡು ಬರತಕ್ಕವರಿದ್ದರು; ಆದರೆ ಆಕೆಗೆ ಸಂತಾಪವಾಯುವಾದಂತಾಗಿ ಆಕೆಯು ಒಮ್ಮಿಂದೊಮ್ಮೆ ಓಡಿ ಹೋದವಳು, ಯಾರ ಕೈಗೂ ಸಿಗಲಿಲ್ಲ; ಆದ್ದರಿಂದ ಅವರು ನಿರುಪಾಯರಾಗಿ ಆಕೆಯ ಶೋಧಕ್ಕೋಸ್ಕರ ತುಳಾಜಿಗೆ ಹೇಳಿಬಂದಿದ್ದರು. ಮಹಾರಾಜರು ದುರ್ಗವನ್ನು ಮುಟ್ಟಿದ ಕೂಡಲೆ ಹೈಮವತಿಯನ್ನು ಜೀಜಾಬಾಯಿಸಾಹೇಬರವರ ಕಡೆಗೆ ಕಳಿಸಿ, ಸ್ವಲ್ಪಹೊತ್ತಿನಮೇಲೆ ತಾವು ಸ್ವತಃ ತಾಯಿಯ ದರ್ಶನಕ್ಕೆ ಹೋದರು. ಮಹಾರಾಜರು ದೊಡ್ಡ ಗಂಡಾಂತರಕ್ಕೆ ಗುರಿಯಾಗಿದ್ದರೆಂತಲೂ, ಪರಮೇಶ್ವರ ಕೃಪೆಯಿಂದಲೇ ಆ ಗಂಡಾಂತರದಿಂದ ಪಾರಾದರೆಂತಲೂ, ಜೀಜಾಬಾಯಿಯವರು ಕೇಳಿದ್ದರಿಂದ, ಮಗನನ್ನು ಯಾವಾಗ ನೋಡೇನೆನ್ನುವ ಹಾಗೆ ಅವರಿಗೆ ಆಗಿತ್ತು. ಮಗನ ಪುನರ್ಜನ್ಮವಾಯಿತೆಂದು ಅವರು ತಿಳಿದರು. ಮಹಾರಾಜರನ್ನು ಕರೆಯಲಿಕ್ಕೆ ಮನುಷ್ಯರ ಮೇಲೆ ಮನುಷ್ಯರು ಬರತೊಡ

ಗಿದರು. ತಮಗೊದಗಿದ ಗಂಡಾಂತರದ ವರ್ತಮಾನವು ತಾಯಿಗೆ ತಿಳಿದಿರುವದರಿಂದ ತಮ್ಮನ್ನು ನೋಡಲಿಕ್ಕೆ ಅವರು ಆತುರಪಡುತ್ತಿರುವರೆಂಬುದು ಮಹಾರಾಜರಿಗೆ ಗೊತ್ತಿತ್ತು. ಆದ್ದರಿಂದ ಅವರು ತಡಮಾಡದೆ ತಾಯಿಯ ದರ್ಶನಕ್ಕೆ ಹೋಗಿದ್ದರು. ಮಗನನ್ನು ನೋಡಿದ ಕೂಡಲೆ ಜೀಜಾಬಾಯಿಯವರ ಕಣ್ಣುಗಳೊಳಗಿಂದ ಆನಂದಬಾಷ್ಪಗಳು ಉದುರಿದವು. ಅವರು ಚರಣಕ್ಕೆರಗಿ ಮೇಲಕ್ಕೆದ್ದ ಮಗನ ಮೇಲೆ ಎಷ್ಟೋ ಪದಾರ್ಥಗಳನ್ನು ಇಳಿದೆಗೆದು ಒಗೆದರು. ತಮ್ಮ ಮಗನು ಈದಿನ ತಮ್ಮ ಹೊಟ್ಟೆಯಿಂದ ಹೊಸದಾಗಿ ಹುಟ್ಟಿ ಬಂದ ಹಾಗೆ ಅವರಿಗಾಗಿತ್ತು. ಆದರೆ ಮಗನನ್ನು ಬದುಕಿಸಲಿಕ್ಕೆ ಮುಖ್ಯ ಕಾರಣರಾರಾದರೆಂಬದು ಇನ್ನೂ ಅವರಿಗೆ ಗೊತ್ತಾಗಿದ್ದಿಲ್ಲ; ಮಹಾರಾಜರು ಬಂದ ಬಳಿಕ ಯಾವತ್ತು ವೃತ್ತಾಂತವನ್ನು ಹೇಳಲು ಹೈಮವತಿಯ ವಿಷಯವಾಗಿ ಜೀಜಾಬಾಯಿಯವರ ಮನಸ್ಸಿನಲ್ಲಿ ವಿಲಕ್ಷಣ ಕೌತುಕವು ಉತ್ಪನ್ನವಾಯಿತು. ಆ ಕೌತುಕದ ಭರದಲ್ಲಿ ಜೀಜಾಬಾಯಿಯವರ ಮೈಮೇಲಿನ ಎಚ್ಚರವು ತಪ್ಪಿದಂತಾಗಿ, ಅವರು ತ್ವರೆಯಿಂದ ಹೈಮವತಿಯ ಬಳಿಗೆ ಹೋಗಿ ಆಕೆಯನ್ನು ಬಿಗಿಯಾಗಿ ಅಪ್ಪಿಕೊಂಡರು. ಕಣ್ಣಲ್ಲಿ ನೀರುಗಳು ತುಂಬಿರಲು, ಅವರು ಹೈಮವತಿಯನ್ನು ಕುರಿತು—"ಅಮ್ಮಾ, ನಾನು ಶಿವಬಾನನ್ನು ಹಡೆದೆನು; ಆದರೆ ನೀನು ಆತನಿಗೆ ಇಂದು ಜೀವದಾನವನ್ನು ಕೊಟ್ಟೆ! ಇಂದು ನೀನು ಆತನನ್ನು ನನ್ನ ಉಡಿಯಲ್ಲಿ ಹಾಕಿರುತ್ತೀ, ಆದ್ದರಿಂದ ನೀನೇ ಆತನ ನಿಜವಾದ ತಾಯಿಯು"........ ಎಂಬಿವೇ ಮೊದಲಾದ ಅಂತಃಕರಣದ ಶಬ್ದಗಳಿಂದ ಆಕೆಯನ್ನು ಗೌರವಿಸಿದರು. ಆಮೇಲೆ ಅವರು ಬಹಳ ಹೊತ್ತು ಸುಮ್ಮನೆ ಕುಳಿತುಕೊಂಡು ಮತ್ತೆ ಹೈಮವತಿಯನ್ನು ಕುರಿತು—"ಒಟ್ಟಿಗೆ ಆ ಚಂದ್ರರಾವ ಮೋರೆಯ ಮಗಳು ಇಂಥ ಘಾತಕ ತಂತ್ರವನ್ನು ಒಡ್ಡಿದಳಲ್ಲವೆ? ಆಕೆಯ ಮನಸ್ಸಿನಲ್ಲಿ ಏನು ವಿಕಲ್ಪಭಾವವು ಉತ್ಪನ್ನವಾಗಿತ್ತೋ ಏನೋ? ಆದರೆ ನಮ್ಮ ಶಿವಬಾನು ಆಕೆಯನ್ನು ಶಿಕ್ಷಿಸಲಿಲ್ಲವಷ್ಟೇ? ಈಗ ಆಕೆಯು ಎಲ್ಲಿ ಇರುವಳು? ಆಕೆಯ ಗತಿ ಏನಾಯಿತು? ಆಕೆಯನ್ನು ಇಲ್ಲಿಗೆ ಕರಕೊಂಡು ಬರಬೇಕಾಗಿತ್ತು. ಪಾಪ! ತಂದೆಯ ಮರಣದಿಂದ ಆ ಹುಡಿಗೆಗೆ ಎಷ್ಟು ವ್ಯಸನವಾಗಿರಬಹುದಲ್ಲ! ಹಾಗಿಲ್ಲದಿದ್ದರೆ ಆಕೆಯು ತನ್ನ ಜೀವದ ಹಂಗು ಇಲ್ಲದೆ, ಪರಿಪರಿಯ ಕಷ್ಟಗಳನ್ನು ಭೋಗಿಸಿ, ಸೇಡು ತೀರಿಸಿಕೊಳ್ಳುವ ಸಾಹಸಕ್ಕೆ

ಯಾಕೆ ಹೋಗುತ್ತಿದ್ದಳು? ದೃಢನಿಶ್ಚಯದ ಆ ವೀರ ಪುತ್ರಿಯನ್ನು ಇಲ್ಲಿಗೆ ಕರಕೊಂಡು ಬಂದಿದ್ದರೆ, ಸ್ವಲ್ಪ ದಿವಸಗಳಲ್ಲಿ ಆಕೆಯ ಮನಸ್ಸು ತಿರುಗ ಬಹುದಾಗಿತ್ತು."

ಈ ಮೇರೆಗೆ ನುಡಿದು ಜೀಜಾಬಾಯಿಸಾಹೇಬರು ಮಹಾರಾಜರ ಬಳಿಗೆ ಬಂದು, ತಾರೆಯ ವಿಷಯವಾಗಿ ಪ್ರಶ್ನಮಾಡಿದರು. ಅದಕ್ಕೆ ಮಹಾ ರಾಜರು ಆಕೆಯ ಶೋಧದ ಬಗ್ಗೆ ತುಳಾಜಿಗೆ ಹೇಳಿ ಬಂದಿರುವ ಸಂಗತಿ ಯನ್ನು ತಿಳಿಸಿದರು; ಆದರೆ ಅಷ್ಟರಿಂದ ಆ ಉದಾರಾಂತಃಕರಣದ ಸಾಧ್ವಿಗೆ ಸಮಾಧಾನವಾಗಲಿಲ್ಲ. ಅವರ ಸ್ವಜನಾಭಿಮಾನವೂ, ಗುಣಗ್ರಹಣ ಶಕ್ತಿಯೂ ವಿಲಕ್ಷಣವಾದಂಥವು. ಅವರು ಕೂಡಲೆ ಮಗನಿಗೆ—"ಮತ್ತೆ ಯಾರನ್ನಾದರೂ ನೋಡಲಿಕ್ಕೆ ಕಳಿಸು. ಬುದ್ಧಿಭ್ರಂಶವಾಗಿ ಆ ಹುಡಿಗೆಯು ಸಿಕ್ಕಕಡೆಗೆ ಓಡಿಹೋದರೆ ಎಷ್ಟು ಅನರ್ಥವಾದೀತಲ್ಲ! ಆಕೆಯನ್ನು ಹುಡು ಕಿಸಿ ಇಲ್ಲಿಗೆ ಕರಕೊಂಡು ಬಾ. ನಾನು ಆಕೆಯ ಶುಸ್ರೂಷೆಯನ್ನು ಮಾಡು ವೆನು. ನಿನ್ನಿಂದಲೇ ತನ್ನ ತಂದೆಯ ಕೊಲೆಯಾಯಿತೆಂದು ಆ ಹುಡುಗೆಯು ತಿಳಿದುಕೊಂಡಿರುವದರಿಂದ, ಅದು ನಿನ್ನ ಮೇಲೆ ಸಿಟ್ಟಾಗತಕ್ಕದ್ದೇ ಸರಿ. ಹು, ಕಳಿಸು ಕಳಿಸು. ಇನ್ನು ನಾಲ್ಕು ಜನರನ್ನು ನಾಲ್ಕೂ ದಿಕ್ಕಿಗೆ ಕಳಿಸು. ಹಾಗೆ ಮಾಡದಿದ್ದರೆ ಆಕೆಯ ಗೊತ್ತು ಹತ್ತಲಿಕ್ಕಿಲ್ಲ. ಈಗ ಆಕೆಯು ನಿನ್ನ ರಾಜ್ಯ ದಲ್ಲಿರುವಳು. ಆಕೆಯ ಪ್ರಾಣಕ್ಕೆ ಅಪಾಯವು ಒದಗಿದರೆ, ನಿನಗೆ ಸ್ತ್ರೀ ಹತ್ಯೆಯ ದೋಷವು ಬರುವದು. ಶಿವಬಾ, ಏನೇ ಆಗಲಿ, ಸ್ತ್ರೀಹತ್ತೆಯ ಪಾತಕವು ನಿನ್ನ ಪಾಲಿಗೆ ಬರಬೇಡ. ನಡೆ, ಏಳು; ನಮ್ಮ ಆ ತಿಳಿಗೇಡಿ ತಾರೆಯನ್ನು ಹುಡುಕಲಿಕ್ಕೆ ಯಾರನ್ನು ಕಳಿಸುತ್ತೀ ಕಳಿಸು," ಎಂದು ಒಂದೇ ಸವನೆ ದುಂಬಾಲು ಬಿದ್ದರು. ತಮ್ಮ ತಾಯಿಯ ಈ ಗಡಿಬಿಡಿಯನ್ನು ನೋಡಿ ಮಹಾರಾಜರಿಗೆ ಸ್ವಲ್ಪ ನಗೆ ಬಂದಿತು. ಅವರು ತಾಯಿಯನ್ನು ಕುರಿತು—"ಅವ್ವಾ, ನನ್ನ ಪ್ರಾಣಹರಣ ಮಾಡಲಿಕ್ಕೆ ಟೊಂಕ ಕಟ್ಟಿ ನಿಂತು ಕೊಂಡಿದ್ದ ಆ ಹೆಣ್ಣುಮಗಳ ಮೇಲೆಯೂ ಇಷ್ಟು ನಿನ್ನ ಪ್ರೇಮವೆ? ಹೋಗ ಲೊಲ್ಲಳೇಕೆ, ಆಕೆಗೇನಾದರೂ ಅಪಾಯವಾದರೆ ಅದಕ್ಕೆ ನಾವು ಮಾಡುವ ದೇನು? ತನ್ನ ದುಷ್ಕರ್ಮದ ಫಲವನ್ನು ಆಕೆಯು ಭೋಗಿಸುವಳು. ಆಕೆಯು ಬದುಕಿಯಿದ್ದರೆ ಮತ್ತೆ ಏನಾದರೂ ದುರಾಲೋಚನೆಮಾಡಿ ನನಗೆ

ಕೇಡು ಬಗೆಯುವವಳೇ. ಅಂದಬಳಿಕ ಹೊರಗಿನ ಅರಿಷ್ಟವು ಹೊರಗೆ ಹೋಗಲೊಲ್ಲದೇಕೆ. ನಾವೇನು ಆಕೆಗೆ ಕೇಡು ಬಗೆದಿರುವದಿಲ್ಲ. ಬುದ್ಧಿ ಭ್ರಂಶವಾಗಿ ಆಕೆಯು ಅರಣ್ಯದಲ್ಲಿ ಓಡಿಹೋಗಿರುವದರಿಂದ, ಯಾವಾ ವರೂ ದುಷ್ಟ ಶ್ವಾಪದಗಳ ಭಕ್ಷ್ಯಸ್ಥಾನದಲ್ಲಿ ಆಕೆಯು ಬೀಳಬಹುದು; ಇಲ್ಲವೆ ಮತ್ತೆ ಯಾವದಾದರೂ ಅಪಘಾತವಾಗಿ ಆಕೆಯು ತನ್ನ ಪ್ರಾಣಕ್ಕೆ ಎರವಾಗಬಹುದು; ಆದರೆ ನಾವು ಆಕೆಯನ್ನು ಹುಡುಕಿಕೊಂಡು ಬರುವ ಅವಶ್ಯವೇನು?"

ಮಹಾರಾಜರು ಯಾವ ಭಾವದಿಂದಲೇ ಈ ಮಾತುಗಳನ್ನು ಆಡಿರ ಲೊಲ್ಲರೇಕೆ, ಅವನ್ನು ಕೇಳಿ ಜೀಜಾಬಾಯಿಸಾಹೇಬರಿಗೆ ಬಹಳ ಆಶ್ಚರ್ಯ ವಾಯಿತು. ಅವರು ಚಕಿತಮುದ್ರೆಯಿಂದ ತಮ್ಮ ಮಗನನ್ನು ನೋಡಿ— "ಶಿವಬಾ, ನೀನೇ ಈ ಮಾತುಗಳನ್ನು ಆಡುವೆಯೋನು? ನೀನೇ ಆಡುತ್ತಿ ದ್ದರೆ ನನ್ನ ಮನಸ್ಸನ್ನು ಪರೀಕ್ಷಿಸುವದಕ್ಕಾಗಿ ಆಡುತ್ತೀಯೆಂದು ತಿಳಿಯು ತ್ತೇನೆ. ನೀನು ಯಾವ ಭಾವನೆಯಿಂದಲೇ ಆಡಿರಲೊಲ್ಲೆಯೇಕೆ, ಆ ಹುಡುಗೆಯನ್ನು ಹುಡುಕಿಸಿ ನನಗೆ ಒಪ್ಪಿಸು. ಆಮೇಲೆ ನನಗೆ ಸರಿದೋರಿ ದಂತೆ ಆಕೆಯ ವ್ಯವಸ್ಥೆಯನ್ನು ನಾನೇ ಮಾಡುವೆನು. ಅಲ್ಲೋ ಹುಚ್ಚಾ, ಆ ಹುಡುಗೆಯು ಕ್ರೂರ ಶ್ವಾಪದಗಳ ಬಾಯಿಗೆ ಬೀಳುವದಂತು ಇರಲಿ, ಹೊತ್ತು ಹೇಳಿಕೇಳಿ ಬರುವದಿಲ್ಲ. ಯಾವಕಾಲಕ್ಕೆ ಯಾರು ಆಕೆಗೆ ಭೆಟ್ಟಿ ಯಾದಾರು, ಆಕೆಯ ಮೇಲೆ ಎಂಥ ಪ್ರಸಂಗವು ಬಂದೀತೆಂಬದನ್ನು ಯಾರು ಹೇಳಬೇಕು? ಆದ್ದರಿಂದ ಸುಮ್ಮನೆ ಏನಾದರೂ ಮಾತಾಡುತ್ತ ಕಾಲಹರಣ ಮಾಡಬೇಡ. ಆಕೆಯನ್ನು ಹುಡುಕಿಸಿ ಇತ್ತಕಡೆಗೆ ಕಳಿಸು. ಎಷ್ಟಾದರೂ ಆಕೆಯು ಜಾವಳಿಯ ಮೋರೆಯ ಮಗಳು. ಆಕೆಯು ಏನು ಮಾಡಿದಳೆಂಬದರ ಕಡೆಗೆ ನಾನೂ ನೋಡುವದಿಲ್ಲ; ನೀನೂ ನೋಡಬೇಡ. ಕ್ಷಣವಾದರೂ ವಿಲಂಬಮಾಡದೆ ಯಾರನ್ನಾದರೂ ಕಳಿಸಿ ಅರಣ್ಯವನ್ನೆಲ್ಲ ಶೋಧಿಸು. ಇನ್ನು ನೀನು ಏನು ಹೇಳಿದರೂ ನಾನು ಕೇಳುವದಿಲ್ಲ," ಎಂದು ನುಡಿದರು. ತಾಯಿಯ ಮಾತಿಗೆ ಪ್ರತಿಯಾಗಿ ಮಹಾರಾಜರು ಏನು ಮಾತಾಡುವ ಹಾಗಿದ್ದಿಲ್ಲ. ಈಗ ಮಾತಾಡಿದ್ದಾದ್ದರೂ ಸುಮ್ಮನೆ ಸಲಿಗೆ ಯಿಂದ ಮಾತಾಡಿದ್ದರು. ತಮ್ಮ ತಾಯಿಯು ಎಷ್ಟು ದಯಾಳುವು, ಎಷ್ಟು

ಕನಿಕರಹೃದವಳು! ತನ್ನ ಪ್ರಾಣಹರಣಮಾಡಲಿಕ್ಕೆ ನಿಂತವರ ಮೇಲೆಯೂ ಆಕೆಯ ಅಂತಃಕರಣವೆಷ್ಟು! ಅವರ ಯೋಗಕ್ಷೇಮದ ವಿಷಯದ ಆಸಕ್ತಿ ಯೆಷ್ಟು! ಇಂಥ ತಾಯಿಯ ಹೊಟ್ಟೆಯಲ್ಲಿ ಹುಟ್ಟಿ ಬಂದ ನಾನು ಧನ್ಯನೇ ಸರಿ! ಎಂಬ ವಿಚಾರಗಳು ಅವರ ಮನಸ್ಸಿನಲ್ಲಿ ಉತ್ಪನ್ನವಾಗಲು, ಅವರು ಅತ್ಯಂತ ಭಕ್ತಿಯಿಂದಲೂ, ಆದರದಿಂದಲೂ, ಅಭಿಮಾನದಿಂದಲೂ ತಾಯಿ ಯನ್ನು ನೋಡಹತ್ತಿದರು. ಆಮೇಲೆ ಅವರು ನಾಲ್ಕೈದು ಜನರನ್ನು ತಾರಾ ಬಾಯಿಯ ಶೋಧಕ್ಕಾಗಿ ಜಾವಳಿಯ ಅರಣ್ಯಕ್ಕೆ ಕಳಿಸಿ, ತಾವು ತಾಯಿಯ ಅನುಮತಿಯನ್ನು ಪಡೆದು ಹೊರಟುಹೋದರು.

ಅಫಜುಲಖಾನನು ಭೆಟ್ಟಿಗೆ ಬರುತ್ತೇನೆಂದು ಹೇಳಿಕಳಿಸಿದಾಗಿನಿಂದ ಮಹಾರಾಜರಿಗೆ ಒಂದು ಪ್ರಕಾರದ ಚಿಂತೆಯು ಉತ್ಪನ್ನವಾಗಿತ್ತು. ಅವನೇನು ಸರಳಮನಸ್ಸಿನಿಂದ ಬರುವನೋ, ವಕ್ರಮನಸ್ಸಿನಿಂದ ಬರುವನೋ ಎಂಬುದು ಗೊತ್ತಾಗದ್ದರಿಂದ, ತಾವು ಅವನೊಡನೆ ಹ್ಯಾಗೆ ವರ್ತಿಸಬೇಕೆಂಬು ದನ್ನು ಅವರು ನಿರ್ಧರಿಸಲಾರದವರಾಗಿದ್ದರು. ಅವನು ಠಕ್ಕತನದಿಂದ ಬರು ತ್ತಿದ್ದರೆ, ಠಕ್ಕನಿಗೆ ತಾವು ಮಹಾಠಕ್ಕರಾಗಿ ಅವನ ಸಮಾಚಾರವನ್ನು ತೆಗೆದು ಕೊಳ್ಳಬೇಕೆಂತಲೂ, ಆತನು ಸರಳತನದಿಂದ ಬಂದು ಒಡಂಬಡಿಕೆಯ ಮಾತುಗಳನ್ನು ಆಡಿಕೊಂಡು, ನಮ್ಮ ಸ್ವರಾಜ್ಯದ ಉಪಭೋಗಕ್ಕೆ ಆಸ್ಪದ ಕೊಟ್ಟರೆ, ತಾವೂ ಅವನೊಡನೆ ಸರಳತನದಿಂದ ನಡೆದು ಅವನ ಯೋಗ್ಯ ಕರಾರುಗಳನ್ನು ಒಪ್ಪಿಕೊಂಡು ಅವನನ್ನು ಸುರಕ್ಷಿತವಾಗಿ ವಿಜಾಪುರಕ್ಕೆ ಕಳಿಸಬೇಕೆಂತಲೂ ಅವರು ನಿಶ್ಚಯಿಸಿದ್ದರು; ಆದರೆ ಖಾನನ ಮನಸ್ಸಿ ನೊಳಗಿದ್ದದ್ದೇ ಅವರಿಗೆ ತಿಳಿಯದಾಗಿತ್ತು. ಸಾಧಾರಣವಾಗಿ ನೋಡಿದರೆ, ಖಾನನ ಪ್ರಯತ್ನವು ಸರಳತನದ್ದಲ್ಲವೆಂಬ ಹಾಗೆ ಅವರಿಗೆ ತೋರುತ್ತಿತ್ತು. ಈ ಸಂದೇಹಸ್ಥಿತಿಯೇ ಮಹಾರಾಜರ ಚಿಂತೆಗೆ ಕಾರಣವಾಗಿತ್ತೆಂದು ಹೇಳ ಬಹುದು; ಆದರೆ ಬಹಳ ಹೊತ್ತು ಚಿಂತೆಮಾಡುತ್ತ ಕುಳಿತುಕೊಳ್ಳುವದು ಅವರ ಸ್ವಭಾವವಾಗಿದ್ದಿಲ್ಲ. ಅವರ ಸ್ವನಿಷ್ಠೆಯು ಬಹು ಬಲವತ್ತರ ವಾದದ್ದಿದ್ದದ್ದರಿಂದ, ಚಿಂತನದ ವಿಚಾರದನಂತರ ಸ್ವಲ್ಪ ಹೊತ್ತಿನಲ್ಲಿಯೇ ಅವರಿಗೆ ಒಮ್ಮೆಲೆ ಸಮಾಧಾನವು ಆಗುತ್ತಿತ್ತು. ತಮ್ಮ ಕೈಯಿಂದ ಒಂದಿ ಲ್ಲೊಂದು ದೇಶಕಾರ್ಯವಾಗಲಿ, ಧರ್ಮಕಾರ್ಯವಾಗಲಿ ಆಗುವದೆಂದು

ಅವರು ದೃಢವಾಗಿ ನಂಬಿದ್ದರು. ಪರಮೇಶ್ವರನು ತಮ್ಮನ್ನು ಗಂಡಾಂತರ ಗಳಿಂದ ಪಾರಮಾಡುತ್ತ ಬಂದಿದ್ದು, ಕಡೆಗೆ ಅಫಜುಲಖಾನನ ಕೈಯಿಂದ ತಾವು ನಾಶಹೊಂದುವದಕ್ಕಾಗಿಯೇ ಅಲ್ಲವೆಂದು ಅವರು ತಿಳಿದುಕೊಂಡಿ ದ್ದರು. ಈ ಬಗೆಯ ವಿಚಾರಗಳು ಅವರ ಮನಸ್ಸಿನಲ್ಲಿ ಅಲೆದಾಡುತ್ತಿರಲು, ಒಬ್ಬ ಹುಜರೆಯು ಬಂದು—"ಮಹಾರಾಜ, ಹೊರಗೆ ಒಬ್ಬ ಹೇಜೀಬನು ಬಂದಿದ್ದಾನೆ. ಅವನು ಅಫಜುಲಖಾನನ ಕಡೆಯಿಂದ ಬಂದಿರುವನಂತೆ. ತಾನು ಹೇಳುವ ಮಾತುಗಳನ್ನು ಮಹಾರಾಜರ ಮುಂದೆಯೇ ಹೇಳ ಬೇಕೆಂದು ಖಾನನ ಅಪ್ಪಣೆಯಾಗಿರುವದಂತೆ" ಎಂದು ಹೇಳಿದನು. ಅದನ್ನು ಕೇಳಿ ಮಹಾರಾಜರು ವಿಚಾರಮಗ್ನರಾದರು. ಪರಸ್ಪರರ ವಕೀಲರು ಒಬ್ಬರ ಬಳಿಗೊಬ್ಬರು ಹೋಗುತ್ತ ಬರುತ್ತಲಿದ್ದು, ಮತ್ತೆ ನಡುವೆ ಹೇಜೀಬನು ಯಾಕೆಬಂದಿರಬಹುದೆಂದು ಅವರು ಆಲೋಚಿಸತೊಡಗಿದರು. ವಿಚಾರಾಂತ ದಲ್ಲಿ ಹೇಜೀಬನನ್ನು ಕಾಣುವದು ಯೋಗ್ಯವೆಂದು ನಿರ್ಧರಿಸಿ, ಆತನನ್ನು ಕರೆತರುವ ಬಗ್ಗೆ ಹುಜರೆಯನ್ನು ಆಜ್ಞಾಪಿಸಿದರು. ಆಗ ಹುಜರೆಯೂ ಅಲ್ಲಿ ಕೂಡಿದ ಮಹಾರಾಜರ ಹಿತಚಿಂತಕಜನರೂ ಕೂಡಿ, ಪದ್ಧತಿಯಂತೆ ಹೇಜೀಬ ನನ್ನು ಶೋಧಿಸಿದರು. ಯಾರಿಗೆ ಗೊತ್ತು, ಯಾವದಾದರೂ ವೈರಿಯ ಕಡೆ ಯಿಂದ ಬಂದವನು ಮಹಾರಾಜರ ಅಪಘಾತಮಾಡಿಯಾನೆಂದು ತಿಳಿದು, ಅರಿಯದವರನ್ನೂ, ಸಂಶಯ ಬರುವವರನ್ನೂ ಶೋಧಿಸಿಬಿಡುವ ಸಾಂಪ್ರ ದಾಯವಿತ್ತು. ಹೇಜೀಬನ ಬಳಿಯಲ್ಲಿ ಸಸ್ತ್ರಗಳಂತು ಇದ್ದೇ ಇಲ್ಲ. ಅವನ ಬಳಿಯಲ್ಲಿ ಖಾನನು ಕಳಿಸಿದ್ದ ಪತ್ರವು ಕೂಡ ಇದ್ದಿಲ್ಲ. ಆಗ ಅವರು ಹೇಜೀಬ ನನ್ನು ಕುರಿತು—"ನೀನು ಖಾನನ ಕಡೆಯಿಂದಲೇ ಬಂದಿರುವೆಯೆಂಬದಕ್ಕೆ ಆಧಾರವೇನು?" ಎಂದು ಕೇಳಿದರು. ಅದಕ್ಕೆ ಹೇಜೀಬನು—"ನಾನು ಹೇಳುವದೇ ಆಧಾರವು," ಎಂದು ಉತ್ತರಕೊಟ್ಟನು; ಆದರೆ ಒಳಗೆ ಬಿಡಲು ಮಹಾರಾಜರ ಅಪ್ಪಣೆಯಾದದ್ದರಿಂದ, ಯಾರೂ ಹೆಚ್ಚಿಗೆ ಮಾತಾಡದೆ ಹೇಜೀಬನನ್ನು ಕರಕೊಂಡು ಹೋಗಿ ಮಹಾರಾಜರ ಮುಂದೆ ನಿಲ್ಲಿಸಿ ದರು. ಆಗ ಮಹಾರಾಜರು ಆತನನ್ನು ಒಮ್ಮೆ ನೋಡಲು, ಆ ಹೇಜೀ ಬನು—"ಮಹಾರಾಜ, ನಾನು ತಮ್ಮ ಶತ್ರುವಲ್ಲ, ಶತ್ರುವಿನ ಕಡೆಯಿಂದಲೂ ಬಂದಿರುವುದಿಲ್ಲ. ನಾನು ನಿಮ್ಮ ಭಕ್ತನಿರುತ್ತೇನೆ. ನಿಮ್ಮ ಮೇಲಿನ ಭಕ್ತಿ

ಯಿಂದ ಖಾನನ ಕಡೆಯ ಗುಪ್ತ ಸಂಗತಿಯನ್ನು ತಿಳಕೊಂಡು ನಿಮಗೆ ಹೇಳ ಲಿಕ್ಕೆ ಬಂದಿದ್ದೇನೆ. ಅದು ತಮ್ಮ ಹೊರತು ಬೇರೆಯವರ ಕಿವಿಗೆ ಮುಟ್ಟ ಲಾಗದು. ಏಕಾಂತವಿದ್ದಹೊರತು ನಾನು ಒಂದು ಅಕ್ಷರವನ್ನೂ ಉಚ್ಚರಿ ಸುವ ಹಾಗಿಲ್ಲ; ಆದ್ದರಿಂದ ಈ ಜನರನ್ನು ಬೇರೆ ಕಡೆಗಾದರೂ ಕಳಿಸಿರಿ. ಇಲ್ಲವೆ ನನ್ನನ್ನಾದರೂ ಬೇರೆ ಏಕಾಂತದ ಸ್ಥಳಕ್ಕೆ ಕರಕೊಂಡುಹೋಗಿರಿ.

ಈ ಮೇರೆಗೆ ನುಡಿದು ಹೇಜೀಬನು ಒಮ್ಮೆ ಎಲ್ಲಾ ಜನರ ಕಡೆಗೆ ನೋಡಿದನು. ಇಷ್ಟರ ಮೇಲೆ ಸನ್ನೆ ತಿಳಿದು ನಾವು ಹೊರಟು ಹೋಗ ಬೇಕೋ ಮಹಾರಾಜರು ಹೋಗಿರೆನ್ನುವವರೆಗೆ ನಿಂತುಕೊಳ್ಳಬೇಕೋ ಎಂದು ಮಹಾರಾಜರ ಪರಿವಾರದ ಜನರು ವಿಚಾರಮಾಡಹತ್ತಿದರು. ಆಗ ಮಹಾರಾಜರ ಬಳಿಯಲ್ಲಿ ಅವರ ನಂಬಿಗೆಯ ಸ್ವಲ್ಪ ಜನರೇ ಇದ್ದರು. ಅವ ರಲ್ಲಿ ಮೋರೋಪಂತ ಪೇಶವೆಯ ಮನಸ್ಸಿನಲ್ಲಿ ಒಂದು ವಿಚಾರವು ಹೊಳೆ ದದ್ದರಿಂದ ಆತನು ಮಹಾರಾಜರನ್ನು ಕುರಿತು—''ಮಹಾರಾಜ, ತಾವು ಇದೇ ಈಗ ಒಂದು ಮಹತ್ಸಂಕಟದಿಂದ ಪಾರಾದದ್ದು, ಅಂಬಾಬಾಯಿಯ ಕೃಪೆಯಿಂದಲ್ಲದೆ ಬೇರೆಯಿಲ್ಲ. ಹೀಗಿದ್ದು, ಅಪರಿಚಿತನಾದ ಒಬ್ಬ ಮನುಷ್ಯನ ಏಕಾಂತದ ಯೋಗವನ್ನು ತಂದುಕೊಂಡು, ನಿಷ್ಕಾರಣವಾಗಿ ಸಂಕಟದ ಕಲ್ಪನೆಯನ್ನು ಉಂಟುಮಾಡಬಾರದೆಂದು ನಾನು ಪ್ರಾರ್ಥಿಸುವೆನು. ಯಾರು ಯಾವ ರೂಪದಿಂದ ಮಹಾರಾಜರ ಅಹಿತವನ್ನು ಚಿಂತಿಸಬಹು ದೆಂಬುದನ್ನು ಹೇಳಲಾಗುವದಿಲ್ಲ. ತಾವು ಏಸಾಜಿಯ ಶೋಧಕ್ಕೆ ಹೊರಟಿ ರಲು, ಭಯಂಕರವಾದ ಸಂಕಟವು ಪ್ರಾಪ್ತವಾಯಿತು. ಶ್ರೀ ಭವಾನೀ ಮಾತೆಯು ಆ ಸಂಕಟದಿಂದ ಪಾರುಮಾಡದಿದ್ದರೆ ಸ್ವರಾಜ್ಯದ ಗತಿಯೇನಾ ಗುತ್ತಿತ್ತು! ನಮ್ಮಂಥ ನೌಕರರು ಇರುತ್ತಿರಲು, ಸಣ್ಣ ಪುಟ್ಟ ಕೆಲಸಗಳಿಗೆ ಮಹಾರಾಜರು ಮುಂದುವರಿಯುವದೇಕೆ? ಇಂಥ ಹೇಜೀಬ ಗೀಜೀಬರ ವಿಶ್ವಾಸವನ್ನು ಮಹಾರಾಜರು ಹಿಡಿಯತಕ್ಕದ್ದಲ್ಲ. ಇವರು ಶತ್ರುಗಳ ಕಡೆ ಯಿಂದ ಬಂದ ಗುಪ್ತಚಾರರು ಇರಬಹುದು." ಎಂದು ನುಡಿಯುತ್ತಿರಲು, ಮಹಾರಾಜರು ನಕ್ಕು ಪೇಶವೆಯನ್ನು ಕುರಿತು—''ಪೇಶವೇ, ನಿಮ್ಮ ಮಾತಿ ನಲ್ಲಿ ಅರ್ಥವಿರುವದಿಲ್ಲೆಂದು ಹೇಳಲಾಗುವದಿಲ್ಲ; ಆದರೆ ಯಾವಾಗಲೂ ನೌಕರರನ್ನೇ ಮುಂದೆಮಾಡಿ ತಾನು ಹಿಂದೆ ಉಳಿಯುವ ಯಜಮಾನನು,

ಎಷ್ಟುದಿನ ತನ್ನ ಯಾಜಮಾನ್ಯವನ್ನು ಕಾಯ್ದುಕೊಳ್ಳುವನೋ ನಾವು ಅರಿಯೆವು. ತನ್ನ ಸೇವಕನು ಸಂಕಟಕ್ಕೆ ಗುರಿಯಾದಾಗಾದರೂ ಯಜಮಾನನು ಅವನನ್ನು ಬಿಡಿಸಲು ಯತ್ನಿಸಬೇಕಾಗುವದು; ಆದರೆ ಅದಿರಲಿ, ಜಾವಳಿಯ ಅರಣ್ಯದಲ್ಲಿ ನಮ್ಮ ವೈರಿಗಳು ಇಂಥ ಭಯಂಕರವಾದ ಗುಹೆಯನ್ನುಂಟು ಮಾಡಿದರು; ಅದರಲ್ಲಿ ಮದ್ದಿನ ಚೀಲಗಳನ್ನು ತುಂಬಿ ಇಟ್ಟರು; ನನ್ನನ್ನು ಯುಕ್ತಿಯಿಂದ ಅಲ್ಲಿಗೆ ಕರೆದುಕೊಂಡು ಹೋಗಿ ಕೂಡ್ರಿಸುವ ಸ್ಥಳದಲ್ಲಿ ಕೂಡ್ರಿಸಿದರು; ಆದರೆ ನಿಮ್ಮಲ್ಲಿ ಒಬ್ಬನಿಗಾದರೂ ಅದರ ಗಂಧವು ಹತ್ತಿರಬೇಕು! ಹೀಗೆಯೇ ಏನು ಎಲ್ಲ ಕಾರ್ಯಗಳಲ್ಲಿ ನೀವು ದಕ್ಷತೆಯನ್ನು ಕಾಯ್ದುಕೊಳ್ಳುವುದು? ಈವರೆಗೆ ನಾನು ಈ ಮಾತನ್ನು ಬಾಯಿ ಬಿಟ್ಟು ಆಡಿದ್ದಿಲ್ಲ. ಇಂಥ ಗುಪ್ತವಾದ ಒಳಸಂಚು ಇಷ್ಟು ದಿವಸ ಹೊರಬೀಳದೆ ಇರಲಿಕ್ಕೆ ನಮ್ಮ ಅಜಾಗರೂಕತೆಯೇ ಕಾರಣವಲ್ಲವೆ? ಬೇಕೆಂತ ಸಂಕಟವನ್ನು ತಂದುಕೊಳ್ಳಬಾರದೆಂಬ ನಿಮ್ಮ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ; ಆದರೆ ನನಗೆ ಸಂಕಟಗಳು ಒದಗದಂತೆ, ಅಥವಾ ಯಾರಾದರೂ ಸಂಕಟವನ್ನು ತಂದಾಗ ಅದರ ನಿವಾರಣ ಮಾಡಲಿಕ್ಕೆ, ಅಥವಾ ಅದರ ಸುದ್ದಿಯನ್ನು ತಿಳಕೊಳ್ಳಲಿಕ್ಕೆ, ಈವರೆಗೆ ನೀವೇನು ಉಪಾಯಗಳನ್ನು ಯೋಚಿಸುತ್ತ ಬಂದಿರುವಿರಿ? ಹೆಚ್ಚು ಮಾತಾಡುವದು ನಮ್ಮ ಪದ್ಧತಿಯಲ್ಲ. ಇಷ್ಟರ ಮೇಲಿಂದ ನೀವು ತಿಳಿದುಕೊಳ್ಳತಕ್ಕದ್ದನ್ನು ತಿಳಿದುಕೊಳ್ಳಿರಿ. ಹೇಜೀಬನ ವೇಷದಿಂದ ಬಂದ ಮನುಷ್ಯನು ಪ್ರಾಮಾಣಿಕನಿರುತ್ತಾನೆ; ಆತನ ಮೋರೆಯ ಲಕ್ಷಣದ ಮೇಲಿಂದ ನಮ್ಮ ನಂಬಿಕೆಯಾಗಿದೆ; ಆದ್ದರಿಂದ ನಾವು ಏಕಾಂತದಲ್ಲಿ ಆತನ ಭೆಟ್ಟಿಯನ್ನು ತಕ್ಕೊಳ್ಳುವೆವು. ಆತನಿಂದ ಘಾತವಾಗುವ ಸಂಭವವಿಲ್ಲ; ಒಂದು ಪಕ್ಷದಲ್ಲಿ ಸಂಭವಿಸಿದರೆ ನಮ್ಮ ಸಂರಕ್ಷಣವನ್ನು ನಾವು ಮಾಡಿಕೊಳ್ಳುವೆವೆಂಬ ನಂಬಿಗೆಯು ಮೋರೋಪಂತ ಪೇಶವೆಯವರಿಗಾದರೂ ನಿಶ್ಚಯದಿಂದ ಇರಲೇಬೇಕು.

ಮಹಾರಾಜರು ಬಹಳಮಾಡಿ ಸಿಟ್ಟಿಗೇಳುವದು ಕಡಿಮೆ. ಸಿಟ್ಟು ಬಂದರೆ ಅವರು ಯಾವ ಹಂಗು ಇಡುತ್ತಿದ್ದಿಲ್ಲ. ಕರಿಸದೆ ಬರುವುದು, ಕೇಳದೆ ಏನಾದರೂ ಹೇಳುವದು, ತಾವು ಸ್ವಬುದ್ಧಿಯಿಂದ ನಡೆಯದೆ ಹೇಳಿಕೆಯ ಮಾತಿನಂತೆ ನಡೆಯುವೆವೆನಿಸಿಕೊಳ್ಳುವುದು ಮಹಾರಾಜರಿಗೆ

ಸರ್ವಥಾ ಸೇರುತ್ತಿದ್ದಿಲ್ಲ. ಖಾನನ ಕಡೆಯಿಂದ ಹೇಜೀಬನು ಬಂದಿರುವ ನೆಂಬದನ್ನು ಕೇಳಿ, ಪೇಶವೆ ಮೊದಲಾದವರು ಮಹಾರಾಜರ ಬಳಿಗೆ ಕರಿ ಸದೆ ಬಂದಿದ್ದರು; ತಾವು ಏನೂ ಪ್ರಶ್ನೆ ಮಾಡದಿದ್ದರೂ ಮೋರೋಪಂತನು ಹಿರಿಯತನ ತೋರಿಸಿ ನಡುವೆ ಮಾತಾಡಿದನು; ಮತ್ತು ಆತನ ಮಾತು ಗಳ ಮೇಲಿಂದ ಮಹಾರಾಜರು ಹೇಳಿಕೆಯ ಮಾತು ಕೇಳುತ್ತಾರೆಂಬ ಸಂಶಯ ಬರುವ ಸಂಭವವಿತ್ತು. ಈ ಎಲ್ಲ ಅಪರಾಧಗಳಿಗಾಗಿ ಪೇಶ ವೆಯು ಮಹಾರಾಜರಿಂದ ಹೀಗೆ ಸಿಟ್ಟು ಮಾಡಿಸಿಕೊಳ್ಳಬೇಕಾಯಿತು. ಇದಲ್ಲದೆ, ಶುದ್ಧಾಂತಃಕರಣದಿಂದ ತನ್ನ ಬಳಿಗೆ ಬಂದವರ ಮನಸ್ಸನ್ನು ನೋಯಿಸುವದು ಮಹಾರಾಜರ ಮನಸ್ಸಿಗೆ ಬರುತ್ತಿದ್ದಿಲ್ಲ. ಮಹಾ ರಾಜರು ಹೀಗೆ ಸಿಟ್ಟಿಗೆದ್ದಾಗ ಅವರೆದುರಿಗೆ ಮಾತಾಡುವ ಧೈರ್ಯವು ಯಾರಿಗೂ ಆಗುತ್ತಿದ್ದಿಲ್ಲ. ಇನ್ನು ತಮ್ಮ ಮಾತು ನಡೆಯದೆಂದು ತಿಳಿದು ಪೇಶವೆಯೇ ಮೊದಲಾದವರು ಹೊರಟುಹೋದರು. ಅವರು ತಮ್ಮ ಕಡೆಗೆ ಬೆನ್ನುಮಾಡಿದಕೂಡಲೆ ಮಹಾರಾಜರು ನಕ್ಕು ಹೇಜೀಬನನ್ನು ಕುರಿತು—ಹು, ಹೇಳು; ಇನ್ನು ನಿನ್ನ ಗುಪ್ತ ಮಾತು ಯಾವದದನ್ನು? ನಮ್ಮ ನಂಬಿ ಗೆಯ ಜನರನ್ನೂ ಕೂಡ ಅವರ ಮನಸ್ಸು ನೊಂದೀತೆಂಬದರ ಕಡೆಗೆ ಲಕ್ಷ ಕೊಡದೆ ಹೊರಗೆ ಹಾಕಿದೆವು. ಇನ್ನು ನಿನ್ನ ಗುಪ್ತ ಸಂಗತಿಯನ್ನು ಕೇಳ ಲಿಕ್ಕೆ ಒಂದು ಹುಳವು ಕೂಡ ಇಲ್ಲಿ ಸುಳಿಯದೆಂಬದನ್ನು ಚನ್ನಾಗಿ ಲಕ್ಷ ದಲ್ಲಿಡು. ಮೊದಲು ನೀನು ಯಾರೆಂಬದನ್ನು ಹೇಳು.

ಹೇಜೀಬ—ಮಹಾರಾಜ, ಅದೊಂದು ಮಾತನ್ನು ಬಿಟ್ಟು ಉಳಿದ ಬೇಕಾದ ಮಾತನ್ನು ಕೇಳಿರಿ. ನಾನು ಯಾವನೇ ಯಾಕೆ ಇರಲೊಲ್ಲೆನು; ತಮ್ಮ ಏಕನಿಷ್ಠೆಯ ದಾಸಾನುದಾಸನಿರುತ್ತೇನೆಂಬುದನ್ನು ಮಾತ್ರ ಅರಿಕೆ ಮಾಡಿಕೊಳ್ಳುವೆನು. ನಾನು ಹಿಡಿದ ಕೆಲಸವು ಮುಗಿಯುವವರೆಗೆ ನನ್ನ ವೃತ್ತಾಂತವನ್ನು ಹೇಳಿದರೆ ಹಿತವಾಗದು. ತಮ್ಮ ಪ್ರಾಣ ರಕ್ಷಣದ ವಿಷಯವಾಗಿ ನನ್ನ ಪ್ರಾಣವನ್ನು ಅರ್ಪಿಸಲಿಕ್ಕೆ ಹಿಂದೆ ಮುಂದೆ ನೋಡೆನು. ನಾನು ಅಂಥ ಭಯಂಕರ ಸಾಹಸವನ್ನು ಮಾಡಿ ಅಫಜುಲಖಾನನನ್ನು ಕಂಡು ಅವನ ಹೊಟ್ಟೆಯೊಳಗಿನ ಮಾತನ್ನು ತಿಳಕೊಂಡು ಬಂದಿದ್ದೇನೆ. ನಮ್ಮಿಬ್ಬರ ಹೊರತು ಮೂರನೆಯವರಿಗೆ ಆ ಮಾತು ಗೊತ್ತಿರುವದಿಲ್ಲ.

ದರ್ಶನ ಕೊಡುವುದಕ್ಕಾಗಿ ತಾವು ಖಾನನನ್ನು ಕರೆದಿರುತ್ತೀರಿ. ಆತನು ಅದಕ್ಕೆ ಒಡಂಬಟ್ಟು ತಮಗೆ ಅನುಕೂಲವಾಗಿ ನಡೆಯುವಂತೆ ತೋರಿಸುತ್ತಾನೆ; ಆದರೆ ಅದೆಲ್ಲ ಅವನ ನಟನೆಯು. ಅಂತರಂಗದಲ್ಲಿ ನಿಮ್ಮನ್ನು ನಾಶಗೊಳಿಸಬೇಕೆಂದು ಆತನು ನಿಶ್ಚಯಿಸಿರುತ್ತಾನೆ. ತಾವು ಎಚ್ಚರದಿಂದ ಇರಬೇಕು.

ಶಿವಾಜಿ—ಯಾತರ ಮೇಲಿಂದ? ನೀನು ಹೇಳುವ ಮಾತು ನಿಜವೆಂದು ಯಾತರಮೇಲಿಂದ ತಿಳಿದುಕೊಳ್ಳಬೇಕು? ಇದಕ್ಕೆ ಏನಾದರೂ ಆಧಾರ ಬೇಕಲ್ಲವೆ?

ಹೇಜೀಬ—ಮಹಾರಾಜ, ಇದಕ್ಕಾಗಿ ನಾನು ಬೇರೆ ಆಧಾರವೇನು ಕೊಡಲಿ? ಈವರೆಗೆ ನಾಲ್ಕು ಕಡೆಗೆ ಹಬ್ಬಿರುವ ಖಾನನ ಕುಟಿಲ ತಂತ್ರದ ಕೀರ್ತಿಯು ಒಂದನೆಯ ಆಧಾರವು; ನನ್ನ ಶುದ್ಧಾಂತಃಕರಣವು ಎರಡನೆಯ ಆಧಾರವು; ಇದಕ್ಕೂ ಹೆಚ್ಚಿನ ಆಧಾರವು ಬೇಕಾಗಿದ್ದರೆ, ತಮ್ಮ ಅಗಾಧವಾದ ತರ್ಕ ಶಕ್ತಿಯು ಮೂರನೆಯ ಆಧಾರವು. ಮಹಾರಾಜ ಇದಕ್ಕೂ ಹೆಚ್ಚಿನ ಆಧಾರಗಳನ್ನು ಈ ಮಾತಿನಲ್ಲಿ ಕೊಡಲು ನಾನು ಶಕ್ತನಲ್ಲ. ಖಾನನು ತಮ್ಮ ದರ್ಶನಕ್ಕಾಗಿ ಸೈನ್ಯವಿಲ್ಲದೆ ಬರುತ್ತೇನೆಂದು ಒಡಂಬಟ್ಟಿದ್ದರೂ, ಆತನು ೧೫೦೦ ಜನ ಕುದುರೆಯ ಸವಾರರನ್ನು ಸಂಗಡ ಕರೆದುಕೊಂಡು ಬರಬೇಕೆಂದು ಯೋಚಿಸಿರುತ್ತಾನೆ. ಅವನ ಈ ಯೋಚನೆಯು ನನ್ನ ಹೊರತು ಬೇರೆ ಯಾರಿಗೂ ಗೊತ್ತಿರುವದಿಲ್ಲ.

ಶಿವಾಜಿ—ನಿನಗೆ ಆ ಸಂಗತಿಯು ಹ್ಯಾಗೆ ಗೊತ್ತಾಯಿತು ಹೇಳಬಾರದೇ?

ಮಹಾರಾಜರ ಈ ನಿರ್ಧಾರದ ಮಾತನ್ನು ಕೇಳಿ ಹೇಜೀಬನು ಸುಮ್ಮನೆ ಕುಳಿತನು. ಕೆಲವು ಹೊತ್ತಿನ ಮೇಲೆ ಆತನು ಮಹಾರಾಜರನ್ನು ಕುರಿತು—"ತಮ್ಮ ಆಗ್ರಹವೇ ಇದ್ದರೆ ಹೇಳುತ್ತೇನೆ. ಆದರೆ ಮಹಾರಾಜ ತಾವು ಈ ಮಾತಿನ ವಿಷಯವಾಗಿ ಆಗ್ರಹಪಡಬಾರದು, ಆತಂಕವಿಲ್ಲದೆ ನನ್ನ ಮಾತಿನಲ್ಲಿ ವಿಶ್ವಾಸವಿಡಬೇಕು. ನನ್ನ ಮಾತಿನಲ್ಲಿ ವಿಶ್ವಾಸವಿಟ್ಟರೆ ತಮಗೆ ಹಾನಿಯಿಲ್ಲ, ಲಾಭವೇ ಇರುವದು. ನಾನೇನು ಖಾನನ ಮಾತಿನಲ್ಲಿ ವಿಶ್ವಾಸವಿಡಿರೆಂದು ತಮಗೆ ಹೇಳುವದಿಲ್ಲ; ಜಾಗರೂಕರಾಗಿರಬೇಕೆಂದು ಹೇಳುತ್ತೇನೆ. ಜಾಗರೂಕರಾಗಿರುವಾಗ ತಮಗೆ ಖಾನನ ಅಂಜಿಕೆಯೇನು?

ಹೇಜೀಬನ ಈಮಾತು ಮಹಾರಾಜರಿಗೆ ಅಯೋಗ್ಯವಾಗಿ ತೋರಲಿಲ್ಲ. ಸದ್ಯಕ್ಕೆ ಇದಕ್ಕೂ ಹೆಚ್ಚು ಆಗ್ರಹಪಡುವದು ಯೋಗ್ಯವಲ್ಲವೆಂದು ಅವರು ತಿಳಿದುಕೊಂಡರು. ಅವರು ಹೇಜೀಬನಿಗೆ—"ಒಳ್ಳೇದು, ಹಾಗೇ ಆಗಲಿ ಇನ್ನು ನಾನು ನಿನಗೆ ಹೆಚ್ಚು ಆಗ್ರಹಮಾಡುವದಿಲ್ಲ; ನಿನ್ನ ಮನಸ್ಸಿಗೆ ಪ್ರಶಸ್ತ ಕಂಡಾಗ ಹೇಳಲೊಲ್ಲೆಯೇಕೆ. ನೀನು ನನ್ನ ಸೇವೆಯನ್ನು ಮಾಡು ವೆನೆಂದು ಹೇಳುವೆಯಲ್ಲ. ಆದರೆ ನನ್ನ ಸೇವೆಯನ್ನು ಮಾಡುವದು ಸುಲಭ ವೆಂದು ಮಾತ್ರ ಭಾವಿಸಬೇಡ. ನನ್ನಸೇವೆಯೆಂದರೆ ಸ್ವಧರ್ಮದ, ಸ್ವರಾಜ್ಯದ, ಸ್ವಜನರ ಸೇವೆಯೆಂದು ತಿಳಿ. ಬಹು ಜನರ ಹಿತವನ್ನು ಸಾಧಿಸ ಹೋಗು ವವರಿಗೆ ಎಂದಿಗೂ ಸುಖವಾಗುವದಿಲ್ಲವೆಂಬುದನ್ನು ಚನ್ನಾಗಿ ನೆನಪಿನಲ್ಲಿಡು. ಸುಖವನ್ನಪೇಕ್ಷಿಸುವವನು ಈ ಉಸಾಬರಿಗೆ ಹೋಗತಕ್ಕದ್ದಲ್ಲ, ನಿನ್ನ ಮಾತಿನಲ್ಲಿ ನಾನು ವಿಶ್ವಾಸವಿಟ್ಟು ನಿನ್ನನ್ನು ಈಗ ಹೋಗಗೊಡುವೆನು. ನೋಡೋಣ, ಬಾಯಿಂದ ಅಂದಂತೆ ಕೈ ಮುಟ್ಟಿ ನನ್ನ ಸೇವೆಯನ್ನು ಎಷ್ಟು ಮಾಡುತ್ತೀಯೆಂಬದನ್ನು." ಎಂದು ನುಡಿದು, ಮಹಾರಾಜರು ಹೇಜೀಬನನ್ನು ಕಳಿಸಿ ತಾವು ಒಬ್ಬರೇ ಕುಳಿತುಕೊಂಡು ಆಲೋಚಿಸ ಹತ್ತಿದರು.

ಮಹಾರಾಜರು ತನ್ನ ಮೇಲೆ ಇಷ್ಟು ವಿಶ್ವಾಸವಿಟ್ಟು ಮನ್ನಿಸಿದ್ದರಿಂದ ವೇಷಧಾರಿ ಹೇಜೀಬನಿಗೆ ಪರಮಾನಂದವಾಯಿತು. ಆತನು ನಿಜವಾ ಗಿಯೇ ಮಹಾರಾಜರ ಭಕ್ತನಾಗಿದ್ದನು. ಈವರೆಗೆ ಆತನು ಮಹಾರಾಜ ರನ್ನು ಪ್ರತ್ಯಕ್ಷವಾಗಿ ನೋಡಿದ್ದಿಲ್ಲ. ಈಗ ಪ್ರತ್ಯಕ್ಷ ಅವರ ದರ್ಶನ ವಾದದ್ದರಿಂದಂತು ಹೇಜೀಬನ ಭಕ್ತಿಯು ಮತ್ತಿಷ್ಟು ಹೆಚ್ಚಾಯಿತು. ಇಂಥ ಪುಣ್ಯಶಾಲಿ ಪುರುಷನ ಹಿತವನ್ನು ಯಾವ ಉಪಾಯದಿಂದ ಸಾಧಿಸಬೇ ಕೆಂದು ಆತನು ವಿಚಾರಿಸುತ್ತ ತನ್ನ ಕುದುರೆಯನ್ನು ಹತ್ತಿ ಮುಂದಕ್ಕೆ ಸಾಗಿ ದನು. ಅವನು ಮಾರ್ಗವನ್ನು ಕ್ರಮಿಸುತ್ತಾ ಜಾವಳಿಯ ಅರಣ್ಯವನ್ನು ಹೊಕ್ಕನು. ಆ ಅರಣ್ಯದೊಳಗಿನ ಹಾದಿಯಿಂದ ಹೋಗುವವರು ಬಹು ಎಚ್ಚರದಿಂದ ಹೋಗಬೇಕಾಗುತ್ತಿತ್ತು. ಸ್ವಲ್ಪ ಎಚ್ಚರ ತಪ್ಪಿದರೆ ಹಾದಿ ತಪ್ಪುವದೇ ನಿಶ್ಚಯವು. ಹೇಜೀಬನು ಗಹನ ವಿಚಾರದಲ್ಲಿ ಮಗ್ನನಾದದ್ದ ರಿಂದ ಹಾದಿಯ ಕಡೆಗೆ ಲಕ್ಷಗೊಡಲಿಲ್ಲ. ಅವನ ಕುದುರೆಗೂ ಆ ಹಾದಿಯು

ಹೊಸದಾಗಿತ್ತು. ಬರುವಾಗ ಬಂದಿದ್ದ ಹಾದಿಯಿಂದ ಈಗ ಆತನು ಹೊರಟಿದ್ದಿಲ್ಲ. ಈ ಸ್ಥಿತಿಯಲ್ಲಿ ಮಾರ್ಗವನ್ನು ಕ್ರಮಿಸುತ್ತಿರುವಾಗ ಅವನು ಯಾವಾಗೋ ಹಾದಿಯನ್ನು ತಪ್ಪಿಬಿಟ್ಟನು. ಕುದುರೆಯು ತನ್ನ ಮನಸ್ಸಿಗೆ ಬಂದಂತೆ ಸಾಗಿತ್ತು. ಹೀಗೆ ಬಹಳ ಹೊತ್ತು ಮಾರ್ಗವನ್ನು ಕ್ರಮಿಸಿದ ಬಳಿಕ ಅವನ ಕುದುರೆಯು ಭಯಂಕರವಾದ ಅರಣ್ಯದ ಭಾಗವನ್ನು ಹೊಕ್ಕಿತು. ಆಮೇಲೆಯೂ ಕೆಲವು ಹೊತ್ತು ಹೇಜೀಬನು ಪರಾಧೀನನಾಗಿ ಕುದುರೆ ಒಯ್ದತ್ತ ಸಾಗಿದನು. ಅಷ್ಟರಲ್ಲಿ ಆತನ ಕಿವಿಗೆ "ಹರ ಓಂ, ಹರ ಓಂ, ಹರ ಓಂ ಹರಹರಹರ" ಎಂಬ ಶಬ್ದವು ಬಿದ್ದಿತು. ಕೂಡಲೆ ಆತನು ಬೆಚ್ಚಿ ಬಿದ್ದು ಎದುರಿಗೆ ನೋಡಲು, ಒಂದು ಗಿಡದ ಬುಡದಲ್ಲಿ ತೇಜಃಪುಂಜನಾದ ಒಬ್ಬ ಬಾಲಗೋಸಾವಿಯು ಕುಳಿತಿದ್ದನು. ಆ ಬಾಲಗೋಸಾವಿಯು ನಮ್ಮ ವಾಚಕರಿಗೆ ಅಪರಿಚಿತನಲ್ಲ. ಆ ವೇಷಧಾರಿಯಾದ ಗೋಸಾವಿಯು ಚಂದ್ರರಾವ ಮೋರೆಯ ಮಗಳಾದ ತಾರೆಯೆಂದು ನಾವು ವಾಚಕರಿಗೆ ನೆನಪು ಮಾಡಿಕೊಡುವೆವು. ಮಹಾರಾಜರ ಬಳಿಯಿಂದ ಓಡಿಹೋದ ಆಕೆಯು ಈ ಘೋರಾರಣ್ಯದಲ್ಲಿ ಒಂದು ಗಿಡದ ಹೊದರಿನಲ್ಲಿ ಇರುತ್ತಿದ್ದಳು. ಆ ವಿಲಕ್ಷಣ ಹುಡಿಗೆಯ ಚಾರಿತ್ರ್ಯವು ಆಶ್ಚರ್ಯಕರವೇ ಸರಿ. ಆಕೆಯನ್ನು ನೋಡಿ ಹೇಜೀಬನಿಗೆ ಭಕ್ತಿಯು ಉತ್ಪನ್ನವಾಯಿತು. ಆತನು ಗೋಸಾವಿಯನ್ನು ಭಕ್ತಿಯಿಂದ ನಮಸ್ಕರಿಸಲು ಆತನು—''ಬೇಟಾ, ನೀನು, ಈ ಘೋರಾರಣ್ಯದಲ್ಲಿ ಯಾಕೆ ಬಂದೆ? ನೀನು ಯಾರು? ಎಲ್ಲಿಯವನು? ನಿಜವಾದ ಸಂಗತಿಯನ್ನು ಹೇಳು; ನನ್ನ ಮುಂದೆ ಏನೂ ಮುಚ್ಚಬೇಡ. ಮುಚ್ಚಿದರೆ ಹಿತವಾಗಲಾರದು. ಮನಸ್ಸಿನಲ್ಲಿ ಯಾವ ವಿಧದ ಸಂಕೋಚವನ್ನೂ ಎಣಿಸದೆ ನಿಜವಾದ ವೃತ್ತಾಂತವನ್ನು ಹೇಳು," ಎಂದು ಕೇಳಿದನು.

ಗೋಸಾವಿಯ ತೇಜಃಪುಂಜ ಮೂರ್ತಿಯನ್ನು ನೋಡಿ ಹೇಜೀಬನಿಗೆ ಭಕ್ತಿಯು ಉತ್ಪನ್ನವಾಗಿತ್ತೆಂದು ಮೇಲೆ ಹೇಳಿದೆಯಷ್ಟೇ? ಇಂಥ ತಪಸ್ವಿಗಳ ಅನುಗ್ರಹವನ್ನು ಸಂಪಾದಿಸುವದರಿಂದ ಜನ್ಮವು ಸಫಲವಾಗುವದೆಂದು ತಿಳಿದು ಹೇಜೀಬನು ತನ್ನ ವೃತ್ತಾಂತವನ್ನು ಸಾದ್ಯಂತವಾಗಿ ಹೇಳಿದನು. ಅದನ್ನು ಕೇಳಿದ ಕೂಡಲೆ ಗೋಸಾವಿಗೆ ಆಶ್ಚರ್ಯವಾಯಿತು; ಯಾಕಂದರೆ ಆತನ ವೃತ್ತಾಂತವು ಹೈಮವತಿಯ ವೃತ್ತಾಂತವನ್ನು ಅಚ್ಚಳಿಯದೆ

ಹೋಲುತ್ತಿತ್ತು. ಆದ್ದರಿಂದ ಈತನು ಹೈಮವತಿಯ ಗಂಡನೆಂದು ತಾರೆಯು ನಿಶ್ಚಯಿಸಿದಳು. ಹೈಮವತಿಯ ಮೇಲೆ ತಾರೆಯ ಸಿಟ್ಟು ಎಷ್ಟಿತ್ತೆಂಬದನ್ನು ವಾಚಕರು ಬಲ್ಲರು. ಶಿವಾಜಿ ಮಹಾರಾಜರಂತು ತಾರೆಯ ಶತ್ರುವಾಗಿದ್ದರು. ಮಹಾರಾಜರ ವಿಷಯದ ತಾರೆಯ ಶತ್ರುಭಾವವು ರವಷ್ಟಾದರೂ ಕಡಿಮೆಯಾಗಿದ್ದಿಲ್ಲ. ಶಿವಾಜಿಯು ಹೈಮವತಿಯನ್ನು ಕರಕೊಂಡು ಹೋದದ್ದು ತಾರೆಗೆ ಗೊತ್ತಿತ್ತು. ಈ ಪ್ರಸಂಗವನ್ನು ಶಿವಾಜಿಯ ಸೇಡು ತೀರಿಸಿಕೊಳ್ಳುವ ಕಾರ್ಯಕ್ಕೆ ಉಪಯೋಗಿಸಿದರೆ ಉಪಯೋಗಿಸಿಕೊಳ್ಳಬೇಕೆಂದು ತಿಳಿದು ಆಕೆಯು ಹೇಜೀಬನನ್ನು ಕುರಿತು—

ಗೋಸಾವಿ—ನಿನ್ನ ವೃತ್ತಾಂತವನ್ನು ಸರಳ ಮನಸ್ಸಿನಿಂದ ಹೇಳಿದ್ದಕ್ಕಾಗಿ ನಮ್ಮ ಅಂತರಾತ್ಮನು ಸಂತುಷ್ಟನಾಗಿರುತ್ತಾನೆ; ಆದರೆ ನಿನ್ನ ಹೆಂಡತಿಯು ಕುದುರೆಯನ್ನು ಹತ್ತಿಕೊಂಡು ಎತ್ತೋ ಹೋದಳೆಂದು ನೀನು ಹೇಳಿದೆಯಲ್ಲ; ಇಷ್ಟು ಹೊತ್ತಿಗೆ ಆಕೆಯ ಗತಿಯು ಏನಾಗಿರಬಹುದು?

ಹೇಜೀಬ—ಎರಡನೆಯ ಗತಿಯೇನಾಗಬೇಕು? ಆಕೆಯು ನಿಶ್ಚಯವಾಗಿ ಆತ್ಮಹತ್ಯವನ್ನು ಮಾಡಿಕೊಂಡಿರಬಹುದು.

ಗೋಸಾವಿ—ಇದು ನಿನ್ನ ತಪ್ಪು ತಿಳುವಳಿಕೆಯು. ಪತಿಯ ಮರಣಕ್ಕಾಗಿ ಸ್ತ್ರೀಯರು ಹೀಗೆ ಪ್ರಾಣಕೊಡಹತ್ತಿದರೆ ಜಗತ್ತಿನಲ್ಲಿ ವಿಧವೆಯರ ಸಂಖ್ಯೆಯು ಇಷ್ಟು ಹೆಚ್ಚುತ್ತಿದ್ದಿಲ್ಲ; ಆದ್ದರಿಂದ ನಿನ್ನ ಹೆಂಡತಿಯು ನೀನು ಸತ್ತೆಯೆಂದು ತಿಳಿದು, ಒಂದು ಆಶ್ರಯ ಸ್ಥಾನವನ್ನು ಹುಡುಕಿಕೊಂಡಿರಬಹುದು.

ಹೇಜೀಬ—ನಿಮ್ಮ ಈ ತರ್ಕವು ನನ್ನ ಹೆಂಡತಿಯ ಸಂಬಂಧದಿಂದ ಎಂದೂ ನಿಜವಾಗದು.

ಗೋಸಾವಿ—ಇದು ನಿನ್ನ ಮರುಳತನವು; ಗಂಡಸರು ಮರುಳರೆಂಬುದು ಸುಳ್ಳಲ್ಲ. ಶಿವಾಜಿಯು ಮಹಾಪುರುಷನೆಂದು ತಿಳಿದು ನೀನು ಈಗ ಆತನ ಆಶ್ರಯವನ್ನು ಸಂಪಾದಿಸುವದಕ್ಕೆ ಹೊರಟಿರುವೆಯಷ್ಟೆ? ಅದರಂತೆಯೇ ನಿನ್ನ ಹೆಂಡತಿಯೂ ಆತನ ಆಶ್ರಯವನ್ನು ಪಡೆದಿರುವಳು; ಇದನ್ನು ನನ್ನ ಜ್ಞಾನದೃಷ್ಟಿಯಿಂದ ಹೇಳುವೆನು.

ಹೇಜೀಬ—ಮಹಾರಾಜರು ಪರನಾರೀ ಸೋದರರೆಂಬದು ಪ್ರಸಿದ್ಧ ವಿರುವದು. ಇದಲ್ಲದೆ ಅವರು ಎಂಥ ಉದಾರರು, ಎಂಥ ಮುತ್ಸದ್ದಿಗಳು! ಪ್ರತ್ಯಕ್ಷ ದರ್ಶನವಾದದ್ದರಿಂದ ನನಗೆ ಈ ಮಾತಿನ ಅನುಭವವಾಗಿದೆ. ಅಂಥವರ ಆಶ್ರಯವನ್ನು ನನ್ನ ಹೆಂಡತಿಯು ಪಡೆದಿದ್ದರೆ ಅದರಲ್ಲಿ ವ್ಯತ್ಯಾಸ ವಾದರೂ ಏನು?

ಗೋಸಾವಿ—ನೀನು ವ್ಯತ್ಯಾಸವನ್ನು ಎಣಿಸೆಂದು ನಾನಾದರೂ ನಿನಗೆಲ್ಲಿ ಹೇಳುತ್ತೇನೆ? ಪತಿಯ ಮರಣದ ಕಲ್ಪನೆಯಿಂದ ಪ್ರಾಣ ಕೊಡ ಬಹುದಾಗಿದ್ದ ಹೈಮವತಿಯು, ಪರಪುರುಷನ ಮನೆಯಲ್ಲಿ ಆನಂದದಿಂದ ಇರುವಳೆಂದು ನಾನು ನಿನಗೆ ಹೇಳಿದೆನು. ಇಗೋ, ಇವೇ ಆಕೆಯ ಸೀರೆ ಕುಪ್ಪಸಗಳು. ಇದು ಆಕೆಯ ಕಠಾರಿಯು. ಇವೇ ನೋಡು, ಆಕೆಯ ಸಣ್ಣ ಪುಟ್ಟ ವಸ್ತುಗಳು. ಆಕೆಯು ನನ್ನ ಬಳಿಯಲ್ಲಿ ಕೆಲವು ದಿವಸ ಇದ್ದಳು. ನನ್ನ ಬಳಿಯಿಂದಲೇ ಶಿವಾಜಿಯು ಆಕೆಯನ್ನು ಕರೆದು ಕೊಂಡು ಹೋದನು. ನನ್ನಂಥ ವಿರಕ್ತಳ ಸಹವಾಸಕ್ಕಿಂತ ಶಿವಾಜಿಯ ಸಹವಾಸವು ನಿನ್ನ ಹೆಂಡತಿಗೆ ಪ್ರಿಯವಾಯಿತು! ಆಗಿನ ಪ್ರಸಂಗದಲ್ಲಿಯ ಅವರಿಬ್ಬರ ಮನಸ್ಸಿನ ಸ್ಥಿತಿಯನ್ನು ಪ್ರತ್ಯಕ್ಷ ನೋಡಿದ ನಾನು, ಶಿವಾಜಿಯು ಮಹಾ ನೀಚನೆಂದು ಸ್ಪಷ್ಟವಾಗಿ ಹೇಳುವೆನು. ಆತನು ಎಷ್ಟು ಮಾತ್ರವೂ ವಿಶ್ವಾಸಕ್ಕೆ ಪಾತ್ರನಲ್ಲ. ಅವನ ಮೋಸದ ಕೆಲಸಗಳು ಒಂದೇ ಎರಡೇ, ಹಲವು ಇರುವವು. ಅವನು ಚಂದ್ರರಾವ ಮೋರೆಯನ್ನು ಮೋಸದಿಂದ ಕೊಲ್ಲಿಸಿದನು. ವಿಜಾಪುರದ ಸರದಾರರನ್ನು ಕುಯುಕ್ತಿಯಿಂದ ನಾಶಮಾಡಿ ದನು. ಹಾದಿಯ ಬಡಿದನು; ಕಳವು ಮಾಡಿದನು; ದರೋಡೆ ಹಾಕಿದನು! ಇದಕ್ಕೂ ಹೆಚ್ಚಿನ ಮೋಸವೇನು ಬೇಕು? ಇಂಥ ಮೋಸಗಾರನು ಅನಾಥ ರಾದ ಸುಂದರ ತರುಣಿಯರನ್ನು ಮೋಸಗೊಳಿಸಿದರೆ ಆಶ್ಚರ್ಯವೇನು? ಎಂದು ನುಡಿಯಲು, ಹೇಜೀಬ ವೇಷಧಾರಿಯಾದ ಜಾಧವರಾಯನನ್ನು ಸಂಶಯಪಿಶಾಚವು ತಟ್ಟನೆ ಬಡಕೊಂಡಿತು! ಪ್ರಿಯ ವಾಚಕರೆ, ಹೆಂಡತಿಯ ವಿಷಯದ ಸಂಶಯ ಪಿಶಾಚಿಯು ಬಡಿದುಕೊಳ್ಳದೆಯಿದ್ದ ಗಂಡಸರು ಅಪರೂಪವಲ್ಲವೆ?

೧೧ ನೆಯ ಪ್ರಕರಣ.

ಹಾದಿಯ ಹುಂಬ ಒಕ್ಕಲಿಗನು.

ಹಿಂದಕ್ಕೆ ಮಹಾರಾಜರು, ತುಳಾಜಿಯೇ ಮೊದಲಾದ ಲಮಾಣಿಗಳ ವೇಷ ಹಾಕಿಕೊಂಡಿದ್ದ ಜಾವಳಿಯ ಮರಾಟರಿಗೆ, ಮುಸೆ–ಕಂದರದಿಂದ ಪ್ರತಾಪಗಡದವರೆಗೆ ಪ್ರಶಸ್ತವಾದ ಹಾದಿಯನ್ನು ಮಾಡಲಿಕ್ಕೂ, ಅಲ್ಲಿಯ ವಸತಿ ಮಾಡತಕ್ಕ ಸ್ಥಳಗಳಲ್ಲಿ ಮೇವು–ದಾಣಿ–ಅನ್ನ–ನೀರುಗಳ ವ್ಯವಸ್ಥೆಯನ್ನು ಇಡಲಿಕ್ಕೂ ಆಜ್ಞಾಪಿಸಿ, ಅವರ ಮೇಲೆ ಏಸಾಜಿಯ ನಿಯಮಿಸಿದ್ದನ್ನು ವಾಚಕರು ಮರೆತಿರಲಿಕ್ಕಿಲ್ಲ. ಆ ಕೆಲಸವನ್ನು ಲಮಾಣಿಗಳು ಅತ್ಯಂತ ಉತ್ಸಾಹದಿಂದ ಮಾಡತೊಡಗಿದ್ದರು. ಮಹಾರಾಜರ ಮನಸ್ಸನ್ನು ಒಲಿಸಿಕೊಳ್ಳುವ ಉಬ್ಬು ಅವರಿಗೆ ವಿಶೇಷವಾಗಿ ಇದ್ದಿತು. ಸ್ವಲ್ಪ ದಿವಸಗಳಲ್ಲಿಯೇ ಮಹಾರಾಜರ ಇಚ್ಛೆಯಂತೆ ಪ್ರಶಸ್ತವಾದ ಮಾರ್ಗವು ಸಿದ್ಧವಾಯಿತು. ಅಲ್ಲಲ್ಲಿ ಸರಬರಾಯಿಯ ವ್ಯವಸ್ಥೆಯೂ ಉತ್ತಮ ರೀತಿಯಿಂದ ಮಾಡಲ್ಪಟ್ಟಿತು. ಈ ಸಂಗತಿಯನ್ನು ತಿಳಿಸುವದಕ್ಕಾಗಿ ಮಹಾರಾಜರು ಕೃಷ್ಣಾಜಿ ಭಾಸ್ಕರನನ್ನು ಖಾನನ ಕಡೆಗೆ ಕಳಿಸಿದರು. ಆ ಬ್ರಾಹ್ಮಣನು ಖಾನನ ಬಳಿಗೆ ಹೋಗಿ ಮಹಾರಾಜರ ಅಪ್ಪಣೆಯಂತೆ ಆತನನ್ನು ಕುರಿತು—"ಖಾವಿಂದ, ಮಾರ್ಗದ ವ್ಯವಸ್ಥೆಯು ಉತ್ತಮ ರೀತಿಯಿಂದ ಮಾಡಲ್ಪಟ್ಟಿರುವದು. ಸರಬರಾಯಿಯ ವ್ಯವಸ್ಥೆಯೂ ಸರಿಯಾಗಿ ಆಗಿರುವದು. ತಮ್ಮ ಮಾರ್ಗಕ್ರಮಣದ ಈ ಅನುಕೂಲತೆಯು ಎಷ್ಟು ಆಸ್ಥೆಯಿಂದ ಮಾಡಲ್ಪಟ್ಟಿರುವದೆಂಬದನ್ನು ಖಾವಂದರವರು ಅನುಭವದಿಂದ ಮನಗಾಣಬಹುದು. ಇನ್ನು ಪಯಣವನ್ನು ಬಳಿಸಲಿಕ್ಕೆ ವಿಲಂಬ ಮಾಡಬಾರದೆಂದು ಮಹಾರಾಜರು ವಿಜ್ಞಾಪಿಸಿಕೊಳ್ಳುವರು" ಎಂದು ಹೇಳಿದನು. ಖಾನನಾದರೂ ಬೇಗನೆ ಶಿವಾಜಿಯ ಪ್ರಕರಣವನ್ನು ಮುಗಿಸಲು ಇಚ್ಛಿಸುತ್ತಿದ್ದನು. ಹೊರಗೆ ಆತನು ಶಿವಾಜಿಯ ವಿಷಯವಾಗಿ ನಿರ್ಭಯದಿಂದ ಇದ್ದಂತೆ ತೋರಿಸುತ್ತಿದ್ದರೂ, ಅಂತರಂಗದಲ್ಲಿ ಆತನು ಶಿವಾಜಿಗೆ ಬಹಳವಾಗಿ ಅಂಜುತ್ತಿದ್ದನು. ಶಿವಾಜಿಯು ತನ್ನ ಪಯಣದ ಸಲುವಾಗಿ ನಿಜವಾಗಿಯೇ ಉತ್ತಮ ವ್ಯವಸ್ಥೆಯನ್ನು ಮಾಡಿಸುತ್ತಿರುವನೋ, ಅದರಲ್ಲಿ ಮೋಸವೇನಾ

ಪರೂ ಇರುವದೊ, ಎಂಬುದರ ಶೋಧವನ್ನು ತನ್ನ ಗುಪ್ತಚಾರರ ಮುಖಾಂತರ ಖಾನನು ಮಾಡಿಸಿದ್ದನು. ಈ ಕೆಲಸವನ್ನು ಶಿವಾಜಿಯು ಮನಃಪೂರ್ವಕವಾಗಿ ಮಾಡಿಸುತ್ತಿರುವನೆಂಬ ನಂಬಿಗೆಯು ಆತನಿಗೆ ಆದದ್ದರಿಂದ, ಆ ಡೌಲಿನ ಖಾನನು "ಶಿವಾಜಿಯು ತನಗೆ ನಿಜವಾಗಿಯೇ ಹೆದರಿದ್ದು, ತನ್ನ ಮನಸ್ಸನ್ನು ಒಲಿಸಿಕೊಳ್ಳಲಿಕ್ಕೆ ಇಷ್ಟು ಪೇಚಾಡುವನೆಂ"ದು ತಿಳಿದುಕೊಂಡಿದ್ದನು; ಆದ್ದರಿಂದ ಕೃಷ್ಣಾಜಿ ಭಾಸ್ಕರನು ವಿಜ್ಞಾಪಿಸಿದ ಮರುದಿವಸವೇ ಖಾನನು ಸೈನ್ಯದ ತಳಕಿತ್ತಿದನು. ಖಾನನ ಸೈನ್ಯವೆಂದರೆ ಬಂಡುಪುಂಡಾಟಿಕೆಗಳಿಗೆ ಮೆಚ್ಚಿದ ಜನರ ತಂಡವೆಂತಲೇ ಹೇಳಬಹುದು; ಅವರು ಊರುಗಳನ್ನು ಸುಲಿಯಲಿಕ್ಕೂ, ಸುಡಲಿಕ್ಕೂ, ಜನರನ್ನು ಕೊಲ್ಲಲಿಕ್ಕೂ ಮೆಚ್ಚಿದವರಾಗಿದ್ದರು; ಆದರೆ ಮಾರ್ಗದಲ್ಲಿ ಮಹಾರಾಜರು ಸರಬರಾಯಿಯ ಅತ್ಯುತ್ತಮ ವ್ಯವಸ್ಥೆಯನ್ನು ಇಡಿಸಿದ್ದರಿಂದಲೂ, ಹಾದಿಯ ಹಳ್ಳಿಗಳ ಜನರ ಉಸಾಬರಿಗೆ ಹೋಗದಂತೆ ಖಾನನು ಆಜ್ಞಾಪಿಸಿದ್ದರಿಂದಲೂ ದಂಡಾಳುಗಳ ಪುಂಡಾಟಿಕೆಗಳಿಗೆ ಆಸ್ಪದವು ಉಳಿದಿದ್ದಿಲ್ಲ. ಪ್ರಜೆಗಳಿಗೆ ನಿಷ್ಕಾರಣ ಉಪದ್ರವ ಕೊಡುವದರಿಂದ ಶಿವಾಜಿಯು ಮನಸ್ಸು ತಿರುಗಿ, ಈ ವರೆಗೆ ಮಾಡಿದ ಯತ್ನವೆಲ್ಲ ವ್ಯರ್ಥವಾದೀತೆಂದು ತಿಳಿದು, ಖಾನನು ಸುಮ್ಮನೆ ಹಾದಿಹಿಡಿದು ಹೋಗುವಂತೆ ತನ್ನ ದಂಡಾಳುಗಳನ್ನು ಆಜ್ಞಾಪಿಸಿರಬಹುದು; ಅಥವಾ ಪಂತಾಜಿ ಗೋಪೀನಾಥನು ಈ ಮಾತನ್ನು ಖಾನನಿಗೆ ಸೂಚಿಸಿದ್ದರೂ ಸೂಚಿಸಿರಬಹುದು.

ಮೇಲೆ ಹೇಳಿದಂತೆ ಖಾನನು ತನ್ನ ಸೈನ್ಯದ ತಳವನ್ನು ಕಿತ್ತಿ, ಮಾರ್ಗದಲ್ಲಿ ಶಿವಾಜಿಯು ಸಿದ್ಧಗೊಳಿಸಿದ್ದ ಸರಬರಾಯಿಯ ಸಾಮಾನುಗಳನ್ನು ಯಥೇಚ್ಛವಾಗಿ ಉಪಭೋಗಿಸುತ್ತ, ಪಯಣದ ಮೇಲೆ ಪಯಣವನ್ನು ಬೆಳಿಸಿ, ನಿಯಮಿತ ಸ್ಥಳವು ಇನ್ನು ಒಂದು ದಿನದ ಹಾದಿಯಿರುವಾಗ ತನ್ನ ಸೈನ್ಯದ ಬೀಡುಬಿಟ್ಟನು. ಅಲ್ಲಿ ಎರಡು ದಿನ ವಿಶ್ರಾಂತಿಯನ್ನು ಹೊಂದಬೇಕೆಂದು ಆತನು ಯೋಚಿಸಿದನು. ಒಂದು ದಿನ ಖಾನನು ಬೆಳಗಿನ ಎರಡು ತಾಸು ಹೊತ್ತು ಏರಿರುವಾಗ ತನ್ನ ಬೆಟ್ಟದಂಥ ಕುದುರೆಯನ್ನು ಹತ್ತಿಕೊಂಡು ಹಾದಿಯ ಹಿಡಿದು ಹೊರಟಿದ್ದನು. ಆತನ ಸಂಗಡ ಪಂತಾಜಿ ಗೋಪೀನಾಥನು ಕುದುರೆಯನ್ನು ಹತ್ತಿಕೊಂಡು ಸಾಗಿದ್ದನು. ಬೇರೆ ಮೂರು

ನಾಲ್ಕು ಜನ ಸರದಾರರು ಖಾನನನ್ನು ಅನುಸರಿಸಿ ನಡೆದಿದ್ದರು. ಈಗಿನ ಖಾನನ ಪೋಷಾಕು ತೀರ ಸಾಧಾರಣ ತರದ್ದಿತ್ತು. ಆತನು ಒಂದು ಖಡ್ಗದ ಹೊರತು ಬೇರೆ ಆಯುಧಗಳನ್ನು ತೆಗೆದುಕೊಂಡಿದ್ದಿಲ್ಲ. ಆತನು ಅನ್ಯರ ಲಕ್ಷವಿಲ್ಲದವನಾಗಿದ್ದನು. ತನ್ನ ಶೌರ್ಯದಲ್ಲಿ ಆತನ ನಂಬಿಗೆ ಬಹಳ. ತನ್ನ ಕೂದಲು ಕೊಂಕಿಸುವ ಯೋಗ್ಯತೆಯು ಕೂಡ ಯಾರಿಗೂ ಇಲ್ಲೆಂದು ಆತನು ನಂಬಿದ್ದನು. ಆತನ ನಂಬಿಗೆಗೆ ತಕ್ಕ ಕಾರಣಗಳೂ ಇದ್ದವು. ಶರೀರದಿಂದ ಆತನು ಬಲು ಬಲಿಷ್ಠನು. ಜೋಡು ಎಲುಬಿನ ಆತನ ಮೈಕಟ್ಟು ಅಚ್ಚ ಉಕ್ಕಿನಿಂದ ಮಾಡಿದಂತೆ ವಿಲಕ್ಷಣದಾರ್ಢ್ಯ ವುಳ್ಳದ್ದಾಗಿತ್ತು. ಆತನ ನಿಲುವಿಕೆ ಬಹು ಎತ್ತರ, ಅದಕ್ಕೆ ತಕ್ಕಂತೆ ಆತನ ಕೈಕಾಲುಗಳು ಉದ್ದವಾಗಿಯೂ, ಗಡುತರವಾಗಿಯೂ ಇದ್ದವು. ನೋಡು ವವರಿಗೆ ಈತನು ಸಹಜವಾಗಿ ಎಂಟು ಹತ್ತು ಜನರನ್ನು ಹೊಡೆದು ಉರುಳಿಸ ಬಹುದೆನ್ನುವ ಹಾಗೆ ತೋರುತ್ತಿತ್ತು. ಹೀಗೆ ಶರೀರ ಮಾನದಿಂದ ಆತನು ಅಪ್ರತಿಮನಾಗಿದ್ದಂತೆ, ಎದೆಗಾರಿಕೆಯಲ್ಲಿಯೂ ಅದ್ವಿತೀಯನಾಗಿದ್ದನು. ಆತನು ಶಸ್ತ್ರವಿದ್ಯೆಯಲ್ಲಿ ಅತ್ಯಂತ ನಿಪುಣನು. ಆತನ ಖಡ್ಗದ, ಹಾಗು ತುಬಾಕಿಯ ಗುರಿಗಳು ಎಂದೂ ತಪ್ಪುವಹಾಗಿಲ್ಲ. ಆತನ ಹೊಡತ ಬಿದ್ದ ವನು ನೆಲಕ್ಕುರುಳಿದನೆಂತಲೇ ತಿಳಿಯಬೇಕು. ಆತನು ತನ್ನ ಭಯಂಕರ ವಾದ ಹಸ್ತದಿಂದ ಯಾವನೊಬ್ಬನ ಮುಂಗೈಯನ್ನು ಹಿಡಿದರೆ, ಅಥವಾ ಯಾವನೊಬ್ಬನನ್ನು ಹಿಚಿಕಿದರೆ ಯಮನ ದವಡೆಯೊಳಗೆ ಸಿಕ್ಕು ಒದ್ದಾಡಿದ ಹಾಗೆ ಒದ್ದಾಡುವನೇ ಸರಿ. ತನ್ನ ಈ ಸಾಮರ್ಥ್ಯದ ಬಗ್ಗೆ ಆತನು ವಿಲಕ್ಷಣ ಗರ್ವವನ್ನು ವಹಿಸಿದ್ದನು. ಆದ್ದರಿಂದ ಆತನು ಎಲ್ಲಿಗಾದರೂ ಶಸ್ತ್ರರಹಿತನಾಗಿಯೂ, ಒಬ್ಬಂಟಿಗನಾಗಿಯೂ ಹೋಗಲಿಕ್ಕೆ ಎಷ್ಟು ಮಾತ್ರವೂ ಅಂಜುತ್ತಿದ್ದಿಲ್ಲ. ಸಿಕ್ಕಲ್ಲಿ ಹೀಗೆ ಹೋಗಬಾರದೆಂದು ಯಾರಾ ದರೂ ಹೇಳಿದರೆ, ಆತನು ಹೇಳುವವರಿಗೆ ಚೇಷ್ಟೆ ಮಾಡಿ ತಾನು ಹೋಗುವ ಹಾಗೆ ಹೋಗಿಬಿಡುತ್ತಿದ್ದನು. ಆತನ ಈ ಸಾಹಸ ಗುಣಕ್ಕಾಗಿ ಜನರು ಅವನೊಡನೆ ಅಂಜಿ ನಡೆಯುತ್ತಿದ್ದರು.

ಇಂಥ ಮಹಾ ಬಲಶಾಲಿಯೂ, ಸಾಹಸಿಯೂ, ಗರ್ವಿಷ್ಠನೂ ಆದ ಖಾನನು ಕುದುರೆ ಹತ್ತಿಕೊಂಡು ಮುಂದಕ್ಕೆ ಸಾಗಿರುವಾಗ, ಒಬ್ಬ ಹುಂಬ

ನಾದ ಬಡ ಒಕ್ಕಲಿಗನು ಒಂದು ಸಣ್ಣ ಬುಟ್ಟಿಯಲ್ಲಿ ಗೆಣಸುಗಳನ್ನೂ, ಬೇರೆ ಕಾಯಿಪಲ್ಲೆಯನ್ನೂ ತುಂಬಿಕೊಂಡು ಸಾಗಿದ್ದನು. ಆತನು ಸಹಜವಾಗಿ ಖಾನನನ್ನು ನೋಡಲಿಕ್ಕೆ ನಿಂತುಕೊಂಡನು. ಆ ಒಕ್ಕಲಿಗನ ಮೈತುಂಬ ಬಟ್ಟೆಗಳಿದ್ದಿಲ್ಲ. ಆತನು ಲಂಗೋಟಿಯನ್ನು ಹಾಕಿಕೊಂಡು, ತಲೆಯ ಮೇಲೆ ಕಂಬಳಿಯ ಕೊಪ್ಪಿಯನ್ನು ಹೊತ್ತುಕೊಂಡು, ಅದರ ಮೇಲೆ ಬುಟ್ಟಿ ಯನ್ನು ಇಟ್ಟುಕೊಂಡಿದ್ದನು. ಒಕ್ಕಲಿಗನು ತೀರ ಗಿಡ್ಡನು, ಕಪ್ಪುಬಣ್ಣ ದವನು; ನೋಡುವವರಿಗೆ ಆತನು ತೀರ ಅರವನಾಗಿ ತೋರುತ್ತಿದ್ದನು. ಆತನು ಗಾಬರಿಯಾಗಿ ಖಾನನ ಕಡೆಗೆ ನೋಡುವ ರೀತಿಯನ್ನೂ ವಿಚಾರಿ ಸಿದರೆ, ಈ ಹಳ್ಳಿಗಾಡಿನ ಕಗ್ಗನು ಬಿಳಿಯಂಗಿಯ ಜನರನ್ನೇ ನೋಡಿ ಲ್ಲೆನ್ನುವ ಹಾಗೆ ತೋರುತ್ತಿತ್ತು. ಆವನ ಬುಟ್ಟಿಯು ಸಣ್ಣದು; ಆದರೆ ಅದರಲ್ಲಿ ಕಾಯಿಪಲ್ಲೆಯನ್ನು ಹೊರಚಲ್ಲುವ ಹಾಗೆ ತುಂಬಿದ್ದನು. ಕುದು ರೆಯ ಸವಾರರು ಹತ್ತರ ಬರುತ್ತಲೆ ಅವನು ಗಾಬರಿಯಾಗಿ ತನ್ನ ಎರಡೂ ಕೈಗಳಿಂದ ಬುಟ್ಟಿಯನ್ನು ಹಿಡಿದುಕೊಂಡು ಮೋರೆಯನ್ನು ಮೇಲಕ್ಕೆತ್ತಿ ದನು. ಅಫಜುಲಖಾನನು ಮೊದಲೇ ಎತ್ತರದ ಆಳು; ಅದರಲ್ಲಿ ಆತನು ಬೆಟ್ಟದಂಥ ಕುದುರೆಯನ್ನು ಏರಿದ್ದನು; ಅಂದಬಳಿಕ ಆ ಗಿಡ್ಡನಾದ ಹುಂಬ ಒಕ್ಕಲಿಗನು ಗೋಣು ಎತ್ತರಿಸದಿದ್ದರೆ ಖಾನನ ಭವ್ಯ ಮೂರ್ತಿಯು ಆತನ ಕಣ್ಣಿಗೆ ಹ್ಯಾಗೆ ಬೀಳಬೇಕು? ಗೋಣು ಎತ್ತರಿಸಿದ ಕೂಡಲೆ ಬುಟ್ಟಿಯು ಒಪ್ಪರೆಯಾಯಿತು; ಬುಟ್ಟಿ ಒಪ್ಪರೆಯಾದ ಕೂಡಲೆ ಆದರಲ್ಲಿದ್ದ ಗೆಣಸು ಮುಂತಾದ ಪದಾರ್ಥಗಳು ಬಡಬಡ ಕೆಳಗೆ ಬೀಳಹತ್ತಿ ದವು; ಆದರೆ ಆ ಹುಂಬ ಒಕ್ಕಲಿಗನಿಗೆ ಅದರ ಸುದ್ದಿಯೇ ಇದ್ದಿಲ್ಲ; ಆತನು ಬೆಪ್ಪನಾಗಿ ತೆರಬಾಯಿಂದ ಖಾನನನ್ನು ನೋಡುತ್ತ ನಿಂತುಕೊಂಡಿದ್ದನು. ಒಕ್ಕಲಿಗನ ಆ ತೆರಬಾಯಿ, ಬುಟ್ಟಿಯಿಂದ ಬೀಳುತ್ತಿದ್ದ ಅವನ ಕಾಯಿ ಪಲ್ಲೆಗಳು, ಅವನ ಕಗ್ಗ ಉಡಿಗೆ-ತೊಡಿಗೆಗಳು ಇವನ್ನೆಲ್ಲ ನೋಡಿ ಖಾನನು ನಗುತ್ತ ಒಕ್ಕಲಿಗನ ಕಡೆಗೆ ಕೈ ಮಾಡಿ ಪಂತಾಜಿ ಗೋಪೀನಾಥನ ಕಡೆಗೆ ಮೋರೆ ತಿರುವಿ—"ಪಂತ, ಈ ನಿಮ್ಮ ಜನರು ಎಷ್ಟು ಕಗ್ಗರು, ಎಷ್ಟು ಪುಕ್ಕರು! ಇವರಿಗೆ ಸ್ವಲ್ಪವಾದರೂ ಜ್ಞಾನವಿಲ್ಲ. ಅಂತೇ ತೈಮೂರಲಿಂಗ ನಿಂದ ಹಿಡಿದು ಎಲ್ಲರು ನಿಮ್ಮ ಮೇಲೆ ದಾಳಿಮಾಡಿ ನಿಮ್ಮನ್ನು ಹಣ್ಣು

ಮಾಡುತ್ತಾ ಬಂದರು, ಎಂದು ಉಪಹಾಸದಿಂದ ನುಡಿಯಲು, ಪಂತಾಜಿ ಗೋಪೀನಾಥನು ಒಕ್ಕಲಿಗನ ಕಡೆಗೆ ನೋಡಿದನು; ಆದರೆ ಅಫಜುಲಖಾನ ನಂತೆ ಆತನು ನಗಲಿಲ್ಲ. ತನ್ನನ್ನು ನೋಡಿ ಅಫಜುಲಖಾನನು ಉಪಹಾಸ ಮಾಡಿ ನಕ್ಕನೆಂಬ ಅರವೇ ಆ ಒಕ್ಕಲಿಗನಿಗೆ ಇದ್ದಿಲ್ಲ. ಆತನು ಒಬ್ಬ ಕುದುರೆಯ ಸವಾರನನ್ನು ಕುರಿತು—"ಏನರಿ, ಅಫಜುಲಖಾನನೆಂಬ ಸುಬೇದಾರನು ಶಿವಾಜಿ ಮಹಾರಾಜರನ್ನು ಹಿಡಕೊಂಡು ಹೋಗಲಿಕ್ಕೆ ವಿಜಾಪುರದಿಂದ ಬಂದಿರುತ್ತಾನಂತೆ, ಅವನೇ ಏನು ಈತನು?" ಎಂದು ಕೇಳಿದನು. ಅದಕ್ಕೆ ಒಬ್ಬ ಸರದಾರನು ಆ ಒಕ್ಕಲಿಗನ ಮ್ಯೆಮೇಲೆ ಹೋಗಿ—"ಅಹುದಹುದು; ಇವನೇ ನಿಮ್ಮ ಚಿಗಪ್ಪನಾದ ಅಫಜುಲಖಾನನು! ಅದನ್ನು ತಕ್ಕೊಂಡು ನೀನೇನು ಮಾಡುವೆ? ಅಫಜುಲಖಾನನಿರಲಿ, ಬೇರೆ ಮತ್ತೆ ಯಾವನಾದರೂ ಇರಲಿ; ನೀನು ಸುಮ್ಮನೆ ಹಾದಿಯ ಹಿಡಿದು ಹೋದರಾಯಿತು" ಎಂದು ಅವನನ್ನು ಗದ್ದರಿಸಿದನು. ಮತ್ತೊಬ್ಬನು ಆ ಒಕ್ಕಲಿಗನ ಬುಟ್ಟಿಯೊಳಗಿನ ಗೆಣಸುಗಳನ್ನು ತಿನ್ನಹತ್ತಿದನು; ಆದರೆ ಆ ಒಕ್ಕಲಿಗನು ಯಾವ ಮಾತನ್ನೂ ಆಡದೆ ಹುಚ್ಚನ ಹಾಗೆ ಸುಮ್ಮನೆ ನಿಂತುಕೊಂಡಿದ್ದನು. ಕೆಲವರು ಅವನಿಗೆ ಚೇಷ್ಟೆ ಮಾಡಹತ್ತಿದರು; ಕೆಲವರು ಅವನ ಬುಟ್ಟಿಯನ್ನು ಹಾರಿಸಬೇಕೆಂದು ಮಾಡಿದ್ದರು. ಹೀಗಿರುವಾಗ ಆ ಒಕ್ಕಲಿಗನು ತನ್ನ ಬುಟ್ಟಿಯನ್ನು ಅಲ್ಲಿಯೇ ಚಲ್ಲಿಕೊಟ್ಟು ಹೊರಟು ಹೋದನು. ಆ ಸವಾರರು ಉಳಿದ ಗೆಣಸು ಮೊದಲಾದವುಗಳನ್ನು ತಿಂದು, ಅವನ ಬುಟ್ಟಿಯನ್ನು ಅತ್ತಿಂದಿತ್ತ ಇತ್ತಿಂದತ್ತ ಒಗೆದಾಡುತ್ತ ಮೋಜು ಮಾಡಹತ್ತಿದರು.

ಇತ್ತ ಆ ಹುಂಬ ಒಕ್ಕಲಿಗನು ಗಿಡದ ಗುಂಪನ್ನು ಹೊಕ್ಕು ಸುಮಾರು ಕಾಲು ಮ್ಯೆಲು ಹೋದ ಮೇಲೆ ಒಂದು ಸಿಳ್ಳು ಹಾಕಿದನು. ಕೂಡಲೆ ಒಬ್ಬ ಮೋತದ್ದಾರನು ಒಂದು ಕುದುರೆಯನ್ನು ಹಿಡಕೊಂಡು ಬಂದು ನಿಂತುಕೊಂಡನು. ಆ ಒಕ್ಕಲಿಗನು ಅವನ ಕಿವಿಯಲ್ಲಿ ಏನೋ ಹೇಳಲು, ಆ ಮೋತದ್ದಾರನು ಕುದುರೆಯನ್ನು ಒಂದು ಗಿಡಕ್ಕೆ ಕಟ್ಟಿ ಹೊರಟು ಹೋದನು. ಆ ಒಕ್ಕಲಿಗನು ಸ್ವಲ್ಪ ಹೊತ್ತು ನಿಂತುಕೊಂಡಬಳಿಕ ಕುದುರೆಯನ್ನು ಹತ್ತಿಕೊಂಡು ಸುಮಾರು ಅರ್ಧಮ್ಯೆಲು ಮತ್ತೆ ಮುಂದಕ್ಕೆ

ಹೋದನು. ಅಲ್ಲಿ ಮತ್ತೆ ಮೂರು ನಾಲ್ಕು ಜನರು ನಿಂತುಕೊಂಡಿದ್ದರು. ಒಕ್ಕಲಿಗನು ಅವರ ಬಳಿಗೆ ಹೋದ ಕೂಡಲೆ ಅವರು ಬಹು ವಿನಯದಿಂದ ರಾಮರಾಮ ಮುಜುರೆಯನ್ನು ಮಾಡಿದರು. ಆಗ ಆ ಒಕ್ಕಲಿಗನು ತನ್ನ ಮೈಮೇಲಿನ ಕಂಬಳಿಯನ್ನು ಚಲ್ಲಿಕೊಟ್ಟು ನಗುತ್ತ ಅವರನ್ನು ಕುರಿತು—"ಏನು ಹೇಳಲಿ, ಬಹಳ ಮೋಜು ಆಯಿತು. ನೀವು ಆಗ ಅಲ್ಲಿ ಇದ್ದಿಲ್ಲ. ನೀವಾದರೂ ದೂರಿನಿಂದ ನನ್ನ ಗುರುತು ಹಿಡಿಯುತ್ತಿದ್ದಿರೋ ಇಲ್ಲವೋ? ನನಗೆ ಸಾಧಿಸಬೇಕಾದದ್ದು ಕಸರಿಲ್ಲದೆ ಸಾಧಿಸಿತು. ತೀರ ಹತ್ತರ ನಿಂತು ಅವನನ್ನು ನೆಟ್ಟಗೆ ನೋಡಿಕೊಂಡೆನು. ಖಾನನು ಕೀರ್ತಿಗೆ ತಕ್ಕಂತೆ ಬಲಾಢ್ಯನಿದ್ದಾನೆ. ಪ್ರತ್ಯಕ್ಷ ನೋಡಿದ ಹೊರತು ಪ್ರಸಂಗ ಒದಗಿದಾಗ ಅವನ ಸಮಾಚಾರವನ್ನು ಹ್ಯಾಗೆ ತೆಗೆದುಕೊಳ್ಳಬೇಕೆಂಬದಾದರೂ ನನಗೆ ಹ್ಯಾಗೆ ಗೊತ್ತಾಗಬೇಕು? ಅಂತೇ ನಾನು ನಿಮ್ಮೆಲ್ಲರ ಮಾತು ಮೀರಿ ಈ ಒಕ್ಕಲಿಗರ ಸೋಗಿನಿಂದ ಖಾನನ ಕಡೆಗೆ ಹೋಗಿದ್ದೆನು" ಎಂದು ಹೇಳಿದನು. ಅದನ್ನು ಕೇಳಿ ತಾನಾಜಿಯು—"ಸರಕಾರ, ಯಾರಾದರೂ ತಮ್ಮ ಗುರುತು ಹಿಡಿದು ಖಾನನಿಗೆ ಹೇಳಿದ್ದರೆ, ಎಂಥ ಕಠಿಣ ಪ್ರಸಂಗವು ಒದಗುತ್ತಿತ್ತಲ್ಲ! ಈ ಮಾತನ್ನು ತಮಗೆ ನಾವು ಹೇಳಬೇಕೆನ್ನುವ ಹಾಗಿಲ್ಲ; ಒಮ್ಮೊಮ್ಮೆ ತಾವು ನಿಷ್ಕಾರಣವಾಗಿ ಪ್ರಾಣಸಂಕಟವನ್ನು ತಂದುಕೊಳ್ಳುತ್ತೀರಿ. ಹೀಗಾದ ಬಳಿಕ ನಮ್ಮಂಥವರಿಂದ ತಮಗೆ ಉಪಯೋಗವು ಯಾವಾಗಾಗಬೇಕು? ನಿಮ್ಮ ಸಲುವಾಗಿ ನಾವು ನಮ್ಮ ದೇಹವನ್ನು ಅರ್ಪಿಸಿರುವೆವಲ್ಲವೆ? ಮಹಾರಾಜ, ತಾವು ಉತ್ತಮಾಂಗವಾದ ಶಿರಸ್ಸಿನಂತೆ ಇರುತ್ತೀರಿ; ನಾವು ಶಿರಸ್ಸಿನ ಆಧೀನದಲ್ಲಿರುವ ಕೈಕಾಲುಗಳಂತೆ ಇರುತ್ತೇವೆ. ತಾವು ನಮ್ಮನ್ನು ಆಜ್ಞಾಪಿಸಬೇಕು, ತಮ್ಮ ಆ ಆಜ್ಞೆಯಂತೆ ನಾವು ಕಾರ್ಯಗಳನ್ನು ಮಾಡಬೇಕು. ಹೀಗಿದ್ದು, ಗಂಡಾಂತರದ ಪ್ರಸಂಗಗಳಲ್ಲೆಲ್ಲ ನೀವೇ ಮುಂದುವರಿದು ಹೋಗುತ್ತೀರಿ. ಕೈಕಾಲುಗಳು ಮುರಿದರೆ ನಡೆಯಬಹುದು; ಆದರೆ ತಲೆ ಹೋದರೆ ಹ್ಯಾಗೆ ನಡೆಯಬೇಕು? ಎಷ್ಟು ಬೇಡಿಕೊಂಡರೂ ನಮ್ಮ ವಿನಂತಿಯನ್ನು ತಾವು ಲಕ್ಷಿಸುವದೇಯಿಲ್ಲ." ಎಂದು ನುಡಿಯಲು ಮಹಾರಾಜರು—"ತಾನಾಜೀ, ನೀನು ತೀರ ಮರುಳನಿರುತ್ತೀ. ಅಲ್ಲೋ, ನನಗೂ ಅಫಜುಲಖಾನನಿಗೂ ಗಂಟು ಬೀಳತಕ್ಕದ್ದದೆ; ಅಂದ

ಬಳಿಕ ನೀವು ಹೋಗಿ ಖಾನನನ್ನು ನೋಡಿದರೆ ಆಗುವ ಪ್ರಯೋಜನ ವೇನು ನೀನೇ ಹೇಳು. ಖಾನನ ಸಾಮರ್ಥ್ಯವೆಷ್ಟು, ಅವನೊಡನೆ ಹೋರಾಡುವಾಗ ಯಾವ ಯುಕ್ತಿಯನ್ನು ಮಾಡಬೇಕು, ನನಗೆ ಜಯಪ್ರಾಪ್ತಿಯಾಗಲಿಕ್ಕೆ ವಿಶೇಷತರದ ವ್ಯವಸ್ಥೆಯನ್ನೇನು ಮಾಡಬೇಕಾಗುವದು; ಮುಂತಾದ ಸಂಗತಿಗಳನ್ನು ಕುರಿತು ನಾನೇ ಆಲೋಚಿಸಬೇಕಾಗುವುದಲ್ಲವೆ? ಅಂತೇ ನಾನು ಖಾನನನ್ನು ಪ್ರತ್ಯಕ್ಷ ನೋಡಿಬರುವುದು ಅವಶ್ಯವಾಗಿತ್ತು. ಏನೇ ಇರಲಿ, ಕೆಲಸವಾಗಿದೆ, ವಿಘ್ನಗಳೇನು ಒದಗಿರುವದಿಲ್ಲ; ಅಂದ ಬಳಿಕ ಸುಮ್ಮನೆ ಇನ್ನು ಆ ಮಾತಿನ ಅರೆದಾಟವೇಕೆ? ಇನ್ನು ಇಂಥ ಪ್ರಸಂಗ ಒದಗಿದಲ್ಲಿ ವಿಚಾರ ಮಾಡೋಣವಂತೆ; ಈಗ ಮುಂದಿನ ವಿಚಾರವನ್ನು ಮಾಡೋಣ; ಆದರೆ, ತಾನಾಜೀ, ನಿನ್ನ ಮಾತನ್ನು ನಾನು ನಿರರ್ಥಕವೆಂದು ತಿಳಿಯುವದಿಲ್ಲ. ನಾನೇನೋ ಒಕ್ಕಲಿಗನ ಸೋಗನ್ನು ಉತ್ತಮರೀತಿಯಿಂದ ಹಾಕಿಕೊಂಡಿದ್ದೆನು; ಆದರೆ ಆ ಪಂತಾಜಿ ಗೋಪೀನಾಥನು ನನ್ನ ಗುರುತು ಹಿಡಿದ ಹಾಗೆ ತೋರಿತು. ಆತನು, ಬಹು ಚಮತ್ಕಾರದ ದೃಷ್ಟಿಯಿಂದ ನನ್ನನ್ನು ಎವೆಯಿಕ್ಕದೆ ನೋಡುತ್ತಿದ್ದನು; ಆದರೆ ಗುರುತು ಹಿಡಿದದ್ದು ತೋರಗೊಡಲಿಲ್ಲ. ಆತನು ಬಹು ಧೂರ್ತನೆಂದು ಹೇಳಬೇಕಾಗುವದು; ಎರಡನೆಯವನಾವನಾದರೂ ಆಗಿದ್ದರೆ ತನಗಾದ ಆಶ್ಚರ್ಯವನ್ನು ಮುಚ್ಚಿಕೊಳ್ಳುವದು ಅವನಿಂದ ಆಗುತ್ತಿದ್ದಿಲ್ಲ. ಅವನ ಮುಖದಿಂದ ಏನಾದರೂ ಆಶ್ಚರ್ಯದ ಉದ್ಗಾರಗಳು ಹೊರಡುತ್ತಿದ್ದವು. ಅವನ್ನು ಕೇಳಿ ಖಾನನು ಪ್ರಶ್ನಮಾಡಲು, ಇದ್ದ ಸಂಗತಿಯನ್ನು ಅವನು ಹೇಳಬೇಕಾಗುತ್ತಿತ್ತು; ಆದರೆ ಇಂಥ ಪ್ರಸಂಗವನ್ನೇನೂ ಗೋಪೀನಾಥ ಪಂತನು ತಂದುಕೊಳ್ಳಲಿಲ್ಲ. ಇದೊಂದು ಅಂಬಾಭವಾನಿಯ ಕೃಪೆಯೆಂತಲೇ ಹೇಳಬೇಕಾಗುವದು. ಗೋಪೀನಾಥಪಂತನು ಸಜ್ಜನನೆಂಬದರಲ್ಲಿ ಸಂಶಯವಿಲ್ಲ. ಲಂಚ ರುಸವತ್ತುಗಳ ಆಶೆಯಿಂದ ಆತನು ತನ್ನ ಒಡೆಯನಿಗೆ ಕೇಡನ್ನು ಬಗೆಯಲಾರನು. ತಮ್ಮ ವೈರಿಯಾದರೂ ಮರೆಮೋಸಮಾಡಲಿಕ್ಕೆ ಆತನು ಒಡಂಬಡುವದಿಲ್ಲ. ಆತನು ನನಗೆ ಹೇಳಿರುವನೇನಂದರೆ— "ಖಾನನ ಮನಸ್ಸಿನಲ್ಲಿ ಏನಾದರೂ ದುರ್ವಿಚಾರಗಳು ಬಂದರೆ ನಿಮಗೆ ತಿಳಿಸುವೆನು; ಹಾಗಿಲ್ಲದೆ ಖಾನನು ಸರಳತನದಿಂದ ನಿಮ್ಮೊಡನೆ ವ್ಯವಹರಿ

ಸಿದರೆ ನೀವೂ ದುರಾಲೋಚನೆಗೆ ಒಳಗಾಗಬಾರದು.” ಗೋಪೀನಾಥ ಪಂತನ ಈ ವಿಚಾರವನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಖಾನನು ಸರಳತನದಿಂದ ನಡೆದರೆ, ನಾನು ಮರೆಮೋಸಮಾಡುವಗೊಡವೆಗೆ ಹೋಗುವದಿಲ್ಲ. ಆತನು ದುರಾಲೋಚನೆಗೆ ಒಳಗಾದರೆ, ನಾನೂ ಅದಕ್ಕೆ ತಕ್ಕ ಆಟವನ್ನು ಹೂಡುವೆನು. ಈಗ ನಾನು ಆತನನ್ನು ಪ್ರತ್ಯಕ್ಷವಾಗಿ ನೋಡಿ ಬಂದಿದ್ದೇನೆ. ನಾನು ಎಚ್ಚರದಿಂದಿರುವಾಗ ಆತನು ಬೇಕಾದಂಥ ಮೋಸಮಾಡಲಿ, ಆತನನ್ನು ನಾನು ಬೊಕ್ಕಬೋರಲು ಹಾಕುವೆನು. ಆತನು ಮೋಸ ಮಾಡುವನೆಂತಲೇ ತಿಳಿದು ನಾವು ನಡೆಯಬೇಕು. ಅದೇ ದೃಷ್ಟಿಯಿಂದ ನಾವು ಎಲ್ಲ ಸಿದ್ಧತೆಯನ್ನು ಮಾಡಿಕೊಂಡಿರಬೇಕು. ಪ್ರಸಂಗ ವರಿತು ಆ ಸಿದ್ಧತೆಯನ್ನು ಉಪಯೋಗಿಸಿಕೊಳ್ಳಬಹುದು, ಬಿಡಬಹುದು. ಮಾರ್ಗದ ಬಳಿಯ ಅರಣ್ಯದಲ್ಲಿ ಸೈನ್ಯವನ್ನು ಗುಪ್ತವಾಗಿ ಇಟ್ಟಿರಬೇಕು. ಇವೆಲ್ಲ ಕೆಲಸಗಳನ್ನು ಬಹು ಗುಪ್ತರೀತಿಯಿಂದ ಮಾಡಬೇಕಾಗಿದೆ. ನಡೆಯಿರಿ, ನಾವು ಇಲ್ಲಿ ಬಹಳ ಹೊತ್ತು ನಿಂತುಕೊಳ್ಳುವದು ಸರಿಯಲ್ಲ.

ಈ ಮೇಗೆಗೆ ನುಡಿದು ಎಲ್ಲರು ಅಲ್ಲಿಂದ ಹೊರಟುಹೋದರು. ಅವರು ಪ್ರತಾಪಗಡಕ್ಕೆ ಹೋದಬಳಿಕ ಮುಂದಿನ ಸಿದ್ಧತೆಯಲ್ಲಿ ತೊಡಗಿದರು. ಇತ್ತ ಖಾನನ ಸರಬರಾಯಿಯ ವ್ಯವಸ್ಥೆಯನ್ನು ಉತ್ತಮ ರೀತಿಯಿಂದ ಇಟ್ಟಿದ್ದರಿಂದ ಆತನು ಸಂತುಷ್ಟನಾಗಿದ್ದನು. ಅದರಂತೆ ಖಾನನು ಪಂತಾಜಿ ಗೋಪೀನಾಥನ ಮುಂದೆ ಆಡಿ ತೋರಿಸಿದನು. ಖಾನನ ಇಂಗಿತವನ್ನು ತಿಳಿದುಕೊಳ್ಳಲು ಗೋಪೀನಾಥಪಂತನು ಅತ್ಯಂತ ತತ್ಪರನಾಗಿದ್ದನು; ಯಾಕಂದರೆ ಮೋಸದಿಂದ ಶಿವಾಜಿಗೆ ಕೇಡುಬಗೆಯಗೊಡಲಿಕ್ಕಿಲ್ಲವೆಂದು ಆತನು ತನ್ನ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿದ್ದನು. ಹೀಗಿರುವಾಗ ಖಾನನು ಗೋಪೀನಾಥಪಂತನನ್ನು ಕುರಿತು—“ಪಂತ, ಶಿವಾಜಿಯ ಮನಸ್ಸಿನಲ್ಲಿ ನನ್ನೊಡನೆ ಸಖ್ಯಮಾಡಿಕೊಳ್ಳುವದು ನಿಜವಾಗಿಯಿದ್ದಂತೆ ತೋರುತ್ತದೆ. ಆತನು ನಮ್ಮ ಪಯಣದ ಅನುಕೂಲತೆಯನ್ನು ಉತ್ತಮ ರೀತಿಯಿಂದ ಮಾಡಿರುತ್ತಾನೆ. ಆತನು ವಿಜಾಪುರಕ್ಕೆ ನನ್ನೊಡನೆ ಬಂದು, ಬಾದಶಹರ ದರ್ಶನ ಮಾಡಿಕೊಂಡು, ಮುಜುರೆಮಾಡಿ ಅವರ ಅಪ್ಪಣೆ ಪಡೆದು ದಕ್ಷಿಣದ ಸುಬೇದಾರಿಕೆಯನ್ನು ಭೋಗಿಸಲೊಲ್ಲನೇಕೆ. ನಾನು

ಅತ್ಯುತ್ತಮ ರೀತಿಯಿಂದ ಆತನ ಶಿಫಾರಸು ಮಾಡುವೆನು. ನನ್ನ ಪ್ರತಿಜ್ಞೆಯಂತೆ ಆತನು ವಿಜಾಪುರಕ್ಕೆ ಬರಲೇಬೇಕು. ಇಲ್ಲಿಯೇ ಯಾವ ಕೆಲಸವನ್ನೂ ಮಾಡಲಿಕ್ಕೆ ಬರುವದಿಲ್ಲ. ಅಲ್ಲಿಗೆ ಹೋದಬಳಿಕ ಎಲ್ಲ ವ್ಯವಸ್ಥೆಯನ್ನು ಉತ್ತಮ ರೀತಿಯಿಂದ ಮಾಡಿಸುವೆನು. ನೀವು ಇನ್ನೊಮ್ಮೆ ಹೋಗಿ ಶಿವಾಜಿಗೆ ಈ ಮಾತನ್ನು ತಿಳಿಸಿರಿ. ಸಮಕ್ಷ ಭೆಟ್ಟಿಯಾದಾಗ ನಾನೂ ಇದೇ ಮಾತನ್ನು ಆತನಿಗೆ ಹೇಳುವೆನು. ಅಷ್ಟರಲ್ಲಿ ಆತನಿಗೆ ಈ ಮಾತನ್ನು ನೀವು ತಿಳಿಸಿ ಒಡಂಬಡಿಸಿ ಇಟ್ಟಿದ್ದರೆ ನೆಟ್ಟಗಾಗುವದು. ಎಂದು ಹೇಳಿ, ಗೋಪೀನಾಥಪಂತನನ್ನು ಪುನಃ ಶಿವಾಜಿ ಮಹಾರಾಜರ ಬಳಿಗೆ ಕಳಿಸಿದನು. ಅದರಂತೆ ಗೋಪೀನಾಥಪಂತನು ಪ್ರತಾಪಗಡಕ್ಕೆ ಹೋಗಿ, ಮೊದಲು ಕೃಷ್ಣಾಜಿಭಾಸ್ಕರನನ್ನು ಕಂಡು, ಆ ಮೇಲೆ ಮಹಾರಾಜರ ಕಡೆಗೆ ಹೋದನು. ಏಕಾಂತದಲ್ಲಿ ಅವರಿಬ್ಬರ ಸಂಭಾಷಣವು ಬಹಳ ಹೊತ್ತಿನವರೆಗೆ ನಡೆಯಿತು. ಆಗ ಹಲವು ಸಂಗತಿಗಳ ಸ್ಪಷ್ಟೀಕರಣವಾಯಿತು. ಗೋಪೀನಾಥಪಂತನು ಮಹಾರಾಜರಿಗೆ ತಿಳಿಸತಕ್ಕದ್ದನ್ನು ತಿಳಿಸಿದನು. ಮತ್ತು "ಖಾನನ ಮನಸ್ಸಿನಲ್ಲಿ ಇನ್ನೂ ದುರಾಲೋಚನೆಯು ಉತ್ಪನ್ನವಾದಂತೆ ಕಂಡು ಬರುವದಿಲ್ಲ; ನನಗೆ ಸಂಶಯ ಬಂದ ಕೂಡಲೆ ನಿಮಗೆ ತಿಳಿಸುವೆನು" ಎಂದು ಮಹಾರಾಜರಿಗೆ ಹೇಳಿ ಆತನು ಹೊರಟು ಹೋದನು.

ಮಹಾರಾಜರ ವರ್ಚಸ್ಸು ವಿಲಕ್ಷಣವಾದದ್ದು; ಅವರ ಸವಿಮಾತಿನ ಶೈಲಿಯು ಅಪೂರ್ವವಾದದ್ದು. ಅವರ ಬಳಿಯಲ್ಲಿ ಬಂದ ಮನುಷ್ಯನ ಮನಸ್ಸು ತಿರುಗದೆ ಹೋಗುತ್ತಿದ್ದಿಲ್ಲ. ಗೋಪೀನಾಥಪಂತನಂಥ ನಿಸ್ಪೃಹಿಯಾದ ವಕೀಲನ ಮನಸ್ಸು ಕೂಡ ಚಂಚಲವಾಯಿತು. ತಾನು ಮುಸಲ್ಮಾನರ ಚಾಕರಿಯನ್ನು ಮಾಡುವದೇ ಅನ್ಯಾಯವೆಂದು ಗೋಪೀನಾಥಪಂತನು ಎಣಿಸಹತ್ತಿದನು. ತಾನು ಖಾನನ ನೌಕರಿಯನ್ನು ಬಿಟ್ಟು ಮಹಾರಾಜರ ನೌಕರಿಯನ್ನು ಮಾಡಬೇಕೆಂದು ಸಹ ಒಮ್ಮೆ ಆ ವಕೀಲನ ಮನಸ್ಸಿನಲ್ಲಿ ಉತ್ಪನ್ನವಾಯಿತು; ಆದರೆ ಇಂಥ ಪ್ರಸಂಗದಲ್ಲಿ ತಾನು ಖಾನನ ನೌಕರಿಯನ್ನು ಬಿಡುವದು ಹಿತಕರವಲ್ಲೆಂಬುದು ಉತ್ತರಕ್ಷಣದಲ್ಲಿಯೇ ಆತನ ಮನಸ್ಸಿಗೆ ಹೊಳೆಯಿತು. ಆದರೆ ಆತನ ಮನಸ್ಸು ಒಮ್ಮೆ

ತಿರುಗಿದ್ದು ತಿರುಗಿ ಹೋಯಿತು. ಗೋ-ಬ್ರಾಹ್ಮಣ ಪ್ರತಿಪಾಲನಕ್ಕೋಸ್ಕರ ತ್ರಿಕರಣಪೂರ್ವಕವಾಗಿ ಯತ್ನಿಸುತ್ತಿರುವ, ಹಾಗು ಸ್ವರಾಜ್ಯ ಸ್ಥಾಪನೆಯ ವ್ರತವನ್ನು ಸ್ವೀಕರಿಸಿರುವ ಮಹಾರಾಜರನ್ನು ಸೆರೆ ಹಿಡಕೊಂಡು, ಇಲ್ಲವೆ ಅವರ ರುಂಡವನ್ನು ತುಂಡರಿಸಿಕೊಂಡು ಹೋಗುವೆನೆಂದು ಪ್ರತಿಜ್ಞೆ ಮಾಡಿರುವ ಖಾನನ ಸೇವೆಯನ್ನು ಮಾಡುವುದು ತನಗೆ ಪರಮಲಾಂಛನವೆಂಬ ಮಾತು ಆ ವಕೀಲನ ಮನಸ್ಸಿನಲ್ಲಿ ಮೇಲೆ ಮೇಲೆ ಬರತೊಡಗಿತು. ಈಗ ಖಾನನ ಚಾಕರಿಯನ್ನು ಬಿಡುವದು ಅಶಕ್ಯವಾಗಿರುವದರಿಂದ, ಆತನ ಚಾಕರಿಯಲ್ಲಿರುವಾಗಲೇ ನ್ಯಾಯವಾಗಿ ಮಹಾರಾಜರ ಹಿತವನ್ನು ಆದಷ್ಟು ಮಟ್ಟಿಗೆ ಸಾಧಿಸಬೇಕೆಂದು ಆತನು ಮನಸ್ಸಿನಲ್ಲಿ ಆಲೋಚಿಸಿದ್ದನು. ಈ ಆಲೋಚನೆಯಿಂದ ಆತನ ಮನಸ್ಸಿನ ಸ್ಥಿತಿಯು ಬದಲಾಯಿತು. ಆತನು ಖಾನನ ಮನೋದಯವನ್ನು ತಿಳಿದುಕೊಳ್ಳಲು ಅತ್ಯಂತ ಜಾಗರೂಕನಾಗಿರತೊಡಗಿದನು. ಸ್ವಾಮಿದ್ರೋಹವು ಅತ್ಯಂತ ಪಾಪವೆಂದು ತಿಳಿದು, ಖಾನನ ದ್ರೋಹವನ್ನು ಚಿಂತಿಸದೆ, ಖಾನನು ಅನ್ಯಾಯದ ಮಾರ್ಗವನ್ನು ಕೈಕೊಂಡರೆ ಮಾತ್ರ ಅದನ್ನಷ್ಟು ಮಹಾರಾಜರಿಗೆ ತಿಳಿಸಬೇಕೆಂದು ಆತನು ಮಾಡಿದ್ದನು. ಗೋಪೀನಾಥಪಂತನ ಯೋಗ್ಯತೆಯನ್ನು ಮಹಾರಾಜರೂ ಅರಿತಿದ್ದರಿಂದ ಆ ವಕೀಲನ ಮೇಲೆ ಅವರ ವಿಸ್ವಾಸವು ವಿಶೇಷವಾಗಿತ್ತು. ಅವರು ಆ ಬ್ರಾಹ್ಮಣನ ವಿಷಯವಾಗಿ ಎಂದೂ ವಿಕಲ್ಪ ಭಾವವನ್ನು ತಾಳಲಿಲ್ಲೆಂದು ಹೇಳಬಹುದು. ಈ ಮಾತು ಪಂತಾಜಿ ಗೋಪೀನಾಥನಿಗೆ ಗೊತ್ತಿದ್ದದ್ದರಿಂದ, ಮಹಾರಾಜರು ಖಾನನಿಂದ ಮೋಸಹೋಗದಂತೆ ಮಾಡಲು ಆತನು ಬಹು ಜಾಗರೂಕತೆಯಿಂದ ಯತ್ನಿಸುತ್ತಿದ್ದನು. ಮಹಾರಾಜರ ವಿರುದ್ಧವಾಗಿ ಬೇರೆ ಬೇರೆ ಜನರೊಡನೆ ನಡೆಯುವ ಖಾನನ ಗುಪ್ತಾಲೋಚನೆಗಳನ್ನು ಆತನು ಬಹು ಚಾತುರ್ಯದಿಂದ ಗೊತ್ತು ಹಚ್ಚಿ, ಅವುಗಳ ನಿಜವಾದ ಮಥಿತಾರ್ಥವನ್ನು ಮಹಾರಾಜರಿಗೆ ತಿಳಿಸುತ್ತಿದ್ದನು.

ಗೋಪೀನಾಥ ಪಂತನು ಹೋದ ಬಳಿಕ ಮಹಾರಾಜರು ತಮ್ಮ ಮುತ್ಸದ್ದಿಗಳೊಡನೆ ಆಲೋಚಿಸತೊಡಗಿದರು; ಅವರು ಒಳ್ಳೇ ದೂರದರ್ಶಿಗಳೂ, ದೊಡ್ಡ ಮುತ್ಸದ್ದಿಗಳೂ, ಪರಮ ಸಾಹಸಿಗಳೂ ಆಗಿದ್ದರು. ಅವರು ಬಹು ವಿಚಾರಪೂರ್ವಕವಾಗಿ ಒಮ್ಮೆ ಒಂದು ಮಾತಿನ ನಿಶ್ಚಯ

ಮಾಡಿದನಂತರ ಅದನ್ನು ಸಹಸಾ ಬದಲಿಸುತ್ತಿದ್ದಿಲ್ಲ. ಅವರು ತಮ್ಮ ಪರಿವಾರವನ್ನು ಕುರಿತು—"ನಾನು ಖಾನನ ಮಾತಿನ ಮೇಲೆ ವಿಶ್ವಾಸ ವಿಟ್ಟು ಅವನೊಡನೆ ವಿಜಾಪುರಕ್ಕೆ ಹೋಗುವ ಗೊಂದಲದಲ್ಲಿಯಂತು ಬೀಳಲೇ ಬಾರದು. ಇಲ್ಲಿಯೇ ಏನಾದರೂ ಖಾನನಿಗೆ ಹೇಳಿ ಆತನನ್ನು ವಿಜಾಪುರಕ್ಕೆ ಬಂದ ಹಾದಿಯಿಂದ ತಿರುಗಿ ಕಳಿಸಬೇಕು. ಅದು ಸಾಧಿಸ ದಿದ್ದರೆ ಅವನೊಡನೆ ಯುದ್ಧಕ್ಕೆ ನಿಲ್ಲಬೇಕು. ನಾನು ಖಾನನನ್ನು ಪ್ರತ್ಯಕ್ಷ ಕಂಡು ಅವನ ಯೋಗ್ಯತೆಯನ್ನು ಅರಿತುಕೊಂಡಿದ್ದೇನೆ. ಇದಲ್ಲದೆ ಆ ಗರ್ವಿಷ್ಠ ಖಾನನ ಸೈನ್ಯದ ಯೋಗ್ಯತೆಯಾದರೂ ಸಾಧಾರಣವಾಗಿ ಗುಪ್ತ ಚಾರರ ಮುಖಾಂತರವಾಗಿ ನನಗೆ ಗೊತ್ತಾಗಿದೆ; ಆದ್ದರಿಂದ ಮೇಲಿನ ಎರಡು ಮಾತುಗಳಲ್ಲಿ ಸಾಧಿಸಿದ ಒಂದು ಮಾತಿನಂತೆ ಮಾಡುವುದು ನಿಶ್ಚಯವು. ಇನ್ನು ಮೇಲೆ ಅದರಲ್ಲಿ ಅಂತರವಾಗಲಿಕ್ಕಿಲ್ಲ. ಮಾಡ ತಕ್ಕದ್ದನ್ನು ಬಹು ಗುಪ್ತ ರೀತಿಯಿಂದ ಮಾಡಬೇಕು. ಗದ್ದಲವು ಕೆಲಸದ್ದಲ್ಲ. ಮೋಸಕ್ಕೆ ಮೋಸವು, ಸುಳ್ಳಿಗೆ ಸುಳ್ಳು, ಸರಳತನಕ್ಕೆ ಸರಳತನ; ಎಂಬ ಮಾರ್ಗವನ್ನು ಹಿಡಿದು ನಡೆಯತಕ್ಕದ್ದು. ಹೀಗೆ ನಡೆಯದಿದ್ದರೆ ಈವರೆಗೆ ಪಟ್ಟ ಶ್ರಮವೆಲ್ಲ ವ್ಯರ್ಥವಾಗಿ, ಪಶ್ಚಾತ್ತಾಪ ಪಡಬೇಕಾದೀತು. ನಾವು ಕಟ್ಟಿರುವ ಸ್ವರಾಜ್ಯ ರೂಪ ಮಂದಿರವನ್ನು ಇನ್ನು ಒಂದು ಅಂತಸ್ತಾದರೂ ಏರಿಸಬೇಕಲ್ಲದೆ, ಅದನ್ನು ನೆಲಸಮವಾಗಿ, ಇಲ್ಲವೆ ಕಟ್ಟಿದ ಒಂದು ಅಂತಸ್ತು ಕುಕ್ಕರಿಸುವಂತೆ ಮಾಡುವುದು ಸರಿಯಲ್ಲ. ಈ ಮಾತನ್ನು ಲಕ್ಷ ದಲ್ಲಿಟ್ಟೇ ಎಲ್ಲ ವ್ಯವಸ್ಥೆಯನ್ನು ಮಾಡತಕ್ಕದ್ದು. ಖಾನನು ದುರಾಲೋಚನೆ ಯಿಂದ ನಡೆದು ನಮ್ಮನ್ನು ಘಾತಿಸುವ ಆಲೋಚನೆಯನ್ನು ಮಾಡುತ್ತಿರು ವಾಗ, ಸರಳತನದಿಂದ ನಡೆದರೆ ನಾವು ಬದುಕಿ ಉಳಿಯುವದಾದರೂ ಹ್ಯಾಗೆ? ನಮ್ಮ ಈಗಿನ ಅತಂತ್ರ ಸ್ಥಿತಿಯಲ್ಲಿ ಬೈಲಿಗೆ ನಿಂತು ಖಾನ ನೊಡನೆ ಕಾದುವದು ನೆಟ್ಟಗಲ್ಲವೆಂಬುದೇನೊ ನಿಜ; ಆದರೆ ಪ್ರಸಂಗ ಬಂದ ಬಳಿಕ ಸಾಹಸವನ್ನು ಮಾಡಲೇ ಬೇಕು. ಖಾನನ ಮನಸ್ಸಿನಲ್ಲಿ ವಿಶ್ವಾಸಘಾತ ಮಾಡುವದಿರುತ್ತದೆಂಬದರ ನಂಬಿಗೆಯಾದ ಹೊರತು ನಾವು ವಿಶ್ವಾಸಘಾತ ಮಾಡಬಾರದು. ಒಮ್ಮೆ ವಿಶ್ವಾಸಘಾತದಿಂದ ಕಾರ್ಯವು ಸಾಧಿಸಬಹುದು; ಆದರೆ ಮುಂದೆ ಅದರಿಂದ ಕಾರ್ಯ ಹಾನಿಯಾಗದೆ

ಇರದು. ಅದರಂತೆ, ವಿಶ್ವಾಸಘಾತ ಮಾಡುವವನೊಡನೆ ಸರಳತನದಿಂದ ನಡೆಯುವದರ ಪರಿಣಾಮವೂ ಕೆಡಕೇ ಆಗುವದು. ಒಬ್ಬನು ಖಡ್ಗವೆತ್ತಿ ಹೊಡೆಯುವಾಗ ನಾವು ಅವನನ್ನು ಗುದ್ದಿ ನೆಲಕ್ಕೆ ಕೆಡವುತ್ತೇವೆಂದು ಏರಿ ಹೋದರೆ ಏನು ಪರಿಣಾಮವಾಗಬಹುದು? ವಿಶ್ವಾಸಘಾತವೆಂಬುದೊಂದು ಶಸ್ತ್ರವಿರುತ್ತದೆ; ಅನ್ಯಶಸ್ತ್ರಗಳಿಂದ ಪ್ರಯೋಜನವಾಗದೆ ಇದ್ದಾಗ ಬಹು ಜನರ ಕಲ್ಯಾಣೇಚ್ಛೆಯಿಂದ ನಿರ್ವಾಹವಿಲ್ಲದೆ ಆ ಶಸ್ತ್ರವನ್ನು ಉಪಯೋಗಿಸಿದರೆ ಉಪಯೋಗಿಸಬಹುದು; ಆದರೆ ಸ್ವಾರ್ಥವು ಮಾತ್ರ ಅದರಲ್ಲಿ ಸರ್ವಥಾ ಇರಕೂಡದು; ಅದರಂತೆ, ಸೇರಿಗೆ ಸವ್ವಾಸೇರಾಗಿ ತೋರಿಸುವ ಪ್ರಸಂಗದಲ್ಲಿಯೂ ಈ ಶಸ್ತ್ರವನ್ನು ಉಪಯೋಗಿಸಬಹುದು.

೧೨ನೆಯ ಪ್ರಕರಣ

ಖಾನನ ಮನೋದಯವು

ಪಂತಾಜಿ ಗೋಪೀನಾಥನು ಪ್ರತಾಪಗಡದಿಂದ ಬಂದ ಬಳಿಕ ಪದ್ಧತಿಯಂತೆ ಖಾನನನ್ನು ಕಾಣಲಿಕ್ಕೆ ಹೋದನು. ಖಾನನ ಬಳಿಗೆ ಬೇಕಾದಾಗ ಹೋಗಲಿಕ್ಕೆ ಆತನಿಗೆ ಪ್ರತಿಬಂಧವಿದ್ದಿಲ್ಲ. ಏನಾದರೂ ಮಹತ್ವದ ಸಂಗತಿಯಿದ್ದ ಹೊರತು ತನ್ನ ವಕೀಲನು ನಿರರ್ಥಕ ಬರುವವನಲ್ಲವೆಂದು ತಿಳಿದು ಖಾನನು ಆತನ ಭೆಟ್ಟಿಯನ್ನು ಉತ್ಸುಕತೆಯಿಂದ ತಕ್ಕೊಳ್ಳುತ್ತಿದ್ದನು. ಈಗಂತೂ ಪಂತನು ಪ್ರತಾಪಗಡದಿಂದ ಬಂದಿದ್ದನೆಂದ ಬಳಿಕ ಖಾನನು ಆತನನ್ನು ಉತ್ಸುಕತೆಯಿಂದ ಬರಮಾಡಿಕೊಂಡದ್ದರಲ್ಲಿ ಆಶ್ಚರ್ಯವೇನು? ಶಿಷ್ಟಾಚಾರದಂತೆ ಮುಜರೆ ಮುರವತ್ತುಗಳು ಆದ ಬಳಿಕ ಖಾನನು ಪಂತನನ್ನು ಕುರಿತು—

ಖಾನ—ಯಾಕೆ ಪಂತ, ಶಿವಾಜಿಯು ನಮಗೆ ಅನುಕೂಲವಾದನೋ ಇಲ್ಲವೋ? ನಮ್ಮ ಮಾತನ್ನು ಆತನು ಸಹಜವಾಗಿ ಒಪ್ಪಿಕೊಂಡಿರಬಹುದು. ಒಪ್ಪಿಕೊಳ್ಳದೆಯೇನು ಮಾಡುವನು? ಆತನು ನಮ್ಮನ್ನು ನೋಡಿ ನಿಜವಾಗಿ ಅಂಜಿಹೋಗಿರುತ್ತಾನೆ. ಹಾಗಿಲ್ಲದಿದ್ದರೆ ಆತನು ಇಷ್ಟು ಪ್ರಶಸ್ತ

ವಾದ ಮಾರ್ಗವನ್ನು ನಮ್ಮ ಸಲುವಾಗಿಯೇ ಮಾಡಿಸಬಹುದಾಗಿತ್ತೆ? ನಮ್ಮ ಸರಬರಾಯಿಯ ವ್ಯವಸ್ಥೆಯನ್ನು ಇಷ್ಟು ಉತ್ತಮ ರೀತಿಯಿಂದ ಇಡಿಸಬಹುದಾಗಿತ್ತೆ? ನಮ್ಮ ಮನಸ್ಸನ್ನು ಒಲಿಸಿಕೊಳ್ಳುವುದಕ್ಕಾಗಿ ಆತನು ಇಷ್ಟು ಉತ್ತಮ ವ್ಯವಸ್ಥೆಯನ್ನು ಮಾಡಿದ್ದಾನೆ.

ಪಂತ—ಖಾವಿಂದ, ಶಿವಾಜಿಯನ್ನು ಜನರು ಉತ್ತಮ ಮುತ್ಸದ್ದಿ ಯೆಂದು ಹೇಳುವದೇನು ಸುಳ್ಳಲ್ಲ. ತಮ್ಮ ಮುಂದೆ ತನ್ನ ಆಟವೇನು ನಡೆಯದೆಂದು ಆತನಿಗೆ ತೋರಿದ್ದರಿಂದ ಆತನು ಹಿಂದಕ್ಕೆ ಸರಿದನು. ಮತ್ತೊಬ್ಬನಾವನಾದರೂ ತಿಳಿಗೇಡಿಯಾಗಿದ್ದರೆ, ತಮ್ಮ ಸೈನ್ಯಕ್ಕೆ ಎದು ರಾಗಿ ತನ್ನ ಸರ್ವಸ್ವದ ನಾಶಮಾಡಿಕೊಳ್ಳುತ್ತಿದ್ದನು. ಶಿವಾಜಿಯು ಅಂಥ ಮೂರ್ಖನಿರುವದಿಲ್ಲ. ನನ್ನನ್ನು ಆತನು ಆದರಿಸಿದನು; ವಿಶೇಷವಾಗಿ ಉಪಚರಿಸಿದನು. . ತಮ್ಮ ಮಾತನ್ನು ಆತನು ಮೀರುವ ಹಾಗಿಲ್ಲ. ತಾವು ಹೇಳಿದ ಹಾಗೆ ಕೇಳಲಿಕ್ಕೆ ಆತನು ಒಡಂಬಡುತ್ತಾನೆ; ಆದರೆ ವಿಜಾಪುರಕ್ಕೆ ತಮ್ಮ ಸಂಗಡ ಬರಲಿಕ್ಕೆ ಮಾತ್ರ ಆತನು ಒಪ್ಪಿಕೊಳ್ಳುವದಿಲ್ಲ; ಇದೊಂದು ಮಾತನ್ನು ಬಿಟ್ಟು, ತಾವು ಬೇಕಾದದ್ದು ಹೇಳಿದರೂ ಆತನು ಕೇಳುವನು.

ಖಾನ (ಗಟ್ಟಿಯಾಗಿ ನಕ್ಕು)—ಪಂತ, ನೀವು ಒಳ್ಳೆಯ ಮುತ್ಸದ್ದಿ ಗಳು, ಬಹು ದೂರದರ್ಶಿಗಳು. ನಿಮ್ಮಂಥವರು ಹೀಗೆಂದರೆ ನಾನೇನು ಹೇಳಲಿ? ಆತನು ನಮಗೆ ಅಂಜಿ ಶರಣು ಬಂದಿರಲು "ನಾನು ಹೀಗೆ ಮಾಡುವುದಿಲ್ಲ-ಹಾಗೆ ಮಾಡುವುದಿಲ್ಲ, ಅಲ್ಲಿಗೆ ಬರುವುದಿಲ್ಲ-ಇಲ್ಲಿಗೆ ಬರುವು ದಿಲ್ಲ" ಎಂದರೆ ಯಾರು ಕೇಳಬೇಕು? ಇನ್ನು ಈ ಮಾತಿನ ವಿಷಯವಾಗಿ ಅರೆದಾಡುವ ಇಚ್ಛೆಯು ನನಗಿಲ್ಲ. ಈಗ ಶಿವಾಜಿಯು ಹೇಳುವ ಕರಾರು ಗಳಿಗೆಲ್ಲ ನಾವು ಒಪ್ಪಿಕೊಂಡು ನಮ್ಮ ಸೈನ್ಯ ಸಹಿತವಾಗಿ ನಾವು ಆತನ ಬಳಿ ಗಂತೂ ಹೋಗೋಣ; ಅಲ್ಲಿ ನಮ್ಮಿಬ್ಬರ ಭೆಟ್ಟಿಯಂತು ಆಗಲಿ. ಆಗ ನಾನು ಶಿವಾಜಿಯ ಗೋಣು ಮುರಿದೆನೆಂದು ನೀವು ತಿಳಿಯಿರಿ. ಶಿವಾಜಿಯು ಒಮ್ಮೆ ನಮ್ಮ ಕೈಯಲ್ಲಿ ಪೂರ್ಣವಾಗಿ ಸಿಕ್ಕನೆಂದರೆ, ಬೇಕಾದರೆ ಅವನ ಗೋಣು ಮುರಿದು ಚಲ್ಲೋಣ, ಬೇಡಾದರೆ ಆತನನ್ನು ವಿಜಾಪುರಕ್ಕೆ ಸೆರೆ ಹಿಡಕೊಂಡು ಹೋಗೋಣ. ಅದು ನಮ್ಮ ಕೈಯೊಳಗಿನ ಮಾತು. ಪಂತ ನಮ್ಮ ಪ್ರತಿಜ್ಞೆಯ ಭಂಗವಾಗಬಾರದಲ್ಲವೆ?

ಪಂತ—ತಮ್ಮ ಪ್ರತಿಜ್ಞೆಯು ಭಂಗವಾಗಬೇಕೆಂದು ನಾನಾದರೂ ಎಲ್ಲಿ ಹೇಳುವೆನು? ಆದರೆ ಇಷ್ಟು ದಿನ ನಮ್ಮ ಶತ್ರುವೆಂದು ಸಿಕ್ಕಹಾಗೆ ಪುಂಡಾಟಿಕೆ ಮಾಡುತ್ತಿದ್ದ ಶಿವಾಜಿಯು, ಈಗ ನಮ್ಮ ನೌಕರನೆಂದು ಶರಣು ಬಂದು ಹೇಳಕೊಳ್ಳುತ್ತಿರುವದರಿಂದ, ತಮ್ಮ ಪ್ರತಿಜ್ಞೆಯ ಭಂಗವಾದಲ್ಲಿ ವ್ಯತ್ಯಾಸವೇನು ನನಗೆ ತೋರುವದಿಲ್ಲ. ಸ್ವತಂತ್ರನಾಗಿದ್ದ ಶಿವಾಜಿಯು ನೌಕರನಾದ ಬಳಿಕ ಒಂದು ಬಗೆಯಿಂದ ಅವನನ್ನು ತಾವು ನಾಶಗೊಳಿಸಿದ ಹಾಗಾಗಲಿಲ್ಲವೆ? ಪ್ರತ್ಯಕ್ಷ ಆತನನ್ನು ವಿಜಾಪುರಕ್ಕೆ ಹಿಡಿದುಕೊಂಡು ಹೋಗುವದರಿಂದಲೇ ಮಹತ್ವವೇನು? "ಪ್ರತಿಜ್ಞೆ ಪ್ರತಿಜ್ಞೆ" ಎಂದು, ಹರಿಯುವತನಕ ಜಗ್ಗುವಾಗ ಮುಂದೆ ಏನಾದರೂ ವಿಪರೀತ ಪ್ರಸಂಗ ಒದಗಿದರೆ ಹ್ಯಾಗೆ?

ಖಾನ—ನಿಮ್ಮ ಮಾತು ಕೇಳಿ ನನಗೆ ನಗೆ ಬರುತ್ತದೆ. ಶಿವಾಜಿಯ ಕಳ್ಳತನದ, ಹಾಗು ಸುಳ್ಳುತನದ ಸುದ್ದಿಗಳನ್ನು ನೀವು ಎಷ್ಟು ಕೇಳಿರುವುದಿಲ್ಲ? ಇಂದು ನಮ್ಮ ನೌಕರನೆಂದು ಹೇಳುವ ಆತನು, ನಾಳೆ ನಾವು ವಿಜಾಪುರಕ್ಕೆ ಹೋದಕೂಡಲೆ ಯಥಾಸ್ಥಿತವಾಗಿ ತನ್ನ ಪುಂಡಾಟಿಕೆಯ ಕಾಯಕವನ್ನು ನಡಿಸಿಯೇ ನಡೆಸುವನು. ಅಂದ ಬಳಿಕ ಅವನು ಶರಣು ಬರುವದರಲ್ಲಿಯ ತಾತ್ಪರ್ಯವೇನು? ಈ ಪ್ರಸಂಗದಲ್ಲಿ ನಾನು ಎರಡರಲ್ಲಿ ಒಂದು ಮಾಡಬೇಕು. ಅಂದರೆ, ಶಿವಾಜಿಯನ್ನು ಹೊಡೆದಾದರೂ ಕೆಡವಬೇಕು, ಇಲ್ಲವೆ ಅವನನ್ನು ವಿಜಾಪುರಕ್ಕೆ ಸೆರೆಹಿಡಿದಾದರೂ ಒಯ್ಯಬೇಕು. ಪ್ರಸಂಗ ಒದಗಿದಲ್ಲಿ ನಾನು ಅವನನ್ನು ಕೊಂದೇಬಿಡುವೆನು. ಅವನು ಬಹಳ ಹೇಳಿಕೊಂಡು ಕಾಲುಬಿದ್ದರೆ ಸೆರೆ ಹಿಡಿದೊಯ್ಯಬಹುದು. ಇದು ನಿಶ್ಚಯವು!

ಪಂತ—ಅಂದಬಳಿಕ ನೀವು ಹೀಗೆ ಆತನಿಗೆ ಸ್ಪಷ್ಟವಾಗಿ ಹೇಳಿ ಕಳಿಸಿಬಿಡುವುದು ನೆಟ್ಟಗಲ್ಲವೆ? ಇದರಿಂದ ವ್ಯರ್ಥ ಕಾಲಹರಣವಾಗುವದಾದರೂ ತಪ್ಪೀತು. ನೀವು ಅವನಿಗೆ—"ಅಪ್ಪಾ, ನೀನು ವಿಜಾಪುರಕ್ಕೆ ಬರಲೇಬೇಕು; ಅದು ತಪ್ಪುವದಿಲ್ಲ. ಒಳ್ಳೆಯ ಮಾತಿನಿಂದ ಬಂದರೆ ನೆಟ್ಟಗಾಯಿತು; ಇಲ್ಲದಿದ್ದರೆ ನಿನ್ನನ್ನು ನಾವು ಒತ್ತಾಯದಿಂದ ಕರಕೊಂಡ್ಯು ಹೋಗುವೆವು" ಎಂದು ಹೇಳಿ ಕಳಿಸಿಬಿಡಿರಿ.

ಖಾನ—ಇಲ್ಲ ಇಲ್ಲ; ನಾನು ಹಾಗೆ ಹೇಳಿ ಕಳಿಸುವದಿಲ್ಲ. ಅವನಿದ್ದಲ್ಲಿಗೆ ಹೋಗಿ ಅವನನ್ನು ಚಂಡು ಹಿಡಿದು ಬಗ್ಗಿಸಿದರೇ ನಾನು ನಿಜವಾದ ಅಫಜುಲಖಾನನು! ಅವನು ಬೇಕಾದ ಕುಯುಕ್ತಿಗಳನ್ನು ಯೋಚಿಸಲಿ, ಬೇಕಾದ ಹಾಗೆ ಹಾರಾಡಲಿ! ಅವನು ತೀರ ಗಿಡ್ಡನಿರುವನೆಂದು ಕೇಳಿದ್ದೇನೆ. ಅವನು ನಮ್ಮ ಟೊಂಕಕ್ಕೆ ಸಹ ಬರಲಿಕ್ಕಿಲ್ಲ; ಅವನನ್ನು ಬಾಗಿಸುವದು ಎಷ್ಟು ಹೊತ್ತು? ಸುಮ್ಮನೆ ನಮ್ಮ ಕೈಯನ್ನು ಅವನ ತಲೆಯ ಮೇಲೆ ಇಟ್ಟರೆ ಸಾಕು, ಅವನು ನೆಲಕ್ಕೆ ಕುಸಿಬೀಳುವನು.

ಈ ಮೇರೆಗೆ ನುಡಿದು ಖಾನನು ಗಹಗಹಿಸಿ ನಗುತ್ತ ತನ್ನ ಕೈಯನ್ನು ಗೋಪೀನಾಥ ಪಂತನ ಹೆಗಲ ಮೇಲೆ ಇಟ್ಟು, ಅದರ ಭಾರವು ಪಂತನ ಅನುಭವಕ್ಕೆ ಬರುವದಕ್ಕಾಗಿ ತನ್ನ ಕಸುವು ಹಾಕಿ ಒತ್ತಿದನು. ಅದಕ್ಕೆ ಗೋಪೀನಾಥಪಂತನು ಏನೂ ಮಾತಾಡಲಿಲ್ಲ. ಅವನ ಹುಬ್ಬುಗಳು ಮಾತ್ರ ಗಂಟಿಕ್ಕಿದವು. ಆತನು ಮನಸ್ಸಿನಲ್ಲಿ -"ಇವನು ಎಷ್ಟು ಉನ್ಮತ್ತನಾಗಿರುವನು! ಸೌಜನ್ಯದ ಗಂಧವು ಕೂಡ ಇವನಲ್ಲಿ ಇಲ್ಲವಲ್ಲ! ಇವನ ಉನ್ಮತ್ತತನಕ್ಕೆ ತಕ್ಕ ಪೆಟ್ಟು ಬಿದ್ದಾಗ ಇವನ ಗತಿಯೇನಾದೀತು! ಇವನು ಮಹಾರಾಜರನ್ನು ಸೆರೆಹಿಡಿದೊಯ್ಯುವದರ ಬದಲು, ಮಹಾರಾಜರೇ ಇವನನ್ನು ಸೆರೆಹಿಡಿದೊಯ್ದರೆ ಇವನ ಸೊಂಡೆಯೊಣಗೀತಲ್ಲ! ಇಂಥ ಉನ್ಮತ್ತರು ಹಿತದ ಮಾತುಗಳನ್ನು ಕೇಳುವರೆ? ಇಂಥವರ ದುಷ್ಟ ಮಾರ್ಗಗಳೇ ಇವರನ್ನು ನಾಶಗೊಳಿಸುವಾಗ, ಯಾವ ಹಿತಕರ್ತರು ಏನು ಮಾಡುವರು? ಮಹಾರಾಜರು ಒಳ್ಳೇ ಕರ್ತೃತ್ವಶಾಲಿಗಳಿರುವರೆಂಬುದರ ಗಂಧವು ಕೂಡ ಇವನಿಗೆ ಹತ್ತಿರುವದಿಲ್ಲ. ಇಂಥ ಪ್ರಸಂಗದಲ್ಲಿ ಇವನನ್ನು ಎಚ್ಚರಗೊಳಿಸುವದು ಅವಶ್ಯವಿದ್ದರೂ, ಇವನು ನನ್ನ ಮಾತು ಕೇಳಿದರಷ್ಟೆ ಎಚ್ಚರಗೊಳಿಸುವದು. ಇವನು ತನ್ನ ಗರ್ವದ, ಹಾಗು ಡೌಲಿನ ಫಲವನ್ನು ಭೋಗಿಸಲೊಲ್ಲನೇಕೆ? ಮಹಾರಾಜರು ಇವನನ್ನು ತಮ್ಮ ಬಲೆಯಲ್ಲಿ ಹಿಡಿದು, ಇವನ ಸೈನ್ಯವನ್ನು ನಾಶಗೊಳಿಸಿದಾಗ ಇವನ ಕಣ್ಣುಗಳು ತಾವೇ ತೆರೆಯುವವು" ಎಂದು ಅಂದುಕೊಂಡು ಖಾನನನ್ನು ಕುರಿತು—

ಪಂತ—ಖಾವಿಂದ, ಶಿವಾಜಿಯು ತಮಗಿಂತ ಶಕ್ತಿಯಲ್ಲಿ ಕಡಿಮೆ

ಯಾಗಿದ್ದರೂ, ಯುಕ್ತಿಯಲ್ಲಿ ಅವನ ಪ್ರಸಿದ್ಧಿಯು ವಿಶೇಷವಾಗಿರುತ್ತದೆ; ಆದ್ದರಿಂದ ಅವನೊಡನೆ ಎಚ್ಚರದಿಂದ ವ್ಯವಹರಿಸಬೇಕಾಗುವದು.

ಖಾನ—ಶಿವಾಜಿಯ ಬುದ್ಧಿವಂತಿಕೆಯು ನನಗೆ ಗೊತ್ತಾಗಿದೆ ಬಿಡಿರಿ. ಅವನ ಕಡೆಯಿಂದ ಗುಪ್ತ ಸಂಗತಿಯನ್ನು ಅರಿತುಕೊಳ್ಳುವದಕ್ಕಾಗಿ ನಮ್ಮ ಬಳಿಯಿಂದ ಹೋದವರಿಬ್ಬರನ್ನು ಆ ಮೂಢನು ಹಿಂದು ಮುಂದಿನ ವಿಚಾರ ವಿಲ್ಲದೆ ಚಾಕರಿಗೆ ಇಟ್ಟುಕೊಂಡನು.

ಪಂತ—ನೀವು ಹೀಗೆ ಶಿವಾಜಿಯನ್ನು ಮೂಢನೆಂದು ಎಣಿಸಿ ಮೋಸ ಹೋಗಬಾರದು. ನಾನು ಮೂರು ನಾಲ್ಕು ಸಾರೆ ಆತನ ಬಳಿಗೆ ಹೋಗಿ ಬಂದಿದ್ದೇನೆ. ಒಮ್ಮೆಯಾದರೂ ಆತನ ಮೂಢತನವು ನನ್ನ ಅನುಭವಕ್ಕೆ ಬಂದಿರುವದಿಲ್ಲ. ನೀವು ನಮ್ಮ ಕಡೆಯವರೆಂದು ತಿಳಿದು ಇಬ್ಬರನ್ನು ಶಿವಾಜಿಯ ಕಡೆಗೆ ಕಳಿಸಿರಬಹುದು; ಆದರೆ ಶಿವಾಜಿಯು ಅವರನ್ನು ತನ್ನ ಕಡೆಗೆ ಮಾಡಿಕೊಂಡಿರಲಿಕ್ಕಿಲ್ಲವೆಂದು ಯಾರು ಹೇಳಬೇಕು? ಶಿವಾಜಿಯು ಬಲು ಸವಿಮಾತಿನವನು. ಅವನ ಮಾತಿಗೆ ಮರುಳಾಗದವರು ಅಪರೂಪವೆಂತಲೇ ಹೇಳಬಹುದು. ಅಂದಬಳಿಕ ನಿಮ್ಮ ಮಂತ್ರವೇ ನಿಮಗೆ ತಿರುಗಿದಂತಾಗಿ, ನಿಮ್ಮ ಗುಪ್ತಚಾರರು ಶಿವಾಜಿಯ ಗುಪ್ತಚಾರರಾಗಿರಬಹುದು. ಹೋಗುವಾಗ ನಿಮ್ಮ ಗುಪ್ತಚಾರರಿದ್ದು, ಬರುವಾಗ ಶಿವಾಜಿಯ ಗುಪ್ತ ಚಾರರಾಗಿ ಬಂದರೆ ಮಾಡುವದೇನು? ಈವರೆಗೆ ಬಹುಜನರಿಗೆ ಮಂಕು ಬೂದಿಯನ್ನು ಹಚ್ಚಿದ್ದ ಶಿವಾಜಿಯನ್ನುನೀವು ಮೂಢನೆಂದು ತಿಳಿಯುವಿರಾ?

ಖಾನ—ಯಾಕೆ ಪಂತರೇ, ಶಿವಾಜಿಯ ಸ್ತುತಿಯನ್ನು ಬಹಳ ಮಾಡ ಹತ್ತಿದಿರಿ? ನಿಮ್ಮ ಮೇಲೆಯೂ ಮಂತ್ರಪ್ರಯೋಗವಾದಂತೆ ತೋರುತ್ತದೆ. ಇಲ್ಲದಿದ್ದರೆ, ಶಿವಾಜಿಯನ್ನು ಇಷ್ಟು ವರ್ಣಿಸಲಾರಿರಿ.

ಪಂತ—ಮಂತ್ರಪ್ರಯೋಗ ಮಾಡುವದು ಆತನ ಕೈಯೊಳಗಿನದ್ದಾದ್ದರಿಂದ, ಆತನು ನಮ್ಮ ಮೇಲೆ ಮಂತ್ರವನ್ನು ಪ್ರಯೋಗಿಸಿರಬಹುದು. ಆದರೆ ಆ ಮಂತ್ರಕ್ಕೆ ನಮನ್ನು ಒಳಪಡಿಸಿಕೊಳ್ಳುವದು ಆತನ ಕೈಯೊಳಗಿರುವದಿಲ್ಲ; ಮಂತ್ರಕ್ಕೆ ಒಳಗಾಗುವದು ಬಿಡುವದು ನಮ್ಮ ಕೈಯೊಳಗಿರುತ್ತದೆ; ಅಂದಬಳಿಕ ಆತನು ನಮ್ಮ ಮೇಲೆ ಮಂತ್ರವನ್ನು ಪ್ರಯೋಗಿಸಿದ್ದರೂ ಅದರಿಂದಾಗುವ ಪ್ರಯೋಜನವೇನು? ಎಳಿಯ ಗಿಡವು ಮಣಿಸಿದ

ಹಾಗೆ ಮಣಿಯಬಹುದು; ಆದರೆ ಬಲಿತ ಬಹು ದಿವಸದ ಗಿಡವನ್ನು ಮಣಿಸ ಹೋದರೆ ಮಣಿಯಬಹುದೆ? ಮಣಿಸುವವನು ಹೆಚ್ಚು ಮಣಿಸಹೋದಗೆ ಗಿಡವು ಚೂರುಚೂರಾಗಬಹುದಲ್ಲದೆ ಮಣಿಯಲಾರದು. ಇದೇ ಮಾತು ನಮ್ಮಂಥ ಹಳೆಯ ಮಂದಿಗೂ ಹತ್ತುವದು. ನಾವು ಒಮ್ಮೆ ಒಂದು ದಿಕ್ಕು ಹಿಡಿದು, ಅಥವಾ ಒಂದು ನಿಟ್ಟು ಹಿಡಿದು ನಡೆಯಹತ್ತಿದೆವೆಂದರೆ, ಕಡೆತನಕ ನಮ್ಮ ನಡತೆಯಲ್ಲಿ ಅಂತರವಾಗಲಿಕ್ಕಿಲ್ಲೆಂಬದನ್ನು ತಾವು ನೆನಪಿನಲ್ಲಿಡಬೇಕು. ನನ್ನ ಈ ಸ್ಥಿತಿಯನ್ನು ಶಿವಾಜಿಯು ಚನ್ನಾಗಿ ಬಲ್ಲವನಾದ್ದರಿಂದ, ನನ್ನ ವಿಷಯದ ಒಣ ಉಸಾಬರಿಗೆ ಆತನು ಬರಲಾರನು. ಬಂದರೆ ಅದರಿಂದ ಪ್ರಯೋಜನವೂ ಆಗದು.

ಖಾನ—ಪಂತ, ಆ ಶಿವಾಜಿಯ ತಂತ್ರಗಳು ನಮ್ಮ ಮೇಲೆ ನಡೆಯವು. ನಮ್ಮ ಪ್ರಚಂಡ ಸೈನ್ಯಕ್ಕೆ ಆತನು ಎಂದೂ ಈಡಾಗನು. ಆತನು ನಮ್ಮನ್ನು ಸೈನ್ಯ ಸಹಿತವಾಗಿ ತನ್ನ ಮನೆಯೊಳಗೆ ಕರೆದುಕೊಂಡು ಹೋಗಿ, ನಮ್ಮ ಕೈಯಲ್ಲಿ ಹ್ಯಾಗೆ ಸಿಗದೆಯಿರುವನೋ ನಾವಂತು ಅರಿಯೆವು. ಇನ್ನು ಈ ಅರೆದಾಟವು ಸಾಕು, ನೀವು ಈಗಾಗಲೇ ಇನ್ನೊಮ್ಮೆ ಶಿವಾಜಿಯ ಬಳಿಗೆ ಹೋಗಿ ಆತನಿಗೆ ಸ್ಪಷ್ಟವಾಗಿ ಹೇಳಿರಿ. ನಾವು ಆತನ ಯಾವ ಕರಾರುಗಳನ್ನೂ ಪಾಲಿಸುವದಿಲ್ಲ. ಆತನು ಯಾವ ಕರಾರುಗಳನ್ನೂ ಮುಂಪೆ ಮಾಡದೆ ನಮಗೆ ಶರಣು ಬರಬೇಕು; ಆಮೇಲೆ ನಮ್ಮ ಮನಸ್ಸಿಗೆ ಬಂದಂತೆ ನಾವು ಮಾಡುವೆವು. ಆತನು ತಾನಾಗಿ ಶರಣು ಬಾರದಿದ್ದರೆ ನಾವು ಶರಣು ಬರುವಂತೆ ಮಾಡುವೆವು. ಹು, ಹೋಗಿರಿ, ಇನ್ನು ಎರಡನೆಯ ಮಾತು ಆಡಬೇಡಿರಿ!

ಪಂತ,—ನಾನು ತಮ್ಮ ನೌಕರನು. ತಮ್ಮ ಅಪ್ಪಣೆಯನ್ನು ಮನ್ನಿಸಿ ಅದರಂತೆ ಮಾಡುವುದು ನನ್ನ ಧರ್ಮವು; ಆದರೆ ನಾನು ತಮ್ಮ ಸಾಮಾನ್ಯ ನೌಕರನಲ್ಲ; ವಕೀಲನಿರುತ್ತೇನೆ. ನನಗೆ ಯೋಗ್ಯ ತೋರಿದ ಮಾರ್ಗವನ್ನು ತಮಗೆ ಸೂಚಿಸುವದು ನನ್ನ ಕರ್ತವ್ಯವಾಗಿರುತ್ತದೆ. ಅಂದಬಳಿಕ ನಾನು ಹೆಚ್ಚುಕಡಿಮೆ ಮಾತಾಡಿದರೂ ತಾವು ನನ್ನನ್ನು ಕ್ಷಮಿಸುವಿರೆಂಬ ನಂಬಿಗೆಯು ನನಗಿರುವದು. ಖಾವಿಂದ, ತಾವು ಹ್ಯಾಗಿದ್ದರೂ ಶಿವಾಜಿಯನ್ನು ಸ್ವಾಧೀನಪಡಿಸಿಕೊಳ್ಳದೆ ಬಿಡುವ ಹಾಗಿಲ್ಲವಷ್ಟೆ? ಅಂದಬಳಿಕ

ಸುಮ್ಮನೆ ಅವನನ್ನು ಬೆದರಿಸಿ ಕಾರ್ಯಕ್ಕೆ ವಿಘ್ನವನ್ನು ಯಾಕೆ ಉಂಟು ಮಾಡಿಕೊಳ್ಳುತ್ತೀರಿ? ಈಗ ಅವನು ಹೇಳಿದ ಹಾಗೆ ಕೇಳಿ, ಭೆಟ್ಟಿಯ ನೆವದಿಂದ ಅವನು ನಿಮ್ಮ ಅಳವಿನೊಳಗೆ ಬರುವಂತೆ ಮಾಡಿರಿ. ಆಮೇಲೆ ನಿಮ್ಮ ಮನಸ್ಸಿಗೆ ಬಂದಂತೆ ಕಾರ್ಯವನ್ನು ಸಾಧಿಸಿಕೊಂಡರಾಯಿತು. ಹೀಗೆ ಮಾಡದೆ ಅವನನ್ನು ನೀವು ಬೆದರಿಸಿಬಿಟ್ಟರೆ, ಆತನು ಹಾಹಾ ಅನ್ನು ವದರೊಳಗಾಗಿ ಇನ್ನೂರು ಹರದಾರಿಯ ಮೇಲೆ ಎಲ್ಲಿಗಾದರೂ ಹೋಗಿಬಿಡ ಬಹುದು. ನಾಲ್ಕುದಿಕ್ಕಿಗೆ ನಾಲ್ಕು ಗುಂಪುಗಳು ಹೋಗಿಬಿಟ್ಟರೆ, ಶಿವಾಜಿಯು ಯಾವ ಗುಂಪಿನಲ್ಲಿರುವನೆಂಬದರ ಗೊತ್ತು ಸಹ ನಮಗೆ ಆಗಲಿಕ್ಕಿಲ್ಲ; ಆದ್ದರಿಂದ ನೀವು ಆತನು ಹೇಳಿದ ಹಾಗೆ ಕೇಳಬೇಕು. ಆತನು ಸ್ವಲ್ಪ ಸೈನ್ಯವನ್ನು ತಕ್ಕೊಂಡು ಬರಹೇಳಿದರೆ, ಸ್ವಲ್ಪ ಸೈನ್ಯವನ್ನು ತಕ್ಕೊಂಡು ಹೋಗಬೇಕು. ಸೈನ್ಯದ ಸಂಬಂಧದಿಂದ ಮೊನ್ನೆ ಮಾತು ಹೊರಟಿತ್ತು. "ನೀವು ಬಹಳ ಸೈನ್ಯವನ್ನು ತಕ್ಕೊಂಡು ಬಂದರೆ, ನೀವು ನಮಗೆ ಕೇಡು ಬಗೆಯುವ ಯೋಚನೆ ಮಾಡಿರಬಹುದೆಂದು ನಮಗೆ ಸಂಶಯವು ಉತ್ಪನ್ನ ವಾಗುವದು; ಅಂವಬಳಿಕ ನಾವು ಖಾನಸಾಹೇಬರನ್ನು ಕಾಣಲಿಕ್ಕೆ ಹೋಗಿ ಸಂಕಟವನ್ನುಂಟುಮಾಡಿಕೊಳ್ಳುವದಾದರೂ ಯಾತಕ್ಕೆ? ಖಾನಸಾಹೇಬರು ತಮ್ಮ ಸೈನ್ಯವನ್ನು ತಕ್ಕೊಂಡು ಬಂದರೂ, ಅದನ್ನು ನಮ್ಮ ಭೆಟ್ಟಿಯ ಸ್ಥಳ ದಿಂದ ಐದು ಹರದಾರಿಯ ಅಂತರದಲ್ಲಿ ಇಟ್ಟು ಬರಬೇಕು. ಅವರು ತಮ್ಮ ಸಂಗಡ ಸ್ವಲ್ಪ ಜನರನ್ನು ಕರಕೊಂಡು ಬರತಕ್ಕದ್ದು." ಎಂದು ಶಿವಾಜಿಯು ಹೇಳಿರುವನು. ಅವನು ಏನೇ ಹೇಳಲಿ, ನಾವು ಯುಕ್ತಿಯಿಂದ ಅವನ ಮಾತು ನಡಿಸಿದಹಾಗೆ ತೋರಿಸಿ ಭೆಟ್ಟಿಯ ಯೋಗವನ್ನು ಮೊದಲು ತಂದು ಕೊಳ್ಳತಕ್ಕದ್ದು. ಆತನು ಹೇಳಿದ್ದಕ್ಕೆಲ್ಲ ತಾವು ಈಗ ಒಡಂಬಡಬೇಕು. ಅವನ ತಂತ್ರಕ್ಕೆ ಸರಿಯಾಗಿ ನಾವೂ ತಂತ್ರವನ್ನು ಒಡ್ಡಬೇಕು; ಆದರೆ ಅದರ ಸದ್ದು ಶಿವಾಜಿಗೆ ಹತ್ತಲಾಗದು. ನಾವು ತಂತ್ರಗಾರಿಕೆಗೆ ಮನಸ್ಸು ಮಾಡಿರುವವೆಂಬದು ಕೂಡ ಆತನಿಗೆ ತಿಳಿಯಕೂಡದು. ಖಾವಿಂದ ನನ್ನ ಮನಸ್ಸಿಗೆ ಸರಿಯಾಗಿ ತೋರಿದ್ದನ್ನು ನಾನು ಸೂಚಿಸಿದ್ದೇನೆ. ತಮ್ಮ ಮನಸ್ಸಿಗೆ ಸರಿದೋರಿದಂತೆ ಮಾಡಲು ಖಾವಂದರವರು ಸಮರ್ಥರಿರು

ತ್ತೀರಿ. ನಾನು ಹೇಳಿದ್ದನ್ನು ತಾವು ಪೂರ್ಣವಾಗಿ ವಿಚಾರಿಸಬೇಕು. ವಿಚಾರಾಂತದಲ್ಲಿ ಸರಿಮೋರಿದಂತೆ ಮಾಡಬೇಕು.

ಗೋಪೀನಾಥಪಂತನ ಮೇಲೆ ಖಾನನ ವಿಶ್ವಾಸ ಬಹಳ; ಆದರೆ ಈಗ ತನ್ನ ಆ ವಕೀಲನ ಮಾತಿನಂತೆ ನಡೆದರೆ ತನಗೆ ಯಶಸ್ಸು ಬರಲಾರ ದೆಂಬ ಸಂಶಯವು ಆತನಲ್ಲಿ ಉತ್ಪನ್ನವಾಯಿತು. ತನ್ನ ಪ್ರತಿಜ್ಞೆಯು ಪೂರ್ಣವಾಗಬೇಕಾದರೆ, ಗೋಪೀನಾಥಪಂತನ ಆಲೋಚನೆಯಂತೆ ನಡೆ ಯುವದಕ್ಕಿಂತ, ತನ್ನ ಸಾಮರ್ಥ್ಯದ ಮೇಲೆ, ಹಾಗು ತನ್ನ ಸೈನ್ಯದ ಸಾಮರ್ಥ್ಯದ ಮೇಲೆ ವಿಶ್ವಾಸವಿಟ್ಟು ನಡೆಯುವದು ಯೋಗ್ಯವೆಂದು ಆತನಿಗೆ ತೋರಹತ್ತಿತು. "ಶಿವಾಜಿಯ ಮಾತು ಕೇಳದಿದ್ದರೆ ಅವನು ಕೈಗೆ ಸಿಗಲಿಕ್ಕಿಲ್ಲ, ಈ ಪ್ರಾಂತದಲ್ಲಿ ಬಹಳ ದಿವಸ ನಾನು ಕೊಳೆಯಬೇಕಾ ದೀತು" ಎಂಬ ವಿಚಾರಕ್ಕೆ ಒಳಗಾಗಿ, ಶಿವಾಜಿಯು ಹೇಳಿದಹಾಗೆ ನಾನು ಕೇಳುತ್ತ ಹೋಗುವದು ಯೋಗ್ಯವಾಗಿ ತೋರುವದಿಲ್ಲ. ಶರಣುಬರುವವನ ಕರಾರುಗಳನ್ನು ಶರಣುಮಾಡಿಕೊಳ್ಳುವವನು ನಡಿಸಬೇಕೆಂದು ಎಲ್ಲಿಯ ನ್ಯಾಯವು? ನಿಜವಾಗಿಯೆಂದರೆ, ಶಿವಾಜಿಯೇ ನಾನಿದ್ದಲ್ಲಿಗೆ ಬರಬೇಕಾ ಗಿದ್ದು, ನಾನು ಈಗ ಅವನಿದ್ದಲ್ಲಿಗೆ ಹೋಗುವದೇ ಹೆಚ್ಚಿನ ಮಾತಾಗಿರು ವುದು. ಹೀಗಿದ್ದು ಈಗ ಮತ್ತೆ ಶಿವಾಜಿಯ ರಗಳೆಗಳನ್ನು ನಾನು ಕೇಳ ಬೇಕೆನ್ನುವುದು ಎಲ್ಲಿಯ ನ್ಯಾಯವು? ಏನೋ ಸೈನ್ಯವನ್ನು ದೂರ ಬಿಟ್ಟು ಬರಬೇಕಂತೆ, ಸ್ವಲ್ಪ ಜನರನ್ನು ಸಂಗಡ ಕರಕೊಂಡು ಬರಬೇಕಂತೆ, ಶರಣುಬರುವವನ ಒಗರು ಎಷ್ಟು? ಅದನ್ನು ನಡಿಸಿಕೊಡುತ್ತ ಹೋಗು ವದು ನನಗೆ ಕುಂದುತರುವ ಮಾತಲ್ಲವೆ? ಶಿವಾಜಿಯು ನಾನಿದ್ದಲ್ಲಿಗೆ ಬಂದು, ರುಮಾಲದಿಂದ ಕೈ ಕಟ್ಟಿಕೊಂಡು ನಿಂತು—"ನಾನು ತಮ್ಮ ಬಂದಾ ಗುಲಾಮನಿದ್ದೇನೆಂ"ದು ಪ್ರಾರ್ಥಿಸಬೇಕಾಗಿತ್ತು. ಅದೊತ್ತಟ್ಟಿಗುಳಿದು ಶಿವಾ ಜಿಯು ಹೇಳಿದ ಹಾಗೆ ನಾನು ಕೇಳಬೇಕಾಯಿತಲ್ಲ! ಇದೆಲ್ಲಿಯ ರೀತಿಯು? ಇದು ಒಂದು ಬಗೆಯಿಂದ ನನಗೆ ಅಪಮಾನಕರವಲ್ಲವೆ? ಈಗ ನಾನು ಸ್ವಚ್ಛವಾಗಿ ಶಿವಾಜಿಗೆ—''ನಾನು ಬೇಕಾದಷ್ಟು ಜನ ದಂಡಾಳುಗಳನ್ನು ಸಂಗಡ ಕರಕೊಂಡು ಬರುವೆನು" ಎಂದು ಹೇಳಿಕಳಿಸಿದರೆ, ಅವನು ಮಾಡು ವದೇನು? ಇನ್ನು ಅವನು ಅಂಜಿ ಓಡಿಹೋಗುವನು; ಆದರೆ ಎಲ್ಲಿಗೆ ಓಡಿ

ಹೋಗುವನು? ಎಷ್ಟು ದಿವಸ ಓಡಿಹೋಗುವನು? ನಾನು ಈ ಪ್ರಾಂತ ದಲ್ಲಿ ಸ್ಥಿರವಾಗಿ ಇದ್ದು, ಅವನ ಸುತ್ತು ಕೈತೊಳಕೊಂಡು ಬೆನ್ನಹತ್ತುವೆನು; ಅಂದಬಳಿಕ ನನ್ನ ಉಪಟಲಕ್ಕೆ ಆತನು ಎಷ್ಟು ದಿವಸ ತಡೆಯುವನು ನೋಡೋಣ! ಎಂದು ಆಲೋಚಿಸಿ, ಗೋಪೀನಾಥಪಂತನನ್ನು ಕುರಿತು— "ಪಂತ, ನಿಮ್ಮ ಮಾತು ನಮ್ಮ ಮನಸ್ಸಿಗೆ ಬರುವದಿಲ್ಲ. ನಾನು ನಮ್ಮ ಇಡಿಯ ದಂಡಿನ ಛಾವಣಿಯನ್ನೇ ಸಂಗಡ ಕರಕೊಂಡು ಹೋಗುವೆನು. ''ಇಷ್ಟು ಜನರನ್ನು ಕರಕೊಂಡು ಬರ್ರಿ, ಅಷ್ಟು ಜನರನ್ನು ಕರಕೊಂಡು ಬರ್ರಿ" ಅನ್ನುವದರಲ್ಲಿ ಏನೋ ಮೋಸವಿದ್ದಂತೆ ತೋರುತ್ತದೆ.

ಈ ಮೇರೆಗೆ ಖಾನನು ಆಡಿದ ಮಾತುಗಳನ್ನು ಕೇಳಿ ಗೋಪೀನಾಥ ಪಂತನು—"ಏನು? ಶಿವಾಜಿಯು ಮೋಸ ಮಾಡುವನೆ? ನಿಮ್ಮೊಡನೆ ಮೋಸ ಮಾಡಿ ಅವನು ಪಾರಾಗಬಹುದೆ? ಈ ಮಾತು ನನಗೆ ತೀರ ಅಸಂಭವವಾಗಿ ತೋರುತ್ತದೆ. ನೀವು ಇತ್ತಕಡೆಗೆ ದಂಡೆತ್ತಿ ಬಂದದ್ದರಿಂದ ಆತನು ತೀರ ಹೆದರಿ ಹೋಗಿರುವನು. ನಾನು ಅವನ ಬಳಿಗೆ ಹೋದಾಗೆಲ್ಲ ಅವನು ಅಂಜಿಕೊಂಡಿದ್ದ ಲಕ್ಷಣಗಳು ನನ್ನ ಕಣ್ಣಿಗೆ ಬಿದ್ದಿವೆ. ಇಂಥವನು ಮೋಸವೇನು ಮಾಡುವನು? ಒಂದು ವೇಳೆ ಅವನು ಮೋಸ ಮಾಡಿದ ರಾದರೂ ಆಗುವದೇನು? ನೀವು ಕೆಲವು ಸೈನ್ಯವನ್ನು ಸಂಗಡಕರಕೊಂಡು ಹೋಗಿ ಸ್ವಲ್ಪ ಅಂತರದಲ್ಲಿ ಅದನ್ನು ಗುಪ್ತರೀತಿಯಿಂದ ಇಟ್ಟು ಬಿಟ್ಟಿದ್ದ ರಾಯಿತು. ಪ್ರಸಂಗದಲ್ಲಿ ಶಿವಾಜಿಯ ಸಮಾಚಾರವನ್ನು ತಕ್ಕೊಳ್ಳಲು ಅನುಕೂಲವಾಗುವದು. ಒಟ್ಟಿಗೆ ಶಿವಾಜಿಯನ್ನು ಪ್ರತಾಪಗಡದಿಂದ ಹೊರಗೆ ಹೋಗಗೊಡದೆ, ಉಪಾಯದಿಂದ ಅವನನ್ನು ಹಿಡಿಯಬೇಕು. ತಮ್ಮ ಅಂಜಿಕೆಯಿಂದ ಶಿವಾಜಿಗೆ ಏನೂ ತೋಚದ್ದರಿಂದ, ಅವನು ಭ್ರಮಿಷ್ಟನ ಹಾಗೆ ಮಾಡುತ್ತಿರುವನು. ತಾವೇ ನೋಡಿರಿ, ವೈರಿಯನ್ನು ಸೈನ್ಯಸಹಿತ ವಾಗಿ ಯಾವನಾದರೂ ತನ್ನ ಮನೆಯಲ್ಲಿ ಕರೆದುಕೊಂಡು ಹೋಗ ಬಹುದೋ? ಶತ್ರುವನ್ನು ಸಾಮ–ದಾನ–ಭೇದ–ದಂಡಗಳಿಂದ ಸ್ವಾಧೀನ ಪಡಿಸಿಕೊಳ್ಳಬೇಕಾಗುತ್ತದೆ. ಈ ಚತುರೋಪಾಯಗಳನ್ನು ತಮ್ಮ ಹಾಗೆ ಅರಿತವರು ಬಹು ಸ್ವಲ್ಪ ಜನರು ಇರಬಹುದು; ಆದರೆ ಈ ಸಂಬಂಧದಿಂದ ಶಿವಾಜಿಯ ರೀತಿಯನ್ನು ತಾವು ನೋಡಿದರೆ, ಅವನು ಅಂಜಿಕೆಯಿಂದ

ವಿವೇಕಭ್ರಷ್ಟನಾಗಿರುವನೆಂಬ ನನ್ನ ಮಾತು ತಮಗೂ ನಿಜವಾಗಿ ತೋರ ಬಹುದು. ತಮ್ಮಂಥ ಸರದಾರರು ಬಂದ ಬಳಿಕ ಯಾರ ಎದೆ ಒಡೆದು ನೀರಾಗಲಿಕ್ಕಿಲ್ಲ? ತಮ್ಮ ಬಲವೆಷ್ಟು, ಶಿವಾಜಿಯ ಬಲವೆಷ್ಟು? ತಮ್ಮ ಪಾಸಂಗಕ್ಕೆ ಆತನು ಹತ್ತಲಿಕ್ಕಿಲ್ಲ; ಆದ್ದರಿಂದ ತಾವು ನಿಶ್ಶಂಕೆಯಿಂದ ಶಿವಾಜಿಗೆ "ನಾವು ಸ್ವಲ್ಪ ದಂಡಾಳುಗಳನ್ನು ಸಂಗಡ ಕರಕೊಂಡು ಬರುವೆ ವೆಂದು" ಹೇಳಿ ಕಳಿಸಬೇಕು; ಮತ್ತು ಈಗ ಕರಕೊಂಡು ಬಂದಿರುವ ದಂಡಿನಲ್ಲಿ ಸಹ ಕೆಲವು ದಂಡನ್ನು ಹಿಂದಕ್ಕೆ ಕಳಿಸುವೆವೆಂತಲೂ ತಾವು ಹೇಳಿ ಕಳಿಸಬಹುದು.

ಸ್ತೋತ್ರಪ್ರಿಯನಾದ ಖಾನನು ಗೋಪೀನಾಥಪಂತನ ಈ ಮಾತು ಗಳನ್ನು ಕೇಳಿ—"ಪಂತ, ನಿಮ್ಮ ಮಾತು ನಿಜವಾಗಿ ತೋರುತ್ತದೆ. ನೀವು ಆಗಲೇ ತೀರ ವಿರುದ್ಧ ರೀತಿಯಿಂದ ಮಾತಾಡಿದಿರಿ. "ಶಿವಾಜಿಯು ಅಂಜು ಬುರುಕನಲ್ಲ; ಅಂಥವನಿದ್ದಾನೆ ಇಂಥವನಿದ್ದಾನೆ. ಇಂಥ ಇಂಥ ಸರ ದಾರರನ್ನು ಗೊತ್ತಿಗೆ ಹಚ್ಚಿದನು. ಜನರನ್ನು ಒಲಿಸಿಕೊಳ್ಳುವಲ್ಲಿ ಅವನನ್ನು ಸರಿಗಟ್ಟುವವರು ಮತ್ತೊಬ್ಬರಿಲ್ಲ" ಇತ್ಯಾದಿ ರೀತಿಯಿಂದ ಅವನನ್ನು ಬಣ್ಣಿಸಿ ದಿರಿ. ಅದು ನನ್ನ ಮನಸ್ಸಿಗೆ ಸರ್ವಥಾ ಬರಲಿಲ್ಲ. ನನ್ನ ಮನಸ್ಸನ್ನು ಪರೀಕ್ಷಿಸುವದಕ್ಕೆ ನೀವು ಹಾಗೆ ಅವನ ಸ್ತೋತ್ರ ಮಾಡಿದಿರೆಂಬಂತೆ ಕಾಣು ತ್ತದೆ. ಅದಿರಲಿ ಇಂಥ ಹೇಡಿಯ ಸಂಗಡ ಯುಕ್ತಿಗಿಕ್ತಿಗಳ ಗೊಂದಲಕ್ಕೆ ಹೋಗದೆ, ಒಂದು ಹೊಡತ ಎರಡು ತುಂಡು ಅನ್ನುವಂತೆ, ತಟ್ಟನೆ ಏನು ಮಾಡುವದನ್ನು ಮಾಡಿಬಿಡಬೇಕು. ಈವರೆಗೆ ನಮ್ಮವರು ಆತನ ಯುಕ್ತಿ ಗಳಿಗೆ ಮಹತ್ವ ಕೊಡುತ್ತ ಬಂದದ್ದರಿಂದಲೇ ಆತನು ತಲೆಯ ಮೇಲೆ ಏರಿ ಕುಳಿತುಕೊಂಡಿರುತ್ತಾನೆ, ಎರಡನೆಯದೇನೂ ಇಲ್ಲ. ಅವನನ್ನು ಹಿಡಿದು ಚನ್ನಾಗಿ ತಳಿಸಬೇಕು. ಅನ್ನಲು ಪಂತರು—"ಖಾವಿಂದ, ಸ್ಪಷ್ಟ ಮಾತಾ ಡುವದಕ್ಕಾಗಿ ನನ್ನನ್ನು ಕ್ಷಮಿಸಬೇಕು. ನನ್ನ ವಿಚಾರಗಳು ತಮ್ಮ ವಿಚಾ ರಕ್ಕೆ ತೀರ ವಿರುದ್ಧವಾಗಿರುತ್ತವೆ. ಶಿವಾಜಿಯ ಯುಕ್ತಿಗಳಿಗೆ ತಕ್ಕ ಯುಕ್ತಿ ಗಳನ್ನು ಜೋಡಿಸದೆ ಹುಂಬಗುತ್ತಿಗೆ ಮಾಡಿದ್ದರಿಂದಲೇ ಹಿಂದಿನವರು ಕೇಡಿಗೊಳಗಾದರು. ಈಗ ಅಂಥ ಪ್ರಸಂಗವನ್ನು ತಂದುಕೊಳ್ಳಬಾರದೆಂದು ನಾನು ತಮಗೆ ಸೂಚಿಸುವೆನು. ಕಾರ್ಯಸಾಧನದಲ್ಲಿ ಶಕ್ತಿಗಿಂತ ಯುಕ್ತಿಯು

ಬಹು ಉಪಯುಕ್ತವಾದದ್ದಿರುತ್ತದೆ. ಯುಕ್ತಿಗೆ ಯುಕ್ತಿಯನ್ನು ಜೋಡಿಸಿಯೇ ಕಾರ್ಯವನ್ನು ಸಾಧಿಸಿಕೊಳ್ಳಬೇಕು. ಒಟ್ಟಿಗೆ, ಅವನನ್ನು ಬೆದರಿಸಿ ಅಗಡು ಮಾಡಿ, ಕಾರ್ಯಸಾಧನದಲ್ಲಿ ವಿಲಂಬವನ್ನುಂಟು ಮಾಡಬೇಡಿರಿ. ದಿಲ್ಲಿಯ ಬಾದಶಹನು ಶಿವಾಜಿಯನ್ನು ಗುಡ್ಡದ ಇಲಿಯೆಂದು ಕರೆದದ್ದು ಯಥಾರ್ಥವು. ಇಲಿಯು ಕ್ಷುದ್ರಪ್ರಾಣಿಯಾದರೂ, ಹೋರಿನಿಂದ ಹೋರಿಗೆ ಅಲೆದಾಡುವ ಅದನ್ನು ಹಿಡಿಯುವದು ಸುಲಭವಲ್ಲ. ತಾವು ತಪಗಟ್ಟಲೆ ಈ ಪ್ರಾಂತದಲ್ಲಿ ವಾಸಿಸಿದರೂ, ಶಿವಾಜಿಯು ನಿಮ್ಮ ಕೈಗೆ ಸಿಗುವದು ಕಠಿಣವಾದೀತು; ಅವನ ಪುಂಡಾಟಿಕೆಯೂ ನಿಲ್ಲಲಿಕ್ಕಿಲ್ಲ. ಖಾವಿಂದ, ಹೇಳತಕ್ಕದ್ದನ್ನು ನಾನು ಹೇಳಿಬಿಟ್ಟಿದ್ದೇನೆ. ಇನ್ನು ಮೇಲೆ ತಮ್ಮ ಮನಸ್ಸಿಗೆ ಬಂದಂತೆ ಮಾಡಬಹುದು. ಇನ್ನು ನಾನು ಹೇಳುವದೇನು ಉಳಿದಿರುವದಿಲ್ಲ.

ಈ ಮೇರೆಗೆ ಗೋಪೀನಾಥ ಪಂತನು ತನ್ನ ಒಡೆಯನ ಹಿತಚಿಂತನದ ಉದ್ದೇಶದಿಂದಾಗಲಿ, ಶಿವಾಜಿಯ ಹಿತಚಿಂತನದ ಉದ್ದೇಶದಿಂದಾಗಲಿ ಆಡಿದ ಮಾತಿನಲ್ಲಿ ತನ್ನ ಸ್ತೋತ್ರವಿದ್ದದ್ದರಿಂದ ಖಾನನು ಉಬ್ಬಿದನು. ಆಗ ಪಂತನ ವಿಚಾರಗಳು ಆತನಿಗೆ ಸಮರ್ಪಕವಾಗಿ ತೋರಹತ್ತಿದವು. ತಾನು ಯುಕ್ತಿಯಿಂದಲೇ ಶಿವಾಜಿಯನ್ನು ಗೊತ್ತಿಗೆ ಹಚ್ಚಬೇಕೆಂದು ಆತನು ನಿಶ್ಚಯಿಸಿದನು. ಈಗ ಯುಕ್ತಿಗೆ ಅನುಕೂಲವಾದ ವಿಚಾರಗಳು ಖಾನನ ಮನಸ್ಸಿನಲ್ಲಿ ಬರತೊಡಗಿದವು. ಮನಸ್ಸಿನ ಧರ್ಮವು ವಿಲಕ್ಷಣವಾಗಿರುವದು. ಅದಕ್ಕೆ ಒಮ್ಮೆ ಸೇರಿದ್ದು ಮತ್ತೊಮ್ಮೆ ಸೇರದಾಗುತ್ತವೆ. ಅದು ತನ್ನ ಸೇರಿಕೆಗೆ ಅನುಕೂಲವಾದ ಸಂಗತಿಗಳನ್ನೇ ಹುಡುಕಿಕೊಂಡು ತನ್ನ ಸೇರಿಕೆಯನ್ನು ಪರಿಪುಷ್ಟಮಾಡಿಕೊಳ್ಳುವದು. ಉದಾಹರಣಾರ್ಥ, ಒಬ್ಬ ಮನುಷ್ಯನು ಒಮ್ಮೆ ನಮ್ಮ ಮನಸ್ಸಿಗೆ ಬಂದನೆಂದರೆ, ಅವನಲ್ಲಿಯ ಚಲೋ ಗುಣಗಳೇ ನಮ್ಮ ಮನಸ್ಸಿನ ಮುಂದೆ ಬಂದು ನಿಲ್ಲುತ್ತವೆ; ಅದೇ ಮನುಷ್ಯನು ನಮ್ಮ ಮನಸ್ಸಿಗೆ ಬಾರದಾದರೆ, ಆವನ ಕೆಟ್ಟಗುಣಗಳೇ ನಮ್ಮ ಮನಸ್ಸಿನ ಮುಂದೆ ಬಂದು ನಿಲ್ಲುತ್ತವೆ. ಖಾನನ ಸ್ಥಿತಿಯಾದರೂ ಹೀಗೆಯೇ ಆಯಿತು. ಆತನಿಗೆ ಮೊದಲು ಶಿವಾಜಿಯ ಪಾರಿಪತ್ಯ ಮಾಡಲಿಕ್ಕೆ ಶಕ್ತಿಯು ಅನುಕೂಲವಾಗಿ ತೋರಿತು; ಹಿಂದುಗಡೆ ಗೋಪೀನಾಥಪಂತನು ಆತನ ಮನಸ್ಸನ್ನು

ತಿರುಗಿಸಿ, ಅದಕ್ಕೆ ಯುಕ್ತಿಯು ಸೇರುವಂತೆ ಮಾಡಿದ್ದರಿಂದ, ಖಾನನು ಯುಕ್ತಿಯ ಬೆನ್ನಹತ್ತಿದನು. ಈಗ ಯುಕ್ತಿಯಿಂದಲೇ ಆತನ ಪ್ರತಿಜ್ಞೆಯು ಪೂರ್ಣವಾಗುವಂತೆ ಅವನಿಗೆ ತೋರಿತು. ಆತನು ಮನಸ್ಸಿನಲ್ಲಿ—"ಪಂತರು ಹೇಳುವದು ಯಥಾರ್ಥವಾಗಿ ತೋರುತ್ತದೆ. ಸುಮ್ಮನೆ ಹುಂಬತನದಿಂದ ಶಕ್ತಿಯನ್ನು ಉಪಯೋಗಿಸಿ, ಮೈ ನುಗ್ಗು ಮಾಡಿಕೊಳ್ಳುವದಕ್ಕಿಂತ, ಯುಕ್ತಿಯಿಂದ ಹಗುರಾಗಿ ಕಾರ್ಯವನ್ನು ಸಾಧಿಸುವದು ನೆಟ್ಟಗೆ ಕಾಣುತ್ತದೆ. ಶಿವಾಜಿಯನ್ನು ಮೊದಲು ಬಲೆಬೀಸಿ ಹಿಡಿದುಕೊಳ್ಳೋಣ; ಆಮೇಲೆ ಪಂಜರದಲ್ಲಿ ಹುಲಿಯನ್ನು ಹಿಡಿದುಕೊಂಡು ಹೋಗುವಂತೆ ಆತನನ್ನು ವಿಜಾಪುರಕ್ಕೆ ಹಿಡಿದುಕೊಂಡು ಹೋಗೋಣ; ಆದರೆ ಇದಕ್ಕೆ ಯಾವ ಯುಕ್ತಿಯನ್ನು ಯೋಚಿಸತಕ್ಕದ್ದೆಂಬದನ್ನು ಕುರಿತು ಆಲೋಚಿಸಬೇಕಾಗಿದೆ. ಆ ಯುಕ್ತಿಯು ಅತ್ಯಂತ ಗೂಢವಾಗಿ ಇರತಕ್ಕದ್ದು. ಅದನ್ನು ಈ ಗೋಪೀನಾಥಪಂತನಿಗೂ ತಿಳಿಸತಕ್ಕದ್ದಲ್ಲ. ಸದ್ಯಕ್ಕೆ ನಾನು ನಮ್ಮ ಈ ವಕೀಲನ ವಿಶ್ವಾಸವನ್ನೂ ವಿಶೇಷವಾಗಿ ಹಿಡಿಯದೆ, ಅವನ ಮೇಲೆ ತೀರ ಅವಿಶ್ವಾಸವನ್ನೂ ತಾಳದೆ ಎಚ್ಚರದಿಂದ ವ್ಯವಹರಿಸತಕ್ಕದ್ದು." ಎಂದು ಆಲೋಚಿಸಿ, ಗೋಪೀನಾಥಪಂತನನ್ನು ಕುರಿತು—"ಪಂತ, ನಿಮ್ಮ ಮಾತುಗಳ ರಹಸ್ಯವನ್ನು ಕುರಿತು ನಾನು ಬಹಳವಾಗಿ ವಿಚಾರ ಮಾಡಿದೆನು. ನಿಮ್ಮ ವಿಚಾರವು ಸಮಂಜಸವಾದದ್ದು. ನೀವು ಹೇಳಿದಂತೆ ಮಾಡುವದೇ ಯೋಗ್ಯವು. ಇನ್ನು ಮೇಲೆ ಶಿವಾಜಿಯ ಸಂಗಡ ನಾನು ತೀರ ಸರಳತನದಿಂದ ನಡೆಯಬೇಕೆಂದು ನಿಶ್ಚಯಿಸಿದ್ದೇನೆ. ತೀರ ಅಂಜಿದವನ ಸಂಗಡ, ಅದರಂತೆ ತೀರ ದುರ್ಬಲನಾಗಿರುವವನ ಸಂಗಡ ಮರೆಮೋಸವಾದರೂ ಯಾತಕ್ಕೆ? ಹ್ಯಾಗೇ ಇರಲಿ, ಶಿವಾಜಿಯು ತೇಜಸ್ವಿಯಾಗಿರುವನು. ಇಂಥವನನ್ನು ನಾಶಗೊಳಿಸುವದಕ್ಕಿಂತ, ಪದರಿನಲ್ಲಿಟ್ಟುಕೊಳ್ಳುವದು ಲಾಭಕರವು. ದಿಲ್ಲಿಯ ಬಾದಶಹನು ನಮ್ಮ ಮೇಲೆ ಕಣ್ಣು ಇಟ್ಟಿರುತ್ತಾನೆ. ಇಂಥ ಪ್ರಸಂಗದಲ್ಲಿ ಶಿವಾಜಿಯಂಥ ಚತುರನನ್ನು ನಾಶಗೊಳಿಸುವದು ಯೋಗ್ಯವಲ್ಲ. ಈಗ ನಡಿಸಿ ಹೊಗಿದ್ದ ಪುಂಡಾಟಿಕೆಯ ಸಂಬಂಧದಿಂದ ಆತನು ಬಾದಶಹರ ಸಮ್ಮುಖದಲ್ಲಿ ಕ್ಷಮೆಬೇಡಿ, ಇಲ್ಲಿಯ ಸುಬೇದಾರಿಕೆಯನ್ನು ಸಂಪಾದಿಸಿಕೊಂಡು ಬಾದಶಹರ ಅಂಕಿತನಾಗಿ ರಾಜ್ಯದಾಡಳಿತವನ್ನು ನಡಿಸ

ಲ್ಲೊಲ್ಲನೇಕೆ. ಈತನು, ಬಾದಶಾಹಿಯ ವಂಶ ಪರಂಪರೆಯ ನೌಕರನಾಗಿದ್ದ ಶಹಾಜಿರಾಜರ ಮಗನಾಗಿದ್ದದ್ದನ್ನೂ ನಾವು ಮನಸ್ಸಿನಲ್ಲಿ ತರಬೇಕಾಗಿದೆ. ಹೆಚ್ಚಿಗೆ ಏನೂ ಬೇಡ, ನಾನು ವಿಜಾಪುರದ ಬಾದಶಾಹಿಯ ನೌಕರನೆಂದು ಆತನು ಆಣೆಮಾಡಿ ಬರಲಿ, ಅಂದರೆ ನಾವು ಆತನನ್ನು ಸೆರೆಹಿಡಿದು ಒಯ್ಯುವದಿಲ್ಲ; ಕೊಲ್ಲುವದೂ ಇಲ್ಲ. ಮುಖ್ಯವಾಗಿ ಆತನು ನನ್ನವೆರಡು ಮಾತುಗಳನ್ನು ನಡಿಸಬೇಕು; ಒಂದನೆಯ ಮಾತು—"ಆತನು ನನ್ನ ಸಂಗಡ ವಿಜಾಪುರಕ್ಕೆ ಬರಬೇಕು" ಎರಡನೆಯ ಮಾತು–"ತಾನು ಬಾದಶಾಹಿಯ ನೌಕರನೆಂದು ಒಪ್ಪಿಕೊಂಡು ಇತ್ತ ಕಡೆಯ ಕಾರಭಾರವನ್ನು ನಡಿಸಬೇಕು."

ಹರಿದಾಸನ ಕಥೆಯಲ್ಲ ಪಲ್ಲವಿಯಲ್ಲಿ ಎನ್ನುವಂತೆ, ಖಾನನು ಎತ್ತ ಸುತ್ತುವರಿದು ಬಂದರೂ—"ಶಿವಾಜಿಯು ನನ್ನ ಸಂಗಡ ವಿಜಾಪುರಕ್ಕೆ ಬರಬೇಕೆಂಬ" ಮಾತು ಮರೆಯದಿರುವದನ್ನು ನೋಡಿ ಗೋಪೀನಾಥ ಪಂತನು ಮನಸ್ಸಿನಲ್ಲಿ ನಕ್ಕನು. ಖಾನನು ಒಮ್ಮೆಲೆ ಇಷ್ಟು ಸೌಮ್ಯನಾದದ್ದನ್ನು ನೋಡಿಯೂ ಆತನಿಗೆ ಆಶ್ಚರ್ಯವಾಯಿತು. ಇಷ್ಟು ಸೌಮ್ಯವಾಗಿ ಮಾತಾಡುತ್ತಿರುವದರಿಂದ, ಈತನು ಮನಸ್ಸಿನಲ್ಲಿ ಏನಾದರೂ ಕಪಟಕೃತಿಯನ್ನು ಯೋಚಿಸಿರಬಹುದೆಂದು ಆತನು ತರ್ಕಿಸಿದನು. ತನ್ನ ತರ್ಕದ ನಿಜತ್ವವನ್ನು ಪರೀಕ್ಷಿಸುವದಕ್ಕಾಗಿ ಆತನು ಖಾನನನ್ನು ಕುರಿತು--"ತಮ್ಮ ಮಾತಿನಂತೆ ಶಿವಾಜಿಯು ನಡೆದುಕೊಳ್ಳಲಿಕ್ಕೆ ತೊಂದರೆಯೇನು ಇರುವದಿಲ್ಲ; ಆದರೆ ತಾವು ನುಡಿದಂತೆ ನಡೆಯುವಿರೋ ಇಲ್ಲವೋ ಎಂಬ ಸಂಶಯವು ಆತನಿಗೆ ಬಂದರೆ, ಅದಕ್ಕೆ ಸಮಾಧಾನವೇನು? ತಾನು ಖಾನಸಾಹೇಬರ ಮಾತಿನ ಮೇಲಿಂದ ವಿಜಾಪುರಕ್ಕೆ ಹೋಗಲು, ಇಲ್ಲಿಯ ಮಾತು ಇಲ್ಲಿಯೇ ಉಳಿದು ಬಾದಶಹರು ತನ್ನನ್ನು ಸೆರೆಯಲ್ಲಿರಿಸಿದರೆ ಮಾಡುವದೇನೆಂದು ಶಿವಾಜಿಯು ಪ್ರಶ್ನ ಮಾಡಬಹುದು; ಅದಕ್ಕೆ ಏನಾದರೂ ಉತ್ತರ ಕೊಡಬೇಕಾದೀತಲ್ಲವೆ? ಸೆರೆಯಲ್ಲಿರಿಸಿದರೆ ಇಂದಿಲ್ಲ ನಾಳೆಯಾದರೂ ಬಿಡುಗಡೆಹೊಂದಿ ಬರಬಹುದು; ಆದರೆ ಬಾದಶಹರು ನನ್ನ ಜೀವಕ್ಕೆ ಅಪಾಯ ಮಾಡಿದರೆ ಮಾಡುವದೇನೆಂತಲೂ ಶಿವಾಜಿಯು ಕೇಳಬಹುದು. ಇವೆಲ್ಲವುಗಳಿಗೆ ಸಮಾಧಾನಕಾರಕವಾದ ಉತ್ತರಗಳನ್ನು ಕೊಡಬೇಕಾಗುವದು. ಹಾಗೆ ಉತ್ತರ ಕೊಡದಿದ್ದರೆ ಶಿವಾಜಿಯು ನಮ್ಮನ್ನು ನಂಬಲಿಕ್ಕಿಲ್ಲ"

ಎಂದು ನುಡಿದನು. ಪಂತನ ಈ ಮಾತುಗಳನ್ನು ಕೇಳಿ ಖಾನನಿಗೆ ಸ್ವಲ್ಪ ತ್ರಾಸವಾದಂತೆ ತೋರಿತು. ಆತನ ಹುಬ್ಬುಗಳು ಗಂಟಿಕ್ಕಿದವು. ಆತನು ಸ್ವಲ್ಪ ಹೊತ್ತು ಸುಮ್ಮನೆ ಕುಳಿತುಕೊಂಡು ಸಂತ್ರಸ್ತ ಸ್ವರದಿಂದ ಗೋಪೀ ನಾಥ ಪಂತನನ್ನು ಕುರಿತು—''ನಾವು ಇಷ್ಟು ನಂಬಿಗೆಯಿಂದ ಹೇಳುತ್ತಿದ್ದರೂ, ಆತನು ನಮ್ಮ ಮಾತಿನ ಮೇಲೆ ವಿಶ್ವಾಸವಿಡದಬಳಿಕ, ನಾವಾದರೂ ಆತನ ಮಾತನ್ನು ನಂಬಿ ಸ್ವಲ್ಪ ಜನರೊಡನೆ ಆತನ ಭೆಟ್ಟಿಗೆ ಹ್ಯಾಗೆ ಹೋಗಬೇಕು? ಹಾಗೆ ಹೋಗಲಿಕ್ಕೆ ನಮಗೆ ಅಂಥ ಪ್ರಸಂಗವಾದರೂ ಏನು ಬಂದಿದೆ?

ಖಾನನ ಮಾತುಗಳನ್ನು ಕೇಳಿ ಗೋಪೀನಾಥಪಂತನು ಸ್ವಲ್ಪ ಹೊತ್ತು ಆಲೋಚಿಸಿ ಆಮೇಲೆ ಆತನನ್ನು ಕುರಿತು—''ಖಾವಿಂದ, ಒಬ್ಬರಲ್ಲಿ ಒಬ್ಬರ ವಿಶ್ವಾಸವಿಲ್ಲದಿದ್ದರೆ ಯಾವ ಕೆಲಸವೂ ಆಗಲಿಕ್ಕಿಲ್ಲ; ತಾವು ಆತನ ಮೇಲೆ, ಆತನು ತಮ್ಮ ಮೇಲೆ ವಿಶ್ವಾಸವಿಡಲೇ ಬೇಕು; ಆದರೆ ಈವರೆಗೆ ನಡೆದಿರುವ ವ್ಯವಹಾರವೆಲ್ಲ ಸಂಶಯಮೂಲಕವಾಗಿಯೇ ನಡೆದಿರುವದರಿಂದ, ಶಿವಾಜಿಯು ಅಕಸ್ಮಾತ್ತಾಗಿ ಶಂಕಿಸಿದರೆ ತಾವು ಆಶ್ಚರ್ಯಪಡುವ ಕಾರಣವಿಲ್ಲೆಂತಲೂ, ಪ್ರಸಂಗದಲ್ಲಿ ಆತನಿಗೆ ತಕ್ಕ ಉತ್ತರವನ್ನು ಕೊಡಲು ಯೋಚಿಸಿರಬೇಕೆಂತಲೂ ಸುಮ್ಮನೆ ನಾನು ಈ ಮಾತುಗಳನ್ನು ಆಡಿದೆನು. ಪ್ರಸಂಗ ಒದಗಿದಾಗ ಗುಯಿಗುಟ್ಟುವದಕ್ಕಿಂತ ಮೊದಲೇ ಯೋಚಿಸಿ, ಉತ್ತರವನ್ನು ಗೊತ್ತುಮಾಡಿ ಇಟ್ಟುಕೊಂಡಿರುವದು ನೆಟ್ಟಗೆ," ಎಂದು ನುಡಿಯಲು, ಖಾನನು ಸ್ಪಷ್ಟವಾಗಿ ಉತ್ತರ ಕೊಡುವ ಉದ್ದೇಶದಿಂದ ಪಂತರನ್ನು ಕುರಿತು—''ಏನೇ ಇರಲಿ, ನೀವು ಹ್ಯಾಗೇ ಮಾತಾಡಿರಲಿ ನಾನು ಕಟ್ಟಕಡೆಯ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ ಕೇಳಿಕೊಳ್ಳಿರಿ. ನಮ್ಮ ಮಾತಿನಲ್ಲಿ ವಿಶ್ವಾಸವಿಟ್ಟು ಶಿವಾಜಿಯು ನಮ್ಮೊಡನೆ ವಿಜಾಪುರಕ್ಕೆ ಬಂದು ಬಾದಶಹರಿಗೆ ಶರಣುಹೋಗಿ ನಾನು ತಮ್ಮ ನೌಕರನೆಂದು ಪ್ರತಿಜ್ಞೆ ಮಾಡಬೇಕು; ಆಮೇಲೆ ಈ ಪ್ರಾಂತದ ಸನದನ್ನು ಬಾದಶಹರಿಂದ ಸಂಪಾದಿಸಿ ಸುಬೇದಾರಿಕೆಯನ್ನು ಮಾಡಬೇಕು. ಇಷ್ಟು ಮಾತನ್ನು ನಡಿಸಿ ನಮ್ಮೊಡನೆ ವಿಜಾಪುರಕ್ಕೆ ಹೊರಡಲು ಅವನು ಸಿದ್ಧನಾದರೆ, ಆದರಲ್ಲಿ ಎಲ್ಲ ಬಂದಿತು. ಆಮೇಲೆ ಬೇಕಾದರೆ ನಾನೊಬ್ಬನೇ ನಿಶ್ಶಸ್ತ್ರನಾಗಿ ಆತನನ್ನು

ಕಾಣಲಿಕ್ಕೆ ಹೋಗುವೆನು. ನೀವು ಇನ್ನೊಮ್ಮೆ ಹೋಗಿ ಇದಿಷ್ಟು ಮಾತು ಒಡಂಬಡಿಸಿಕೊಂಡು ಬರ್ರಿ. ಆತನು ಇದಕ್ಕೆ ಒಡಂಬಟ್ಟರೇ ಮುಂದಿನ ಮಾತು, ಇಲ್ಲದಿದ್ದರೆ ಆತನ ವಿಚಾರವನ್ನು ಆತನು ಮಾಡಲಿ, ನಮ್ಮ ವಿಚಾರವನ್ನು ನಾವು ಮಾಡುವೆವು. ಹಿಂದಿನಿಂದ ಒಡಂಬಡಿಕೆಗೆ ಬಂದರೆ ನಾವು ಕೇಳಲಿಕ್ಕಿಲ್ಲ. ಇದನ್ನೆಲ್ಲ ಆತನು ಪೂರ್ಣವಾಗಿ ವಿಚಾರಿಸಿ ಉತ್ತರ ಕೊಡಲಿ. ಈ ಮಾತನ್ನು ಹೇಳಲಿಕ್ಕೆ ನಿಮ್ಮನ್ನು ಆತನ ಬಳಿಗೆ ಕಳಿಸುವ ಅವಶ್ಯವಿದ್ದಿಲ್ಲ. ಆತನ ವಕೀಲನು ನಮ್ಮ ಬಳಿಗೆ ಬಂದಾಗ್ಗೆ ಅವನ ಮುಂದೆ ಹೇಳತಕ್ಕದ್ದಿತ್ತು; ಆದರೆ ಇನ್ನೊಂದು ಸಾರೆ ನಿಮ್ಮನ್ನು ಆತನ ಬಳಿಗೆ ಕಳಿಸುವದು ನನಗೆ ಯೋಗ್ಯವಾಗಿ ತೋರಿತು; ಮತ್ತು ಸಾಮೋಪಾಯದಿಂದ ಕಾರ್ಯಮಾಡುವ ಪ್ರಸಂಗದಲ್ಲಿ ನಾವಾದರೂ ಅಷ್ಟು ಬಿಗಿ ಹಿಡಿಯುವದು ಸರಿಯಲ್ಲ. ನೀವು ಇನ್ನೊಮ್ಮೆ ಹೋಗಿ ಆತನಿಗೆ ನೆಟ್ಟಗೆ ತಿಳಿಸಿ ಹೇಳಿರಿ. ನೀನು ದರಿದ್ರನು, ದುರ್ಬಲನು, ನಮ್ಮಂಥವರ ಮುಂದೆ ನಿನ್ನ ಆಟವೇನೂ ನಡೆಯದು; ನೀನು ವ್ಯರ್ಥವಾಗಿ ಸತ್ತೀ; ಎಂದು ಆತಂಕ ವಿಲ್ಲದೆ ಸ್ಪಷ್ಟವಾಗಿ ಆತನಿಗೆ ಹೇಳಿರಿ. ನಾವು ಹೇಳಿದ ಹಾಗೆ ಕೇಳುವವ ರಲ್ಲಿಯೇ ನಿನ್ನ ಕಲ್ಯಾಣವಿರುತ್ತದೆಂಬ ಮಾತನ್ನು ಅವನ ಮನಸ್ಸಿನಲ್ಲಿ ಚೆನ್ನಾಗಿ ತುಂಬಿರಿ. ಆತನು ವಿಚಾರವಂತನಿರುವದರಿಂದ ನಮ್ಮ ಮಾತಿನ ನಿಜತ್ವವು ಕೂಡಲೆ ಅವನ ಮನಸ್ಸಿನಲ್ಲಿ ಹೊಳೆಯಬಹುದು. ಇದರ ಮೇಲೆಯೂ ಅವನು ನಮ್ಮ ಮಾತು ಕೇಳದಿದ್ದರೆ, ತನ್ನ ಮನಸ್ಸಿಗೆ ಬಂದಂತೆ ಮಾಡಲಿ. ನಮ್ಮ ಮಾತಿಗೆ ಒಡಂಬಟ್ಟರೆ ಮುಂದೆ ಮಾತಾಡಲಿ, ಒಡಂಬಡದಿದ್ದರೆ ತಿರುಗಿ ಯಾವ ಉತ್ತರವನ್ನೂ ನಮಗೆ ಹೇಳುವ ಕಾರಣ ವಿಲ್ಲ; ಆತನ ವಕೀಲನೂ ನಮ್ಮ ಕಡೆಗೆ ಬರುವ ಕಾರಣವಿಲ್ಲ. ಇದು ಕಡೆಯ ಮಾತು. ನಾವು ಇಲ್ಲಿಗೆ ಬಂದು ಬಹಳ ದಿವಸಗಳಾದವು. ಇನ್ನು ಮೇಲೆ ನಾವು ವ್ಯರ್ಥ ಕಾಲಹರಣ ಮಾಡಲಾರೆವು. ಇನ್ನು ನಮ್ಮ ಮಾತಿನಲ್ಲಿ ಅಂತರವಾಗಲಿಕ್ಕಿಲ್ಲ. ಈಗಲೆ ನೀವು ಹೋಗಿ ಯಾವದೊಂದರ ನಿರ್ಣಯ ಮಾಡಿಕೊಂಡು ಬರ್ರಿ" ಎಂದು ಹೇಳಿದನು. ಗೋಪೀನಾಥ ಪಂತನಾದರೂ ಹೆಚ್ಚಿಗೆ ಮಾತಾಡದೆ ಅಲ್ಲಿಂದ ಹೊರಟು ಹೋದನು. ಖಾನನು ಏನೋ ದುರಾಲೋಚನೆ ಮಾಡಿರುವನೆಂದು ಆತನು ನಿಶ್ಚಯಿಸಿ

ದನು; ಆದರೆ ಏನು ಮಾಡಿರುವನೆಂಬುದು ತಿಳಿಯಲಿಲ್ಲ; ಆದ್ದರಿಂದ ಆತನು ವಿಚಾರಮಗ್ನನಾಗಿ ಪ್ರತಾಪಗಡದ ದಾರಿಯನ್ನು ಹಿಡಿದನು.

೧೩ನೆಯ ಪ್ರಕರಣ.

ಸಂಶಯ ನಿವಾರಣ

ಹೇಜೀಬನ ಸೋಗು ಹಾಕಿಕೊಂಡಿದ್ದ ಜಾಧವರಾಯನಿಗೆ ಸಂಶಯ ಪಿಶಾಚವು ಬಡಕೊಂಡದ್ದನ್ನು ವಾಚಕರು ಮರೆತಿರಲಿಕ್ಕಿಲ್ಲ. ತಾರಾ ಬಾಯಿಯ ಸಾಹಸವು ವಿಲಕ್ಷಣವಾದದ್ದು. ಆಕೆಯು ತನ್ನ ತಂದೆಯ ಸೇಡು ತೀರಿಸಿಕೊಳ್ಳುವದಕ್ಕಾಗಿ ಮಹಾರಾಜರ ಪ್ರಾಣಹರಣ ಮಾಡುವ ಹವ್ಯಾಸವನ್ನು ಕಡೆತನಕ ಬಿಡಲಿಲ್ಲ. ಈಗ ಆಕೆಯು ಜಾಧವರಾಯನಿಗೆ ಆತನ ಹೆಂಡತಿಯಾದ ಹೈಮವತಿಯ ಸಂಬಂಧದಿಂದ ಇಲ್ಲದ್ದೊಂದು ಹೇಳಿ, ಆತನಿಂದ ಶಿವಾಜಿಯ ಸೇಡು ತೀರಿಸಿಕೊಳ್ಳಲು ಯತ್ನಿಸಿದಳು. ಹೆಂಡತಿಯು ಗಂಡನ ದುರಭಿಮಾನದ ಖನಿಯೆಂದು ಹೇಳಬಹುದು. ಹೆಂಡತಿಯ ಹೊರತು ಬೇರೆ ಯಾವ ಆಪ್ತರನ್ನು ನಿಂದಿಸಿದರೂ, ಬೈದರೂ ನಾವು ಸೈರಿಸಬಹುದು; ಆದರೆ ನಮ್ಮ ಹೆಂಡಿರನ್ನು ಯಾರಾದರೂ ನಿಂದಿಸಿದರೆ, ಅಥವಾ ಬೈದಗೆ ನಾವು ಸೈರಿಸಲಾರೆವು. ನಿಂದಿಸುವದು ಬೈಯ್ಯುವದು ಒತ್ತಟ್ಟಿಗಿರಲಿ, ಹೆಂಡತಿಯನ್ನು ಬೇರೆ ಗಂಡಸರು ದಿಟ್ಟಿಸಿ ನೋಡಿದರೆ, ಅಥವಾ ಆಕೆಯೊಡನೆ ಹೆಚ್ಚಿಗೆ ಮಾತಾಡಿದರೆ ದುರಭಿಮಾನ ಮೂಲವಾದ ಸಂಶಯಪಿಶಾಚವು ಬಡಿದುಕೊಳ್ಳುತ್ತದೆ. ಹೆಂಡತಿಯ ವಿಷಯದ ಈ ಸಂಶಯಪಿಶಾಚದ ಬಾಧೆಯು ಹೆಚ್ಚಾಯಿತೆಂದರೆ, ಮನುಷ್ಯನು ಏನು ಮಾಡಲಿಕ್ಕೂ ಹೇಸುವದಿಲ್ಲ; ತರುಣ ಜಾಧವರಾಯನು ಶಿವಾಜಿಯ ಮೇಲಿನ ಭಕ್ತಿಯಿಂದ ಆತನಿಗೆ ಸಹಾಯ ಮಾಡುವದಕ್ಕಾಗಿ ವಿಜಾಪುರ ದಿಂದ ಹೊರಟು ಕುಟುಂಬ ಸಹಿತವಾಗಿ ಬಂದಿದ್ದನು. ಹಾದಿಯಲ್ಲಿ ಪಠಾಣರ ಮುತ್ತಿಗೆಯಿಂದ ತಾನು ಹೆಂಡತಿಯನ್ನು ಕಳಕೊಂಡರೂ, ಶಿವಾಜಿಯ ಮೇಲಿನ ಆತನ ಭಕ್ತಿಯು ಕಡಿಮೆಯಾಗಲಿಲ್ಲ. ಶಿವಾಜಿಗೆ

ಸಹಾಯಮಾಡುವ ಉದ್ದೇಶದಿಂದಲೇ ಆತನು ಅಫಜುಲಖಾನನ ಬಳಿಯ ಸುದ್ದಿಗಳನ್ನು ತಿಳಕೊಂಡು, ಅವನ್ನು ಶಿವಾಜಿಗೆ ಹೇಳುವದಕ್ಕಾಗಿ ಆತನ ಬಳಿಗೆ ಹೇಜೀಬನ ವೇಷದಿಂದ ಹೋಗಿದ್ದನು. ಇನ್ನುಮೇಲೆಯಾದರೂ ಹಲವು ಬಗೆಯ ಸಹಾಯಗಳನ್ನು ತನ್ನ ಜೀವದ ಹಂಗು ಇಲ್ಲದೆ ಶಿವಾಜಿಗೆ ಮಾಡಬೇಕೆಂದು ಆತನು ನಿಶ್ಚಯಿಸಿದ್ದನು; ಆದರೆ ಮಧ್ಯದಲ್ಲಿ ತಾರಾ ಬಾಯಿಯು ಆತನಲ್ಲಿ ಸಂಶಯದ ಬೀಜವನ್ನು ಬಿತ್ತಿದ್ದರಿಂದ, ಆತನ ಮನಸ್ಸು ಚಂಚಲವಾಯಿತು. ಶಿವಾಜಿಯಂಥ ದಿವ್ಯ ವಿಭೂತಿಯ ವಿಷಯ ದಲ್ಲಿಯೂ ಆತನ ಮನಸ್ಸು ಸಂಶಯಯುಕ್ತವಾಯಿತು; ಆದರೆ ಶಿವಾಜಿಯ ಪರನಾರೀ ಸೋದರತ್ವವು ಲೋಕಪ್ರಸಿದ್ಧವಾಗಿದ್ದು, ಆ ಪುಣ್ಯಾತ್ಮನ ದರ್ಶ ದಿಂದ ಉಳಿದ ಮರಾಟ ಸರದಾರರು ಕೂಡ ಪರಸ್ತ್ರೀಯರನ್ನು ಮಾತೃ ಸಮಾನವಾಗಿ ಎಣಿಸುವ ಪ್ರಚಾರವಿತ್ತು. ಇದೆಲ್ಲ ಜಾಧವರಾಯನಿಗೆ ಗೊತ್ತಿದ್ದರೂ, ಮತ್ತು ಆತನು ಶಿವರಾಯನ ಗಂಭೀರ ಮೂರ್ತಿಯನ್ನು ಅದೇ ನೋಡಿ ಬಂದು ಪೂಜ್ಯಬುದ್ಧಿಯನ್ನು ತಾಳಿದ್ದರೂ, ತನ್ನ ಹೆಂಡ ತಿಯು ಅಲ್ಲಿ ಯಾಕೆ ಇರಬಹುದೆಂಬ ವಿಕಲ್ಪವು ಆತನ ಮನಸ್ಸಿನಲ್ಲಿ ಉತ್ಪನ್ನ ವಾಗದೆ ಇರಲಿಲ್ಲ; ಆದರೂ ಒಮ್ಮೆಲೆ ಶಿವರಾಯನ ವಿಷಯವಾಗಿ ದೋಷಾ ರೋಪ ಮಾಡಲು ಆತನ ಮನಸ್ಸು ಒಪ್ಪದಾಯಿತು. ಆತನು ಆ ತರುಣ ಸಿದ್ಧಪುರುಷನನ್ನು ಸೂಕ್ಷ್ಮದೃಷ್ಟಿಯಿಂದ ನೋಡಹತ್ತಿದನು. ಮೊದಲು ದರ್ಶನವಾದಾಗ ಸಿದ್ಧಪುರುಷನ ಧ್ವನಿಯ ಮೇಲಿಂದಲೂ, ಆತನ ಅವ ಯವಗಳ ಸ್ಥಿತಿಯ ಮೇಲಿಂದಲೂ ಈತನು ಸ್ತ್ರೀಯಾಗಿರಬೇಕೆಂಬ ಸಂಶ ಯವು ಜಾಧವರಾಯನ ಮನಸ್ಸಿನಲ್ಲಿ ಉತ್ಪನ್ನವಾಗಿತ್ತು. ಈಗ ದಿಟ್ಟಿಸಿ ನೋಡುತ್ತಿರುವಾಗ ಆತನಿಗೆ ಮೋರೆಯ ಗುರುತು ಹತ್ತಿದಂತೆ ಆಯಿತು. ಆತನು ಬಹಳ ಹೊತ್ತು ಆಲೋಚಿಸಿ ನೆನಪಿಗೆ ತಂದುಕೊಂಡ ಬಳಿಕ ಆ ಸಿದ್ಧ ಪುರುಷನನ್ನು ಕುರಿತು—“ತಂಗೀ, ನೀನು ಚಂದ್ರರಾವ ಮೋರೆಯ ಮಗಳಾದ ತಾರಾಬಾಯಿಯಲ್ಲವೆ? ನಿನ್ನ ತಂದೆಯನ್ನು ಮಹಾರಾಜರು ಕೊಂದರೆಂಬ ಸಿಟ್ಟಿನಿಂದ ನೀನು ಅವರ ಮೇಲೆ ದೋಷವನ್ನು ಆರೋಪಿಸು ವದು ಸ್ವಾಭಾವಿಕವು; ಆದರೆ ಆ ದಿವ್ಯ ವಿಭೂತಿಯ ವಿಷಯವಾಗಿ ನನ್ನ ಮನಸ್ಸಿನಲ್ಲಿಯೂ ಸಂಶಯವನ್ನು ಉತ್ಪನ್ನ ಮಾಡಿದೆಯಲ್ಲ? ನನ್ನ

ಹೆಂಡತಿಯು ಮಹಾರಾಜರ ಬಳಿಯಲ್ಲಿ ಇದ್ದರೂ ಚಿಂತೆಯಿಲ್ಲ. ನಾನು ಮಹಾರಾಜರ ಚರಿತ್ರವನ್ನು ಕೇಳಿರುವೆನು. ಚಿಕ್ಕಂದಿನಲ್ಲಿ ನಿನ್ನ ತಂದೆಯ ಸಂಗಡ ನೀನು ವಿಜಾಪುರಕ್ಕೆ ಬರುವಾಗಿನಿಂದ ನಾನು ನಿನ್ನನ್ನು ನೋಡಿದ್ದೇನೆ. ಅಂದಿನಿಂದಲೇ ನಿನ್ನ ಹಟಮಾರಿ ಸ್ವಭಾವವು ನನಗೆ ಗೊತ್ತಿದೆ; ನೀನೂ, ನಿನ್ನ ತಕ್ಕನೂ ಎಲ್ಲಿಯೋ ಓಡಿಹೋದ ವರ್ತಮಾನವನ್ನು ನಾನು ಕೇಳಿದ್ದೆನು; ಆದರೆ ನಿನ್ನ ಈ ವೇಷವನ್ನೂ, ನೀನು ಏಕಾಕಿಯಾಗಿ ಈ ಘೋರಾರಣ್ಯದಲ್ಲಿ ವಾಸಿಸುವದನ್ನೂ ನೋಡಿ ನನಗೆ ಬಹಳ ಆಶ್ಚರ್ಯವಾಗುತ್ತವೆ. ನೀನು ಇನ್ನು ಮೇಲೆ ಮಹಾರಾಜರ ವಿಷಯದ ದುರಾಲೋಚನೆಯನ್ನು ಬಿಟ್ಟುಕೊಟ್ಟು, ನನ್ನೊಡನೆ ಮಹಾರಾಜರ ಬಳಿಗೆ ಬಾ. ಅವರು ಬೆನ್ನಿನಲ್ಲಿ ಬಿದ್ದ ತಂಗಿಯಂತೆ ನಿನ್ನ ಸಂರಕ್ಷಣವನ್ನು ಮಾಡುವರು.

ಜಾಧವರಾಯನ ಈ ಮಾತುಗಳನ್ನು ಕೇಳಿ ತಾರಾಬಾಯಿಯು ಗಹಗಹಿಸಿ ನಗುತ್ತ ಆತನನ್ನು ಕುರಿತು—"ಜಾಧವರಾವ, ನಿನ್ನ ಮಾತನ್ನು ಕೇಳಿ ನನಗೆ ನಗೆ ಬರುತ್ತದೆ! ಪಿತೃಘಾತಕಿಯಾದ ಆ ಶಿವಾಜಿಯ ಬಳಿಗೆ ನಾನು ಬರಲಾ? ಆತನು ನನ್ನನ್ನು ಬೆನ್ನಲಿ ಬಿದ್ದ ತಂಗಿಯಂತೆ ಸಂರಕ್ಷಿಸುವನೆಯೆ? ಮೀಸೆಹೊತ್ತ ಗಂಡಸೆನಿಸುವ ನಿನಗೆ ಹೀಗೆ ಹೇಳಲಿಕ್ಕೆ ನಾಚಿಕೆ ಹ್ಯಾಗೆ ಬರುವದಿಲ್ಲ? ಅಲ್ಲೋ, ನಿನ್ನ ಮರಣವಾರ್ತೆಯನ್ನು ಕೇಳಿ ಜೀವದಿಂದಿರಲಾರದ ಪತಿವ್ರತಾ ಶಿಖಾಮಣಿಯಾದ ನಿನ್ನ ಹೆಂಡತಿಯು, ಶಿವಾಜಿಯ ಬಳಿಯಲ್ಲಿ ಸುಖದಿಂದಿರುವಳೆಂಬದನ್ನು ಕೇಳಿಯೂ ನೀನು ನಿರ್ಲಜ್ಜೆಯಿಂದ ನನಗೆ ಹಿತೋಪದೇಶ ಮಾಡುವಲ್ಲಿ ಪಾಂಡಿತ್ಯವನ್ನು ತೋರಿಸುವೆಯಲ್ಲ! ಗಂಡಸರು ನೀವು ಹೀಗೆ, ಮಾಡಿಕೊಂಡ ಹೆಂಡಿರ ದುರ್ವರ್ತನವನ್ನು ದುರ್ಲಕ್ಷಿಸಿ ಹೇಡಿತನವನ್ನು ತೋರಿಸಿದರೂ, ನಿಜವಾಗಿ ಪುರುಷನೆನಿಸುವ ಚಂದ್ರರಾಯನ ಮಗಳಾದ ತಾರೆಯು ನಾನು, ಪಿತೃಘಾತಕಿಯಾದ ಶಿವಾಜಿಯ ದುರ್ವರ್ತನವನ್ನು ಎಂದೂ ದುರ್ಲಕ್ಷಿಸಲಾರೆನು! ತಂದೆಯ ಮರಣದ ಸೇಡಿಗಾಗಿ ನಾನು ಶಿವಾಜಿಯನ್ನು ಕೊಲ್ಲುವೆನು, ಇಲ್ಲವೆ ಅವನ ಕಾಲಲ್ಲಿ ನನ್ನ ಪ್ರಾಣವನ್ನಾದರೂ ಕೊಡುವೆನು. ಇನ್ನು ಮೇಲೆ ನೀವು ಗಂಡಸರೆಲ್ಲರು ಮೀಸೆ ಬೋಳಿಸಿಕೊಳ್ಳಿರಿ. ಎರಡನೆಯವರ ಮನಸ್ಸನ್ನು ಒಲಿಸಿಕೊಳ್ಳುವುದಕ್ಕಾಗಿ ನಿಮ್ಮ ಹೆಂಡಿರನ್ನು ಅವರ ಮಗ್ಗ....

....ಆದರೆ, ಜಾಧವರಾವ, ನಾನು ಇನ್ನು ಹೆಚ್ಚಿಗೆ ಮಾತಾಡುವದಿಲ್ಲ. ನೀನು ಇಲ್ಲಿಂದ ಹೊರಟುಹೋಗು. ನಿನ್ನಂಥ ಅಭಿಮಾನ ಶೂನ್ಯನಾದ ಹೇಡಿಯ ನೆರಳು ಸಹ ನನಗೆ ಬೇಡ. ನೀನು ಹೀಗೆಯೇ ಶಿವಾಜಿಯ ಬಳಿಗೆ ಹೋಗಿ ನೋಡಿ ಬಾ. ಅಲ್ಲಿ ನಿನ್ನ ಹೆಂಡತಿಯು ಚಕ್ಕಂದದಿಂದ ಇರದಿದ್ದರೆ, ನನ್ನನ್ನು ಇಲ್ಲಿಯೇ ತುಂಡರಿಸಿ ಚಲ್ಲು. ಶಿವಾಜಿಯ ದುರ್ಗುಣಗಳಿಗಾಗಿ ಅವನಿಗೆ ತಕ್ಕ ಶಾಸನವನ್ನು ಮಾಡಲು ನಾನು ಹಗಲಿರುಳು ಯತ್ನಿಸುವೆನು. ನೀನೂ ಆ ದುಷ್ಟನ ದುರ್ಗುಣಗಳನ್ನು ಪ್ರತ್ಯಕ್ಷ ನೋಡಿ ಬಾ. ನಿನ್ನ ಮನಸ್ಸಿನ ನಂಬಿಗೆಯಾದರೆ ನನಗೆ ಸಹಾಯ ಮಾಡು. ಅನ್ನಲು, ಜಾಧವರಾಯನು ಮತ್ತೆ ಸಂಶಯಗ್ರಸ್ತನಾದನು; ತಾರಾಬಾಯಿಯ ಮಾತು ಆತನಿಗೆ ಮತ್ತೆ ನಿಜವಾಗಿ ತೋರಹತ್ತಿತು. ಆತನು ತಾರಾಬಾಯಿಯನ್ನು ಕುರಿತು—

ಜಾಧವರಾಯ—ನನ್ನ ಹೆಂಡತಿಯು ಮಹಾರಾಜರ ಬಳಿಯಲ್ಲಿ ಇರುವದು ನಿಶ್ಚಯವೆ? ಇನ್ನೂ ಅವಳು ಅಲ್ಲಿಯೇ ಇರುವಳೆಯೆ?

ತಾರಾಬಾಯಿ—ಜಾಧವರಾವ, ನಾನು ಇನ್ನು ನಿನ್ನ ಸಂಗಡ ಹೆಚ್ಚಿಗೆ ಮಾತಾಡುವದಿಲ್ಲ. ಅಲ್ಲಿ ಅವಳು ಇರುವಳೋ ಇಲ್ಲವೋ ಎಂಬದನ್ನು ನೀನು ನೋಡಿ ಬಾ ಹೋಗು. ಇಲ್ಲವೆ ಶಿವಾಜಿಯ ಸೇವೆಯನ್ನು ಮಾಡುತ್ತ ನೀನೂ ನಿನ್ನ ಹೆಂಡತಿಯೂ ಸುಖದಿಂದ ಅವನ ಬಳಿಯಲ್ಲಿ ಇರಲೊಲ್ಲಿರೇಕೆ? ಆದರಿಂದ ನನಗಾಗುವ ಲಾಭಹಾನಿಗಳು ಅಷ್ಟರಲ್ಲಿಯೇ ಇರುವವು. ನನಗೆ ಗೊತ್ತಿದ್ದ ನಿಜವಾದ ಸಂಗತಿಯನ್ನು ನಿನಗೆ ಹೇಳಿದೆನು. ನನ್ನ ತಂದೆಯು ಶಿವಾಜಿಯ ಗಂಟನ್ನೇನೂ ತಿಂದಿದ್ದಿಲ್ಲ. ತನ್ನ ಪುಂಡಾಟಿಕೆಯಲ್ಲಿ ಸೇರಲಿಲ್ಲೆಂತಲೂ, ತನ್ನ ಹಿಂದೂಪದ ಬಾದಶಾಹಿಯನ್ನು ಒಪ್ಪಿಕೊಳ್ಳಲಿಲ್ಲವೆಂತಲೂ ಶಿವಾಜಿಯು ನನ್ನ ತಂದೆಯನ್ನು ಕೊಲ್ಲಿಸಿದನು. ಉತ್ತಮ ಪದಾರ್ಥವು ದೊರೆತರೆ ಯಾವನು ಇಟ್ಟುಕೊಳ್ಳಲಿಕ್ಕಿಲ್ಲ? ಸುಂದರ ತರುಣಿಯಾದ ನಿನ್ನ ಹೆಂಡತಿಯನ್ನು ಶಿವಾಜಿಯು ಇಟ್ಟುಕೊಂಡದ್ದೇನಾಶ್ಚರ್ಯವು! ಆತನ ದುರುಳತನದ ಲೋಭಕ್ಕೆ ನೀನು ಅಡ್ಡಾಗಿ ಹೋದರೆ, ಆ ಸ್ವಾರ್ಥಪರಾಯಣನಾದ ಶಿವಾಜಿಯು ನಿನ್ನನ್ನು ಘಾತಿಸಲಿಕ್ಕೆ ಸಹ ಹಿಂದೆಮುಂದೆ ನೋಡಲಿಕ್ಕಿಲ್ಲ. ಶಿವಾಜಿಯು ಹೇಳಿ

ಕೇಳಿ ಕಳ್ಳರ ನಾಯಕನಲ್ಲವೆ? ಅಂಥವನ ಮೇಲೆಯೇ ಜನರ ವಿಶ್ವಾಸವು! ಸರಿ, ಸರಿ! ಈಗಿನ ಕಾಲವೇ ಇಂತಹದಿರುವದು. ವಿಶ್ವಾಸಘಾತದಿಂದ ಒಬ್ಬನು ಮತ್ತೊಬ್ಬನನ್ನು ಕೊಂದರೂ ಈಗ ಅಪರಾಧವೆನಿಸದು. ಪ್ರಸಂಗ ದಲ್ಲಿ ಹೆಂಗಸರನ್ನು ಕೊಲ್ಲಲಿಕ್ಕೂ ನಿಮ್ಮಂಥವರು ಹೇಸುವಹಾಗಿಲ್ಲ. ಒಬ್ಬನು ಮತ್ತೊಬ್ಬನ ಹೆಂಡತಿಯನ್ನು ಚೆಲುವೆಯೆಂದು ತನ್ನ ಬಳಿಯಲ್ಲಿ ಇಟ್ಟು ಕೊಂಡರೂ, ಆಕೆಯು ಆಪ್ತೇಷ್ಟರಿಗೆ, ಅದೇಕೆ ಪ್ರತ್ಯಕ್ಷ ಗಂಡನಿಗೆ ಕೂಡ ವ್ಯತ್ಯಾಸವೆನಿಸುವದಿಲ್ಲ. ಅವರು ಬುದ್ಧಿಪೂರ್ವಕವಾಗಿ ಆ ಮಾತನ್ನು ದುರ್ಲಕ್ಷಿಸುವರು! ಹಹ! ಎಂಥ ದಿವಸಗಳು ಬಂದವಿವು! ಇಂಥ ದಿವಸ ಗಳು ಬಂದಾವೆಂದು ನಮ್ಮ ಪೂರ್ವಜರ ಕನಸು ಮನಸ್ಸಿನಲ್ಲಿ ಸಹ ಬಂದಿರ ಲಿಕ್ಕಿಲ್ಲ. ಮೂರ್ಖಾ, ಜಾಧವರಾಯಾ, ನೀನು ಎಷ್ಟು ಅಭಿಮಾನ ಶೂನ್ಯನಾದೆಯಲ್ಲ! ನಿನ್ನ ಹೆಂಡತಿಯನ್ನು ಶಿವಾಜಿಯು ಇಟ್ಟುಕೊಂಡಿ ರಲು,....ಎಂದು ಇನ್ನೂ ಏನೇನೋ ನುಡಿಯುತ್ತಿರಲು, ಬೈರಾಗಿಣಿಯ ರೂಪವನ್ನು ಧರಿಸಿದ್ದ ಹೈಮವತಿಯು ಅಕಸ್ಮಾತ್ತಾಗಿ ಅವರ ಮುಂದೆ ಬಂದು ನಿಂತುಕೊಂಡು—"ದುಷ್ಟಳಾದ ತಾರೆಯೇ, ಯಾರ ವಿಷಯವಾಗಿ ಇಂಥ ಅಮಂಗಲ ಮಾತುಗಳನ್ನಾಡುವೆ? ಆ ಪುಣ್ಯಾತ್ಮನ ಮೇಲೆ ಹೀಗೆ ದೋಷವನ್ನು ಆರೋಪಿಸಲಿಕ್ಕೆ ನಿನ್ನ ನಾಲಿಗೆಯಾದರೂ ಹ್ಯಾಗೆ ಅಲ್ಲಾಡು ತ್ತದೆ? ಅಲ್ಲಿಯೇ ಅದು ಹುಳಿತು ಹೋಗಬಾರದೆ? ಮಹಾರಾಜರೂ, ಅವರ ತಾಯಂದಿರಾದ ಜೀಜಾಬಾಯಿ ಸಾಹೇಬರೂ ನಿನ್ನ ವಿಷಯವಾಗಿ ಹಗಲು ರಾತ್ರಿ ಚಿಂತಿಸುತ್ತ, ನಿನ್ನ ಶೋಧಕ್ಕಾಗಿ ನಾಲ್ಕೂ ಕಡೆಗೆ ಜನರನ್ನು ಕಳಿಸಿ ಹುಡುಕಿಸುತ್ತಿರಲು, ನಿನ್ನ ಅಕ್ಕಸವು ದಿನದಿನಕ್ಕೆ ಹೆಚ್ಚುತ್ತಿರುವದಲ್ಲ! ಮಹಾರಾಜರ ಹಿತವನ್ನು ಮಾಡುವ ಉತ್ಸಾಹದಿಂದ ಇಂದೇ ಪ್ರತಾಪಗಡ ದಿಂದ ಬಂದಿರುವ ನನ್ನ ಪತಿಯ ಮನಸ್ಸನ್ನು ತಿರುಗಿಸಿ, ನಿನ್ನ ಕಡೆಗೆ ಎಳೆದು ಕೊಳ್ಳಲು ನೀನು ಯತ್ನಿಸುವೆಯಾ? ಇಂದಿಗೆ ನಿನ್ನ ದುಷ್ಟತನದ ಪರ ಮಾವಧಿಯಾಯಿತು; ಎಂದು ತಡತಡ ನುಡಿದಳು.

ಈ ಮೇರೆಗೆ ಹೈಮವತಿಯು ಸಂತಾಪದಿಂದ ಆಡಿದ ಮಾತುಗಳನ್ನು ಕೇಳಿ ತಾರೆಯು ಬೆಪ್ಪಾಗಿ ಸುಮ್ಮನೆ ಕುಳಿತುಕೊಂಡಳು. ಕೆಲಹೊತ್ತಿನ ಮೇಲೆ ಆಕೆಯ ಆಶ್ಚರ್ಯದ ಭರವು ಕುಗ್ಗಲು, ಆಕೆಯು ಗಹಗಹಿಸಿ

ನಗುತ್ತ ಹೈಮವತಿಯನ್ನು ಕುರಿತು—"ನಾನು ಶಿವಾಜಿಯ ಸೇಡು ತೀರಿಸಿಕೊಳ್ಳುವದಕ್ಕಾಗಿ ಮಾಡಿದ ಉಪಾಯಗಳೆಲ್ಲ ವ್ಯರ್ಥವಾಗುತ್ತಿರುವದು ನನ್ನ ದುರ್ದೈವವೇ ಸರಿ. ಗುಹೆಯಲ್ಲಿಯ ಮದ್ದಿನ ಚೀಲಗಳಿಗೆ ಕೊಳ್ಳಿ ಕೊಟ್ಟು ಶಿವಾಜಿಯ ಪ್ರಾಣಹರಣಮಾಡಬೇಕೆಂದು ಸಿದ್ಧವಾಗಿರುವಾಗ, ಚಾಂಡಾಲಿನಿಯು ನೀನು ವಿಘ್ನಮಾಡಿದೆ. ನಿನ್ನ ಮೇಲಿನ ಆ ಸಿಟ್ಟು ತೀರಿಸಿಕೊಳ್ಳುವದಕ್ಕಾಗಿ ಈಗ ನಿನ್ನ ಗಂಡನ ಮನಸ್ಸನ್ನು ಕೆಡಿಸುವ ಯತ್ನನಡಿಸಿರಲು, ನೀನು ಮತ್ತೆ ಎದುರಿಗೆ ಬಂದು ನಿಂತೆ! ಆದರೂ ನನ್ನ ನಿಶ್ಚಯದಲ್ಲಿ ಅಂತರವಾಗಲಿಕ್ಕಿಲ್ಲ. ನಾನು ಬದುಕಿರುವವರೆಗೆ ಶಿವಾಜಿಯ ಪ್ರಾಣಹರಣಕ್ಕಾಗಿ ಯತ್ನಿಸತಕ್ಕವಳೇ ಸರಿ. ಹೋಗು, ಗಂಡನು ಸತ್ತನೆಂದು ತಿಳಿದು ನೀನು ಎರಡನೆಯವರ........" ಎಂದು ನುಡಿಯುತ್ತಿರಲು, ಆಕೆಯ ಮನಸ್ಸಿಗೆ ಏನೋ ಹೊಳೆದು, ಆಕೆಯು ಸುಮ್ಮನಾದಳು. ಜಾಧವರಾಯನು ತನ್ನ ಹೆಂಡತಿಯ ವಿಲಕ್ಷಣರೂಪವನ್ನು ನೋಡಿ ಬೆರಗಾದನು; ತನ್ನ ಹಿಂದೆಯೇ ತನ್ನ ಹೆಂಡತಿಯು ಬಂದದ್ದೂ ಆತನಿಗೆ ಆಶ್ಚರ್ಯಕರವಾಗಿ ತೋರಿತು. ಆಕೆಯ, ಕ್ಷೀಣಶರೀರ, ನಿಸ್ತೇಜವಾದ ಮುಖ, ಉದಾಸೀನಭಾವ ಇವು ಜಾಧವರಾಯನ ಮನಸ್ಸಿನಲ್ಲಿ ಕನಿಕರವನ್ನುಂಟುಮಾಡಿದವು. ತನ್ನ ವಿರಹ ದುಃಖದಿಂದ ಅತ್ಯಂತ ಕ್ಷೀಣದೆಸೆಯನ್ನು ಹೊಂದಿದ ಹೆಂಡತಿಯ ಮೂರ್ತಿಯನ್ನು ನೋಡಿದಕೂಡಲೆ, ಆತನ ಸಂಶಯ ಪಿಶಾಚವು ಬಿಟ್ಟು ಹೋಯಿತು. ತಾರೆಯ ಸುಳ್ಳು ಆರೋಪದಿಂದ ಶಿವರಾಯನಂಥ ದಿವ್ಯವಿಭೂತಿಯ ವಿಷಯವಾಗಿ ಕುಶಂಕೆ ತಾಳಿದ್ದಕ್ಕೆ ಆತನಿಗೆ ಪಶ್ಚಾತ್ತಾಪವಾಯಿತು. ತನ್ನ ಹೊಟ್ಟೆಯೊಳಗಿಂದ ಉಕ್ಕಿಬರುವ ಪ್ರೇಮೋದಧಿಯ ತೆರೆಗಳ ತಾಕಲಾಟದಿಂದ ಮುಂದುಗಾಣದೆ ಆತನು ಸುಮ್ಮನೆ ಕುಳಿತುಕೊಂಡನು. ತನ್ನ ಮುಂದೆ ತಲೆಬಾಗಿಸಿಕೊಂಡು ಕಣ್ಣೀರು ಸುರಿಸುತ್ತ ನಿಂತುಕೊಂಡಿದ್ದ ಹೆಂಡತಿಯನ್ನು ತಬ್ಬಿಕೊಂಡು ಸಂತಯಿಸುವ ಅರಿವು ಕೂಡ ಆತನಿಗೆ ಉಳಿದಂತೆ ತೋರಲಿಲ್ಲ. ಆತನು ಅತ್ಯಂತ ವಾತ್ಸಲ್ಯಪೂರ್ಣವಾದ ದೃಷ್ಟಿಗಳಿಂದ ಹೆಂಡತಿಯನ್ನು ನೋಡುತ್ತ ಕುಳಿತುಕೊಂಡು ಬಿಟ್ಟಿದ್ದನು. ಇತ್ತ ಹೈಮವತಿಯು ಆನಂದಸಾಗರದಲ್ಲಿ ಗುಟಕರಿಸುತ್ತಿದ್ದದ್ದರಿಂದ, ಪತಿಯೊಡನೆ ಮಾತಾಡಲಿಕ್ಕೂ ಆಕೆಗೆ ಅಸ್ಪದವು

ದೊರೆಯದಾಯಿತು. ಹೊರಟುಹೋಗಿದ್ದ ಆಕೆಯ ಪ್ರಾಣವು ಮತ್ತೆ ದೇಹವನ್ನು ಪ್ರವೇಶಿಸಿದ ಹಾಗಾಯಿತೆಂದು ಹೇಳಬಹುದು. ಆಕೆಯ ದೇಹಕಾಂತಿಯು ಹೆಚ್ಚಿತು; ಮುಖಕ್ಕೆ ಕಳೆಯೇರಿತು; ಆಶಾವಲ್ಲಿಯು ಹೊಸ ಕುಡಿಗಳನ್ನು ಬಿಡತೊಡಗಿತು. ನವ ವಧುವು ಪತಿಯ ಪ್ರಥಮ ಸಮಾಗಮವನ್ನು ಹೊಂದಿದಾಗಿನ ಸೌಕುಮಾರ್ಯ ಸ್ಥಿತಿಯನ್ನು ಆಕೆಯು ಈಗ ಪಡೆದಳು. ಪತಿವ್ರತೆಯರಿಗೆ ಪತಿಯ ಸಮಾಗಮ ಸುಖಕ್ಕಿಂತ ಹೆಚ್ಚಿನ ಸುಖವೇ ಇಲ್ಲವೆನ್ನುವದನ್ನು ವ್ಯಕ್ತಮಾಡುವಂತೆ ಆಕೆಯು ಸುಮ್ಮನೆ ನಿಂತುಬಿಟ್ಟಿದ್ದಳು.

ಹೀಗೆ ಆ ತರುಣ ದಂಪತಿಗಳು ತಮ್ಮ ಅಪರೂಪದ ಅಲಭ್ಯ ಸಮಾಗಮದ ಸುಖ ಸಾಮ್ರಾಜ್ಯದಲ್ಲಿ ಲೋಲಾಡುತ್ತ ಕಾಲಹರಣಮಾಡುತ್ತಿರಲು, ಜಾಧವರಾಯನು ಗದ್ಗದ ಕಂಠದಿಂದ ತನ್ನ ಹೆಂಡತಿಯನ್ನು ಕುರಿತು—"ಪ್ರಿಯೇ, ನಿನಗೆ ಈ ವೈರಾಗ್ಯದ ವೇಷವೇಕೆ? ಈ ತಾರುಣ್ಯದಲ್ಲಿ ನಿನ್ನ ಸುಂದರ ಶರೀರವನ್ನು ಭಸ್ಮಮಯವಾಗಿ ಮಾಡಬಹುದೆ?" ಎಂದು ಕೇಳಲು, ಹೈಮವತಿಯು ಕಣ್ಣುಗಳಲ್ಲಿ ಆನಂದಬಾಷ್ಪಗಳನ್ನು ತುಂಬಿಕೊಂಡು—"ಇದೇನು ಕೇಳುವದು? ಪ್ರಾಣವು ಹೋದಬಳಿಕ ಶರೀರವು ಭಸ್ಮವಲ್ಲದೆ ಮತ್ತೇನು ಆಗುವದು? ತಮ್ಮ ವಿಷಯದ ದುರ್ವಾರ್ತೆಯನ್ನು ಕೇಳಿದ ಬಳಿಕ, ವೈರಾಗ್ಯದಿಂದ ತೀರ್ಥಯಾತ್ರೆಗಳನ್ನು ಮಾಡುತ್ತ ದೇಹವನ್ನು ಸವಿಸುವದಲ್ಲದೆ, ಮತ್ತೇನು ಮಾಡಬೇಕು? ತಮ್ಮ ಸನ್ನಿಧಿಯಲ್ಲಿ ಇಂದು ನನ್ನನ್ನು ಸಕಲ ಸೌಭಾಗ್ಯಗಳೂ, ಸುಖಗಳೂ ಆಶ್ರಮಿಸಿದವು; ಇಂದಿಗೆ ನಾನು ಕೃತಾರ್ಥಳಾದೆನು. ಮಂಗಲಕರವಾದ ನೂತನ ಜನ್ಮವನ್ನು ಹೊಂದಿದೆನು; ನನ್ನ ಸಕಲ ಮನೋರಥಗಳೂ ಕೈಗೂಡಿದವು" ಎಂದು ಪತಿಯ ಎದುರಿನಲ್ಲಿ ಕೈಜೋಡಿಸಿ ನಿಂತುಕೊಂಡಳು. ಆಗ ಜಾಧವರಾಯನು ಪ್ರೇಮಭರದಿಂದ ಹೆಂಡತಿಯನ್ನು ತಬ್ಬಿಕೊಂಡು—"ಇಂಥ ಮಂಗಲಮೂರ್ತಿಯ ವಿಷಯವಾಗಿಯೂ ನಮ್ಮ ಆ ಚಂದ್ರರಾಯನ ಮಗಳು ಸಂಶಯದ ಬೀಜವನ್ನು ನನ್ನಲ್ಲಿ ಬಿತ್ತಿದಳಲ್ಲವೆ? ಮಹಾರಾಜರ ವಿಷಯದಲ್ಲಿಯೂ ಸಂಶಯಗ್ರಸ್ತವಾದ ನನ್ನ ಹೃದಯವನ್ನು ಸುಟ್ಟುಬಿಡುವದೇ ಯೋಗ್ಯವು. ಪ್ರಿಯೇ, ಹೀಗಾಗಲಿಕ್ಕೆ ನಿನ್ನ ವಿಷಯ

ವಾಗಿ ನನ್ನಲ್ಲಿ ವಾಸಿಸುತ್ತಿರುವ ಅತ್ಯಂತವಾದ ಪ್ರೇಮದ ಪ್ರಭಾವಲ್ಲದೆ ಮತ್ತೇನು ಕಾರಣವಿರುವದು ಹೇಳು! ನೀನು ಮಹಾತ್ಮನಾದ ಶಿವಪ್ರಭುವಿನ ಬಳಿಯಲ್ಲಿದ್ದೆಯೆಂದು ಆ ದುಷ್ಟ ತಾರೆಯು ಹೇಳಿದಳು; ಆದರೆ ಅದು ನಿಜವೆ? ಅದು ನಿಜವಿದ್ದಪಕ್ಷದಲ್ಲಿ ಇಂದು ನೀನು ಇಲ್ಲಿಗೆ ಹ್ಯಾಗೆ ಬಂದೆ? ಅತ್ಯಂತ ಕೃಶವಾಗಿ ಬೀಳುಪೇರಿರುವ ಈ ನಿನ್ನ ದೇಹವನ್ನು ನೋಡಿದಾಗಲೇ, ತಾರಾಬಾಯಿಯ ಮಾತಿನಿಂದ ಉತ್ಪನ್ನವಾಗಿದ್ದ ನನ್ನ ಸಂಶಯವೆಲ್ಲ ದೂರವಾಯಿತು," ಅನ್ನಲು ಹೈಮವತಿಯು—"ಶಿವಶಿವ! ನೀತಿಯ ಮೂರ್ತಿಯಾದ ಶಿವರಾಯನ ವಿಷಯವಾಗಿಯೂ ತಮ್ಮಲ್ಲಿ ಸಂಶಯವು ಉತ್ಪನ್ನವಾಯಿತೆ? ಪ್ರಿಯಕರಾ, ನಿಮ್ಮ ಅರ್ಧಾಂಗವಾಗಿರುವ ಹೈಮವತಿಯ ಹೃದಯದ ಸ್ವರೂಪ ಸರ್ವಸ್ವವು ಇನ್ನೂ ತಮಗೆ ಗೊತ್ತಾಗಿರುವದಿಲ್ಲವೆಂದಹಾಗಾಯಿತು! ಇರಲಿ, ಕಾಲ ಮಹಿಮೆಯಿಂದ ಅಶಕ್ಯ ಸಂಗತಿಯೂ ಶಕ್ಯವಾಗಿಯೂ ತೋರುತ್ತದೆ. ಇದರಲ್ಲಿ ಹೆಸರಿಡತಕ್ಕ ಭಾಗವೇನು ಇರುವದಿಲ್ಲ" ಎಂದು ನುಡಿದು, ತಾನು ಪಠಾಣರ ಕೈಯಿಂದ ಹ್ಯಾಗೆ ಪಾರಾದೆನು, ತಾರೆಯ ದರ್ಶನವು ತನಗೆ ಹ್ಯಾಗಾಯಿತು, ಮಹಾರಾಜರು ಗಂಡಾಂತರದಿಂದ ಹ್ಯಾಗೆ ಪಾರಾದರು ಎಂಬಿವೇ ಮೊದಲಾದ ಸಂಗತಿಗಳನ್ನು ಒಂದುಳಿಯದಂತೆ ಹೇಳಿದಳು. ಆಮೇಲೆ ಆಕೆಯು ತನ್ನ ಪತಿಯನ್ನು ಕುರಿತು—"ಮಹಾರಾಜರು ಈಶ್ವರಾಂಶರಾದರೂ, ಪರಗೃಹವಾಸವು ಪತಿವ್ರತೆಯರಿಗೆ ನಿಷೇಧವಲ್ಲವೆ? ಈ ಕೆಟ್ಟ ಪರಗೃಹವಾಸದೋಷವು ಲೋಕಮಾತೆಯಾದ ಜಾನಕಿಯನ್ನೂ ಬಿಡಲಿಲ್ಲವೆಂದ ಬಳಿಕ, ನಮ್ಮಂಥ ಕ್ಷುದ್ರರ ಪಾಡೇನು? ಲೋಕನಿಂದೆಯ ವಿಷಯವು ಬಹು ಸೂಕ್ಷ್ಮವಾಗಿರುವದರಿಂದ, ಗಂಡಸಾಗಲಿ—ಹೆಂಗಸಾಗಲಿ ತನ್ನ ನೆರಳಿಗೆ ತಾನು ಅಂಜಿ ನಡೆಯುವದು ಯೋಗ್ಯವಾಗಿರುವದು. ಇದನ್ನು ಲಕ್ಷ್ಯದಲ್ಲಿಟ್ಟು, ನಾನು ಜೀಜಾಬಾಯಿ ಸಾಹೇಬರಿಗೆ ತೀರ್ಥಯಾತ್ರೆಗಳಿಗಾಗಿ ಹೊರಡಲು ಒಪ್ಪಿಗೆಯನ್ನು ಕೇಳಿಕೊಂಡೆನು; ಆದರೆ ಆ ಸಾಧ್ವಿಯು ಅದಕ್ಕೆ ಒಪ್ಪಿಕೊಳ್ಳದೆ—"ನೀನು ಎಲ್ಲಿಯೂ ಹೋಗಬೇಡ, ನನ್ನ ಬಳಿಯಲ್ಲಿರುವದರಿಂದಲೇ ನಿನ್ನ ಕಲ್ಯಾಣವಾಗುವದು, ನಿನ್ನ ಪತಿಯ ಶೋಧಕ್ಕಾಗಿ ಶಿವಬಾನು ಜನರನ್ನು ಕಳಿಸಿರುವನು. ಇಂಥ ತಾರುಣ್ಯದಲ್ಲಿ ತೀರ್ಥ

ಯಾತ್ರೆಯ ನೆವದಿಂದ ಸಿಕ್ಕಹಾಗೆ ತಿರುಗುವದು ಯೋಗ್ಯವಲ್ಲ," ಎಂದು ನನ್ನನ್ನು ಬೋಧಿಸಿದರು. ಅವರ ಬೋಧವು ಯಥಾರ್ಥವಾದದ್ದೆಂಬು ನಾನು ಹೇಳುವ ಕಾರಣವಿಲ್ಲ; ಆದರೆ ನನ್ನ ಗತಿಯು "ಇತ್ತ ಬಿದ್ದರೆ ಕೆರೆ, ಅತ್ತಬಿದ್ದರೆ ಬಾವಿ" ಎನ್ನುವಂತೆ ಆಗಿ, ನಾನು ತಳಮಳಿಸುತ್ತಿದ್ದೆನು; ಅಷ್ಟರಲ್ಲಿ ನೀವು ಹೇಜೀಬನ ವೇಷದಿಂದ ಮಹಾರಾಜರ ಬಳಿಗೆ ಬಂದದ್ದು ಅಕಸ್ಮಾತ್ತಾಗಿ ನನಗೆ ಗೊತ್ತಾಯಿತು. ಆಗ ನಾನು ಯಾರಿಗೂ ಗೊತ್ತಾಗ ದಂತೆ ನನ್ನ ಪ್ರಯಾಣದ ಸಿದ್ಧತೆಯನ್ನು ಮಾಡಿಕೊಂಡು, ನೀವು ಹೊರಡುವ ಹಾದಿಯನ್ನು ನೋಡುತ್ತಿದ್ದೆನು. ನೀವು ಕುದುರೆಯನ್ನು ಹತ್ತಿದಕೂಡಲೆ ನಾನೂ ಹೊರಟೆನು. ಪ್ರತಾಪಗಡದಲ್ಲಿ ಯಾರಿಗೂ ನಾನು ಹೊರಟು ಬಂದ ಸುದ್ದಿಯು ಗೊತ್ತಿರುವದಿಲ್ಲ. ನೀವು ಕುದುರೆಯ ಮೇಲಿಂದ ಎಷ್ಟು ಸಾವಕಾಶವಾಗಿ ಬಂದರೂ, ನಿಮ್ಮ ಬೆನ್ನುಹತ್ತಿ ಬರಲಿಕ್ಕೆ ನನಗೆ ತಡವೇ ಆಯಿತು; ಆದರೆ ನಾನು ತಮ್ಮ ಸುಳವನ್ನು ಬಿಡದೆ ಈಗ ಸನ್ನಿಧಿಗೆ ಬಂದಿರುವೆನು. ಜೀಜಾಬಾಯಿಸಾಹೇಬರು ಎಷ್ಟು ಚಡಪಡಿಸುತ್ತಿರಬಹುದು, ಅವರು ನನಗೆ ಎಷ್ಟು ಸಿಟ್ಟುಮಾಡುತ್ತಿರಬಹುದು! ಹಹ! ಆ ಮಹಾತ್ಮಳ ಹೃದಯವು ಎಷ್ಟು ಕೋಮಲವಾದದ್ದು, ಎಷ್ಟು ಉದಾತ್ತವಾದದ್ದು!!

ಹೆಂಡತಿಯ ಈ ಮಾತುಗಳನ್ನು ಕೇಳಿ ಜಾಧವರಾಯನು ಸಮಾಧಾನ ಪಟ್ಟು ಆಕೆಗೆ ತನ್ನ ವೃತ್ತಾಂತವನ್ನು ಹೇಳಿದನು. ನಾನು ಪಠಾಣರ ಹೊಡತದಿಂದ ನೆಲಕ್ಕೆ ಬಿದ್ದ ಬಳಿಕ ಒಬ್ಬ ಉದಾರ ಗೃಹಸ್ಥನ ಉಪಚಾರ ದಿಂದ ಎಚ್ಚತ್ತು, ಹ್ಯಾಗೆ ನೆಟ್ಟಗಾದೆನು, ಮಹಾರಾಜರಿಗೆ ಸಹಾಯಮಾಡು ವದಕ್ಕಾಗಿ ಅಫಜುಲಖಾನನ ಹೊಟ್ಟೆಯೊಳಗಿನ ಮಾತನ್ನು ಹ್ಯಾಗೆ ತಿಳಿದು ಕೊಂಡೆನು, ಆ ಮಾತನ್ನು ಮಹಾರಾಜರಿಗೆ ಹೇಳುವದಕ್ಕಾಗಿ ಹೇಜೀಬನ ವೇಷದಿಂದ ಮಹಾರಾಜರ ಬಳಿಗೆ ಹ್ಯಾಗೆ ಹೋದೆನು ಎಂಬ ಸಂಗತಿಗಳನ್ನು ಸಾದ್ಯಂತವಾಗಿ ಹೇಳಿದನು. ಹೀಗೆ ಆ ತರುಣ ದಂಪತಿಗಳು ಪರಸ್ಪರರ ದರ್ಶನಯೋಗದಿಂದಾದ ಆನಂದದಲ್ಲಿ, ಪರಸ್ಪರರು ತಮ್ಮ ತಮ್ಮ ವೃತ್ತಾಂತ ವನ್ನು ಹೇಳುತ್ತಿರಲು, ತಾರಾಬಾಯಿಯ ವಿಷಯವಾಗಿ ಸ್ವಾಭಾವಿಕ ವಾಗಿಯೇ ಅವರ ದುರ್ಲಕ್ಷವಾಯಿತು. ಹೈಮವತಿಯು ಬಂದದ್ದನ್ನು ನೋಡಿದಕೂಡಲೆ ತಾರೆಯು ಚಿತ್ತವು ಕ್ಷೋಭಿಸಿದಂತೆ ಆದ್ದರಿಂದ, ಆಕೆಯು

ವೈಮೇಲಿನ ಎಚ್ಚರವು ತಪ್ಪಿತು. ಹಿಂದಕ್ಕೆ ಮಹಾರಾಜರ ಬಳಿಯಿಂದ ಓಡಿಹೋದಂತೆ ಈಗಾದರೂ ಆಕೆಯು ಚಿಟ್ಟನೆ ಚೀರಿ, ಚಿಗರೆಯಂತೆ ಬಹು ಚಪಲಗತಿಯಿಂದ ಓಡಿ ಹೋಗಿದ್ದಳು. ಅದು ಆ ದಂಪತಿಗಳಿಗೆ ಗೊತ್ತಾಗಿ ದ್ವಿಲ್ಲ. ತಾರಾಬಾಯಿಯು ಸಾಮಾನ್ಯ ಯೋಗ್ಯತೆಯ ಹೆಣ್ಣು ಮಗ ಳಿದ್ದಿಲ್ಲ. ದೊಡ್ಡ ದೊಡ್ಡ ಗಂಡಸರಲ್ಲಿಯೂ ಇರದಂಥ ನಿರ್ಧಾರವು ಆಕೆ ಯಲ್ಲಿ ಕಾಣಿಸುತ್ತಿತ್ತು. ಅತ್ಯಂತವಾದ ಪಿತೃಭಕ್ತಿಯಿಂದ ಆಕೆಯು ತನ್ನ ತಂದೆಯ ಮರಣದ ಸೇಡು ತೀರಿಸಿಕೊಳ್ಳುವದಕ್ಕಾಗಿ ತನ್ನ ಪ್ರಾಣದ ಆಶೆ ಯನ್ನೂ ಬಿಟ್ಟಿದ್ದಳು. ಮಹಾರಾಜರ ಸೇಡು ತೀರಿಸಿಕೊಳ್ಳುವದಕ್ಕಾಗಿಯೇ ಆಕೆಯು ಬದುಕಿ ಇದ್ದಳಲ್ಲದೆ, ಆಕೆಯ ಪ್ರಾಣಧಾರಣಕ್ಕೆ ಬೇರೆ ಕಾರಣ ವೇನು ಇದ್ದಿಲ್ಲ. ಆಕೆಯ ಈ ಸ್ಥಿತಿಯನ್ನು ಚೆನ್ನಾಗಿ ಅರಿತಿದ್ದ ಹೈಮ ವತಿಯು, ಆಕೆಯ ದುರವಸ್ಥೆಗಾಗಿ ಮರಮರನೆ ಮರುಗಿದಳು. ಜಾಧವ ರಾಯನಿಗೂ ಬಹಳ ವ್ಯಸನವಾಯಿತು. ಚಂದ್ರರಾವ ಮೋರೆಯ ಮಗಳಿಗೆ ಇಂಥ ದುರವಸ್ಥೆಯು ಪ್ರಾಪ್ತವಾಗಬೇಕೋ, ಎಂದು ಅವರು ದೈವವನ್ನು ಹಳಿದರು. ಆದರೆ ಬರಿಯ ವ್ಯಸನಪಟ್ಟು ಅವರು ಏನು ಮಾಡುವಹಾಗಿ ದ್ದರು? ತಾರೆಯ ಬುದ್ಧಿಯು ಭ್ರಂಶವಾಗಿ ಹೋಗಿತ್ತು. ಆಗಾಗ್ಗೆ ಆಕೆಗೆ ಹುಚ್ಚು ಹಿಡಿದ ಹಾಗೆ ಆಗಿ, ಆಕೆಯು ಆ ಹುಚ್ಚಿನ ಭರದಲ್ಲಿ ಓಡಿಹೋದ ಳೆಂದರೆ ಯಾರ ಕೈಗೂ ಸಿಗುತ್ತಿದ್ದಿಲ್ಲ. ಆ ದಂಪತಿಗಳು ಸ್ವಲ್ಪ ಹೊತ್ತು ತಾರೆಯನ್ನು ಹುಡುಕಿದರು; ಆದರೆ ಎಲ್ಲಿಯೂ ಆಕೆಯ ಗೊತ್ತು ಹತ್ತ ಲಿಲ್ಲ. ಆಗ ಅವರು ನಿರುಪಾಯರಾಗಿ ಒಂದು ಗಿಡದ ಬುಡದಲ್ಲಿ ಕುಳಿತು, ತಾವು ಇನ್ನು ಎಲ್ಲಿಗೆ ಹೋಗಬೇಕೆಂದು ಆಲೋಚಿಸತೊಡಗಿದರು. ಮಹಾ ರಾಜರ ವಿಷಯದ ಅತ್ಯುತ್ಕಟ ಭಕ್ತಿಯು ಅವರಿಬ್ಬರಲ್ಲಿಯೂ ವಾಸಿಸು ತ್ತಿತ್ತು. ಮಹಾರಾಜರಿಗೆ ಸಹಾಯ ಮಾಡುವದಕ್ಕಾಗಿಯೇ ಅವರು ವಿಜಾಪುರದಿಂದ ಮನೆಮಾರುಗಳನ್ನು ಬಿಟ್ಟು ಬಂದಿದ್ದರೆಂಬದನ್ನು ವಾಚ ಕರು ಮರೆತಿರಲಿಕ್ಕಿಲ್ಲ. ಅವರು ಬಹಳ ಹೊತ್ತು ಆಲೋಚಿಸಿದ ಬಳಿಕ ಹೈಮವತಿಯು ಪತಿಯನ್ನು ಕುರಿತು—"ನಾವು ಮಹಾರಾಜರ ಹಿತವನ್ನೇ ಚಿಂತಿಸುವದಿದ್ದಬಳಿಕ, ಅದೇ ಕಾರ್ಯದಲ್ಲಿ ದೇಹವನ್ನು ಸವಿಸತಕ್ಕದ್ದು. ಜೀಜಾಬಾಯಿಯವರ ಬಳಿಯಲ್ಲಿ ನಾನು ಕೆಲವು ದಿವಸಗಳಿಂದ ಇದ್ದದ್ದ

ರಿಂದ, ಅವರ ಮುಖಾಂತರ ನನಗೆ ಹಲವು ಸಂಗತಿಗಳು ಗೊತ್ತಾಗಿರುತ್ತವೆ. ಅಫಜುಲಖಾನನ ಹೃದ್ಗತವು ಮಹಾರಾಜರಿಗೆ ಗೊತ್ತಾಗದೆ ಇದ್ದದ್ದರಿಂದ ಅವರಿಗೆ ಬಹಳ ತೊಂದರೆಯಾಗಿದೆ. ಸರಳತನಕ್ಕೆ ಸರಳತನವನ್ನೂ, ಕುಟಿಲ ತನಕ್ಕೆ ಕುಟಿಲತನವನ್ನೂ ಜೋಡಿಸುವದು ಮಹಾರಾಜರ ತಂತ್ರವಾಗಿರು ತ್ತದೆ. ಅಫಜುಲಖಾನನು ತಮ್ಮ ಸಂಗಡ ಸರಳತನದಿಂದ ನಡೆದುಕೊಂಡರೆ, ತಾವೂ ಸರಳತನದಿಂದಲೇ ನಡೆದುಕೊಳ್ಳಬೇಕೆಂದು ಅವರು ನಿಶ್ಚಯಿಸಿರು ವರು. ಖಾನನು ಕುಟಿಲತನವನ್ನು ತೋರಿಸಿದರೆ ಮಾತ್ರ ಮಹಾರಾಜರು ಆತನಿಗೆ ಕೈತೋರಿಸದೆ ಬಿಡುವ ಹಾಗಿಲ್ಲ. ಅಫಜುಲಖಾನನು ಕುಟಿಲ ತಂತ್ರವನ್ನು ಯೋಚಿಸಿದ್ದು ಮಹಾರಾಜರಿಗೆ ತಿಳಿಯದೆ ಹೋದರೆ ಘಾತ ವಾಗುವಹಾಗಿದೆ; ಆದ್ದರಿಂದ ನಾವು ಯುಕ್ತಿ ಪ್ರಯುಕ್ತಿಗಳಿಂದ ಖಾನನ ಮನೋದಯವನ್ನು ತಿಳಿದುಕೊಂಡು ಮಹಾರಾಜರಿಗೆ ತಿಳಿಸೋಣ. ಇಷ್ಟಾ ದರೂ ಮಹಾರಾಜರ ಸೇವೆಯು ನಮ್ಮಿಂದ ಘಟಿಸಲಿ! ಈ ಕಾರ್ಯವನ್ನು ಮಾಡುವಾಗ ನಮ್ಮ ದೇಹಪಾತವಾದರೂ ಚಿಂತೆಯಿಲ್ಲ," ಎಂದು ಹೇಳಿ ದಳು. ಜಾಧವರಾಯನಿಗೆ ಹೆಂಡತಿಯ ಈ ಮಾತು ಒಪ್ಪಿಗೆಯಾಯಿತು. ಆತನೂ ಇದೇ ಕಾರ್ಯವನ್ನೇ ಸ್ವೀಕರಿಸಿದ್ದನು. ಹೆಂಡತಿಯ ವಿಚಾರವೂ ತನ್ನ ವಿಚಾರವೂ ಕೂಡಿದಂತಾದ್ದರಿಂದ, ಆತನಿಗೆ ಬಹಳ ಸಮಾಧಾನ ವಾಯಿತು. ಅವರಿಬ್ಬರು ಅಫಜುಲಖಾನನ ಪಾಳಯದ ಕಡೆಗೆ ನಡೆದರು.

೧೪ನೆಯ ಪ್ರಕರಣ.

ಮಹತ್ವದ ಸುದ್ದಿಯು

ಹೀಗೆ ಆ ತರುಣದಂಪತಿಗಳು ಶಿವಾಜಿಮಹಾರಾಜರಿಗೆ ಸಹಾಯ ಮಾಡುವ ಉದ್ದೇಶದಿಂದ ಅಫಜುಲಖಾನನ ಪಾಳಯಕ್ಕೆ ಹೊರಟು ಬರು ತ್ತಿರಲು, ಹಾದಿಯಲ್ಲಿ ಅವರಿಗೆ ಸರ್ಜೆರಾಯನ ಭೆಟ್ಟಿಯಾಯಿತು. ಮಹಾ ರಾಜರು ಖಾನನ ಬಳಿಯ ಸುದ್ದಿಗಳನ್ನು ತಿಳಕೊಳ್ಳುವದಕ್ಕಾಗಿ ಸರ್ಜೇ ರಾಯನನ್ನು ಅವನ ಪಾಳಯದಲ್ಲಿ ಇಟ್ಟದ್ದನ್ನು ವಾಚಕರು ಮರೆತಿರ

ಲಿಕ್ಕಿಲ್ಲ. ಸರ್ಜೇರಾಯನು ಪ್ರತಾಪಗಡದಿಂದ ಹೋಗುವಾಗ ಹಾದಿಯಲ್ಲಿ ಹೈಮವತಿಯನ್ನು ಪಠಾಣನ ಕೈಯಿಂದ ಬಿಡಿಸಿ; ದೇಶಮುಖನ ಮನೆಯಲ್ಲಿ ಆಕೆಯನ್ನು ಇಟ್ಟು ತಾನು ವಿಜಾಪುರಕ್ಕೆ ಹೋದದ್ದಾದರೂ ವಾಚಕರ ಸ್ಮರಣದಲ್ಲಿರಬಹುದು. ಹೈಮವತಿಯು ಸರ್ಜೇರಾಯನನ್ನು ನೋಡಿದ ಕೂಡಲೆ ಆತನ ಗುರುತು ಹಿಡಿದಳು. ಸರ್ಜೇರಾಯನೂ ಹೈಮವತಿಯ ಗುರುತು ಹಿಡಿದನು. ಆಮೇಲೆ ಆ ಮೂವರೂ ಬಹು ಸಂತೋಷಪಟ್ಟು, ಏಕಾಂತದಲ್ಲಿ ಕುಳಿತು ಮುಂದೆ ಏನು ಮಾಡಬೇಕೆಂದು ಯೋಚಿಸಹತ್ತಿದರು. ಸರ್ಜೇರಾಯನು ಬಹು ಚಾತುರ್ಯದಿಂದ ಖಾನನ ವಿಷಯದ ಕೆಲವು ಸುದ್ದಿಗಳನ್ನು ಅರಿತುಕೊಂಡಿದ್ದನು. ಅವನ್ನೆಲ್ಲ ಆತನು ಆ ತರುಣ ದಂಪತಿಗಳ ಮುಂದೆ ಹೇಳಿದನು. ಖಾನನ ಹೊಟ್ಟೆಯೊಳಗಿನ ಮಾತನ್ನು ನಿಚ್ಚಳವಾಗಿ ತಿಳಕೊಳ್ಳಲಿಕ್ಕೆ ಏನು ಮಾಡಬೇಕೆಂದು ಅವರು ಯೋಚಿಸಹತ್ತಿದರು. ಈ ಕಾರ್ಯವನ್ನು ಮೂವರೂ ಕೂಡಿ ಮಾಡಬೇಕೆಂದು ಗೊತ್ತಾಯಿತು. ಹೈಮವತಿಯು ಬಹು ಧೈರ್ಯಶಾಲಿಯು. ಆಕೆಯು ತನ್ನ ಪತಿಯನ್ನೂ ಸರ್ಜೇರಾಯನನ್ನೂ ಕುರಿತು—"ನಾನು ಹ್ಯಾಗೂ ತಪಸ್ವಿನಿಯ ವೇಷದಿಂದ ಇರುವೆನು. ಇದೇ ವೇಷದಿಂದ ಖಾನನ ಹೊಟ್ಟೆಯೊಳಗಿನ ಮಾತನ್ನು ತಿಳಕೊಳ್ಳಲು ಯತ್ನಿಸುತ್ತೇನೆ. ಈ ಕಾರ್ಯದಲ್ಲಿ ನೀವಿಬ್ಬರೂ ನನಗೆ ಸಹಾಯ ಮಾಡತಕ್ಕದ್ದು. ಖಾನನು ನನ್ನ ಗುರುತು ಹಿಡಿಯುವ ಸಂಭವವಂತು ಇಲ್ಲವೇ ಇಲ್ಲ. ನಮ್ಮವರು (ಪತಿಯು) ಖಾನನ ಪರಿಚಯದವರಾದ್ದರಿಂದ, ಅವರು ಎಂದಿನಂತೆ ಖಾನನ ನಂಬಿಗೆಯವರಾಗಿ, ಅವನ ಬಳಿಯಲ್ಲಿದ್ದು ನನ್ನವರೆಂದು ತಿಳಿಯಗೊಡದೆ ನನಗೆ ಅವಶ್ಯದ ಸಹಾಯವನ್ನು ಮಾಡತಕ್ಕದ್ದು. ಸರ್ಜೇರಾವ, ನೀವು ಬರಹೋಗುವವರಲ್ಲಿ ಬೆರೆತುಕೊಂಡು ನನ್ನವರೆಂದು ತಿಳಿಯಗೊಡದೆ ನನಗೆ ತಕ್ಕ ಸಹಾಯವನ್ನು ಮಾಡತಕ್ಕದ್ದು. ನಾನು ಮಹಾ ತಪಸ್ವಿನಿಯಾಗಿ, ನನ್ನ ತಪೋಬಲದಿಂದ ಭೂತ ಭವಿಷ್ಯ ವರ್ತಮಾನಕಾಲಗಳ ಸಂಗತಿಗಳನ್ನು ಹೇಳುತ್ತ ಜನರ ಚಿತ್ತಹರಣ ಮಾಡುವೆನು. ಈ ಕಾರ್ಯದಲ್ಲಿ ಅಂಬಾಬಾಯಿಯು ನನಗೆ ನಿಶ್ಚಯವಾಗಿ ಯಶಸ್ಸು ಕೊಡುವಳೆಂಬ ನಂಬಿಗೆಯು ನನಗಿದೆ. ಖಾನನ ಹೊಟ್ಟೆಯೊಳಗಿನ ಮಾತನ್ನು ತಿಳಕೊಳ್ಳ

ವಾಗ ನನ್ನ ನಾಶವಾದರೂ ಚಿಂತೆಯಿಲ್ಲ. ಸಾಹಸವನ್ನು ಮಾಡಿ ತೀರುವೆನು. ನೀವಿಬ್ಬರೂ ಬಹು ಜಾಗರೂಕತೆಯಿಂದ ನನಗೆ ಸಹಾಯ ಮಾಡತಕ್ಕದ್ದು; ನನ್ನ ಯೋಗಕ್ಷೇಮದಲ್ಲಿ ನೀವಿಬ್ಬರೂ ಜಾಗರೂಕರಾಗಿರತಕ್ಕದ್ದು, ಎಂದು ಹೇಳಿದಳು. ಇಂಥ ಸಾಹಸದಲ್ಲಿ ಹೆಂಗಸರು ಬೀಳುವದು ಯೋಗ್ಯವಲ್ಲೆಂದು ಸರ್ಜೇರಾಯನು ಬಹಳ ಹೇಳಿದನು; ಆದರೆ ಹೈಮವತಿಯು ಅದಕ್ಕೆ ಒಪ್ಪಲಿಲ್ಲ. ಆ ಮೂವರೂ ಬಹಳ ಹೊತ್ತು ವಾದವಿವಾದಗಳನ್ನು ನಡೆಸಿದ ಬಳಿಕ, ಹೈಮವತಿಯ ವಿಚಾರವೇ ಸರ್ವಸಮ್ಮತವಾಯಿತು.

ಕೆಲವು ದಿನಗಳು ಕ್ರಮಿಸಿದ ಬಳಿಕ ಒಂದುದಿನ ಮುಂಜಾನೆ ಅಫಜುಲಖಾನನ ದಂಡಿನ ಪಾಳಯದೊಳಗಿನದೊಂದು ಗಿಡದ ಬುಡದಲ್ಲಿ ಒಬ್ಬ ತೇಜಃಪುಂಜಳಾದ ತಪಸ್ವಿನಿಯು, ದೇವಿಯದೊಂದು ಮೂರ್ತಿಯನ್ನು ಸ್ಥಾಪಿಸಿಕೊಂಡು ತನ್ನ ಬಳಿಗೆ ಬಂದವರ ಭವಿಷ್ಯವನ್ನು ಜ್ಞಾನದೃಷ್ಟಿಯಿಂದ ಹೇಳತೊಡಗಿದಳು. ಆ ತಪಸ್ವಿನಿಯ ತೇಜೋಮಯವಾದ ಸುಂದರ ಮೂರ್ತಿಯನ್ನು ನೋಡುತ್ತಲೇ ಜನರ ಚಿತ್ತಹರಣವಾಗಿ ಹೋಗುತ್ತಿತ್ತು; ಅದರಲ್ಲಿ, ಆಕೆಯು ಹೇಳಿದ ಭೂತ-ವರ್ತಮಾನಕಾಲಗಳ ಸಂಗತಿಗಳು ನಿಜವಾಗಹತ್ತಿದ ಬಳಿಕಂತು ಕೇಳುವದೇನು? ಜನರ ಗುಂಪಿಗೆ ಗುಂಪುಗಳು ಆ ತಪಸ್ವಿನಿಯ ಬಳಿಗೆ ಬರತೊಡಗಿದವು. ದಿನ ದಿನಕ್ಕೆ ತಪಸ್ವಿನಿಯ ಕೀರ್ತಿಯು ಹೆಚ್ಚಾಗಹತ್ತಿ, ಅದು ಅಫಜುಲಖಾನನ ಕಿವಿಯವರೆಗೆ ಹೋಯಿತು. ಅದನ್ನು ಕೇಳಿ ಖಾನನು ಮೊದಲು ಉಪಹಾಸ ಮಾಡಿದನು; ಆದರೆ ಆತನ ಪರಿಜನರು ತಪಸ್ವಿನಿಯ ಭವಿಷ್ಯದ ಸ್ತೋತ್ರ ಮಾಡಿದ್ದರಿಂದಲೂ, ಜಾಧವರಾಯನು ಅವರ ಮಾತಿಗೆ ಉತ್ತೇಜನ ಕೊಟ್ಟಿದ್ದರಿಂದಲೂ ಖಾನನು ತಪಸ್ವಿನಿಯ ವಿಷಯದ ಸುದ್ದಿಗಳನ್ನು ಲಕ್ಷ್ಯಗೊಟ್ಟು ಕೇಳಹತ್ತಿದನು. ಬರಬರುತ್ತ ದೊಡ್ಡ ದೊಡ್ಡ ಮುಸಲ್ಮಾನ ಸರದಾರರೂ ತಪಸ್ವಿನಿಯನ್ನು ಹೊಗಳಹತ್ತಿದರು. ಮನಸ್ಸಿನೊಳಗಿನ ಮಾತನ್ನು ಹೇಳುವದರಲ್ಲಿಯೂ, ಮುಂದಾಗುವದನ್ನು ತಿಳಿಸುವದರಲ್ಲಿಯೂ ತಪಸ್ವಿನಿಗೆ ಸರಿಯಾದವರನ್ನು ಈವರೆಗೆ ನಾವು ನೋಡಲಿಲ್ಲೆಂದು ಹಲವರು ಅನ್ನಹತ್ತಿದರು. ನಮ್ಮ ಮರುಳು ಜನರು ಇಂಥ ವೇಷಧಾರಿ ಭವಿಷ್ಯ

ವಾದಿಗಳಿಗೂ, ದಾಂಭಿಕರಾದ ಸಾಧು-ಸತ್ಪುರುಷರಿಗೂ ಮರುಳಾಗುವುದು ಬಹಳ. ಆಯುಷ್ಯ, ಮಕ್ಕಳು-ಮರಿ, ದುಡ್ಡು-ದುಗಾಣಿ, ಉದ್ಯೋಗ-ವ್ಯವಹಾರ ಮುಂತಾದವುಗಳನ್ನು ಕುರಿತು ಭವಿಷ್ಯವನ್ನು ಕೇಳುವದು ಇವರ ಮುಖ್ಯೋದ್ದೇಶವಾಗಿರುತ್ತದೆ. ಇವರ ಹಿಂದಿನವೆರಡು ಮಾತುಗಳನ್ನು ಸಮರ್ಪಕವಾಗಿ ಹೇಳಿದರೆ ತೀರಿತು; ವಿಶ್ವಾಸವು ಕುಳಿತುಬಿಡುವದು. ಆ ಮಾತುಗಳನ್ನು ಭವಿಷ್ಯವಾದಿಗಳು ಅನ್ಯರ ಮುಖಗಳಿಂದ ತಿಳಿದುಕೊಂಡಿರುವರು. ಭೂತಕಾಲದ ನಿಜವಾದ ಸಂಗತಿಗಳ ಮೇಲಿಂದ, ಭವಿಷ್ಯಕಾಲದ ಸಂಗತಿಗಳೂ ನಿಜವಾಗುತ್ತವೆಂದು ತಿಳಿದುಕೊಳ್ಳುವದು ಮರುಳುಜನರ ವಾಡಿಕೆಯಾಗಿರುವದು. ಬಡವರೂ, ಉದ್ಯೋಗಹೀನರೂ, ಹೆಂಗಸರೂ ಇಂಥವರು ಬೆನ್ನಹತ್ತುವದು ಹೆಚ್ಚು. ಎಷ್ಟೋ ಭವಿಷ್ಯವಾದಿಗಳು ತಮ್ಮದೊಂದು ಪರಿವಾರವನ್ನು ಮಾಡಿಕೊಂಡಿರುವರು. ಆ ಪರಿವಾರದವರು ಯಾವದೊಂದು ಊರೊಳಗಿನ ಮುಖ್ಯ ಮುಖ್ಯ ಜನರ ಭೂತಕಾಲದ, ಹಾಗೂ ವರ್ತಮಾನಕಾಲದ ಸಂಗತಿಗಳನ್ನು ಚಾತುರ್ಯದಿಂದ ತಿಳಕೊಂಡು, ಭವಿಷ್ಯವಾದಿಗಳಿಗೆ ಮೊದಲೇ ತಿಳಿಸುವರು. ಹೀಗೆ ಯಾವದೊಂದು ಊರೊಳಗಿನ ಜನರ ಸಾಕಷ್ಟು ಸುದ್ದಿಗಳನ್ನು ತಿಳಿದಬಳಿಕ, ಭವಿಷ್ಯವಾದಿಗಳು ಆ ಊರಿಗೆ ಹೋಗುವರು. ಆಯಾ ಊರುಗಳಲ್ಲಿಯ ನಿರುದ್ಯೋಗಿಗಗಳಾದ ಜನರನ್ನೂ, ಹರಟೆ ಕೊಚ್ಚುವವರನ್ನೂ ತಮ್ಮ ಕಡೆಗೆ ಮಾಡಿಕೊಂಡು, ಅವರ ಸಹಾಯದಿಂದ ಹೊಸಹೊಸ ಜನರ ಸುದ್ದಿಗಳನ್ನು ತಿಳಕೊಂಡು ಇವರು ಅವನ್ನು ಭವಿಷ್ಯವಾದಿಗಳಿಗೆ ತಿಳಿಸುವರು. ಪ್ರತಿಒಬ್ಬನ ಹವ್ಯಾಸಗಳು ನೆರೆಹೊರೆಯವರಿಗೆ ಸಾಧಾರಣವಾಗಿ ತಿಳಿಯುತ್ತಿರುತ್ತವೆ. ಅವನ್ನು ಕೇಳಿಕೊಂಡು ಈ ಭವಿಷ್ಯವಾದಿಗಳು ಅನುಮಾನದಿಂದ ಮಂದಿಯ ಮನಸ್ಸಿನೊಳಗಿನ ಮಾತನ್ನು ಹೇಳುವರು. ಹೀಗೆ ಮೋಸಗಾರಿಕೆಯಿಂದ ಹಲವು ಜನರು ಮಂದಿಯ ಕೈಯಿಂದ ದುಡ್ಡು ಎತ್ತಿ ತಮ್ಮ ಉಪಜೀವನ ಸಾಗಿಸಿಕೊಳ್ಳುವರು. ನಮ್ಮ ತಪಸ್ವಿನಿಯು ತಾನು ನಿಸ್ಪೃಹಳೆಂಬದನ್ನು ತೋರಿಸುವದಕ್ಕಾಗಿ, ತನ್ನ ದೇವರ ಮುಂದೆ ಬಿದ್ದ ಕಾಯಿಹಣ್ಣುಗಳ ರಾಶಿಯನ್ನೂ, ಹಣವನ್ನೂ ಮಂದಿಗೆ ಹಂಚಿಬಿಡುತ್ತಿದ್ದಳು. ಇದರಿಂದಂತು ಆಕೆಯ ಕೀರ್ತಿಯು ಮತ್ತಿಷ್ಟು ಹೆಚ್ಚಿತು.

ತಪಸ್ವಿನಿಯ ಸ್ಫುರದ್ರೂಪ, ಆ ಸ್ಫುರದ್ರೂಪವನ್ನು ಬೆಳಗುವ ಅತುಲ ತೇಜಸ್ಸು, ಆ ಅತುಲ ತೇಜಸ್ಸನ್ನು ಅಲಂಕರಿಸುವ ಜಾಜ್ವಲ್ಯವಾದ ನಿಸ್ಪೃಹತೆ, ಆ ಜಾಜ್ವಲ್ಯ ನಿಸ್ಪೃಹತೆಯನ್ನು ಭೂಷಿಸುವ ಯಥಾರ್ಥವಾದಿತ್ವ ಇವೆಲ್ಲಾ ಒಟ್ಟುಗೂಡಿ, ತಪಸ್ವಿನಿಯು ಸ್ವಲ್ಪ ದಿವಸಗಳಲ್ಲಿಯೇ ಸರ್ವಸಮ್ಮತಳೂ, ಸನ್ಮಾನನಿಯಳೂ, ಪೂಜ್ಯಳೂ ಆದಳು!

ಈ ತಪಸ್ವಿನಿಯು ಯಾರೆಂಬದನ್ನು ನಾವು ವಾಚಕರಿಗೆ ಹೇಳಲವಶ್ಯವಿಲ್ಲ. ಕೆಚ್ಚೆದೆಯ ಹೈಮವತಿಯೇ ಆಕೆಯೆಂಬದನ್ನು ವಾಚಕರು ಅರಿತಿರಬಹುದು. ಆಕೆಯ ಪತಿಯಾದ ಜಾಧವರಾಯನು ಆಕೆಯ ಜಾಗರೂಕನಾದ ಅಂಗರಕ್ಷಕನಾಗಿದ್ದನು. ಸರ್ಜೇರಾಯನೂ, ಅವನ ಪರಿವಾರದವರೂ ಆಕೆಗೆ ಸುದ್ದಿಗಳನ್ನು ತಿಳಿಸುವ ಸಾಧನವೂ, ಆಕೆಯ ಕೀರ್ತಿಯನ್ನು ಹೊಗಳುವ ಜಾಗಟೆಗಳೂ ಆಗಿದ್ದರು. ಹೀಗೆ ಶಿವರಾಯನ ಪರಿವಾರದೊಳಗಿನ ಆ ಮೂವರು ಚತುರರು ತಮ್ಮ ತಂತ್ರವನ್ನು ಬಹು ಚಾತುರ್ಯದಿಂದಲೂ, ಜಾಗರೂಕತೆಯಿಂದಲೂ ಒಡ್ಡಿದ್ದರು. ಅವರು ಒಡ್ಡಿದ ಮೋಹ ಜಾಲದಲ್ಲಿ ದೊಡ್ಡ ದೊಡ್ಡವರು ಸಹ ಬೀಳಹತ್ತಿದರು. ಅಫಜುಲಖಾನನೂ ಒಮ್ಮೆ ತಪಸ್ವಿನಿಯನ್ನು ನೋಡಿ ಬರಬೇಕೆಂದು ಮಾಡಿದನು. ತಾನಿದ್ದಲ್ಲಿಗೇ ಆಕೆಯನ್ನು ಕರಿಸಿಕೊಳ್ಳಬೇಕೆಂದು ಆತನು ಯೋಚಿಸಿದನು; ಆದರೆ ಆಕೆಯನಿಸ್ಪೃಹತೆಯ ಸುದ್ದಿಗಳನ್ನು ಕೇಳಿ, ತಾನೇ ವೇಷಾಂತರದಿಂದ ಆಕೆಯ ಬಳಿಗೆ ಹೋಗುವದು ಯೋಗ್ಯವೆಂದು ನಿಶ್ಚಯಿಸಿ, ತಾನು ಸಾಯಜಿಯ (ಮುಸಲ್ಮಾನ ಸಾಧುವಿನ) ವೇಷ ಹಾಕಿಕೊಂಡು, ಒಬ್ಬ ಹುಜರೆಯನ್ನು ಸಂಗಡ ಕರಕೊಂಡು ಹೊರಟನು. ಖಾನನು ಹಾಕಿಕೊಂಡಿದ್ದ ಸಾಯಜಿಯ ಈ ಅಪೂರ್ವ ವೇಷವನ್ನು ನೋಡಿ ಛಾವಣಿಯೊಳಗಿನ ಜನರು ಬೆರಗಾದರು. ಒಬ್ಬರೂ ಅವನ ಗುರುತು ಹಿಡಿಯಲು ಸಮರ್ಥರಾಗಲಿಲ್ಲ. ಅವರು ಹುಜರೆಗೆ—"ಈ ಸಾಯಜಿಯವರು ಎಲ್ಲಿಯವರು?" ಎಂದು ಪ್ರಶ್ನ ಮಾಡತೊಡಗಿದರು. "ಇವರೊಬ್ಬ ದೊಡ್ಡ ಸಾಯಜಿಯವರಿರುವರು" ಎಂದು ಅವನು ಜನರಿಗೆ ಹೇಳುತ್ತ ನಡೆದನು. ಹೀಗೆ ವೇಷಧಾರಿಯಾದ ಖಾನನು ತಪಸ್ವಿನಿಯ ಬಳಿಗೆ ಹೋಗಲು, ಅಲ್ಲಿ ಜನರ ಸಂದಣಿಯು ವಿಲಕ್ಷಣವಾಗಿತ್ತು. ಹುಜರೆಯು ಮೊಣಕೈಯಿಂದ ಜನ

ರನ್ನು ತಿವಿದು ಹಾದಿಯನ್ನು ಮಾಡುತ್ತ ಸಾಯಜಿಯನ್ನು ಕರಕೊಂಡು ನಡೆದನು. ಖಾನನ ಹುಜರೆಯನ್ನು ತಡೆಯುವವರು ಯಾರು? ಈ ಸುದ್ದಿಯು ಸರ್ಜೇರಾಯನ ತಾರಾಯಂತ್ರದ ತಂತಿಗಳ ದ್ವಾರದಿಂದ ತಪಸ್ವಿನಿಗೆ ತಟ್ಟನೆ ಮುಟ್ಟಿತು. ತಪಸ್ವಿನಿಯು ವೇಷಧಾರಿಯಾದ ಖಾನ ನನ್ನು ನೋಡಿದ ಕೂಡಲೆ ಬೆದರಿದಳು. ಕ್ಷಣದಲ್ಲಿ ಆಕೆಯು ತನ್ನ ಮನ ಸ್ಸನ್ನು ಸಮಾಧಾನಪಡಿಸಿಕೊಂಡು, ಕುಳಿತ ಸ್ಥಳದಲ್ಲಿಯೇ ಎದ್ದು ನಿಂತು, ಸಾಯಜಿಯನ್ನು ಬಹುಮಾನಪೂರ್ವಕ ಬರಮಾಡಿಕೊಂಡಳು. ಆಕೆಯು ಅಚ್ಚ ಫಾರಸೀ ಮಿಶ್ರವಾದ ಉರ್ದೂ ಭಾಷೆಯಿಂದ ಸಾಯಜಿಗೆ—"ಬರ ಬೇಕು, ಸಾಯಜಿಯವರು ಇತ್ತ ಬರಬೇಕು; ತಮ್ಮ ಚರಣ ಸ್ಪರ್ಶದಿಂದ ನಮ್ಮ ಸ್ಥಳವು ಪವಿತ್ರವಾದದ್ದಕ್ಕಾಗಿ ನನಗೆ ಬಹಳ ಸಮಾಧಾನವಾಗಿದೆ. ನನ್ನಿಂದ ಏನಾದರೂ ತಮ್ಮ ಸೇವೆಯು ಘಟಿಸುವದಿದ್ದರೆ ಹೇಳಬೇಕು, ನಾನು ಸಿದ್ಧಳಿರುವೆನು. ತಮ್ಮ ವಿದ್ಯೆಯ ಮುಂದೆ ನನ್ನಂಥ ಕ್ಷುದ್ರಳ ಪಾಡೇನು? ಬರಬೇಕು, ಇತ್ತ ಕುಳಿತುಕೊಳ್ಳಬೇಕು, ಎಂದು ನುಡಿಯಲು, ಆಕೆಯ ಪರಿಚಯದವನಾದ ಹುಜರೆಯು—"ತಪೋಧನರೇ, ನಿಮ್ಮ ಅದ್ಭುತ ಸಾಮರ್ಥ್ಯದ ವರ್ಣನವನ್ನು ನಾನು ಇವರ ಮುಂದೆ ಮಾಡಲು, ಇವರು ನಿಮ್ಮನ್ನು ಕಾಣಲಿಕ್ಕೆ ಬಂದಿದ್ದಾರೆ. ಇವರು ಕೇಳುವ ಪ್ರಶ್ನೆಗಳಿಗೆ ನೀವು ಸಮರ್ಪಕವಾಗಿ ಉತ್ತರವನ್ನು ಕೊಡಬೇಕು," ಎಂದು ಹೇಳಿದನು. ಅದಕ್ಕೆ ತಪಸ್ವಿನಿಯು—"ಅವಶ್ಯವಾಗಿ ಕೇಳಬೇಕು; ನಾನು ತಿಳಿದಷ್ಟು ಹೇಳುವೆನು. ಇಂಥವರ ಮುಂದೆ ನನ್ನ ಸಾಮರ್ಥ್ಯವನ್ನೇನು ತೋರಿಸು ವದು?" ಎಂದು ನುಡಿಯಲು, ಕೂಡಲೆ ಸಾಯಜಿಯು—"ಹೀಗಂದರೆ ಹ್ಯಾಗೆ? ಯಾರಲ್ಲಿ ಎಂಥ ಸಾಮರ್ಥ್ಯವಿರುತ್ತದೆಂಬದನ್ನು ಹೇಳಲಾಗುವದಿಲ್ಲ. ನಾನು ಮನಸ್ಸಿನಲ್ಲಿ ಒಂದು ಪ್ರಶ್ನವನ್ನು ಯೋಚಿಸಿರುವೆನು; ಅದನ್ನೂ ಅದರ ಉತ್ತರವನ್ನೂ ಹೇಳಿರಿ." ಎಂದು ಕೇಳಲು, ತಪಸ್ವಿನಿಯು ಸಾಯ ಜಿಯ ಮುಖವನ್ನು ನೋಡಿ—"ನಿಮ್ಮ ಪ್ರಶ್ನವನ್ನೂ, ಅದರ ಉತ್ತರವನ್ನು ಈ ಹಿಂದು ಜನರ ಮುಂದೆ ಹೇಳುವಹಾಗಿಲ್ಲ. ಎಲ್ಲರನ್ನು ದೂರಕಳಿಸಿರಿ; ನೀವು, ನಾನು, ಬೇಕಾದರೆ ನಿಮ್ಮ ಈ ಹುಜರೆಯವರು ಇಷ್ಟೇ ಜನರು ಇರೋಣ. ಇಲ್ಲದಿದ್ದರೆ ನಾವು ಮೂವರೇ ಒತ್ತಟ್ಟಿಗೆ ಹೋಗಿ ಬಿಡೋಣ

ನಡೆಯಿರಿ. ನಿಮ್ಮ ಪ್ರಶ್ನವನ್ನು ಇವರೆಲ್ಲರ ಮುಂದೆ ಹೇಳುವ ಹಾಗಿಲ್ಲ. ಇದರ ಮೇಲೆ ನಿಮ್ಮ ಇಚ್ಛೆಯು. ಇಲ್ಲಿಯೇ ಹೇಳೆಂದರೆ ಹೇಳುವೆನು.

ತಪಸ್ವಿನಿಯ ಈ ಮಾತುಗಳನ್ನು ಕೇಳಿದ ಕೂಡಲೆ ಸಾಯಿಜಿಗೆ ಹ್ಯಾಗೆ ಹ್ಯಾಗೋ ಆಯಿತು. ತಪಸ್ವಿನಿಯನ್ನು ನೋಡಿದ ಕೂಡಲೆ ಆ ವೇಷ ಧಾರಿಯಾದ ಖಾನನ ಮೇಲೆ ವಿಲಕ್ಷಣ ಪರಿಣಾಮವಾಗಿತ್ತು. ಖಾನನ ಚಿತ್ತ ಹರಣವಾಗಿ ಹೋಗಿತ್ತೆಂದು ಹೇಳಬಹುದು. ಒತ್ತಟ್ಟಿಗೆ ಹೋಗಿಯೇ ಈ ತಪಸ್ವಿನಿಯು ಹೇಳುವ ಉತ್ತರವನ್ನು ಕೇಳಿಕೊಳ್ಳಬೇಕೆಂದು ಆತನು ನಿಶ್ಚಯಿಸಿ ತಪಸ್ವಿನಿಯನ್ನು ಕುರಿತು—"ಒಳ್ಳೇದು, ನೀವು ಅಂದಂತೆಯೇ ಆಗಲಿ, ನಾನು ಒತ್ತಟ್ಟಿಗೆ ಬಂದು ನನ್ನ ಪ್ರಶ್ನದ ಉತ್ತರವನ್ನು ಕೇಳಿಕೊಳ್ಳುವೆನು; ಆದರೆ ನನ್ನ ಪ್ರಶ್ನವೇನೆಂಬದನ್ನು ಈ ಜನರ ಮುಂದೆ ಹೇಳಲು ಬಾಧೆಯಿಲ್ಲ, ಹೇಳಬೇಕು, ಎಂದು ಕೇಳಲು, ತಪಸ್ವಿನಿಯು ಮುಗುಳುನಗೆ ನಗುತ್ತ ಸಾಯಿಜಿಯನ್ನು ಕುರಿತು—

ತಪಸ್ವಿನಿ—ಪ್ರಶ್ನವನ್ನೇ ಏಕೆ, ಬೇಕಾದರೆ ಪ್ರಶ್ನವನ್ನೂ ಉತ್ತರವನ್ನೂ ಕೂಡಿಯೇ ಹೇಳುವೆನು. ಹೇಳಲಿಕ್ಕೆ ನಾನು ಸಿದ್ಧಳಿದ್ದೇನೆ; ಹೇಳಿರಿ, ಬರಿಯ ಪ್ರಶ್ನವನ್ನೇ ಹೇಳಲೋ, ಪ್ರಶ್ನವನ್ನೂ ಉತ್ತರವನ್ನೂ ಕೂಡಿಯೇ ಹೇಳಲೋ?

ಸಾಯಿಜಿ—ಬರಿಯ ಪ್ರಶ್ನವನ್ನೇ.

ತಪಸ್ವಿನಿ—ಹಾಗೇ ಆಗಲಿ; ನಿಮ್ಮ ಮೊದಲನೆಯ ಪ್ರಶ್ನವನ್ನು ಹೇಳುವೆನು ಕೇಳಿರಿ—"ನಾನು ನಿಜವಾಗಿ ಯಾರು ಇರುವೆನು?" ಎಂಬದು ನಿಮ್ಮ ಆ ಮೊದಲನೆಯ ಪ್ರಶ್ನವಾಗಿರುತ್ತದೆ. ಹೀಗೆ ನೀವು ಕೇಳುತ್ತಿರುವದರಿಂದ, ನೀವು ನಿಜವಾಗಿ ಸಾಯಿಜಿಯವರು ಅಲ್ಲವೆಂಬ ಉತ್ತರವು ತಾನೆ ವ್ಯಕ್ತವಾಗುತ್ತದೆ. ಇನ್ನು ತಾವು ಯಾರೆಂಬದರ ಉತ್ತರವನ್ನು ಈಗೇ ಹೇಳಲೋ?

ತಪಸ್ವಿನಿಯ ಈ ಮಾತುಗಳನ್ನು ಕೇಳಿ ಹುಜರೆಯು ಸಾಯಿಜಿಯ ಮೋರೆಯನ್ನು ನೋಡಿದನು. ಖಾನನ ಮನಸ್ಸಿಗೂ ಬಹು ಚಮತ್ಕಾರವಾಗಿ ತೋರಿತು. ಸಾಯಿಜಿಯು ತಪಸ್ವಿನಿಗೆ—"ಬೇಡ, ಇಲ್ಲಿ ಉತ್ತರವನ್ನು ಹೇಳುವದು ಬೇಡ. ನಾನು ಇಳಿದುಕೊಂಡಿದ್ದ ಮಶೀದೆಗೆ ನೀವು

ಬರ್ರಿ. ಅಲ್ಲಿ ಮಾತಾಡತಕ್ಕ ಮಾತುಗಳು ಬಹಳ ಇರುತ್ತವೆ" ಎಂದು ನುಡಿದು, ತಾನು ಇಳಿದುಕೊಂಡಲ್ಲಿಗೆ ಬರುವ ಮನಸ್ಸು ತಪಸ್ವಿನಿಗೆ ಇರುತ್ತದೆಯೋ ಇಲ್ಲವೋ ಎಂಬದನ್ನು ಕೇಳದೆ, ಖಾನನುಗಡಬಡಿಸಿ ಹೊರಟು ಹೋದನು. ಖಾನನು ಮೋರೆ ತಿರುವಿದ ಕೂಡಲೆ ಹೈಮವತಿಯು ಅರ್ಥ ಪೂರ್ಣವಾದ ದೃಷ್ಟಿಯಿಂದ ಖಾನನನ್ನು ನೋಡಿ, ಮುಗುಳುನಗೆ ನಗುತ್ತ ತಲೆಯಲ್ಲಾಡಿಸಿದಳು. ಹುಜರೆಯು ಸಾಯಿಜಿಯನ್ನು ಕಳಿಸಿ ಬರಲಿಕ್ಕೆ ಹೊರಟನು. ಆಗ ಸರ್ಜೇರಾಯನು ಹೈಮವತಿಯನ್ನು ಒತ್ತಟ್ಟಿಗೆ ಕರೆದುಕೊಂಡು ಹೋಗಿ—"ಅಮ್ಮಾ, ಹೈಮವತೀ, ಇನ್ನು ಹುಜರೆಯು ನಿಮ್ಮನ್ನು ಕರೆಯಲಿಕ್ಕೆ ಬರುವನು. ಆ ದುಷ್ಟ ಖಾನನ ಮನೆಗೆ ನೀವು ಹೋಗುವದು ನನ್ನ ಮನಸ್ಸಿಗೆ ಬರುವದಿಲ್ಲ; ಒಂದು ವೇಳೆ ಹೋಗುವದೇ ನಿಮ್ಮ ನಿಶ್ಚಯವಿದ್ದರೆ, ಶಿಷ್ಯಳೆಂದು ಹೇಳಿ ನನ್ನನ್ನು ಸಂಗಡ ಕರೆದುಕೊಂಡು ಹೋಗಿರಿ. ಅಲ್ಲಿ ಜಾಧವರಾಯರಂತೂ ಇದ್ದೇ ಇರುವರು. ನಾನು ಈಗಲೇ ಯೋಗಿನಿಯ ವೇಷವನ್ನು ಹಾಕಿಕೊಂಡು ಬರುವೆನು" ಎಂದು ಹೇಳಲು, ಹೈಮವತಿಯು—"ಅಣ್ಣಾ, ಸರ್ಜೇರಾವ, ನಿಮ್ಮ ಮಾತು ಯೋಗ್ಯವಾದದ್ದು. ನೀವಂದಂತೆಯೇ ಆಗಲಿ. ನಾನು ನಿಮ್ಮನ್ನು ಸಂಗಡ ಕರಕೊಂಡು ಹೋಗುವೆನು. ನಾನಾದರೂ ಬರಿಗೈಯಿಂದ ಖಾನನ ಬಳಿಗೆ ಹೊಗುವದಿಲ್ಲ. ನೋಡಿರಿ ಈ ಗುಪ್ತಶಸ್ತ್ರವನ್ನು. ಪ್ರಸಂಗದಲ್ಲಿ ನನ್ನ ಕೈಯನ್ನು ಖಾನನಿಗೆ ತೋರಿಸದೆ ಇರೆನು. ಅಂಥ ಪ್ರಸಂಗವೇ ಒದಗಿದರೆ, ನನ್ನ ಜೀವವು ನನ್ನ ಕೈಯೊಳಗಿರುವದು.

ಈ ಮೋರೆಗೆ ಅವರು ಮಾತಾಡುತ್ತಿರುವಷ್ಟರಲ್ಲಿ ಹುಜರೆಯು ಬಂದು ತಪಸ್ವಿನಿಗೆ ಹೊರಡಲು ಹೇಳಿಕೊಳ್ಳಹತ್ತಿದನು; ಆದರೆ ತನಗೂ ಅದೇ ಬೇಕಾಗಿದ್ದರೂ ತನ್ನ ಹೊರಡುವ ಆತುರವನ್ನು ಮುಚ್ಚಿಕೊಳ್ಳುವದಕ್ಕಾಗಿ ತಪಸ್ವಿನಿಯು ಹುಜರೆಗೆ—"ಅವರು ಹೇಳಲೊಲ್ಲರೇಕೆ, ನಾನೇನು ಅಲ್ಲಿಗೆ ಬರುವದಿಲ್ಲ. ನಾನು ನನ್ನ ಸ್ಥಳ ಹಿಡಿದು ಕುಳಿತುಕೊಂಡು ಮಾಡುವದನ್ನು ಮಾಡುವೆನು. ಅದನ್ನು ಬಿಟ್ಟು ಸಿಕ್ಕವರು ಸಿಕ್ಕಲ್ಲಿ ಕರೆದರೆ ನಾನು ಸ್ಥಳಬಿಟ್ಟು ಕದಲತಕ್ಕವಳಲ್ಲ." ಎಂದು ಸ್ಪಷ್ಟವಾಗಿ ಹೇಳಿದಳು. ಆಗ ಹುಜರೆಯು ವಿನಯದಿಂದ—"ತಾವು ಹಾಗೆ ಮಾಡಬಾರದು. ನನ್ನ

ಮಾತನ್ನು ಕೇಳಿದರೆ ತಮಗೆ ದೊಡ್ಡ ಲಾಭವಾಗುವದು. ಒಲ್ಲೆನೆನ್ನುವದು ಯೋಗ್ಯವಲ್ಲ. ನನ್ನ ಮಾತನ್ನಾದರೂ ಕೇಳಿ ನೋಡಿರಿ" ಎಂದು ಹೇಳಿದನು. ಆಮೇಲೆ ಬಹಳ ಅರೆದಾಟವಾಗಿ ಕಡೆಗೆ ತಪಸ್ವಿನಿಯು ಹುಜರೆಯ ಮಾತನ್ನು ಮೀರಲಾರದೆ ನಿರ್ವಾಹವಿಲ್ಲದೆ ಹೊರಡಲು ಒಪ್ಪಿಕೊಂಡಂತೆ ನಟಿಸಿದಳು. ಕೂಡಲೆ ಯೋಗಿನಿಯ ವೇಷಧಾರಿಯಾದ ಸರ್ಜೇರಾಯನು, ದೇವಿಯ ಮೂರ್ತಿಯೇ ಮೊದಲಾದ ಉಪಕರಣಗಳನ್ನು ತಕ್ಕೊಂಡು, ತಪಸ್ವಿನಿಯ ಸಂಗಡ ಹೊರಡಲು ಸಿದ್ಧನಾದನು. ಆ ಶಿಷ್ಯಳಿಗೆ ಬೇಡೆನ್ನುವ ಧೈರ್ಯವು ಹುಜರೆಗೆ ಆಗಲಿಲ್ಲ. ಅವರಿಬ್ಬರನ್ನು ಕರಕೊಂಡು ಆತನು ಅಡ್ಡ ತಿಡ್ಡ ಮಾರ್ಗದಿಂದ ಸಾಗಿದನು. ಮಾರ್ಗದಲ್ಲಿ ಯಾರೂ ಸಿಟ್ಟಿಂದು ಮಾತಾಡುತ್ತಿದ್ದಿಲ್ಲ. ಖಾನನ ಡೇರೆಗೆ ಅವರೆಲ್ಲರೂ ಮುಟ್ಟಲು, ಅವರು ಬಂದ ಸುದ್ದಿಯು ಖಾನನಿಗೆ ಮುಟ್ಟಿತು. ಕೂಡಲೆ ಖಾನನು ತಪಸ್ವಿನಿಯನ್ನು ಕರೆಸಿ, ಸತ್ಕರಿಸಿ ಕುಳ್ಳಿರಿಸಿಕೊಂಡನು. ಶಿಷ್ಯೆಯು ತಪಸ್ವಿನಿಯ ಹಿಂದೆ ನಿಂತುಕೊಂಡಳು. ಅಷ್ಟರಲ್ಲಿ ಜಾಧವರಾಯನೂ ಅಲ್ಲಿಗೆ ಬಂದನು. ಸ್ವಲ್ಪಹೊತ್ತು ಸುಮ್ಮನೆ ಕುಳಿತುಕೊಂಡು ಖಾನನು ತಪಸ್ವಿನಿಯನ್ನು ಕುರಿತು—

ಖಾನ—ನಿಜವಾಗಿ ಕೇಳಿದರೆ ಸಾಧು ಸತ್ಪುರುಷರ ಮೇಲೆ ನಮ್ಮ ವಿಶ್ವಾಸವಿಲ್ಲ; ಆದರೆ ನಿಮ್ಮ ಕೀರ್ತಿಯನ್ನು ಕೇಳಿ ನಿಮ್ಮನ್ನು ಕಾಣಲಿಕ್ಕೆ ನಾವು ಬಂದಿದ್ದೆವು. ಕೀರ್ತಿಗೆ ತಕ್ಕಂತೆ ನಿಮ್ಮ ಸ್ಥಿತಿಯಿರುತ್ತದೆ. ಅದಕ್ಕಾಗಿಯೇ ನಾವು ನಿಮ್ಮನ್ನು ಬುದ್ಧಿಪೂರ್ವಕವಾಗಿ ಈಗ ಕರಿಸಿದ್ದೇವೆ. ಇನ್ನು ನಿಮ್ಮ ಕರಾಮತಿಯಿದ್ದದ್ದನ್ನು ನನಗೆ ತೋರಿಸಿರಿ.

ತಪಸ್ವಿನಿ—ಏನು ಹೇಳಿದರೆ ಸಾಧು ಸತ್ಪುರುಷರ ಮೇಲೆ ನಿಮ್ಮ ವಿಶ್ವಾಸವು ಕುಳಿತೀತು? ನೀವೇ ನೋಡಿರಿ, ಹಿಂದೆ ಆದದ್ದನ್ನು ನಾನು ನಿಮಗೆ ಹೇಳಿದರೆ, ಈಕೆಯು ಎಲ್ಲಿಯಾದರೂ ಕೇಳಿಕೊಂಡಿರಬಹುದೆಂದು ನೀವು ತಿಳಕೊಳ್ಳುವಿರಿ; ಮುಂದಾಗುವದನ್ನು ಹೇಳಿದರೆ, ಅನುಭವಕ್ಕೆ ಬರುವತನಕ ನೀವು ಅದನ್ನು ನಂಬುವಹಾಗಿಲ್ಲ. ಅಂದ ಬಳಿಕ, ಈಗ ನಿಮ್ಮ ಮನಸ್ಸಿನಲ್ಲಿ ಅತ್ಯಂತ ಗೂಢವಾದ ಯಾವ ಮಾತು ಇರುತ್ತದೆಂಬದನ್ನು ಹೇಳಿದರೆ ನಿಮ್ಮ

ವಿಶ್ವಾಸವು ಕೊಡುವದು; ಆದ್ದರಿಂದ ಈಗ ನಾನು ಅದೇ ಮಾತನ್ನು ಹೇಳುವೆನು.

ಖಾನ—ನೀವನ್ನುವದು ನಿಜವು; ನಮ್ಮ ಮನಸ್ಸಿನೊಳಗಿನ ಅತ್ಯಂತ ಗೂಢವಾದ ಮಾತನ್ನೇ ಈಗ ನೀವು ನನಗೆ ಹೇಳಿರಿ.

ತಪಸ್ವಿನಿ—ಅದು ನನ್ನನ್ನು ಕೂಡಿತು. ಆದರೆ ನಿಮ್ಮ ಮನಸ್ಸಿನೊಳಗಿನ ಮಾತನ್ನು ಇವರೆಲ್ಲರ ಸಮಕ್ಷ ಹೇಳಲೋ, ನಿಮ್ಮ ಒಬ್ಬರ ಮುಂದೆಯೇ ಹೇಳಲೋ?

ತಪಸ್ವಿನಿಯ ಈ ಮಾತುಗಳನ್ನು ಕೇಳಿ ಖಾನನು ಮೊದಲು—"ಏನೂ ಚಿಂತೆಯಿಲ್ಲ, ಇವರೆಲ್ಲರ ಸಮಕ್ಷ ಹೇಳಿರಿ" ಎಂದು ನುಡಿದನು; ಆದರೆ ಕೂಡಲೆ ಆತನು—"ಹಾಗೆ ಮಾಡಬೇಡಿರಿ. ನನ್ನೊಬ್ಬನ ಮುಂದೆಯೇ ಆ ಮಾತನ್ನು ಹೇಳಿರಿ" ಎಂದು ನುಡಿದು, ತನ್ನ ಹುಜರೆಯನ್ನು ವಕ್ರ ದೃಷ್ಟಿಯಿಂದ ನೋಡಿದನು. ಆಗ ಹುಜರೆಯು ಎಲ್ಲರನ್ನು ಹೊರಗೆ ಕಳಿಸಿದನು. ಬಳಿಕ ತಪಸ್ವಿನಿಯ ಶಿಷ್ಯಳೂ ಹೊರಗೆ ಹೋಗಬೇಕಾಯಿತು. ಹೀಗೆ ಎಲ್ಲರೂ ಹೊರಗೆ ಹೋದದ್ದನ್ನು ನೋಡಿ ತಪಸ್ವಿನಿಯು ಖಾನನನ್ನು ಕುರಿತು—"ಇನ್ನು ನಾನು ನಿಮಗೆ ಗುರುತಿನ ಮಾತನ್ನು ಹೇಳುವೆನು, ಅದು ನಿಜವಿದ್ದರೆ ನಿಜವೆಂದು ನನ್ನ ಮುಂದೆ ಸ್ಪಷ್ಟವಾಗಿ ಒಪ್ಪಿಕೊಳ್ಳಬೇಕು. ನಾನು ಹೇಳಿದ್ದು ನಿಜವಾದರೆ ಬಹಳ ನೆಟ್ಟಗಾಗುವದು. ನೆಟ್ಟಗೆಂದರೇನು? ಹೇಳಿದ ಮಾತು ನಿಜವಾದರೆ ಯಾರಿಗಾದರೂ ಸಂತೋಷವಾಗುವದಿಷ್ಟೆ, ಹೆಚ್ಚಿನದೇನೂ ಇಲ್ಲ.

ಖಾನ—ಹೇಳುವೆನು, ನೀವು ಹೇಳಿದ ಮಾತು ನಿಜವಾದರೆ ನಿಜವಾಯಿತೆಂದು ಹೇಳುವೆನು; ಆದರೆ ನಿಜವಾಗದಿದ್ದರೆ ಮಾತ್ರ ಕತ್ತೆಯ ಮೇಲೆ ಕುಳ್ಳಿರಿಸಿ ನಿಮ್ಮನ್ನು ನಮ್ಮ ಪಾಳಯದ ತುಂಬ ಮೆರಿಸೇನು!

ತಪಸ್ವಿನಿ—ಅವಶ್ಯವಾಗಿ ಮೆರಿಸಬೇಕು; ಅದಕ್ಕೆ ಸಂಪೂರ್ಣವಾಗಿ ನನ್ನ ಒಪ್ಪಿಗೆಯಿದೆ. ನೀವು ನ್ಯಾಯವಾದದ್ದನ್ನೇ ಮಾಡಿದರೆ, ನಾನು ವಿಷಾದಪಡುವದೇಕೆ? ಕೇಳಿರಿ, ಇನ್ನು ನಾನು ನಿಮ್ಮ ಮನಸ್ಸಿನೊಳಗಿನ ಮಾತನ್ನು ಹೇಳುತ್ತೇನೆ ಕೇಳಿರಿ—"ಶಿವಾಜಿಯು ಹೇಳಿದ ಹಾಗೆ ಈಗ

ಕೇಳಿ, ಪ್ರಸಂಗದಲ್ಲಿ ವಿಶ್ವಾಸಘಾತದಿಂದ ಅವನನ್ನು ಹಣ್ಣು ಮಾಡಬೇಕು, ಇಲ್ಲವೆ ಸಾಧಿಸಿದರೆ ಅವನನ್ನು ಕೊಂದುಬಿಡಬೇಕು, ಎಂದು ನೀವು ಮನಸ್ಸಿನಲ್ಲಿ ನಿಶ್ಚಯಿಸಿರುವಿರಿ;" ಈ ಮಾತು ನಿಜವೋ ಸುಳ್ಳೋ ಹೇಳಿರಿ. ಇನ್ನು ಮುಚ್ಚುಮರೆ ಮಾಡಿದರೆ ನಾನು ಕೇಳಲಿಕ್ಕಿಲ್ಲ!

ಹೀಗೆ ಮಾತಾಡುವಾಗ ತಪಸ್ವಿನಿಯ ತೀಕ್ಷ್ಣ ದೃಷ್ಟಿಯು ಖಾನನ ದೃಷ್ಟಿಗಳ ಕಡೆಗೆ ಇತ್ತು. ಇದು ಖಾನನ ಲಕ್ಷದಲ್ಲಿ ಬರಲಿಲ್ಲ. ತಪಸ್ವಿನಿಯ ಮಾತುಗಳನ್ನು ಕೇಳಿ ಖಾನನು ಆಶ್ಚರ್ಯಮಗ್ನನಾದನು. ತನ್ನ ಮನಸ್ಸಿನೊಳಗಿನ ಮಾತುಗಳನ್ನು ಈಕೆಯು ಸರಿಯಾಗಿ ಹೇಳಿದಳೆಂದು ಆತನು ತಿಳಕೊಂಡನು. ಇನ್ನು ಈಕೆಗೆ ಏನು ಉತ್ತರಕೊಡಬೇಕೆಂದು ಆತನು ತನ್ನೊಳಗೆ ವಿಚಾರ ಮಾಡುತ್ತ ಮೆಲ್ಲನೆ ಆ ತಪಸ್ವಿನಿಗೆ—"ಅಲಬತ! ಅಲಬತ! ಈ ಮಾತು ನಮ್ಮ ಮನಸ್ಸಿನಲ್ಲಿರುತ್ತದೆ. ನಿಜವನ್ನು ನುಡಿಯುವೆನೆಂದು ನಿನಗೆ ವಚನಕೊಟ್ಟಿರುವದರಿಂದ ಈಗ ಮಾಜದೆ ಹೇಳುತ್ತೇನೆ. ನನ್ನ ಮನಸ್ಸಿನೊಳಗಿನ ಮಾತು ನಿನಗೆ ಗೊತ್ತಾಗಿರುವದರಿಂದ, ಅದರ ಪರಿಣಾಮವು ಮುಂದೆ ಏನಾಗುವದೆಂಬದಾದರೂ ನಿನಗೆ ಗೊತ್ತಿರಲೇಬೇಕು; ಹೇಳು, ನೀನು ನನಗೆ ಅದನ್ನು ಹೇಳು," ಎಂದು ಕೇಳಿದನು. ಆಗ ತಪಸ್ವಿನಿಯು ಗಂಭೀರಮುದ್ರೆಯನ್ನು ತಾಳಿ ಕೆಲವು ಹೊತ್ತು ಸುಮ್ಮನೆ ಕುಳಿತುಕೊಂಡು ಖಾನನಿಗೆ—"ನಾನು ಅದನ್ನೂ ನಿಮ್ಮ ಮುಸಲ್ಮಾನೀ ರಮಲಶಾಸ್ತ್ರದ ಆಧಾರದಿಂದ ಹೇಳುವೆನು; ಆದರೆ ನನ್ನ ಭವಿಷ್ಯವು ನಿಜವಾದರೆ, ಈಗ ನೀವು ನೆಲಸಮಮಾಡಿರುವ ತುಳಜಾಪುರದ ಭವಾನಿಯ ಗುಡಿಯನ್ನೂ, ಪಂಢರಪುರದ ವಿಠೋಬನ ಗುಡಿಯನ್ನೂ ನಿಮ್ಮ ವೆಚ್ಚದಿಂದ ಕಟ್ಟಿಸಬೇಕು. ತಮ್ಮಂಥವರ ಮುಂದೆ ನನ್ನಂಥ ಹಿಂದೂ ಸ್ತ್ರೀಯು ಹೀಗೆ ಮಾತಾಡುವದು ಅತ್ಯಂತ ಸಾಹಸವೆಂಬದೇನೋ ನಿಜ; ಆದರೆ ನಾನು ಸರಳಮನುಷ್ಯಳು. ಎರಡನೆಯದೇನನ್ನೂ ನಾನು ಬೇಡಲಾರೆನು. ನನಗೆ ಸ್ವತಃ ಏನೂ ಬೇಕಾಗಿಲ್ಲ. ನಮ್ಮ ಪ್ರಸಿದ್ಧ ದೇವಾಲಯಗಳ ಪುನರುದ್ಧಾರವಾದರೆ ಸಾಕು!

ಖಾನ—ಏನು? ನಾನು ಕೆಡವಿರುವ ನಿಮ್ಮ ಹಿಂದೂ ದೇವಾಲಯಗಳನ್ನು ಕಟ್ಟಿಸಲಿಕ್ಕೆ ನೀನು ನನಗೆ ಹೇಳುವೆಯಾ? ನೀನು ಒಳ್ಳೆಯ

ದಿಟ್ಟಳೆಂಬದರಲ್ಲಿ ಸಂಶಯವಿಲ್ಲ. ನನ್ನನ್ನು ನೋಡಿದ ಕೂಡಲೇ ಹಿಂದುಗಳು ಗದಗುಟ್ಟಿ ನಡಗುತ್ತಿರಲು, ನೀನು ಹೀಗೆ ಕೇಳುವದು ಹೆಚ್ಚು! ನಿಮ್ಮ ಶಿವಾಜಿಯಂಥವನು ಕೂಡ ನನಗೆ ಅಂಜಿ ಪರಿಪರಿಯಿಂದ ನನ್ನ ಮನಸ್ಸನ್ನು ಒಲಿಸಿಕೊಳ್ಳಲು ಯತ್ನಿಸುತ್ತಿರುವನು. ಹೀಗಿರಲು, ನೀನು ನಮ್ಮ ಮುಂದೆ ಇಂಥ ಮಾತುಗಳನ್ನು ನಿಶ್ಶಂಕೆಯಿಂದ ಆಡುವೆಯಲ್ಲ! ನೀನು ಒಳ್ಳೇ ಎದೆಗಾರಳು!!

ತಪಸ್ವಿನಿ—ಖಾನಸಾಹೇಬ, ನೀವು ಹೇಳಿದಂತೆ ನಾನು ಕೆಚ್ಚೆದೆಯವಳೆಂಬದು ಸುಳ್ಳಲ್ಲ. ನಮ್ಮಂಥ ನಿಸ್ಪೃಹಿಗಳಿಗೆ ಯಾರದೇನು ಅಂಜಿಕೆ? ಕಟ್ಟಿಸುವದು ನಿಮ್ಮಿಂದ ಆಗದಿದ್ದರೆ, ಆಗುವದಿಲ್ಲೆಂದು ಸ್ಪಷ್ಟವಾಗಿ ಹೇಳಿರಿ. ಅದಕ್ಕೆ ನನ್ನ ಸಿಟ್ಟು ಇಲ್ಲ. ನಿಮ್ಮ ಪ್ರಶ್ನದ ಉತ್ತರವನ್ನು ನಾನು ಹ್ಯಾಗಿದ್ದರೂ ಹೇಳುವೆನು.

ಖಾನ—ನೀನು ಬೇಕಾದದ್ದನ್ನು ಹೇಳು; ಮತ್ತು ನೀನು ಹೇಳಿದ ಹಾಗೆ ಬೇಕಾದದ್ದರ ಅನುಭವವು ನನಗೆ ಬರಲಿ; ಆದರೆ ನೀನು ಬೇಡುವ ಭಿಕ್ಷೆಯನ್ನು ನಾನು ಸರ್ವಥಾ ಹಾಕುವದಿಲ್ಲ. ನಿನಗೆ ನಾವು ಒಂದು ಭಿಕ್ಷೆ ಹಾಕುವದು ನಿಜವು; ಆದರೆ ಈಗಲೇ ಅದನ್ನು ಒಡೆದು ಹೇಳುವದಿಲ್ಲ. ನೀನು ಭವಿಷ್ಯವನ್ನು ಹೇಳಿದ ಹೊರತು ಇಲ್ಲಿಂದ ನೀನು ಬಿಡುಗಡೆಹೊಂದಲಾರೆಯೆಂಬುದನ್ನು ಮಾತ್ರ ಲಕ್ಷದಲ್ಲಿಡು. ಹೇಳು, ಇನ್ನು ಭವಿಷ್ಯವಾವದದನ್ನು!

ತಪಸ್ವಿನಿ—ಹೇಳುವೆನು; ಆದರೆ, ನಿಮ್ಮ ಈ ಬೆದರಿಕೆಗೆ ನಾನು ಬೆದರುವೆನೆಂದು ಮಾತ್ರ ತಿಳಿಯಬೇಡಿರಿ, ಎಷ್ಟುಮಾತ್ರವೂ ತಿಳಿಯಬೇಡಿರಿ. ನಾವು ನಿಮ್ಮ ಸಾಯಿಜಿಗಳು, ಫಕೀರರು ಇದ್ದಹಾಗೆ. ನಮಗೆ ಜಗತ್ತಿನ ಭಯವಿಲ್ಲ; ನಮ್ಮಿಂದ ಜಗತ್ತಿಗೆ ಭಯವಿಲ್ಲ. ಜೀವದ ಹಂಗು ನಾವು ಎಣಿಸುವವರಲ್ಲ. ನಿಮಗೆ ಧೈರ್ಯವಿದ್ದರೆ ನಿಮ್ಮ ಖಡ್ಗವನ್ನು ತಕ್ಕೊಂಡು ನನ್ನ ರುಂಡವನ್ನು ಈಗ ತುಂಡರಿಸಿರಿ. ಜೀವದ ಆಶೆಯು ಯಾರಿಗೆ? ಯಾತರದಾದರೂ ಲೋಪವಿದ್ದವರಿಗೆ. ನಮಗೆ ಸರ್ವಥಾ ಜೀವದ ಭಯವಿಲ್ಲ.

ತಪಸ್ವಿನಿಗೆ ಸಿಟ್ಟು ಬಂದದ್ದು ಒಳಿತಾಗಲಿಲ್ಲೆಂದು ಖಾನನು ತಿಳಿದ್ದು

ಆಕೆಯನ್ನು ಕುರಿತು—"ನಿಮಗೆ ಸಿಟ್ಟು ಬರಬೇಕೆಂದು ನಾನು ಮಾತಾಡ ಲಿಲ್ಲ; ಆದರೆ ಅದು ಇರಲಿ, ಏನು ಹೇಳುವದನ್ನು ಹೇಳಿರಿ. ಹೊತ್ತು ಬಹಳ ಆಯಿತು. ಈ ಭವಿಷ್ಯದ ಕೆಲಸವನ್ನು ಬೇಗನೆ ತೀರಿಸಿ ಬಿಡೋಣ, ಅನ್ನಲು, ತಪಸ್ವಿನಿಯು—"ಅದಕ್ಕೇನು ತಡವಾಗಬೇಕಾಗಿದೆ? ಸ್ವಲ್ಪ ತಮ್ಮ ಹಸ್ತವನ್ನು ತೋರಿಸರಿ, ಈಗ ಹೇಳುವೆನು, ಎಂದು ಹೇಳಿದಳು. ಆಗ ಖಾನನು ಕೈಯನ್ನು ತೋರಿಸಲು, ತಪಸ್ವಿನಿಯು ಅದನ್ನು ಲಕ್ಷಪೂರ್ವಕ ವಾಗಿ ನೋಡಿ ಖಾನನನ್ನು ಕುರಿತು—"ಖಾನಸಾಹೇಬ, ನಿಮ್ಮ ಮನಸ್ಸಿನ ಬಯಕೆಯು ಸಂಪೂರ್ಣವಾಗಿ ಸಿದ್ಧವಾಗುವದು. ನಿಮ್ಮ ದೈವವು ಅನು ಕೂಲವಾಗಿರುತ್ತದೆ; ನಿಮ್ಮ ಗ್ರಹಗಳು ಬಲಿಷ್ಠವಾಗಿರುತ್ತವೆ. ನಮ್ಮ ಧರ್ಮರಕ್ಷಕನು ನಾಶಹೊಂದುವನು. ಈ ಮಾತನ್ನು ಹೇಳುವಾಗ ನನಗೆ ಪರಮಾವಧಿಯಾದ ವ್ಯಸನವಾಗುತ್ತಿದ್ದರೂ, ನಿಜವಾದ ಸಂಗತಿಯನ್ನು ನಾನು ಹೇಳದೆಯಿರಲಾರೆನು. ಈಗ ನನಗೆ ಸ್ಪಷ್ಟವಾಗಿ ಕಾಣುತ್ತದೆ; ನೀವು ಕೈಕೊಂಡ ಕಾರ್ಯವು ಸಫಲವಾಗಿ, ಬಾದಶಹರ ಸಂಪೂರ್ಣ ಪ್ರೇಮವು ನಿಮ್ಮ ಮೇಲೆ ಆಗುವದು.

ಈ ಮೇರೆಗೆ ನುಡಿದು ತಪಸ್ವಿನಿಯು ಅತ್ಯಂತ ವ್ಯಾಕುಲ ಮುದ್ರೆ ಯನ್ನು ತಾಳಿ ಸುಮ್ಮನೆ ಕುಳಿತುಕೊಂಡಳು. ಖಾನನಿಗೆ ಆಕೆಯ ಭವಿಷ್ಯ ವಾಣಿಯನ್ನು ಕೇಳಿ ಪರಮಾನಂದವಾಯಿತು. ಆತನು ತಪಸ್ವಿನಿಯನ್ನು ಕುರಿತು—"ಇನ್ನು ನಾನು ನಿನಗೆ ಹಾಕಬೇಕಾದ ಭಿಕ್ಷೆಯನ್ನು ಹೇಳುತ್ತೇನೆ ಕೇಳು. ಈಗಲೇ ನಿನ್ನ ರುಂಡವನ್ನು ಚಂಡಾಡುತ್ತಿದ್ದೆನು; ಆದರೆ ಹೆಂಗ ಸಾದದ್ದರಿಂದ ಬಿಟ್ಟಿದ್ದೇನೆ. ನಿನ್ನನ್ನು ಸದ್ಯಕ್ಕೆ ಸೆರೆಯಲ್ಲಿರಿಸುವೆನು. ನಿಮ್ಮಂಥವರನ್ನು ಜೀವದಿಂದ ಬಿಡಲೇಬಾರದು. ನಿಮ್ಮಿಂದ ಮುಂದಿಯ ಮನಸ್ಸಿನೊಳಗಿನ ಗುಟ್ಟಿನಮಾತು ಹೊರಬಿದ್ದು, ಅನರ್ಥಗಳು ಒದಗ ಬಹುದು. ನಿನ್ನ ಭವಿಷ್ಯವು ನಿಜವಾಗುವವರೆಗೆ ನಿನ್ನನ್ನು ಸೆರೆಯಲ್ಲಿಟ್ಟು, ಭವಿಷ್ಯವು ನಿಜವಾದರೆ ಬಿಟ್ಟುಬಿಡುವೆನು. ಇಲ್ಲದಿದ್ದರೆ ನಿನ್ನ ರುಂಡವನ್ನು ಚಂಡಾಡುವೆನು. ಯಾರವರು ಅಲ್ಲಿ? ಲತೀಫ, ಬಾಯಿತ್ತ, ಈಕೆಯನ್ನು ಸೆರೆಯಲ್ಲಿರಿಸು. ಬಲವಾದ ಕಾವಲಿರಲಿ. ಈಕೆಯನ್ನು ಬಿಟ್ಟರೆ ಕಾವಲು ಗಾರರನ್ನೆಲ್ಲ ತುಂಡರಿಸಿ ಚಲ್ಲೇನು, ಜೋಕೆ, ಎಂದು ಹೇಳಲು, ಲತೀಫನು

ಯೋಗಿನಿಯನ್ನು ಕಾರಾಗೃಹಕ್ಕೆ ಕರಕೊಂಡು ನಡೆದನು! ಆದರೆ ತನಗೆ ಮಹತ್ವದ ಸುದ್ದಿಯು ಗೊತ್ತಾಯಿತೆಂದು ತಪಸ್ವಿನಿಯು ಸಂತೋಷ ಪಡುತ್ತಿದ್ದಳು!!

೧೫ನೆಯ ಪ್ರಕರಣ.

ಭವಾನಿಯ ಪ್ರಸಾದ.

ಹೀಗೆ ಮಹಾರಾಜರ ಪರಿವಾರವು ಸ್ವಾಮಿಭಕ್ತಿಯಿಂದ ಪ್ರೇರಿತವಾಗಿ, ತನ್ನ ಸ್ವಾಮಿಯ ಹಿತಕ್ಕಾಗಿ ಬೆಂಕಿಯಲ್ಲಿ ಹಾರಿಕೊಂಡಂತೆ ಅತಿಸಾಹಸದ ಕಾರ್ಯವನ್ನು ಮಾಡುತ್ತಿರಲು, ಇತ್ತ ಪ್ರತಾಪಗಡದಲ್ಲಿ ಮಹಾರಾಜರು ಒಂದು ದಿನ ರಾತ್ರಿ ಸುಖದಿಂದ ನಿದ್ದೆಮಾಡುತ್ತಿದ್ದರು! "ಮಸ್ತಕದಲ್ಲಿ ಕಿರೀಟವನ್ನು ಧರಿಸಿದವನಿಗೆ ಸ್ವಾಸ್ಥ್ಯದ ಸುದ್ದಿಯು ಕೂಡ ಇರುವದಿಲ್ಲೆಂ"ದು ಸೆಕ್ಸಪೀಯರನು ಹೇಳಿರುತ್ತಾನಂತೆ! ಈ ಮಾತು ಯಥಾರ್ಥವಾದದ್ದೆಂದು ಯಾರಾದರೂ ಒಪ್ಪಿಕೊಳ್ಳಬಹುದು; ಆದರೆ ಶಿವಾಜಿಮಹಾರಾಜರು ಈ ನಿಯಮಕ್ಕೆ ಅಪವಾದವಾಗಿದ್ದರು. ಯಾಕಂದರೆ, ಶಿವಾಜಿ ಮಹಾರಾಜರಂಥ ಸ್ವಸ್ಥವೃತ್ತಿಯ ಧೀರರು, ತ್ರಿಭುವನದಲ್ಲಿ ಸಿಗುವದು ದುರ್ಲಭವು. ಎಂಥ ಸಂಕಟದ, ಅಥವಾ ಚಿಂತೆಯ ಪ್ರಸಂಗವೇ ಒದಗಿರಲಿ, ಮಹಾರಾಜರಿಗೆ ನಿದ್ದೆಮಾಡಬೇಕೆಂದು ಮನಸ್ಸಿನಲ್ಲಿ ಬಂದರೆ, ಅರ್ಧಕ್ಷಣದಲ್ಲಿ ಅವರಿಗೆ ಗಾಢನಿದ್ರೆಯು ಹತ್ತುತ್ತಿತ್ತು! ಮತ್ತು ಎಷ್ಟು ಹೊತ್ತು ನಿದ್ದೆ ಮಾಡಬೇಕೆಂದು ಅವರು ಸಂಕಲ್ಪಮಾಡುತ್ತಿದ್ದರೋ ಅಷ್ಟೇ ಹೊತ್ತು ಅವರು ನಿದ್ದೆಮಾಡಿ ಎಚ್ಚರಿಯುತ್ತಿದ್ದರು! ಒಟ್ಟಿಗೆ, ಅವರ ಸಿಪಾಯಿಗಳಂತೆಯೇ ಅವರ ನಿದ್ದೆಯೂ ಅವರ ಆಜ್ಞಾಪಾಲನದಲ್ಲಿ ತತ್ಪರವಾಗಿರುತ್ತಿತ್ತೆಂದು ಹೇಳಬಹುದು!! ಅಫಜುಲಖಾನನು ಬಂದಂದಿನಿಂದ, ವಿಶೇಷವಾಗಿ ಅವನು ತಮ್ಮ ಸುತ್ತುಮುತ್ತು ಬಲೆ ಒಡ್ಡಹತ್ತಿದಾಗಿನಿಂದ ಮಹಾರಾಜರ ಚಿತ್ತವು ಬಹು ಅಸ್ವಸ್ಥವಾಗಿತ್ತು. ಅಫಜುಲಖಾನನ ದವಡೆಯೊಳಗಿಂದ ತಾವು ಪಾರಾಗದಿದ್ದರೆ, ಸ್ವರಾಜ್ಯದ ಕಥೆಯು ಮುಗಿಯಿತೆಂತಲೂ, ಅಫಜುಲಖಾನನು

ತಮ್ಮ ಕೈಯೊಳಗಿಂದ ಪಾರಾಗಿ ಹೋದರೂ ಸ್ವರಾಜ್ಯದ ಕಥೆಯು ಮುಗಿದ ಹಾಗೆಯೇ ಎಂತಲೂ ಅವರು ತಿಳಕೊಂಡಿದ್ದರು. ಹೀಗೆ ಆಗಗೊಡದೆ ಖಾನನ ಪಾರಿಪತ್ಯ ಮಾಡಲಿಕ್ಕೆ ಏನು ಉಪಾಯಮಾಡಬೇಕೆಂದು ಅವರು ಆ ರಾತ್ರಿ ಸದರಿನ ಮೇಲೆ ಕುಳಿತು ಎಣಿಕೆ ಹಾಕುತ್ತಲಿದ್ದರು. ಹೀಗೆ ಎಣಿಕೆಹಾಕಿ ಕಡೆಗೆ ಅವರು—"ಅಂಬಾಬಾಯಿಯ ಮನಸ್ಸಿಗೆ ಬಂದರೆ ನಮ್ಮ ಯೋಚನೆಯು ಸಫಲವಾಗುವದು" ಎಂದು ಭವಾನೀ ಮಾತೆಯ ಮೇಲೆ ಭಾರಹಾಕಿ, ಕುಳಿತಲ್ಲಿಯೇ ಸ್ವಲ್ಪ ಕಣ್ಣು ಮುಚ್ಚಿದರು. ಸ್ವಲ್ಪ ಹೊತ್ತು ನಿದ್ದೆಮಾಡಿ ಎದ್ದರೆ ಚಿತ್ತಕ್ಕೆ ಸ್ವಾಸ್ಥ್ಯವು ದೊರೆತು, ಯೋಗ್ಯ ಮಾರ್ಗವು ಗೊತ್ತಾಗಬಹುದೆಂದು ಅವರು ಯೋಚಿಸಿ, ತಲೆಯೊಳಗಿನ ವಿಚಾರಗಳ ಪೆಟ್ಟಿಗೆಗಳನ್ನು ಮುಚ್ಚಿ ಸ್ವಸ್ಥಚಿತ್ತರಾಗಲು, ಕೂಡಲೆ ಮೇಲೆ ಹೇಳಿದಂತೆ ಅವರಿಗೆ ಗಾಢವಾದ ನಿದ್ರೆಯು ಹತ್ತಿತ್ತು!

ಮಹಾರಾಜರು ಹೀಗೆ ಗಾಢನಿದ್ರೆಯ ಸುಖವನ್ನು ಕೆಲ ಹೊತ್ತು ಅನುಭವಿಸಿದ ಬಳಿಕ, ಅವರಿಗೊಂದು ಅರ್ಥಪೂರ್ಣವಾದ ಸ್ವಪ್ನವು ಬಿದ್ದಿತು. ಅದರ ಸಂಗತಿಯೇನಂದರೆ—"ಒಂದು ಅರಣ್ಯವು, ಅತ್ಯಂತ ಗಹನವಾದ ಅರಣ್ಯವು. ಆ ಅರಣ್ಯದಲ್ಲಿ ಒಂದು ದೊಡ್ಡ ತಪೋವನವು. ಆ ಸುಂದರ ತಪೋವನವನ್ನು ನೋಡಿದ ಕೂಡಲೆ ಯಾರಿಗಾದರೂ ಆನಂದವಾಗದೆ ಯಿರದು. ಅಂಥ ತಪೋವನವನ್ನು ಮಹಾರಾಜರು ಹೊಕ್ಕು, ಒಂದು ದಿನ್ನೆಯ ಕಡೆಗೆ ಸಾಗಿದ ಹಾಗಾಯಿತು. ಆ ದಿನ್ನೆಯ ಮೇಲೆ ಸಣ್ಣ ಸಣ್ಣ ಪರ್ಣಕುಟೀರಗಳು ಇದ್ದವು. ಅವುಗಳ ಸುತ್ತು ಮುತ್ತು ಚಿಗರೆಯ ಮರಿಗಳು ಚಕ್ಕಂದದಿಂದ ಹಾರಾಡುತ್ತಲಿದ್ದವು. ಅಷ್ಟರಲ್ಲಿ ಒಂದು ಹನ್ನೆರಡು ಮೆಟ್ಟಿನ ಭಯಂಕರವಾದ ಹುಲಿಯು ಆರ್ಭಟಿಸಿ ಹಾರುತ್ತ, ಒಂದೊಂದು ಹಾರಿಕೆಗೆ ಕ್ರೂರತನದಿಂದ ಒಂದೆರಡಾದರೂ ಚಿಗರೆಯ ಮರಿಗಳನ್ನೂ, ಆಕಳು-ಆಕಳ ಕರುಗಳು ಮೊದಲಾದ ನಿರುಪದ್ರವ ಪ್ರಾಣಿಗಳನ್ನೂ ಮುರಿದು ಚಲ್ಲುತ್ತ ಬರತೊಡಗಿತು. ಅದು ಮುರಿದು ಚಲ್ಲಿದ ಬಡಪ್ರಾಣಿಗಳ ಮೃತ ಶರೀರಗಳು ಅಲ್ಲಲ್ಲಿ ಬಿದ್ದಿದ್ದವು. ರಕ್ತವು ಸರವುಗಟ್ಟಿ ಹರಿಯುತ್ತಿತ್ತು. ಆ ತಪೋವನದೊಳಗಿನ ನಿರ್ಮಲವಾದ ಜಲಪ್ರವಾಹಗಳು ರಕ್ತಕೂಡಿ ಕೆಂಪಾಗಿದ್ದವು. ಹುಲಿಯ ಈ ಕ್ರೂರತನವನ್ನು

ನೋಡಿ ಮಹಾರಾಜರು ಸಂತಾಪಗೊಂಡರು. ಅವರು ತಮ್ಮ ಬಳಿಯಲ್ಲಿದ್ದ ಬರ್ಚಿ-ಕತ್ತಿಗಳನ್ನು ಸಜ್ಜುಮಾಡಿಕೊಂಡು ಹುಲಿಯ ಮೇಲೆ ದುಮುಕಿದರು. ಆಗ ಆ ಹುಲಿಯು ಮಹಾರಾಜರನ್ನು ಕುರಿತು—"ಬಾ-ಬಾ; ನಾನು ನಿನ್ನನ್ನು ಮುರಿಯುವದಕ್ಕಾಗಿಯೇ ಬಂದಿದ್ದೇನೆ. ಈವರೆಗೆ ಈ ಪ್ರಾಣಿಗಳನ್ನು ಕೊಂದದ್ದು ಮೋಜಿಗಾಗಿ. ನೀನು ಸಿಗುವವರೆಗೆ ನಾನು ಹ್ಯಾಗಾದರೂ ಹೊತ್ತುಗಳೆದೆನು. ಈಗ ನೀನು ನನ್ನ ಕಣ್ಣಿಗೆ ಬಿದ್ದಿರುತ್ತೀ-ನನ್ನ ಬಳಿಗೆ ಬಂದಿರುತ್ತೀ. ನಿನ್ನ ಸಮಾಚಾರವನ್ನು ತಕ್ಕೊಳ್ಳದೆ ನಾನು ಬಿಡುವದಿಲ್ಲ. ಬಾ, ಮುಂದಕ್ಕೆ ಸಾಗಿ ಬಾ."

ಹುಲಿಯು ಮಾತಾಡುವದನ್ನು ನೋಡಿ ಮಹಾರಾಜರಿಗೆ ಆಶ್ಚರ್ಯವಾಯಿತು; ಆದರೆ ಆಶ್ಚರ್ಯಪಡುತ್ತ ಸುಮ್ಮನೆ ನಿಂತುಕೊಳ್ಳಲಿಕ್ಕೆ ಅದು ಸಮಯವಿದ್ದಿಲ್ಲ. ಮಹಾರಾಜರು ಕೂಡಲೆ ಹುಲಿಯ ಮೇಲೆ ಏರಿ ಹೋದರು; ಎದುರಿಗೆ ನಿಂತು ಹೊಡೆದರೆ ಹುಲಿಯು ಸತ್ತೀತೆಂದು ಅವರಿಗೆ ತೋರಲಿಲ್ಲ; ಆದ್ದರಿಂದ ಅವರು ಮುಂದಿನಿಂದ ಹುಲಿಯನ್ನು ಇರಿಯುವ ಹಾಗೆ ತೋರಿಸಿ, ಸರಕ್ಕನೆ ಹಿಂದಕ್ಕೆ ಸರಿದು ಅಡ್ಡಮಗ್ಗಲಿನಿಂದ ಅದರ ಮರ್ಮಸ್ಥಾನಕ್ಕೆ ಬರ್ಚಿಯಿಂದ ಇರಿದರು. ಕೂಡಲೆ ಹುಲಿಯು ನೆಲಕ್ಕುರುಳಲು, ಎಲ್ಲ ಕಡೆಯಲ್ಲಿ ಆನಂದವು ತುಂಬಿ ತುಳುಕಹತ್ತಿತು. ಆಗ ರಕ್ತಮಯ ಜಲಪ್ರವಾಹಗಳು ಸ್ವಚ್ಛವಾದವು; ಅಲ್ಲಲ್ಲಿ ಸತ್ತು ಬಿದ್ದಿದ್ದ ಪ್ರಾಣಿಗಳು ಚೇತರಿಸಿಕೊಂಡು ಎದ್ದು, ಮಹಾರಾಜರ ಸುತ್ತು ಮುತ್ತು ನಿಂತುಕೊಂಡು ಕೃತಜ್ಞತೆಯ ದೃಷ್ಟಿಯಿಂದ ಅವರನ್ನು ನೋಡಹತ್ತಿದವು. ಮಹಾರಾಜರು ಹಾಗೆಯೇ ಪರ್ಣಕುಟೀರಗಳಿರುವ ದಿನ್ನೆಯಕಡೆಗೆ ಸಾಗಿದರು. ಆ ಗುಡಿಸಿಲುಗಳ ಮಧ್ಯದಲ್ಲಿ ಒಂದು ಭವ್ಯವಾದ ದೇವಾಲಯವಿತ್ತು. ಮಹಾರಾಜರು ದೇವಾಲಯವನ್ನು ಹೊಕ್ಕು ಗರ್ಭಗುಡಿಗೆ ಹೋಗಲು, ಅಲ್ಲಿ ಅವರಿಗೆ ಕಣ್ಣು ಕುಕ್ಕುವ ತೇಜಸ್ಸಿನ ಮಧ್ಯದಲ್ಲಿ ದೇದೀಪ್ಯಮಾನವಾದ ಭವಾನಿಯ ದಿವ್ಯಮೂರ್ತಿಯ ದರ್ಶನವಾತು; ಆ ಲೋಕಮಾತೆಯ ಸುಂದರ ಮುಖ ಕಮಲದಲ್ಲಿ ಧೈರ್ಯವನ್ನು ಹುಟ್ಟಿಸುವ ಮೃದುಹಾಸವು ಒಪ್ಪುತ್ತಿರಲು; ಮತ್ತು ದೇವಿಯ ವರದಹಸ್ತವು ಅಭಯವನ್ನೀಯುತ್ತಿರಲು, ಮಹಾರಾಜರು ಭಕ್ತಿ ಪರವಶರಾಗಿ ಆ ಸರ್ವಮಂಗಲೆಗೆ

ಸಾಷ್ಟಾಂಗವೆರಗಿದರು. ದೇವಿಯ ಚರಣ ಕಮಲಗಳಲ್ಲಿ ಮಹಾರಾಜರ ಮನಸ್ಸು ಲೀನವಾಗಲು, ಅವರ ಮೈಮೇಲಿನ ಎಚ್ಚರವು ತಪ್ಪಿದಂತಾಯಿತು. ಆಗ ಜಗದಂಬೆಯು ಮಹಾರಾಜರ ಮಸ್ತಕದ ಮೇಲೆ ತನ್ನ ವರದ ಹಸ್ತವನ್ನಿಟ್ಟು—"ವತ್ಸಾ, ಏಳು ಏಳು ನೀನು ನನ್ನ ತಪೋವನದೊಳಗಿನ ನಿರಪರಾಧಿಗಳಾದ ಬಡಪ್ರಾಣಿಗಳನ್ನು ಆ ದುಷ್ಟ ವ್ಯಾಘ್ರನ ಕೈಯೊಳಗಿಂದ ಬಿಡಿಸಿದ್ದಕ್ಕಾಗಿ, ನಾನು ಸಂತುಷ್ಟಳಾಗಿದ್ದೇನೆ. ಈ ದುಷ್ಟ ವ್ಯಾಘ್ರವನ್ನು ಹೋಲುವ ಆ ಮೂವತ್ತೆರಡು ಹಲ್ಲಿನ ಟಗರು ತಾನಾಗಿ ನಿನ್ನ ಬಳಿಗೆ ನಡೆದು ಬರುತ್ತಲಿದೆ. ಅದನ್ನು ನನಗೆ ಬಲಿಯಾಗಿ ಅರ್ಪಿಸು. ವತ್ಸಾ, ಬೆದರಬೇಡ. ನಿನ್ನ ಮಸ್ತಕದ ಮೇಲೆ ನನ್ನ ಅಭಯ ಹಸ್ತವು ಇರುವದು. ನೀನು ರಮಿಸುತ್ತ ರಮಿಸುತ್ತ ಆ ಬಲಿಯನ್ನು ಹತ್ತರ ಬರ ಮಾಡಿಕೊಳ್ಳು. ಕೂಡಲೆ ಅದರ ಕೋಡುಗಳನ್ನು ಹಿಡಿದು ಗೊತ್ತಿಗೆ ಹಚ್ಚು. ಈ ಕಾರ್ಯದಲ್ಲಿ ನಿನಗೆ ಸಂಪೂರ್ಣ ಯಶಸ್ಸು ಪ್ರಾಪ್ತವಾಗುವದು. ನಾನು ನಿನ್ನ ಬೆನ್ನ ಮೇಲೆಯೇ ಇರುತ್ತೇನೆಂದು ತಿಳಿ. ಈ ಕಾರ್ಯವನ್ನು ನೀನು ಸಾಧಿಸಿ ಬಿಟ್ಟರೆ ನಿನ್ನ ಸುತ್ತು ಹತ್ತಿದ ಅರಿಷ್ಟವು ಶಾಶ್ವತವಾಗಿ ಹಿಂಗಿ ಹೋಗುವದು. ಬಲಿಕೊಡುವ ಮುಹೂರ್ತವನ್ನು ಮಾರ್ಗಶೀರ್ಷ ಶುದ್ಧ ಷಷ್ಠಿಯಾಗಿ ನಿಯಮಿಸು." ಎಂದು ನುಡಿದು, ಭವಾನಿಯು ಪುನಃ ಮಹಾರಾಜರ ಮಸ್ತಕದ ಮೇಲೆ ವರದ ಹಸ್ತವನ್ನಿಟ್ಟಳು. ಆಗ ಮಹಾರಾಜರಿಗೆ ತಣ್ಣಗೆ ಹತ್ತಿದಂತೆ ಆಗಿ, ಅವರಿಗೆ ಎಚ್ಚರವಾಯಿತು.

ಮಹಾರಾಜರು ಕಣ್ದೆರೆದು ನೋಡಲು, ಯಾರೋ ನಿಜವಾಗಿಯೇ ಅವರ ತಲೆಯ ಮೇಲೆ ಕೈಯಿಟ್ಟಿದ್ದರು. ಆಗ ಮಹಾರಾಜರು ಲಕ್ಷ್ಯಪೂರ್ವಕ ಅವಲೋಕಿಸಿ, ಕೈಯಿಟ್ಟವರು ತಮ್ಮ ಪೂಜ್ಯ ಜನನಿಯೆಂದು ತಿಳಿದು ಅವರನ್ನು ನೋಡಿ ನಕ್ಕರು. ತಮ್ಮ ಮಗನು ಈಗ ಒದಗಿದ್ದ ಗಂಡಾಂತರದೊಳಗಿಂದ ಹ್ಯಾಗೆ ಪಾರಾದಾನೆಂದು ಆ ಸಾಧ್ವಿಯು ಹಗಲಿರುಳು ಚಿಂತಾಮಗ್ನಳಾಗಿ, ಪ್ರತ್ಯಕ್ಷ ಚಿಂತೆಯ ಮೂರ್ತಿಯಂತೆ ತೋರುತ್ತಿದ್ದಳು. ಮಗನು ಕುಳಿತಲ್ಲಿಯೇ ನಿದ್ದೆ ಮಾಡುವದನ್ನು ನೋಡಿ, ಆತನು ಒಳಗೆ ಹೋಗಿ ಸ್ವಸ್ಥವಮಲಗಿಕೊಳ್ಳಲೆಂದು ಆತನನ್ನು ಎಬ್ಬಿಸುವದಕ್ಕಾಗಿ ಆ ಜೀಜಾಬಾಯಿ ಸಾಹೇಬರು ಅಲ್ಲಿಗೆ ಬಂದಿದ್ದರು. ಮಹಾರಾಜರ ಮಸ್ತ

ಕದಮೇಲೆ ಭವಾನೀ ಮಾತೆಯು ಕೈಯಿಡಲಿಕ್ಕೂ, ಜೀಜಾಬಾಯಿಯವರು ಕೈಯಿಡಲಿಕ್ಕೂ ಗಂಟುಬಿದ್ದಿತು! ತಾಯಿಯನ್ನು ನೋಡಿದ ಕೂಡಲೆ ಮಹಾರಾಜರಿಗೆ ಪರಮಾನಂದವಾಯಿತು. ಅವರು ತಟ್ಟನೆ ಎದ್ದು ತಾಯಿಯನ್ನು ಕುರಿತು—"ಅವ್ವಾ, ಭವಾನೀಮಾತೆಯ ಕೃಪೆಯು ನನ್ನ ಮೇಲೆ ಇರುವದು ನಿಶ್ಚಯವು. ನೀನು ನನ್ನ ಮಸ್ತಕದ ಮೇಲೆ ಕೈಯಿಟ್ಟಂತೆ, ಈಗ ಸ್ವಪ್ನದಲ್ಲಿ ಭವಾನೀಮಾತೆಯೂ ತನ್ನ ವರದ ಹಸ್ತವನ್ನು ನನ್ನ ತಲೆಯಮೇಲೆ ಇಟ್ಟಿದ್ದಳು. ಹಹ! ಏನು ಸುಪ್ರಸನ್ನ ಮುಖವದು! ವಾಣಿಯು ಎಷ್ಟು ಮಧುರವದು! ಅವ್ವಾ, ನೀನು ನನ್ನ ಸಂಗಡ ಆ ತಪೋವನದಲ್ಲಿ ಬಂದಿದ್ದರೆ ಬಹಳ ನೆಟ್ಟಗಾಗುತ್ತಿತ್ತು" ಎಂದು ನುಡಿದು, ತಮ್ಮ ಯಾವತ್ತು ಕನಸನ್ನು ಸವಿಸ್ತಾರವಾಗಿ ತಾಯಿಗೆ ಹೇಳಿದರು. ಅದನ್ನು ಕೇಳಿದ ಕೂಡಲೆ ಜೀಜಾಬಾಯಿಸಾಹೇಬರಿಗೆ ಬಹಳ ಆನಂದವಾಯಿತೆಂದು ಹೇಳಲವಶ್ಯವಿಲ್ಲ. ಅವರು ತಮ್ಮ ಮಗನನ್ನು ಕುರಿತು—"ಶಿವಬಾ, ನಿನ್ನ ಮೇಲೆ ಜಗದಂಬೆಯ ಕೃಪೆಯು ಪೂರ್ಣವಾಗಿ ಇರುವದು. ನೀನು ಬಡವರು ಬಗ್ಗರನ್ನು ಮೊಗಲರ ಉಪದ್ರವದಿಂದ ಮುಕ್ತಮಾಡುವವರೆಗೆ ನಿನಗೆ ಅಪಯಶಸ್ಸು ಪ್ರಾಪ್ತವಾಗದು. ಮೊಗಲರ ಅತ್ಯಾಚಾರದ ಮಿತಿಯು ಮೀರಿದ್ದರಿಂದ, ಅವರ ಶಾಸನಮಾಡುವದು ಭವಾನೀಮಾತೆಯ ಮನಸ್ಸಿಗೆ ನಿಶ್ಚಯವಾಗಿ ಬಂದಿರುತ್ತದೆ. ಆಕೆಯೂ ನಿನ್ನ ಕೈಯಿಂದಲೇ ಅವರ ಶಾಸನ ಮಾಡಿಸುವಳು; ಆದ್ದರಿಂದ ನೀನು ಕರ್ತವ್ಯತತ್ಪರನಾಗು. ಅಪಯಶಸ್ಸು ಬರುವದೆಂಬದನ್ನು ಮನಸ್ಸಿನಲ್ಲಿ ಕೂಡ ತರಬೇಡ."

ಹೀಗೆ ಆ ತಾಯಿಮಕ್ಕಳ ಸಂಭಾಷಣವು ನಡೆದಿರಲು, ಬೆಳಗಾಯಿತು. ಆದರೂ ಅವರ ಮಾತುಗಳು ಮುಗಿಯಲಿಲ್ಲ. ಖಾನನ ನಿಜವಾದ ಮನೋದಯವು ತಿಳಿಯದ್ದರಿಂದ ಮಹಾರಾಜರು ಸಂಶಯಗ್ರಸ್ತರಾಗಿದ್ದರು. ನಾನು ಹೇಳಿದ್ದಕ್ಕೆಲ್ಲ ಖಾನನು ಒಪ್ಪಿಕೊಳ್ಳುವದರಿಂದ, ಆತನು ಅಂತರಂಗದಲ್ಲಿ ದುರಾಲೋಚನೆ ಮಾಡಿರಬಹುದೆಂದು ಅವರು ತರ್ಕಿಸಿದರು; ಆದರೆ ಹೀಗೆಯೇಯೆಂದು ನಿರ್ಧರಿಸಲಿಕ್ಕೆ ಅವರಿಗೆ ಆಧಾರಗಳಿದ್ದಿಲ್ಲ. ಖಾನನನ್ನು ಕಾಣುವ ವಿಷಯದಲ್ಲಿ ಇನ್ನು ಅವರು ವಿಲಂಬಮಾಡುವ ಹಾಗಿದ್ದಿಲ್ಲ. ಖಾನನು ಭೆಟ್ಟಿಯ ವಿಷಯವಾಗಿ ಅತ್ಯಂತ ಆತುರನಾಗಿದ್ದನು.

ಅವನ ವಕೀಲನು ಮೇಲೆ ಮೇಲೆ ಬರತೊಡಗಿದ್ದನು. ಮಹಾರಾಜರ ಪರಿವಾರವಾದರೂ ಈ ಪ್ರಕರಣದ ನಿರ್ಣಯವು ಬೇಗನೆ ಆಗಬೇಕೆಂದು ಆತುರಪಡುತ್ತಿತ್ತು. ಸ್ವತಃ ಮಹಾರಾಜರ ಮನಸ್ಸಿನಲ್ಲಿಯೂ ವಿಲಂಬ ಮಾಡುವದಿದ್ದಿಲ್ಲ; ಆದರೆ ತಾವು ಖಾನನೊಡನೆ ವಿಶ್ವಾಸದಿಂದ ನಡೆಯ ಬೇಕೋ, ಅವಿಶ್ವಾಸದಿಂದ ನಡೆಯಬೇಕೋ ಎಂಬದನ್ನು ನಿರ್ಣಯಿಸಿ ಕೊಳ್ಳಲಿಕ್ಕೆ ಅವರಿಗೆ ಬರುವಹಾಗಿದ್ದಿಲ್ಲ. ಹೀಗಿರುವಾಗ, ಸರ್ಜೇರಾಯನು ಬಂದಿರುವನೆಂದು ಒಬ್ಬ ಸೇವಕನು ಹೇಳಲು, ಮಹಾರಾಜರು ಕೂಡಲೆ ಆತನನ್ನು ಕರಿಸಿಕೊಂಡರು. ಪದ್ಧತಿಯಂತೆ ಸರ್ಜೆರಾಯನು ಮಹಾ ರಾಜರನ್ನು ವಂದಿಸಿ ಕೈಕಟ್ಟಿಕೊಂಡು ನಿಂತು—"ಪ್ರಭುವೇ, ಈಗ ಕೆಲವು ದಿನಗಳ ಹಿಂದೆ ನಿಮ್ಮ ಮನೆಯಲ್ಲಿದ್ದ ಬೈರಾಗಿಣಿಯು, ಅಂದರೆ ಜಾಧವ ರಾಯನ ಹೆಂಡತಿಯಾದ ಹೈಮವತೀ ದೇವಿಯು, ಅತ್ಯಂತವಾದ ಸಾಹಸ ದಿಂದ ತಿಳಿದುಕೊಂಡಿದ್ದ ಖಾನನ ಹೊಟ್ಟೆಯೊಳಗಿನ ಮಾತನ್ನು ಹೇಳಲಿಕ್ಕೆ ನಾನು ಈಗ ತಮ್ಮ ಬಳಿಗೆ ಬಂದಿದ್ದೇನೆ. ಖಾನನು ತಮ್ಮನ್ನು ಮೋಸದಿಂದ ಕೊಲ್ಲಲು ನಿಶ್ಚಯಿಸಿರುವನು. ತಾವು ಖಾನನಲ್ಲಿ ವಿಶ್ವಾಸವಿಟ್ಟು ಸರಳ ತನದಿಂದ ಆತನ ಭೆಟ್ಟಿಗೆ ಹೋದರೆ, ಘಾತವಾದೀತೆಂದು ತಿಳಿದು ನಾನು ಈಗ ಸುದ್ದಿಯನ್ನು ಹೇಳಲಿಕ್ಕೆ ಅವಸರದಿಂದ ಬಂದೆನು. ಹೈಮವತೀ ದೇವಿಯು ಬಹು ತೀವ್ರವಾಗಿ ಹೋಗೆಂದು ಹೇಳಿರುವಳು. ಆಕೆಯು ಕಾರಾಗೃಹವಾಸವನ್ನು ಭೋಗಿಸುತ್ತಿರುವದರಿಂದ, ಮಹಾರಾಜರ ದರ್ಶ ನಕ್ಕೆ ಬರುವಹಾಗಿಲ್ಲ. ಆಕೆಯ ಪತಿಯಾದ ಜಾಧವರಾಯನು ಖಾನನ ಬಳಿಯಲ್ಲಿದ್ದು, ತನ್ನ ಹೆಂಡತಿಗೆ ಅಪಾಯವು ಒದಗದಂತೆ ಗುಪ್ತರೀತಿಯಿಂದ ನೋಡಿಕೊಳ್ಳುತ್ತಿರುವನು. ನಾವು ಹೈಮವತಿಯನ್ನು ಕಾರಾಗೃಹದಿಂದ ಬಿಡಿಸಿಕೊಂಡು ಬರಬಹುದಾಗಿತ್ತು; ಆದರೆ, ಅದರಿಂದ ಖಾನನಿಗೆ ಸಂಶ ಯವು ಉತ್ಪನ್ನವಾಗಬಹುದೆಂದು ತಿಳಿದು ಸುಮ್ಮನೆ ಬಿಟ್ಟಿರುತ್ತೇವೆ. ಈಗಲೇ ನಾನು ಖಾನನ ಛಾವಣಿಗೆ ಹೋಗುವೆನು. ಹೈಮವತೀ ದೇವಿಯ ಚಿಂತೆಯನ್ನು ಮಹಾರಾಜರು ಸರ್ವಥಾ ಮಾಡಬಾರದು. ತಮ್ಮ ಲ್ಲಿಗೆ ಬಂದ ಹೇಜೀಬನೇ ಜಾಧವರಾಯನು, ತಮ್ಮನ್ನು ಗವಿಯ ಗಂಡಾಂ ತರದಿಂದ ಪಾರಮಾಡಿದವಳೇ ಯೋಗಿನಿಯ ವೇಷಧಾರಿಯಾದ ಹೈಮ

ವತಿಯು, ಎಂದು ಹೇಳಿ, ಹೈಮವತಿಯು ಯೋಗಿನಿಯ ವೇಷದಿಂದ ಖಾನನಿಗೆ ಭವಿಷ್ಯವ ಹೇಳಿದ್ದನ್ನೂ, ತಾನು ಆಕೆಯ ಶಿಷ್ಯಳಾಗಿ ಹೋಗಿ ಈ ಗುಟ್ಟಿನ ಮಾತನ್ನು ತಿಳಕೊಂಡು ಬಂದದ್ದನ್ನೂ ಒಂದುಳಿಯದಂತೆ ಹೇಳಿದನು; ಮತ್ತು ತನ್ನ ಗುಟ್ಟಿನ ಮಾತನ್ನು ಹೊರಗೆಡವಿಯಾಳೆಂದು ತಿಳಿದು, ಹೈಮವತಿಯನ್ನು ಖಾನನು ಸೆರೆಯಲ್ಲಿಟ್ಟಿದ್ದೇ ತಾನು ತಂದ ಸುದ್ದಿಗೆ ಬಲವಾದ ಸಾಕ್ಷಿಯೆಂತಲೂ ಆ ಸ್ವಾಮಿನಿಷ್ಠನು ಮಹಾರಾಜರಿಗೆ ಸೂಚಿಸಿದನು.

ಸರ್ಜೇರಾಯನ ಈ ಮಾತನ್ನು ಕೇಳಿ ಮಹಾರಾಜರು ಆಶ್ಚರ್ಯಪಟ್ಟರು. ಹೈಮವತಿಯು ತಮ್ಮ ವಿಷಯವಾಗಿ ತಾಳಿದ ಭಕ್ತಿಯನ್ನು ಸ್ಮರಿಸಿ, ಅವರ ಕಣ್ಣುಗಳು ಬಾಷ್ಪ ಪೂರ್ಣವಾದವು. ಅವರು ತಮ್ಮ ಬಳಿಯಲ್ಲಿ ಕುಳಿತಿರುವ ತಮ್ಮ ತಾಯಿಯ ಕಡೆಗೆ ನೋಡಲು, ಆ ಸಾಧ್ವಿಯ ಕಂಠವು ಬಿಗಿದು, ಕಣ್ಣುಗಳೊಳಗಿಂದ ಬಳಬಳ ನೀರುಗಳು ಉದರಹತ್ತಿದ್ದವು. ಇಂಥ ಸ್ವಾಮಿನಿಷ್ಠ ಜನರ ಯೋಗದಿಂದ ತಾವು ಧನ್ಯರೆಂದು ಮಹಾರಾಜರು ತಿಳಿದರು! ಇಂಥ ಪುಣ್ಯಶಾಲಿಯಾದ ಮಗನನ್ನು ಪಡೆದದ್ದರಿಂದ ತಾವು ಧನ್ಯರಾದೆವೆಂದು ಜೀಜಾಬಾಯಿಯವರು ತಿಳಿದುಕೊಂಡರು. ಆ ಪವಿತ್ರ ಮೂರ್ತಿಯಾದ ಹೈಮವತಿಯ ದರ್ಶನವು ತಮಗೆ ಯಾವಾಗ ಆದೀತೆಂದು ಅವರಿಬ್ಬರು ಆತುರಪಡಹತ್ತಿದರು. ಹೀಗೆ ಆ ತಾಯಿ ಮಕ್ಕಳಿಬ್ಬರು ಸದ್ಭಾವನಾಪೂರಿತರಾಗಿ, ಸರ್ಜೇರಾಯನನ್ನು ಕೃತಜ್ಞತಾಪೂರ್ವಕ ದೃಷ್ಟಿಯಿಂದ ನೋಡುತ್ತ, ಒಂದು ಮಾತನ್ನಾದರೂ ಆಡಲಾರದೆ ಸುಮ್ಮನೆ ಕುಳಿತುಕೊಂಡರು. ಸ್ವಲ್ಪ ಹೊತ್ತಿನ ಮೇಲೆ ಮಹಾರಾಜರು ಸರ್ಜೇರಾಯನನ್ನು ಕುರಿತು—"ಸರ್ಜೇರಾವ, ನಿಮ್ಮಂಥವರ ಸಹಾಯವು ನನಗಿಲ್ಲದಿದ್ದರೆ ನನ್ನಿಂದ ಯಾವ ಕೆಲಸವಾಗುತ್ತಿತ್ತು ಹೇಳು. ನಿಮ್ಮಂಥ ಸ್ವಾಮಿನಿಷ್ಠರ ಸ್ವಾಮಿಯ ಸ್ಥಾನದಲ್ಲಿ ನಾನಿರುವದು ದೊಡ್ಡ ಪುಣ್ಯವು! ನಿಮ್ಮೆಲ್ಲರ ಜೀವದ ಮೇಲೆಯೇ ಶಿವಾಜಿಯ ಚಲ್ಲಾಟವು! ಆಗಲಿ, ಸರ್ಜೇರಾವ, ಹೆಚ್ಚಿಗೆ ಮಾತಾಡಲಿಕ್ಕೆ ಈಗ ಅವಕಾಶವಿಲ್ಲ. ನೀನು ಈಗಲೇ ಹೋಗಿ ಆ ಸಾಧ್ವಿಶಿರೋಮಣಿಯಾದ ಹೈಮವತಿಯ ಯೋಗಕ್ಷೇಮದಲ್ಲಿ ಜಾಗರೂಕನಾಗಿರು. ನಿಮ್ಮ ಸ್ವಾಮಿಗೆ ಪ್ರಾಣದಾನ

ಮಾಡಿದವಳು ಸಾಕ್ಷಾತ್ ಅಂಬಾ ಬಾಯಿಯೆಂತಲೇ ನಾನು ನೀವೂ ತಿಳಕೊಂಡು ಆಕೆಯ ಸೇವಾತತ್ಪರರಾಗಿರತಕ್ಕದ್ದು. ನಿಜವಾದ ಸೇವಕರೇ ಸೇವ್ಯರಿಗೆ ಪೂಜ್ಯರು! ಇಂಥ ಸೇವ್ಯ-ಸೇವಕರಲ್ಲಿ ಭೇದವನ್ನೆಣಿಸುವದು ಅಜ್ಞಾನವೇ ಸರಿ. ನಡೆ, ನಿಲ್ಲಬೇಡ. ಬೇಗನೆ ಊಟಮಾಡಿ ಹೈಮವತಿಯ ಸಂರಕ್ಷಣಕ್ಕಾಗಿ ಸಿದ್ಧನಾಗಿರು ನಡೆ. ಕೆಲವು ವಿಶ್ವಾಸದ ಜನರನ್ನು ಸಂಗಡ ಕರಕೊಂಡು ಹೋಗು. ನಿಮ್ಮ ಮಹಾರಾಜರನ್ನು ಖಾನನ ಬಾಧೆಯಿಂದ ಸಂರಕ್ಷಿಸುವಲ್ಲಿ ಎಚ್ಚರಪಡುವದಕ್ಕಿಂತ, ಹೈಮವತಿಯನ್ನು ರಕ್ಷಿಸುವ ವಿಷಯದಲ್ಲಿ ಹೆಚ್ಚು ಎಚ್ಚರಪಡಿರಿ," ಎಂದು ಹೇಳಿದರು. ಜೀಜಾಬಾಯಿಯವರು ಸರ್ಜೇರಾಯನನ್ನು ಕರಕೊಂಡು ಒಳಗೆ ಹೋಗಲು, ಮಹಾರಾಜರು ಪ್ರಾತರ್ವಿಧಿಗಳನ್ನು ತೀರಿಸುವದಕ್ಕಾಗಿ ಎದ್ದು ಹೋದರು.

ಮಹಾರಾಜರ ಹಾಗು ಖಾನನ ಭೆಟ್ಟಿಯ ಯೋಗವು ಒದಗಿದ್ದರಿಂದ ಅದಕ್ಕೆ ಅನುಕೂಲವಾದ ಸಂಗತಿಗಳು ಬಡಬಡ ಒದಗಹತ್ತಿದವು. ಮಹಾರಾಜರು ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಏಕಾಂತ ಗೃಹದಲ್ಲಿ ಕುಳಿತು ತಮ್ಮೊಳಗೆ ವಿಚಾರಮಾಡುತ್ತಿರಲು, ಖಾನನ ಕಡೆಯಿಂದ ವಕೀಲನು ಬಂದನೆಂಬ ಸುದ್ದಿಯು ಬಂದಿತು. ಅಫಜುಲಖಾನನು ಭೆಟ್ಟಿಯಸಲುವಾಗಿ ಅತ್ಯಂತ ಆತುರಪಟ್ಟವನಾಗಿ ತನ್ನ ಕಟ್ಟಕಡೆಯ ನಿರೂಪವನ್ನು ತಿಳಿಸುವದಕ್ಕಾಗಿ ಗೋಪೀನಾಥ ಪಂತನನ್ನು ಕಳಿಸಿದ ಸಂಗತಿಯನ್ನು ನಾವು ಹಿಂದೆ ತಿಳಿಸಿದ್ದೇವೆ. ಅದರಂತೆ ಗೋಪೀನಾಥಪಂತನು ಈಗ ಮಹಾರಾಜರನ್ನು ಕಾಣಲಿಕ್ಕೆ ಬಂದಿದ್ದನು. ಆತನು ಬಂದ ವರ್ತಮಾನವು ಮಹಾರಾಜರಿಗೆ ಗೊತ್ತಾಯಿತು. ಮಹಾರಾಜರ ವಕೀಲನು ಗೋಪೀನಾಥ ಪಂತನನ್ನು ಕಾಣಲಿಕ್ಕೆ ಹೋದನು. ಅವರಿಬ್ಬರು ಸರಳ ಮನಸ್ಸಿನಿಂದ ಬಹಳಹೊತ್ತು ಮಾತಾಡಿದರು. ಬಳಿಕ ಗೋಪೀನಾಥಪಂತನು ಮಹಾರಾಜರನ್ನು ಕಂಡನು. ಮಹಾರಾಜರು ಖಾನನ ನಿರೂಪವನ್ನು ಕೇಳಿಕೊಂಡರು. ಅವರು ಗೋಪೀನಾಥಪಂತನನ್ನು ಕುರಿತು—"ನೀವು ಬ್ರಾಹ್ಮಣರು ಸತ್ಯವಚನದವರು. ಆ ಹಿಂದೂ ಧರ್ಮದಲ್ಲಿ ನಿಮ್ಮ ಪೂರ್ಣವಿಶ್ವಾಸವಿದ್ದು, ಅದರ ಉದ್ಧಾರಕ್ಕಾಗಿ ಯೋಗ್ಯ ಸಹಾಯ ಮಾಡಲು ಈ ಮೊದಲೆ ನನಗೆ ನೀವು ವಚನ ಕೊಟ್ಟೀರುತ್ತೀರಿ. ಇನ್ನು ಆ ಮಾತನ್ನು ಕುರಿತು

ಪುನಃ ಪ್ರಸ್ತಾಪಿಸುವ ಕಾರಣವಿಲ್ಲ. ಇನ್ನು ಮುಂದಿನ ವ್ಯವಸ್ಥೆಯನ್ನು ಹ್ಯಾಗೆ ಮಾಡಬೇಕೆಂಬದನ್ನು ನಾವಿಬ್ಬರೂ ಕೂಡಿ ಆಲೋಚಿಸಿ ನಿಶ್ಚಯಿಸೋಣ. ಸದ್ಯಕ್ಕೆ ನಾನು ಆಯಿಸಾಹೇಬರವರ ವಿಚಾರವನ್ನು ಕೇಳಿಕೊಂಡು, ಅಂಬಾಬಾಯಿಯ ಅಪ್ಪಣೆಯನ್ನು ಪಡೆದು ಬರುತ್ತೇನೆ. ಅಂಬಾಬಾಯಿಯ ಅಪ್ಪಣೆಯಂತೆ ಎಲ್ಲ ಕೆಲಸಗಳು ನಡೆಯತಕ್ಕವು. ನೀವು ಸ್ವಲ್ಪ ವಿಶ್ರಮಿಸಬೇಕು. ಯೋಗ್ಯ ಕಾಲದಲ್ಲಿ ತಮ್ಮನ್ನು ಕರೆಸುವೆನು. ನಮ್ಮ ನಿಮ್ಮ ವಿಚಾರಗಳು ಭಿನ್ನವಾಗಿಲ್ಲ, ಉದ್ದೇಶವೂ ಭಿನ್ನವಾಗಿರುವದಿಲ್ಲ."

ಈ ಮೇರೆಗೆ ನುಡಿದು ಮಹಾರಾಜರು ಜೀಜಾಬಾಯಿಸಾಹೇಬರ ಅಂತಃಪುರಕ್ಕೆ ಹೋದರು. ಅವರು ತಾಯಿಯ ವಿಚಾರವನ್ನು ಕೇಳಿಕೊಳ್ಳದೆ ಯಾವ ಕೆಲಸವನ್ನೂ ಮಾಡುತ್ತಿದ್ದಿಲ್ಲ. ಇದು ಅವರ ನಿತ್ಯ ನಿಯಮವಾಗಿತ್ತು. ಅವರು ತಾಯಿಯ ಮುಂದೆ ಖಾನನ ಕಟ್ಟಕಡೆಯ ವಿಚಾರವನ್ನು ತಿಳಿಸಿದರು. ಅದನ್ನು ಕೇಳಿ ಜೀಜಾಬಾಯಿಸಾಹೇಬರಿಗೆ ಆಶ್ಚರ್ಯವಾಯಿತು. ಅವರು ಮಹಾರಾಜರನ್ನು ಕುರಿತು—"ಶಿವಬಾ, ಖಾನನು ತನ್ನ ಸಂಗಡ ನೀನು ವಿಜಾಪುರಕ್ಕೆ ಬರಬೇಕೆಂಬ ಮಾತನ್ನು ಹರಿದಾಸರ ಪಲ್ಲವಿಯಂತೆ ಮೇಲೆ ಮೇಲೆ ಉಚ್ಚರಿಸುವನಲ್ಲ! ವಿಜಾಪುರಕ್ಕೆ ಬಂದು ಬಾದಶಹನಿಗೆ ಮುಜುರೆ ಮಾಡಿ, ಆತನಿಂದ ಸುಭೇದಾರಿಕೆಯ ವಸ್ತ್ರಗಳನ್ನು ಪಡಕೊಂಡು ಬರಬೇಕೆನ್ನುವ ಆತನ ಮಾತಿನಲ್ಲಿ ಸಂಪೂರ್ಣವಾಗಿ ಮೋಸವು ತುಂಬಿರುವಂತೆ ನನಗೆ ಕಾಣುತ್ತದೆ. ವಿಜಾಪುರಕ್ಕೆ ಹೋಗುವದು ನಿನ್ನ ಮನಸ್ಸಿನಲ್ಲಿ ಇಲ್ಲೆಂಬದನ್ನೂ, ಹೋದರೆ ಹಿತವಾಗದೆಂಬದನ್ನೂ ಗೋಪೀನಾಥಪಂತರು ಅರಿತಿದ್ದು, ಅವರು ಮತ್ತೆ ಈ ಮಾತನ್ನು ತಿಳಿಸಲಿಕ್ಕೆ ನಿನ್ನ ಬಳಿಗೆ ಯಾಕೆ ಬಂದರು? ಶಿವಬಾ, ಆ ಬ್ರಾಹ್ಮಣನಾದರೂ ಸರಳ ರೀತಿಯಿಂದ ನಡೆಯುವನೋ ಇಲ್ಲವೋ ಎಂಬದನ್ನು ನೀನು ಚನ್ನಾಗಿ ವಿಚಾರಮಾಡು. ಯಾರಿಗೆ ಗೊತ್ತು, ಆತನೂ ಮೋಸಮಾಡಿ ನಿನ್ನನ್ನು ಖಾನನ ದವಡೆಯಲ್ಲಿ ಕೊಡಲಿಕ್ಕೆ ನಿಂತಿರಬಹುದು. ಹಾಗೆಯಿಲ್ಲದಿದ್ದರೆ, ಮೇಲೆ ಮೇಲೆ ಆ ಮಾತನ್ನು ಕೇಳಲಿಕ್ಕೆ ಅವರು ಯಾಕೆ ಬರುತ್ತಿದ್ದರು? ಅಂಬಾಬಾಯಿಯ ಮನಸ್ಸಿನಲ್ಲಿ ಇದ್ದಂತೆ ಆಗುವದು; ನೀನು ಮಾತ್ರ ಸರ್ವಥಾ ವಿಜಾಪುರಕ್ಕೆ ಹೋಗಬೇಡ. ಎತ್ತ ಕಡೆಯಿಂದಾ

ದರೂ ನಿನ್ನನ್ನು ಬಲೆಯಲ್ಲಿ ಹಿಡಿಯಲಿಕ್ಕೆ ಖಾನನು ಯತ್ನಿಸುತ್ತಿರುವನು. ನೀನು ಆತನ ಸಂಗಡ ವಿಜಾಪುರಕ್ಕೆ ಹೋಪೆಯೆಂದರೆ, ಪೂರಾ ಆತನ ಬಲೆಯಲ್ಲಿ ಸಿಕ್ಕಹಾಗೆ ಆಗುವದು. ಆಮೇಲೆ ಅವರು ಏನು ಮಾಡುವರು, ಏನು ಬಿಡುವರು, ಎಂಬದನ್ನು ಹೇಳಲಾಗುವದಿಲ್ಲ. ನೀನು ಸರ್ವಥಾ ವಿಜಾಪುರಕ್ಕೆ ಹೋಗಲು ಒಡಂಬಡಬೇಡ. ಶಿವಬಾ, ನೀನು ತೀರ ತಿಳಿಗೇಡಿಯಿರುವೆಯೆಂದು ಅವರು ತಿಳಿದಿರುವರೋ ಏನು?"

ತಾಯಿಯ ಈ ಮಾತುಗಳನ್ನು ಕೇಳಿ ಮಹಾರಾಜರು—"ಅವ್ವಾ, ನಿಮ್ಮ ಅಪ್ಪಣೆಗೆ ನಾನು ಸರ್ವಥಾ ಹೊರಗಾಗುವವನಲ್ಲ. ಕಾಲತ್ರಯದಲ್ಲಿಯೂ ನಾನು ವಿಜಾಪುರಕ್ಕೆ ಹೋಗುವದಿಲ್ಲ. ನಿಮ್ಮ ವಿಚಾರವನ್ನು ಕೇಳಿಕೊಂಡು ಕೆಲಸ ಮಾಡುವದು ನನ್ನ ನಿತ್ಯಕ್ರಮವಾದ್ದರಿಂದ, ಈಗ ತಮ್ಮ ಅಪ್ಪಣೆಯನ್ನು ಕೇಳಿಕೊಳ್ಳಲಿಕ್ಕೆ ಬಂದೆನಿಷ್ಟೆ. "ರೋಗಿಯು ಬಯಸಿದ್ದೂ ಹಾಲೋಗರವು, ವೈದ್ಯ ಹೇಳಿದ್ದೂ ಹಾಲೋಗರವು" ಅನ್ನುವಹಾಗೆ, ನನ್ನ ಮನಸ್ಸಿನಲ್ಲಿದ್ದಂತೆಯೇ ನೀವು ಹೇಳಿದ್ದರಿಂದ ಇನ್ನು ಎರಡನೆಯ ವಿಚಾರಮಾಡುವ ಅವಶ್ಯವೇ ಇಲ್ಲ. ಇನ್ನು ಅಂಬಾಬಾಯಿಯ ಮನಸ್ಸಿನೊಳಗಿದ್ದದ್ದನ್ನಿಷ್ಟು ಕೇಳಿಕೊಂಡು, ಕಡೆಯ ಮಾತನ್ನೇ ಖಾನನಿಗೆ ಹೇಳಿಕಳಿಸಿಬಿಡೋಣ. ಗೋಪೀನಾಥಪಂತನ ವಿಷಯವಾಗಿ ಮಾತ್ರ ವಿಕಲ್ಪವೆಣಿಸುವ ಹಾಗಿಲ್ಲ. ಆತನು ಸಾತ್ವಿಕ ಬ್ರಾಹ್ಮಣನು." ಎಂದು ನುಡಿದು, ಅವರು ಅಂಬಾಬಾಯಿಯ ಸನ್ನಿಧಿಗೆ ಹೋದರು. ಅಂಬಾಬಾಯಿಯ ಸಾಕ್ಷಾತ್ಕಾರವನ್ನು ಪಡೆಯುವ ಮೊದಲು ಅವರು ಆಕೆಯ ಮುಂದೆ ಕೈಜೋಡಿಸಿಕೊಂಡು ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳುತ್ತಿದ್ದರು. ಹೀಗೆ ಅವರು ಕುಳಿತರೆಂದರೆ, ಅವರ ಚೀಟನೀಸನಾದ ಬಾಳಾಜಿ ಆವಜಿಯವರಿಗೆ ಸುದ್ದಿಯು ಹೋಗಿ, ಅವರು ಕೂಡಲೆ ದೌತಿ, ಲೇಖನಿ, ಕಾಗದ ಇವುಗಳನ್ನು ತಕ್ಕೊಂಡು ಬಂದು ಕುಳಿತುಕೊಳ್ಳುತ್ತಿದ್ದರು. ಅಂಬಾಬಾಯಿಯ ಸಾಕ್ಷಾತ್ಕಾರವು ಮಹಾರಾಜರಿಗೆ ಆಗುವಾಗ ಬಹುತರ ಬೇರೆ ಯಾರನ್ನೂ ಅಲ್ಲಿ ಇರಗೊಡುತ್ತಿದ್ದಿಲ್ಲ. ಜೀಜಾಬಾಯಿಸಾಹೇಬರೊಬ್ಬರು, ಬಾಳಾಜಿ ಆವಜಿಯವರು ಎರಡನೆಯವರು, ಮಹಾರಾಜರು ಮೂರನೆಯವರು, ಹೀಗೆ ಮೂವರೇ ಆಗಿನ ಕಾಲದಲ್ಲಿ ಇರತಕ್ಕವರು. ಮಹಾರಾಜರು ಮೇಲೆ ಹೇಳಿ

ದಂತೆ ಸ್ವಲ್ಪ ಹೋತ್ತು ಸುಮ್ಮನೆ ಕುಳಿತುಕೊಂಡ ಬಳಿಕ, ಆಮೇಲೆ ತಮ್ಮ ಷ್ಟಕ್ಕೆ ತಾವು ಮುಸುಗುಟ್ಟುತ್ತಿದ್ದರು. ಆಮೇಲೆ ದೇವಿಗೆ ಧೂಪದೀಪಗಳನ್ನು ಮಾಡುವರು; ಇಷ್ಟಾದ ಬಳಿಕ ಮಹಾರಾಜರ ಮೈಯಲ್ಲಿ ದೇವಿಯ ಸಂಚಾರವಾಗುವದು. ಹೀಗೆ ಸಂಚಾರವಾದ ಮೇಲೆ ಮಹಾರಾಜರು ಸ್ವಲ್ಪ ಹೊತ್ತು ಸ್ವಸ್ಥವಾಗಿ ಕುಳಿತ ಬಳಿಕ, ದೇವಿಯು ಅವರ ಮುಖದಿಂದ ಆಡಿಸುವ ಮಾತುಗಳನ್ನು ಆಡಿಸುತ್ತಿದ್ದಳು. ಇದೇ ಕ್ರಮವು ಈಗೂ ಆಯಿತು. ಮಹಾರಾಜರು ಸುಮ್ಮನೆ ಕುಳಿತಿರುವಷ್ಟರಲ್ಲಿ ಅವರು ತಮ್ಮ ಷ್ಟಕ್ಕೆ ತಾವು ಮುಸುಗುಟ್ಟುತ್ತ ಮೈ ಒಡ್ಡ ಮುರಿಯಹತ್ತಿದರು. ಕೂಡಲೆ ದೇವಿಗೆ ಧೂಪ ದೀಪಗಳಾದವು. ಮಹಾರಾಜರ ಮೈಯಲ್ಲಿ ದೇವಿಯ ಸಂಚಾರವಾಯಿತು. ಆಗ ಜೀಜಾಬಾಯಿಸಾಹೇಬರು ಕೈಜೋಡಿಸಿಕೊಂಡು —"ಈಗ ದೊಡ್ಡ ಸಂಕಟವು ಬಂದೊದಗಿರುವದು. ಅದು ಹ್ಯಾಗೆ ದೂರ ವಾಗುವದೆಂಬ ಬಗ್ಗೆ ಅಪ್ಪಣೆಯಾಗಬೇಕು. ಅಪ್ಪಣೆಯಂತೆ ಎಲ್ಲ ವ್ಯವಸ್ಥೆ ಯನ್ನು ಮಾಡುವೆವು."

ಹೀಗೆ ಪ್ರಶ್ನ ಮಾಡಿದ ಕೂಡಲೆ ಮಹಾರಾಜರ ಕಣ್ಣುಗಳು ಕೆಂಪಗೆ ಕೆಂಡದಂತಾದವು. ಅವರ ಮೈಮೇಲಿನ ಕೂದಲುಗಳು ನೆಟ್ಟಗಾದವು. ಬಹಳ ಹೊತ್ತು ಸುಮ್ಮನೆ ಕುಳಿತಬಳಿಕ ಬಾಯಿಸಾಹೇಬರ ಪ್ರಶ್ನೆಯ ಉತ್ತರವು ಹೊರಬಿದ್ದಿತು. ಅದು ಏನಂದರೆ—"ಈ ಸಂಕಟವನ್ನು ನೀವು ಯಾಕೆಲೆಕ್ಕಿಸುವಿರಿ? ಸದ್ಯಕ್ಕೆ ಆತನು ಹೇಳಿದ್ದಕ್ಕೆಲ್ಲ ನೀವು ಒಪ್ಪಿಕೊಳ್ಳ ಬೇಕು. ಹು ಹು ಅನ್ನುತ್ತ ಹೋಗಬೇಕು. ಆತನ ಹೊಟ್ಟೆಯಲ್ಲಿ ವಿಷವಿದೆ. ವಿಷಕ್ಕೆ ವಿಷವನ್ನೇ ಇದಿರುಮಾಡಬೇಕು. ಹ್ಯಾಗಾದರೂ ಮಾಡಿ ಆತನನ್ನು ಭೆಟ್ಟಿಗೆ ಬಳಮಾಡಿಕೊಳ್ಳಬೇಕು. ಹೇಳಿದ ಹಾಗೆ ಕೇಳಿದರೆ ಆತನು ಭೆಟ್ಟಿಗೆ ಬರುವನು; ಇಲ್ಲದಿದ್ದರೆ ಬರುವದಿಲ್ಲ. ಆದ್ದರಿಂದ ಆತನು ಹೇಳಿದ್ದಕ್ಕೆಲ್ಲ ನೀವು ಹು ಅಂದು ಆತನು ಬರುವಂತೆಮಾಡಬೇಕು. ಆತನು ಬಂದಕೂಡಲೆ ಆತನ ಕಪಟವು ಸಹಜವಾಗಿ ಹೊರಬೀಳುವದು. ಕಪಟವು ಹೊರಬಿದ್ದಕೂಡಲೆ ಶಾಸನಮಾಡಲಿಕ್ಕೆ ಯಾರು ಅಸಮರ್ಥರಿರುವರು? ಆತನು ಕಪಟವನ್ನು ಆಚರಿಸುವನೆಂದು ತಿಳಿದೇ, ಏನು ಮಾಡುವದನ್ನು ನೀವು ಮಾಡಬೇಕು. ಚಿಂತೆಬೇಡ. ನನ್ನ ಸಹಾಯವಿರುವದು. ಕಾರ್ಯಸಿದ್ಧಿಯಾಗುವದು."

ಈ ಮೇರೆಗೆ ನುಡಿದು ಮಹಾರಾಜರು ನಿಶ್ಚಿಂತರಾಗಿ ಬಿದ್ದರು. ಕೆಲವು ಹೊತ್ತಿನ ಮೇಲೆ ಅವರು ಎಚ್ಚತ್ತು ಬಾಳಾಜಿ ಆವಜಿಯನ್ನು ಕುರಿತು "ಶ್ರೀಅಂಬಾಭವಾನಿಯ ಆಜ್ಞೆಯು ಏನಾಯಿತು, ನೀವು ಬರೆದು ಇಟ್ಟಿರುವಿರಲ್ಲವೆ?" ಎಂದು ಕೇಳಲು, ಆತನು ಬರೆದದ್ದನ್ನೆಲ್ಲ ಓದಿ ತೋರಿಸಿದನು. ಅದನ್ನು ಕೇಳಿ ಮಹಾರಾಜರಿಗೆ ಬಹಳ ಸಂತೋಷವಾಯಿತು. ಜೀಜಾಬಾಯಿಸಾಹೇಬರು ಅಂಬಾಬಾಯಿಯ ಅಪ್ಪಣೆಯ ಮಹತ್ವವನ್ನು ಮಗನಿಗೆ ತಿಳಿಸಿ, ಆತನನ್ನು ಪ್ರೋತ್ಸಾಹಗೊಳಿಸಿದರು. ಅಂಬಾಬಾಯಿಯ ಆಜ್ಞೆಗೆ ವಿರುದ್ಧವಾಗಿ ಯಾರು ನಡೆಯುವರು? ದೇವಿಯ ಆಜ್ಞೆಯಂತೆ ಖಾನನಿಗೆ ಹೇಳಿಕಳಿಸುವದನ್ನು ಅವರು ನಿಶ್ಚಯಿಸಿ, ಗೋಪೀನಾಥಪಂತನನ್ನು ಕರೆಸಿದರು. ಆಗ ಮಹಾರಾಜರು ಜೀಜಾಬಾಯಿಯವರ ಸಮಕ್ಷ ಆ ವಕೀಲನನ್ನು ಕುರಿತು--"ನಮ್ಮ ಕಟ್ಟಕಡೆಯ ನಿಶ್ಚಿತವಾದ ವಿಚಾರವನ್ನು ನಿಮ್ಮ ಯಜಮಾನನಿಗೆ ತಿಳಿಸಬೇಕು. ವಿಶ್ವಾಸದಿಂದ ವಿಶ್ವಾಸವು ಉತ್ಪನ್ನವಾಗುತ್ತದೆ. ವಿಜಾಪುರಕ್ಕೆ ನಿಮ್ಮ ಸಂಗಡ ಬರುತ್ತೇವೆಂದು ಈಗ ನಾವು ಹೇಳುವದರಲ್ಲಿಯೂ ಅರ್ಥವಿಲ್ಲ, ಬರುವದಿಲ್ಲೆಂದು ಹೇಳುವದರಲ್ಲಿಯೂ ಅರ್ಥವಿಲ್ಲ. ನಮ್ಮ ನಿಮ್ಮ ಮನಸ್ಸುಗಳು ಸರಳವಾದನಂತರ, ಇಲ್ಲಿ ಬಂದಾಗಲೇ ಯಾವದೊಂದು ಮಾತಿನ ನಿಶ್ಚಯವನ್ನು ಮಾಡೋಣ. ನಾವು ಭೆಟ್ಟಿಯವಿಷಯವಾಗಿ ಅತ್ಯಂತ ಉತ್ಸುಕರಾಗಿರುವೆವು. ಈ ಮಾತಿಗೆ ನಾವು ಹೊರತಾಗಿರುವದಿಲ್ಲ; ನಿಮ್ಮ ಮಾತಿಗೂ ಹೊರತಾಗಿಯೂ ನಾವು ಇರುವದಿಲ್ಲ. ಆದರೆ ತಾವು ಭೆಟ್ಟಿಗೆಂದು ಬರುವಾಗ ನಮಗೆ ಅಂಜಿಕೆ ಬರುವಷ್ಟು ಲವಾಜಮವನ್ನು ತಂದರೆ, ನಮ್ಮ ಸಂರಕ್ಷಣವಾಗಲಾರದೆಂಬ ಮಾತನ್ನು ನಾವು ಮೊದಲಿಗೇ ತಿಳಿಸಿದ್ದೇವೆ, ಎಂದು ಖಾನನಿಗೆ ನೀವು ಹೇಳಿರಿ. ಆತನು ಏನಾದರೂ ಮೋಸಮಾಡಿದರೆ, ನಮ್ಮ ಹಾದಿಯನ್ನು ನಾವು ಕಂಡುಕೊಳ್ಳುವೆವು. ಏನಾದರೂ ಸಂಶಯ ಬಂದರೆ ನೀವು ನಮಗೆ ತಿಳಿಸಬೇಕು, ನಮಗೆ ಸಂಶಯ ಬಂದರೆ ನಾವು ನಿಮಗೆ ತಿಳಿಸುವೆವು, ಎಂದು ಹೇಳಿದರು. ಗೋಪೀನಾಥಪಂತನು ಮಹಾರಾಜರ ಮಾತಿನಿಂದ ಎಲ್ಲ ಸಂಗತಿಯನ್ನು ಮನಸ್ಸಿನಲ್ಲಿ ತಂದು, ಹೆಚ್ಚಿಗೆಯೇನೂ ಮಾತಾಡದೆ, ಮಹಾರಾಜರ ಒಪ್ಪಿಗೆಯಿಂದ ಹೊರಟುಹೋದನು. ಸೇರಿಗೆ ಸವ್ವಾಸೇರಾಗಿ ಖಾನನೊಡನೆ

ನಡಕೊಳ್ಳಲಿಕ್ಕೆ ಮಹಾರಾಜರು ಸಿದ್ಧರಿರುವರೆಂದು ಆತನು ತಿಳಿದು ಕೊಂಡನು.

೧೬ನೆಯ ಪ್ರಕರಣ

ಮಾರ್ಗಶೀರ್ಷ ಶುದ್ಧ ಷಷ್ಠಿಯು.

ಗೋಪೀನಾಥಪಂತನನ್ನು ಕಳಿಸಿದ ಬಳಿಕ ಮಹಾರಾಜರು ತಮ್ಮ ಅತ್ಯಂತ ವಿಶ್ವಾಸದ ಜನರೊಡನೆ ಏಕಾಂತಸ್ಥಾನದಲ್ಲಿ ವಿಚಾರಮಾಡುತ್ತ ಕುಳಿತಿದ್ದರು. ಈ ವಿಶ್ವಾಸದ ಜನರು ಬಹು ಸ್ವಲ್ಪ ಇದ್ದರು. ಅವರಲ್ಲಿ ಮಹಾರಾಜರ ತಾಯಂದಿರಾದ ಜೀಜಾಬಾಯಿಯವರು ಒಬ್ಬರು; ಇವರಂತು ಮಹಾರಾಜರ ಸರ್ವಥೈವ ಗುರುಗಳೇ ಆಗಿದ್ದರು. ಇವರನ್ನು ಕೇಳದೆ ಮಹಾರಾಜರು ಯಾವಕಾರ್ಯವನ್ನೂ ಮಾಡುತ್ತಿದ್ದಿಲ್ಲ. ಮಹಾರಾಜರ ಗುಪ್ತ ಮುಸಲತ್ತಿನಲ್ಲಿ ಬರತಕ್ಕ ಎರಡನೆಯ ಮನುಷ್ಯನೆಂದರೆ, ಅವರ ಬಾಲ ಮಿತ್ರನಾದ ತಾನಾಜಿ ಮಾಲಸೂರೆಯು. ಈತನು ಮಹಾರಾಜರ ಬಲಗೈ ಯಾಗಿದ್ದನು. ಬಾಳಾಜಿ ಆವಜಿಯಂತು ಮಹಾರಾಜರ ಚೀಟನೀಸನೇ ಆದದ್ದರಿಂದ ಮಹಾರಾಜರ ಮುಸಲತ್ತಿನಲ್ಲಿ ಆತನು ಇರತಕ್ಕವನೇ ಆಗಿದ್ದನು. ಈತನು ಅತ್ಯಂತ ವಿಶ್ವಾಸದ ಬ್ರಾಹ್ಮಣನು. ಮಹಾರಾಜರ ಪ್ರತಿ ಒಂದು ಗುಪ್ತಪತ್ರವನ್ನು ಈತನೇ ಬರೆಯುತ್ತಿದ್ದನು. ಈ ಮೂವರ ಹೊರತು ನಾಲ್ಕ ನೆಯ ವಿಶ್ವಾಸದ ಮನುಷ್ಯನೆಂದರೆ ಮೋರೋ ತ್ರಿಮಲನು. ಈತನು ಅತ್ಯಂತ ಸಾಹಸಿಯು. ಯಾವ ಸಾಹಸದ ಕಾರ್ಯವನ್ನು ಮಾಡಬೇಕಾದರೂ ಮಹಾರಾಜರು ಈತನ ಕಿವಿಯ ಮೇಲೆ ಹಾಕದೆಯಿರುತ್ತಿದ್ದಿಲ್ಲ. ಈ ನಾಲ್ಕು ಜನರೊಡನೆಯೇ ಮಹಾರಾಜರು ಈಗ ತಮ್ಮ ಗುಪ್ತವಾದ ಏಕಾಂತ ಸ್ಥಳ ದಲ್ಲಿ ಆಲೋಚಿಸುತ್ತಲಿದ್ದರು. ಈ ಆಲೋಚನೆಯಲ್ಲಿ ಖಾನನ ಬಳಿಗೆ ಹೋಗಿ ಬರುವ ವಕೀಲನಾದ ಕೃಷ್ಣಾಜಿಭಾಸ್ಕರನೊಬ್ಬನು ಇದ್ದನು. ಬಹಳ ಹೊತ್ತಿನವರೆಗೆ ಆ ಮಾತು ಈ ಮಾತು ನಡೆದ ಬಳಿಕ ಕೃಷ್ಣಾಜಿ ಭಾಸ್ಕರನು ಮಹಾರಾಜರನ್ನು ಕುರಿತು—

ಕೃಷ್ಣಾಜಿಭಾಸ್ಕರ—ಏನಾದರೂ, ಇನ್ನು ಖಾನನನ್ನು ಕಾಣಲಿಕ್ಕೆ ತಡಮಾಡುವುದು ಸರಿಯಲ್ಲ. ಖಾನನು ತಮ್ಮನ್ನು ಕಾಣುವ ವಿಷಯದಲ್ಲಿ ಅತ್ಯಂತ ಆತುರನಾಗಿದ್ದಾನೆ. ತಮ್ಮನ್ನು ಯಾವಾಗ ವಿಜಾಪುರಕ್ಕೆ ಹಿಡಿದು ಕೊಂಡು ಹೋದೇನೆನ್ನುವ ಹಾಗೆ ಆತನಿಗೆ ಆಗಿದೆ. ತಮ್ಮ ಹೆಸರನ್ನು ದಿನಕ್ಕೆ ಎಷ್ಟುಸಾರೆ ತರ್ಕೊಳ್ಳುತ್ತಾನೆಂಬದನ್ನು ತಿಳಿದುಕೊಳ್ಳಬೇಕೆಂದು, ನಾನು ಒಬ್ಬ ಗುಪ್ತಚಾರನನ್ನು ಇಟ್ಟಿದ್ದೆನು. ಎಂಟು ಪ್ರಹರಗಳಲ್ಲಿ ಆತನು ತಮ್ಮ ಹೆಸರನ್ನು ಮುನ್ನೂರಾಹದಿನೇಳುಸಾರೆ ಉಚ್ಚರಿಸಿದನಂತೆ! ಅವನಿಗೆ ಎರಡನೆಯ ಕೆಲಸವೇ ಇಲ್ಲ. ನಿಮ್ಮ ಉಸಾಬರಿಯೇ ಉಸಾಬರಿಯು. ಇನ್ನು ಎಂಟು ಹತ್ತು ದಿವಸ ನೋಡಿ, ಅಷ್ಟರಲ್ಲಿ ನೀವು ಭೆಟ್ಟಿಯ ನಿಶ್ಚಿತವಾದ ದಿವಸವನ್ನು ತಿಳಿಸದಿದ್ದರೆ, ಆತನು ಪ್ರತಾಪಗಡವನ್ನು ಮುತ್ತಿ ಅದನ್ನು ಸ್ವಾಧೀನಪಡಿಸಿಕೊಂಡು, ಎಲ್ಲರನ್ನು ಸೆರೆಹಿಡಿದು ಒಯ್ಯುವ ನಂತೆ!

ತಾನಾಜಿ—ಪ್ರತಾಪಗಡವನ್ನು ಮುತ್ತೆಂದು ಹೇಳಬೇಕು ಆ ಮಗ ನಿಗೆ. ಅವನ ಹಿಂದಿನ ನಾಲ್ವತ್ತೆರಡು ತಲೆಯವರು ಮೇಲಿನಿಂದ ಇಳಿದು ಬಂದು ದುರ್ಗವನ್ನು ಮುತ್ತಿ ಹೋರಾಡಿದರೂ ಅದು ಕೈಸೇರುವಹಾಗಿಲ್ಲ. ಮಹಾರಾಜ, ಈ ಮುಸಲ್ಮಾನರು ಯಾವಾಗಲೂ ಇಷ್ಟು ಬಾಯಿಬಡಾಯಿ ಕೊಚ್ಚುತ್ತಾರಲ್ಲ, ಅವರಲ್ಲಿ ಅಂಥ ಕೂವತ್ತಾದರೂ ಏನಿರುತ್ತದೆ? ಅವರು ನಿಜವಾಗಿಯೇ ನಮ್ಮನ್ನು ಗುಡ್ಡದೊಳಗಿನ ಇಲಿಗಳೆಂದು ತಿಳಿದಿದ್ದಾರೆ. ನಮ್ಮನ್ನು ಬೇಕಾದಾಗ ಬಡಿದು ಕೊಲ್ಲಬಹುದೆಂದು ಅವರು ಭಾವಿಸಿರುವರು! ಆದರೆ ಆ ದಿವಸಗಳು ಹಿಂದಾದವೆಂದು ಅವರಿಗೆ ಸ್ಪಷ್ಟವಾಗಿ ಹೇಳಬೇಕು. ಅವರಿಗೆ ಬಾಯಿಂದ ಹೇಳುವದಾದರೂ ಯಾಕೆ? ಚನ್ನಾಗಿ ಅವರ ಮೈ ನುಗ್ಗುಮಾಡಿದರೆ ತಾನೆ ಸಹಜವಾಗಿ ಗೊತ್ತಾಗುವದು. ಅದಕ್ಕಾಗಿಯೇ ನಾವು ಖಾನನಿಗೆ ಎದುರಾಗಿ ಅವನಿಗೆ ಚನ್ನಾಗಿ ನಮ್ಮ ಕೈ ತೋರಿಸ ಬೇಕೆಂದು ನಾನು ಮಹಾರಾಜರಿಗೆ ಮೇಲೆ ಮೇಲೆ ಹೇಳುತ್ತಿದ್ದದ್ದು! ಅವ ರಿಗೆ ಸೊನ್ನೆ ಸೂಕ್ಷ್ಮವು ಕೆಲಸದ್ದಲ್ಲ. ಹಾಕಬೇಕು ಚನ್ನಾಗಿ ನಾಲ್ಕು ಪೆಟ್ಟು ಗಳನ್ನು. ವೇಷಾಂತರದಿಂದ ನಾನೆಲ್ಲ ಖಾನನ ಸೈನ್ಯದ ಮಟ್ಟನ್ನು ತಿಳಿದು ಕೊಂಡಿದ್ದೇನೆ. ಕರ್ತೃತ್ವಕ್ಕಿಂತ ಅವರ ದಿಮಾಕು ಬಹಳ. ಮಹಾರಾಜರು

ಅಪ್ಪಣೆಕೊಟ್ಟು ನೋಡಬೇಕು, ನಮ್ಮ ಮಾವಳರ ದಂಡು ಅವರನ್ನು ಮಣ್ಣು ಗೂಡಿಸಿಬಿಡುವದು.

ಮೋರೋತ್ರಿಮಲ—ಖಾನನ ಮೂರ್ಖತನವನ್ನೇನು ಹೇಳಬೇಕು? ಆತನು ಇತ್ತಕಡೆಗೆ ಬಂದಕೂಡಲೆ ಮಹಾರಾಜರು ವಿನಯವನ್ನು ತೋರಿಸಿದ್ದರಿಂದ, ಆ ಹುಂಬನ ಕಣ್ಣುಗಳು ನೆತ್ತಿಯಮೇಲೆ ಬಂದಿರುತ್ತವೆ. ಮಹಾರಾಜರನ್ನು ಆತನು ತೀರ ತಿಳಿಗೇಡಿಗಳೆಂದು ಭಾವಿಸಿದ್ದಾನೆ. ತನ್ನ ದರ್ಪದಿಂದ ಮಹಾರಾಜರು ಹೆದರಿ ಹೋಗಿರುವರೆಂತಲೂ, ಅವರನ್ನು ತಾನು ಅನಾಯಾಸದಿಂದ ವಿಜಾಪುರಕ್ಕೆ ಹಿಡಿದೊಯ್ಯಬಹುದೆಂತಲೂ ಆತನು ಭಾವಿಸಿರುವನು. ಮಹಾರಾಜರು ಹಿಂದುಮುಂದಿನ ವಿಚಾರವಿಲ್ಲದೆ ಕಂಡವರ ಮೇಲೆ ವಿಶ್ವಾಸವಿಡುವರಂತೆ. ಖಂಡೇರಾಯನಿಗೆ ಮಹಾರಾಜರು ಆಶ್ರಯ ಕೊಟ್ಟದ್ದೊಂದು ಖಾನನಿಗೆ ಆಧಾರವಾಗಿದೆ. ಜಾಧವರಾಯನನ್ನೂ ಖಾನನು ತನ್ನ ಗುಪ್ತಚಾರನೆಂದೇ ಭಾವಿಸಿರುವನು; ಆದರೆ ಜಾಧವರಾಯನೂ, ಆತನ ಹೆಂಡತಿಯಾದ ಹೈಮವತೀ ದೇವಿಯೂ ಮಹಾರಾಜರ ಏಕನಿಷ್ಠ ಸೇವಕರಾಗಿ, ತನ್ನನ್ನೇ ವಂಚಿಸುತ್ತಿರುವರೆಂಬದು ಆ ಮದಾಂಧನಿಗೆ ಗೊತ್ತಿಲ್ಲ.

ಮಹಾರಾಜರು—ಏನೇ ಇರಲಿ, ನಮ್ಮ ವಿಷಯವಾಗಿ ಖಾನನು ಹೀಗೆ ಭಾವಿಸುವದು ಅತ್ಯಂತ ಹಿತಕರವಾಗಿರುವದು. ಹೀಗೆ ಖಾನನು ತಿಳಿಯಬೇಕೆಂದು ನಾವು ಯತ್ನಿಸಿದ್ದು ಸಫಲವಾದಂತಾಯಿತು. ನಮ್ಮಲ್ಲಿ ಹೀಗೆ ಅವ್ಯವಸ್ಥೆಯಿರುವದೆಂದು ತಿಳಿದರೆ, ಆತನು ದುರ್ಲಕ್ಷದಿಂದ ನಡೆಯುವನು. ಅದರಿಂದ ನಮಗೆ ನಿಶ್ಚಯವಾಗಿ ಹಿತವಾಗುವದು. ನಾವು ಆತನ ಕಪಟಜಾಲದಲ್ಲಿ ಸಿಕ್ಕಿವೆಂದು ಆತನು ತಿಳಿದುಕೊಂಡಷ್ಟು ನಮ್ಮ ಹಿತವಾಗುವದು.

ಕೃಷ್ಣಾಜಿಭಾಸ್ಕರ—ಮಹಾರಾಜ, ಅವನು ಹೀಗೆ ನಿಶ್ಚಯವಾಗಿ ತಿಳಿದಿರುವನು. ಪ್ರತಾಪಗಡವನ್ನು ವಶಮಾಡಿಕೊಳ್ಳುವದು ಆತನಿಗೆ ಸ್ವಲ್ಪವೂ ಅಸಾಧ್ಯವಾಗಿ ತೋರುವದಿಲ್ಲ. ಅವನು ಹೀಗೆ ಬಾಯಿಂದ ಆಡಿ ತೋರಿಸುವನು; ಆದರೆ ತಾವು ಇಲ್ಲಿಂದ ಜಾರಿಹೋದರೆ, ತಮ್ಮನ್ನು ವಿಜಾಪುರಕ್ಕೆ ಹಿಡಿದೊಯ್ಯುವದು ಅಸಾಧ್ಯವಾದೀತೆಂದು . ತಿಳಿದು, ಆತನು

ತಮ್ಮನ್ನು ಸಮಕ್ಷ ಕಾಣಲು ಹೊಂಚುಹಾಕಿರುವನು; ಸಮಕ್ಷ ಭೆಟ್ಟಿ ಯಾದಾಗ ತಾನು ಸಹಜವಾಗಿ ತಮ್ಮನ್ನು ಹಣ್ಣು ಮಾಡಬಹುದೆಂಬು ಆತನು ನಂಬಿರುತ್ತಾನೆ. ಅಂತೇ ಆತನು ನೀವು ಹೇಳಿದ ಹಾಗೆ ಕೇಳು ವನು, ನೀವು ಎಷ್ಟು ದಿವಸ ತಡಮಾಡಿದರೂ ಸೈರಿಸುತ್ತಿರುವನು. ಇನ್ನು ಮೇಲೆ ಮಾತ್ರ ಆತನು ತಡೆಯುವ ಹಾಗೆ ತೋರುವದಿಲ್ಲ. ಇಂದು, ಅಥವಾ ನಾಳೆ ಇಷ್ಟರಲ್ಲಿ ಆತನ ವಕೀಲನು ಬಂದು, ಭೆಟ್ಟಿಯ ದಿವಸವನ್ನು ನಿರ್ಧರಿಸಿ ಹೇಳಲೇಬೇಕೆಂದು ತಮಗೆ ಆಗ್ರಹಮಾಡಬಹುಸು.

ಮಹಾರಾಜ—ಮಾಡಲಿ, ಆತನು ಬೇಕಾದಷ್ಟು ಆಗ್ರಹಮಾಡಲಿ. ನಾವು ಅಂಜಿಹೋದದ್ದರಿಂದ ಮುಂದುಗಾಣದೆ ಗಾಬರಿಯಾಗಿ ಕುಳಿತು ಬಿಟ್ಟಿರುವೆವೆಂದು ಆತನ ತಿಳುವಳಿಕೆಯಾದಷ್ಟು ನಮಗೆ ಹಿತವು. ಖಂಡ್ಯಾ ನಂಥ ಇನ್ನು ನಾಲ್ಕು ಜನರು ನಮ್ಮಲ್ಲಿಯ ಅವ್ಯವಸ್ಥೆಯನ್ನು ಖಾನನ ಮುಂದೆ ವರ್ಣಿಸಲಿ. ಈ ಸಾರೆ ಈ ದುಷ್ಟರಿಗೆ ಚನ್ನಾಗಿ ಕೈತೋರಿಸಿ, ಇನ್ನೊಮ್ಮೆ ಇಂಥ ಸರದಾರಗಿರದಾರರು ನಮ್ಮ ಗೊಡವೆಗೆ ಬಾರದಂತೆ ಮಾಡಬೇಕು; ಆದರೆ ಮುಖ್ಯ ವಿಷಯವು ಒತ್ತಟ್ಟಿಗುಳಿದು, ನಾವು ವ್ಯರ್ಥ ಹರಟೆ ಕೊಚ್ಚಹತ್ತಿದೆವಲ್ಲ!

ಹೀಗೆ ಪರಸ್ಪರ ಸಂಭಾಷಣಗಳು ನಡೆದಿರುವಾಗ ಜೀಜಾಬಾಯಿ ಸಾಹೇಬರು ಅವನ್ನೆಲ್ಲ ಕೇಳುತ್ತ ಸುಮ್ಮನೆ ಕುಳಿತುಕೊಂಡಿದ್ದರು. ಅವರು ನಡುವೇ ಮಹಾರಾಜರನ್ನು ಕುರಿತು—''ಶಿವಬಾ, ಈ ವ್ಯರ್ಥ ಮಾತು ಗಳಿಂದ ಪ್ರಯೋಜನವಿಲ್ಲೆಂದು ನಾನು ನಿನಗೆ ಹೇಳಬೇಕೆಂದು ಮಾಡಿ ದ್ದೆನು. ಈಗ ನೀನು ಇಂಥ ದಿವಸವೇ ನಿನ್ನನ್ನು ಕಾಣುವೆನೆಂದು ಖಾನನಿಗೆ ಆತಂಕವಿಲ್ಲದೆ ಸ್ಪಷ್ಟವಾಗಿ ಹೇಳಿ ಕಳಿಸಿ ಬಿಡು. ಅದರಂತೆ, ನಾವು ಇಷ್ಟೇ ಜನರನ್ನು ಸಂಗಡ ಕರಕೊಂಡು ಬರುವೆವು; ನೀವು ಇಷ್ಟೇ ಜನರನ್ನು ಸಂಗಡ ಕರಕೊಂಡು ಬರ್ರಿ; ಎಂದು ಗೊತ್ತುಮಾಡಿ ತಿಳಿಸಿ ಬಿಡು. ಆತನು ಅಷ್ಟು ಆತುರ ಪಡುತ್ತಿದ್ದರೆ, ನಾವಾದರೂ ಯಾಕೆ ವಿಲಂಬ ಮಾಡ ಬೇಕು? ಬಾಳಾ, ಶಿವಬಾ, ನೀನು ಚಿಂತೆ ಮಾಡಬೇಡ. ನೀನು ಈ ಪ್ರಸಂಗ ದಲ್ಲಿ ನಿಶ್ಚಯವಾಗಿ ಜಯಶೀಲನಾಗುವೆ. ನಿನ್ನೆ ಮತ್ತೆ ಅಂಬಾಬಾಯಿಯ ದೃಷ್ಟಾಂತವು ನನಗೆ ಆಗಿರುತ್ತದೆ. ನೀನು ಎಷ್ಟು ಮಾತ್ರವೂ ಅಂಜ

ಬೇಡ. ಆ ದುಷ್ಟನು ತುಳಜಾಪುರದ ಭವಾನಿಯ ಸ್ಥಾನಭ್ರಷ್ಟ ಮಾಡಿಸಿದನು. ಈಗ ಇಲ್ಲಿ ಈ ಪ್ರತಾಪಗಡದಲ್ಲಿರುವ ನಮ್ಮ ಭವಾನೀಮಾತೆಯನ್ನು ನಾಶಗೊಳಿಸಲು ಹೊಂಚು ಹಾಕಿರುತ್ತಾನೆ. ಇಂಥ ನೀಚನ ಶಾಸನವನ್ನು ಭವಾನೀ ಮಾತೆಯು ನಿಶ್ಚಯವಾಗಿ ನಿನ್ನ ಕೈಯಿಂದ ಮಾಡಿಸುವಳು. ಇನ್ನು ಸ್ವಲ್ಪವೂ ವಿಲಂಬ ಮಾಡಬೇಡ. ಕೃಷ್ಣಾಜಿಪಂತ, ನೀವು ಸ್ಪಷ್ಟವಾಗಿ ಖಾನನಿಗೆ ಹೇಳಿರಿ. ಇಂಥ ದಿವಸ ಮಹಾರಾಜರು ನಿನ್ನನ್ನು ಕಾಣುವರೆಂದು ಆತನಿಗೆ ಸ್ಪಷ್ಟವಾಗಿ ತಿಳಿಸಿ ಬಿಡಿರಿ. ಅವನಿಗೇ ಅಷ್ಟು ಅವಸರ ವಿದ್ದರೆ, ನೀವಾದರೂ ಯಾಕೆ ತಡಮಾಡುತ್ತೀರಿ?

ಜಿಜಾಬಾಯಿಸಾಹೇಬರು ಹೀಗೆ ಮಾತಾಡುತ್ತಿರುವಾಗ ಮಹಾರಾಜರು ಅತ್ಯಂತವಾದ ಅಭಿಮಾನದಿಂದ ಅವರನ್ನು ನೋಡುತ್ತಲಿದ್ದರು. ಇಂಥ ವೀರಮಾತೆಯ ಉದರದಲ್ಲಿ ತಮಗೆ ಜನ್ಮವಿತ್ತದ್ದಕ್ಕಾಗಿ ಅವರು ಪರಮೇಶ್ವರನ ಉಪಕೃತಿಯನ್ನು ಬಹಳವಾಗಿ ಕೊಂಡಾಡಿದರು. ಪ್ರಾಚೀನ ಕಾಲದ ವೀರಮಾತೆಯರಂತೆ ತಮ್ಮ ತಾಯಿಯು ತಮ್ಮ ಇಂಥ ಗಂಡಾಂತರದ ಪ್ರಸಂಗದಲ್ಲಿ ತಮ್ಮನ್ನು ಈ ಪರಿ ಉತ್ಸಾಹಗೊಳಿಸುವದನ್ನು ನೋಡಿ, ಅವರ ಆನಂದವು ಅವರ ಹೊಟ್ಟೆಯಲ್ಲಿ ಹಿಡಿಸದಾಯಿತು. ಜೀಜಾಬಾಯಿಯವರ ಮಾತು ಮುಗಿದರೂ ಮಹಾರಾಜರು ಅತ್ಯಂತವಾದ ಅಭಿಮಾನದಿಂದಲೂ, ಆನಂದದಿಂದಲೂ ತಮ್ಮ ಆ ತಾಯಿಯನ್ನು ನೋಡುತ್ತಲೇ ಇದ್ದರು! ಅವರು ಸಿಟ್ಟಿಂದು ಮಾತಾಡದೆ ಸುಮ್ಮನೆ ಕುಳಿತಿದ್ದರು. ತನ್ನ ವೀರ ಜನನಿಯ ಬೋಧದೊಳಗಿನ ಪ್ರತಿಯೊಂದು ಅಕ್ಷರರೂಪವಾದ ಅಮೃತಬಿಂದುವು, ತಮಗೆ ಅಮರಪದವಿಯನ್ನು ಕೊಡುವದೆಂಬ ಉತ್ಸಾಹದಿಂದ ಅವರು ಕುಳಿತಂತೆ ತೋರುತ್ತಿತ್ತು. ತಮ್ಮ ತಾಯಿಯ ಬೋಧಾಮೃತವನ್ನು ಪ್ರಾಶನಮಾಡಿಮಾಡಿದಂತೆ ಮಹಾರಾಜರ ಧೈರ್ಯ–ಶೌರ್ಯ–ಸಮಾಧಾನ–ಸಾಮರ್ಥ್ಯಗಳು ಹೆಚ್ಚುತ್ತಲಿದ್ದವು. ಮಹಾರಾಜರಂತೆಯೇ ಮಹಾರಾಜರ ಪರಿವಾರದ ಸ್ಥಿತಿಯೂ ಆಗಿತ್ತು! ಜೀಜಾಬಾಯಿಯವರ ವಿಲಕ್ಷಣ ಪ್ರಭಾವವೇ ಅಂತಹದು!

ಕೆಲವು ಹೊತ್ತಿನಮೇಲೆ ಮಹಾರಾಜರು ತಮ್ಮ ತಾಯಿಯನ್ನು ಕುರಿತು—"ಆಯಿೊ ಸಾಹೇಬ, ತಾವು ಹೇಳಿದಂತೆ ಎಲ್ಲ ವ್ಯವಸ್ಥೆಯನ್ನು

ಮಾಡಿರುತ್ತೇನೆ. ನಾವು ಇಂಥ ದಿವಸವೇ ಕಾಣುವೆವೆಂದು ಖಾನನ ವಕೀಲನ ಮುಂದೆ ಹೇಳದಿದ್ದರೂ, ಇನ್ನು ನಾವು ವಿಲಂಬಮಾಡುವ ದಿಲ್ಲೆಂದು ತಿಳಿಸಿರುತ್ತೇನೆ. ಪರಸ್ಪರರ ಭೆಟ್ಟಿಯು ಸಲುವಾಗಿ ಪ್ರಯತ್ನ ಪೂರ್ವಕ ಶೃಂಗರಿಸಿರುವ ಸಭಾಮಂದಿರವನ್ನು ಆ ವಕೀಲನಿಗೆ ತೋರಿಸಿರು ತ್ತೇನೆ. ಆತನ ಮನಸ್ಸಿಗೆ ಅದೆಲ್ಲ ಬಂದಿರುತ್ತದೆ. ಇನ್ನು ಖಾನನ ವಕೀಲನು ಬರುವದೊಂದೇ ತಡ. ಮಾರ್ಗಶೀರ್ಷ ಶುದ್ಧ ಷಷ್ಠಿಯು ಭೆಟ್ಟಿಯಾಗುವ ನಿಶ್ಚಿತವಾದ ದಿವಸವೆಂದು ಆತನಿಗೆ ನಾನು ತಿಳಿಸಿಬಿಡು ವೆನು. ಹಲವು ಉಪಾಯಗಳಿಂದ ನಾನು ಗೊತ್ತು ಮಾಡಿಕೊಂಡಿದ್ದರ ಮೇಲಿಂದಲೂ, ಹೈಮವತಿದೇವಿಯು ಕಳಿಸಿದ ಸುದ್ದಿಯಿಂದಲೂ ಅಂಬಾ ಬಾಯಿಯ ದೃಷ್ಟಾಂತದಿಂದಲೂ ಖಾನನು ದುರಾಲೋಚನೆಯಿಂದ ನನ್ನನ್ನು ನಾಶಗೊಳಿಸಲು ನಿಂತಿರುವನೆಂಬದು ನನಗೆ ನಿಶ್ಚಯವಾಗಿ ಗೊತ್ತಾಗಿದೆ. ಅದಕ್ಕೆ ಸರಿಯಾಗಿ ನಾನು ಎಲ್ಲ ವ್ಯವಸ್ಥೆಯನ್ನು ಮಾಡಿ ಕೊಳ್ಳುವೆನು. ಮಧಾಂಧನಾದ ಖಾನನು ನನ್ನನ್ನು ಲೆಕ್ಕಿಸದೆ, ವಿಶೇಷ ತರದ ವ್ಯವಸ್ಥೆಯನ್ನೇನೂ ಮಾಡಿಕೊಳ್ಳದೆ, ತನ್ನಲ್ಲಿ ತಾನು ಮೆರೆಯು ತ್ತಿರುವದು ನನಗೆ ಬಹಳ ಅನುಕೂಲವು. ಆತನು ಇನ್ನು ತನ್ನ ಸೈನ್ಯ ವನ್ನೆಲ್ಲ ಸಂಗಡ ಕರಕೊಂಡು ಬಂದರೂ ನಾನು ಬೇಡೆನ್ನುವದಿಲ್ಲ. ನಾನು ಸರಬರಾಯಿಯ ಇಷ್ಟು ಅತ್ಯುತ್ತಮ ವ್ಯವಸ್ಥೆಯನ್ನು ಇಟ್ಟಿದ್ದರೂ; ಆ ದುಷ್ಟ ಸೈನಿಕರು ನಮ್ಮ ಪ್ರಜೆಗಳಿಗೆ ಉಪದ್ರವ ಕೊಡದೆಯಿರಲಿಲ್ಲ. ಇಂಥ ದುಷ್ಟರ ಶಾಸನಮಾಡುವದೂ ಅವಶ್ಯವೇ ಆಗಿರುವದು! ಅಹಹ! ಅವರು ಎಷ್ಟು ಉನ್ಮತ್ತರಾಗಿರುವರು! ಇಷ್ಟಾದರೂ ಇವರು ಐಶ್ವರ್ಯವನ್ನು ಭೋಗಿ ಸುತ್ತಿರುವದು ಆಶ್ಚರ್ಯವು! ದೇವರು ಇವರ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ವನ್ನೇಕೆ ಕೊಟ್ಟಿರಲಿಕ್ಕಿಲ್ಲ! ಆದರೆ ಅಂಬಾಬಾಯಿಯ ವಿಚಾರವು ಆಕೆಗೇ ಗೊತ್ತು, ನಮ್ಮಂಥ ಪಾಮರರಿಗೆ ಅದು ಹ್ಯಾಗೆ ತಿಳಿಯಬೇಕು? ಬಡ ಪ್ರಜೆಗಳ ದುಃಖವನ್ನು ಮಾತ್ರ ನಾನು ನೋಡಲಾರೆನು."

ಹೀಗೆ ನುಡಿಯುವಾಗ ಮಹಾರಾಜರ ಕಣ್ಣುಗಳೊಳಗಿಂದ ಅಶ್ರು ಗಳು ಉದುರಿದವು. ಅದನ್ನು ನೋಡಿ ಜೀಜಾಬಾಯಿ ಸಾಹೇಬರವರು— "ಅಪ್ಪಾ, ಶಿವಬಾ, ನೀನು ಹೀಗೆ ದುಃಖಿಸಬೇಡ, ಖಿನ್ನನಾಗಬೇಡ.

ಅಂಬಾಬಾಯಿಯು ನಿನ್ನ ಕೈಯಿಂದ ಅವರ ಶಾಸನ ಮಾಡಿಸಬೇಕೆಂತಲೇ ಆಕೆಯು ಇಂಥ ಅನರ್ಥಗಳು ನಿನ್ನ ಕಣ್ಣಿಗೆ ಬೀಳುವಂತೆ ಮಾಡಿರುವಳು. ಅವನ್ನು ನೋಡಿ ನೀನು ಸಂತಾಪಗೊಳ್ಳಬೇಕು, ದ್ವೇಷಪಡಬೇಕು, ಅವರ ಶಾಸನಮಾಡಲು ಸಿದ್ಧನಾಗಬೇಕು, ಎಂಬದೇ ಆಕೆಯ ಉದ್ದೇಶವಾಗಿರುವದು. ಅಂಬಾಬಾಯಿಯ ಮೇಲಿನ ನಮ್ಮ ವಿಶ್ವಾಸವೂ, ಆಕೆಯು ನಮಗೆ ತೋರಿಸುವ ದೃಷ್ಟಾಂತಗಳೂ ವ್ಯರ್ಥವಾಗಬಹುದೆ? ಅಪ್ಪಾ, ಹೀಗೆ ಉದಾಸೀನನಾದರೆ ಹ್ಯಾಗೆ? ಬಂದ ಸಂಕಟಗಳಿಗೆ ಧೈರ್ಯದಿಂದ ಎದೆಗೊಟ್ಟು ನಿಲ್ಲಲೇಬೇಕು; ಅಂದರೆ ದುಷ್ಟರ ಶಾಸನವಾಗುವದು. ನಿನ್ನ ಮಾತು ನಿಜವು; ಖಾನನು ಮೋಸದಿಂದ ನಿನ್ನ ಪ್ರಾಣಹರಣ ಮಾಡಲಿಕ್ಕೂ ಹಿಂದೆಮುಂದೆ ನೋಡಲಿಕ್ಕಿಲ್ಲ. ನೀನು ಅದಕ್ಕೆ ತಕ್ಕಂತೆಯೇ ಎಲ್ಲ ಸಿದ್ಧತೆಯನ್ನು ಮಾಡಿಕೋ. ನಡೆ, ಕಾರ್ಯವು ಸಫಲವಾಗುವದು. ಅಂಬಾಬಾಯಿಯ ಪೂರ್ಣ ಕೃಪೆಯು ನಿನಗಿರುತ್ತದೆ; ನಮ್ಮಂಥ ಹಿರಿಯರ ಅಂತಃಕರಣ ಪೂರ್ವಕವಾದ ಆಶೀರ್ವಾದದ ಬಲವೂ ನಿನಗಿರುತ್ತದೆಂದು ತಿಳಿದುಕೋ. ಸ್ವಲ್ಪವೂ ಚಿಂತೆಮಾಡಬೇಡ.

ತಾನಾಜಿ—ಅಂಬಾಬಾಯಿಯ ಕೃಪೆಯೂ, ಆಯಿಸಾಹೇಬರ ಆಶೀರ್ವಾದವೂ ಇದ್ದಬಳಿಕ ಎರಡನೆಯದೇನು ಬೇಕು? ನಾವು ಚಿಂತೆ ಮಾಡುವದಾದರೂ ಯಾಕೆ?

ಜೀಜಾಬಾಯಿ—(ಸ್ವಲ್ಪನಕ್ಕು) ಎರಡು ಹೇಳಿದೆ; ಆದರೆ ಮೂರನೆಯದನ್ನು ಹೇಳಲಿಲ್ಲ?

ತಾನಾಜಿ—ಮೂರನೆಯದಾವದು? ನನಗಂತು ಅದು ತೋರಲೊಲ್ಲದು. ಈ ಎರಡರಲ್ಲಿ ಉಳಿದವೆಲ್ಲ ಬರುತ್ತವೆಂದು ನಾನು ತಿಳಿದಿರುತ್ತೇನೆ.

ಜೀಜಾಬಾಯಿ—ಏನೇ ಅನ್ನು, ಮೂರನೆಯ ಮಾತಿನ ಅವಶ್ಯವೂ ಇರುತ್ತದೆ.

ತಾನಾಜಿ—ಅದು ಯಾವದು ಆಯಿಸಾಹೇಬ, ನನ್ನ ಮನಸ್ಸಿಗೆ ಹೊಳೆಯಲೊಲ್ಲದಲ್ಲ!

ಜೀಜಾಬಾಯಿ—ಹೇಳುತ್ತೇನೆ ಕೇಳು. ಅಂಬಾಬಾಯಿಯ ಕೃಪೆಯೂ,

ಹಿರಿಯರ ಆಶೀರ್ವಾದವೂ ಅವಶ್ಯವಾಗಿಯಿದ್ದಂತೆ, ನಿನ್ನಂಥ ಮಿತ್ರರ ಸಹಾಯವೂ ಅವಶ್ಯವಾಗಿ ಬೇಕಾಗುತ್ತದೆ.

ತಾನಾಜಿ—(ವಿನಯದಿಂದ)ಆಯಿೂಸಾಹೇಬ, ಸುಮ್ಮನೆ ನಮ್ಮನ್ನು ಗೌರವಿಸುವದಕ್ಕಾಗಿ ನೀವು ಹೀಗೆ ಹೇಳುವಿರಿ. ಅದೆಲ್ಲ ಸುಳ್ಳು. ನಾವು ನಿಮ್ಮ ನೌಕರರು; ತಮ್ಮ ಅಪ್ಪಣೆಯಂತೆ ಕಾರ್ಯವನ್ನು ಸಾಧಿಸುವದು ನಮ್ಮ ಕೆಲಸವು. ಅಂದಬಳಿಕ ಅದರಲ್ಲಿ ನಮ್ಮ ದೊಡ್ಡಿಸ್ತನವೇನು?

ಹೀಗೆ ಸಂಭಾಷಣವು ನಡೆದಿರಲು, "ಖಾನನ ವಕೀಲನು ಬಂದಿದ್ದು, ಆತನು ಮಹಾರಾಜರನ್ನು ಕಾಣಲು ಇಚ್ಛಿಸುವನೆಂ"ಬ ವರ್ತಮಾನವು ಬಂದಿತು. ಅದನ್ನು ಕೇಳಿ ಎಲ್ಲರಿಗೂ ಸಮಾಧಾನವಾಯಿತು. ಒಮ್ಮೆ ಖಾನನ ಪ್ರಕರಣವು ಮುಗಿದುಹೋಗಬೇಕೆನ್ನುವ ಹಾಗೆ ಎಲ್ಲರಿಗೂ ಆಗಿತ್ತು. ಖಾನನ ಜನರು ಹಳ್ಳಿಪಳ್ಳಿಗಳಲ್ಲಿ ಪುಂಡಾಟಿಕೆಯನ್ನು ನಡೆಸಿದ್ದರಿಂದಲೂ, ಅವರು ದೇವಸ್ಥಾನಗಳನ್ನು ನಾಶಗೊಳಿಸಹತ್ತಿದ್ದರಿಂದಲೂ ಜನತಾಪವು ಹೆಚ್ಚಿತ್ತು. ಖಾನನು ಗೊತ್ತಿಗೆಹತ್ತಿದ ಹೊರತು ಈ ಜನತಾಪವು ಶಾಂತ ವಾಗುವ ಹಾಗಿದ್ದಿಲ್ಲ; ಆದ್ದರಿಂದ ಮಹಾರಾಜರ ಪರಿವಾರವು ಮಹಾ ರಾಜರನ್ನು ಕುರಿತು—"ನೀವು ವಕೀಲನ ಭೆಟ್ಟಿಯಾದ ಕೂಡಲೆ ಭೆಟ್ಟಿಯ ದಿವಸವನ್ನು ತಿಳಿಸಿ ಬಿಡಿರಿ." ಎಂದು ಹೇಳಿದರು. ಅದಕ್ಕೆ ಮಹಾರಾಜರು ಮುಗುಳು ನಗೆ ನಗುತ್ತ ಒಪ್ಪಿಕೊಂಡು, ನಿಮ್ಮ ಮನಸ್ಸಿನಂತೆಯೇ ಮಾಡು ವೆನೆಂದು ಹೇಳಿ, ವಕೀಲನನ್ನು ಕಾಣುವದಕ್ಕಾಗಿ ಸದರಿಗೆ ಹೋದರು. ಅಲ್ಲಿ ರೀತಿಯಂತೆ ಆ ಮಾತು ಈ ಮಾತು ಹೊರಟಬಳಿಕ ಗೋಪೀನಾಥ ಪಂತನು ಮಹಾರಾಜರನ್ನು ಕುರಿತು—''ಖಾನಸಾಹೇಬರು ಭೆಟ್ಟಿಯ ದಿವಸವನ್ನು ತಿಳಕೊಂಡು ಬರುವದಕ್ಕಾಗಿ ಪುನಃ ನನ್ನನ್ನು ಕಳಿಸಿರುವರು. ಇನ್ನು ಅವರು ಸರ್ವಥಾ ವಿಲಂಬಮಾಡುವಹಾಗಿಲ್ಲ. ನಿಮ್ಮ ಎಲ್ಲ ಕರಾರು ಗಳನ್ನು ಅವರು ಒಪ್ಪಿಕೊಳ್ಳುವರು. ಇನ್ನು ಮೇಲೆ ಅವರು ಯಾವ ನೆವ ವನ್ನೂ ಕೇಳುವಹಾಗಿಲ್ಲ. ಒಮ್ಮೆ ಬೇಗನೆ ಭೆಟ್ಟಿಯಾಗಿ ಮಾತು ಕಥೆಗಳ ನ್ನಾಡಿಯೇ ತೀರಬೇಕೆಂದು ಅವರು ಆಗ್ರಹಪಡುವರು," ಎಂದು ಹೇಳಲು, ಮಹಾರಾಜರು—''ಅದಕ್ಕೆ ನಾವೆಲ್ಲಿ ಬೇಡವೆನ್ನುವೆವು? ಮಾರ್ಗಶೀರ್ಷ ಶುದ್ಧ ಷಷ್ಠಿಯ ಮುಹೂರ್ತವು ಭೆಟ್ಟಿಗೆ ನೆಟ್ಟಗಿರುವದರಿಂದ, ಅದನ್ನೇ

ಭೆಟ್ಟಿಯ ದಿವಸವೆಂದು ಗೊತ್ತುಮಾಡಿರುತ್ತೇವೆ. ಈ ಮಾತನ್ನು ನಿಮ್ಮ ಖಾನಸಾಹೇಬರಿಗೆ ತಿಳಿಸಬೇಕು; ಅವರು ಸಂಗಡ ಹೆಚ್ಚು ಜನರನ್ನು ಕರ ಕೊಂಡು ಬರಬಾರದು. ಬಹಳವಾದರೆ ಅವರು ಇಬ್ಬರನ್ನೇ ಸಂಗಡ ಕರ ಕೊಂಡು ಬರಬಹುದು. ನಾವೂ ಇಬ್ಬರನ್ನೇ ಸಂಗಡ ಕರಕೊಂಡು ಬರು ತ್ತೇವೆ. ಇವರಲ್ಲದೆ ನಮ್ಮ ವಕೀಲನು, ನಿಮ್ಮ ವಕೀಲನು, ಹೀಗೆ ಎಂಟೇ ಜನರು ದರ್ಬಾರದೊಳಗೆ ಇರತಕ್ಕದ್ದು. ಹೀಗೆ ಮಾಡದೆ ನಮಗೆ ಸಂಶಯ ಬರುವಹಾಗೆ ನಡೆದುಕೊಂಡರೆ, ನಾವು ಅಂಜಿ ಭೆಟ್ಟಿಗೆ ಬರಲಿಕ್ಕಿಲ್ಲ. ನಾವು ಈ ಸಂಗತಿಯನ್ನು ನಮ್ಮ ವಕೀಲನ ಸಂಗಡ ಹೇಳಿ ಕಳಿಸುತ್ತೇವೆ. ನೀವು ಅನಾಯಾಸವಾಗಿ ಸಮಕ್ಷ ಬಂದಿರುವದರಿಂದ ನಿಮ್ಮ ಮುಂದೆಯೂ ಹೇಳುವೆವು. ನೀವೂ ಈ ಸಂಗತಿಯನ್ನು ಖಾನಸಾಹೇಬರಿಗೆ ತಿಳಿಸಿರಿ. ಇನ್ನು ನಮ್ಮ ನಿಶ್ಚಯದಲ್ಲಿ ಅಂತರವಾಗುವ ಹಾಗಿಲ್ಲ. ನಾವು ಇನ್ನುಯಾರ ಆಲೋ ಚನೆಯನ್ನೂ ಕೇಳುವದಿಲ್ಲ. "ಶಿವಾಜಿಯನ್ನು ಬೇಕಾದವರು ಬೇಕಾದಹಾಗೆ ಮೋಸಗೊಳಿಸಬಹುದೆ"ಂಬ ಖಾನನ ತಿಳುವಳಿಕೆಯು ನಮಗೆ ಬಹು ಉಪ ಯುಕ್ತವಾಗಿರುತ್ತದೆ. ಈ ಮಬ್ಬಿನಿಂದ ಅವನ ಮೋಸಗಾರಿಕೆಯು ಪ್ರಸಂಗ ದಲ್ಲಿ ತಟ್ಟನೆ ಹೊರಬೀಳಬಹುದು. ಆಗ ನಮ್ಮ ಅವಸ್ಥೆಯೇನಾಗುವದೆಂಬ ದನ್ನು ನಾವು ನೋಡಿಕೊಳ್ಳುವೆವು. ಪಂತ, ಹಿಂದೂಧರ್ಮದ ಅಭಿಮಾನವು ನಮಗಿಂತ ನಿಮಗೆ, ಬ್ರಾಹ್ಮಣರಾದದ್ದರಿಂದ ಹೆಚ್ಚು ಇರಬೇಕು. ಖಾನನು ಏನಾದರೂ ಕಪಟವನ್ನು ಯೋಚಿಸಿದ್ದರೆ, ಅದನ್ನು ನಮಗೆ ನೀವು ತಿಳಿಸ ಬೇಕು, ಅಂದರೆ ಅದಕ್ಕೆ ನಾವು ತಕ್ಕ ಉಪಾಯವನ್ನಾದರೂ ಮಾಡಿಕೊಳ್ಳು ವೆವು. ಖಾನನು ಸರಳರೀತಿಯಿಂದ ನಡೆದರೆ ನಾವೂ ಸರಳರೀತಿಯಿಂದ ನಡೆದುಕೊಳ್ಳುವೆವು. ನಾವು ಸರಳರೀತಿಯಿಂದ ಹೋಗಿರಲು, ಖಾನನು ಕಪಟವನ್ನು ಆಚರಿಸಿ ನಮ್ಮನ್ನು ನಾಶಗೊಳಿಸುವದೂ, ಖಾನನು ಸರಳರೀತಿ ಯಿಂದ ಬಂದಿರಲು, ನಾವು ಕಪಟವನ್ನು ಆಚರಿಸಿ ಆತನನ್ನು ನಾಶಗೊಳಿ ಸುವುದು ಯೋಗ್ಯವಲ್ಲ. ಸರಳತನಕ್ಕೆ ಸರಳತನವು, ಕುಟಿಲತನಕ್ಕೆ ಕುಟಿಲ ತನವು ಎದುರಾಗುವದು ನೆಟ್ಟಗೆ. ನಾವಂತು ಸಂಶಯಗ್ರಸ್ತರಾಗಿರು ತ್ತೇವೆ. ಖಾನನ ಸಂಗಡ ಪ್ರಸಂಗ ಒದಗಿದಂತೆ ನಡಕೊಳ್ಳುವ ಸಿದ್ಧತೆ ಯಿಂದಲೇ ನಾವು ಬರುತ್ತೇವೆ; ಆದರೆ ನೀವು ನಿಮಗೆ ಗೊತ್ತಾಗಿದ್ದ

ನಿಜವಾದ ಸಂಗತಿಯನ್ನು ತಿಳಿಸಿದರೆ, ನೆಟ್ಟಗಾಗುವದು. ನಾವು ಅನ್ಯಾಯಕ್ಕೆ ಎಷ್ಟು ಅಂಜಿ ನಡೆದರೂ ಮುಸಲ್ಮಾನರು ಪ್ರಸಂಗದಲ್ಲಿ ಕಪಟಾಚರಣೆಯ ಆರೋಪವನ್ನು ನಮ್ಮ ಮೇಲೆ ಹೊರಿಸುವರೆಂಬದನ್ನು ನಾವು ಅರಿತಿದ್ದೇವೆ. ನಾವಿದ್ದಲ್ಲಿಗೆ ಖಾನನು ಭೆಟ್ಟಿಗೆ ಬರುವಂತೆ ನೀವು ಮಾಡಿದ್ದಕ್ಕಾಗಿ ಕೃತಜ್ಞರಾಗಿರುವೆವು. ಎಲ್ಲ ಬಗೆಯಿಂದ ವಿಚಾರ ಮಾಡಿ ಈ ಪ್ರಸಂಗದಲ್ಲಿ ನಮಗೆ ತಿಳಿಸತಕ್ಕದ್ದನ್ನು ನೀವು ತಿಳಿಸಬೇಕೆಂದು ನಾವು, ಆಗ್ರಹದಿಂದ ಹೇಳಿಕೊಳ್ಳುವೆವು."

ಮಹಾರಾಜರ ಈ ಮಾತುಗಳನ್ನು ಕೇಳಿ ಗೋಪೀನಾಥಪಂತನು ಸುಮ್ಮನೆ ಕುಳಿತನು. ಉಪ್ಪು ಉಂಡವನ ಮೇಲೆ ತಿರುಗಿಬೀಳಲಿಕ್ಕೆ ಆತನ ಮನಸ್ಸು ಒಪ್ಪದಾಯಿತು. ಅದರಂತೆ, ಮುಸಲ್ಮಾನರು ತೀರ ತಾಳಗೆಟ್ಟು ಪರಿಪರಿಯಾಗಿ ಹಿಂದೂ ಜನರನ್ನು ಪೀಡಿಸುತ್ತಿರುವಾಗ, ಧರ್ಮೋದ್ಧಾರಕ್ಕಾಗಿ ತ್ರಿಕರಣಪೂರ್ವಕ ಯತ್ನಿಸುವ ಮಹಾರಾಜರನ್ನು ನಾಶಗೊಳಿಸಲಿಕ್ಕೂ ಆತನ ಮನಸ್ಸು ಒಪ್ಪದಾಯಿತು. ಹೀಗಾಗಿ ಆತನು ಸುಮ್ಮನೆ ಕುಳಿತುಕೊಂಡನು. ಆತನ ಮನಸ್ಸಿನ ಈ ದ್ವೈತಭಾವವು ಆಗಲೆ ಮಹಾರಾಜರ ಮನಸ್ಸಿನಲ್ಲಿ ಬಂದುಹೋಗಿತ್ತು. ಅವರು ವಕೀಲನ ಈ ಸಂಶಯಗ್ರಸ್ತ ಸ್ಥಿತಿಯನ್ನು ಅಯೋಗ್ಯವೆಂದು ತಿರಸ್ಕರಿಸಲಿಲ್ಲ; ಆದರೆ ವಕೀಲನ ಮನಸ್ಸು ಚಂಚಲವಾಗಿರುವದರಿಂದ, ಪ್ರಸಂಗದಲ್ಲಿ ಅದು ತನ್ನ ಅನ್ನದಾತೃವಿನಕಡೆಗೆ ಹೊರಳಬಹುದೆಂದು ಮಾತ್ರ ಅವರು ತಿಳಿದುಕೊಂಡರು. ಅಷ್ಟರಲ್ಲಿ ಗೋಪೀನಾಥಪಂತನು ಮಹಾರಾಜರಿಗೆ—"ಮಹಾರಾಜ, ನೀವು ನಿಸ್ವಾರ್ಥಬುದ್ಧಿಯಿಂದ ಧರ್ಮೋದ್ಧಾರದ ಕಾರ್ಯವನ್ನು ನಡಿಸುತ್ತಿರುವದರಿಂದ, ನಾನು ನನ್ನ ಮನಸ್ಸಿನ ವಿರುದ್ಧವಾಗಿ ಕೆಲವು ಮಾತುಗಳನ್ನು ನಿಮಗೆ ತಿಳಿಸುವೆನು. ಅದಕ್ಕಾಗಿ ಪರಲೋಕದಲ್ಲಿ ನನಗೆ ತಕ್ಕಶಾಸನವಾದರೂ ಆಗಲಿ; ಈ ಲೋಕದಲ್ಲಿ ಅಪಕೀರ್ತಿ ಬಂದರೂ ಬರಲಿ. ನಾನು ಯಾವ ದುರಾಶೆಗೂ ಬಲಿಯಾಗದೆ, ಸ್ವಜನರ ಅನ್ಯಾಯದ ತಾಪನಿವಾರಣದ ದೃಷ್ಟಿಯಿಂದ ಕೆಲವು ಸಂಗತಿಗಳನ್ನು ನಿಮಗೆ ಹೇಳುವೆನು. ಖಾನನು ಮನಸ್ಸಿನಲ್ಲಿ ಕಪಟವನ್ನು ಯೋಚಿಸಿರುವದು ನಿಜವು; ಆದರೆ ಯಾವ ಬಗೆಯ ಕಪಟವ ಯೋಚಿಸಿರುವನೆಂಬದನ್ನು ನಾನು ಹೇಳ

ಲಾರೆನು. ಖಾನನು ತನ್ನ ಸಂಗಡ ೧೫೦೦೦ ಜನ ದಂಡಾಳುಗಳನ್ನು ಕರಕೊಂಡು ಬರುವನೆಂದು ಈ ಮೊದಲೆ ನಾನು ಹೇಳಿದ್ದು ನಿಜವು. ಮೋಸದಿಂದ ನಿಮ್ಮನ್ನು ಬಗ್ಗುಬಡೆದು, ಕೂಡಲೆ ಆ ದಂಡಿನ ಸಹಾಯದಿಂದ ಪ್ರತಾಪಗಡವನ್ನು ಕೈವಶಮಾಡಿಕೊಳ್ಳುವ ವಿಚಾರವು ಆತನದಿದ್ದಹಾಗೆ ತೋರುತ್ತದೆ. ಇದಕ್ಕೂ ನಾನು ಹೆಚ್ಚಿಗೆ ಸೂಚಿಸಲಾರೆನು. ಖಾನನ ಈ ಮೋಸಕ್ಕೆ ತಕ್ಕ ಪ್ರತಿಕಾರವನ್ನು ತಾವು ಮಾಡುವಿರೆಂಬ ನಂಬಿಗೆಯು ನನಗಿದೆ. ಇನ್ನು ನಾನು ಹೋಗಿಬರುವೆನು. ಮಾರ್ಗಶೀರ್ಷ ಶುದ್ಧ ಷಷ್ಠಿಯು ಭೆಟ್ಟಿಯ ದಿವಸವೆಂದು ಖಾನಸಾಹೇಬರಿಗೆ ಹೇಳುವೆನು;" ಮತ್ತು ತಾವು ಹೇಳಿದ ಉಳಿದ ಮಾತುಗಳನ್ನೂ ಅವರಿಗೆ ತಿಳಿಸುವೆನು; ಎಂದು ಹೇಳಿ, ಗೋಪೀನಾಥಪಂತನು ಹೊರಟುಹೋದನು.

೧೭ನೆಯ ಪ್ರಕರಣ.

ಮಹಾರಾಜರ ಮನಸ್ಸಿನ ಸ್ಥಿತಿಯು

ಒಮ್ಮೆ ಮಹಾರಾಜರು ಮನಸ್ಸಿನ ನಿಶ್ಚಯವಾದ ಬಳಿಕ ಅದು ತಿರುಗುವದು ಪರಮ ದುಸ್ತರವು. ಖಾನನ ಭೆಟ್ಟಿಯಾಗುವ ದಿವಸವು ಒಮ್ಮೆ ಗೊತ್ತಾಗಿ, ಗೋಪೀನಾಥಪಂತನ ಸಂಗಡ ಖಾನನಿಗೆ ಅದನ್ನು ಹೇಳಿಕಳಿಸಿದ ಬಳಿಕ, ಮಹಾರಾಜರು ತಾವು ಮಾಡಿಕೊಳ್ಳತಕ್ಕ ಸಿದ್ಧತೆಯನ್ನು ಬಡ ಬಡ ಮಾಡಿಕೊಳ್ಳಹತ್ತಿದರು. ಮೊದಲು ತಮ್ಮ ನಂಬಿಗೆಯ ಮುಖ್ಯ ಮುಖ್ಯ ಜನರನ್ನು ಕರೆಸಿ, ಪ್ರಕೃತದ ಕಠಿಣಪ್ರಸಂಗವನ್ನೂ, ಅದರಲ್ಲಿ ಪ್ರತಿ ಒಬ್ಬನು ಮಾಡಬೇಕಾದ ಸ್ವಾರ್ಥತ್ಯಾಗವನ್ನೂ ಕುರಿತು ತಮ್ಮ ಅಚ್ಚುಕಟ್ಟಿನ ಸುರಸಭಾಷಣದಿಂದ ಅವರನ್ನು ಪ್ರೋತ್ಸಾಹಗೊಳಿಸಿದರು. ಬಳಿಕ ತಮ್ಮ ಸೈನ್ಯದ ಮುಖ್ಯ ಸೇನಾಪತಿಗಳಾದ ಮೋರೋಪಂತ ಪೇಶವೆ, ಹಾಗು ಜೀವಾಜಿಸುಭಾನಜಿ ಇವರಿಬ್ಬರನ್ನು ಕುರಿತು—"ನೀವು ಖಾನನ ಮುಖ್ಯ ಸೈನ್ಯದ ಬಳಿಯಲ್ಲಿ ನಿಮ್ಮ ಸೈನ್ಯದ ಬೇರೆ ಬೇರೆ ಭಾಗಗಳೊಡನೆ ಸ್ವಲ್ಪ ದೂರ ದೂರ ಗುಪ್ತ ರೀತಿಯಿಂದ ಕಾದುಕೊಂಡು ಇದ್ದು, ದುರ್ಗದ ಮೇಲಿನ ಐದು ತೋಫು

ಗಳು ಹಾರಿದ ಕೂಡಲೆ ಖಾನನ ಸೈನ್ಯದ ಮೇಲೆ ಮುಗಿಬಿದ್ದು, ಅದನ್ನು ತುಂಡರಿಸಬೇಕು; ಮತ್ತು ಗೊತ್ತಾದ ಕರಾರುಗಳಂತೆ ಖಾನನು ತನ್ನ ಡೇರೆಯನ್ನು ಹೊಡೆದು, ಹೆಚ್ಚಿನ ಪರಿವಾರವನ್ನು ನಿಯಮಿತ ಸ್ಥಳದಲ್ಲಿ ಬಿಡುವನಷ್ಟೇ? ಆ ಸ್ಥಳದ ಸಮೀಪದಲ್ಲಿ ಈ ನೇತಾಜಿ ಪಾಲಕರನು ತನ್ನ ಸೈನ್ಯದೊಡನೆ ಕಾದಿದ್ದು, ಸಾಂಕೇತಿಕ ತೋಫು ಹಾರಿದ ಕೂಡಲೇ ಖಾನನ ಆ ಪರಿವಾರದ ಮೇಲೆ ಬಿದ್ದು ಅದನ್ನು ಗೊತ್ತಿಗೆ ಹಚ್ಚಬೇಕು. ಅದರಂತೆ, ನಾವು ದುರ್ಗದಿಂದ ಕೆಳಗಿಳಿದು ಬಂದಕೂಡಲೆ ಕರ್ಣೆಯ ಧ್ವನಿಯಾಗುವದು, ಕಾಳಿಯು ಊದುವದು. ಆ ಕೂಡಲೆ ಇವರಿಷ್ಟು ಜನರು ತಮ್ಮ ತಮ್ಮ ಪರಿವಾರದೊಡನೆ ಮುಂದಕ್ಕೆ ಸಾಗಿಬಂದು, ನಮ್ಮಿಂದ ಒಂದು ಕೂಗಳತೆಯ ಅಂತರದಲ್ಲಿ ನಿಂತುಕೊಳ್ಳಬೇಕು. ಹಾಗೆಯೇ, ದುರ್ಗದ ದ್ವಾರಗಳನ್ನು ಈ ದೊಡ್ಡ ದೊಡ್ಡ ಸರದಾರರು ಕಾಯುತ್ತಲಿದ್ದು, ನಾವು ಕಚೇರಿಗೆ ಮುಟ್ಟಿದ ಕೂಡಲೆ ಇವರು ಮುಂದಕ್ಕೆ ಸಾಗಿ ಬರತಕ್ಕದ್ದು" ಎಂದು ಹೇಳಿದರು. ಸಂಕೇತದ ತೋಫು ಹಾರಿದ ಹೊರತು ಯಾರೂ ಖಾನನ ಸೈನ್ಯದ ಮೇಲೆ, ಅಥವಾ ಆತನ ಪರಿವಾರದ ಮೇಲೆ ಬೀಳಬಾರದೆಂದು ಮಹಾರಾಜರು ನಿರ್ಧಾರದ ಅಪ್ಪಣೆಯನ್ನಿತ್ತರು; ಯಾಕಂದರೆ, ಖಾನನು ಸರಳತನದಿಂದ ನಡಕೊಂಡರೆ, ತಾವೂ ಸರಳತನದಿಂದಲೇ ನಡಕೊಳ್ಳತಕ್ಕದ್ದೆಂದು ಅವರು ನಿಶ್ಚಯಿಸಿದ್ದರು. ಹಾಗೆ ನಿಶ್ಚಯಿಸಿರದಿದ್ದರೆ, ಖಾನನ ಸೈನ್ಯವು ಬಂದಕೂಡಲೆ ಅದರ ಮೇಲೆ ಬಿದ್ದು ಅದರ ದೂಳ ಹಾರಿಸಿರೆಂದು ಅವರು ಅಪ್ಪಣೆ ಕೊಡುತ್ತಿದ್ದರು.

ಹೀಗೆ ಮಹಾರಾಜರು ಸಣ್ಣ ಪುಟ್ಟ ಸಂಗತಿಗಳನ್ನು ಕೂಡ ದುರ್ಲಕ್ಷಿಸದೆ, ಯಥಾ ಯೋಗ್ಯವಾಗಿ ವ್ಯವಸ್ಥೆ ಗೊಳಿಸಿದ ಬಳಿಕ, ಭೆಟ್ಟಿಯ ಮಂಟಪವು ಹ್ಯಾಗಾಗಿರುವದೆಂಬದನ್ನು ನೋಡುವದಕ್ಕಾಗಿ ಅಲ್ಲಿಗೆ ಹೋದರು. ಭೆಟ್ಟಿಯ ಮೊದಲು ಖಾನನಿಗೆ ಯಾವ ಬಗೆಯ ಸಂಶಯವೂ ಬರಬಾರದೆಂದು ತಿಳಿದು, ಅವರು ಮಂಟಪವನ್ನು ಬಹು ಸುಂದರವಾಗಿ ಹಾಕಿಸಿದ್ದರು. ಈ ಕೆಲಸದಲ್ಲಿ ವೆಚ್ಚದ ಕಡೆಗೆ ನೋಡದೆ ಕೆಲಸವನ್ನು ಉತ್ತಮ ರೀತಿಯಿಂದ ಮಾಡಿಸಬೇಕೆಂದು ವ್ಯವಸ್ಥಾಪಕನಿಗೆ ಅಪ್ಪಣೆಯಾದದ್ದರಿಂದ, ಮಂಟಪದ ಶೃಂಗಾರದಲ್ಲಿ ಯಾವ ಬಗೆಯ ಕೊರತೆಯೂ ಆಗಿದ್ದಿಲ್ಲ.

ಮಂಟಪದ ಎಲ್ಲ ಕಂಬಗಳನ್ನು ಜರತಾರಿಯ ವಸ್ತ್ರಗಳಿಂದ ಅಲಂಕರಿಸಿದ್ದರು. ಸರ್ವೋತ್ಕೃಷ್ಟವಾದ ಕಿನಕಾಫಿನ ಮೇಲ ಕಟ್ಟಿನಿಂದ ಮಂಟಪಕ್ಕೆ ವಿಲಕ್ಷಣ ಶೋಭೆಯು ಉಂಟಾಗಿತ್ತು. ಮುತ್ತಿನ ಝೂಲರಗಳು ಅಲ್ಲಲ್ಲಿ ಒಪ್ಪುತ್ತಿದ್ದವು. ಕೂಡುವ ಆಸನವನ್ನಂತು ಬಹು ಸುಂದರವಾಗಿ ಶೃಂಗರಿಸಿದ್ದರು. ತನ್ನ ಸತ್ಕಾರಕ್ಕಾಗಿ ಶಿವಾಜಿಯು ಬಹು ಪರಿಶ್ರಮಪಟ್ಟಿರುವನೆಂದು ಖಾನನ ಭಾವನೆಯಾಗಬೇಕೆಂದು ಮಹಾರಾಜರು ಪ್ರಯತ್ನಪೂರ್ವಕವಾಗಿ ಇಷ್ಟು ಸುಂದರ ಮಂಟಪವನ್ನು ಹಾಕಿಸಿದ್ದರೆಂದು ಹೇಳಬಹುದು. ತಾವು ಹೇಳಿದ್ದಕ್ಕಿಂತ ಕೆಲಸವು ಉತ್ತಮರೀತಿಯಿಂದ ಆಗಿರುತ್ತದೆಂದು ಮಹಾರಾಜರ ಭಾವನೆಯಾಯಿತು; ಆದರೆ ಇದರಿಂದ ಅವರಿಗೆ ಸಮಾಧಾನವಾಗುವದರ ಬದಲು, ಅಸಮಾಧಾನವಾಯಿತೆಂದು ನಾವು ಬರೆಯುವದನ್ನು ನೋಡಿ, ವಾಚಕರು ಆಶ್ಚರ್ಯಪಡಬಹುದು; ಆದರೆ ಹಾಗೆ ಆಶ್ಚರ್ಯಪಡುವ ಕಾರಣವಿಲ್ಲ. ಗೋ–ಬ್ರಾಹ್ಮಣರನ್ನು ಪರಿಪರಿಯಾಗಿ ಪೀಡಿಸುವ ಮೊಗಲರ ಸರದಾರರನ್ನು, ಅದರಲ್ಲಿಯೂ ವಿಶೇಷವಾಗಿ ಸಂತರ ಮಹಾದೈವತವಾದ ಪಂಢರಪುರದ ವಿಠೋಬನ, ಹಾಗು ತಮ್ಮ ಕುಲದೈವತವಾದ ತುಳಜಾಪುರದ ಭವಾನಿಯ ಸ್ಥಾನಭ್ರಷ್ಟಗೊಳಿಸಿದ ಅಫಜುಲಖಾನನನ್ನು ಸತ್ಕರಿಸುವದಕ್ಕಾಗಿ ತಾವು ಸುಂದರ ಮಂಟಪವನ್ನು ಹಾಕಿಸಿರಲು, ಸ್ವಾಭಿಮಾನದ ಮಹಾರಾಜರಿಗೆ ಅದರಿಂದ ಹ್ಯಾಗೆ ಸಮಾಧಾನವಾಗಬೇಕು? ಮೊಗಲರ ಕಾಲುಬೀಳುವ ಪ್ರಸಂಗ ಬರಲು, ಮಹಾರಾಜರ ಅಂತಃಕರಣವು ಅತ್ಯಂತ ವ್ಯಥಿತವಾಗುತ್ತಿತ್ತು. ಅವರು ತೀರ ಸಣ್ಣವರಿರುವಾಗ ತಂದೆಯ ಸಂಗಡ ವಿಜಾಪುರಕ್ಕೆ ಹೋದಾಗ, ತಂದೆಯ ಅಪ್ಪಣೆಯನ್ನು ಕೂಡ ಧಿಕ್ಕರಿಸಿ, ಬಾದಶಹನಿಗೆ ಕುರ್ನಿಸಾತ ಮಾಡದೆ ಕೂಡಿದ ದರ್ಬಾರದೊಳಗಿಂದ ಹೊರಟು ಬಂದಿದ್ದರು; ಆದರೆ ಹುಡುಗತನದ ಕೃತಿಯು ಹುಡುಗತನಕ್ಕೇ ಒಪ್ಪುವದು. ಅಫಜುಲಖಾನನಂಥ ಬಲಿಷ್ಠ ಮೊಗಲ ಸರದಾರರೊಡನೆ ಎದುರಿಗೆ ನಿಂತು ಕಾದುವಷ್ಟು ತಾವು ಇನ್ನೂ ಬಲಿಷ್ಠರಾಗದ್ದರಿಂದ, ಮಹಾರಾಜರು ನಿರ್ವಾಹವಿಲ್ಲದೆ ಕುಟಿಲತಂತ್ರವನ್ನು ಯೋಚಿಸಬೇಕಾಗುತ್ತಿತ್ತು. ಹಾಗೆ ಮಾಡದಿದ್ದರೆ ಅವರ ಸ್ವರಾಜ್ಯವು ನಷ್ಟವಾಗುವ ಸಂಭವವಿತ್ತು. ಸ್ವಧರ್ಮದ,

ಹಾಗು ಸ್ವರಾಜ್ಯದ ಉದ್ಧಾರಕ್ಕಾಗಿ, ದುಷ್ಟ ಕೃತಿಯ ಮೂಲಕ ಮುಖಾವ ಲೋಕನ ಮಾಡಬಾರದ ಮೊಗಲರ ಕೈಕಾಲು ಸಹ ಕಟ್ಟಿಕೊಳ್ಳಬೇಕಾಗುತ್ತ ದೆಂದು ಮಹಾರಾಜರು ದುಃಖದಿಂದ ಅನ್ನುತ್ತಲಿದ್ದರು; ಆದರೆ ವಿಸ್ತಾರ ವಾಗುತ್ತ ನಡೆದಿದ್ದ ತಮ್ಮ ರಾಜ್ಯವನ್ನು ಮೊಗಲರಿಂದ ರಕ್ಷಿಸುವಾಗ ಹೀಗೆ ಮುತ್ಸದ್ದಿಗಿರಿಯಿಂದ ನಡೆಯದಿದ್ದರೆ ನಿರ್ವಾಹವೇಯಿದ್ದಿಲ್ಲ; ಆದ್ದರಿಂದ ಮಹಾರಾಜರು ತಮ್ಮ ಮನಸ್ಸಿನ ಸಮಾಧಾನವನ್ನು ವಿವೇಕದಿಂದ ಮಾಡಿ ಕೊಳ್ಳುತ್ತ, ಮಂಟಪವನ್ನು ನೋಡುವ ಕೆಲಸವನ್ನು ಮುಗಿಸಿ ತಿರುಗಿ ದುರ್ಗದೊಳಗೆ ಹೋದರು.

ಇನ್ನು ನಾಡದಿನ ದಿವಸವೇ ಮಹಾರಾಜರು ಖಾನನ ಭೆಟ್ಟಿಗೆ ಹೋಗಬೇಕಾಗಿತ್ತು. ಆದ್ದರಿಂದ ಅವರು ತಮ್ಮ ಸಂಗಡ ಯಾರನ್ನು ಕರಕೊಂಡು ಹೋಗಬೇಕೆಂಬದನ್ನು ನಿರ್ಧರಿಸುವದಕ್ಕಾಗಿ ತಮ್ಮ ಅತ್ಯಂತ ವಿಶ್ವಾಸದ ಜನರನ್ನು ಅಂತಗೃಹದಲ್ಲಿ ಕರಿಸಿಕೊಂಡರು. ಮಹಾರಾಜರ ಸಂಗಡ, ಹುಜರೆಯ ವೇಷದಿಂದ ನಾನು ಹೋಗುವೆನು, ನೀನು ಹೋಗು ವೆನು ಎಂದು ಆ ಬಂದ ಜನರು ಮೇಲಾಟವಾಡಹತ್ತಿದ್ದರು. ತಾನಾಜಿ ಯಂತು ಹೊಸದೊಂದು ವಿಚಾರವನ್ನೇ ಮಹಾರಾಜರಿಗೆ ಸೂಚಿಸಿದನು. ಆತನು ಮಹಾರಾಜರನ್ನು ಕುರಿತು—"ಮಹಾರಾಜ, ನೀವು ಸ್ವತಃ ಖಾನನ ಭೆಟ್ಟಿಗೆ ಹೋಗಲೇ ಬೇಡಿರಿ. ನಿಮ್ಮನ್ನೇನು ಖಾನನು ನೋಡಿರುವ ದಿಲ್ಲ. ನಿಮ್ಮ ಹೆಸರಿನಿಂದ ನಾನು ಆತನ ಭೆಟ್ಟಿಗೆ ಹೋಗುತ್ತೇನೆ. ಆ ದುಷ್ಟನು ತಮ್ಮ ಜೀವಕ್ಕೆ ಏನಾದರೂ ಕೇಡು ಬಗೆದರೆ, ಎಂಥ ಅನರ್ಥ ವಾದೀತಲ್ಲ! ನಮ್ಮಂಥವರಿಗೆ ಅಪಾಯವಾದರೂ ಚಿಂತೆಯಿಲ್ಲ. ನೀವಿ ದ್ದರೆ ನಮ್ಮಂಥವರು ನೂರಾರು ಜನರು ಕೂಡಬಹುದು. ಒಂದು ಕಂಬದ ಮೇಲಿನ ದ್ವಾರಕಾ ಪಟ್ಟಣವೆಂಬಂತೆ, ನಿಮ್ಮ ಒಬ್ಬರ ಆಧಾರದಿಂದ ಸ್ವರಾಜ್ಯವು ಈಗ ನಿಂತಂತಾಗಿರುತ್ತದೆ; ಅಂದಬಳಿಕ ಕಂಬವೇ ಕಡ ಕೊಂಡು ಬಿದ್ದರೆ ಸ್ವರಾಜ್ಯದ ಗತಿಯೇನು? ಆದ್ದರಿಂದ ಮಹಾರಾಜರು ನನ್ನ ವಿನಂತಿಯನ್ನು ಮನ್ನಿಸಬೇಕು; ಅಂದರೆ ನಮ್ಮೆಲ್ಲರಿಗೂ ಬಹಳ ಸಮಾಧಾನವಾಗುವದು," ಎಂದು ನುಡಿಯಲು, ಮಹಾರಾಜರು— "ತಾನಾಜೀ, ನನ್ನ ಸಲುವಾಗಿ ಮುಂದುವರಿದು ಒಮ್ಮೆ ಪ್ರಾಣಕೊಡ

ಬೇಕೆಂದು ನಿನ್ನ ಮನಸ್ಸಿನಲ್ಲಿ ಇರುತ್ತದೆ; ಆದರೆ ಹಾಗೆ ನಾನು ಎಂದೂ ಮಾಡಗೊಡುವದಿಲ್ಲ. ಬೇಕಾದಗೆ ನೀನು ನನ್ನ ಸಂಗಡ ನಡೆ. ಖಾನನ ಮನಸ್ಸಿನಲ್ಲಿ ಏನಾದರೂ ಘಾತಮಾಡುವದಿದ್ದಾಗ, ನನ್ನ ಹೆಸರಿನಿಂದ ನಿನ್ನನ್ನು ಕಳಿಸಿ ನಾನು ಎಂದೂ ನಿನ್ನ ಘಾತಮಾಡಿಸಲಾರೆನು. ನೀನು ಹುಜರೆಯ ವೇಷದಿಂದ ನನ್ನ ಸಂಗಡ ಬಾ. ನಾವಿಬ್ಬರೂ ಬಂದದ್ದನ್ನು ನೋಡಿಕೊಳ್ಳೋಣ, ಎಂದು ಹೇಳಿದರು. ಅದನ್ನು ಕೇಳಿ ತಾನಾಜಿಗೆ ಬಹುಮಟ್ಟಿಗೆ ಸಮಾಧಾನವಾಯಿತು. ತನ್ನ ಸೂಚನೆಯನ್ನು ಮಹಾರಾಜರು ಸರ್ವಥಾ ಮನ್ನಿಸುವದಿಲ್ಲೆಂದು ಆತನು ಮೊದಲೇ ತಿಳಿದಿದ್ದನು. ಹಾಗೆ ಸೂಚಿಸಿದ್ದರಿಂದ ಮಹಾರಾಜರ ಸಂಗಡ ಹುಜರೆಯ ವೇಷದಿಂದ ಹೋಗಲಿಕ್ಕೆ ಅನಾಯಾಸವಾಗಿ ಒಪ್ಪಿಗೆ ದೊರೆಯಿತೆಂದು ಆತನಿಗೆ ಬಹಳ ಸಮಾಧಾನವಾಯಿತು. ಅದನ್ನು ನೋಡಿ ಉಳಿದವರಿಗೆ ಬಹಳ ಅಸಮಾಧಾನವಾಯಿತು. ಆದರೂ ಮಹಾರಾಜರು ಉಳಿದವರನ್ನು ಒಂದು ಕೂಗಿನ ಅಳತೆಯಲ್ಲಿ ಇರಹೇಳಿ, ಯಾರುಯಾರು ಎಲ್ಲೆಲ್ಲಿ ನಿಂತಿರಬೇಕೆಂಬದನ್ನು ಗೊತ್ತುಮಾಡಿಕೊಟ್ಟರು. ತಮಗೆ ಮಹಾರಾಜರ ಸಂಗಡ ಹೋಗುವ ಸಂಧಿಯು ದೊರೆಯದಿದ್ದರೂ, ಹೀಗೆ ಮಹಾರಾಜರ ಸಮೀಪದಲ್ಲಿಯಾದರೂ ಇರುವ ಒಪ್ಪಿಗೆಯು ದೊರೆಯಿತೆಂದು ಅವರು ಸಮಾಧಾನಪಟ್ಟರು.

ಹೊತ್ತು ಮುಣುಗಿತು. ಮಹಾರಾಜರು ಮಾಡತಕ್ಕ ವ್ಯವಸ್ಥೆಯನ್ನೆಲ್ಲಮಾಡಿ, ತಮ್ಮ ತಾಯಿಯ ಬಳಿಗೆ ಹೋಗಿ ತಾವು ಮಾಡಿದ್ದನ್ನೆಲ್ಲ ವಿವರಿಸಿ ಹೇಳಿದರು. ಆಗ ಜೀಜಾಬಾಯಿಸಾಹೇಬರು ಮಗನಿಗೆ—''ಬಾಳಾ, ಶಿವಬಾ, ಎಲ್ಲ ಕೆಲಸವು ನಿನ್ನ ಮನಸ್ಸಿನಂತೆ ಆಗುವದು. ಶ್ರೀ ಭವಾನಿಯ ಕೃಪೆಯು ನಿನ್ನ ಮೇಲೆ ಸಂಪೂರ್ಣವಾಗಿ ಇರುತ್ತದೆ. ಇಂದು ರಾತ್ರಿ ನೀನು ಸ್ವಸ್ಥ ಚಿತ್ತದಿಂದ ಮಲಗಿಕೋ, ಸ್ವಲ್ಪವೂ ಚಿಂತೆಮಾಡಬೇಡ" ಎಂದು ಹೇಳಲು, ಮಹಾರಾಜರು ರಾಣೀವಾಸಕ್ಕೆ ಹೋಗಿ ಎಲ್ಲ ವಿಚಾರಗಳನ್ನು ಮರೆತು ಸ್ವಸ್ಥವಾಗಿ ಮಲಗಿಕೊಂಡರು. ಅವರಿಗೆ ಗಾಢವಾದ ನಿದ್ರೆಯು ಹತ್ತಿತು. ಆ ರಾತ್ರಿಯಲ್ಲಿ ಪುನಃ ಜಗದಂಬೆಯು ಅವರ ಸ್ವಪ್ನದಲ್ಲಿ ಬಂದು—''ವತ್ಸಾ, ಮೂವತ್ತೆರಡು ಹಲ್ಲುಗಳ ಟಗರಿನ ಬಲಿಯು ನನಗೆ ಬಹಳವಾಗಿ ಸೇರುತ್ತದೆ. ಅದನ್ನು ನಾಡದು ನಿನ್ನ ಕೈಯಿಂದ

ನಾನು ಸ್ವೀಕರಿಸುವೆನು. ನೀನು ಸರ್ವಥಾ ಚಿಂತಿಸಬೇಡ, ನಿನ್ನ ಮಸ್ತಕದ ಮೇಲೆ ನನ್ನ ವರದಹಸ್ತವಿರುತ್ತದೆಂದು ನಿಶ್ಚಯವಾಗಿ ತಿಳಿದುಕೋ. ಕಾರ್ಯವನ್ನು ಹ್ಯಾಗೆ ಸಾಧಿಸಬೇಕೆಂಬದು ಆಗ ನಿನಗೆ ತಾನೇ ಸ್ಫೂರ್ತಿಯಾಗುವದು." ಎಂದು ಹೇಳಿದಳು. ಆಗ ಮಹಾರಾಜರಿಗೆ ಎಚ್ಚರವಾಯಿತು. ಸ್ವಪ್ನದ ಸ್ಮರಣದಿಂದ ಅವರಿಗೆ ಬಹಳ ಸಮಾಧಾನವಾಯಿತೆಂದು ಬರೆಯುವ ಕಾರಣವಿಲ್ಲ. ಮಹಾರಾಜರ ಕುಟುಂಬವು ಸ್ವಪ್ನದ ವೃತ್ತಾಂತವನ್ನು ಕೇಳಿ ಪರಮಾನಂದಪಟ್ಟರು. ಹೀಗಿರುವಾಗ ಬೆಳಗಾಯಿತು. ಮಾರ್ಗಶೀರ್ಷ ಶುದ್ಧ ಪಂಚಮಿಯ ದಿವಸವು ಬಂದೊದಗಿತು. ಖಾನನ ಭೆಟ್ಟಿಗೆ ಇನ್ನು ಒಂದು ದಿನದ ಅವಧಿಯು ಮಾತ್ರ ಉಳಿಯಿತು. ಮನುಷ್ಯನು ಎಂಥಧೀರನಿರಲಿ, ಎಂಥ ಚತುರನಿರಲಿ, ಎಂಥ ಪರಾಕ್ರಮಿಯೂ ಸಾಹಸಿಯೂ ಆದವನಿರಲಿ, ಆತನು ದುರ್ಧರ ಪ್ರಸಂಗಕ್ಕೆ ಎದುರಾಗುವ ಪೂರ್ವದಲ್ಲಿ ಆತನ ಚಿತ್ತವು ಕ್ಷೋಭಿಸದೆಯಿರುವದಿಲ್ಲ. ಮಹಾರಾಜರ ಸ್ಥಿತಿಯು ಹೀಗೆಯೇ ಆಗಿತ್ತು. ನೋಡುವವರಿಗೆ ಅವರು, ಇಂಥ ಕಠಿಣ ಪ್ರಸಂಗದಲ್ಲಿಯೂ ಬಹು ಶಾಂತರೂ, ಗಂಭೀರರೂ ಆಗಿರುವಂತೆ ತೋರುತ್ತಿತ್ತು; ಆದರೆ ಮಹಾರಾಜರ ಸ್ಥಿತಿಯು ಹಾಗಿದ್ದಿಲ್ಲ. ನಾಳಿನ ಪ್ರಸಂಗದಲ್ಲಿ ತಮಗೆ ಅಪಯಶಸ್ಸು ಪ್ರಾಪ್ತವಾದರೆ, ತಾವು ಬಹು ಕಷ್ಟಪಟ್ಟು ಸ್ಥಾಪಿಸಿದ್ದ ಸ್ವರಾಜ್ಯದ ಸ್ಥಿತಿಯು ಏನಾಗುವದೋ ಎಂದು ಅವರ ಮನಸ್ಸು ಅತ್ಯಂತ ವ್ಯಗ್ರವಾಗಿತ್ತು.

ಹೀಗೆ ಚಿತ್ತವು ವ್ಯಗ್ರವಾದ ಮಾತ್ರದಿಂದ ಮಹಾರಾಜರು ಕೈಕಾಲು ಗೆಟ್ಟು ಚಿಂತೆಮಾಡುತ್ತ ಕುಳಿತುಕೊಳ್ಳತಕ್ಕವರಿದ್ದಿಲ್ಲ. ಅವರು ಮೇಲೆ ಹೇಳಿದಂತೆ, ತಮ್ಮ ಸೈನಿಕರೂ ಸರದಾರರೂ ಎಲ್ಲೆಲ್ಲಿ ಇರಬೇಕು, ಏನೇನು ಮಾಡಬೇಕು ಎಂಬುದನ್ನು ನಿನ್ನೆಯೇ ಗೊತ್ತುಮಾಡಿದ್ದರು. ಇಂದು ಅವರು ತಮ್ಮ ಕುಟುಂಬದವರ ವ್ಯವಸ್ಥೆಯನ್ನು ಮಾಡತೊಡಗಿದರು. ಜೀಜಾಬಾಯಿಸಾಹೇಬರ, ಹಾಗು ಬಾಲಕನಾದ ಸಂಭಾಜಿಯೇ ಮೊದಲಾದ ಕುಟುಂಬದವರ ಸಂರಕ್ಷಣಕ್ಕೆ, ಸುರನೀಸ–ವಾಕನೀಸರನ್ನು ನಿಯಮಿಸಿ, ಅವರನ್ನು ಕುರಿತು—"ನಾವು ಕೈಹಾಕಿದ ಕಾರ್ಯದಲ್ಲಿ ಅಂಬಾಭವಾನಿಯು ಯಶಸ್ಸನ್ನು ಕೊಟ್ಟೇಕೊಡುವಳು. ಅಕಸ್ಮಾತ್ತಾಗಿ ದುರ್ದೈವದಿಂದ ಅಂಥ

ವಿಪರೀತ ಪ್ರಸಂಗವು ಒದಗಿದಲ್ಲಿ, ನೀವು ಕೈಕಾಲುಗೆಡಬಾರದು. ನಾವು ಈಗ ಯೋಚಿಸಿರುವಂತೆ ಶತ್ರುವನ್ನು ಮಣ್ಣುಗೂಡಿಸಿ ಸ್ವರಾಜ್ಯವನ್ನು ರಕ್ಷಿಸಿ ಕೊಳ್ಳಬೇಕು," ಎಂದು ಹೇಳಿದರು. ಮಹಾರಾಜರ ಈ ಮಾತುಗಳು ಸ್ವಲ್ಪವಾಗಿದ್ದರೂ ಅವು ಅತ್ಯಂತ ಅರ್ಥ ಪೂರ್ಣವಾಗಿದ್ದು, ಅವುಗಳಲ್ಲಿ ಮಹಾರಾಜರ ಅಂತಃಕರಣವು ಪ್ರತಿಬಿಂಬವಾಗಿತ್ತು. ಆ ಮಾತುಗಳನ್ನು ಕೇಳಿ ಪ್ರತಿಯೊಬ್ಬ ವ್ಯಕ್ತಿಗೆ ಆಶ್ಚರ್ಯವಾಯಿತು. ಅದರಲ್ಲಿ "ಅಕಸ್ಮಾತ್ ದುರ್ದೈವದಿಂದ ಅಂಥ ವಿಪರೀತ ಪ್ರಸಂಗವು ಒದಗಿದರೆ" ಎಂಬ ಮಾತನ್ನು ಕೇಳಿದ ಕೂಡಲೆ ಎಲ್ಲರ ಮೈಮೇಲಿನ ಕೂದಲುಗಳು ನೆಟ್ಟಗಾದವು. ಎಲ್ಲ ವ್ಯವಸ್ಥೆಯನ್ನು ಅತ್ಯುತ್ತಮರೀತಿಯಿಂದ ಮಾಡಿದ್ದು, ಅಂಬಾಬಾಯಿಯ ಅಭಯ ವಚನವಿದ್ದು, ಜೀಜಾಬಾಯಿಯವರ ಪೂರ್ಣವಾದ ಆಶೀರ್ವಾದ ವನ್ನು ಪಡೆದಿದ್ದು ಮಹಾರಾಜರು ಹೀಗೆ ಮಾತಾಡುವದು ಎಲ್ಲರಿಗೂ ವಿಲಕ್ಷಣವಾಗಿ ತೋರಿತು. ಅವರು ಮಹಾರಾಜರ ಅಮಂಗಲದ ಮಾತನ್ನು ನಿಷೇಧಿಸುವದಕ್ಕಾಗಿ ಅವರನ್ನು ಕುರಿತು—"ಮಹಾರಾಜ, ತಮ್ಮ ಪುಣ್ಯ ಪ್ರತಾಪದಿಂದ ಯಾವತ್ತು ಕಾರ್ಯಗಳು ಈ ವರೆಗೆ ಸುಸೂತ್ರವಾಗಿ ಸಾಧಿಸುತ್ತ ಬಂದಂತೆ, ಈಗಿನ ಕಾರ್ಯವಾದರೂ ನಿರ್ವಿಘ್ನವಾಗಿ ಸಾಧಿಸು ವದು. ಬಂದ ಗಂಡಾಂತರವು ಕ್ಷಣದಲ್ಲಿ ದೂರವಾಗುವದು. ತಮ್ಮ ಮುಂದೆ ಆ ನರಪಶುವಿನ ಪಾಡೇನು? ಭವಾನಿಯ ಕೃಪಾಪ್ರಸಾದವು ವ್ಯರ್ಥವಾದದ್ದೇ? ತಾವು ಚಿಂತಿಸುವದೇಕೆ? ವಿಕಲ್ಪವನ್ನು ಭಾವಿಸುವ ದೇಕೆ? ಆ ಮದೋನ್ಮತ್ತವಾದ ಆನೆಯಮೇಲೆ ಮುಗಿಬಿದ್ದು ಯಾವಾಗ ಅದರ ರುಂಡವನ್ನು ತುಂಡರಿಸಿ ಭವಾನೀಮಾತೆಯ ಚರಣಕ್ಕೆ ಅರ್ಪಿಸೇ ವೆನ್ನುವ ಹಾಗೆ ನಮಗಾಗಿದೆ" ಎಂದು ನುಡಿದರು.

ತಮ್ಮ ಜನರ ಈ ಅಂತಃಕರಣದ ಆವೇಶದ ಮಾತುಗಳನ್ನು ಕೇಳಿ ಮಹಾರಾಜರಿಗೆ ಬಹಳ ಸಂತೋಷವಾಯಿತು. ಅವರು ತಮ್ಮ ಆ ಸ್ವಾಮಿನಿಷ್ಠ ಸೇವಕರನ್ನು ಕುರಿತು—"ನೀವೆಲ್ಲರೂ ಶೂರರೂ, ಪರಾಕ್ರಮಿ ಗಳೂ ಇರುವಿರಿ. ನೀವು ಇಲ್ಲಿಯವರೆಗೆ ನನಗೆ ಸಹಾಯ ಮಾಡುತ್ತ ಬಂದದ್ದರಿಂದಲೇ ಸ್ವರಾಜ್ಯದ ಸ್ಥಾಪನೆಯಾಗಿ ಅದು ಬೆಳವಣಿಗೆ ಹೊಂದು ತ್ತಲಿದೆ. ನನ್ನೊಬ್ಬನಿಂದೇನಾಗುತ್ತಿತ್ತು? ನಿಮ್ಮ ಕರ್ತೃತ್ವ ಶಕ್ತಿಯಲ್ಲಿ

ನಮ್ಮ ಸಂಪೂರ್ಣ ವಿಶ್ವಾಸವಿರುತ್ತದೆ. ನಿಮ್ಮ ಮುಂದೆ ಆ ಯವನರ ಪಾಡೇನು? ನಮ್ಮ ದೇವಸ್ಥಾನಗಳನ್ನು ಹಾಳುಮಾಡುತ್ತ ವಿಜಾಪುರದಿಂದ ಬಂದಿದ್ದ ಆ ಉನ್ಮತ್ತನ ಭೆಟ್ಟಿಯಾಗುವದೂ, ಆತನೊಡನೆ ಮಾತಾಡಿ ನಾಲಿಗೆಯನ್ನು ಅಪವಿತ್ರವಾಗಿ ಮಾಡಿಕೊಳ್ಳುವದೂ ನಮಗೆ ಪರಮಲಾಂಛನವಾಗಿರುವದು; ಆದರೆ ಮಾಡುವದೇನು? ಪ್ರಸಂಗವೇ ಹಾಗೆ ಬಂದೊದಗಿರುತ್ತದೆ. ಆಗಲಿ ನಾನು ಹೇಳಿದಂತೆ, ಮೋರೆ ನೋಡಬಾರದವನ ಕೈಕಾಲುಗಳನ್ನು ಈಗ ಕಟ್ಟಿಕೊಳ್ಳಬೇಕಾಗಿದೆ. ಪಂಢರಿಯ ವಿಠೋಬರಾಯನ ಮೇಲೆ ಕೈಮಾಡಿದ ಈ ದುಷ್ಟನ ಸ್ವಾಗತಕ್ಕಾಗಿ ಮಂಟಪವನ್ನು ಶೃಂಗರಿಸುವಾಗ ನಮ್ಮ ಚಿತ್ತಕ್ಕೆ ಸುಖವಾಗುತ್ತಿರಬಹುದೆ? ಆದರೆ ಉತ್ತಮ ಬೆಳೆ ಬರುವದಕ್ಕಾಗಿ ಹೊಲಸು ಗೊಬ್ಬರವನ್ನು ಹಾಕಿ ಭೂಮಿಯ ಸತ್ವವನ್ನು ಹೆಚ್ಚಿಸಬೇಕಾದಂತೆ, ಈಗ ನಾವು ಮಾಡಿ ನಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ನಾನು ಮಾಡುವದನ್ನೆಲ್ಲ ನಿಮ್ಮ ಸಹಾಯದಿಂದಲೇ ಮಾಡುವೆನು; ಮತ್ತು ನಿಮ್ಮ ಸಲುವಾಗಿಯೇ ಮಾಡುವೆನು. ನಿಮ್ಮ ಅನುಕೂಲ್ಯವಿಲ್ಲದಿದ್ದರೆ ಯಾವಕಾರ್ಯವೂ ನನ್ನಿಂದ ಸಾಧಿಸುತ್ತಿದ್ದಿಲ್ಲ; ಆದ್ದರಿಂದ, ನೀವೆಲ್ಲರೂ ಈಗ ಜೀವದಹಂಗು ದೊರೆದು ಆವೇಶದಿಂದ ಹೆಣಗಬೇಕು. ಖಾನನು ಮೋಸಮಾಡುವುದಂತೂ ನಿಶ್ಚಯವು; ಮೋಸಮಾಡದೆ ಆತನು ಸರಳತನದಿಂದ ನಡೆದರೆ ಯಾವ ಗೊಂದಲವೂ ಇಲ್ಲ. ಆತನು ಮೋಸ ಮಾಡಿದರೆ ನಾವು ನಿಶ್ಚಯವಾಗಿ ಅವನನ್ನು ಗೊತ್ತಿಗೆ ಹಚ್ಚುವೆವು. ಕೂಡಲೆ ನೀವೂ ನಿಮ್ಮ ಕಾಯಕವನ್ನು ನಡೆಸಿರಿ. ನಮ್ಮ ಅಸ್ತವ್ಯಸ್ತವಾದರೂ ನಿಮ್ಮ ಕರ್ತವ್ಯವನ್ನು ನೀವುಮಾಡಿ ಸ್ವರಾಜ್ಯವನ್ನು ಉಳಿಸಿಕೊಳ್ಳಿರಿ. ಖಾನನನ್ನೂ ಖಾನನ ಜನರನ್ನೂ ತಿರುಗಿ ವಿಜಾಪುರಕ್ಕೆ ಹೋಗಗೊಡದೆ, ಅವರನ್ನು ತುಂಡರಿಸಿ ಚಲ್ಲಿರಿ. ರಾಜ್ಯವು ಅಭಿವೃದ್ಧವಾದಂತೆ, ನಿಮ್ಮ ಅಭಿವೃದ್ಧಿಯಾಗುವದು. ರಾಜ್ಯವು ನಿಮ್ಮದು, ನಾನು ನಿಮಿತ್ತಮಾತ್ರನು!

ಈ ಮೇರೆಗೆ ನುಡಿದು ಮಹಾರಾಜರು ಎಲ್ಲ ವ್ಯವಸ್ಥೆಯನ್ನು ಮತ್ತೊಮ್ಮೆ ಎಲ್ಲರ ಮುಂದೆ ಹೇಳಿ, ಎಲ್ಲರನ್ನು ಕರೆಸಿ ತಾವು ಭವಾನೀ ಮಾತೆಯ ಸನ್ನಿಧಿಗೆ ಹೋಗಿ ಆಕೆಯ ಧ್ಯಾನಮಾಡುತ್ತ ಕುಳಿತುಕೊಂಡರು. ಮಹಾರಾಜರ ಸ್ವಜನಾಭಿಮಾನವು, ವಿಶೇಷವಾಗಿ ಕರ್ತವ್ಯನಿಷ್ಠುರ ಅಭಿ

ಮಾನವು ಬಹು ಬಲವತ್ತರವಾದದ್ದೆಂಬದನ್ನು ವಾಚಕರು ಹಲವು ಪ್ರಸಂಗಗಳಲ್ಲಿ ಅರಿತಿರುವರು. ತಮ್ಮ ಪ್ರಾಣರಕ್ಷಣಮಾಡಿದ, ಹಾಗು ಖಾನನ ನಿಜವಾದ ಹೃದ್ಗತವನ್ನು ಅರಿತುಕೊಳ್ಳುವ ಪರಮ ಸಾಹಸದ ಕಾರ್ಯದಲ್ಲಿ ಕಾರಾಗೃಹವಾಸಕ್ಕೆ ಗುರಿಯಾದ ಹೈಮವತಿಯ ಸ್ಮರಣದಿಂದ ಅವರ ಚಿತ್ತವು ಅಸ್ವಸ್ಥವಾಯಿತು. ಆ ಸಾಧ್ವಿಯ ಕಾರಾಗೃಹವಿಮೋಚನಕ್ಕೆ ಏನು ಉಪಾಯಮಾಡಬೇಕೆಂದು ಅವರು ಯೋಚಿಸಹತ್ತಿದರು. ಹೀಗೆ ಸ್ವಜನರ ಕಷ್ಟದ ಸ್ಮರಣದಿಂದ ಮಹಾರಾಜರ ಚಿತ್ತವು ಚಂಚಲವಾಗಲು, ಅವರು ದೇವಿಯ ಸನ್ನಿಧಿಯಿಂದ ಹೊರಟು ಹೋಗಿ ಅಂತರ್ಗೃಹವನ್ನು ಪ್ರವೇಶಿಸಿದರು. ತಮಗೊದಗಿದ ಗಂಡಾಂತರದ ಚಿಂತೆಗಿಂತ ಹೈಮವತಿಯ ಕಾರಾಗೃಹವಾಸದ ಚಿಂತೆಯು ಅವರನ್ನು ಹೆಚ್ಚು ಬಾಧಿಸಹತ್ತಿತು. ಅವರಿಗೆ ನಿದ್ದೆ ಬರಲೊಲ್ಲದು; ಯಾವ ಉಪಾಯವೂ ತೋಚಲೊಲ್ಲದು. ಹೀಗಿರುವಾಗ ಅತ್ತ ಜೀಜಾಬಾಯಿಯವರೂ ಚಿಂತೆಗೊಳಗಾಗಿದ್ದರು. ಎಷ್ಟಾದರೂ ತಾಯಿಯ ಕರಳು; ಗುಣಾಢ್ಯನೂ, ಮಹಾತೇಜಸ್ವಿಯೂ, ಭಗವದ್ಭಕ್ತನೂ ಆದ ಒಬ್ಬನೇ ಒಬ್ಬ ಮಗನು ನಾಳೆ ಸಂಕಟಕ್ಕೆ ಗುರಿಯಾಗುತ್ತಿರಲು, ಅವರಿಗೆ ನಿದ್ದೆಯಾದರೂ ಹೇಗೆ ಬರಬೇಕು? ತಮ್ಮ ಮಗನಿಗೆ ನಿದ್ದೆಹತ್ತಿರುವದೋ ಆತನೂ ತನ್ನಂತೆ ಎಚ್ಚತ್ತಿರುವನೊ, ಎಂಬದನ್ನು ನೋಡಿಬರುವದಕ್ಕಾಗಿ ಅವರು ಒಬ್ಬ ದಾಸಿಯನ್ನು ಕಳಿಸಿದರು. ಮಹಾರಾಜರು ತಮ್ಮ ತಾಯಿಯವರಿಗೆ ಇನ್ನೂ ನಿದ್ದೆಬಾರದಿರುವದನ್ನು ಕೇಳಿ ಅಸಮಾಧಾನಪಟ್ಟು, ಅವರನ್ನು ಸಮಾಧಾನಗೊಳಿಸುವದಕ್ಕಾಗಿ ಅವರ ಬಳಿಗೆ ಹೋದರು. ಮಗನು ಬಂದದ್ದನ್ನು ನೋಡಿ ಜೀಜಾಬಾಯಿಯವರು "ಶಿವಬಾ, ನೀನೇಕೆ ಬಂದೆ? ನನಗೆ ನಿದ್ದೆಬಾರದಿರಲು, ನೀನಾದರೂ ಮಲಗಿರುವೆಯೋ ಇಲ್ಲವೋ ಎಂಬದನ್ನು ನೋಡಿಬರುವದಕ್ಕೆ ಸುಮ್ಮನೆ ರಕಮಾಯಿಯನ್ನು ಕಳಿಸಿದ್ದೆನು. ನಿನಗೂ ನಿದ್ದೆ ಬರಲೊಲ್ಲದೇನು?" ಎಂದು ಕೇಳಿದರು. ಅದಕ್ಕೆ ಮಹಾರಾಜರು—"ನಿದ್ದೆ ಬಾರದಹಾಗೆ ಆಗಿರುತ್ತದೆಂಬದೇನೋ ನಿಜ; ಆದರೆ ನಾಳೆ ಏನಾದೀತು, ಹ್ಯಾಗೆ ಮಾಡಬೇಕು, ಎಂಬ ಯೋಚನೆಯಿಂದ ನನಗೆ ನಿದ್ದೆ ಬರಲೊಲ್ಲದೆನ್ನುವಹಾಗಿಲ್ಲ. ನಾಳೆ ಏನು ಮಾಡಬೇಕು, ಖಾನನೊಡನೆ ಹ್ಯಾಗೆ ನಡಕೊಳ್ಳಬೇಕು, ಎಂಬದರ ನಿಶ್ಚಯವಾಗಿ,

ಹೋಗಿದೆ. ಅದರ ಸಂಬಂಧದಿಂದ ಯಾವ ಯೋಚನೆಯನ್ನೂ ಮಾಡುವ ಹಾಗಿಲ್ಲ; ಆದರೆ ನನ್ನ ಪ್ರಾಣರಕ್ಷಣಮಾಡಿದ, ಹಾಗೂ ನನಗೆ ಸಹಾಯ ಮಾಡುವದಕ್ಕಾಗಿ ಕಾರಾಗೃಹವಾಸದ ಕಷ್ಟವನ್ನು ಭೋಗಿಸುತ್ತಿರುವ ಹೈಮವತಿಯ ವ್ಯವಸ್ಥೆಯೇನಾಗಿರುವದೆಂಬದು ತಿಳಿಯದ್ದರಿಂದ ನನ್ನ ಮನಸ್ಸು ವ್ಯಗ್ರವಾಗಿ ನಿದ್ರೆಯು ಬಾರದಂತಾಗಿದೆ. ಅವ್ವಾ, ಇಷ್ಟು ಹೊತ್ತಾದರೂ ನೀವು ಯಾಕೆ ಎಚ್ಚತ್ತಿರುವಿರಿ?" ಎಂದು ಕೇಳಲು, ಜೀಜಾ ಬಾಯಿಯವರು—ಅಪ್ಪಾ, ನಾಳಿನ ಪ್ರಸಂಗದಲ್ಲಿ ನಿನಗೆ ಪೂರ್ಣಯಶ ಸ್ಸನ್ನು ಕೊಡುವದಕ್ಕಾಗಿ ನಾನು ಅಂಬಾಬಾಯಿಯನ್ನು ಪ್ರಾರ್ಥಿಸಿದ್ದೇನೆ. ಈವರೆಗೆ ಆಗಿರುವ ಆಕೆಯ ಎಲ್ಲ ದೃಷ್ಟಾಂತಗಳ ಮೇಲಿಂದ ನಾವು ಚಿಂತೆ ಮಾಡುವ ಕಾರಣವಿಲ್ಲ. ಹೀಗಿದ್ದರೂ. ಅದು ತಾಯಿಯಕರಳು, ಅಸಮಾ ಧಾನವಾಗದೆ ಹೇಗೆ ಹೋದೀತು? ಆ ದುಷ್ಟ ಅಫಜುಲನು ನನ್ನ ಸಂಭಾಜಿ ಯನ್ನು ವಿಶ್ವಾಸಘಾತದಿಂದ ಕೊಂದದ್ದನ್ನು ನೆನಿಸಿ, ನಾಳೆ ಅದರ ಸೇಡು ತೀರಿಸಿಕೊಳ್ಳುವ ಪ್ರಸಂಗವು ನಿನಗೆ ಒದಗಿರಲು, ಏನಾಗುವದೋ ಎಂಬ ಬಗ್ಗೆ ನನ್ನ ಜೀವವು ತಳಮಳಿಸುತ್ತದೆ, ಎರಡನೆಯದೇನೂ ಇಲ್ಲ.

ತನ್ನ ಅಣ್ಣನಾದ ಸಂಭಾಜಿಯನ್ನು ಅಫಜುಲಖಾನನು ವಿಶ್ವಾಸಘಾತ ದಿಂದ ಕೊಂದದ್ದನ್ನು ತಾಯಿಯ ಮುಖದಿಂದ ಕೇಳಿದಕೂಡಲೆ, ಮಹಾ ರಾಜರು ಸಂತಾಪಗೊಂಡರು. ಅವರು ಕೂಡಲೆ ತಾಯಿಯನ್ನು ಕುರಿತು— "ಆಯಿಸಾಹೇಬ, ನೀವು ಅದರ ಚಿಂತೆಯನ್ನು ಬಿಡಿರಿ. ಖಾನನು ಶಂಭೂ ಅಣ್ಣನನ್ನು ಕೊಂದ ಸೇಡು ನಾನು ನಾಳೆ ನಿಶ್ಚಯವಾಗಿ ತೀರಿಸಿ ಕೊಳ್ಳುತ್ತೇನೆ. ಈಗ ತಾನಾಗಿ ಒದಗಿರುವ ಬಂಗಾರದಂಥ ಪ್ರಸಂಗವನ್ನು ನಾನು ವ್ಯರ್ಥ ಹೋಗಗೊಡುವೆನೆ? ನಿಮಗೆ ಅಣ್ಣನ ನೆನಪು ಯಾವಾ ಗಲೂ ಆಗುತ್ತಿರಬಹುದು; ಆದರೆ ಖಾನನು ವಿಜಾಪುರದಿಂದ ಹೊರಟು ಬಂದಾಗಿನಿಂದ ನನ್ನ ಮನಸ್ಸಿನಲ್ಲಿ ಅದು ಕಟೆಯುತ್ತಲಿದೆ. ಖಾನನು ನಿಶ್ಚಯವಾಗಿ ಮೋಸಮಾಡುವನೆಂಬ ಮಾತು ನನಗೆ ಮೊದಲಿಗೇ ಗೊತ್ತಾ ಗಿದೆ. ಆತನ ದ್ರೋಹದ ನಡತೆಗಳು ಒಂದೇ ಎರಡೇ, ನನಗೆ ಹಲವು ಗೊತ್ತಿರುವವು; ಆದರೆ ಜನರ ತಪ್ಪುತಿಳುವಳಿಕೆಯಾಗಿ ಅವರು ನಿಷ್ಕಾರಣ ನನಗೆ ಮರೆಮೋಸದ ಅಪವಾದವಿಡಬಾರದೆಂದು ನಾನು ಇಷ್ಟು ಎಚ್ಚರ

ಪಡುವೆನು. ಚಂದ್ರರಾವ ಮೋರೆಯ ಸಂಬಂಧದಿಂದ ನೋಡಿದಿರೋ ಇಲ್ಲವೋ? ನಿಷ್ಕಾರಣವಾಗಿ ನಾನು ಎಂಥ ಅಪವಾದಕ್ಕೆ ಗುರಿಯಾಗ ಬೇಕಾಗಿದೆ? ಖಾನನು ದೊಡ್ಡ ಮಹಾರಾಜರ (ತಮ್ಮ ತಂದೆಯವರ) ಸಂಗಡಲೂ ಮೋಸದಿಂದಲೇ ನಡೆದುಕೊಳ್ಳುವನು. ಹೊರ ಹೊರಗೆ ಮಾತ್ರ ಸ್ನೇಹವನ್ನು ತೋರಿಸುವನು. ಅವರೂ ತಾನೂ ಒಂದೇ ಗಾದಿಯ ನೌಕರರಂತೆ! ಅಹಹ!! ಧರ್ಮದ್ವೇಷಿಗಳೂ, ಗೋ–ಬ್ರಾಹ್ಮಣ ಘಾತ ಕರೂ ಆದವರ ನೌಕರರೆನಿಸಿಕೊಳ್ಳುವ ನಮ್ಮ ಕಲಂಕವು ಎಂದು ದೂರ ವಾದೀತು! ಅಕ್ಕಾ, ಅಲ್ಲಿ ನೋಡು, ಶಂಭು ಅಣ್ಣನು ನನ್ನೆದುರಿಗೆ ನಿಂತು ಕೊಂಡು ನಗುತ್ತಲಿದ್ದಾನೆ. "ಅಣ್ಣಾ! ಅಣ್ಣಾ! ನಾನು ನಿಶ್ಚಯವಾಗಿ ನಿನ್ನ ಕೊಲೆಯ ಸೇಡನ್ನು ನಾಳೆ ತೀರಿಸಿಕೊಳ್ಳುವೆನು; ಅದಕ್ಕಾಗಿ ಶಂಕಿಸ ಬೇಡ" ಎಂದು ನುಡಿಯುತ್ತ, ಮಹಾರಾಜರು ಒಮ್ಮಿಂದೊಮ್ಮೆ ಭೂಮಿಯ ಮೇಲೆ ದೊಪ್ಪನೆ ಬಿದ್ದರು. ಅರ್ಧತಾಸಿನವರೆಗೆ ಅವರು ಹಾಗೆಯೇ ಬಿದ್ದು ಕೊಂಡಿದ್ದರು. ಮಗನು ಹೀಗೆ ಬಿದ್ದುಕೊಳ್ಳುವದು ಜೀಜಾಬಾಯಿ ಸಾಹೇ ಬರಿಗೆ ಹೊಸದಿದ್ದಿಲ್ಲ; ಅಂಬಾಭವಾನಿಯ ಸಂಚಾರವಾಗುವ ಮೊದಲು ಮಹಾರಾಜರು ಹೀಗೆಯೇ ಬೀಳುತ್ತಲಿದ್ದರು; ಆದ್ದರಿಂದ ಜೀಜಾಬಾಯಿ ಸಾಹೇಬರಿಗೆ ಅದರಿಂದ ಅಸಮಾಧಾನವಾಗಲಿಲ್ಲ. ಮುಂದೆ ಸ್ವಲ್ಪ ಹೊತ್ತಿ ನಲ್ಲಿ ಮಹಾರಾಜರು ಎದ್ದು ತಾಯಿಯನ್ನು ಕುರಿತು—"ಅಹಹ! ಆಯಿ ಸಾಹೇಬ, ಅಂಬಾಭವಾನಿಯು ಪುನಃ ನನಗೆ ದರ್ಶನವಿತ್ತು, ತನ್ನ ವರದ ಹಸ್ತವನ್ನು ನನ್ನ ಮಸ್ತಕದ ಮೇಲಿಟ್ಟಳು. ಆಕೆಯು ನನಗೆ ಸ್ಪಷ್ಟವಾಗಿ— "ಬಾಳಾ, ನಿಶ್ಚಯವಾಗಿ ಕಾರ್ಯಸಿದ್ಧಿಯಾಗುವದು. ಹೈಮವತಿಯ ಚಿಂತೆಯು ನಿನಗೆ ಬೇಡ, ಆಕೆಯು ಸುರಕ್ಷಿತವಾಗಿ ನಿನ್ನ ಬಳಿಗೆ ಬರುವಳು. ಯಾವ ಚಿಂತೆಯನ್ನೂ ನೀನು ಮಾಡಕೂಡದು" ಎಂದು ಹೇಳಿದಳು. ಅಹಹ! ಆ ದಿವ್ಯರೂಪವು ಈಗಲೂ ನನ್ನ ಕಣ್ಣಿಗೆ ಕಟ್ಟಿರುತ್ತದೆ. ಆ ಲೋಕಮಾತೆಯ ಮಂಜುಲವಾಣಿಯು ಇನ್ನೂ ನನ್ನ ಕಿವಿಯಲ್ಲಿ ದಿಮಿ ಗುಟ್ಟುತ್ತವೆ! ಇನ್ನು ನಾನು ಕೆಲವು ಹೊತ್ತು ಸ್ವಸ್ಥವಾಗಿ ಮಲಗಿಕೊಳ್ಳು ವೆನು," ಎಂದು ಹೇಳಲು, ಜೀಜಾಬಾಯಿಯವರು—"ಶಿವಬಾ, ಇಲ್ಲಿ ನನ್ನ ತೊಡೆಯಮೇಲೆ ತಲೆಯಿಟ್ಟು ಸ್ವಸ್ಥವಾಗಿ ಮಲಗಿಕೋ; ಅದರಿಂದ ನನಗೆ

ಬಹಳ ಸಮಾಧಾನವಾಗುವದು," ಎಂದು ಹೇಳಲು, ಮಹಾರಾಜರು ತಾಯಿಯ ತೊಡೆಯ ಮೇಲೆ ತಲೆಯಿಟ್ಟು ಸ್ವಸ್ಥವಾಗಿ ಮಲಗಿಕೊಂಡರು. ಕೂಡಲೆ ಅವರಿಗೆ ಗಾಢವಾದ ನಿದ್ರೆಯು ಹತ್ತಿತು.

೧೮ನೆಯ ಪ್ರಕರಣ.

ಸಮರ್ಥರ ಕೃಪಾಪ್ರಸಾದವು

ಮಹಾರಾಜರು ಬಹಳಹೊತ್ತು ಸ್ವಸ್ಥವಾಗಿ ನಿದ್ದೆ ಮಾಡಿದರು. ಜೀಜಾಬಾಯಿಸಾಹೇಬರು ಮಗನನ್ನು ಬಹು ಕೌತುಕದಿಂದ ನೋಡತ್ತಲಿದ್ದರು. ತಮ್ಮ ಹೊಟ್ಟೆಯಲ್ಲಿ ಈ ವೀರ ಪುರುಷನು ಉತ್ಪನ್ನವಾದದ್ದು ಎಂಥ ಪುಣ್ಯವೆಂದು ಅವರು ಕ್ಷಣಮಾತ್ರ ಅಭಿಮಾನ ತಾಳಿದರು. ಆ ಪುತ್ರರತ್ನವು ಸ್ವಧರ್ಮದ ಹಾಗು ಸ್ವದೇಶದ ಉದ್ಧಾರಕ್ಕಾಗಿ ದೀರ್ಘ ಪ್ರಯತ್ನ ಮಾಡುತ್ತಿರುವದನ್ನೂ, ಅವರ ಯೋಗದಿಂದ ಸಹಜವಾಗಿ ತಮ್ಮ ಕುಲದ ಉದ್ಧಾರವಾಗುತ್ತಿರುವದನ್ನು ಸ್ಮರಿಸಿ, ಅವರಿಗೆ ಪರಮಾನಂದವಾಯಿತು. ಈವರೆಗೆ ಮಹಾರಾಜರು ಎಷ್ಟೋ ಜನ ದುರ್ಬಲರನ್ನು ದುಃಖಮುಕ್ತಮಾಡಿದ್ದರು. ಅದನ್ನು ನೆನಿಸಿ ಜೀಜಾಬಾಯಿಯವರು ಬಹು ಸಮಾಧಾನಪಟ್ಟರು; ಆದರೆ ಶುದ್ಧಾನಂದದ ಅನುಭವವು ಸಾಂಸಾರಿಕರಿಗೆ ಕ್ಷಣಮಾತ್ರ ಆಗುವದೆಂಬ ಮಾತು ಸುಳ್ಳಲ್ಲ. ಜೀಜಾಬಾಯಿಯವರಿಗೆ ಆದ ಆನಂದವು ಕ್ಷಣಿಕವಾಯಿತು. ಪ್ರಕೃತದಲ್ಲಿ ಒದಗಿದ ಕಠಿಣಪ್ರಸಂಗದ ಸ್ಮರಣವಾಗಲು, ಅವರ ಆನಂದಕ್ಕೆ ಭಂಗ ಒದಗಿ, ಅವರ ಮನಸ್ಸು ಚಡಪಡಿಸಹತ್ತಿತು. ತಮ್ಮ ಮಗನಿಗೊದಗಿದ ಸಂಕಟಕ್ಕಾಗಿ ಅವರ ಮನಸ್ಸು ಭಯಗ್ರಸ್ತವಾಗಿರುತ್ತಿದ್ದರೂ, ಹೊರಗೆ ಅದನ್ನು ಅವರು ತೋರಗೊಡದೆ ಮಗನಿಗೆ ಧೈರ್ಯವನ್ನು ಹೇಳುತ್ತಲಿದ್ದರು. ವೀರಮಾತೆಯ ಲಕ್ಷಣವೇ ಇದು. ವೀರಜನನಿಯರು ಬೇಕಾದಂಥ ಸಂಕಟ ಒದಗಲಿ, ತಮ್ಮ ಮಕ್ಕಳನ್ನು ಸಂಕಟಕ್ಕೆ ಎದುರಾಗಲು, ಪ್ರೋತ್ಸಾಹಿಸುವರಲ್ಲದೆ ಮೋಹಗ್ರಸ್ತರಾಗಿ ಮಕ್ಕಳ ಕೈಕಾಲುಗೆಡಿಸಿ ಅವರನ್ನು ಕರ್ತವ್ಯಪರಾಙ್ಮುಖರನ್ನು ಮಾಡುವ

ದಿಲ್ಲ; ಆದರೆ ಇದರಿಂದ ಆ ವೀರ ಜನನಿಯರಿಗೆ ದುಃಖವಾಗುವದಿಲ್ಲೆಂದು ಮಾತ್ರ ತಿಳಿಯಲಾಗದು. ಜೀಜಾಬಾಯಿಯವರ ಅಂತಃಕರಣಕ್ಕೆ ಯಾವಾಗಲೂ ತಾಪವಾಗುತ್ತಿತ್ತು. ಒಬ್ಬರೇ ಇದ್ದಾಗ ಅವರ ಆ ತಾಪವು ಹೆಚ್ಚುತ್ತಿತ್ತು. ಈಗಂತು ಸಂಕಟಸಮಯವು ತೀರ ಸಮೀಪಿಸಿದ್ದು, ಆ ಪ್ರಾಣಸಂಕಟಕ್ಕೆ ಗುರಿಯಾಗಿದ್ದ ತಮ್ಮ ಮೋಹದ ಕುಮಾರನು ತೊಡೆಯ ಮೇಲೆ ಸ್ವಸ್ಥ ನಿದ್ದೆಮಾಡುವದನ್ನು ನೋಡಿ, ಅವರ ಅಂತಃಕರಣಕ್ಕೆ ವಿಶೇಷವ್ಯಥೆಯಾಗಹತ್ತಿತು. ಅವರು ಗಹನ ವಿಚಾರದಲ್ಲಿ ತೊಡಗಿ ಚಿಂತಿಸಹತ್ತಿದರು. ಈ ಸ್ಥಿತಿಯಲ್ಲಿ ಮಗನ ಮುಖವನ್ನು ನೋಡುವಾಗ ಅವರ ಅಂತಃಕರಣವು ಉಕ್ಕೇರಿ ನೇತ್ರಗಳು ಅಶ್ರುಪೂರ್ಣವಾಗಲು ಅವರು ನಿಗ್ರಹದಿಂದ ಆ ಅಶ್ರುಗಳನ್ನು ಅಲ್ಲಿಯೇ ಸುಟ್ಟುಬಿಟ್ಟರು!

ಈ ಮೇರೆಗೆ ಜೀಜಾಬಾಯಿಸಾಹೇಬರು ಚಿಂತಾಮಗ್ನರಾಗಿ ಕುಳಿತಿರಲು ಅವರಿಗೆ ಏನೋ ನೆನಪಾಗಿ ಅವರು ತಮ್ಮೊಳಗೆ—"ಇಂಥ ಕಠಿಣ ಪ್ರಸಂಗದಲ್ಲಿ ಶ್ರೀ ಸಮರ್ಥ ರಾಮದಾಸಸ್ವಾಮಿಗಳ ವಿಚಾರವನ್ನು ಕೇಳಿಕೊಳ್ಳುವದಕ್ಕೆ ಪ್ರತಿಬಂಧವಾಗಿರುವದು ಎಷ್ಟು ವಿಚಿತ್ರವು! ಆದರೆ ಸಮರ್ಥರ ಅಪ್ಪಣೆಯನ್ನು ಯಾರು ಉಲ್ಲಂಘಿಸುವರು? ತುಕಾರಾಮ ಮಹಾರಾಜರ ಕೀರ್ತನವನ್ನು ಕೇಳಿ ಶಿವಬಾನು ಸಂಸಾರಕ್ಕೆ ಹೇಸಿ, ಸರ್ವಸಂಗಪರಿತ್ಯಾಗಕ್ಕೆ ಮನಸ್ಸುಮಾಡಲು, ಶ್ರೀ ಸಮರ್ಥರು ಆತನ ಮನಸ್ಸನ್ನು ತಿರುಗಿಸಿ—"ಶಿವಬಾ, ನೀನು ಸಂಸಾರತ್ಯಾಗ ಮಾಡತಕ್ಕದ್ದಲ್ಲ. ಸ್ವಧರ್ಮದ ಹಾಗು ಸ್ವರಾಜ್ಯದ ಉದ್ಧಾರಕ್ಕಾಗಿ ನೀನು ತ್ರಿಕರಣಪೂರ್ವಕವಾಗಿ ಯತ್ನಿಸುವದು ಅವಶ್ಯವಾಗಿದೆ. ಇದು ಕ್ಷತ್ರಿಯನಾದ ನಿನ್ನ ಅವಶ್ಯದ ಧರ್ಮವು. ಈಗ ನೀನು ನಿನ್ನ ಕ್ಷತ್ರಿಯ ಧರ್ಮದ ತ್ಯಾಗಮಾಡಿ, ನಮ್ಮ ಸಹವಾಸದಿಂದ ವೈರಾಗ್ಯ ತಾಳಿದ್ದಕ್ಕೆ ನಿನಗೆ ಶಿಕ್ಷೆಯೇನಂದರೆ—"ನೀನು ಹನ್ನೆರಡು ವರ್ಷ ನಮ್ಮ ದರ್ಶನಕ್ಕೆ ಬರಬಾರದು; ಮತ್ತು ನಮ್ಮ ಆಲೋಚನೆಯನ್ನು ಕೇಳಲು ಯತ್ನಿಸ ಬಾರದು," ಎಂದು ಹೇಳಿದರು. ಶಿವಬಾನು ಬೇಕಾದಷ್ಟು ಹೇಳಿಕೊಂಡನು; ಸಂಕಟಸಮಯದಲ್ಲಿ ಯೋಗ್ಯ ಮಾರ್ಗವನ್ನು ತೋರಿಸುವವರು ನಿಮ್ಮ ಹೊರತು ನನಗೆ ಬೇರೆ ಯಾರೂ ಇಲ್ಲದಿರುವದರಿಂದ, ಇಷ್ಟು ನಿಷ್ಠುರರಾಗಬಾರದೆಂದು ಪರಿಪರಿಯಾಗಿ

ಬೇಡಿಕೊಂಡನು; ಆದರೆ ಸಮರ್ಥರಿಗೆ ದಯ ಬರಲಿಲ್ಲ. ಅವರು—"ನಮ್ಮ ಅಪ್ಪಣೆಯಲ್ಲಿ ಇನ್ನು ಅಂತರವಾಗಲಾರದು. ಈ ಹನ್ನೆರಡು ವರ್ಷದ ಅವಧಿಯಲ್ಲಿ ನೀನು ನನ್ನ ನಾಮೋಚ್ಚಾರವನ್ನು ಕೂಡ ಮಾಡಕೂಡದು!" ಎಂದು ನಿಷ್ಠುರವಾಗಿ ಹೇಳಿಬಿಟ್ಟರು. ಈ ಅವಧಿಯಲ್ಲಿಯೇ ಈಗಿನ ಕಠಿಣ ಪ್ರಸಂಗವು ಒದಗಿರುವದರಿಂದ, ಏನಾಗುವದೋ ಹ್ಯಾಗೆ ತಿಳಿಯಬೇಕು! ಶ್ರೀ ಗುರುವಿನ ತಂತ್ರವನ್ನು ತಿಳಿಯಲು ನಾವು ಅಸಮರ್ಥರಾದ್ದರಿಂದ, ಹೀಗೆ ಆಜ್ಞಾಪಿಸಿದ್ದು ನಮಗೆ ನಿಷ್ಠುರವಾಗಿ ತೋರುತ್ತದೆ; ಆದರೆ ಹೀಗೆ ಆಜ್ಞಾಪಿಸುವದರಲ್ಲಿಯೇ ಶಿವಬಾನ ಕಲ್ಯಾಣವಿರಬಹುದು. ಶ್ರೀ ಭವಾನೀ ಮಾತೆಯಂತೆಯೇ ಶ್ರೀ ಸಮರ್ಥರ ಪೂರ್ಣಕೃಪೆಯೂ ಶಿವಬಾನ ಮೇಲಿರುವದರಿಂದ ಅವರು ಈಗಿನ ಪ್ರಸಂಗದಲ್ಲಿ ನಮ್ಮನ್ನು ಮರೆಯಲಿಕ್ಕಿಲ್ಲವೆಂದು ನಾನು ತಿಳಿದಿದ್ದೆನು. ಶಿವಬಾನು ಶ್ರೀಗುರುವಿನ ಆಜ್ಞೆಯನ್ನು ಅಕ್ಷರಶಃ ಪಾಲಿಸಿರುವನು. ಈಗ ಸರಾಸರಿ ಹನ್ನೆರಡು ವರ್ಷಗಳಾಗುತ್ತ ಬಂದವು; ಆದರೆ ಈ ಅವಧಿಯಲ್ಲಿ ಆತನು ಗುರುಗಳ ನಾಮೋಚ್ಚಾರವನ್ನೂ ಕೂಡ ಮಾಡಿರುವದಿಲ್ಲ. ಹೀಗೆ ಗುರುಗಳ ಆಜ್ಞೆಯಾಗಿರದಿದ್ದರೆ, ಶಿವಬಾನು ಈ ಪ್ರಸಂಗದಲ್ಲಿ ಅವರ ಬಳಿಗೆ ಹತ್ತುಸಾರೆ ಹೋಗಿ ಬರುತ್ತಿದ್ದನು. ಇರಲಿ, ಗುರ್ವಾಜ್ಞೆಯನ್ನು ಶಿವಬಾನು ಪಾಲಿಸಿದ್ದೇ ಯೋಗ್ಯವು; ಆದರೆ ಸಮರ್ಥರು ಆತನನ್ನು ಹ್ಯಾಗೆ ಮರೆತಿರಬಹುದು! ಆತನಿಗೆ ತಮ್ಮ ದರ್ಶನವನ್ನು ಯಾಕೆ ಕೊಟ್ಟಿರಲಿಕ್ಕಿಲ್ಲ! ದರ್ಶನ ಕೊಡದಿದ್ದರೂ, ಯಾರಾದರೊಬ್ಬ ಶಿಷ್ಯರ ಸಂಗಡ ನಾಲ್ಕು ಉಪದೇಶದ ಮಾತುಗಳನ್ನು ಹೇಳಿ ಕಳಿಸಿ, ತೀರ್ಥಪ್ರಸಾದವನ್ನಾದರೂ ಅವರು ಕಳಿಸಬಹುದಾಗಿತ್ತು. ಈಗ ಬೆಳಗಾದ ಕೂಡಲೆ ಶಿವಬಾನು ಹುಲಿಯ ಬಾಯೊಳಗೆ ತಲೆ ಕೊಡಲಿಕ್ಕೆ ಹೋಗುವಂತೆ ಖಾನನ ಬಳಿಗೆ ಹೋಗಬೇಕಾಗಿರಲು, ಇನ್ನೂ ಸಮರ್ಥರ ಕೃಪಾಪ್ರಸಾದವು ದೊರೆಯಲಿಲ್ಲವಲ್ಲ! ಅಂಬಾಬಾಯಿಯ ದೃಷ್ಟಾಂತವಾಗಿರುವದು; ಆದರೆ ಸಮರ್ಥರವೆರಡು ಆಶೀರ್ವಾದ ವಚನಗಳು ಲಭಿಸಿದ್ದರೆ ಎಷ್ಟು ನೆಟ್ಟಗಾಗುತ್ತಿತ್ತು?

ಈ ಮೇರೆಗೆ ಅತ್ಯಂತವಾದ ಗುರುಭಕ್ತಿಯ ಸಥಿಯಿಂದ ಸದ್ಗದಿತಾಂತಃಕರುಣವುಳ್ಳವರಾಗಿದ್ದ ಜೀಜಾಬಾಯಿಯವರ ಮನಸ್ಸಿನಲ್ಲಿ, ಗುರು

ಸ್ಮರಣಪೂರ್ವಕವಾದ ಇಂಥ ವಿಚಾರಗಳು ಬರುತ್ತಲಿದ್ದವು. ಆಗಲವರು, ಸ್ವಧರ್ಮದ, ಹಾಗು ಸ್ವದೇಶದ ಉದ್ಧಾರಕ್ಕಾಗಿ ಅಹೋರಾತ್ರ ಶ್ರಮಬಟ್ಟು ದಣಿದು ತನ್ನ ತೊಡೆಯ ಮೇಲೆ ಸ್ವಸ್ಥವಾಗಿ ಮಲಗಿಕೊಂಡಿದ್ದ ವೀರ ಪುತ್ರನ ಕಡೆಗೆ ನೋಡಿ ನಿಟ್ಟುಸಿರುಗಳನ್ನು ಬಿಡುತ್ತಲಿದ್ದರು; ಆದರೆ ತಾವು ಗಟ್ಟಿಯಾಗಿ ಉಸುರು ಬಿಟ್ಟರೆ, ಅಥವಾ ಸ್ವಲ್ಪ ಅಲ್ಲಾಡಿದರೆ ಮಗನ ನಿದ್ರಾಭಂಗವಾದೀತೆಂದು, ಆ ಪುತ್ರವತ್ಸಲರಾದ ಸಾಧ್ವಿಯವರು ಬಹು ಜಾಗರೂಕತೆಯಿಂದ ವ್ಯವಹರಿಸುತ್ತಿದ್ದರು. ಆ ಕಾಲದಲ್ಲಿ ಆ ತಾಯಿ ಮಕ್ಕಳನ್ನು ಯಾರಾದರೂ ನೋಡಿದ್ದರೆ, ವೀರಜನನಿ–ವೀರಪುತ್ರರ ಸ್ವರೂಪವೂ, ಸಂಬಂಧವೂ, ನಡತೆಯು ಯಾವ ಬಗೆಯದಿರುತ್ತವೆಂಬ ದರ ಪ್ರತ್ಯಕ್ಷ ಅನುಭವವಾಗಬಹುದಾಗಿತ್ತು. ಹೀಗೆ ಆ ಸತ್ಪುತ್ರನು ತನ್ನ ಜನನಿಯ ತೊಡೆಯ ಮೇಲೆ ಸುಖದಿಂದ ನಿದ್ದೆಮಾಡುತ್ತಿರಲು, ಅರುಣೋದಯವಾಯಿತು. ಸೂರ್ಯನ ಆರಕ್ತ ಕಿರಣಗಳು ಪ್ರತಾಪಗಡದ ಗಗನ ಚುಂಬಿತ ಮಸ್ತಕದ ಮೇಲೆ ದೇದೀಪ್ಯಮಾನವಾದ ಸುವರ್ಣರಸದಂತೆ ಪಸರಿಸಿದವು. ಆಗ ಮಹಾರಾಜರು ಕೂಡಲೆ ಎಚ್ಚತ್ತರು. ತಾವು ತಾಯಿಯ ತೊಡೆಯ ಮೇಲೆ ಮಲಗಿದವರು ಗಾಢ ನಿದ್ರೆಹತ್ತಿ ಹಾಗೆಯೇ ಮಲಗಿಬಿಟ್ಟದ್ದಕ್ಕಾಗಿ ಅವರಿಗೆ ಬಹಳ ಆಶ್ಚರ್ಯವಾಯಿತು; ಆದರೆ ಆಶ್ಚರ್ಯಪಡುತ್ತ ಕುಳಿತುಕೊಳ್ಳಲಿಕ್ಕೆ ಅದು ಸಮಯವಿದ್ದಿಲ್ಲ. ಅವರು ತಾಯಿಗೆ ಆಯಾಸವುಂಟು ಮಾಡಿದ್ದಕ್ಕಾಗಿ ಮನಸ್ಸಿನಲ್ಲಿ ಪಶ್ಚಾತ್ತಾಪ ಪಡುತ್ತ ತಾಯಿಯನ್ನು ಕುರಿತು—"ಆಯಿಸಾಹೇಬ, ನೀವು ಹೀಗೆಯೇ ಎಚ್ಚತ್ತು ಕುಳಿತುಕೊಂಡಿರಲ್ಲ, ನನ್ನನ್ನು ಎಬ್ಬಿಸಬೇಕೋ ಇಲ್ಲವೋ" ಎಂದು ಕೇಳಲು ಜೀಜಾಬಾಯಿಸಾಹೇಬರು ಮುಗುಳುನಗೆನಗುತ್ತ ಏನೋ ಮಾತಾಡಬೇಕೆನ್ನುತ್ತಿದ್ದರು; ಅಷ್ಟರಲ್ಲಿ ಅವರಿಬ್ಬರ ತಾಯಿಮಕ್ಕಳಕಿವಿಗೆ, ಉಚ್ಚಸ್ವರದಿಂದ ಯಾರೋ "ಜಯಜಯರಘುವೀರಸಮರ್ಥ" ಎಂದು ಉಚ್ಚರಿಸಿದ್ದು ಇಂಪಾಗಿಯೂ, ಆನಂದಕರವಾಗಿಯೂ ಕೇಳಿಸಿತು. ಹೀಗೆ ಉಚ್ಚರಿಸಿದವರು ಕೂಡಲೆ ರಾಮದಾಸರ "ಮನಸ್ಸಿನ ಶ್ಲೋಕಗಳೊ"ಳಗಿನ ದೊಂದು ಶ್ಲೋಕವನ್ನು ಅನ್ನುತ್ತ ಬರತೊಡಗಿದರು. ದನಿಯು ಅವರಿಬ್ಬರ ಗುರುತಿನದಾಗಿತ್ತು. ಹತ್ತರ ಯಾರೂ ಸೇವಕರಿದ್ದಿಲ್ಲ. ಮಹಾರಾಜರು

ಯಾರನ್ನಾದರೂ ಕರೆದು ವಿಚಾರಿಸಬೇಕೆನ್ನುತ್ತಿರಲು, ಒಬ್ಬ ನೌಕರನು ಹೊರಗಿನಿಂದ ಬಂದು ಮಹಾರಾಜರನ್ನು ಕುರಿತು—"ಶ್ರೀ ಸಮರ್ಥಸ್ವಾಮಿಗಳವರ ಕಡೆಯಿಂದ ಶ್ರೀಧರಗೋಸಾವಿಗಳವರು ಬಂದಿದ್ದಾರೆ" ಎಂದು ಹೇಳಿದನು. ಅದನ್ನು ಕೇಳಿದ ಕೂಡಲೆ ಜೀಜಾಬಾಯಿಯವರ ಮುಖದಲ್ಲಿ ಆಶ್ಚರ್ಯದ ಚಿಹ್ನವು ತೋರಹತ್ತಿತು. ಇದೇ ಈಗ ತಾವು ಸಮರ್ಥರ ಸಂಬಂಧದಿಂದ ವಿಚಾರಮಾಡುತ್ತಿರಲು, ಅವರ ಕಡೆಯಿಂದ ಕರೆಕಳುಹಿದ ಹಾಗೆ ಒಬ್ಬ ಶಿಷ್ಯರು ಬಂದರಲ್ಲ; ಹನ್ನೆರಡು ವರ್ಷಗಳವರೆಗೆ ದರ್ಶನಕ್ಕೂ, ನಾಮೋಚ್ಚಾರಕ್ಕೂ ಪ್ರತಿಬಂಧಿಸಿದ್ದ ಸದ್ಗುರುವು, ಈಗ ಕರುಣಾಳುವಾಗಿ ಇಂಥ ಕಠಿಣಕಾಲದಲ್ಲಿ ಅನುಗ್ರಹಿಸಿದ್ದನ್ನು ಸ್ಮರಿಸಿ ಅವರ ಹೃದಯವು ಭಕ್ತಿರಸಪೂರ್ಣವಾಯಿತು. ''ಸಮರ್ಥರು ಸಮರ್ಥರೆಂಬದೇ ನಿಜವು." ಎಂದು ಮನಸ್ಸಿನಲ್ಲಿ ಅಂದು ಅವರು ಏನೋ ಮಾತಾಡಬೇಕೆನ್ನುತ್ತಿರಲು ಶ್ರೀಧರಸ್ವಾಮಿಗಳು ಅವರ ಬಳಿಗೆ ಬಂದು ಮುಗುಳುನಗೆ ನಗುತ್ತ ಉಚ್ಚಸ್ವರದಿಂದ—

ಸಮರ್ಥಾಚಿಯಾ ಸೇವಕಾ ವಕ್ರಪಾಹೆ।
ಅಸಾಸರ್ವ ಭೂಮಂಡಳೀ ಕೋಣ ಆಹೇ॥
ಜಯಾಚೀಲಿಲಾವರ್ಣಿತೀ ಲೋಕತೀನ್ಹಿ।
ನುಪೇಕ್ಷೀಕದಾರಾಮದಾಸಾಭಿಮಾನೀ॥
ಜಯಜಯ ರಘುವೀರ ಸಮರ್ಥ।

ಹೀಗೆ ನುಡಿಯುತ್ತ ಪ್ರಸನ್ನವದನರಾಗಿ ಎದುರಿಗೆ ಬಂದು ನಿಂತುಕೊಂಡಿದ್ದ ಶ್ರೀ ಗುರುಪುತ್ರರನ್ನು ನೋಡಿ ಆ ತಾಯಿಮಕ್ಕಳಿಗೆ ಪರಮಾನಂದವಾಯಿತು. ಆನಂದದ ಭರದಲ್ಲಿ ಗುರುಪುತ್ರರನ್ನು ನಮಸ್ಕರಿಸುವ ಸ್ಮರಣವು ಕೂಡ ಅವರಿಗೆ ಆಗಲಿಲ್ಲ. ಸ್ವಲ್ಪ ಹೊತ್ತಿನಮೇಲೆ ಅವರ ಆನಂದದ ಭರವು ಕುಗ್ಗಲು, ಅವರು ಎದ್ದು, ಶ್ರೀಧರಗೋಸಾವಿಗಳನ್ನು ವಂದಿಸಿ, ಅವರನ್ನು ಆದರದಿಂದ ಕುಳ್ಳಿರಿಸಿಕೊಂಡರು. ಶ್ರೀಧರಸ್ವಾಮಿಗಳು ಅಂದ ಶ್ಲೋಕದಲ್ಲಿಯ ಗಂಭೀರವಾದ ಅರ್ಥವನ್ನು ಸ್ಮರಿಸಿ ಆ ತಾಯಿ ಮಕ್ಕಳು ಪರಮಾನಂದ ಪಡುತ್ತಲಿದ್ದರು; ಆದರೆ ಆಗ ಕಾಲಹರಣಕ್ಕೆ ಅವಕಾಶವಿದ್ದಿಲ್ಲ. ಆಗ ಮಹಾರಾಜರು ಶ್ರೀಧರಸ್ವಾಮಿಗಳಿಗೆ—''ತಾವು ಸಮರ್ಥರ

ಕೃಪಾಪ್ರಸಾದವನ್ನು ತಂದಿರಬಹುದು, ಅದನ್ನು ಬೇಗನೆ ಕೊಡಬೇಕು. ಇಂಥ ಕಠಿಣಪ್ರಸಂಗದಲ್ಲಿ ಶ್ರೀಸಮರ್ಥರು ಕೃಪಾಪ್ರಸಾದವನ್ನು ಕಳಿಸಿಯೇ ಕಳಿಸುವರೆಂದು ನಾನು ಭಾವಿಸಿದ್ದೆನು; ಆದರೆ ಅದನ್ನು ಯಾರ ಮುಂದೆಯೂ ಆಡಿ ತೋರಿಸಿದ್ದಿಲ್ಲ. ನನ್ನ ಭಾವನೆಯಂತೆ ಗುರುಗಳು ನನ್ನನ್ನು ಅನುಗ್ರಹಿಸಿದರು. ಗುರುಗಳ ಆಜ್ಞೆಯಂತೆ ನಾನು ಅವರ ದರ್ಶನಮಾಡಿಕೊಳ್ಳಲಿಕ್ಕೂ, ಅವರ ನಾಮವನ್ನು ಉಚ್ಚರಿಸಲಿಕ್ಕೂ ಅನಧಿಕಾರಿಯಾಗಿದ್ದರೂ, ವಿಪತ್ಕಾಲದಲ್ಲಿ ಶ್ರೀಗುರುವು ತನ್ನ ಪ್ರಸಾದದಿಂದ ನನ್ನನ್ನು ಪರಿತುಷ್ಟನನ್ನಾಗಿ ಮಾಡಿದರು; ಇದರಲ್ಲಿಯೇ ಎಲ್ಲವೂ ಬಂದು ಹೋಯಿತೆಂದು ನಾನು ತಿಳಿದುಕೊಳ್ಳುತ್ತೇನೆ.” ಎಂದು ನುಡಿಯುವಾಗ ಮಹಾರಾಜರ ಕಣ್ಣುಗಳೊಳಗಿಂದ ನೀರುಗಳು ಉದುರಿದವು. ಅದನ್ನು ನೋಡಿ ಶ್ರೀಧರಸ್ವಾಮಿಗಳು ಕನಿಕರಪಟ್ಟು ಮಹಾರಾಜರನ್ನು ಕುರಿತು—“ರಾಜಾ, ಸಮರ್ಥರು ಮಾಡುವದೆಲ್ಲ ನಿನ್ನ ಹಿತಕ್ಕಾಗಿಯೇ ಎಂಬದನ್ನು ನೀನು ಅರಿಯೆಯಾ? ಹನ್ನೆರಡು ವರ್ಷಗಳವರೆಗೆ ತಮ್ಮ ಗುರುತು ಇಲ್ಲದವರಂತೆ ಇರಬೇಕೆಂದು ಸಮರ್ಥರು ನಿಮಗೆ ಹೇಳಿದ್ದರ ಕಾರಣವನ್ನು ಅವರು ನಿನಗೆ ಆಗ ಹೇಳಿರುವರಲ್ಲವೆ? ನಿನ್ನಂಥ ಕರ್ತೃತ್ವಶಾಲಿಗಳಾದ ಪುರುಷರು ಯಾವ ಕಾರ್ಯವನ್ನು ಕೈಕೊಂಡರೂ ಜಯಶೀಲರಾಗುವಲ್ಲಿ ಸಂಶಯವಿಲ್ಲ. ನೀನು ನಮ್ಮ ಹರಿಗೆ ಬಿದ್ದು ವೈರಾಗ್ಯಶಾಲಿಯಾಗಿದ್ದರೆ ಇಷ್ಟು ಹೊತ್ತಿಗೆ ಮಹಾತಪಸ್ವಿಯಾಗುತ್ತಿದ್ದೆ; ಅಂದಬಳಿಕ ಈ ಸ್ವರಾಜ್ಯಸ್ಥಾಪನೆಯ ಕಾರ್ಯವನ್ನು ಯಾರು ಮಾಡುತ್ತಿದ್ದರು? ಮತ್ತು ಮ್ಲೇಂಛರ ಪುಂಡಾಟಿಕೆಯನ್ನು ಮುರಿಯುವವಕ್ಕೆ ಯಾರು ನಿಲ್ಲುತ್ತಿದ್ದರು? ಈ ಹನ್ನೆರಡು ವರ್ಷದ ಅವಧಿಯಲ್ಲಿ ನಿನ್ನಿಂದ ಎಷ್ಟೋ ಮಹತ್ವದ ರಾಜಕಾರ್ಯಗಳು ಘಟಿಸಿರುತ್ತವೆ. ಹೀಗೆಯೇ ನೀನು ಶ್ರೀ ಗುರುಕೃಪೆಯಿಂದ ಅಭಿವೃದ್ಧಿಯನ್ನು ಹೊಂದುತ್ತ ಹೋಗಿ, ಸ್ವರಾಜ್ಯಸ್ಥಾಪನೆಯ ಕಾರ್ಯವನ್ನು ನೆರವೇರಿಸಿದರೆ ರಾಜಕಾರ್ಯದಲ್ಲಿದ್ದೂ ನೀನು ವೈರಾಗ್ಯಶಾಲಿಯಾಗುವೆ. ನಿನ್ನನ್ನು ವಿದೇಹಿ ಜನಕನಿಗೆ ಹೋಲಿಸಬಹುದು. ಈ ಮಾತನ್ನು ಸಮರ್ಥರು ಯಾವಾಗಲೂ ನಮ್ಮ ಮುಂದೆ ಹೇಳುತ್ತಿರುವರು. ನಮ್ಮಂಥವರ ಸಹವಾಸವು ನಿನಗೆ ವಿಶೇಷವಾಗಿ ಆಗುವದು ಸರ್ವಥಾ ಹಿತಕರವಲ್ಲ. ರಾಜಾ, ನೀನೇ ಹೇಳು.

ಶಕೆ ೧೫೬೯ನೇ ವರ್ಷ, ನಿನ್ನ ಇಪ್ಪತ್ತು ಇಪ್ಪತ್ತೊಂದು ವರ್ಷದ ವಯಸ್ಸಿನಲ್ಲಿ ನಿನಗೆ ವೈರಾಗ್ಯವು ಉತ್ಪನ್ನವಾಯಿತಷ್ಟೇ? ಅಂದಿನಿಂದ ಇಲ್ಲಿಯವರೆಗೆ ನೀನು ವೈರಾಗ್ಯಶಾಲಿಯಾಗಿ ವರ್ತಿಸಿದ್ದರೆ, ಈಗಾಗಿದ್ದ ಸ್ವರಾಜ್ಯದ ಕಾರ್ಯವು ಆಗುತ್ತಿತ್ತೇ? ನೀನು ನಮ್ಮಂತೆಯೇ ಅಡವಡವಿ ತಿರುಗುತ್ತಲಿರುತ್ತಿದ್ದೆ. ಅಪ್ಪಾ, ಯಾರ ಕೆಲಸವು ಯಾವದೋ ಅವರು ಅದನ್ನು ಮಾಡಬೇಕು. ನೀನು ಕ್ಷತ್ರಿಯನು. ಯುದ್ಧ ವ್ಯಾಪಾರದಿಂದ ದುಷ್ಟರನ್ನು ದಂಡಿಸುವದೂ, ಶಿಷ್ಟರನ್ನು ಪಾಲಿಸುವದೂ ನಿನ್ನ ಕೆಲಸವು. ಅರಣ್ಯದಲ್ಲಿ ಸಂಚರಿಸಿ ತನ್ನ ದೇಹದಂಡನದಿಂದ ತನಗಾಗಿ ಮೋಕ್ಷವನ್ನು ಸಂಪಾದಿಸಿಕೊಳ್ಳುವ ಮಾರ್ಗವು ನಿನಗೆ ಶ್ರೇಯಸ್ಕರವಲ್ಲ. ಇರಲಿ, ಸಮರ್ಥರು ನಿನಗೊದಗಿದ ಸಂಕಟವನ್ನು ಅಂತರ್ಜ್ಞಾನದಿಂದ ತಿಳಿದುಕೊಂಡಿರುತ್ತಾರೆ. ಈದಿನ ನಿನಗೆ ಪೂರ್ಣಯಶಸ್ಸು ಪ್ರಾಪ್ತವಾಗುವದೆಂದು ಅವರು ನನ್ನ ಮುಂದೆ ಮೇಲೆ ಮೇಲೆ ಹೇಳಿದ್ದಾರೆ; ಮತ್ತು ಕೆಲವು ಓವಿಗಳನ್ನು ಮಾಡಿ ಅವನ್ನು ಈ ದಿನ ನಿನಗೆ ಓದುವದಕ್ಕಾಗಿ ಕೊಡಹೇಳಿರುವರು. ಇವನ್ನು ನೀನು ಓದಿ ಮುಂದಿನ ಕಾರ್ಯಗಳನ್ನು ಕೈಕೊಳ್ಳು. ಇನ್ನು ಅವಕಾಶವು ಸ್ವಲ್ಪ ಉಳಿದಿರುವದೆಂಬದನ್ನು ನಾನು ಬಲ್ಲೆನು; ಆದ್ದರಿಂದಲೇ ನಾನು ಹೆಚ್ಚಿಗೆ ಮಾತುಗಳನ್ನು ಆಡುವದಿಲ್ಲ; ಎಂದು ಹೇಳಿ, ಮಹಾರಾಜರ ಕೈಯಲ್ಲಿ ಒಂದು ಲಕೋಟಿಯನ್ನು ಕೊಟ್ಟರು. ಮಹಾರಾಜರು ಅದನ್ನು ಭಕ್ತಿಯಿಂದ ಇಸಕೊಂಡು ಅದಕ್ಕೆ ನಮಸ್ಕರಿಸಿ ಅದನ್ನು ತಲೆಯಮೇಲಿಟ್ಟು ಕೊಂಡರು. ಜೀಜಾಬಾಯಿಸಾಹೇಬರೂ ಆ ಲಕೋಟಿಯನ್ನು ನಮಸ್ಕರಿಸಿದರು. ಬಳಿಕ ಮಹಾರಾಜರು ಅದನ್ನು ಒಡೆದು ಶ್ರೀ ಗುರುವು ಓವಿಬದ್ಧ ರಚನೆಯಿಂದ ತನ್ನನ್ನು ಬೋಧಿಸಿದ್ದನ್ನು ಓದಿ ಪರಮೋತ್ಸಾಹವನ್ನು ತಾಳಿದರು; ಅವರ ಅಂತಃಕರಣವು ಸದ್ಗದಿತವಾಯಿತು; ಶರೀರದಲ್ಲಿ ರೋಮಾಂಚನಗಳು ಉತ್ಪನ್ನವಾದವು, ಕಣ್ಣುಗಳೊಳಗಿಂದ ಆನಂದಬಾಷ್ಪಗಳು ಉದುರಿದವು. ಆ ಕಾಲದ ಶಿವಪ್ರಭುವಿನ ಮೂರ್ತಿಯನ್ನು ನೋಡಿ ಶ್ರೀಧರಸ್ವಾಮಿಗಳು ಬಹಳ ಆನಂದಪಟ್ಟರು. ಅವರ ಅತಃಕರಣವೂ ಸದ್ಗದಿತವಾಯಿತು. ಅವರು ಅಂತಃಕರಣಪೂರ್ವಕವಾಗಿ ಮಹಾರಾಜರನ್ನು ಆಶೀರ್ವದಿಸಿದರು. ಈ ಮೇರೆಗೆ ಶ್ರೀ ಗುರು ಕೃಪಾಪ್ರಸಾದದಿಂದ

ಪರಿಪುಷ್ಟರಾದ ಮಹಾರಾಜರು ಉತ್ಸಾಹಶಾಲಿಗಳಾಗಿ ಮುಂದಿನ ಕಾರ್ಯಗಳಲ್ಲಿ ತೊಡಗಿದರು.

ಈ ಮೇರೆಗೆ ಶಿವಾಜಿಮಹಾರಾಜರು ಸಂತುಷ್ಟಚಿತ್ತರಾಗಿ ಪರಮೋತ್ಸಾಹದಿಂದ ಅಫಜುಲಖಾನನನ್ನು ಕಾಣುವದಕ್ಕಾಗಿ ಹೊರಡಲು ಸಿದ್ಧರಾಗುತ್ತಿರಲು, ಅತ್ತ ಅಫಜುಲಖಾನನು ತನಗೆ ಇಳಿದುಕೊಳ್ಳುವದಕ್ಕಾಗಿ ಮಹಾರಾಜರು ಹೊಡಿಸಿದ್ದ ಡೇರೆಯಲ್ಲಿ ಬಂದು ಇಳಿದುಕೊಂಡಿದ್ದನು. ಆತನು ತನ್ನ ಸೈನ್ಯದೊಡನೆ ಮುಂದ ಮುಂದಕ್ಕೆ ಬಂದ ಬಂದಹಾಗೆ, ಈ ಮೊದಲೆ ಮಾರ್ಗಮಾಡುವಾಗ ಕಡೆದು ಚಲ್ಲಿದ್ದ ಗಿಡಗಳ ಟೊಂಗೆಗಳನ್ನು ಮಹಾರಾಜರ ಅಪ್ಪಣೆಯಂತೆ ಅವರ ಜನರು ಮಾರ್ಗದಲ್ಲಿ ಒಟ್ಟಿ, ಪ್ರಸಂಗದಲ್ಲಿ ಖಾನನ ಸೈನ್ಯವು ಸುರಕ್ಷಿತವಾಗಿ ಹೋಗದಂತೆ ಮಾಡಿದರು. ಯಾಕೆಂದರೆ, ಖಾನನು ಮೋಸಮಾಡಿ ಮಹಾರಾಜರಿಗೆ ಕೇಡುಬಗೆದರೆ, ಅವನ ಸೈನ್ಯದವರನ್ನು ತುಂಡರಿಸಿ ಚಲ್ಲಬೇಕೆಂದು ಮಹಾರಾಜರು ಆಜ್ಞಾಪಿಸಿದ್ದರು. ಸಂಗಡ ಸೈನ್ಯವನ್ನು ತರಬಾರದೆಂದು ಗೊತ್ತಾಗಿದ್ದರೂ ಖಾನನು ಸ್ವಲ್ಪವಾದರೂ ಸೈನ್ಯವನ್ನು ತಂದದ್ದು ಸಂಶಯಕ್ಕೆ ಕಾರಣವಾಗಿತ್ತು. ಖಾನನ ಈ ಬಗೆಯ ಮೋಸವು ಕಾಲಕಾಲಕ್ಕೆ ತಿಳಿಯಬೇಕೆಂದು ಮಹಾರಾಜರು ಮಾರ್ಗದಲ್ಲಿ ಅಲ್ಲಲ್ಲಿ ಗ್ಯಾಟುಗಳನ್ನು ಇಟ್ಟಿದ್ದರು. ಅರಣ್ಯದಲ್ಲಿ ಹುಲಿಗಳ ಉಪದ್ರವವು ಬಹಳವಿರುವದರಿಂದ, ನಿಮ್ಮ ಸೈನ್ಯದವರಿಗೆ ಅವುಗಳಿಂದ ತ್ರಾಸವಾಗದಂತೆ ವ್ಯವಸ್ಥೆಮಾಡಿರುವೆವೆಂದು ಅವರು ಖಾನನಿಗೆ ಸಮಾಧಾನ ಹೇಳಿದ್ದರು. ಆ ಗ್ಯಾಟಿನವರೇ ಮಹಾರಾಜರಿಗೆ ಎಲ್ಲ ಸುದ್ದಿಗಳನ್ನು ತಿಳಿಸುತ್ತಿದ್ದರು. ಗೋಪೀನಾಥಪಂತನು ಮೊದಲು ಭೆಟ್ಟಿಯ ಮಂಟಪವನ್ನು ನೋಡಿಹೋಗಿ, ಅದು ಉತ್ತಮರೀತಿಯಿಂದ ಸಿದ್ಧಮಾಡಿರುವದನ್ನು ಖಾನನ ಮುಂದೆ ಹೇಳಿದ್ದನು. ಆದರೆ ಅದರಿಂದ ಖಾನನಿಗೆ ಸಮಾಧಾನವಾಗದಿರಲು, ಆತನು ತನ್ನ ಖಾಸ ಹುಜರೆಯಾದ ಸೈದಾಬಂಡನನ್ನು ಮತ್ತೆ ಅದನ್ನು ನೋಡುವದಕ್ಕಾಗಿ ಕಳಿಸಿದ್ದನು. ಶೃಂಗರಿಸಿದ ಆ ಸುಂದರ ಮಂಟಪವನ್ನು ನೋಡಿ ಸೈದಾಬಂಡನಿಗೂ ಬಹಳ ಆನಂದವಾಯಿತು. ಆತನು ಖಾನನ ಒಳಿಗೆ ಬಂದು ಸಂತೋಷದ ಭರದಿಂದ ಆತನನ್ನು ಕುರಿತು—"ಖಾನಸಾಹೇಬ, ಶಿವಾಜಿಯು ತಮಗೆ ನಿಶ್ಚಯ

ವಾಗಿ ಹೆದರಿದ್ದಾನೆ. ತಮ್ಮ ಮನಸ್ಸನ್ನು ಒಲಿಸಿಕೊಂಡು ತಾನು ಉಳಿದು ಕೊಳ್ಳಬೇಕೆಂದು ಆತನು ಯೋಚಿಸಿರುವದು ಖಂಡಿತವು; ಹಾಗಿಲ್ಲದಿದ್ದರೆ ಆತನು ಮಂಟಪವನ್ನು ಅಷ್ಟು ಸುಂದರವಾಗಿ ಶೃಂಗರಿಸಬಹುದೆ? ಮಾರ್ಗ ವನ್ನು ಇಷ್ಟು ಪ್ರಶಸ್ತವಾಗಿ ಮಾಡಿಸಬಹುದೇ? ಸರಬರಾಯಿಯ ವ್ಯವಸ್ಥೆ ಯನ್ನು ಇಷ್ಟು ಉತ್ತಮರೀತಿಯಿಂದ ಇಡಿಸಬಹುದೆ? ಶಿವಾಜಿಯು ಮಹಾ ಪುಂಡನು ಠಕ್ಕನು, ಆತನು ಅನ್ಯರನ್ನು ಲೆಕ್ಕಿಸುವವನೇ ಅಲ್ಲ. ಅಂಥವನು ತನ್ನ ಪುಂಡತನವನ್ನೂ, ಠಕ್ಕತನವನ್ನೂ ಬಿಟ್ಟು ಕೇವಲ ಸಾತ್ವಿಕನಂತೆ ಇಷ್ಟು ಸೌಜನ್ಯವನ್ನು ಎಂದಿಗೂ ತೋರಿಸುತ್ತಿದ್ದಿಲ್ಲ. ಆತನು ತಮಗೆ ಹೆದರಿ ಮುಂದುಗಾಣದೆ ಕುಳಿತಿರುವದೇ ನಿಶ್ಚಯವು; ತಾವು ಭೆಟ್ಟಿಗೆ ಹೋಗುವದೊಂದೇ ತಡ; ಆತನು ನಿಶ್ಚಯವಾಗಿ ತಮ್ಮ ಆಧೀನನಾಗುವನು.

ಹೀಗೆ ಸೈದಾಬಂಡನು ಹೇಳಿದ್ದನ್ನು ಕೇಳಿ ಮೊದಲೇ ಮದಾಂಧನಾಗಿದ್ದ ಖಾನನು ಹರ್ಷನಿರ್ಭರನಾದನು; ಹರ್ಷಾತಿರೇಕದಿಂದ ಆತನ ವಿವೇಕ ದೃಷ್ಟಿಯು ಇಂಗಿಹೋಯಿತು. ಆತನು ಉಲ್ಲಾಸದಿಂದ ಸೈದಾಬಂಡನನ್ನು ಕುರಿತು—"ಸರಿಸರಿ, ಹೀಗೆ ಆತನು ಅಂಜಿದ್ದರೆ, ಹಾಗು ಆತನ ಮನಸ್ಸಿ ನಲ್ಲಿ ಕಪಟವನ್ನೇನೂ ಎಣಿಸದೆ ಮತಿಗೆಟ್ಟು ಕುಳಿತುಕೊಂಡಿದ್ದರೆ ಬಹಳ ನೆಟ್ಟಗಾಯಿತು; ಇದರಿಂದ ನಾವು ಯೋಚಿಸಿರುವ ಕಪಟಕೃತಿಯು ಬಹು ಸರಸವಾಗಿ ಸಾಧಿಸುವದು. ನಾವು ಕಪಟದಿಂದ ನಮ್ಮ ಪ್ರತಿಜ್ಞೆಯನ್ನು ಸಾಧಿಸಿಕೊಳ್ಳದೆ ವಿಜಾಪುರಕ್ಕೆ ಹೋಗುವದು ಅಶ್ಲಾಘ್ಯವು. ಇಂಥ ಬೇಟೆ ಯನ್ನು ಅದು ವೈಮರೆತಿರುವಾಗಲೇ ಬಲೆಯಲ್ಲಿ ಹಿಡಿದು ಬಿಗಿಯಬೇಕಾ ಗುವದು. ಇಲ್ಲದಿದ್ದರೆ, ಅದು ಯಾವಾಗೋ ಸಳಕ್ಕನೆ ನುಸಿದು ಓಡಿ ಹೋಗುವದು. ಇನ್ನು ಆ ಶಿವಾಜಿಯು ನನ್ನ ಕಣ್ಣಿಗೊಂದು ಬೀಳಲಿ, ಅವನನ್ನು ಸುಮ್ಮನೆ ಬಗಲಲ್ಲಿ ಹಿಚುಕಿ ಕೊಲ್ಲುತ್ತೇನೆ. ಅವನ ಬೀಸಾ ತೇನು? ಅದು ತೀರ ಪುಡಿ ಆಳು! ನಾವು ಅವನಿಗಿಂತ ಎಷ್ಟು ಬಲ್ಲಿದರು!! ಅವನಿಗೆ ನಮ್ಮ ವಿಷಯದ ಪೂರ್ಣವಿಶ್ವಾಸವು ಉತ್ಪನ್ನವಾಗಬೇಕೆಂತಲೇ ಅವನು ಹೇಳಿದ ಕರಾರುಗಳನ್ನೆಲ್ಲ ನಾವು ಒಪ್ಪಿಕೊಂಡಿರುವೆವು. ಬರಲಿ ಆ ಪುಂಡನು; ಈವರೆಗೆ ಬಹುಜನ ಮುಸಲ್ಮಾನ ಸರದಾರರ ಮಣ್ಣುಗೂಡಿ ಸಿದ ಅವನ ಸೇಡನ್ನು ಕ್ಷಣದಲ್ಲಿ ತೀರಿಸಿಕೊಳ್ಳುವೆನು." ಎಂದು ನುಡಿಯಲು,

ಸೈದಾಬಂಡನು ತಲೆಯಲ್ಲಾಡಿಸಿ ತನ್ನ ಒಡೆಯನ ಮಾತಿಗೆ ಒಪ್ಪಿಕೊಂಡು, ನೀವು ಹೇಳುವದು ಅಕ್ಷರಶಃ ನಿಜವೆಂದು ಸೂಚಿಸಿದನು. ಆಮೇಲೆ ಸಂಗಡ ಯಾರು ಬರಬೇಕೆಂಬ ಬಗ್ಗೆ ವಿಚಾರವು ನಡೆಯಿತು. ಮೊದಲು ತನ್ನ ಸಂಗಡ ಬರುವದಕ್ಕಾಗಿ ಬಹು ಜನರನ್ನು ಖಾನನು ಆರಿಸಿದನು. ಅದನ್ನು ನೋಡಿ ಗೊಪೀನಾಥಪಂತನು—"ಖಾನಸಾಹೇಬ, ಇಷ್ಟು ಜನರನ್ನು ಸಂಗಡ ಕರಕೊಂಡು ಹೋಗುವ ಕರಾರು ಇಲ್ಲವು. ಕರಾರು ಮೀರಿದರೆ ಶಿವಾಜಿಯು ಮೂಲತಃ ನಿಮ್ಮನ್ನು ಕಾಣಲಿಕ್ಕೇ ಬರಲಿಕ್ಕಿಲ್ಲ. ನಾನು ಕರಾರುಗಳನ್ನು ಗೊತ್ತು ಮಾಡಿದವನಾಗಿರುವದರಿಂದ ಈ ಮಾತನ್ನು ಸೂಚಿಸುವೆನು," ಎಂದು ಹೇಳಿದನು. ವಕೀಲನ ಈ ಮಾತುಗಳನ್ನು ಕೇಳಿ, ಸ್ವರ್ಗವು ಮೂರುಗೇಣು ಉಳಿದಿದ್ದ ಖಾನನು ಸೊಕ್ಕಿನಿಂದ–"ಪಂತ, ಇಷ್ಟು ಜನರೂ ಬೇಡ, ಒಬ್ಬನೂ ನನ್ನ ಸಂಗಡ ಬರಬೇಡ. ಶಿವಾಜಿಯು ಇಬ್ಬರನ್ನು ಕರಕೊಂಡು ಬರಹೇಳಿರುವನಷ್ಟೆ, ಆದರೆ ನನ್ನ ಸಂಗಡ ಇಬ್ಬರು ಬರುವ ಕಾರಣವಿಲ್ಲ; ಸುಮ್ಮನೆ ಮರ್ಯಾದೆಗಾಗಿ ಒಬ್ಬನು ಬಂದರೆ ಸಾಕು. ಶಿವಾಜಿಯೂ ಒಬ್ಬನನ್ನೇ ಸಂಗಡ ಕರಕೊಂಡು ಬರಲಿ, ಈಗಲೇ ಈ ಮಾತನ್ನು ದೂತಮುಖದಿಂದ ಆತನಿಗೆ ತಿಳಿಸಿಬಿಡಿರಿ. ಗದ್ದಲವು ಕಡಿಮೆಯಾದಷ್ಟು ನಮಗೆ ಹಿತವೇ ಇರುವದು. ನಮ್ಮ ಸಂಗಡ ಫಕ್ತ ಸೈದಾಬಂಡನೊಬ್ಬನು ಬರಲಿ."

ಈ ಮೇರೆಗೆ ನುಡಿದು ಖಾನನು ಹೊರಡುವ ಸಿದ್ಧತೆಯಲ್ಲಿ ತೊಡಗಿದನು. ಆತನ ರೂಪವು ಅತ್ಯಂತ ಭವ್ಯವಾದದ್ದೆಂತಲೂ, ಆತನು ಬಹು ಬಲಿಷ್ಠನಿದ್ದನೆಂತಲೂ ಹಿಂದೆ ಹೇಳಿದೆ. ಇರತಕ್ಕಷ್ಟಕ್ಕಿಂತ ಆತನು ಹೆಚ್ಚು ಸ್ವಾಭಿಮಾನಿಯು ಇದ್ದದ್ದರಿಂದ, ಗರ್ವಿಷ್ಠನಾಗಿ ಶಿವಾಜಿಯನ್ನು ಲೆಕ್ಕಿಸದೆ, ಆತನನ್ನು ಹಿಚಿಕಿ ಕೊಲ್ಲಬಹುದೆಂದು ತಿಳಿದು, ಹೆಚ್ಚಿನ ಸಿದ್ಧತೆಯನ್ನೇನು ಮಾಡಿಕೊಳ್ಳಲಿಲ್ಲ. ಆತನು ಒಂದು ಖಡ್ಗವನ್ನು ಮಾತ್ರ ತಕ್ಕೊಂಡು ಆನೆಯ ಮೇಲೆ ಕುಳಿತು ನಡೆದನು. ಅದರಂತೆ ಸೈದಾಬಂಡನು ಒಂದು ಮೇಣೆಯಲ್ಲಿ, ಗೋಪೀನಾಥಪಂತನು ಒಂದು ಮೇಣೆಯಲ್ಲಿ ಕುಳಿತು ಖಾನನನ್ನು ಹಿಂಬಾಲಿಸಿದರು. ಖಾನನು ಈಗ ಹೀಗೆ ಒಬ್ಬನೇ ಹೊರಟಿದ್ದರೂ, ೧೫೦೦ ಜನ ಕುದುರೆಯ ಸವಾರರನ್ನು ಆತನು ಸಂಗಡ ಕರ

ಕೊಂಡು ಬಂದು, ದುರ್ಗದ ಕೆಳಗೆ ಇಟ್ಟು ಬಂದಿದ್ದನು. ಖಾನನು ಹೀಗೆ ಮಾಡಿದ್ದರ ಕಾರಣವು, ತಾನು ಶಿವಾಜಿಯನ್ನು ಮೋಸದಿಂದ ಕೊಂದ ಕೂಡಲೆ, ತನ್ನ ಆ ಸೈನ್ಯದ ಸಹಾಯದಿಂದ ಪ್ರತಾಪಗಡವನ್ನು ಕೈವಶ ಮಾಡಿಕೊಳ್ಳಬೇಕೆಂಬದು. ಹೀಗೆ ಖಾನನು ದುರಾಲೋಚನೆಯನ್ನು ಮಾಡಿ, ಶಿವಾಜಿಯನ್ನು ಯಾವಾಗ ಗೊತ್ತಿಗೆ ಹಚ್ಚೇನೆಂಬ ಆತುರದಿಂದ ಮುಂದಕ್ಕೆ ಸಾಗಿದ್ದನು. ಆನೆಯು ಪ್ರತಾಪಗಡದ ಬುಡಕ್ಕೆ ಬಂದಿತು; ಆದರೆ ಮುಂದೆ ಅದಕ್ಕೆ ಗುಡ್ಡವನ್ನು ಹತ್ತಲಿಕ್ಕೆ ಬರಲಿಲ್ಲ. ಆಗ ಖಾನನು ಶಿವಾಜಿಗೆ—"ನಮ್ಮ ಆನೆಯು ಗುಡ್ಡವನ್ನು ಹತ್ತಲೊಲ್ಲದು; ಆದ್ದರಿಂದ ನೀವು ದುರ್ಗವನ್ನು ಇಳಿದು ಗುಡ್ಡದ ಕೆಳಗೆ ನಮ್ಮ ಭೆಟ್ಟಿಗೆ ಬರಬೇಕು," ಎಂದು ಹೇಳಿಕಳಿಸಿದನು; ಅದಕ್ಕೆ ಮಹಾರಾಜರು—"ಭೆಟ್ಟಿಗಾಗಿ ಮಂಟಪವು ಶೃಂಗರಿಸಿ ಸಿದ್ಧವಾಗಿದೆ; ನಿಮ್ಮ ವಕೀಲನು ಅದನ್ನು ನೋಡಿ ಇರಲೆಂದು ಒಪ್ಪಿಕೊಂಡು ಹೋಗಿದ್ದಾನೆ; ಹೀಗಿದ್ದು, ಈಗ ನಾವು ಕೆಳಗೆ ಇಳಿದು ಬರಬೇಕೆನ್ನುವದು ಕರಾರಿನ ಹೊರಗಿನ ಮಾತಾಗಿರುವದು; ಆದ್ದರಿಂದ ನಾವು ಕೆಳಗೆ ಬರಲಾರೆವು. ತಾವು ಪಲ್ಲಕ್ಕಿಯಲ್ಲಿ ಕುಳಿತು ಕೊಂಡು ಮೇಲಕ್ಕೆ ಬರಬೇಕು," ಎಂದು ಹೇಳಿಕಳಿಸಿದನು. ಮೊಸಳೆಯು ನೀರಲ್ಲಿರುವಾಗ ದೊಡ್ಡ ಆನೆಯನ್ನು ಕೂಡ ಎಳಕೊಂಡು ಹೋಗುವಂತೆ, ಮಹಾರಾಜರು ತಮ್ಮ ಸ್ಥಳದಲ್ಲಿ ತಾವಿದ್ದು, ಬಲಿಷ್ಠನಾದ ಖಾನನನ್ನು ಸಹ ಬಗ್ಗು ಬಡಿಯಬಹುದೆಂದು ತಿಳಿದುಕೊಂಡಿದ್ದರು. ಇದೇ ಉದ್ದೇಶ ದಿಂದಲೇ ಅವರು ಖಾನನಿಗೆ ಹಾಗೆ ಹೇಳಿಕಳಿಸಿದರು; ಆದರೆ ಖಾನನು ತನ್ನ ಡೌಲಿನಲ್ಲಿಯೇ ಇದ್ದದ್ದರಿಂದ, ಯಾವ ವಿಚಾರವನ್ನೂ ಮಾಡಲಿಲ್ಲ. ನಾವು ಮೇಲೆ ಹೋದರೆ ಆಗುವದೇನು? ಭೆಟ್ಟಿಯಾದಕೂಡಲೆ ಶಿವಾಜಿ ಯನ್ನು ಗೊತ್ತಿಗೆ ಹಚ್ಚಿಬಿಟ್ಟರಾಯಿತು, ಎಂದು ಆಲೋಚಿಸಿ, ಮೇಲಕ್ಕೆ ಹೋಗಲು ನಿಶ್ಚಯಿಸಿದನು. ಕೂಡಲೆ ಆತನ ಪಲ್ಲಕ್ಕಿಯು ಸಿದ್ಧವಾಯಿತು.

೧೯ನೆಯ ಪ್ರಕರಣ.

ಗಂಡಾಂತರ ನಿವಾರಣ

ಶ್ರೀ ಸದ್ಗುರುವಿನ ಬೋಧಾಮೃತದಿಂದ ಮಹಾರಾಜರು ಪರಿಪುಷ್ಟರಾದರೆಂದು ಹಿಂದೆ ಹೇಳಿದೆಯಷ್ಟೆ, ಮಹಾರಾಜರೂ ಜೀಜಾಬಾಯಿಸಾಹೇಬರೂ ಕೃತಜ್ಞತೆಯಿಂದ ಶ್ರೀಧರಸ್ವಾಮಿಗಳನ್ನು ಕುರಿತು—''ಮಹಾರಾಜ, ಇಂದಿನ ಗಂಡಾಂತರದ ನಿವಾರಣವಾಗುವವರೆಗೆ ತಾವು ಇಲ್ಲಿಯೇ ಇರಬೇಕು" ಎಂದು ಬೇಡಿಕೊಂಡರು. ಶ್ರೀ ಸಮರ್ಥರಾದರೂ ಸ್ವಾಮಿಗಳಿಗೆ ಹಾಗೆಯೇ ಹೇಳಿದ್ದರಿಂದ ಅವರು ಅದಕ್ಕೆ ಸಂತೋಷದಿಂದ ಒಪ್ಪಿಕೊಂಡರು. ಬಳಿಕ ಮಹಾರಾಜರು ಮತ್ತೊಮ್ಮೆ ಭೆಟ್ಟಿಯ ಮಂಟಪವನ್ನು ನೋಡಲಿಕ್ಕೆ ಹೋಗಿ, ಅಲ್ಲಿಗೆ ಯಾವತ್ತು ಮುಖ್ಯ ಮುಖ್ಯ ಜನರನ್ನು ಕರೆಸಿಕೊಂಡರು. ಯಾರು ಯಾರು ಎಲ್ಲೆಲ್ಲಿ ಇರಬೇಕು, ಯಾರು ಯಾರು ಏನೇನು ಮಾಡಬೇಕು, ಎಂಬದನ್ನು ಕುರಿತು ಮತ್ತೊಮ್ಮೆ ನಿರ್ಧಾರದಿಂದ ಹೇಳಿ, ಎಲ್ಲ ವ್ಯವಸ್ಥೆಯನ್ನು ಸ್ಥಿರಗೊಳಿಸಿದರು. ಸಮರ್ಥರ ಕೃಪಾಪ್ರಸಾದವು ಬಂದಿರುವದರಿಂದ ಇನ್ನು ನಮಗೆ ನಿಶ್ಚಯವಾಗಿ ಮಂಗಲವಾಗುವದೆಂದು ಮಹಾರಾಜರು ತಮ್ಮವರಿಗೆ ಹೇಳಿ ಅತ್ಯಂತ ಉತ್ಸಾಹದಿಂದಲೂ, ದಕ್ಷತೆಯಿಂದಲೂ ತಮ್ಮ ತಮ್ಮ ಕಾರ್ಯಗಳನ್ನು ಮಾಡಲು ಅವರನ್ನು ಆಜ್ಞಾಪಿಸಿದರು. ಪ್ರಸಂಗವಶಾತ್ ಏನಾದರೂ ಅನಿಷ್ಟಪ್ರಸಂಗವು ಒದಗಿದರೆ ನೀವು ಕೈಕಾಲುಗೆಡದೆ, ನಾವು ಹೇಳಿದಂತೆ ಖಾನನ ಸೈನ್ಯವನ್ನು ತುಂಡರಿಸಿ ಸ್ವರಾಜ್ಯವನ್ನು ಕಾಯ್ದುಕೊಳ್ಳಿರೆಂದು ಮತ್ತೊಮ್ಮೆ ಸೂಚಿಸಿದರು. ನಾವು ಸುರಕ್ಷಿತವಾಗಿ ಪಾರಾದರಂತು ನೆಟ್ಟಗೇ ಆಯಿತು; ಆಗದಿದ್ದರೆ ದೊಡ್ಡ ಮಹಾರಾಜರಿಗೆ (ತಂದೆಯಾದ ಶಹಾಜಿರಾಜರಿಗೆ)—''ನಾನು ರಜಪೂತ ವೀರರಿಗೆ ಉಚಿತವಾದ ಮಾರ್ಗದಿಂದ ನಡೆದು, ರಣದಲ್ಲಿ ಬಿದ್ದೆನೆಂತಲೂ, ನಾನು ಮಾಡತಕ್ಕದ್ದನ್ನೇ ಮಾಡಿದೆನೆಂತಲೂ ತಿಳಿಸಿರಿ," ಎಂದು ಹೇಳಿದರು. ಇದನ್ನು ಕೇಳಿ ಎಲ್ಲರು ಸುಮ್ಮನೆ ನಿಂತುಕೊಂಡರು. ಬಳಿಕ ಅವರೆಲ್ಲರು ಮಹಾರಾಜರಿಗೆ—"ನೀವು ಈ ಪ್ರಸಂಗದಲ್ಲಿ ಖಾನನನ್ನು ಕಾಣಲಿಕ್ಕೆ ಹೋಗಲೇಬಾರದು; ನಮ್ಮೊಳಗಿನವರಾರಾದರೊಬ್ಬರನ್ನು ಖಾನನ

ಭೆಟ್ಟಿಗೆ ಕಳಿಸಿದರಾಯಿತು; ಬೇಕಾದರೆ ಅಂಬಾಭವಾನಿಯ ಮುಂದೆ ಚೀಟಿಗಳನ್ನು ಹಾಕಿ, ಚೀಟಿ ಬಂದವರನ್ನು ಖಾನನ ಭೆಟ್ಟಿಗೆ ಕಳಿಸಿರಿ" ಎಂದು ಬಹಳವಾಗಿ ಬೇಡಿಕೊಂಡರು; ಆದರೆ ಅದಕ್ಕೆ ಮಹಾರಾಜರು ಒಪ್ಪಿಕೊಳ್ಳಲಿಲ್ಲ. ಅವರು ಕೃತಜ್ಞತೆಯಿಂದ—"ನಮ್ಮ ಪ್ರಿಯ ಸರದಾರರೇ, ನನ್ನ ವಿಷಯವಾಗಿ ಇಷ್ಟು ಜನರು ಪ್ರಾಣವನ್ನರ್ಪಿಸಲು ಸಿದ್ಧರಾದದ್ದನ್ನು ನೋಡಿ ನನಗೆ ಬಹಳ ಸಮಾಧಾನವಾಗುತ್ತದೆ. ನೀವೆಲ್ಲರೂ ನನ್ನ ಮೇಲೆ ಅನಿರ್ವಾಚ್ಯವಾದ ಭಕ್ತಿಯನ್ನಿಟ್ಟು ಈವರೆಗೆ ಸಹಾಯಮಾಡುತ್ತ ಬಂದದ್ದರಿಂದಲೇ ಸ್ವರಾಜ್ಯದ ಸ್ಥಾಪನೆಯಾಗಿ ಅದು ಇಷ್ಟು ಬೆಳೆದಿರುತ್ತದೆ. ಕೆಲವು ಕೆಲಸಗಳು ನಾವೇ ಮಾಡತಕ್ಕವಿರುತ್ತವೆ. ಇಂದಿನ ಕೆಲಸವು ಅಂತಹದೆಂದು ತಿಳಿದು ನೀವು ನನ್ನನ್ನು ಇಂದು ಭೆಟ್ಟಿಗೆ ಹೋಗಗೊಡಿರಿ. ಅಂಥ ಅನಿಷ್ಟ ಪ್ರಸಂಗವು ಒದಗಿದರೆ, ಸಂಭಾಜಿಯನ್ನು ಪಟ್ಟಕ್ಕೆ ಕುಳ್ಳಿರಿಸಿ ನಾನಿರುವೆನೆಂದು ತಿಳಿದು ನೀವೆಲ್ಲರೂ ಕೂಡಿ ಸ್ವರಾಜ್ಯವನ್ನು ರಕ್ಷಿಸಿರೆಂದರಾಯಿತು! ಹೋಗಿರಿ, ಇಂದು ನಾನೇ ಖಾನನನ್ನು ಕಾಣಲಿಕ್ಕೆ ಹೋಗುವೆನು. ಗೊತ್ತಾದಂತೆ ಕೆಲಸವನ್ನು ಮಾಡಲೇಬೇಕು."

ಈ ಮೇರೆಗೆ ನುಡಿದು ಮಹಾರಾಜರು ಅಂತರ್ಗೃಹಕ್ಕೆ ಹೋಗಿ ಸ್ನಾನಮಾಡಿ ಶ್ರೀ ಭವಾನಿಯ ಸಂಬಂಧದ ತಮ್ಮ ನಿತ್ಯಕರ್ಮಗಳನ್ನು ತೀರಿಸಿಕೊಂಡರು. ಅಂದು ಉಪವಾಸ ಮಾಡಬೇಕೆಂದು ಅವರು ನಿಶ್ಚಯಿಸಿದ್ದರಿಂದ, ಊಟ-ಉಡಿಗೆಗಳನ್ನೇನು ಮಾಡುವಹಾಗಿದ್ದಿಲ್ಲ. ಅಷ್ಟರಲ್ಲಿ ತಾನಾಜಿಯು ಬಂದನೆಂಬ ಸುದ್ದಿಯು ಬರಲು, ಅವರಿಗೆ ಸಮಾಧಾನವಾಯಿತು. ಅವರು ಆತನನ್ನು ಒಳಗೆ ಕರಿಸಿಕೊಂಡರು. ಅವರಿಬ್ಬರ ಮಾತುಕಥೆಗಳಾದವು. ಕೂಡಲೆ ಮಹಾರಾಜರು ಆತನಿಗೆ ಹುಜರೆಯ ಪೋಷಾಕು ಹಾಕಿಕೊಂಡು ಬಾರೆಂದು ಹೇಳಿ, ತಾವು ಪೋಷಾಕು ಹಾಕಿಕೊಳ್ಳಲಿಕ್ಕೆ ಹೋದರು. ಅವರು ಮೊದಲು ಸುರವರಿಯ ಇಜಾರವನ್ನು ಏರಿಸಿ, ಮೈಯ್ಯಲ್ಲಿ ಸರಪಳಿಯದೊಂದು ಚಿಲಕತ್ತನ್ನು ಹಾಕಿಕೊಂಡು, ಅದರ ಮೇಲೆ ಸಾಧಾರಣ ಪ್ರತಿಯದೊಂದು ಬಗಲಕಸಿಯ ಅಂಗಿಯನ್ನು ತೊಟ್ಟುಕೊಂಡರು; ಬಳಿಕ ಅದರ ಮೇಲೆ ತಾವು ನಿತ್ಯದಲ್ಲಿ ಹಾಕಿಕೊಳ್ಳುವ ಉದ್ದಂಗಿಯನ್ನು ಹಾಕಿಕೊಂಡರು; ಬಳಿಕ ಅವರು ತಲೆಗೆ ಶಿರಸ್ತ್ರಾಣ

ವನ್ನು ಧರಿಸಿ ಅದು ಎಷ್ಟು ಮಾತ್ರವೂ ಕಾಣಿಸದಂತೆ ಅವರ ಮೇಲೆ ಮುಂಡಾಸವನ್ನು ಸುತ್ತಿಕೊಂಡರು. ಅವರು ಬಲಗೈಯ ಅಂಗಿಯ ತೋಳಿನಲ್ಲಿ ಒಂದು ಕಠಾರಿಯನ್ನು ಬಚ್ಚಿಟ್ಟುಕೊಂಡದ್ದಲ್ಲದೆ, ಎಡಗೈಯ ಬೆರಳುಗಳಿಗೆ ಹುಲಿಯುಗುರುಗಳನ್ನು ಹಾಕಿಕೊಂಡರು. ಇಷ್ಟೆಲ್ಲ ಸಿದ್ಧತೆಯಾದ ಮೇಲೆ ಸವಾರಿಯು ಭವಾನಿಯ ದರ್ಶನಕ್ಕೆ ಹೊರಟಿತು. ಅವರು ಅಂಬಾಬಾಯಿಯ ದರ್ಶನಮಾಡಿಕೊಂಡು ಮಂಟಪದ ಕಡೆಗೆ ಹೋಗಬೇಕೆಂದು ಗುಡಿಯನ್ನು ಹೊಕ್ಕರು. ಅಲ್ಲಿ ಬಹಳ ಹೊತ್ತಿನಿಂದ ಜೀಜಾಬಾಯಿಯವರು ಬಾಲಕನಾದ ಸಂಭಾಜಿಯೊಡನೆ ಜಪಮಾಡುತ್ತ ಕುಳಿತುಕೊಂಡಿದ್ದರು. ತಮ್ಮ ಮಗನಿಗೆ ಸಂಕಟ ಒದಗಿರಲು, ತಾವು ಭವಾನೀಮಾತೆಯ ಚರಣಗಳ ಮೇಲೆ ಮಸ್ತಕವಿಟ್ಟು ಪ್ರಾರ್ಥಿಸಿದರೆ, ಆ ಲೋಕಮಾತೆಯು ಮಗನ ಸಂಕಟವನ್ನು ದೂರಮಾಡುವಳೆಂದು ಅವರು ದೃಢವಾಗಿ ನಂಬಿದ್ದರು. ಅವರು ತಮ್ಮ ಮೊಮ್ಮಗನಾದ ಸಂಭಾಜಿಯ ಕೈಯಿಂದ ''ಜಯಭವಾನಿ ಜಯಭವಾನಿ" ಎಂದು ಜಪಮಾಡಿಸುತ್ತಿದ್ದರು. ಸಂಭಾಜಿಯು ತೀರ ಚಿಕ್ಕವನು. ಆತನಿಗೆ ಅದೇ ಎರಡು ವರ್ಷಗಳು ತುಂಬುತ್ತ ಬಂದಿದ್ದವು. ಆತನು ''ಭವಾನಿ" ''ಅಂಬಾ" "ಆಯಿ" ''ಮಹಾರಾಜ" ಎಂಬ ಶಬ್ದಗಳನ್ನು ಅದೇ ತೊದಲು ನುಡಿಗಳಿಂದ ನುಡಿಯಹತ್ತಿದ್ದನು. ಅಜ್ಜಿಯಲ್ಲಿ ಆತನ ಭಕ್ತಿಯು ವಿಶೇಷ. ಆದ್ದರಿಂದ ಆಕೆಯು ಹೇಳಿದಂತೆ ಕೇಳಲು ಆತನು ಒಳ್ಳೇ ಉತ್ಸಾಹಪಡುತ್ತಿದ್ದನು. ತಾಯಿಯನ್ನೂ, ಮಗ ಸಂಭಾಜಿಯನ್ನೂ ನೋಡಿ ಮಹಾರಾಜರ ಕಂಠವು ಬಿಗಿಯಿತು. ಅವರು ಜಗದಂಬೆಯನ್ನು ಸಾಷ್ಟಾಂಗವಾಗಿ ವಂದಿಸಿದರು. ಬಳಿಕ ತಮ್ಮ ಜನನಿಯ ಚರಣಗಳ ಮೇಲೆ ಮಸ್ತಕವನ್ನಿಟ್ಟು, ಸಂಭಾಜಿಯ ಗದ್ದವನ್ನು ಹಿಡಿದು ಆತನನ್ನು ಪ್ರೇಮಾರ್ದ್ರದೃಷ್ಟಿಗಳಿಂದ ನೋಡಿದರು. ಆಮೇಲೆ ಅವರು ಮಾತೃಶ್ರೀಯವರನ್ನು ಕುರಿತು "ಅವ್ವಾ, ನಾನು ಇನ್ನು ಬರುತ್ತೇನೆ. ತಿರುಗಿ ಬಂದರೆ ನೆಟ್ಟಗಾಯಿತು, ಇಲ್ಲದಿದ್ದರೆ ನನ್ನ ಸ್ಥಳದಲ್ಲಿ ಈ ಸಂಭಾಜಿಯು ನಿನಗೆ ಇರುತ್ತಾನೆ" ಎಂದು ನುಡಿದರು. ಅದನ್ನು ಕೇಳಿ ಜೀಜಾಬಾಯಿಯವರ ಅವಸ್ಥೆಯು ಏನಾಗಿರಬಹುದೆಂಬದನ್ನು ವಾಚಕರೇ ತರ್ಕಿಸತಕ್ಕದ್ದು. ಅದನ್ನು ವರ್ಣಿಸುವ ಯೋಗ್ಯತೆಯು ನಮ್ಮ ಲೇಖನಿಯಲ್ಲಿ

ಇಲ್ಲ. ಅವರ ಕಣ್ಣುಗಳೊಳಗಿಂದ ಒಂದೇಸವನೆ ಅಶ್ರುಧಾರೆಗಳು ಸುರಿಯುತ್ತಲಿದ್ದವು; ಆದರೆ ಅವರು ಅಶ್ರುಗಳನ್ನು ಒರಿಸಿಕೊಂಡು ಸದ್ಗದಿತ ಕಂಠದಿಂದ ಮಹಾರಾಜರನ್ನು ಕುರಿತು—"ಶಿವಬಾ, ನೀನು ಎಂದಿನಂತೆ ಸಮರಾಂಗಣದಲ್ಲಿ ಶತ್ರುವಿಗೆ ಎದುರಾಗಿ ಮೈಗೆ ಮೈಕೊಟ್ಟು ಯುದ್ಧ ಮಾಡಲಿಕ್ಕೆ ಹೋಗುತ್ತಿದ್ದರೆ, ನಾನು ಎಷ್ಟುಮಾತ್ರವೂ ಕಣ್ಣೀರು ಹಾಕುತ್ತಿದ್ದಿಲ್ಲ; ಆದರೆ ಆ ವಿಶ್ವಾಸಘಾತಕಿಯಾದ ಶತ್ರುವು ಏನು ಮಾಡ್ಯಾನು, ಯಾವ ಕುಟಿಲತಂತ್ರವನ್ನು ಒಡ್ಡಿಯಾನು ಎಂಬುದನ್ನು ಹೇಳಲಾಗುವದಿಲ್ಲ. ಆದ್ದರಿಂದ ನನಗೆ ಬಹಳ ಅಂಜಿಕೆ ಬರುತ್ತದೆ; ಇನ್ನು ಜಗದಂಬೆಯ ದೃಷ್ಟಾಂತವಾಗಿರುವದರಿಂದಲೂ, ಶ್ರೀ ಗುರು ಪ್ರಸಾದವು ದೊರೆತಿರುವದರಿಂದಲೂ ಯಾವ ಚಿಂತೆಮಾಡುವ ಕಾರಣವೂ ಇಲ್ಲ; ಆದರೆ ಶಿವಬಾ, ನಾನು ನಿನ್ನ ಹಡೆದ ತಾಯಿಯಲ್ಲವೆ? ನಿನ್ನನ್ನು ಒಂಬತ್ತು ತಿಂಗಳು ಹೊತ್ತಿರುವೆನಲ್ಲವೆ? ಅಂದಬಳಿಕ ನಿನ್ನ ವಿಷಯದ ನನ್ನ ಮೋಹವು ಹ್ಯಾಗೆ ದೂರವಾದೀತು ಹೇಳು! ಖಾನನು ಮಹಾಬಲಿಷ್ಠನು, ನೀನೊಬ್ಬನೇ ಆತನನ್ನು ಕಾಣಲಿಕ್ಕೆ ಹೋಗುವೆಯಾ? ಆದರೆ ಸಂಗಡ ಒಬ್ಬನನ್ನು ಕರಕೊಂಡು ಹೋಗುವ ಮಾತು ಇರುವದಷ್ಟೇ, ಕರಕೊಂಡು ಹೋಗುವದಾದರೆ ಆ ತಾನಾಜಿಯನ್ನು ಕರಕೊಂಡು ಹೋಗು, ಅವನೇ........"

ತಾಯಿಯ ಈ ಮಾತುಗಳನ್ನು ಕೇಳಿ ಮಹಾರಾಜರ ಅಂತಃಕರಣವು ಅತ್ಯಂತ ವ್ಯಥಿತವಾಗಿತ್ತು; ಆದರೆ ತಾನಾಜಿಯ ವಿಷಯವಾಗಿ ತನ್ನ ತಾಯಿಯಲ್ಲಿ ವಾಸಿಸುತ್ತಿದ್ದ ವಿಶ್ವಾಸವನ್ನು ನೋಡಿ ಅವರಿಗೆ ಸ್ವಲ್ಪ ಮೋಜು ಆಯಿತು. ಅವರು ತಾಯಿಗೆ—"ಅವ್ವಾ, ನನ್ನ ಆ ಬಾಲಮಿತ್ರನನ್ನಲ್ಲದೆ ಇಂಥ ಕಠಿಣ ಪ್ರಸಂಗದಲ್ಲಿ ನಾನು ಬೇರೆ ಯಾರನ್ನು ಕರಕೊಂಡು ಹೋದೇನು ಹೇಳು? ಆತನನ್ನೇ ಸಂಗಡ ಕರಕೊಂಡಿರುತ್ತೇನೆ. ಖಾನನು ಮೋಸಮಾಡುವದೇನೋ ನಿಶ್ಚಯವು; ಆದರೆ ಯಾವ ಬಗೆಯಿಂದ ಮೋಸ ಮಾಡುವನೆಂಬದು ಮಾತ್ರ ತಿಳಿದಿರುವದಿಲ್ಲ. ಈಗ ಅದು ತಿಳಿಯುವ ಅವಶ್ಯವೂ ಇಲ್ಲ. ಪ್ರಸಂಗ ಬಂದಾಗ ತಕ್ಕ ಬುದ್ಧಿಯನ್ನು ಕೊಡುವವಳು ಅಂಬಾಬಾಯಿಯಿರುವಳು!" ಎಂದು ನುಡಿಯುತ್ತಿರಲು, ಭೆಟ್ಟಿಯ ಮಂಟಪದ ಕಡೆಯಿಂದ—"ಖಾನನು ಮಂಟಪದಲ್ಲಿ ಯಾವಾಗೋ ಬಂದು

ಕುಳಿತಿರುತ್ತಾನೆ, ತಮ್ಮ ಹಾದಿಯನ್ನು ನೋಡುತ್ತಿರುವನು" ಎಂಬ ಸುದ್ದಿಯು ಬಂದಿತು. ಕೂಡಲೆ ಮಹಾರಾಜರು ಹೊರಡುತ್ತಿರಲು, ಅಷ್ಟ ರಲ್ಲಿ ಮತ್ತೊಬ್ಬನು ಮಹಾರಾಜರನ್ನು ಕರೆಯಲು ಬಂದನು. ಆಗ ಮಹಾ ರಾಜರು ಪುನಃ ಜನನಿಯ ಚರಣಗಳ ಮೇಲೆ ಮಸ್ತಕವನ್ನಿಟ್ಟರು. ಅಷ್ಟ ರಲ್ಲಿ ತಾನಾಜಿಯೂ ಅಲ್ಲಿಗೆ ಬಂದನು. ಆತನು ತೀರ ಹುಜರೆಯಂತೆ ಪೋಷಾಕನ್ನು ಹಾಕಿಕೊಂಡಿದ್ದನು. ಆತನ ಮೊಣಕಾಲತನಕ ಇದ್ದ ಚಣ್ಣ, ಮೇಲೆ ಟೊಂಕದಕೆಳಗೆ ಬರುವಂಥದೊಂದು ಕಂಠಿಕಮೂನಿನ ಅಂಗಿ, ಟೊಂಕದಲ್ಲಿಯ ಪಟ್ಟಿಗೆ ಸಿಕ್ಕಿಸಿಕೊಂಡಿರುವ ಎರಡು ಖಡ್ಗಗಳು; ತಲೆಗೆ ಹಾಕಿಕೊಂಡಿದ್ದ ಒಂದು ಕಂದು ಬಣ್ಣದ ಮುಂಡಾಸ ಇವನ್ನೆಲ್ಲ ನೋಡಿ ಜೀಜಾಬಾಯಿಯವರಿಗೆ ಸ್ವಲ್ಪ ನಗೆ ಬಂದಿತು. ಅವರು ತಾನಾಜಿಗೆ— "ಯಾಕೆ ತಾನಬಾ, ಇಂದು ನೀವು ಈ ಹುಜರೆಯ ವೇಷದಿಂದ ಹೊರಟಿರುವಿ ರೆಂಬಂತೆ ಕಾಣುತ್ತದೆ! ಸೋಗು ಹಾಕಿಕೊಂಡು ಮಂದಿಯ ಹೊಟ್ಟೆಯಲ್ಲಿ ಸೇರಿ ಬೆನ್ನಲ್ಲಿಬಿರಿಯುವ ಕಲೆಯು ನಿನಗೆ ಚನ್ನಾಗಿ ಸಾಧಿಸಿರುವದು ಬಿಡು! ಇರಲಿ, ನೀವಿಬ್ಬರೂ ಜೋಕೆ, ಠಕ್ಕನಿಗೆ ಮಹಾ ಠಕ್ಕರಾಗಿ ನಡೆದು ಇಬ್ಬರೂ ಸುಖರೂಪದಿಂದ ಪಾರಾಗಿ ಬರ್ರಿ" ಎಂದು ನುಡಿಯುತ್ತಿರುವಷ್ಟರಲ್ಲಿ, "ಖಾನನು ಸದರಿನ ಮೇಲೆ ಕುಳಿತಿರುವನೆಂ"ದು,' ಆಳಿನ ಮೇಲೆ ಆಳುಗಳು ಕರೆಯಲಿಕ್ಕೆ ಬಂದವು. ಆಗ ತಾನಾಜಿಯು ಗಟ್ಟಿಯಾಗಿ ನಕ್ಕು—"ಆಯಿ ಸಾಹೇಬ, ನೀವು ಚಿಂತೆಯನ್ನು ಮಾಡಬೇಡಿರಿ. ಈ ಮೂವತ್ತೆರಡು ಹಲ್ಲಿನ ಟಗರು—''ನನ್ನನ್ನು ಜಗದಂಬೆಗೆ ಬಲಿಕೊಡಿರಿ, ಬಲಿಕೊಡಿರಿ, ಎಂದು ಒಂದೇಸವನೆ ಒದರಹತ್ತಿರುತ್ತದೆ. ಜಗದಂಬೆಯ ಚರಣಗಳ ಮೇಲೆ ತನ್ನ ರುಂಡವು ಯಾವಾಗ ಬಿದ್ದೀತೆನ್ನುವ ಹಾಗೆ ಅದಕ್ಕೆ ಆಗಿದೆಯನ್ನು ವಂತೆ ತೋರುತ್ತದೆ. ಇನ್ನು ನಮಗೆ ಹೊರಡಲು ಅಪ್ಪಣೆ ಕೊಡಿರೆಂದ ರಾಯಿತು. ಜಗದಂಬೆಗೆ ಇಂಥ ಬಲಿಯು ದೊರೆತಬಳಿಕ ಮತ್ತೇನು ಬೇಕು?"

ತಾನಾಜಿಯ ಈ ಮಾತುಗಳಿಂದ ಎಲ್ಲರ ಅಸಮಾಧಾನವೂ, ಖಿನ್ನ ತೆಯೂ ದೂರವಾದವು. ಕೂಡಲೆ ಜೀಜಾಬಾಯಿಯವರು—"ಬಾಲಕರಿರಾ, ಸಂತೋಷದಿಂದ ಹೋಗಿರಿ, ನಿಶ್ಶಂಕೆಯಿಂದ ಹೋಗಿರಿ; ನಿರ್ಭಯದಿಂದ

ಹೋಗಿರಿ. ಅಂಬಾಭವಾನಿಯ ವರದಹಸ್ತವು ನಿಮ್ಮ ಮಸ್ತಕದ ಮೇಲಿರು ವದರಿಂದ ಯಾವ ಬಗೆಯ ಅಶುಭ ಪ್ರಸಂಗವೂ ಒದಗಲಾರದು. ಹಿಡಿಯಿರಿ, ಯಶಸ್ಸನ್ನು ಸಂಪಾದಿಸಿಕೊಡುವ ನನ್ನ ಕೈಯೊಳಗಿನ ಈ ತಾಂಬೂಲವನ್ನು ತಕ್ಕೊಳ್ಳಿರಿ; ಮತ್ತು ಹಿಂದಕ್ಕೆ ನನ್ನ ಬಾಲಕನಾದ ಸಂಭಾಜಿಯನ್ನು ಈ ಮೋಸಗಾರ ಖಾನನು ಮೋಸದಿಂದ ಕೊಂದದ್ದರ ಸೇಡನ್ನು ತೀರಿಸಿಕೊಳ್ಳಿರಿ. ಹೋಗಿರಿ, ಭವಾನೀಮಾತೆಗೆ ಒಮ್ಮೆ ನಮಸ್ಕಾರಮಾಡಿ ಹಾದಿಯು ಹಿಡಿ ಯಿರಿ" ಎಂದು ನುಡಿಯಲು, ಮಹಾರಾಜರೂ, ತಾನಾಜಿಯೂ ಕೂಡಲೆ ಅಂಬಾಭವಾನಿಗೆ ಸಾಷ್ಟಾಂಗವಾಗಿ ಎರಗಿದರು. ಮಹಾರಾಜರು ಕೈ ಜೋಡಿಸಿ ಜಗದಂಬೆಗೆ—"ಮಾತೇ, ಜಗದಂಬೇ, ನಿನ್ನ ಕೃಪೆಯು ಸಂಪೂರ್ಣವಾಗಿ ಇರಲಿ. ನಿನ್ನ ಮೂರ್ತಿಯನ್ನು ಅಪಮಾನಗೊಳಿಸಿದ ನೀಚನ ರುಂಡವನ್ನು ಚಂಡಾಡಿ ನಿನ್ನ ಚರಣಕ್ಕರ್ಪಿಸಿದ ಹೊರತು ನಿನಗೆ ಸಮಾಧಾನವು ಹ್ಯಾಗಾಗಬೇಕು? ಆದರೆ ನೀನೇ ನಮ್ಮ ಕೈಯಿಂದ ಆತನ ಶಾಸನಮಾಡಿಸು. ನಿನ್ನ ಕೃಪೆಯಿಲ್ಲದೆ ನಮ್ಮ ಕೈಯಿಂದ ಯಾವ ಕಾರ್ಯವು ಸಾಧಿಸುವದು? ಜಯಜಗದಂಬೇ, ಕರುಣಿಸು" ಎಂದು ನುಡಿದು ಮಹಾ ರಾಜರೂ, ಅವರ ಆ ಬಾಲ ಸ್ನೇಹಿತನೂ ಅಲ್ಲಿಂದ ಹೊರಟುಹೋದರು. ಇತ್ತ ಖಾನನು, ಒಂದು ಗಳಿಗೆ ಹಾದಿಯು ನೋಡಿದನು, ಎರಡುಗಳಿಗೆ ಹಾದಿಯು ನೋಡಿದನು, ಮೂರು ಗಳಿಗೆಯಾದರೂ ಮಹಾರಾಜರ ಸುದ್ದಿಯೇ ಇಲ್ಲ. ಆಗ ಆತನು ಮತ್ತೆ ಆಳನ್ನು ಕಳಿಸಿದನು.

ಮೇಲೆ ಹೇಳಿದಂತೆ ಮಹಾರಾಜರು ಹೊರಟು ತಾನಾಜಿಯೊಡನೆ ಮಂಟಪದ ಕಡೆಗೆ ನಡೆದರು. ಮಹಾರಾಜರು ಬಂದರೆಂಬದನ್ನು ಕೇಳಿದ ಕೂಡಲೆ ಕೃಷ್ಣಾಜಿಭಾಸ್ಕರನೂ, ಗೋಪೀನಾಥಪಂತನೂ ಸನ್ಮಾನಾರ್ಥ ವಾಗಿ ಅವರ ಎದುರಿಗೆ ಹೋದರು. ಆಗ ಶಿವಾಜಿಮಹಾರಾಜರೂ ಬ್ರಾಹ್ಮ ಣರಿಗೆ ನಮಸ್ಕಾರ ಮಾಡಿದರು. ಖಾನನೂ ತಾನು ಕುಳಿತ ಸ್ಥಳದಿಂದ ಎದ್ದು ನಾಲ್ಕು ಹೆಜ್ಜೆ ಮುಂದಕ್ಕೆ ಬಂದನು. ತಾನಾಜಿಯ ಕಡೆಗೆ ಖಾನನ ದೃಷ್ಟಿಯು ಹೋಯಿತು. ತಾನಾಜಿಯ ಟೊಂಕದಲ್ಲಿ ಅಲೆದಾಡುತ್ತಿರುವ ಎರಡು ಖಡ್ಗಗಳನ್ನು ಆತನು ನೋಡಿದನು; ಆದರೆ ಮರಾಟರಲ್ಲಿ ಹೀಗೆ ಜೋಡು ಖಡ್ಗಗಳನ್ನು ಧರಿಸುವ ಪರಿಪಾಠವಿದ್ದದ್ದರಿಂದಾಗಲಿ, ಇಂಥದಕ್ಕೆಲ್ಲ

ನಾನು ಸೊಪ್ಪುಹಾಕುವವನಲ್ಲೆಂಬ ದಿಮಾಕನ್ನು ತೋರಿಸುವದಕ್ಕಾಗಿ ಯಾಗಲಿ ಖಾನನು ಜೋಡು ಖಡ್ಗಗಳನ್ನು ಧರಿಸಿದ ಬಗ್ಗೆ ತಕರಾರನ್ನು ಮಾಡಲಿಲ್ಲ. ತಾನಾಜಿಯು ಸೈದಾಬಂಡನಿಂದ ಸ್ವಲ್ಪ ದೂರದಲ್ಲಿ ನಿಂತು ಕೊಂಡನು. ಖಾನನ, ಹಾಗು ಶಿವಾಜಿಯ ಭೆಟ್ಟಿಯು ಹಳೆಯ ಪದ್ಧತಿ ಯಂತೆ ಆಯಿತು. ಆದರೆ ಭೆಟ್ಟಿಯ ಕಾಲದಲ್ಲಿಸಹ ಘಾತವಾಗಬಹು ದೆಂದು ಮಹಾರಾಜರು ಮೊದಲೇ ತರ್ಕಿಸಿದ್ದರು; ಆದ್ದರಿಂದ ಅವರು ಒಳ್ಳೇ ಜಾಗರೂಕರಾಗಿದ್ದರು. ಖಾನನು ಬಹು ಎತ್ತರ, ಧಷ್ಟಪುಷ್ಟ; ಮಹಾರಾಜರು ಗಿಡ್ಡ, ಪುಡಿ ಆಳು. ಖಾನನು ಆಲಿಂಗನ ಕೊಡುವದಕ್ಕಾಗಿ ಎರಡೂ ಕೈಗಳನ್ನು ಮುಂದಕ್ಕೆ ಚಾಚಿರುವಾಗ, ಮಹಾರಾಜರು ಮುಂದಕ್ಕೆ ಸಾಗಿಹೋಗಲು, ಖಾನನು ಅವರ ತಲೆಯನ್ನು ಬಗಲಲ್ಲಿ ಹಿಚಿಕಿಹಿಡಿದು, ತನ್ನ ಕೈಯೊಳಗಿನ ಖಡ್ಗದಿಂದ ಮಹಾರಾಜರ ತಲೆಗೆ ಕಸುವಿನಿಂದ ಹೊಡೆ ದನು; ಆದರೆ ಖಡ್ಗದ ಪೆಟ್ಟು ಮಹಾರಾಜರ ಶಿರಸ್ತ್ರಾಣಕ್ಕೆ ತಗಲಿ, "ಝುಣ ಝುಣಣಣ" ಎಂದು ಸಪ್ಪಳವಾಯಿತು. ಆಗ ಮಹಾರಾಜರ ಮಸ್ತಕದ ಸಂರಕ್ಷಣವು ಶಿರಸ್ತ್ರಾಣದಿಂದ ಬಹು ಚನ್ನಾಗಿ ಆಯಿತು. ಇಷ್ಟೆಲ್ಲ ಒಂದು ಕ್ಷಣದಲ್ಲಿ ಮಿಂಚಿಹೊಯಿತು. ಎರಡನೆಯ ಕ್ಷಣದಲ್ಲಿ ಖಾನನು ಚಿವುಗು ಟ್ಟುತ್ತ "ಯಾ ಅಲ್ಲಾ! ದಗಾದಗಾ" ಎಂದು ಒದರುತ್ತ ನೆಲಕ್ಕೆ ಉರುಳಿ ದನು. ಮಹಾರಾಜರು ತಮ್ಮ ಕುತ್ತಿಗೆಯನ್ನು ಖಾನನು ಬಗಲಲ್ಲಿ ಹಿಡಿದು ಹಿಚಕಹತ್ತಿದ ಕೂಡಲೆ ಅವರು—"ದುಷ್ಟಾ, ವಿಶ್ವಾಸಘಾತಕ್ಯಾ" ಎಂದು ಸಂತಾಪದಿಂದ ನುಡಿದು, ತಮ್ಮ ಎಡಗೈಯೊಳಗಿನ ಹುಲಿಯುಗುರುಗಳನ್ನು ಅವನ ಹೊಟ್ಟೆಯಲ್ಲಿ ಇರಿದು ಅವನ ಕರಳುಗಳನ್ನು ಹೊರಗೆ ಹಿರಿದರು! ತಾನ್ನು ಮೊದಲು ಮೋಸ ಮಾಡಹೋಗಿ, ಅದು ಸಾಧಿಸದಿರುವಾಗ ಮಹಾ ರಾಜರು ತಕ್ಕ ಶಾಸನಮಾಡಲು "ದಗಾ! ದಗಾ" ಎಂದು ಒದರ ಹತ್ತಿದ್ದ ಖಾನನು ಮೇಲೆ ಹೇಳಿದಂತೆ ನೆಲಕ್ಕೆ ಉರುಳಲು, ಮಹಾರಾಜರು ಅವನ ಕೈಯೊಳಗಿನ ಖಡ್ಗವನ್ನು ತಕ್ಕೊಂಡು ಮಂಟಪದಿಂದ ಹೊರಟು ಬಂದರು. ಇತ್ತ ತಾನಾಜಿಯು ಸೈದಾಬಂಡನಿಗೆ—"ನೀನು ಶರಣುಬಾ, ಜೀವದಾನ ಕೊಡುವೆನು," ಎಂದು ಹೇಳಿದನು; ಆದರೆ ಆ ಶೂರ ಸೈಯದನು ಕೇಳದೆ ಯುದ್ಧಕ್ಕೆ ನಿಲ್ಲಲು, ಅವರಿಬ್ಬರ ಯುದ್ಧವು ನಡೆಯಿತು. ಸ್ವಲ್ಪ ಹೊತ್ತಿ

ನಲ್ಲಿಯೇ ಸೈದಾಬಂಡನನ್ನು ತಾನಾಜಿಯು ನೆಲಕ್ಕುರುಳಿಸಿದನು. ಮಂಟಪ ದಲ್ಲಿ ಆರೇ ಜನರಿದ್ದರು. ಖಾನನು, ಖಾನನ ವಕೀಲನು, ಸೈದಾಬಂಡನು; ಇತ್ತ ಮಹಾರಾಜರು, ಮಹಾರಾಜರ ವಕೀಲನು, ತಾನಾಜಿಯು. ಖಾನನು ನೆಲಕ್ಕುರುಳಿದ ಕೂಡಲೆ ಆತನ ಬೋವಿಗಳು ಮೇಣೆಯನ್ನು ತಂದು ಅದರಲ್ಲಿ ಆತನನ್ನು ಹಾಕಿಕೊಂಡು ಹೋಗುತ್ತಲಿದ್ದರು. ಖಾನನ ಪ್ರಾಣವು ಇನ್ನೂ ಹೊಗಿದ್ದಿಲ್ಲ. ಅಷ್ಟರಲ್ಲಿ ಖಂಡೋಜಿಯೇ ಮೊದಲಾದ ಮಹಾರಾಜರ ಸರದಾರರು ಅಲ್ಲಿಗೆ ಬಂದು ಮೇಣೆಯನ್ನು ಮುತ್ತಿದರು. ಬೋವಿಗಳು ಪ್ರಾಣಭಯದಿಂದ ಮೇಣೆಯನ್ನು ಚಲ್ಲಿಕೊಟ್ಟು ಓಡಿಹೋಗಲು, ಖಂಡೋಜಿಯು ಖಾನನ ಶಿರಸ್ಸನ್ನು ತುಂಡರಿಸಿ, ಬರ್ಚಿಯತುದಿಗೆ ಚುಚ್ಚಿಕೊಂಡುಹೋಗಿ ಪ್ರತಾಪಗಡದ ಬಾಗಿಲಿಗೆ ಅದನ್ನು ಕಟ್ಟಿದನು!

ಖಾನನು ಮೋಸಮಾಡಹೋಗಿ ಅದು ಸಾಧಿಸದೆ ಮಹಾರಾಜರಿಂದ ಆತನು ಮರಣಹೊಂದಿದ ಪಕ್ಷದಲ್ಲಿ ಅದನ್ನು ಸುತ್ತುಮುತ್ತಲಿನ ಸರದಾರರಿಗೆ ತಿಳಿಸುವ ಸಾಧನವೆಂದರೆ, ದುರ್ಗದ ಮೇಲಿನ ಐದು ತೋಫುಗಳನ್ನು ಹಾರಿಸುವದು. ಅದರಂತೆ ಐದು ತೋಫುಗಳನ್ನು ಹಾರಿಸಿದ ಕೂಡಲೇ, ಅರಣ್ಯದಲ್ಲಿ ಅಲ್ಲಲ್ಲಿ ಅಡಗಿಕೊಂಡು ಕುಳಿತಿದ್ದ ಸರದಾರರು ತಮ್ಮ ತಮ್ಮ ಸೈನ್ಯಗಳೊಡನೆ ಖಾನನ ಸೈನ್ಯದಮೇಲೆ ಆಯಾ ಸ್ಥಳದಲ್ಲಿ ದುಮುಕಿ, ಅದನ್ನು ತುಂಡರಿಸ ಹತ್ತಿದರು. ತಮ್ಮ ಖಾನರು ನಿಶ್ಚಯವಾಗಿ, ಶಿವಾಜಿಯನ್ನು ಕೊಲ್ಲುವರು, ಕೂಡಲೇ ನಾವು ದುರ್ಗವನ್ನು ತಕ್ಕೊಳ್ಳೋಣ, ಎಂದು ಎದುರು ನೋಡುತ್ತಿದ್ದ ಖಾನನ ಸೈನ್ಯದಮೇಲೆ ಹೀಗೆ ಒಮ್ಮೆಲೆ ಮರಾಟರು ಬಿದ್ದದ್ದರಿಂದ ಖಾನನ ಸೈನ್ಯದಲ್ಲಿ ಅವ್ಯವಸ್ಥೆ ಯುಂಟಾಯಿತು. ಅವರು ಬಂದ ದಾರಿಯಿಂದ ಓಡಹತ್ತಿದರು; ಆದರೆ ಹಾದಿಯಲ್ಲಿ ಗಿಡಗಳ ಟೊಂಗೆಗಳನ್ನು ಒಟ್ಟಿದ್ದರಿಂದ ಅವರಿಗೆ ಓಡಿಹೋಗಲಿಕ್ಕೆ ಬರಲೊಲ್ಲದು. ಇತ್ತ ಮರಾಟರು—"ಇವರು ನಮ್ಮ ಮೂರ್ತಿಗಳನ್ನು ಒಡೆದ ನೀಚರು, ನಮ್ಮ ಗುಡಿಗಳನ್ನು ಅಪವಿತ್ರ ಮಾಡಿದ ದುಷ್ಟರು, ನಮ್ಮನ್ನು ಪರಿಪರಿಯಾಗಿ ಪೀಡಿಸಿದ ಅಧಮರು," ಎಂದು ಸಿಟ್ಟಿನಿಂದ ನುಡಿಯುತ್ತ ಅವರನ್ನು ಒಂದೇ ಸವನೆ ತುಂಡರಿಸಹತ್ತಿದರು. "ಹರಹರಮಹಾದೇವ" "ಜಯಭವಾನಿ" ಎಂಬ ಧ್ವನಿಯು ನಾಲ್ಕೂ ಕಡೆಗೆ ಕೇಳಹತ್ತಿತು. ಈ ಪ್ರಸಂಗದಲ್ಲಿ ಖಾನನ

ಬಹುತರ ಯಾವತ್ತೂ ಸೈನ್ಯದ ಸಂಹಾರವಾಯಿತು. ವಿಜಾಪುರದ ಪಕ್ಷಪಾತಿಗಳಾದ ಎಷ್ಟೋ ಮರಾಠಾ ಸರದಾರರು ಮಹಾರಾಜರ ಸೆರೆಯಾಳುಗಳಾದರು. ಫಾಜಿಲಖಾನನು ತನ್ನ ತಾಯಿಯನ್ನು-ಹೆಂಡತಿಯನ್ನು ಕಟ್ಟಿಕೊಂಡು ಓಡಿಹೋದನು; ಆತನು ಓಡಿಹೋದನೆನ್ನುವದಕ್ಕಿಂತ ಮರಾಟರೇ ಅವನನ್ನು ಓಡಿಹೋಗಗೊಟ್ಟರೆಂದು ಹೇಳುವದು ಸಯುಕ್ತಿಕವು; ಯಾಕಂದರೆ ಹೆಂಗಸರ ಗೊಡವೆಗೆ ಹೋಗದಂತೆ ಮಹಾರಾಜರ ಕಟ್ಟಪ್ಪಣೆಯಾದ್ದರಿಂದ, ಫಾಜೀಲಖಾನನನ್ನು ಮರಾಟರು ಬುದ್ಧಿಪೂರ್ವಕವಾಗಿ ಬೆನ್ನಟ್ಟಿಹೋಗಲಿಲ್ಲ. ಅಫಜುಲಖಾನನ ದಂಡಿನೊಡನೆ ಆದ ಈ ಕದನದಲ್ಲಿ ಮಹಾರಾಜರಿಗೆ ೬೫ ಆನೆಗಳು, ೪೦೦೦ ಕುದುರೆಗಳು, ೧೨೦೦೦ ಒಂಟಿಗಳು, ೨೦೦ ಅರಿವೆಯ ಗಂಟುಗಳು, ೭೦೦೦೦೦ ರೋಖ ರೂಪಾಯಿಗಳು ದೊರೆತವು. ಇವುಗಳ ಹೊರತು ಲಕ್ಷಾಂತರ ರೂಪಾಯಿಗಳ ವಸ್ತ-ಒಡವೆಗಳು ಸಿಕ್ಕಿದ್ದು ಬೇರೆಯೆ!

೨೦ನೆಯ ಪ್ರಕರಣ

ಆನಂದ.

ಈ ಮೇರೆಗೆ ಮಹಾರಾಜರು ಭಯಂಕರವಾದ ಸಂಕಟದಿಂದ ಮುಕ್ತರಾದ ವರ್ತಮಾನವು ಹಾ ಹಾ ಅನ್ನುವದರೊಳಗಾಗಿ ಪ್ರತಾಪಗಡದ ಮೇಲೆ ಹೋಯಿತು. ದುರ್ಗದೊಳಗಿನ ಜನರೆಲ್ಲ ಚಿಂತಾಕ್ರಾಂತರಾಗಿ, ಮಹಾರಾಜರಿಗೆ ವಿಜಯಪ್ರಾಪ್ತಿಯಾಗಲು ದೇವರನ್ನು ಬೇಡಿಕೊಳ್ಳುತ್ತಲಿದ್ದರು. ಜೀಜಾಬಾಯಿಯವರಂತು ಸಂಭಾಜಿಯೊಡನೆ ಅಂಬಾಬಾಯಿಯ ಸನ್ನಿಧಿಯಲ್ಲಿ ಕುಳಿತವರು ಮೇಲಕ್ಕೆದ್ದಿದ್ದಿಲ್ಲ. ಹೈಮವತಿಯು ಬಂಧಮುಕ್ತಳಾಗಿ ಈ ಮೊದಲೆ ಜೀಜಾಬಾಯಿಯವರ ಬಳಿಯಲ್ಲಿ ಬಂದು ಕುಳಿತುಕೊಂಡಿದ್ದಳು. ಆಕೆಯ ಮುಖದಿಂದಲೇ ಮಗನ ವಿಜಯದ ವರ್ತಮಾನವು ಆ ಜೀಜಾಬಾಯಿಯವರಿಗೆ ಗೊತ್ತಾಗಿತ್ತು. ಖಾನನ ಸಂಹಾರವಾಗಿ ಮರಾಟರು

ಆತನ ಸೈನ್ಯದಮೇಲೆ ಬಿದ್ದಾಗಲೇ ಜಾಧವರಾಯನು ತನ್ನ ಹೆಂಡತಿಯನ್ನು ಕರಕೊಂಡು ಪ್ರತಾಪಗಡದ ಮೇಲೆ ಬಂದಿದ್ದನು. ಮಹಾರಾಜರು ಅಂಬಾಬಾಯಿಯ ದರ್ಶನಕ್ಕಾಗಿ ಬರಲು, ಅವನ ಮೂರ್ತಿಮಂತ ಅಂಬಾಬಾಯಿಯಂತೆ ಇದ್ದ ಜನನಿಯ ದರ್ಶನವೂ ಅವರಿಗೆ ಅಲ್ಲಿಯೇ ಆಯಿತು. ಮಹಾರಾಜರು ತಾನಾಜಿಯೊಡನೆ ಅಂ ಬಾ ಬಾ ಯಿ ಗೆ ಸಾಷ್ಟಾಂಗವೆರಗಿ, ತಾಯಿಯ ಚರಣಗಳ ಮೇಲೆ ಮಸ್ತಕವಿಟ್ಟರು. ಬಳಿಕ ಅವರ ಲಕ್ಷವು ಯೋಗಿನಿಯ ವೇಷಧಾರಿಯಾದ ಹೈಮವತಿಯ ಕಡೆಗೆ ಹೋಯಿತು. ಆಗಿನ ಮೂಕವೃತ್ತಿಯ ಮಹಾರಾಜರ ಮುಖದಲ್ಲಿ ವ್ಯಕ್ತವಾಗಿದ್ದ ಕೃತಜ್ಞತೆಯ ಮುದ್ರೆಯನ್ನು ವಿನಯದಿಂದ ನೋಡಿದ ಹೈಮವತಿಯು, ತನ್ನನ್ನು ಧನ್ಯಳೆಂದು ಭಾವಿಸಿದಳು. ಮಹಾರಾಜರು ತಮ್ಮ ಜನನಿಯನ್ನು ಕುರಿತು– "ಅಮ್ಮಾ, ಈ ಹೈಮವತಿಯಂಥ ಪತಿವ್ರತಾ ಸ್ತ್ರೀಯರು ನನ್ನ ಹಿತಚಿಂತನದಲ್ಲಿ ತೊಡಗಿದ್ದರಿಂದಲೇ ನಾನು ಇಂದು ಗಂಡಾಂತರದಿಂದ ಮುಕ್ತನಾಗಿ ದುಷ್ಟರ ಶಾಸನ ಮಾಡಿದೆನು. ಈ ಹೈಮವತೀದೇವಿಯು ನಿನ್ನಂತೆಯೇ ನನಗೆ ಪೂಜ್ಯ ಜನನಿಯಾಗಿದ್ದಾಳೆ. ಆಕೆಯು ನನ್ನ ಜನ್ಮದಾತೃವಾಗಿರುವಳು" ಎಂದು ಶ್ಲಾಘಿಸಲು, ಜೀಜಾಬಾಯಿಯವರು ಸುರಿಯುವ ಆನಂದಾಶ್ರುಗಳನ್ನು ಒರಿಸಿಕೊಳ್ಳುತ್ತ–"ಬಾಳಾ, ಶಿವಬಾ, ಇಂಥ ಪತಿವ್ರತಾ ಸ್ತ್ರೀಯರ ಪಾತಿವ್ರತ್ಯದ ಪುಣ್ಯವೂ, ತಾನಾಜಿ, ಜಾಧವರಾಯರಂಥ ನಿನ್ನ ಮಿತ್ರರ ಸಹಾಯಸಂಪತ್ತೂ ನಿನ್ನನ್ನು ಉದ್ಧರಿಸಿರುವಲ್ಲಿ ಸಂಶಯವಿಲ್ಲ. ಬಾಳಾ, ತಾನಾಜೀ, ಇತ್ತಬಾ. ರಾಮ ಲಕ್ಷ್ಮಣರು ರಾವಣನನ್ನು ಕೊಂದು ಕೌಸಲ್ಯಾಮಾತೆಯನ್ನು ನಮಸ್ಕರಿಸಿದಾಗ ಆಕೆಗೆ ಎಷ್ಟು ಆನಂದವಾಗಿರಬಹುದೆಂಬದರ ಅನುಭವವು ಇಂದು ನನಗಾಯಿತು! ಅಂಬಾಬಾಯಿಯು ಹೇಳಿಕೊಳ್ಳುವಂತೆ ಮಾಡಿದ್ದರಿಂದ ಎಲ್ಲ ಚಂದವಾಯಿತು. ಏನಾದರೂ ಅಸ್ತವ್ಯಸ್ತವಾಗಿದ್ದರೆ, ಎಂಥ ಅಮಂಗಲ ಸ್ಥಿತಿಯು ಒದಗುತ್ತಿತ್ತಲ್ಲ." ಎಂದು ನುಡಿಯುತ್ತಿರಲು ಮಹಾರಾಜರು ನಡುವೇ ಬಾಯಿಹಾಕಿ—ಅವ್ವಾ, ಇನ್ನು ಆ ವಿಚಾರವೇತಕ್ಕೆ? ಏನಾದರೂ ಅಸ್ತವ್ಯಸ್ತವಾಗಿದ್ದರೆ, ಅಂಬಾಬಾಯಿಯು ಯಾರ ಮುಖದಿಂದಾದರೂ ಸ್ವರಾಜ್ಯದ ಸಂರಕ್ಷಣವನ್ನು ಮಾಡಿಸುತ್ತಿದ್ದಳು. ಆದರೆ ದೇವಿಯ ಕೃಪೆಯಿಂದಲೂ,

ಶ್ರೀಸಮರ್ಥರ ಆಶೀರ್ವಾದದಿಂದಲೂ, ನಿಮ್ಮ ಪುಣ್ಯದಿಂದಲೂ, ಈ ಪುಣ್ಯಾತ್ಮರ ಸಹಾಯದಿಂದಲೂ ಕಾರ್ಯವು ಯಥಾಸ್ಥಿತವಾಗಿ ಸಾಧಿಸಿರುತ್ತದೆ. ಇನ್ನು ಆ ಮಾತು ಏತಕ್ಕೆ? ಏಳಿರಿ ಇನ್ನು, ನೀವು ಬಾಯಲ್ಲಿ ನೀರು ಹಾಕಿರುವದಿಲ್ಲ. ಉಪವಾಸವ್ರತವನ್ನು ಮುಗಿಸಿ ಊಟಮಾಡಿರಿ. ಏಳಿರಿ. ಈ ಹೈಮವತಿದೇವಿಯನ್ನು ಕರಕೊಂಡು ಹೋಗಿರಿ. ನಿಮ್ಮ ಶಿವಬಾನು ಇಂಥ ಪುಣ್ಯವಂತರ ಋಣದಿಂದ ಎಷ್ಟು ಜನ್ಮಗಳಲ್ಲಿ ಮುಕ್ತನಾಗುವನೋ ಏನೋ! ನಾನೂ ಶ್ರೀಧರಸ್ವಾಮಿಗಳ ದರ್ಶನಮಾಡಿಕೊಂಡು ಸ್ನಾನಕ್ಕೆ ಹೋಗುವೆನು.

ಈ ಮೇರೆಗೆ ನುಡಿದು ಮಹಾರಾಜರು ಮೇಲಕ್ಕೆದ್ದು ಹೋಗುತ್ತಿರಲು, ಒಬ್ಬ ಹುಜರೆಯು ಬಂದು—"ಮಹಾರಾಜ, ದುಷ್ಟನ ರುಂಡವನ್ನು ದುರ್ಗದ ಬಾಗಿಲಿಗೆ ಕಟ್ಟಿದೆವು." ಎಂದು ನುಡಿಯುತ್ತಿರಲು, ಮಹಾರಾಜರು ಮುಂದೆ ಆತನನ್ನು ಮಾತಾಡಗೊಡದೆ ಸಿಟ್ಟಿನಿಂದ—"ಯಾವನವನು? ಯಾವ ಮೂರ್ಖನು ಈ ನೀಚ ಕೆಲಸವನ್ನು ಮಾಡಿದನು! ಶತ್ರುವು ಮರಣಹೊಂದಿದ ಬಳಿಕ ಅವನ ಶವವನ್ನು ಅವಮಾನಗೊಳಿಸುವದು ಶೂರರ ಲಕ್ಷಣವಲ್ಲ. ಹಾಗಿದ್ದರೆ ನಾನೇ ಖಾನನ ಶಿರಸ್ಸನ್ನು ತುಂಡರಿಸುತ್ತಿದ್ದಿಲ್ಲವೆ? ನಾಉ ಜಾವಳಿಯಿಂದ, ಇಲ್ಲವೆ ನಾಶಿಕದಿಂದ ಒಬ್ಬ ಮುಸಲ್ಮಾನನನ್ನು ಕರೆಸಿ ವಿಧಿಯಂತೆ ಖಾನನ ಶವಕ್ಕೆ ಮಣ್ಣುಕೊಡಬೇಕೆನ್ನುತ್ತಿರಲು, ಅದಾವನು ಈ ಅಯೋಗ್ಯ ಕೆಲಸವನ್ನು ಮಾಡಿದನು! ಹೋಗು, ತಾನಾಜೀ, ಹೀಗೆಯೇ ಹೋಗಿ ಆ ರುಂಡವೆಲ್ಲಿರುತ್ತದದನ್ನು ತಕ್ಕೊಂಡು ಹೋಗಿ ಶವದ ಬಳಿಯಲ್ಲಿ ಇಡು; ಒಬ್ಬ ಮುಸಲ್ಮಾನನನ್ನು ಕರಿಸಿ ಮಣ್ಣುಕೊಡುವ ವ್ಯವಸ್ಥೆ ಮಾಡು. ಶವಕ್ಕೆ ಮಣ್ಣು ಕೊಟ್ಟಮೇಲೆಯೇ ನಾನು ಸ್ನಾನಕ್ಕೆ ಹೋಗುತ್ತೇನೆ. ಶಿವಾಜಿಯು ವಿಶ್ವಾಸಘಾತುಕನ ಸಂಗಡ ವಿಶ್ವಾಸಘಾತದಿಂದ ನಡೆದುಕೊಂಡಾನು; ಆದರೆ ಶವದ ಅಪ್ರತಿಷ್ಠೆಮಾಡುವಲ್ಲಿ ಆತನು ಎಂದೂ ಆನಂದಪಡಲಾರನು. ಹೋಗು, ಎಂದು ಹೇಳಿ ತಾನಾಜಿಯನ್ನು ಕಳಿಸಿಕೊಟ್ಟರು. ತಾನಾಜಿಯು ಅಪ್ಪಣೆಯಂತೆ ಖಾನನ ಶಿರಸ್ಸನ್ನು ಆತನ ಶವದ ಬಳಿಯಲ್ಲಿಟ್ಟು, ಶವದ ಮೇಲೆ ಒಂದು ಹೊಸ ಶಲ್ಲೆಯನ್ನು ಹೊಚ್ಚಿದನು. ಬಳಿಕ ಜಾವಳಿಯಿಂದ ಒಬ್ಬ ಮುಲ್ಲಾನನ್ನು

ಕರಿಸಿ, ಮಣ್ಣುಕೊಡುವ ಸಿದ್ಧತೆಯನ್ನು ಮಾಡಿದನು. ಆಮೇಲೆ ಮಹಾರಾಜರು ಬಂದು ಖಾನನ ಮರ್ಯಾದೆಗೆ ತಕ್ಕಂತೆ ಆತನ ಶವಕ್ಕೆ ಮಣ್ಣು ಕೊಟ್ಟು, ತಾವು ಶ್ರೀಧರ ಸ್ವಾಮಿಗಳ ದರ್ಶನವನ್ನು ತಕ್ಕೊಂಡರು. ನಡೆದ ವರ್ತಮಾನವನ್ನೆಲ್ಲ ಮಹಾರಾಜರು ನಿವೇದಿಸಲು, ಅದನ್ನು ಕೇಳಿ ಸ್ವಾಮಿಗಳಿಗೆ ಪರಮಾನಂದವಾಯಿತು. ಅವರು ಮಹಾರಾಜರಿಗೆ ಹೇಳಿ ಸಮರ್ಥರಿಗೆ ಈ ವರ್ತಮಾನವನ್ನು ತಿಳಿಸುವದಕ್ಕಾಗಿ ಒಬ್ಬ ಸವಾರನನ್ನು ಕಳಿಸಿದರು. ಸಮರ್ಥರು ತ್ರಿಕಾಲಜ್ಞರಾಗಿದ್ದರೂ ಲೌಕಿಕಕ್ಕಾಗಿ ವರ್ತಮಾನವನ್ನು ಕಳಿಸುವದು ಯೋಗ್ಯವೆಂದು ಎಲ್ಲರೂ ತಿಳಿದರು. ಬಳಿಕ ಶ್ರೀಧರ ಸ್ವಾಮಿಗಳು ಮಹಾರಾಜರನ್ನು ಕುರಿತು—"ರಾಜಾ, ನೀನು ಸ್ವರಾಜ್ಯವನ್ನು ಸ್ಥಾಪಿಸುತ್ತಿರುವಾಗ ಹಲವು ವಿಘ್ನಗಳು ಬರುತ್ತಿದ್ದರೂ, ಶ್ರೀಗುರು ಕೃಪೆಯಿಂದ ನೀನು ಅವುಗಳಿಂದ ಮುಕ್ತನಾಗಿ, ರಾಹುಮುಕ್ತ ಸೂರ್ಯನಂತೆ ಪ್ರಕಾಸಿಸುವೆ! ಬಂದ ವಿಘ್ನಗಳನ್ನು ದೂರಮಾಡಿಕೊಂಡು ಜಯವನ್ನು ಸಂಪಾದಿಸಿದರೆಯೇ ಜಯಕ್ಕೆ ಬೆಲೆಬರುತ್ತದೆ. ಇಲ್ಲದಿದ್ದರೆ ಜಯದ ಮಹತ್ವವಾದರೂ ಏನು? ಹೋಗು, ನೀನು ಇನ್ನು ಸ್ನಾನಮಾಡಿ ಊಟ ಮಾಡು. ನೀನು ಬರುವವರೆಗೆ ಊಟಮಾಡಬಾರದೆಂದು ನಾವೂ ಉಪವಾಸವಿರುವೆವು, ಬಾಯಲ್ಲಿ ನೀರು ಹಾಕಿಲ್ಲ, ಎಂದು ಹೇಳಲು, ಮಹಾರಾಜರು ಸ್ವಾಮಿಗಳನ್ನು ವಂದಿಸಿ ಸ್ನಾನಕ್ಕೆ ಹೋದರು. ಮಹಾರಾಜರ ಊಟವಾಗುವವರೆಗೆ ಎಂಥ ಮಹತ್ವದ ಸುದ್ದಿಯಿದ್ದರೂ ಅದನ್ನು ಹೇಳಬಾರದೆಂದು ಅವರ ಪರಿವಾರದವರು ನಿಶ್ಚಯಿಸಿ, ಯಾರೂ ಮಹಾರಾಜರ ಬಳಿಗೆ ಹೋಗದಂತೆ ಜನರನ್ನು ಪ್ರತಿಬಂಧಿಸುತ್ತಲಿದ್ದರು.

ಮಹಾರಾಜರ ಭೋಜನವಾಯಿತು. ಬಳಿಕ ಎಲ್ಲ ಸ್ವಾಮಿಭಕ್ತರೂ ಊಟಮಾಡಿದರು. ಅಂದು ಪ್ರತಾಪಗಡದಲ್ಲಿ ಆನಂದವು ತುಂಬಿ ತುಳುಕುತ್ತಲಿತ್ತು. ಅಂದಿನ ರಾತ್ರಿಯಲ್ಲಿ ಮಹಾರಾಜರಿಗೆ ಗಡದ್ದ ನಿದ್ರೆಯು ಹತ್ತಿತು. ಒಬ್ಬಮಹಾಜರಿಗೆ ಏಕೆ, ಇಡಿಯ ಪ್ರತಾಪಗಡವೇ ಅಂದು ನಿಶ್ಚಿಂತೆಯಿಂದ ನಿದ್ದೆಮಾಡುತ್ತಿತ್ತೆಂದು ಹೇಳಬಹುದು. ಮಹಾರಾಜರು ಉಷಃಕಾಲದಲ್ಲಿ ಎದ್ದರು. ಅಂದು ನೋಡಿದತ್ತೆಲ್ಲ ಆನಂದವು ತುಂಬಿ ತುಳುಕುತ್ತಲಿತ್ತು. ಅಂದು ಒಂಬತ್ತು ತಾಸಿನ ಕಡೆಗೆ ಮಹಾರಾಜರು

ದರ್ಬಾರವನ್ನು ಕೂಡಿಸಿ, ಮಹಾರಾಷ್ಟ್ರ ವೀರರನ್ನು ಅವರವರ ಯೋಗ್ಯತೆಯಂತೆ ಸಂಭಾವಿಸಿದರು. ಅಷ್ಟರಲ್ಲಿ, ಚಂದ್ರರಾವ ಮೋರೆಯ ಮಗಳನ್ನು ಹುಡುಕಲಿಕ್ಕೆ ಹೋದವರು, ಆಕೆಯು ಒಂದು ಮಡುವಿನಲ್ಲಿ ಬಿದ್ದು ಮುಣುಗಿದ್ದಳೆಂತಲೂ, ಆಕೆಯ ಶವವನ್ನು ಈ ಖಂಡೇರಾಯನು ತೆಗೆಯುತ್ತಿದ್ದನೆಂತಲೂ ಹೇಳಿದರು. ಆಗ ಮಹಾರಾಜರು ಸ್ವಲ್ಪಹೊತ್ತು ಸುಮ್ಮನೆ ಕುಳಿತು ಯೋಚಿಸಿದ ಬಳಿಕ ತಾರಾಬಾಯಿಯ ಶವಕ್ಕೆ ಅಗ್ನಿಸಂಸ್ಕಾರ ಮಾಡಲು ಆಜ್ಞಾಪಿಸಿ, ಖಂಡೇರಾಯನನ್ನು, ಅವನ ದ್ರೋಹದ ಆಚರಣೆಗಾಗಿ ತಮ್ಮ ರಾಜ್ಯದ ಗಡಿ ದಾಟಿಸಿಬಿಟ್ಟರು. ಹೀಗೆ ಮಹಾರಾಜರು ದರ್ಬಾರದ ಕಾರ್ಯವನ್ನು ಮುಗಿಸಿ, ಪುನಃ ಅಂಬಾಬಾಯಿಯ ದರ್ಶನ ಮಾಡಿಕೊಂಡು, ತಮ್ಮ ಜನನಿಯ ಬಳಿಗೆ ಹೋದರು. ಬಳಿಕ ಅವರು ಜಾಧವರಾಯನನ್ನು ಕರೆಸಿ ಜೀಜಾಬಾಯಿಯವರ ಸಮಕ್ಷ—"ಜಾಧವರಾವ, ನೀವು ನನ್ನ ಸಲುವಾಗಿ ನಿಮ್ಮ ಹಿರಿಯರ ಮಾತನ್ನು ಮೀರಿ, ಜಹಗಿರಿಯ ಆಶೆಯನ್ನು ತೊರೆದು, ಬಾದಶಹನ ಲಕ್ಷ್ಯವಿಲ್ಲದೆ ನನ್ನ ಆಶ್ರಯವನ್ನು ಪಡೆಯುವದಕ್ಕಾಗಿ ಸಕುಟುಂಬವಾಗಿ ವಿಜಾಪುರದಿಂದ ಹೊರಟಿರಿ; ಆದರೆ ನಡುವೆ ವಿಘ್ನವು ಒದಗಿ ನನ್ನ ಆಶ್ರಯವನ್ನು ಪಡೆಯಲಿಕ್ಕೆ ಅನುಕೂಲವಾಗದಿದ್ದರೂ, ಆಶ್ರಿತರಿಗಿಂತ ಹೆಚ್ಚಾಗಿ ನೀವು ದಂಪತಿಗಳು ನನ್ನನ್ನು ಕೃತಜ್ಞನನ್ನು ಮಾಡಿರುತ್ತೀರಿ. ನಿಮ್ಮ ಉಪಕಾರವು ನಾನು ಏನು ಮಾಡಿದರೂ ತೀರುವಹಾಗಿಲ್ಲ. ಹೈಮವತಿ ದೇವಿಯರಂತೂ ನನ್ನನ್ನು ಹೊಸದಾಗಿ ಹಡೆದಂತೆ ನನಗೆ ಪುನರ್ಜನ್ಮ ಕೊಟ್ಟರು. ಈ ಉಪಕಾರವನ್ನು ಸ್ಮರಿಸುವದಕ್ಕಿಂತ ಹೆಚ್ಚಿನದನ್ನೇನು ನಾನು ಮಾಡುವ ಹಾಗಿದ್ದೇನೆ? ನೀವು ಸ್ವರಾಜ್ಯದ ಆಶ್ರಯ ಪಡೆದು, ಅದನ್ನು ರಕ್ಷಿಸಿ ಅಭಿವೃದ್ಧಿಗೊಳಿಸುವ ಮಹಾಕಾರ್ಯಕ್ಕೆ ನನ್ನೊಡನೆ ಸಿದ್ಧವಾಗಿರಬೇಕೆಂದು ಹೇಳಿಕೊಳ್ಳುವೆನು."

ಈ ಮೇರೆಗೆ ನುಡಿದ ಮಹಾರಾಜರ ಮಾತುಗಳನ್ನು ಕೇಳಿ ಜಾಧವರಾಯನು ಅತ್ಯಂತವಾದ ಕೃತಜ್ಞತಾಭಾವದಿಂದ ಮೌನವನ್ನು ತಾಳಿದನು. ಮಹಾರಾಜರು ಈ ಪರಿ ತನ್ನನ್ನು ಗೌರವಿಸಿದ ಭಾರವು ಆತನಿಗೆ ದುಸ್ಸಹವಾಯಿತು. ಜೀಜಾಬಾಯಿಯವರು ಹೈಮತೀದೇವಿಯ ಯೋಗಿನಿಯ ವೇಷವನ್ನು ಬಿಡಿಸಿ, ಆಕೆಯನ್ನು ವಸ್ತ್ರಾಲಂಕಾರಗಳಿಂದ ಸತ್ಕರಿಸಿದರು.

ಆ ಜೀಜಾಬಾಯಿ ಸಾಹೇಬರಿಗೂ, ಮಹಾರಾಜರಿಗೂ ಹೈಮವತಿಯು ಕಡೆತನಕ ಆದರಣೀಯಳಾಗಿದ್ದಳು. ಅಂದಿನ ದಿವಸವೂ ಮಹಾರಾಜರೇ ಮೊದಲಾದವರಿಗೆ ಆನಂದದಿಂದ ಕಳೆದುಹೋಯಿತು; ಆದರೆ ನಿಜವಾಗಿ ಮಹರಾಜರಿಗೆ ಆನಂದವಾಗಿದ್ದಿಲ್ಲ. ನೋಡಲಿಕ್ಕೂ ಅವರು ಖಿನ್ನರಾಗಿಯೇ ತೋರುತ್ತಿದ್ದರು. ಇಂಥ ದೊಡ್ಡ ಜಯುವನ್ನು ಸಂಪಾದಿಸಿಯೂ ಅವರು ಖಿನ್ನರಾಗುವ ಕಾರಣವೇನೆಂದು ವಾಚಕರು ಕೇಳಬಹುದು. ಅದಕ್ಕೆ ಎರಡು ಕಾರಣಗಳಿರುವವು. "ನಾನು ನಿರಪೇಕ್ಷ ಬುದ್ಧಿಯಿಂದ, ಲೇಶವಾದರೂ ಸ್ವಾರ್ಥವಿಲ್ಲದೆ ಸ್ವರಾಜ್ಯ ಸ್ಥಾಪನೆಗಾಗಿ ಹೆಣಗುತ್ತಿರಲು, ಖಂಡೇರಾಯ ನಂಥ ಸ್ವಜನರು ನನಗೆ ಯಾಕೆ ದ್ರೋಹಿಗಳಾಗಬೇಕೆಂದು ಮಹಾರಾಜರು ಚಿಂತಾಕ್ರಾಂತರಾಗಿದ್ದರು. ಆ ಕಾಲದಲ್ಲಿ ಬಹು ಜನ ಮಹಾರಾಷ್ಟ್ರ ಸರದಾರರು ಮಹಾರಾಜರ ಕಾರ್ಯಕ್ಕೆ ವಿಘ್ನಕಾರಿಗಳಾಗಿದ್ದರೆಂಬದನ್ನು ವಾಚಕರು ಅರಿತಿರಬಹುದು. ಸ್ವಜನರ ಉದ್ಧಾರಕ್ಕಾಗಿ ಯತ್ನಿಸುವ ತಮಗೆ, ಸ್ವಜನರೊಡನೆ ಕಾದುವ ಪ್ರಸಂಗವು ಬರುತ್ತದಲ್ಲ, ಎಂದು ಅವರು ಚಿಂತಿಸುತ್ತಿದ್ದರು. ಇದರ ಹೊರತು ಮಹಾರಾಜರ ಚಿಂತೆಗೆ ಮತ್ತೊಂದು ದೊಡ್ಡ ಕಾರಣವಿತ್ತು. ಮಹಾರಾಜರ ರಾಜ್ಯವು ವಿಸ್ತಾರ ವಾಗುತ್ತ ಹೋದಂತೆ, ಮತ್ತು ಅವರು ಅಫಜುಲಖಾನನಂಥ ಮುಸುಲ್ಮಾನ ಸರದಾರರನ್ನು ಗೊತ್ತಿಗೆ ಹಚ್ಚಿ ಉಭಯ ಬಾದಶಹರ ಮನಸ್ಸನ್ನು ನೋಯಿ ಸಿದಂತೆ, ಮಹಾರಾಜರ ಕಾರ್ಯಕ್ಕೆ ವಿಘ್ನಗಳು ವಿಶೇಷವಾಗಿ ಬರುವ ಸಂಭವವಿತ್ತು. . ಈ ಸಂಬಂಧದಿಂದ ಮಹಾರಾಜರು ಇಂದಿನ ದರ್ಬಾರ ದಲ್ಲಿ ತಮ್ಮ ಅನುಯಾಯಿಗಳನ್ನು ಕುರಿತು ಮಾಡಿದ ಚಿಕ್ಕ ಭಾಷಣವನ್ನು ನಾವು ಇನ್ನೂ ಹೇಳಿರುವದಿಲ್ಲ. ಅದನ್ನು ಈಗ ಹೇಳುವೇವು; ಅಂದರೆ ಮಹಾರಾಜರ ಪ್ರಬಲವಾದ ಚಿಂತೆಯ ಕಾರಣದ ಸ್ವರೂಪವು ವಾಚಕರಿಗೆ ಗೊತ್ತಾಗಬಹುದು. ಅವರು ದರ್ಬಾರದಲ್ಲಿ ನುಡಿದದ್ದೇನಂದರೆ—"ವೀರರೇ, ಸ್ವರಾಜ್ಯವು ನನ್ನದೆಂದು ನೀವು ತಿಳಿಯಬೇಡಿರಿ; ಆ ಸ್ವರಾಜ್ಯವು ನಿಮ್ಮದು. ನಿಮ್ಮದನ್ನು ಸದ್ಯಕ್ಕೆ ಮುಸುಲ್ಮಾನರು ತಕ್ಕೊಂಡಿರುವ ದರಿಂದ ಅದನ್ನು ಅವರ ಕೈಯಿಂದ ನಿಮಗೆ ಕೊಡಿಸಲಿಕ್ಕೆ ನಾನು ನಿಮಿತ್ತ ಮಾತ್ರನಿರುತ್ತೇನೆ. ಈ ದಿನ ಆದದ್ದಿಷ್ಟರಿಂದ ಎಲ್ಲವೂ ಮುಗಿಯಿತೆಂದು

ಮಾತ್ರ ತಿಳಿಯಬೇಡಿರಿ. ಸೂರ್ಯೋದಯವಾದರೆ ದಿವಸಕ್ಕೆ ಆರಂಭ ವಾಗುತ್ತದೆ. ಇಷ್ಟರಿಂದ ದಿವಸವು ಸುಸೂತ್ರವಾಗಿ ಪರಿಣಮಿಸುವದೆಂದು ತಿಳಿಯಲಾಗದು. ನಡುವೆ ಮೋಡಗಳು ಅಡ್ಡ ಬರುತ್ತವೆ; ಗ್ರಹಣಗಳಾಗು ವದುಂಟು. ಅದಂತೆ ಸ್ವರಾಜ್ಯಸೂರ್ಯೋದಯದ ಕಥೆಯೂ ಇರು ತ್ತದೆ. ಸ್ವರಾಜ್ಯಕ್ಕೊದಗುವ ವಿಘ್ನಗಳನ್ನೆಲ್ಲ ನಿವಾರಣಮಾಡಿಕೊಳ್ಳ ಬೇಕಾಗುವದು. ಆ ಕೆಲಸವನ್ನು ನೀವೇ ಮಾಡಿಕೊಳ್ಳಬೇಕು. ಅಫಜುಲ ಖಾನನ ಶಾಸನಮಾಡಿಕೊಳ್ಳಬೇಕಾವದು. ವಿಜಾಪುರದ ದರ್ಬಾರ ದಲ್ಲಿ ದೊಡ್ಡ ಗೊಂದಲವೇಳುವದು. ಯಾವನಾದರೂ ಮತ್ತೊಬ್ಬ ಸರ ದಾರನು ನಮ್ಮ ಸುತ್ತ ಕೈತೊಳಕೊಂಡು ಬೆನ್ನಹತ್ತತಕ್ಕವನೇ. ಅತ್ತ ದಿಲ್ಲಿಯ ಔರಂಗಜೇಬ ಬಾದಶಹನ ಕಣ್ಣು ನಮ್ಮ ಮೇಲಿರುತ್ತದೆ. ವಿಜಾ ಪುರದ ಸರದಾರರನ್ನು ನಾವು ಒಬ್ಬಬ್ಬರನ್ನಾಗಿ ಜಯಿಸುತ್ತ ಪ್ರಬಲ ವಾಗುವದು, ಆ ದಿಲ್ಲಿಯ ಬಾದಶಹನಿಗೆ ಎಂದಿಗೂ ಸಹನವಾಗದು. ಆತನ ತ್ರಾಸವು ನಮಗೆ ಆಗೇ ಆಗುವದು. ಅದೊಂದು ದೊಡ್ಡ ತ್ರಾಸ ವಿರುವದೆಂದು ನೀವು ತಿಳಿಯಿರಿ. ಆ ತ್ರಾಸದಿಂದ ನಿವೇ ಮುಕ್ತವಾಗ ಬೇಕಾಗಿರುವದು. ಆ ತ್ರಾಸದಿಂದ ಮುಕ್ತರಾದ ಬಳಿಕ ಮಾತ್ರ ನಿಮ್ಮ ಸ್ವರಾಜ್ಯ ಸೂರ್ಯನು ಲಕಲಕಿಸಿ ಹೊಳೆದು ನಿರ್ವಿಘ್ನವಾಗಿ ಸಾಗು ಬಹುದು. ಇದನ್ನೆಲ್ಲ ಲಕ್ಷದಲ್ಲಿಟ್ಟು ನೀವು ನಡೆಯಿರೆಂದರಾಯಿತು. ಎರಡನೆಯದೇನೂ ನಾನು ನಿಮಗೆ ಹೇಳುವದಿಲ್ಲ"

ಈ ಭಾಷಣದ ಮೇಲಿಂದ ಮಹಾರಾಜರ ಚಿಂತೆಯ ಸ್ವರೂಪವು ವಾಚಕರ ಲಕ್ಷದಲ್ಲಿ ಬಂದಿರಬಹುದು. ಮಹಾಪುರುಷರ ಲಕ್ಷಣವೇ ಇದು; ಲೋಕಹಿತದ ಕಾರ್ಯವು ಇನ್ನಿಷ್ಟು ವಿಸ್ತೃತವಾಗಿ, ಬಹು ಜನರ ಹಿತವು ತಮ್ಮಿಂದ ಹ್ಯಾಗೆ ಸಾದಿಸೀತೆಂದು ಅವರು ಚಿಂತೆಗೊಳಗಾಗುವರು. ಸಾಮಾನ್ಯಜನರ ಚಿಂತೆಯು ಸ್ವಹಿತದ ವೃದ್ಧಿಗೋಸ್ಕರ ಇರುತ್ತದೆ. ದೊಡ್ಡ ವರ ಚಿಂತೆಯು ಪರಹಿತದ ವೃದ್ಧಿಗೋಸ್ಕರ ಇರುತ್ತದೆ; ಇಷ್ಟೇ ಭೇದವು. ಹೀಗೆ ಚಿಂತಾಮಗ್ನರಾದ ಮಹಾರಾಜರಿಗೆ ತಮ್ಮ ಸದ್ಗುರುಗಳಾದ ಶ್ರೀ ಸಮರ್ಥ ರಾಮದಾಸ ಸ್ವಾಮಿಗಳ ದರ್ಶನ ಮಾಡಿಕೊಳ್ಳುವ ಇಚ್ಛೆಯಾಯಿತು. ಕೂಡಲೇ ಅವರು ಶ್ರೀಧರಸ್ವಾಮಿಗಳ ಬಳಿಗೆ ಹೋಗಿ

ತಮ್ಮ ವಿಚಾರವನ್ನು ಅರಿಕೆ ಮಾಡಿಕೊಂಡು ಅವರನ್ನು ಕುರಿತು—"ಮಹಾರಾಜ, ಈಗ ಹನ್ನೆರಡು ವರ್ಷಗಳಾದವು. ಗುರುಗಳ ಆಜ್ಞೆಯಂತೆ ಅವರ ದರ್ಶನ ಮಾಡಿಕೊಳ್ಳದೆ, ನಿರ್ಧಾರದಿಂದ ರಾಜಕಾರ್ಯದಲ್ಲಿ ತೊಡಗಿ ದುಡಿದೆನು. "ನಿನ್ನ ಧರ್ಮಾಕ್ಕನುಸರಿಸಿ ಕರ್ಮಗಳನ್ನು ಮಾಡುವದು ನಿನ್ನ ಕರ್ತವ್ಯವು" ಎಂದು ಶ್ರೀ ಭಗವಂತನು ಅರ್ಜುನನ್ನು ಭೋಧಿಸಿದಂತೆ, ಶ್ರೀ ಗುರುಗಳು ನನ್ನನ್ನು ಬೋಧಿಸಲು, ನಾನು ಆ ಬೋಧವಚನಗಳನ್ನು ಅಕ್ಷರಶಃ ಪಾಲಿಸಿದೆನು. ಅದರಿಂದಲೇ ಸ್ವರಾಜ್ಯಸ್ಥಾಪನೆಯ ಕಾರ್ಯವಾಯಿತು. ಇದರ ಶ್ರೇಯಸ್ಸಿಗೆಲ್ಲ ಶ್ರೀ ಗುರುಗಳೇ ಕಾರಣವಾಗಿರುವರು; ಆದರೆ ಈಗ ಸಮರ್ಥರ ದರ್ಶನಮಾಡಿಕೊಳ್ಳದೆ ಇರುವದು ನನ್ನಿಂದ ಆಗದು'' ಎಂದು ನಿರ್ಧಾರದಿಂದ ನುಡಿಯಲು, ಶ್ರೀಧರಸ್ವಾಮಿಗಳೂ ಅದಕ್ಕೆ ಒಪ್ಪಿಕೊಂಡರು. ಆಮೇಲೆ ಅವರಿಬ್ಬರೂ ಗುಪ್ತರೀತಿಯಿಂದ ಗುರುಗಳ ದರ್ಶನಕ್ಕೆ ಹೋಗುವದನ್ನು ನಿಶ್ಚಯಿಸಿದರು. ಹೊರಡುವ ಪೂರ್ವದಲ್ಲಿ ತಮ್ಮ ಜನರಿಗೆ ಮಾತ್ರ ಈ ಸಂಗತಿಯನ್ನು ಮಹಾರಾಜರು ತಿಳಿಸಿದರು. ಮಹಾರಾಜರು ಯಾವದೇ ಕಾರ್ಯವನ್ನು ತಮ್ಮ ತಾಯಿಗೆ ಹೇಳದೆ ಮಾಡುತ್ತಿದ್ದಿಲ್ಲವೆಂಬದನ್ನು ವಾಚಕರು ಬಲ್ಲರು. ಮಹಾರಾಜರು ತಮ್ಮ ಸಲುವಾಗಿಯೊಂದು, ಶ್ರೀಧರಸ್ವಾಮಿಗಳ ಸಲುವಾಗಿಯೊಂದು ಹೀಗೆ ಎರಡು ಕುದುರೆಗಳನ್ನು ತರಿಸಿಕೊಂಡು, ರಾತ್ರಿಯಲ್ಲಿಯೇ ಸಜ್ಜನಗಡದ ದಾರಿಯನ್ನು ಹಿಡಿದರು.

ಹೀಗೆ ಅವರಿಬ್ಬರೂ ಶ್ರೀ ಗುರುವಿನ ದರ್ಶನಕ್ಕಾಗಿ ಆತುರದಿಂದ ಸಾಗಿರಲು, ಕರುಣಾಳುವಾದ ಶ್ರೀ ಗುರುವು ತನ್ನ ದೃಢನಿಶ್ಚಯದ ಸಚ್ಛಿಷ್ಯನಿಗೆ ಶ್ರಮವಾಗಬಾರದೆಂದು ಮಧ್ಯಮಾರ್ಗದಲ್ಲಿ ಒಂದು ಗಿಡದ ಬುಡದಲ್ಲಿ ಬೆಂಕಿಯನ್ನು ಕಾಸುತ್ತ ಕುಳಿತಿದ್ದರು. ಹೀಗೆ ಮಧ್ಯರಾತ್ರಿಯಲ್ಲಿ ಅಕಸ್ಮಾತ್ತಾಗಿ ಅರಣ್ಯದಲ್ಲಿ ಶ್ರೀ ಗುರುವಿನ ದರ್ಶನವಾದದ್ದರಿಂದ, ಮಹಾರಾಜರಿಗೆ ಪರಮಾನಂದವಾಯಿತು. ಅವರು ಕುದುರೆಯ ಮೇಲಿಂದ ಕೆಳಗೆ ದುಮುಕಿ, ಶ್ರೀ ಗುರುವನ್ನು ಸಾಷ್ಟಾಂಗವಾಗಿ ವಂದಿಸಿದರು. ಸಮರ್ಥರು ಶಿಷ್ಯನ ಕೈ ಹಿಡಿದು ಕರಕೊಂಡು ಹತ್ತರ ಕುಳ್ಳಿರಿಸಿಕೊಂಡು, ಆತನ ಮೈಮೇಲೆ ಕೈಯಾಡಿಸಿ ವಾತ್ಸಲ್ಯದಿಂದ ನೆತ್ತಿಯನ್ನು ಮೂಸಿನೋಡಿ,

ಆತನಿಗೆ ಮಂತ್ರೋಪದೇಶವನ್ನು ಮಾಡಿದರು! ಆ ಕಾಲದಲ್ಲಿಯ ಗುರು ಶಿಷ್ಯರ ಹೃದ್ಗತವನ್ನು ವರ್ಣಿಸುವದು ಯಾರಯೋಗ್ಯತೆಯು? ಅದು ಅತ್ಯಂತ ಗೂಢವಾದದ್ದು, ಅತ್ಯಂತ ಪವಿತ್ರವಾದದ್ದು! ಆ ಕಾಲದಲ್ಲಿ ಶ್ರೀಧರಸ್ವಾಮಿಗಳನ್ನು ಕೂಡ ಸಮರ್ಥರು ಅಲ್ಲಿ ಕುಳಿತುಕೊಳ್ಳಗೊಟ್ಟಿದ್ದಿಲ್ಲ; ಅಂದಬಳಿಕ ನಮ್ಮ ಪಾಡೇನು? ಆದ್ದರಿಂದ ನಮ್ಮ ಕಥಾನಿರೂಪಣವನ್ನು ಆ ಗುರು ಶಿಷ್ಯರ ಪರಸ್ಪರ ಹೃದ್ಗತಪ್ರದರ್ಶನ ಪ್ರಸಂಗವು ನಡೆದಿರುವಾಗಲೇ ನಾವು ಮುಗಿಸಿಬಿಡುವೆವು.

ಸಮಾಪ್ತ.